I do not accept such facilities or discriminations. ಅಂಥಾದ್ದೇನೂ ನಮಗೆ ಬೇಕಾಗಿಲ್ಲ. ಒಬ್ಬ ಸಾಮಾನ್ಯ ಮನುಷ್ಯನಿಗೆ ಅಷ್ಟಾದರೂ ಉಪಕಾರ ಮಾಡದಿದ್ದರೆ ಆದರಿಂದ ಆಗುವ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚಾಗಿರುತ್ತದೆ. ಈ ರಾಷ್ಟ್ರೀಕರಣ ವ್ಯವಸ್ಥೆಯಲ್ಲಿ ಗಮನಿಸಬೇಕಾದ ಮೂಲಭೂತ ಸಮಸ್ಯೆಯೇ ಇದು. ಹೀಗೆ ಈಗಾಗಲೇ ಸರ್ಕಾರ ನಡೆಸುತ್ತಿರುವ ಇಂಥದೇ ಆದ ಒಂದು ಕನ್ಸರ್ನಿನಲ್ಲಿ ಸಾಕಷ್ಟು ದಕ್ಷತೆ ಕಾಣುತ್ತಿಲ್ಲವಾದುದರಿಂದಲೂ ಮತ್ತು ಅಧಿಕಾರವರ್ಗದವರಲ್ಲಿ ಒಂದು ಸೇವಾ ಮನೋಭಾವನೆ ಇದ್ದಂತೆ ಕಂಡು ಬರುತ್ತಿಲ್ಲವಾದುದರಿಂದಲೂ ಅಂಥವುಗಳ ಅಭಿವೃದ್ಧಿ ಕುಂಠಿತಗೊಳ್ಳಬಹುದು. ಹಾಗೆ ಸಾಮಾನ್ಯಜನರು ಕೇಳತಕ್ಕ ವಿಚಾರಗಳ ಬಗ್ಗೆ ಸರಿಯಾದ ಉತ್ತರವನ್ನು ಕೊಡದೆ ಹೋದಪಕ್ಷದಲ್ಲಿ ಅದರಿಂದ ದೊಡ್ಡ ಧಕ್ಕೆಯುಂಟಾಗುತ್ತದೆ. ಆದುದರಿಂದ ಈಗ ಸರ್ಕಾರದವರು ಕೈಗೊಳ್ಳಲುದ್ದೇಶಿಸಿರುವ ಸಂಸ್ಥೆಯ ವಿಚಾರದಲ್ಲಿ ಸಹ ಅದನ್ನು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಜನರಿಗೆ ಅಪಾದನೆಮಾಡುವುದಕ್ಕೊಂದು ಅವಕಾಶವಿಲ್ಲದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ತಿಳಿಸುತ್ತೇನೆ. ಇಂಥ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳತಕ್ಕ ಉದ್ದೇಶಗಳಲ್ಲಿ ನಮಗೆ ಈ ಸಂಚಾರ ಸೌಲಭ್ಯಗಳ ಅಗತ್ಯ ದಿನೇ ದಿನೇ ಬೆಳೆಯುತ್ತಿದೆಯೆಂಬುದು ಕಂಡುಬರುತ್ತದೆ. ಆದುದರಿಂದ ಈ ಸಂಚಾರಣೆಯ ತೊಡಕನ್ನು ಪರಿಹರಿಸಲು ಸರ್ಕಾರದವರು ದಕ್ಷತೆಯಿಂದೊಡಗೂಡಿದ ಹೆಚ್ಚು ಹೆಚ್ಚು ಸಿದ್ಧತೆಗಳನ್ನು ಕೈಗೊಳ್ಳಲು ಸಿದ್ಧರಾಗಿರಬೇಕೆಂದು ಹೇಳಬಹುದಾಗಿದೆ. ಆದರೆ ಈದಿನ ಇರತಕ್ಕ ಈ ಬಿ. ಟಿ. ಸಿ. ಸಂಸ್ಥೆಯ ಆಡಳಿತ ಸರ್ಕಾರದವರ ಕೈಗೆ ಬಂದಮೇಲೆ ಇನ್ನೂ ಉತ್ತಮಗೊಳ್ಳುತ್ತದೆ ಎನ್ನುವ ಭಾವನೆ ನಮಗೆ ಅಷ್ಟಾಗಿಲ್ಲ. ಶ್ರೀ ಶ್ರೀನಿವಾಸಯ್ಯಂಗಾರ್ ಅವರು ತಿಳಿಸಿದಂತೆ ಕೇಂದ್ರ ಸರ್ಕಾರದವರು ಇತ್ತೀಚೆಗೆ ಎಂದರೆ ಪ್ಲಾನಿಂಗ್ ಕಮಿಷನ್ನಿನವರು ರೈಲು ವಿಮಾನ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿರುವಂತೆ ಎಲ್ಲ ಸಂಚಾರ ಮಾರ್ಗಗಳನ್ನೂ ರಾಷ್ಟ್ರೀಕರಣ ಮಾಡಬೇಕೆಂದು ಮನಸ್ಸು ಮಾಡಿದ್ದಾರೆ. ಆದರೆ ಈಗ ಈ ಬಸ್ ಸಂಚಾರಕ್ಕೆ ಬೇಕಾಗಿರತಕ್ಕ ಪೆಟ್ರೋಲ್ ಮತ್ತು ಡೀಸೇಲ್ ಆಯಿಲ್ ಇತ್ಯಾದಿ ಪದಾರ್ಥಗಳನ್ನು ಹೊರಗಡೆಯಿಂದ ತರಿಸಲಾಗುತ್ತಿದೆ. ನಮ್ಮ ದೇಶದಲ್ಲಿ ಈ ಮೋಟಾರ್ ವಾಹನಗಳನ್ನು ತಯಾರಿಸಲು ಇನ್ನೂ ಸಾಧ್ಯವಾಗಿಲ್ಲ. ಹೀಗೆಲ್ಲಾ ಇದ್ದರೂ ಈ ದಿವಸ ನಾವು ಈ ಉದ್ಯಮದಲ್ಲಿ ಲಾಭಗಳಿಸುತ್ತಿದ್ದೇವೆ. ಅಷ್ಟೇಕೆ ಈ ಉದ್ಯಮದಲ್ಲಿ ಇನ್ನೂ ಹೆಚ್ಚಿನ ಲಾಭಗಳಿಸಲು ಅವಕಾಶವಿದೆ ಎನ್ನುವ ಭವಿಷ್ಯವನ್ನೂ ಸಹ ನಾವು ಕಂಡುಕೊಂಡಿದ್ದೇವೆ. ಆದರೆ ಈ ಮಾರ್ಗದಲ್ಲಿ ಸರ್ಕಾರ ಈಗಾಗಲೆ ತಪ್ಪು ಹೆಜ್ಜೆಯನ್ನಿಟ್ಟಿದೆ. ಮಾನ್ಯಮಂತ್ರಿಗಳು ಅಂಥ ತಪ್ಪುಗಳೇನಾದರೂ ಇದ್ದರೆ ನಮ್ಮ ಗಮನಕ್ಕೆ ತನ್ನಿ ಎಂದು ಹೇಳಿದರು. ಹಾಗೆ ಹೇಳಬೇಕೆಂದರೆ ಎಷ್ಟೋ ಆಪಾದನೆಗಳಿವೆ. ಅವುಗಳನ್ನು ವಿರೋಧಪಕ್ಷದ ಸದಸ್ಯರಾದ ನಾವು ಯಾವತ್ತೂ ಕ್ರಮವಾಗಿ ಮಾಡುತ್ತಲೇ ಬಂದಿದ್ದೇವೆ ನಾವೀದಿವಸ ಅಖಿಲಭಾರತದ ಒಂದು ಸಮಗ್ರ ಚಿತ್ರವನ್ನು ತೆಗೆದುಕೊಂಡು ನೋಡುವುದಾದರೆ ನಮ್ಮ ಪ್ರತಿಯೊಂದು ಉದ್ಯಮದಲ್ಲೂ ಸುಮಾರು ಶೇಕಡ 60 ರಷ್ಟು ಹೊರಗಡೆಯ ಬಂಡವಾಳವಿದೆ. ಹೀಗಿದ್ದರೂ ಸರ್ಕಾರದವರು ನಾವು ಖಾಸಗೀ ಜನರ ಬಂಡವಾಳವನ್ನು ಮುಟ್ಟುವುದಿಲ್ಲವೆಂತಲೇ ಹೇಳುತ್ತಿದ್ದಾರೆ. ಒಂದು ಕಡೆ ಹೀಗೆ ಮಾಡುತ್ತಿದ್ದಾಗ ಮತ್ತೊಂದು ಕಡೆ ಹಾಗೆ ಭರವಸೆಯನ್ನು ಸಹ ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ನಾವು ಅಡಕ್ವೇಟ್ ಕಾಂಪೆನ್‌ಸೇಷನ್ ಕೊಡುತ್ತೇವೆಂದು ಹೇಳಿದಾಗ ಶ್ರೀ ಟಿ. ಮರಿಯಪ್ಪನವರಂಥ ಒಬ್ಬ ಕಾಂಗ್ರೆಸ್ ಸದಸ್ಯರು ಯಾರಾದರೂ ಎದ್ದು ಸರ್ಕಾರದವರನ್ನು ಹೆದರಿಸಿದರೆ ಹೆದರಿಬಿಟ್ಟು ಗಾಬರಿಯಾಗಿಬಿಡುತ್ತಾರೆ. ಆ ಹೆದರಿಕೆಯಲ್ಲಿ 'ಬಂಗಾರದ ಮೊಟ್ಟೆಯನ್ನಿಡತಕ್ಕ ಹಂಸವನ್ನು ಕೊಯ್ದ ಹಾಗೆ ಆಗುತ್ತದೆ' ಎನ್ನುವ ಗಾದೆಗನುಸಾರವಾಗಿ ಹೇಳಿಬಿಡುತ್ತಾರೆ. ಆದುದರಿಂದ ತಾವು ಊರು ಹಾಳಾದ ಮೇಲೆ ಗೌಡ ಹೆಬ್ಬಾಗಿಲು ಹಾಕಿದಂತೆ ಮಾಡಬಾರದು.

(ಶ್ರೀ ಎಸ್. ಗೋಪಾಲಗೌಡ)

ಸರ್ಕಾರದವರು ಯಾವ ಕಾರ್ಯವನ್ನು ಮಾಡಿದರೂ ಅದರಿಂದ ಜನಗಳಿಗೆ ಸಾರ್ಥಕವಾಗುವಹಾಗೆ ಇರಬೇಕು. ''ನಾವೂ ರಾಷ್ಟ್ರೀಕರಣ ಮಾಡುತ್ತೇವೆ'' ಎಂದು ಹೇಳಿಕೊಳ್ಳುತ್ತ ಅದನ್ನು ಎಂದೇ ಒಂದುದಿನ ಮಾಡಿದರೆ ಆಯಿತೆಂದು ಭಾವಿಸಿದ್ದೀರಿ. ಮಿಸ್ಟರ್ ಪ್ರೆಸಿಡೆಂಟ್ ನಾಜರ್ ಅಂಥವರೂ ಸಹ ಈ ವಿಚಾರದಲ್ಲಿ ಮುಂದೆ ಹೋಗುತ್ತಿರುವಾಗ, ನಾವು ನಮ್ಮ ಇಂಡಿಯಾ ದೇಶದಲ್ಲಿ ಈ ರಾಷ್ಟ್ರೀಕರಣವನ್ನು ಬಹಳ ಹಿಂದೆಯೇ ನಿರೀಕ್ಷಿಸಿಕೊಂಡಿದ್ದೆವು. ಆದರೆ ಶ್ರೀ ನೆಹರು ಅವರಿಗೆ ಇದು ಸರಿಬೀಳಲಿಲ್ಲವೇನೋ. ಅದಕ್ಕೇ ಇದು ಆಗಲಿಲ್ಲ ಆದರೆ ದೇಶದಲ್ಲಿ ಒಂಭತ್ತು ವರ್ಷಗಳ ಕಾಂಗ್ರೆಸ್ ರಾಜ್ಯಭಾರ ವಾದಮೇಲೆ ಈಗ ಇದಕ್ಕೆ ಕೈ ಹಾಕಿದ್ದಾರೆ. ಆದಾಗ್ಗೂ ಇದೂಕೂಡ ಅಭಿನಂದನೀಯವಾದುದೆಂದೇ ಹೇಳಬೇಕು.

ಈಗ ಆ ಬಿ. ಟಿ. ಸಿ. ಕಂಪೆನಿಗೆ ಪರಿಹಾರ ಕೊಡತಕ್ಕ ಸಂಬಂಧವಾಗಿ ಮೂರು ರೀತಿಯ ಅಭಿಪ್ರಾಯಗಳು ಹೊರಬಿದ್ದಿವೆ. ಮೊದಲನೆಯದು ಈಗ ಸರ್ಕಾರ ಆ ಕಂಪನಿಯವರಿಗೆ ಕೊಡಲು ಉದ್ದೇಶಿಸಿರುವ ಪರಿಹಾರದ್ರವ್ಯ ಬಹಳ ಹೆಚ್ಚಾಯಿತು ಎನ್ನುವುದು. ಈಗ ಕೊಡಬೇಕೆಂದಿರುವ ಪರಿಹಾರದ್ರವ್ಯ ಸಾಲದು, ಕಡಮೆಯಾಯಿತು ಎನ್ನುವುದು ಎರಡನೆ ಅಭಿಪ್ರಾಯ. ಮೂರನೆಯ ಅಭಿಪ್ರಾಯ ಈಗ ಕೊಡಬೇಕೆಂದಿರುವ ಪರಿಹಾರದ ಮೊಬಲಗು ಸರಿಯಾಗಿದೆ ಎಂದು. ಈ ಸಂಬಂಧದಲ್ಲಿ ಜನರ ಅಭಿಪ್ರಾಯಗಳು ಹೀಗೆ ವ್ಯತ್ಯಾಸವಾಗುವುದು ಸ್ವಾಭಾವಿಕ. ಷೇರ್ ಹೋಲ್ಡರು ಗಳೇನಾದರೂ ರಿಟ್ ಹಾಕಬಹುದೆಂಬ ವಿಷಯದಲ್ಲಿ ಆಲೋಚನೆ ಮಾಡಿದರೆ, ನಾವು ಇಲ್ಲಿಯತನಕ ಅವರಿಗೆ ಎಷ್ಟೆಷ್ಟು ಉತ್ಪತ್ತಿಯನ್ನು ಕೊಟ್ಟಿದ್ದೇವೆ ಎನ್ನುವುದೇ ಬಹು ಮುಖ್ಯವಾದ ಪ್ರಶ್ನೆ. ಅದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಷೇರ್ ಹೋಲ್ಡರುಗಳಿಗೆ ಷೇರುಗಳ ಫೇಸ್‌ವ್ಯಾಲ್ಯು ಕೊಟ್ಟರೆ ಸಾಕೆಂದು ನನಗೆ ತೋರುತ್ತದೆ. ಏಕೆಂದರೆ ಎಷ್ಟೋ ಸಂದರ್ಭಗಳಲ್ಲಿ 10 ರೂಪಾಯಿಗಳ ಷೇರಿಗೆ ಹತ್ತು ರೂಪಾಯಿಗಳು ಬಾರದಿರುವಂಥ ನಿದರ್ಶನಗಳಿರುವಾಗ—10 ರೂಪಾಯಿಗಳಿಗೆ 10 ರೂಪಾಯಿಗಳು ಬಂದರೆ ಸಾಕು. ನಮ್ಮ ಸ್ನೇಹಿತರಾದ ಶ್ರೀ ಮುಲ್ಕರವರು ಹೇಳಿರುವಂತೆ ಇದೂ ಕೂಡ ಒಂದು ರೀತಿಯ ಸಟ್ಟಾ ವ್ಯವಹಾರವಾಗಿದೆ. ಈ ಷೇರ್ ವ್ಯವಹಾರದಿಂದಲೇ ಸಟ್ಟಾ ವಿಚಾರ ಹುಟ್ಟಿತು......

ಶ್ರೀ ಎಚ್. ಸಿದ್ದವೀರಪ್ಪ.—ಬಡ ವಿಧವೆ ಇತ್ಯಾದಿ ಯಾವರಿದ್ದಾರೋ !

ಶ್ರೀ ಎಸ್. ಗೋಪಾಲಗೌಡ.—ಹಾಗೆ ಯಾರೋ ನನ್ನಂಥ ಒಬ್ಬಿಬ್ಬರು ಬಡಪಾಯಿಗಳೇನಾದರೂ ಹತ್ತು ರೂಪಾಯಿಗಳನ್ನು ಇದರಲ್ಲಿ ಹಾಕಿದ್ದು, ಅಂಥವರಿಗೆ ಆ ಹಣಕ್ಕೆ 'ನಾವು' ಬೀಳತಕ್ಕ ಪ್ರಸಂಗವಿದ್ದಲ್ಲಿ ''ಅಯ್ಯಾ ನೀನು ಈ ನಿನ್ನ ಹತ್ತು ರೂಪಾಯಿಗಳನ್ನು ತೆಗೆದುಕೋ, ನಿಮ್ಮಂಥ ಬಡವರು ಇನ್ನುಮೇಲೆ ಇಂಥ ವ್ಯವಹಾರಗಳಲ್ಲಿ ಹಣವನ್ನು ಹಾಕಬಾರದು'' ಎಂದು ಹೇಳಿ ಆ ಹಣವನ್ನು ಅಂಥವರಿಗೆ ಕೊಟ್ಟುಬಿಡಿ ಎಂದು ತಿಳಿಸಬಹುದಾಗಿತ್ತು. ಆದರೆ ಹಾಗಿಲ್ಲದೆ ತಾವು ಹೇಳುವಂಥ ಆ ವಿಡೋಸ್‌ಗಳು ಇಂಥ ಅನೇಕ ಕಂಪನಿಗಳಲ್ಲೂ—ಬ್ಯಾಂಕುಗಳಲ್ಲೂ ಷೇರುಗಳನ್ನು ಹಾಕಿಕೊಂಡಿದ್ದರೆ ಆಕೆಗೇಕೆ ಅಷ್ಟು ಕಷ್ಟ ! ಇಂಥವರೆಲ್ಲ ಹಣ ಹಾಕುವುದಕ್ಕೆ ಪ್ರಾರಂಭಿಸಿದ್ದರಿಂದಲೇ ಆ ಗೋಪಾಲರಾಯರ ಬ್ಯಾಂಕ್ ಬೇಗ ಮುಳುಗಿ ಹೋಯಿತು. ಇವರ ಹಣವೂ ಹಾಗೆಯೇ ಪೂರ್ತಿಯಾಗಿ ಹೋಯಿತು. ದೇಶವೇ ಅನ್ನ ಬಟ್ಟೆಗಳಿಗಾಗಿ ಕಷ್ಟ ಪಡುತ್ತಿರುವಾಗ, ಸರ್ಕಾರ ಪ್ರತಿವರ್ಷವೂ 3—4 ಕೋಟಿ ರೂಪಾಯಿಗಳ ಸಾಲವನ್ನು ಎತ್ತುತ್ತಿರುವಾಗ ಇಂಥವರು ಆ ಹಳೆ ನೋಟುಗಳನ್ನೂ, ಹಳೆ ರೂಪಾಯಿ ನಾಣ್ಯಗಳನ್ನೂ ಹೊರಕ್ಕೆ ತೆಗೆದುಕೊಟ್ಟರೆ ಅದರಿಂದ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಆದ ಕಾರಣ ಈಗ ಮಂತ್ರಿಗಳು ಹೇಳಿದಂಥ ಸಂದರ್ಭಗಳಲ್ಲಿ ಗಾಡಿ ಎಂದೂ ಹಿಂದಕ್ಕೆ ಹೋಗುವ ಸಂಭವವಿಲ್ಲ ; ಅವು ಮುಂದಕ್ಕೆ ಹೋಗುತ್ತವೆ. ಹೀಗಿರುವುದರಿಂದ ಸರ್ಕಾರ ಈಗ ಕೊಡಬೇಕೆಂದು ಉದ್ದೇಶಿಸಿರುವ ಎಂಟು ಲಕ್ಷ ಚಿಲ್ಲರೆ ಪರಿಹಾರ ದ್ರವ್ಯವು ಬಹಳ ಹೆಚ್ಚಾಯಿತು. ಅದುದರಿಂದ ಅವರೆಲ್ಲರಿಗೂ ಅವರ ಷೇರುಗಳ ಫೇಸ್‌ವ್ಯಾಲ್ಯು ಪ್ರಕಾರ ಅವರಿಗೆ ಪರಿಹಾರ ಕೊಟ್ಟರೆ ಸಾಕೆಂದು ಕಾಣುತ್ತದೆ. ಆದರೆ ಕಾನೂನು ದೃಷ್ಟಿಯಿಂದ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳಿದರು ಕಾನೂನಿನಲ್ಲಿ ಒಬ್ಬೊಬ್ಬರಿಗೂ ಒಂದೊಂದು ವಿಧವಾಗಿ ನಿಬಂಧನೆ ಮಾಡುವುದಕ್ಕಾಗುವುದಿಲ್ಲ......

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಅಭಿಪ್ರಾಯದಲ್ಲಿ ಒಂದು ಅಡಕೆಯಲೆ ಕೊಟ್ಟರೆ ಸಾಕೆಂತ ಇರಬಹುದೇನೋ !

ಶ್ರೀ ಎಸ್. ಗೋಪಾಲಗೌಡ.—ಹೌದು ನಾನು ಇದೇ ಮಾತನ್ನು ಆ ಚಿನ್ನದಗಣಿ ರಾಷ್ಟ್ರೀಕರಣದ ಸಂಬಂಧದಲ್ಲಿ ಹೇಳಿದ್ದೆನು. ಆ ರೀತಿ ನಾವು ಅವರಿಗೆ ಕೊಡಬೇಕು. ಅವರೂ ಸಹ ಅದೇ ರೀತಿ ನಮಗೂ ಕೊಡಬೇಕು. ಹಾಗಾದರೇನೇ ಇಬ್ಬರಿಗೂ ಬೇಗ ರಾಗಿರಲು ಅನುಕೂಲವಾಗುತ್ತದೆ. ನಾನೇನೋ ಸರ್ಕಾರದವರು ಇದರ ವಿಚಾರದಲ್ಲಿ ಹಾಗೆಯೇ ಮಾಡುತ್ತಾರೆಂದು ತಿಳಿದುಕೊಂಡಿದ್ದೆನು. ಆದರೆ ಈಗ ನೋಡುತ್ತಿರುವ ಪರಿಸ್ಥಿತಿಯಲ್ಲಿ ಆ ಪರಿಹಾರ ದ್ರವ್ಯ ಸಾಲದೆಂದು ಹೇಳತಕ್ಕ ಜನರೂ ಇದ್ದಾರೆ. ಅಸೆಟ್ಸ್ ಜಾಸ್ತಿಯಿದೆ. ಸಂಪಾದನೆಯಾಗುತ್ತದೆ. ಅದಕ್ಕಾಗಿ ಈಗ ಕೊಡಬೇಕೆಂದಿರುವ ಪರಿಹಾರದ್ರವ್ಯ ಸಾಲದೆಂದು ಕೆಲವರ ಅಭಿಪ್ರಾಯ. ಮತ್ತೊಂದು ಕಡೆ ಈ ಕಂಪನಿಯ ಆಡಳಿತ ವಿಚಾರದಲ್ಲಿ ಅನೇಕ ಅನುಮಾನಾಸ್ಪದವಾದ ವಿಚಾರಗಳು ಬೇರೆ ಯಿರುತ್ತವೆಂದು ಕೆಲವರು ಹೇಳಿದ್ದಾರೆ. ಇದು ಬಹಳ ದುಃಖಕರವಾದ ವಿಚಾರ. ಪ್ರತಿಯೊಂದು ವ್ಯವಹಾರದಲ್ಲೂ ಇಂಥ ಸನ್ನಿವೇಶವಿರಬಾರದು......

ಒಬ್ಬ ಸದಸ್ಯರು.—ನಿಮಗೆ ಯಾವಾಗ್ಗೂ ಅನುಮಾನಾಸ್ಪದವಾದ ಸಂಗತಿಗಳೇ ಕಣ್ಣಿಗೆ ಬೀಳುತ್ತವೆ.

ಶ್ರೀ ಎಸ್. ಗೋಪಾಲಗೌಡ.—ಅಂಥದ್ದೇನೂ ಇಲ್ಲ. ಅನುಮಾನಕ್ಕಿಂತ ಹೆದ್ದರೋಗ ಬೇರೊಂದಿಲ್ಲ. 'Seeing is believing' ಕಣ್ಣಿನಲ್ಲಿ ನೋಡಿದ್ದನ್ನೇ ನಾನು ಹೇಳುತ್ತಿರುವುದು. ಸರ್ಕಾರದವರು ಈಗಿನ ಷೇರ್ ವ್ಯಾಲ್ಯುವನ್ನು ಗಮನಕ್ಕೆ ತೆಗೆದುಕೊಂಡು ಲೆಕ್ಕ ಹಾಕಿರುವ ಪ್ರಕಾರ, ಎಂದರೆ ಹತ್ತು ವರ್ಷಗಳ ಸರಾಸರಿ ಉತ್ಪತ್ತಿಯನ್ನು ಲೆಕ್ಕಕ್ಕೆ ತೆಗೆದುಕೊಂಡು ಅದರ ಆಧಾರದಮೇಲೆ ಈ 14·18 ಲಕ್ಷ ರೂಪಾಯಿಗಳ ಪರಿಹಾರದ್ರವ್ಯ ಅಡಿಕ್ವೇಟ್ ಪರಿಹಾರದ್ರವ್ಯವಾಗುತ್ತದೆ ; ಇಷ್ಟನ್ನು ಕೊಡಬೇಕೆಂದು ನಾವು ತೀರ್ಮಾನ ಮಾಡಿಕೊಂಡಿರುತ್ತೇವೆಂದು ಹೇಳಿದ್ದಾರೆ. ಆದರೆ ಈ ಷೇರ್ ಗಳೆಲ್ಲಾ ಯುದ್ಧಾನಂತರದಿಂದೀಚೆಗೆ ಹೆಚ್ಚು ಹೆಚ್ಚು ಬೆಲೆಗೆ ಮಾರಾಟವಾಗುತ್ತಿವೆ. ಹಾಗೆ ಹತ್ತು ವರ್ಷಗಳ ಆವರೇಜ್ ತೆಗೆದುಕೊಳ್ಳುವುದು ಸೂಕ್ತವಾಗಿದ್ದರೂ ನಾವು ಮುಂದಿನ ಒಂದು ಓವರಾಲ್ ಪಿಕ್ಚರನ್ನು ಗಮನದಲ್ಲಿಟ್ಟುಕೊಂಡು ನೋಡಬೇಕು. ಒಂದು ಕಡೆ ಒಂದುರೀತಿಯ ಕಾನೂನನ್ನು ಅನ್ವಯಿಸಿ

ಮತ್ತೊಂದು ಇಂಥದೇ ಸಂದರ್ಭದಲ್ಲಿ ಇನ್ನೊಂದು ರೀತಿಯ ಕಾನೂನನ್ನು ಅನ್ವಯಿಸಿದರೆ ಅದರಿಂದ ತೊಂದರೆಗಳು ಬರುತ್ತವೆ. ಇದೊಂದು ಹೆಸರಿಗೆ ಮಾತ್ರ ರಾಷ್ಟ್ರೀಕರಣ ವಾದೀತೆ ಹೊರತು ಕಾರ್ಯತಃ ಇದರಲ್ಲಿ ನಾವು ಪಡೆಯಬೇಕಾದ ಅನುಕೂಲಕ್ಕೆ ಪ್ರತಿಯಾಗಿ ಅತಿಯಾದ ಸಾಲದ ಹೊರೆಯನ್ನು ಹೊರಬೇಕಾದ ಪ್ರಮೇಯ ಬರಬಹುದು. ಕೇವಲ ತತ್ವಕ್ಕಾಗಿ ಹೋರಾಟ ಮಾಡಿ ಸಾಲ ಕಟ್ಟಿ ಕೊಳ್ಳುವುದು ಅಷ್ಟೇನೂ ಉತ್ತಮವಾದುದಲ್ಲ ವೆಂಬುದು ನನ್ನವಾದ. ಆದರೆ ಈ ಸಂದರ್ಭದಲ್ಲಿ ಅಂಥದಕ್ಕೆ ಅವಕಾಶವಿಲ್ಲದಿರಬಹುದು. ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ಮಸೂದೆಗೆ ನಾಳಿನ ಅಕ್ಟೋಬರ್ ಒಂದನೆಯ ತಾರೀಖಿನೊಳಗಾಗಿ ಅಂಗೀಕಾರ ದೊರೆತು ಇದು ಕಾನೂನಾಗಬೇಕಾಗಿದೆ. ಅದಕ್ಕೆ ಸರ್ಕಾರದವರು ನಮ್ಮಗಳ ಅನುಮತಿಯನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಅನೇಕ ಸದಸ್ಯರುಗಳು ಈ ಮಸೂದೆಯು ಸಲೆಕ್ಟ್ ಸಮಿತಿ ಯವರ ಪರಿಶೀಲನೆಗೆ ಹೋದರೆ ಅದರಲ್ಲಿ ತಪ್ಪೇನೂ ಇಲ್ಲವೆಂದು ಬೇರೆ ಹೇಳುತ್ತಿದ್ದಾರೆ. ಸರಿಯಾದ ಒಂದು ಆಡಳಿತಪಕ್ಷವಿದ್ದಿದ್ದರೆ, ಇಂಥ ಮಸೂದೆಗಳನ್ನು ಈ ಸಭೆಯ ಮುಂದೆ ತರುವುದಕ್ಕೆ ಮೊದಲೇ ಇವುಗಳ ಬಗ್ಗೆ ಸಾಕಾದಷ್ಟು ಚರ್ಚೆಮಾಡಿ, ಎಲ್ಲ ವಿಚಾರ ಗಳನ್ನೂ ವಿಮರ್ಶೆಮಾಡಿ ಒಂದು ಖಚಿತವಾದ ತೀರ್ಮಾ ನಕ್ಕೆ ಬಂದನಂತರವೇ ಇಂಥ ಮಸೂದೆಗಳನ್ನು ಈ ಸಭೆಯ ಮುಂದೆ ತರುವುದು ಸೂಕ್ತವಾದದ್ದು ಎಂದು ಹೇಳಬಹುದಾಗಿತ್ತು. ಹಾಗೆ ಮಾಡದೆ ಸರ್ಕಾರ ದವರು ಬಿಲ್ಲುಗಳನ್ನು ಈ ಸಭೆಯ ಮುಂದೆ ತರುತ್ತಿರು ವುದರಿಂದ, ಇಲ್ಲಿ ತಮ್ಮ ಪಕ್ಷದವರಲ್ಲೇ ಯಾರಾದರೊಬ್ಬ ರು, ಶ್ರೀ ಟಿ. ಮರಿಯಪ್ಪನವರಂಥ ಸದಸ್ಯರೊಬ್ಬರು, ಏನಾದರೊಂದು ಲೋಪದೋಷವನ್ನು ತೋರಿಸಿ ಕೊಟ್ಟರೆ ಆಗ ಇವರು ಗಾಬರಿ ಬೀಳುತ್ತಾರೆ. ಹೀಗಾಗಿಯೇ ಕೆಲವು ಮಸೂದೆಗಳು ಈ ಸಭೆಯ ಮುಂದೆ ಬಂದು ಪುನಃ ಅವು ಮೇಲಕ್ಕೆ ತಲೆಎತ್ತ ದಂತೆ ಹಾಗೆಯೇ ಸತ್ತುಹೋಗಿವೆ. ಈ ಸಭೆ ಯಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರೂ ಮತ್ತು ಶ್ರೀ ಚೆನ್ನಬಸಪ್ಪನವರೂ ಹಾಜರಿಲ್ಲ. ಅವರು ಇಲ್ಲಿ ತಂದಿದ್ದ ಅನೇಕ ಮಸೂದೆಗಳು ಸತ್ತೇಹೋದುವು! ಆ ರೀತಿ ಮಾಡುವುದು ಒಳ್ಳೆಯದಲ್ಲ. ಕಾಂಗ್ರೆಸ್ ಪಕ್ಷದಲ್ಲಿಯೂ ಕೂಡ ಎಲ್ಲ ವಿಷಯಗಳಲ್ಲಿಯೂ ಒಮ್ಮತ ಬರುವುದು ಸಾಧ್ಯವಿಲ್ಲವೆನ್ನುವುದು ನಮಗೂ ಸಹ ಗೊತ್ತಾಗುತ್ತದೆ. Internal democracy ಇರು ತ್ತದೆ. ಆದರೂ ಮೆಜಾರಿಟಿ ಅಭಿಪ್ರಾಯ ತೆಗೆದು ಕೊಂಡು ಮುಂದೆ ಹೋಗಬೇಕಾಗುತ್ತದೆ.

ಈ ಮಸೂದೆಯ ವಿಷಯದಲ್ಲಿ ಇಷ್ಟು ದಿವಸದಿಂದ ಸರ್ಕಾರದವರು, ಅವರು ಹೇಳುತ್ತಿರುವ ಹಾಗೆ, lot of examination ಮಾಡಿ, ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಪ್ರತಿಯೊಂದನ್ನೂ ಲೆಕ್ಕಮಾಡಿ ರುತ್ತಾರೆ. ಆದರೆ ಪಕ್ಷದ ಮುಂದೆಯೂ ಕೂಡ ಕಾನೂನುಗಳ ವಿಷಯದಲ್ಲಿ ಸರಿಯಾದ ತಜ್ಞರ ಅಭಿಪ್ರಾಯದಂತೆ, ಅದುಮೇಲೆ ಟೀಕೆಗಳೇನೂ ಇಲ್ಲ ದಂತೆ ಮಸೂದೆಯನ್ನು ತರಲಾಗಿದೆ ಎಂದು ಹೇಳು ವುದಿಲ್ಲ. ಪ್ರತಿಯೊಂದು ವಿಷಯದ ಮೇಲೆಯೂ ಚರ್ಚೆ ಯಾಗಬೇಕು. ಅದು ದೇಶಕ್ಕೆ ತಿಳಿಯಬೇಕು. ಸರಿ ಯಾದುದನ್ನೇ ಮಾಡಬೇಕು. ಹಾಗೆ ಮಾಡುತ್ತಿದ್ದರೂ ಕೂಡ ನಮ್ಮನ್ನೆ ಸರಿಯಾಗಿದೆ ಎಂದು ಒಪ್ಪಿ ಕೊಳ್ಳುವುದು ಉಚಿತವಲ್ಲ. ಯಾವುದನ್ನೇ ಆಗಲಿ ಚರ್ಚೆಮಾಡದೆ, ಅದರ ಸಾಧಕ ಬಾಧಕಗಳನ್ನು ವಿಚಾ ರಿಸದೆ ಫಾರ್ಮಾಲಿಟೀಸ್ ಎಂದು ಏನು ಹೇಳುತ್ತಾ ರೆಯೋ ಅದನ್ನೆಲ್ಲ ಮಾಡದೆ ಒಪ್ಪಿಕೊಳ್ಳಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಈ ಮಸೂದೆಯಲ್ಲಿ ಅಂಥ ಭಯವೇನೂ ಇಲ್ಲ. ಆದರೆ ಇದರಲ್ಲಿ ನನಗನ್ನಿಸುವುದು ಏನೆಂದರೆ ಇದರಲ್ಲಿ ಆತುರ ಹೆಚ್ಚಾಗಿದೆ. ಇದನ್ನು ಅಕ್ಟೋಬರು ಒಂದನೆ ತಾರೀಖಿನಿಂದಲೇ ತರಬೇಕಾಗಿ ರುವುದರಿಂದ ಒಪ್ಪಬೇಕು ಎಂದು ಹೇಳುತ್ತಾರೆ. ಮಸೂದೆಯನ್ನು stage by stage ತೆಗೆದುಕೊಂಡು ಏನೇನು ಸಂಸ್ಕಾರವಾಗಬೇಕೋ ಅದನ್ನೆಲ್ಲ ಮಾಡು ವುದು ಒಳ್ಳೆಯದು.

ಕಾಂಪೆನ್ಸೇಷನ್ ವಿಚಾರದಲ್ಲಿ 14,18,000 ರೂಪಾ ಯಿಗಳನ್ನು ಕೊಡಬೇಕೆಂದು ಈ ಮಸೂದೆಯಲ್ಲಿ ತಿಳಿ ಸಿದ್ದಾರೆ. ಇದು ಹೆಚ್ಚು ಎನ್ನುವುದು ನನ್ನ ಅಭಿ ಪ್ರಾಯ. ಸಾಧ್ಯವಾದರೆ ಫೇಸ್ ವ್ಯಾಲ್ಯೂ ಕೊಟ್ಟಿ ದ್ದರೆ ಸಾಕಾಗಿತ್ತು. ಇನ್‌ಕಂಟ್ಯಾಕ್ಸ್ ಬಾಕಿ ಇರುವು ದನ್ನು ಮಂತ್ರಿಗಳ ಅಭಿಪ್ರಾಯದ ಪ್ರಕಾರ, ಕಾಂಪೆನ್ ಸೇಷನ್‌ನಲ್ಲಿ ಕೊಡಬೇಕೆಂದಿತ್ತೆಂದು ಕಾಣುತ್ತದೆ. ಈಗ ಬಹುಶಃ ಅದನ್ನು ಬೇರೆ............

ಶ್ರೀ ಟಿ. ಮರಿಯಪ್ಪ.—ಇನ್‌ಕಂಟ್ಯಾಕ್ಸ್ ಕೊಡ ಬೇಕಾದರೆ accrued profits ಮೇಲೆ ತಾನೆ ಕೊಡ ಬೇಕು!

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ಯಾವ ದಾಕ್ಷಿಣ್ಯವೂ ಇಲ್ಲದೆ ಈ ಪರಿಹಾರಕ್ಕೆ ಅವರಾದರೂ ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಇದ ರಲ್ಲಿ ಒಂದು ವಿಷಯವಿದೆ. ಅದನ್ನು ಸರ್ಕಾರದವರು ಮರೆಯ ಬಾರದು. ಕಾಲದ ಗತಿಯನ್ನು ಮತ್ತು ತೀವ್ರತೆಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಬಂಡವಾಳಗಾರರಿಗೆ ಬಹು ಹಿಂದೆಯೇ ಇದು ಅರ್ಥ ವಾಗಿದೆ. ನನಗೆ ತಾತ್ವಿಕವಾಗಿ, ಥಿಯೊರೆಟಿಕಲ್ ಆಗಿ ಗೊತ್ತಿರುವ ಹಾಗೆ the capitalist class is the only conscious class. ವರ್ಗದ ದೃಷ್ಟಿ ಯಿಂದ ನೋಡಿದರೆ ಎಲ್ಲೆಲ್ಲಿ ಏನಾಗುತ್ತಿದೆ ಎನ್ನುವುದು ಬಂಡವಾಳಗಾರರಿಗೆ ಚೆನ್ನಾಗಿ ಗೊತ್ತು. ಹಡಗು ವ್ಯಾಪಾರ ಮಾಡುವವರು, ಷೇರು ಮಾರ್ಕೆಟ್‌ನಲ್ಲಿ ವ್ಯವ ಹಾರ ಮಾಡುವವರು. ಮುಂತಾದವರಿಗೆ ಈ ವಿಷ ಯಗಳು ಚೆನ್ನಾಗಿ ತಿಳಿದಿರುತ್ತವೆ. ಆದರೆ ಅವರು ಯಾವಾಗಲೂ ತಮ್ಮ ವೃತ್ತಿಯನ್ನು, ತಮ್ಮ ಆಸ್ತಿ ಯನ್ನು, ತಮ್ಮ ಕೈಗಾರಿಕೆಯನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಬೇಕಾದಷ್ಟು ಹೊಡೆದಾಡುತ್ತಾರೆ. ಶ್ರೀಮಾನ್ ಇಮಾಂ ಅವರು ಕಾಂಪೆನ್‌ಸೇಷನ್ ಸ್ವಲ್ಪ ಜಾಸ್ತಿ ಕೊಡಿ ಎಂದು ಹೇಳಿದರು. ಈ ಕಂಪೆನಿಯಲ್ಲಿ ಅವರ ಷೇರುಗಳು ಇವೆಯೋ ಇಲ್ಲವೋ ಆ ವಿಷಯ ನನಗೆ ಗೊತ್ತಿಲ್ಲ. ಅವರ ಬೆನ್ನ ಹಿಂದೆ ನಾವು ಮಾತ ನಾಡಬಾರದು. ಕೋಳಿಯು ಯಾವಾಗಲೂ ತನ್ನ ಕಡೆಗೇ ಎಳೆದು ಕೊಳ್ಳುತ್ತದೆ. ಹಾಗೆಯೇ ಯಾವಾಗ ಬೀಗದ ಕೈಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುವುದಕ್ಕೆ ಷುರುವಾಗುತ್ತದೆಯೋ ಆಗ ಮನುಷ್ಯ ಸ್ವಲ್ಪ ಹುಷಾ ರಾಗುತ್ತಾನೆ. ಆದುದರಿಂದ ಇದ್ದುದರಲ್ಲಿ ಜಾಸ್ತಿ ಕೊಟ್ಟರೆ ಒಳ್ಳೆಯದೋ ಏನೋ ಎಂಬ ಭಾವನೆ ಬರುವುದು ಸಹಜ.

ಮುಂದೆ ಬರತಕ್ಕ ಮೈಸೂರು ಸಂಸ್ಥಾನದಲ್ಲಿ ಇದು ಮೊದಲನೆಯ ರಾಷ್ಟ್ರೀಕರಣ ಮಾಡಿರತಕ್ಕ ಒಂದು ನಗರ. ಮುಂದೆ ಸರ್ಕಾರದವರು ಇತರ ಕಡೆಗಳ ಲ್ಲಿಯೂ ಸಹ ಹೀಗೆಯೇ ಮಾಡುವುದಕ್ಕೆ ಸಿದ್ಧರಾಗಿರ ಬೇಕಾಗುತ್ತದೆ. ಬೃಹತ್ ಮೈಸೂರಿನಲ್ಲಿ ಮುಂಬೈ ಜಿಲ್ಲೆಗಳನ್ನು ಬಿಟ್ಟರೆ ನಮ್ಮ ಸಂಸ್ಥಾನದಲ್ಲಿ ಕೆಲವು

(ಶ್ರೀ ಎಸ್. ಗೋಪಾಲಗೌಡ.)

ಕಂಪೆನಿಗಳಿವೆ. ಬಿ. ಟಿ. ಸಿ. ಯನ್ನು ಮಾರಿಸಿರತಕ್ಕ ಕೆಲವು ಕಂಪನಿಗಳಿವೆ. ಸಿ. ಪಿ. ಸಿ., ಗಜಾನನ, ಸಿ. ಕೆ. ಎಂ. ಎಸ್., ಶಂಕರ್ ಟ್ರಾನ್ಸ್‌ಪೋರ್ಟ್, ಹನುಮಾನ್, ಮುಂತಾದುವಿವೆ. ಆದುದರಿಂದ ಅನೇಕ ಕಂಪನಿಗಳಿವೆ. ಅವುಗಳನ್ನು ಕ್ರಮೇಣ ರಾಷ್ಟ್ರೀಕರಣ ಮಾಡತಕ್ಕ ಹೆಜ್ಜೆಯನ್ನು ತೆಗೆದುಕೊಳ್ಳಬೇಕು. ಹೊಸ ರಾಜ್ಯ ಅಸ್ತಿತ್ವಕ್ಕೆ ಬರುವಾಗಲೇ ಇವುಗಳನ್ನು ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಸ್ವರಾಜ್ಯ ಬಂದು ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಈ ರೀತಿ ರಾಷ್ಟ್ರೀಕರಣ ಮಾಡಿದ್ದರೆ ಅದು ಒಳ್ಳೆಯ ಹೆಜ್ಜೆ ಎಂದು ಹೇಳುತ್ತಿದ್ದೆವು. ಆದರೆ ಈಗ ಹಳೆಯದನ್ನು, ಕಳೆದು ಹೋಗಿರುವುದನ್ನು ಚಿಂತಿಸಿ ಫಲವಿಲ್ಲ. That zero hour which was lost for ever will never come in the life of this Country. ಆದುದರಿಂದ ಈ ದೃಷ್ಟಿಯೂ ಕೂಡ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಇರಬೇಕಾದದ್ದು ಸೂಕ್ತವೆಂದು ನಾನು ಹೇಳುತ್ತೇನೆ.

ಇನ್ನು assets and liabilities ವಿಚಾರದಲ್ಲಿ ಸಭೆಯ ಮುಂದೆ ಏನನ್ನೂ ಇಟ್ಟಿಲ್ಲ. ನಮಗೆ ಗೊತ್ತಾಗಿರುವ ವದಂತಿ ಪ್ರಕಾರ ಅಸೆಟ್ಸ್ ತುಂಬ ಜಾಸ್ತಿ ಇವೆ. ಆದ್ದರಿಂದ ಅದನ್ನು ಕೊಟ್ಟಿಲ್ಲ. ಲಯಬಿಲಿಟೀಸ್ ಏನೂ ಇಲ್ಲವೆನ್ನುವ ರೀತಿಯಲ್ಲಿ ಸರ್ಕಾರಕ್ಕೆ ಅಭಿಪ್ರಾಯವಿದೆ ಎಂದು ಕಾಣುತ್ತದೆ. ಅದೇನೇ ಇರಲಿ, ಅದೀಗ ಅನಗತ್ಯ. ಜನರಿಗೆ ಅದು ಹೆಚ್ಚಿಗೆ ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು ಹೆಚ್ಚಿನ ಅನುಕೂಲ. ಬಿ. ಟಿ. ಸಿ. ಯು ನಿಜವಾಗಿಯೂ ಪ್ರಯಾಣಿಕರ ಸಂಚಾರಿಗಳ ಸೇವಕನಾಗಬೇಕು. It must be at their beck and call ಎಂಬಂತಾದರೆ ಅಗ ಸಾರ್ಥಕವಾಗುತ್ತದೆ. ಜನರು ಕೊಡತಕ್ಕ ಹಣಕ್ಕೆ ತಕ್ಕ ಸುಖ ಅವರಿಗೆ ಈಗ ದೊರೆಯುತ್ತಿಲ್ಲ. ನಾನು ಮುಂಬೈ, ಕಲ್ಕತ್ತ, ದೆಹಲಿ, ಮದರಾಸ್ ಮುಂತಾದ ಕಡೆ ಬಸ್ಸುಗಳಲ್ಲಿ ಓಡಾಡಿದ್ದೇನೆ. ಹೆಚ್ಚು ಅನುಕೂಲವಾಗಿರುವುದೆಂದರೆ ಮುಂಬೈ ಬಸ್ಸುಗಳು. ಅವರಿಂದ ಕಲಿಯುವುದು ಬೇಕಾದಷ್ಟಿದೆ, ಮೈಸೂರು ಸರ್ಕಾರದವರು ದೆಹಲಿಯಲ್ಲಿರುವುದು ಬಹಳ ಕೆಟ್ಟ ಸರ್ವೀಸ್ ಎಂದು ಹೇಳಬಹುದು. ಬಿ. ಟಿ. ಸಿ.ಯಲ್ಲಿ, ಕೆಲವು ಮಾರ್ಗಗಳಲ್ಲಿ 0—2—0, 0—2—6, ಕನಿಷ್ಠದರ (minimum rates) ಹಾಗಿಟ್ಟಿರುತ್ತಾರೆ. ಮಹಾರಾಣಿ ಕಾಲೇಜಿನಿಂದ ಹೊರಟು ಮಾವಳ್ಳಿ ಸರ್ಕಲ್‌ನಲ್ಲಿ ಇಳಿದರೆ 0—2—0, 0—2—6 ತೆರಬೇಕು. ಅದಕ್ಕೆ ಒಂದು ಮಿನಿಮಂ ಪಾಯಿಂಟ್ ಇಲ್ಲವೇ ಇಲ್ಲ. ದಾರಿಯಲ್ಲಿ 20 ಪಾಯಿಂಟ್‌ಗಳು ಇದ್ದರೂ ಸಹ ಮಿನಿಮಂ ಎಲ್ಲ ಕಡೆಗೂ ಒಂದೇ ಇದೆ. ಒಂದೊಂದು ಪಾಯಿಂಟಿಗೆ ಇಷ್ಟಿಷ್ಟು ಎಂದು ನಿಗದಿ ಮಾಡಿ ಪ್ರತಿ ಪಾಯಿಂಟಿಗೂ ಹೆಚ್ಚಿಸಿಕೊಂಡು ಹೋಗತಕ್ಕ ಪದ್ಧತಿ ಇರಬೇಕು. ಕನಿಷ್ಠದರ(minimum fare) 0—1—0 ಎಂದಿಟ್ಟುಕೊಳ್ಳಬಹುದು. ಈಗ ಹಣದ ಬೆಲೆ ಜಾಸ್ತಿಯಾಗಿರುವುದರಿಂದ ಅದಕ್ಕಿಂತ ಕಡಿಮೆ ದರವನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲವಾಗಿ ಕನಿಷ್ಠದರವನ್ನು 0—1—0 ಇಟ್ಟುಕೊಂಡು ಪ್ರತಿ ಪಾಯಿಂಟಿಗೂ ಅರ್ಧಾಣೆಯಂತೆ ಹೆಚ್ಚಿಸಿಕೊಂಡು ಹೋಗಬಹುದು. ಈಗ ಟಿಕೆಟ್‌ಗಳನ್ನು ಕೊಡುವ ವ್ಯವಸ್ಥೆ ಫೂಲ್ ಪ್ರೂಫ್ ಆಗಿಲ್ಲ. ಇದನ್ನು ಸರಿಪಡಿಸಬೇಕು. ಮತ್ತು ದರಗಳ ವಿಷಯದಲ್ಲಿ ಬಹಳ ಜಾಸ್ತಿ ಇದೆ. ಇತರ ಕಡೆಗಳಲ್ಲಿರುವ ದರಗಳಿಗೆ ಹೋಲಿಸಿ ನೋಡಿದರೆ 10—12 ಮೈಲಿ ಪ್ರಯಾಣಕ್ಕೆ 3—4 ಆಣೆಗಳನ್ನು ಕೊಡಬೇಕಾಗಿರುವಂಥ ಸಂದರ್ಭಗಳಿರುವಾಗ ಇಲ್ಲಿ ನೋಡಿದರೆ 6 ಆಣೆ, 8 ಆಣೆ ಕೊಡಬೇಕಾಗಿದೆ.

Sri H. SIDDAVEERAPPA.—These are matters of detail. We will provide for them in the Rules.

ಶ್ರೀ ಎಸ್. ಗೋಪಾಲಗೌಡ.—ಬಸ್ಸಿನಲ್ಲಿ ಪ್ರಯಾಣ ಮಾಡುವವನಿಗೆ ಟೈಂ ಪ್ರಕಾರ ಬಸ್ಸು ಬಂದರೆ ಒಳ್ಳೆಯದೆಂದು ಕಾಣುತ್ತದೆ. He is only concerned with what he pays and how many hours are lost at the bus stop. ಅಲ್ಲದೆ ಬಸ್ಸಿನಲ್ಲಿ ಹತ್ತಿ ಕುಳಿತುಕೊಂಡಮೇಲೆ ಮೈಮೇಲೆ ಎಷ್ಟು ಜನ ಬಿದ್ದು ಕೈಕಾಲು ತುಳಿಯುತ್ತಾರೆನ್ನುವುದೂ ಗೊತ್ತಾಗುವುದಿಲ್ಲ. ಹೀಗಿದೆ, ಈಗಿರುವ ಬಸ್ಸುಗಳಲ್ಲಿನ ಪ್ರಯಾಣ ಸೌಕರ್ಯ. The first thing is to get into the bus, to sit comfortably, pay as little as possible and reach his destination in time. ಅವನಿಗೆ ಬೇಕಾದದ್ದು ಇಷ್ಟು ಮಾತ್ರ. ಅವನಿಗೆ ಕೊಡುವ ಟಿಕೆಟ್ಟಿನ ಮೇಲೆ ಯಾರ ಮೊಹರು ಇದ್ದರೆ ಏನು? ಅವನಿಗೆ ಅದೆಲ್ಲ ಅಪ್ರಕೃತ. ಆದುದರಿಂದ ಈ ವಿವರಗಳೆಲ್ಲ ಬಹಳ ಮುಖ್ಯ. ಸರ್ಕಾರದವರು ಇದನ್ನೆಲ್ಲ ವಿಮರ್ಶೆ ಮಾಡಿಸಿಲ್ಲವೆಂದು ಕಾಣುತ್ತದೆ. ಒಟ್ಟಿನಲ್ಲಿ ಜನಗಳಿಗೆ ಹೆಚ್ಚಿನ ಅನುಕೂಲವಾಗುವ ಹಾಗೆ ಮಾಡಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಇನ್ನೊಂದು ಅಂಶವಿದೆ. ಅದನ್ನೂ ಈ ಸಂದರ್ಭದಲ್ಲಿ ಹೇಳಬಹುದೆಂದು ಕಾಣುತ್ತದೆ. ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಕೊಡುತ್ತಿರುವಷ್ಟು ಸಂಬಳಸಾರಿಗೆ ಬಿ.ಟಿ.ಸಿ.ಯಲ್ಲಿ ಕೊಡುತ್ತಿಲ್ಲವೆಂದು ತಿಳಿದು ಬರುತ್ತದೆ. ಬಿ.ಟಿ.ಸಿ.ಯಲ್ಲಿ ಡ್ರೈವರಿಗೆ 40ರೂಪಾಯಿ ಸಂಬಳ ಕೊಡುತ್ತಾರೆ. ಅದೇ ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ 45 ರೂಪಾಯಿ ಕೊಡುತ್ತಾರೆ. ಹಾಗೆಯೇ ಕಂಡಕ್ಟರುಗಳು ಮತ್ತು ಇತರರಿಗೂ ಇದೆ ಎಂದು ತಿಳಿದು ಬಂದಿದೆ. ಹಾಗೆಯೇ ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಹೋಗಬೇಕೇ ಬೇಡವೇ ಎನ್ನುವ ಅಂಶ, ಕಾರ್ಪೊರೇಷನ್ ಮಾಡಬೇಕೇ ಅಥವಾ ಸರ್ಕಾರದವರು ಈಗ ನಡೆಸಿಕೊಂಡು ಹೋಗುತ್ತಿರುವ ರೀತಿಯಲ್ಲಿಯೇ ಹೋಗಬೇಕೇ ಎಂಬ ಅಂಶ, ಇವುಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇವೆ.

ನೌಕರರ ವಿಷಯದಲ್ಲಿ ಸರ್ಕಾರ ತನ್ನ ಧೋರಣೆಯನ್ನು ಸ್ಪಷ್ಟಮಾಡಿಕೊಂಡಿಲ್ಲ. ರಾಷ್ಟ್ರೀಕರಣ ಇತ್ಯಾದಿ ವಿಷಯದಲ್ಲಿ ಸರ್ಕಾರದವರ ಧೋರಣೆ ಎಷ್ಟು ಅಸ್ಪಷ್ಟವಾಗಿದೆಯೋ ನೌಕರರ ವಿಷಯದಲ್ಲಿಯೂ ಅಷ್ಟೇ ಅಸ್ಪಷ್ಟ ಮಾತ್ರವಲ್ಲ, ಖಾಸಗಿ ಬಂಡವಾಳಗಾರರಿಗಿಂತ 'ಕರ್ಜೂಸ್' ಎಂದು ಹೇಳಬಹುದು. ಕೆಲಸಗಾರನೇನಾದರೂ ಆಗಲಿ ತಾನು ಹಾಕಿರುವ ಬಂಡವಾಳ ವೃದ್ಧಿಯಾಗಿ ತಾನು ಸುಖವಾಗಿರುವುದಕ್ಕೆ ಬೇಕಾದ ಕೆಲಸ ಕಾರ್ಯಗಳನ್ನು ಮಾಡುವುದು, ಕೆಲಸಗಾರರೇನಾದರೂ ಹೆಚ್ಚುವರಿ ಬೇಡಿಕೆಗಳನ್ನು ಮುಂದಿಟ್ಟರೆ ಲಾಕ್‌ಔಟ್ ಮಾಡುವುದು, ಇಂಥವೆಲ್ಲ ಖಾಸಗಿ ಬಂಡವಾಳಗಾರನ ದೃಷ್ಟಿ, ಅವನಲ್ಲಿರುವ inherent qualities. ಕೂಲಿಗಾರನ ಆರ್ಥಿಕಾವಸ್ಥೆ ಏನಾದರೂ ಕೂಡ ಬಂಡವಾಳಗಾರ ತಾನು ಸಾಕಾದಷ್ಟು ಬಂಡವಾಳ ಹಾಕಿ ಅದನ್ನು ಬೆಳೆಸುತ್ತಾನೆ. ಲಾಕ್‌ಔಟ್ ಮುಂತಾದುವು ಈಗ ಸರ್ಕಾರಕ್ಕೂ ಬಂದುಬಿಟ್ಟಿವೆ. ಸಾರ್ವತ್ರಿಕವಾಗಿ ರಿಟ್ರೆಂಚ್‌ಮೆಂಟ್, ನ್ಯಾಷನಲೈಸೇಷನ್, ಇತ್ಯಾದಿ ಹೆಸರಿನಲ್ಲಿ ಸಾವಿರಾರು

ಜನರನ್ನು ಹೊರಕ್ಕೆ ಹಾಕುವುದು ಸಾಮಾನ್ಯವಾಗಿದೆ. ಖಾಸಗೀ ಮನುಷ್ಯನ ಹತ್ತಿರಬೇಕಾದರೆ ಅವನಿಗೆ ಸಲಾಂ ಹೊಡೆದು, ಅಹವಾಲನ್ನು ಹೇಳಿಕೊಳ್ಳ ಬಹುದು. ಆದರೆ ಅದೇ ಸರ್ಕಾರದಲ್ಲಿ ಏನಾದರೂ ಆಗಬೇಕಾಗಿದ್ದರೆ ಒಂದು ಕಮಿಟಿಯನ್ನೋ ಅಥವಾ ಟ್ರಿಬ್ಯೂನಲ್ಲನ್ನೋ ನೇಮಕಮಾಡಬಹುದು ಎಂದಿರು ತ್ತದೆ. ಸಾಮಾನ್ಯವಾಗಿ ಯಾವುದನ್ನೂ ಮಾಡುವುದಿಲ್ಲ. ಆಕ್ಟಿನಲ್ಲಿ 'may' ಎಂದು ಇದೆ. 'shall' ಎಂದು ಇದ್ದಿದ್ದರೆ ಖಂಡಿತವಾಗಿ ಮಾಡುತ್ತಿದ್ದರು. 'never may' ಎಂಬಂತೆ 'may' ಎಂಬ ಶಬ್ದದ ಅರ್ಥವನ್ನು ಮಾಡುವುದಿಲ್ಲವೆನ್ನುವ ಅರ್ಥಮಾಡಿ ಉಪಯೋಗಿಸು ತ್ತಾರೆ.

5 P. M.

ಆದ್ದರಿಂದ ಸಣ್ಣ ಕೆಲಸಗಾರರ ವಿಷಯದಲ್ಲಿ ಸರ್ಕಾರ ಮಾದರಿಯಾಗಿರಬೇಕು, ಸಹಾನುಭೂತಿಯುಳ್ಳವರಾಗಿರ ಬೇಕು, ಇಲ್ಲದಿದ್ದರೆ ರಾಷ್ಟ್ರೀಕರಣ ಮಾಡುವುದಕ್ಕೆ ಮತ್ತು ಸರ್ಕಾರ ಹೆಚ್ಚಿನ ಉದ್ಯಮಗಳನ್ನು ನಡೆಸಿಕೊಂಡು ಹೋಗಿ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ತೆರೆದು ದೇಶದ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಾಗು ವುದಿಲ್ಲ. ಏಕೆಂದರೆ ಪ್ರತಿದಿವಸವೂ ಕಾರ್ಯಕರ್ತರಿಗೂ ಮಾಲೀಕರಿಗೂ ಒಂದು ಅಂತರ ಯುದ್ಧ ನಡೆಯುತ್ತಲೇ ಇರುತ್ತದೆ. ಮಾನಸಿಕವಾದ ತೊಂದರೆಯಿದ್ದರೆ ಸಹ- ಕರಿಸಿ ದುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದಿವಸ ಕೆಲಸಗಾರರು ಕೇಳುವುದು ಮಿನಿಮಂ ವೇಜಸ್ ಸರಿ ಯಾಗಿ ನಿಗದಿಮಾಡಬೇಕು, 8 ಗಂಟೆ ಕೆಲಸವಿರಬೇಕು, ರಜಾ ಸೌಲಭ್ಯವಿರಬೇಕು ಇತ್ಯಾದಿಗಳಿಗೆ ತಕ್ಕ ಗಮ ನಕೊಡಬೇಕು. ನನಗೆ ಗೊತ್ತಿರುವ ಹಾಗೆ ಬಿ.ಟಿ.ಸಿ. ಯಲ್ಲಿ ಈಗ ಇನ್ಷೂರೆನ್ಸ್ ಸ್ಕೀಂ ಮಾಡಿಲ್ಲವೆಂದು ಹೇಳಿದ್ದಾರೆ. ಕೆಲಸಗಾರರಿಗೂ ಇನ್ಷೂರೆನ್ಸ್ ಸ್ಕೀಂ ಮಾಡಬೇಕಾದದ್ದು ನಿಜವಾಗಿಯೂ ಅಗತ್ಯ. ಮೂರು ಇನ್ಕ್ರಿಮೆಂಟು ಕೊಡಬೇಕಾದವನ್ನು ಕೊಟ್ಟಿಲ್ಲವೆಂದು ಕೇಳಿದೆ. ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್, ಬೋನಸ್ ಕೊಡುವ ಬಗ್ಗೆ ಅವರಿಗೆ ಹೆಚ್ಚಿನ ಅನುಕೂಲ ವಾಗಬೇಕೆಂಬುದು ನನ್ನ ಅಭಿಪ್ರಾಯ. ಕೆಲಸಗಾರರ ವಿಷಯಕ್ಕೆ ಸಂಬಂಧಪಟ್ಟ ಕಾನೂನಿನಲ್ಲಿರುವ ಸೌಲಭ್ಯ ಗಳನ್ನೊದಗಿಸಿ ಆ ಕಾನೂನನ್ನು ಮಾನ್ಯಮಾಡುವ ಮನೋಭಾವ ಸರ್ಕಾರಕ್ಕಿಲ್ಲ. ಅದಕ್ಕೆ ವಿರೋಧವಾಗಿ ಹೋಗಿ, ತಮಗೆ ಗೊತ್ತಿಲ್ಲವೆಂದು ಸರ್ಕಾರದವರು ಉತ್ತರ ಕೊಡುತ್ತಾರೆ. ಲೇಬರ್ ಇಲಾಖೆ ಪತ್ರವ್ಯವ ಹಾರ ನೋಡಿದರೆ ಅದು ಗೊತ್ತಾಗುತ್ತದೆ. ರೆವೆನ್ಯೂ ಮನೋಭಾವ ಬೇಡ. ಕೈಗಾರಿಕಾ ಸಂಸ್ಥೆ ಮತ್ತು ಇಂಥ ಇಲಾಖೆಗಳಲ್ಲಿ ಶ್ಯಾನುಭೋಗರು ಕಡತ ಕಟ್ಟಿಟ್ಟು ಇಲ್ಲವೆಂದು ಹೇಳುವಂತೆ ಒಂದು ಮನೋಭಾವ ತೋರಿಸುವುದು ಬೇಡ. ಇದರಲ್ಲಿ ಒಂದು ಹೊಸ ಮನೋಭಾವ ತೋರಿಸಿ ಕಾರ್ಯದಲ್ಲಿ ಹೊಂದಿಕೊಂಡು ಹೋಗುವುದಾದರೆ ಕೆಲಸಗಾರ ಪ್ರಮುಖಪಾತ್ರ ವಹಿ ಸುವುದಕ್ಕೂ ಕಾರ್ಯ ಸುಗಮವಾಗಿ ಆಗುವುದಕ್ಕೂ ಸಾಧ್ಯವಾಗುತ್ತದೆ. ಇದಕ್ಕೆ, ಶ್ರೀ ಮುಲ್ಕ ಗೋವಿಂದ ರೆಡ್ಡಿಯವರು ಹೇಳಿರುವ ಹಾಗೆ, ಕಾರ್ಪೊರೇಷನ್ ಅಥವಾ ಯಾವುದೇ ಬಾಡಿ ಕಾನ್ಸ್ಟಿಟ್ಯೂಟ್ ಮಾಡಿ ದರೂ ಅದರಲ್ಲಿ ಉಪಯೋಗಿಸುವವರಿಗೂ, ದುಡಿಯುವ ಕೆಲಸಗಾರರಿಗೂ, ಸರ್ಕಾರದ ಕಡೆಯುವರಿಗೂ ಪ್ರಾತಿ ನಿಧ್ಯವಿರಬೇಕು. ಹೀಗೆ ಮೂರು ಕಡೆಯವರೂ ಇದ್ದು ವಿಹಿತವಾಗಿ ನಡೆಸಬೇಕು. ಇದೇ ಸಂದರ್ಭದಲ್ಲಿ ಒಂದು ಎಚ್ಚರಿಕೆ ಕೊಡಬೇಕಾಗಿದೆ. ನಿಮ್ಮವರಿಗೇ ಕೊಡುವು ದನ್ನು ಕೈಬಿಡಬೇಕು, ಸದಾಕಾಲಕ್ಕೂ ವರ್ಜ್ಯ ಎಂದು ಹೇಳುವ ಹಾಗೆ ಬಿಡಬೇಕು. ದೇಶದ ಹಿತದೃಷ್ಟಿಯಿಂದ ಮತ್ತು ನಿಮ್ಮ ಹಿತದೃಷ್ಟಿಯಿಂದ ಕೂಡ ಅದನ್ನು ಬಿಟ್ಟೇ ಬಿಡಬೇಕು. ಸಾಧ್ಯವಾದ ಮಟ್ಟಿಗೂ ಪಾರ್ಟಿ ಪಕ್ಷಗಳಿಗೆ ಸಂಬಂಧ ಪಡದೆ ಇರಬೇಕು. ಮೆಕ್ಯಾನಿ ಕಲ್ ವಿಷಯಗಳಲ್ಲಿ ತಜ್ಞತೆ, ದಕ್ಷತೆ ಪಡೆದಿರುವವರಿಗೆ, ಕೈಗಾರಿಕೆ ವಿಷಯದಲ್ಲಿ ಮಾಹಿತಿ ಪಡೆದಿರುವವರಿಗೆ, ಸತ್ಯವಾಗಿ ನಡೆಯುವರಿಗೆ ಸ್ಥಾನ ಮೀಸಲಾಗಿಟ್ಟು ಅಂಥವರನ್ನು ಆರಿಸಿ ಹಾಕಬೇಕು. ಅಂಥವರಿಗೆ ನಮ್ಮ ದೇಶದಲ್ಲಿ ಅಭಾವವೇನೂ ಇಲ್ಲ. ನಮ್ಮವರೇ ಇರ ಬೇಕು, ಇದ್ದರೆ ಕ್ಷೇಮ, ಬೇಕಾದಾಗ ತೆಗೆಯಬಹುದು, ಹಾಕಬಹುದು ಎಂದು ಹೇಳಿದರೆ ಕಷ್ಟ. ತಪ್ಪುಮಾಡಿ ದವರಿಗೆ ಶಿಕ್ಷೆಯಿದ್ದೇ ಇದೆ. ಕಾರ್ಪೊರೇಷನ್ ಮಾಡಲಿ ಅಥವಾ ಬೇರೆ ಬಾಡಿ ಮಾಡಲಿ ರೆಕ್ರೂಟ್‌ಮೆಂಟ್ ಇತ್ಯಾದಿ ವಿಷಯಗಳಲ್ಲಿ ಒಂದು ಸದ್ಭಾವನೆಯಿಂದ ನಾನು ಹೇಳಿದಂತೆ ಮಾಡದಿದ್ದರೆ ಸಾರ್ಥಕವಾಗುವು ದಿಲ್ಲ, ಕೆಟ್ಟಹೆಸರು ಬರಲು ಅವಕಾಶವಾಗುತ್ತದೆ ಮತ್ತು ಇದರಲ್ಲಿ ಅನೇಕ ಲೋಪದೋಷಗಳುಂಟಾಗಿ ಉದ್ದೇಶ ವ್ಯರ್ಥವಾಗಿ ಹೋಗುತ್ತದೆ. ಆದ್ದರಿಂದ ಈ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ಈ ಮಸೂದೆ ಹೆಚ್ಚು ಹೆಚ್ಚಾಗಿ ಎಲ್ಲ ಖಾಸಗಿ ಬಂಡವಾಳಗಳ ರಾಷ್ಟ್ರೀಕರಣಕ್ಕೆ, ಮತ್ತು ಮುಖ್ಯವಾಗಿ ಹೊರದೇಶದ ಬಂಡವಾಳದ ಶೀಘ್ರವಾದ ರಾಷ್ಟ್ರೀಕರಣಕ್ಕೆ, ಒಂದು ಬುನಾದಿಯಾಗುತ್ತದೆಂದು ಹಾರೈಸಿ ಈ ಮಸೂದೆಗೆ ನನ್ನ ಬೆಂಬಲವನ್ನು ಕೊಡು ತ್ತೇನೆ.

ಶ್ರೀ ಡಿ. ವೆಂಕಟೇಶ್ (ಗಾಂಧಿನಗರ).—ಈ ಮಸೂ ದೆಯನ್ನು ಸ್ವಾಗತಿಸಿ ಎರಡು ಮಾತುಗಳನ್ನಾಡ ಬೇಕೆಂದಿದ್ದೇನೆ. ಈಗ ಖಾಸಗಿ ಬಂಡವಾಳದಿಂದ ನಡೆಯುತ್ತಿರುವುದನ್ನು ತಪ್ಪಿಸಿ ಸಂಪೂರ್ಣವಾಗಿ ರಾಷ್ಟ್ರದ ಬಂಡವಾಳದಿಂದ ನಡೆಸಬೇಕೆಂದು ತಂದಿ ರುವ ಈ ಮಸೂದೆಯಿಂದ ದೇಶದ ಜನರಿಗಾಗಲಿ ಅಥವಾ ಕೆಲಸಗಾರರಿಗಾಗಲಿ ತೊಂದರೆಯಾಗಲಾ ರದು, ಅನುಕೂಲವಾಗುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಸಂಬಂಧದಲ್ಲಿ ಬರುವ ಆದಾಯ ಮತ್ತು ಲಾಭ ಈ ದಿವಸ ಬಂಡವಾಳಗಾರರಿಗೆ ಹೋಗು ತ್ತಿರುವುದನ್ನು ತಪ್ಪಿಸಿ ಅದು ದೇಶದ ಜನರಿಗೆ ಸಲ್ಲು ವಂತೆ ಮಾಡಬೇಕೆಂಬ ದೃಷ್ಟಿಯಿಂದ ಈ ಮಸೂದೆಯು ತರಲ್ಪಟ್ಟಿದೆಯೆಂದು ನಾನು ತಿಳಿದುಕೊಂಡು ಬೆಂಬಲ ಕೊಡುತ್ತೇನೆ. ಅಲ್ಲದೆ ಖಾಸಗಿ ಬಂಡವಾಳ ವನ್ನು ಹೋಗಲಾಡಿಸಿ ರಾಷ್ಟ್ರೀಕರಣ ಮಾಡುವುದ ರಿಂದ ಸರ್ಕಾರವೇ ಬಂಡವಾಳಶಾಹಿಯಾಗಿ ಆಗ ವ ಉದ್ದೇಶವಿದ್ದರೆ ಅದು ಸರಿಯಾದುದಲ್ಲ.

ಮೂರನೆಯ ಸೆಕ್ಷನ್‌ನಲ್ಲಿ ತೆರಿಗೆಗಳನ್ನು ಕೊಡುವ ವಿಚಾರವಿದೆ. ಅದರ ಪ್ರಕಾರ ಪ್ರಾಫಿಟ್ಸ್ ಮೇಲೆ ಕ್ಯಾಷ್‌ವ್ಯಾಲ್ಯೂ ಕ್ಯಾರಿಓವರ್ ಮಾಡುವ ಪರಿಸ್ಥಿತಿಯಿ ರುವ ಒಂದು ಸಂದರ್ಭವಿದೆಯೆಂಬ ಅಭಿಪ್ರಾಯವಿದೆ. ನಾಲ್ಕನೆಯ ಸೆಕ್ಷನ್ ಪ್ರಕಾರ ಕಾಂಪೆನ್ಸೇಷನ್ ಕೊಡು ವುದನ್ನು ನೋಡಿದರೆ ಬಹಳ ಧಾರಳವಾಗಿಲ್ಲದಿದ್ದರೂ ನಿರೀಕ್ಷಿಸುವುದಕ್ಕಿಂತ ಉತ್ತಮವಾಗಿ ಕಂಪೆನ್ಸೇಷನ್ ಕೊಡುತ್ತಿದ್ದಾರೆ. ಬಂಡವಾಳವೇನು, ಅದರಮೇಲೆ ಬರ ಬೇಕಾದ ಉತ್ಪತ್ತಿ, ಈಗ ಬಂದಿರುವುದು, ಸ್ಥಿರಆಸ್ತಿ, ಅಸೆಟ್ಸ್ ಇವುಗಳನ್ನು ತೆಗೆದುಕೊಂಡು ರಿಸರ್ವ್ ಲೆಕ್ಕಾಚಾರಮಾಡಿ, ಸತ್ಯಾಂಶವನ್ನರಿತು ಆಮೇಲೆ ಕಾಂಪೆನ್ಸೇಷನ್ ನಿಗದಿ ಮಾಡಿದರೆ ಎಂಟು ಲಕ್ಷ ರೂಪಾಯಿ ಕಡಿಮೆ ಬರುತ್ತದೆಂದು ಈ ವಿಚಾರ ದಲ್ಲಿ ಮೇಲ್ಕಂಡ ವಿವರಗಳ ರೀತಿಯಾಗಿ ಒಪ್ಪಿ ಕೊಳ್ಳಬೇಕಾಗಿದೆ. ಆದರೂ ಕೂಡ ನ್ಯಾಯದೃಷ್ಟಿ

(ಶ್ರೀ ಡಿ. ವೆಂಕಟೇಶ್)

ಯಿಂದ ಮುಂದೆ ಸರಿಯಾದ ಕಾಂಪೆನ್ಸೇಷನ್ ಕೊಟ್ಟಿಲ್ಲವೆಂಬ ಒಂದು ಮನೋಭಾವನೆ ಬಾರದಿರಬೇಕೆಂದು ಒರಿಜಿನಲ್ ಷೇರ್‌ವ್ಯಾಲ್ಯು ಮತ್ತು ಅದಕ್ಕಿರುವ ಹೆಚ್ಚಿನ ಬೆಲೆ ಇವೆರಡನ್ನೂ ಗಣನೆಗೆ ತೆಗೆದುಕೊಂಡು ಅವರೇಜ್ ಲೆಕ್ಕಹಾಕಿ ಅದರ ಮೇಲೆ ಪರಿಹಾರ ನಿಗದಿ ಮಾಡಿರುತ್ತಾರೆ. 3ನೆಯ ಸೆಕ್ಷನ್ ಪ್ರಕಾರ ತೆರಿಗೆ ಕೊಡುವುದಾದರೆ ಇನ್ನೂ 3ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಆಗ 17 ಅಥವಾ 18 ಲಕ್ಷ ರೂಪಾಯಾಗುತ್ತದೆ. ಹಾಗಾದರೆ ಸೆಂಟ್ ಪರ್ಸೆಂಟ್ ಈಗಿನ ಮಾರ್ಕೆಟ್ ವ್ಯಾಲ್ಯು ನಾವು ಕೊಟ್ಟ ಹಾಗಾಗುತ್ತದೆ. ಅದು ಸರಿಯಲ್ಲ ಎಂದು ಹೇಳುವುದು ಧರ್ಮವಾಗಿದೆ.

3ನೆಯ ಸೆಕ್ಷನ್ 5ನೆಯ ಪ್ರಾವಿಸೋದಲ್ಲಿ ಹೀಗೆ ಹೇಳಿದೆ —"The liabilities on account of pensions, gratuities and other payments to be made to any officer or employee of the Company" ಯಾವ ಕೆಲಸಗಾರನು ಸರ್ಕಾರ ಕಂಪೆನಿಯ ಆಡಳಿತ ವಹಿಸಿಕೊಂಡ ಮೇಲೆ ಕೆಲಸದಲ್ಲಿ ಮುಂದುವರಿಯದೆ ಹೊರಗೆ ಉಳಿಯುತ್ತಾನೋ ಅಂಥವನ ಜವಾಬ್ದಾರಿಯನ್ನು ಕಂಪನಿ ವಹಿಸಿಕೊಳ್ಳ ಬೇಕೆಂದು ಹೇಳಿದೆ. 8ನೆಯ ವಿಧಿಯಲ್ಲಿ "as from the vesting date" ಎಂದು ಹೇಳಿದೆ. ಅದರ ಪ್ರಕಾರ ಆ ತಾರೀಖಿನಿಂದ ಅವರಿಗಿರುವ ಅನುಕೂಲ, ಸರ್ವಿಸ್ ಕಂಡೀಷನ್ ಮುಂತಾದುವುಗಳ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಆದರೆ ಹಿಂದಿನ ಸರ್ವಿಸ್ ಆ ತಾರೀಖಿನಲ್ಲಿ ಏನಾಗುತ್ತದೋ ಅದನ್ನು ಗಣನೆಗೆ ತೆಗೆದುಕೊಳ್ಳುವರೋ ಅಥವಾ ಇಲ್ಲವೋ ಎಂಬ ಅನುಮಾನವಿದೆ, ಹಿಂದಿನ ಸರ್ವಿಸ್ ಗಣನೆಗೆ ತೆಗೆದುಕೊಳ್ಳ ಬೇಕಾದದ್ದು ಆವಶ್ಯಕ. ಕೆಲಸಗಾರರಿಗಿದ್ದ ಸೌಲಭ್ಯಕ್ಕೆ ಬಾಧಕವುಂಟಾಗಬಾರದು, ಸರ್ಕಾರದ ಆಡಳಿತಕ್ಕೆ ಬಂದ ಮೇಲೆ ಅವರು ಒಂದು ತಪ್ಪು ಮಾಡಿರುವುದಾಗಿ ಆಪಾದನೆ ಬಂದರೆ ಅದನ್ನು ಇಗ್ನೋರ್ ಮಾಡುವುದಕ್ಕಾಗಲಿ ಅಥವಾ ಅಲ್ಟ್ರಾ ವೈರ್ಸ್ ತೀರ್ಮಾನ ಮಾಡುವುದಕ್ಕಾಗಲಿ ಅವಕಾಶ ವಿರಬಾರದು. ಹಿಂದಿನ ಸರ್ವಿಸ್ ಲೆಕ್ಕಕ್ಕೆ ತೆಗೆದುಕೊಂಡು ಅದಕ್ಕೆ ನ್ಯಾಯವಾಗಿ ದೊರೆಯ ಬೇಕಾದ ಅನುಕೂಲತೆ ನೀಡುವುದಾದರೆ ಪ್ರಾವಿಸೋದಿಂದ ತೊಂದರೆಯಿಲ್ಲ, ಹಿಂದಿನ ಸರ್ವಿಸ್ಸಿಗೆ ಕಾನೂನು ಪ್ರಕಾರ ಪ್ರಾಶಸ್ತ್ಯ ಕೊಡಬೇಕು. 3ನೆಯ ಸೆಕ್ಷನ್ 5ನೆಯ ವಿಧಿಯಲ್ಲಿ ಹೇಳಿರುವಂತೆ ಸೌಲಭ್ಯವನ್ನು 8ನೆಯ ಸೆಕ್ಷನ್ ಪ್ರಕಾರ ಕೊಡುವುದಿಲ್ಲವೆಂದು ತೀರ್ಮಾನ ಮಾಡಿದರೆ ಕೆಲಸಗಾರರಿಗೆ ತಾಪತ್ರಯ ಬರುತ್ತದೆ. ಆ ರೀತಿಯಾಗದಂತೆ ನೋಡಿಕೊಳ್ಳಬೇಕು. ಏಕೆಂದರೆ ಕಾನೂನು ಆಧಾರದ ಮೇಲೆ ಯಾವ ರೀತಿ ಬೇಕಾದರೂ ವಾದ ಮಾಡಬಹುದು. ಸರಿಯಾದ ಇಂಟರ್‌ಪ್ರಿಟೇಷನ್ ಕೊಡದಿದ್ದರೆ ಅನಾನುಕೂಲವಾಗುತ್ತದೆ. ಹಾಗಾಗಲು ಅವಕಾಶ ಕೊಡಬಾರದು.

9ನೆಯ ಸೆಕ್ಷನ್ ಇರುವುದು ಬಹಳ ಸೂಕ್ತವಾಗಿದೆ. ಈಗ ಒಂದು ಆರೋಪ ಬಂದಿದೆ, ಆ ರೀತಿಯಾಗಿ ನಡೆದಿದೆಯೆಂದು ಹೇಳುವುದಿಲ್ಲ, ಹಾಗಾಗುವುದಕ್ಕೆ ಅವಕಾಶವಿದೆ. ಹಳೆಯ ಛಾಸಿಸ್ ಹೊಸ ಛಾಸಿಸ್ ಎಂದು ತೋರಿಸುವುದಕ್ಕೆ ಸಾಧ್ಯವಿದೆ. ರೇಡಿಯೇಟರ್ ಹೊಸದನ್ನು ತೆಗೆದು ಹಳೆಯ ದನ್ನು ಹಾಕಿ ಹೊಸದಿರುವ ಹಾಗೆ ಮಾಡಬಹುದು, ಸ್ಪೀಡೋಮೀಟರುಗಳನ್ನು ಬಸ್ಸಿನಿಂದಲೇ ತೆಗೆಯಬಹುದು ಮತ್ತು ಇತರ ಭಾಗಗಳನ್ನು ತೆಗೆದು ಹೊಸ ಬಸ್ಸಿರುವಂತೆ ಕಾಣುವ ಹಾಗೆ ಮಾಡಬಹುದು. ಹಾಗೆ ಮಾಡಿದರೆ 9ನೆಯ ಸೆಕ್ಷನ್ ಪ್ರಕಾರ ಕ್ರಮ ಕೈಗೊಳ್ಳಲು ಅವಕಾಶವಿರುವುದು ಬಹಳ ಸೂಕ್ತವಾಗಿದೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

*Sri H. SIDDAVEERAPPA.—Sir, I have heard with great attention to the speeches of the Hon'ble Members. I sincerely thank one and all belonging to both sides of the House who have given their unqualified support so far as the Bill is concerned. I note it is a very important measure which in the normal course of business of this House would have taken much more time than what has really been taken. I have also followed with great interest several remarks made by the Hon'ble Members. I shall be failing in my duty if I do not answer the best of my abilities the various points raised especially in view of the fact that the Bill is not proposed to be referred to a Select Committee. I shall refer to the salient points that have been raised by several members.

The Hon'ble the Leader of the Opposition Sri Mohamed Imam, said that there should be no room for favouritism with regard to the management. I shall tell him that even with regard to recruitment of the personnel, as soon as it becomes a public concern, we have to follow certain principles, although the Public Service Commission as such makes appointments. We cannot create any monopoly. We can create only one monopoly, namely, those that are efficient and who have got requisite qualification will find employment. Keeping that as the prime factor there is nothing wrong in giving an opportunity to a man to work in the public concern. But recruitment as such is exclusively within the discretion of Unit Officers who, so far as I am aware, have not given room for any complaint that any discrimination has been made. I, therefore, shall bear in mind the principle that was brought to the notice of the Government and see that no room is given for any kind of complaint.

The other point raised by Sri Imam was with regard to setting up of a Corporation. In that connection Sri K. Pattabhiraman stated that it will affect income-tax and various other things. I have very carefully examined

the position regarding the formation of this Corporation. Taking an overall picture, the formation of a Corporation would be more advantageous. As to how it will have to be set up and various other things, are matters that can be followed by the precedents we have got elsewhere. For a successful working of an organisation like this where increased responsibility will accrue from 1st November, 1956 it is better there is an autonomous body based more or less on the one we have at Bhadravati, *viz.*, Mysore Iron and Steel Works. Here, without going through the various procedures, as have been laid down in various other cases, things are done expeditiously and swiftly, having in view the overall interest of the concern. We have examined with carefully. There is also one other reason every point which we have to agree. If a thing is good for the entire India, I do not see any reason why it is bad for us. There is no harm in forming a Corporation. Here there is a unique advantage, in that the capital formation will be easy. Regarding the management, we can have our own control provided certain conditions are fulfilled. Therefore I am indeed thankful to the House for having agreed to the formation of a Corporation. In fact there is already a Corporation in Bombay for transport and we have written to the Government of Bombay and also the Government of India that we want to follow the set up of that Corporation and if possible—I do not know how it is possible because we are racing against time—we want to take the Bombay Transport System as a running concern by forming a Corporation in Mysore within the end of October. If this is not possible we have to see that it is done as early as possible.

Regarding compensation which has received both approbation and reprobation in a way, I stand in a very difficult position. Nevertheless, I cannot shirk from my responsibility. There is no use of standing on izzath or stating dogmatically our limitations, if certain facts are brought to my notice from any quarter. If I can take the House into my confidence, I may state that I have examined the question thoroughly.

Sri Mulka Govinda Reddy stated that I have not disclosed the assets and liabilities of the Company. But I can tell him that I have no objection to take into confidence any member. I have got records to show that every item of assets and liability has been examined not by my officers only, but by an officer specially deputed by the Government of India. I may assure him that, if at all I have not shown him the assets, I have only taken them in a very, very conservative manner. So far as this is concerned, when I examined the question of compensation, I had in my mind the preliminary balance-sheet as disclosed by the Company when this question was taken up. The preliminary balance-sheet disclosed that a provision for income-tax had also been made. I also find from the various other statements that were given to me, that provision was made for income-tax for the year 1954-55. I also knew that they had made certain loans by way of advance for payment of income-tax for the year 1954-55. I had that in view and I thought that the Company would be bound to pay the income-tax for the year 1955-56 and up to the date of the vesting. After the question was raised by Hon'ble Sri T. Mariappa and also after looking into the amendment that was given notice of by the Hon'ble Member Sri D. Devaraj Urs, I examined the question with an open mind. I found that, so far as this is concerned, as the rule now stands, the Company will have to pay from the total amount of compensation that has now been proposed to be paid under clause 4. No one can profess what the amount would be, but we can guess, from the previous figures, that it may be anywhere in the order of not less than Rs. 2 lakhs. It may be—I again repeat this subject to correction—as things now stand, out of the compensation that will have to be paid to them, the Company will have to be called upon to pay the income-tax that becomes payable from April 1955 onwards up to the date of the vesting. I have very carefully examined this. Although

(SRI H. SIDDAVEERAPPA.)

there was a suggestion made and effectively brought to my notice that that portion of it, namely, proviso to clause 3, sub-clause 2 (c), the liabilities of the Company in respect of taxation have to be deleted. Taking an overall picture, it may not be right to delete that clause at all. I have already made one thing very clear and that is, whatever we decide here should not smack of what is called expropriation. During the course of the debate, some friends suggested, 'You pay the face value and be done with it'. There may be some force in it. It all depends upon the angle of vision or the ideology from which we look at it. We should not forget that as long as there is an industrial policy followed by the Government of India, as long as there is a policy that has been followed by the Planning Commission, namely, that private sector should not be killed, As the Hon'ble Sri Gopala Gowda put it—don't kill the goose that lays the golden eggs ; after all the eggs so laid are consumed by us and not the goose private capital should exist. If you agree that private capital should exist, it will have to be allowed to play its own part. But so long the private capital exists we should not do any harm to it. The policy we follow here will be watched with great interest in every investing market. We take the lion's share and give something to them. I have examined and found that in case they are made to pay the income-tax out of the proposed compensation, it may work as a very great hardship. Therefore I have been myself thinking as to what to do. I have examined it in great detail. If the House approves I want to make a suitable modification by way of an amendment at the proper time. But it is enough to say that when this question was brought to my notice it was very difficult for me to brush aside or ignore the points raised, namely, that once I take it as a running concern there is no plausible argument to ask those people to part with the compensation amount and pay income-tax. Therefore at the appropriate time I propose to make a suitable amendment. But I will not agree for deleting the clause for the simple reason that I do not want to get into their hands and make them escape from all liabilities. That is so far as the question of compensation is concerned.

Then, Sir, a question was raised as to whom I should pay this money. I want to make it clear that the Bangalore Transport Company cannot run away. The Bangalore Transport Company will have to remain in existence until and unless they discharge all the liabilities that are thrown on them. According to the provisions of this Bill they will have to tender accounts, they will have to do certain things. If a company has to die, its death must only be according to the provisions of the Companies Act.

5-30 P.M

There are certain provisions for it. If they want to do it, they cannot run away with the money and say, " we do not discharge our liabilities ". They have to answer the various points that may arise I hope they will not arise. The Company has to exist. Any money that is to be paid under the provisions of this Act will be only to the Company and not to the shareholders.

SRI T. MARIAPPA.—In clause 4, some Hon'ble Members raised some doubts. If you add one words 'to the Company', it will be clear. All other clauses are self-explanatory. But here, it is necessary to add these words.

SRI H. SIDDAVEERAPPA.—If Hon'ble Members want clarification on that point, I have no objection to accept the verbal amendment if an amendment is moved. If any Hon'ble Member gives an amendment to that effect, I am prepared to concede that.

Then, my friend from Chitaldrug said that clause 6 is a very important clause. I agree with him. He further added that there may be certain shady transactions. I think the Hon'ble Member, Sri Pattabhiraman, also alluded to that point and said that on account of some doubt lingering somewhere in the mind of the Government, clause 9 relating to dissipation of assets has been put in. But I would like to disabuse their mind on that point. There are analogous provisions in

various other Acts where Bills relating to nationalisation have been passed and where provision has been made to the effect that if there is any wilful dissipation of assets or wasting of assets, that cannot be allowed. As Sri D. Venkatesh said, it is quite possible, human nature being what it is, to make a transaction which may go against our interests. There is a provision of law; we cannot pass an ordinance and immediately take it because it must receive the assent of the President. It is very important that we should have sufficient powers in our hands to safeguard our interests if anything happens and it is from that point of view also that we retained 10 per cent with us for purposes of meeting any contingent liability, if any, on the part of the Company from whom we take away the assets. If I may bring to your notice, there is an analogous provision in the Central Acts—in the Air Corporation Act of 1953, for instance, you can find almost the same words, more or less. You can find provision made to the effect in Section 24 of that Act about transfers resulting in dissipation of assets. There also they have given a date very much approximate to the date on which they took the decision. Here, the Government took the decision on 12th March 1956 to nationalise. Therefore, we have put the date very approximately as 1st March 1956. Until then, you must presume every transaction as *bona fide*. If any thing has happened, we must be armed with sufficient powers to set right and see that both ends meet. It is with that object that this dissipation clause has been put in. I have had no information of it. If I had already any information, I would have made a provision while making calculation for compensation. I would be the last person to allow any such thing go unchecked.

Then I should refer to what my friends said which surprised me. They said, nationalise the whole transport system in the State. I am sure they have read the report of the Planning Commission where they say that transport is included under private sector. According to them, unless it be that Government want certain routes for themselves for some specified purposes, transport must be with the private sector. But they do not taboo the public sector for the transport system. But if it is absolutely essential and if it serves the better interests of the country better, we can by all means take that course. In fact, it must be remembered that next to Madras. Operators of private routes in Mysore pay the highest tax so far as vehicles are concerned. Already they are giving us a crore of rupees roughly. Therefore unless there is a compelling necessity, as it is, it may not be right for us to say straightaway, we do it. I agree, it must be by stages.

Sri J. MOHAMED IMAM.—Have not the Bombay and Hyderabad portions that are coming into Mysore their own monopoly system?

Sri H. SIDDAVEERAPPA.—They have gone so far as having goods transport also in some areas. But certainly that is not the policy that has been advocated by the Planning Commission. I for one believe in nationalisation by stages. First consolidate and then proceed. That is the policy that has been laid down in 1948 which we have been following. It is much better to take such routes—not from the standpoint of revenue to the Government, but where the paramount need is to give better facilities to the travelling public. That has been amply testified to because even my friends who sit on the opposite side have stated before me that they feel they are travelling in first class railway coach when they are in Government buses.

Sri Mulka GOVINDA REDDY.—We have also stated in private conversation that Government buses are overloaded.

Sri H. SIDDAVEERAPPA.—I do admit, sometimes overloading is there. We have been giving penalty wherever over-loading takes place. I give you one instance. I got a report that in Shimoga 20 persons squatted before the Government bus that was scheduled to leave for Bangalore because they could not be admitted into the bus for want of accommodation. They

(SRI H. SIDDAVEERAPPA.)

began to say, I am told : "We are goingto enter the bus ; lete us see, who will make us get down here." It was physically impossible to take them into the bus. They sat in front of the bus and it was delayed by half-an-hour. Until the police arrived on the scene, the bus could not be started. Therefore, my friend should realise that over-loading is resorted to very sparingly and only when there is compelling necessity.

Sri S. GOPALA GOWDA.—You must put more buses on such routes.

Sri H. SIDDAVEERAPPA.—If you feel the need, we can increase the number of buses. I think the position will ease in a few days, time. We are having 32 vehicles and some more buses are going to be put to Shimoga because it is going to serve the public better.

Sir, it was suggested that there was some system of modernisation. I entirely agree. We are not *baniyas* to take over concerns for Government merely for the sake of finance. From my point of view, conveniences to the public are of paramount importance. Getting a little more money should not be the only consideration. To give better, cheaper and more efficient service to the public should be the motto and I may assure the Hon'ble House that what has been said here will not stand only in words, but will be translated into action.

Sri Srinivasa Iyengar referred to one point regarding labour. I am glad that my friend Sri Gopala Gowda also raised it. I would like to make one point very clear so far as the policy towards labour is concerned. I want the co-operation of labour. I have been saying that labour, particularly in the Government Road Transport Department, has done well. What has cheered me is that people come and tell me that drivers and conductors are generally well-behaved. There may be one or two black sheep here and there. But generally they are well-behaved and they treat people courteously. That is really a very good piece of news. So far as labour is concerned, Government have gone so far as to accept in principle that there should be participation of labour in management. We pointed out to various Government industrial concerns that representatives of labour should be associated with the management. I am strangely surprised that they feel diffident about it. I have said, all right, go on; have it. There is no such thing as master and servant. Everything has to be done today on the basis of co-operation. But at the moment nothing has come out of that. I am aware that there is a Committee and we have to await with eagerness the report of that Committee. I would like to assure the personnel of the B. T. C. that Government will see that nothing will be done which will cause detriment to their interests. My friend Sri Venkatesh spoke to me about the relevancy of sub-clause (2) of clause 8. I am aware that clause, with respect to which I have a reference in my mind—the Central Act IV of 1947, is about the termination of the services. Suppose the B. T. C. is in existence ; if the Company terminate the services of labour, the labour have a right to seek remedy. Under this clause, there is a solution. Let me also say that I do not propose to terminate the services of anybody. As it is, from the date of vesting, I have agreed under sub-clause (1) to take every one working there subject to certain conditions. Supposing I find certain things are not as good as they ought to be ; supposing I find that a man is drawing salary or wages which he really does not deserve ; I have reserved the right for the Government to examine each case. If they so like, they may terminate his services subject to the condition of giving three months' notice or salary. But that will not be done arbitrarily. I am sure the Government will examine each case on its own merits. I hope such cases will be few and far between or none at all. Anyway that right to reserve ought to be there.

But, when once I take all these people from the vesting day, how can anybody expect the Company to bear the responsibility that accrues to them under the Central Act 4 of 1947 ?

Sri D. VENKATESH.—Do you continue the past service?

Sri H. SIDDAVEERAPPA.—That has to be examined when framing the rules. But, I may assure that it is not my intention to harm anybody. Labour must feel more secure, more contented and more happy after the concern is taken over by the Government.

Then, Sir, Sri P. R. Ramaiya said a first class survey has to be made. I entirely agree with him. It is no good having any hapazard method. We have to survey all the needs of the various areas in the City and try to provide efficient service in keeping punctual timings and see that the buses run well in time. Even in a city like Delhi only in the year 1954 a survey was made. Now, as our needs increase, we have to make a survey and I would request all to bear with me when I say that from the vesting date let them not expect quick results almost within a fortnight. I assure that efficient officers will be placed at the helm of affairs and see that as soon as conditions improve, the change will be for the better I have to pass orders for getting new vehicles, invest some more money and then see that the service conditions improved.

Regarding the students, I know there was a deputation once representing that students have been denied of certain help. That would certainly be looked into.

I think, Sir, I have referred to most of the points raised by Hon'ble Members. We are all here right from this morning 8 o'clock and I think I have not left any point unanswered. I only wish to assure Hon'ble Members that the matter regarding compensation, has been examined by me. There are as many as 779 share holders in this company. Most of them come under the category which will come under 1 to 50 shares. Therefore, any amount that goes by way of a little more will not go to the bag of the capitalists only. I am certainly not going to fatten a man who is already fat. But, in this case I have taken this equitable consideration, namely, there may be very small investors or some widows or pensioners getting 20 or 50 rupees. Therefore, let not my friends think that I have yielded or said anything against a principle that goes against the interests of the State. I thank you, Sir.

Mr. SPEAKER.—The question is:

> "That the Bangalore Road Transport Service Bill, 1956 be taken into consideration."

The motion was adopted.

Mr. SPEAKER.—Now, clauses of the Bill. There is an amendment to clause 3 by Sri Devaraj Urs.

Sri D. DEVARAJ URS (Hunsur).—I do not propose to move the amendment.

Mr. SPEAKER.—The question is:

> "That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—There are two amendments to clause 4.

Sri H. SIDDAVEERAPPA.—Sir, I beg to move the following amendment Clause 4:

> 'That in sub-clause (1) of clause 4 for the words "rupees fourteen lakhs and eighteen thousand" the words "fifteen lakhs and fifty thousand" be substituted.'

The object of moving this amendment, as I have already said, is to make some compensation for the responsibility that will have to be borne by the Company, *i.e.*, the amount that will have to be paid under the provisions of this Act by the Company. I have been convinced that this amendment is reasonable. I therefore pray that the House may be pleased to accept it.

Sri S. GOPALA GOWDA.—How was the Minister able to convince himself about the actual figure of income-tax to be paid?

Sri H. SIDDAVEERAPPA.—I can only tell the Hon'ble Member that unless there is an assessment, what I say may be one of expectation or anticipation. Just as meteorologists anticipate whether there would be rain today or not, from the precedent we can anticipate. Various things

(SRI H. SIDDAVEERAPPA.)

were taken into consideration and I am convinced that what I propose to pay by this extra amount is necessary and the House may be pleased to accept it.

Sri Mulka GOVINDA REDDY.—I want some clarification from the Hon'ble Minister. I would like to know the amount of income-tax that was paid for the year 1953-54, 1954-55, the last date of payment and for what period and what has to be paid now and for what period ?

Sri H. SIDDAVEERAPPA.—What has to be paid is after the assessment from 1st April 1955. The balance-sheet discloses that up to the end of March 1955 income-tax has been paid in full. If there are figures still not brought to my notice, we have got various other reservations as could be seen from the clauses. But, now I am convinced, until something else is brought to my notice, income-tax has been paid up to end of March 1955. It will have to be paid from 1st April 1955 up to the date of vesting. If the date of vesting is 1st October 1956, that will have to be paid from that date. The income-tax varies for different periods. Supposing, in the first year a new vehicle is taken; depreciation is allowed up to a certain percentage. If 25,000 rupees is paid to a vehicle and if Rs. 12,500 is taken as the depreciation amount, to that extent that would be deducted out of the gross earning. In that year income-tax payable is less. We know in the Government Transport a vehicle is fully depreciated within a period of four years; we allow 25 per cent every year and take it to the depreciation fund. Even after four years if the vehicle is really serviceable and if the vehicle earns money, there would be no deduction and in that year income-tax payable is more. In fact, Hon'ble Members are well aware that private owners run a vehicle for nearly two decades. I understand from the figures that it varies somewhere between 1½ lakhs to 2 lakhs. The Hon'ble Member asked, how much income-tax was paid by the Company previously. I may give him the Balance Sheet as on 31st March 1956. According to the fignres of the previous year, they have paid one lakh eighty thousand. But, during that year they have made provision for two lakhs sixty thousand in their balance Sheet. Therefore, it is a variable figure. But, with the earning of this Company income-tax may be taken safely to an average between 1½ to 2 lakhs per year.

Mr. SPEAKER.—Amendment moved;

> That in sub-clause (1) of Clause 4 for the words "rupees fourteen lakhs and eighteen thousand" the words "fifteen lakhs and fifty thousand" be substituted.

Sri Mulka GOVINDA REDDY.—I have to oppose this amendment, Sir. While making my observations on the Bill at the consideration stage, I had emphatically stated that the compensation proposed to be paid was much too high and that the Government should see their way to reduce the quantum of compensation to be paid to this Company. We have already passed clause 3 wherein it is said that the tax advances made by the Company shall not vest in the Government but will be the property of the Company.

Sri H. SIDDAVEERAPPA.—There are no advances; in fact, they have to pay.

Sri Mulka GOVINDA REDDY.—Generally, is it not a fact that concerns or persons who are levied income-tax are made to pay advance income-tax ?

Sri H. SIDDAVEERAPPA.—Unless there is a notice, nobody comes and pays any advance tax. There is a provision in the Indian Income-tax Act I believe it is Section 18–for payment of advance. But, in this case there is no advance pending. That is why we have made provision for both advances if any and Hon'ble Member can see that the clause relating to liability of the Company in respect of taxation as we have just passed, is retained. It devolvse on them; they will have to pay.

Sri Mulka GOVINDA REDDY.—Further, Sir, in the Statement of Objects and Reasons it is stated :

> "Provision has also been made to pay adequate compensation for

the acquisition of the assets and documents of the company on a basis arrived at after consultations and discussions with the representatives of the Bangalore Transport Company "

It is stated that they had consultations and discussion with the representatives of the company. I would like to know, why this matter did not come up there and after going through these consultations and discussions what has happened in between the date of consultation and now to make this change.

Sri H. SIDDAVEERAPPA.—I did not disclose the provisions of this clause when they had consultations with me. If at all they have become aware of the clause, it was after I published it in the Gazette. Probably it must have made them feel a little nervous when they found that what I pay by way of compensation will not go to their pocket. They were not aware of his clause.

Sri Mulka GOVINDA REDDY.—It is not necessary to disclose this particular clause. I want to know how the Government fixed this amount.

Sri H. SIDDAVEERAPPA.—In the normal course when a concern is taken by way of nationalisation the compensation is fixed on the value of the shares held, and also taking into account the assets and liabilities.

Sri Mulka GOVINDA REDDY.—But here you have not taken the assets and liabilities. The compensation is more and therefore I oppose this.

Mr. SPEAKER.—The question is.

'That in sub-clause (1) of Clause 4 for the words "fourteen lakhs and eighteen thousand" the words "fifteen lakhs and fifty thousand" be substituted.'

The motion was adopted.

Mr. SPEAKER.—Another amendment tabled by Sri T. Mariappa.

Sri T. MARIAPPA.—I beg to move That the words "to the Company" be added after the word "payable' in clause 4."

Mr. SPEAKER.—Amendment moved.

'That the words "to the Company" be added after the word "payable" in clause 4.'

Sri Mulka GOVINDA REDDY.—I beg to oppose the amendment moved by Sir T. Mariappa.

Sri H. SIDDAVEERAPPA.—Although the words "to the Company" are superfluous, there is no harm in accepting them. Therefore I accept the amendment.

Mr. SPEAKER.—Since the amendment is opposed, I put it to vote. The question is:

'That the words "to the Company" be added after the word "payable" in clause (4).'

The motion was adopted.

Mr. SPEAKER.—Clause 4. The question is:

"That Clause 4 as amended stand Part of the Bill."

The motion was adopted

Clause 4 as amended was added to the Bill.

Mr. SPEAKER.—Clauses 5 to 15. The question is:

"That Clauses 5 to 15 stand part of the Bill."

The motion was adopted

Clauses 5 to 15 were added to the Bill.

Mr. SPEAKER.—Clause 1, Title and Preamble. The question is.

"That Clause 1, the Title and the Preamble stand part of the Bill."

The motion was adopted

Clause 1, the Title and the Preamble were added to the Bill.

Motion to pass.

Sri. H. SIDDAVEERAPPA.—Sir, I move :

"That the Bangalore Road Transport Service Bill, 1956, as amended be passed."

Mr. SPEAKER.—The question is :

"That the Bangalore Road Transport Service Bill, 1956, as amended, be passed."

The motion was adopted.

Mr. SPEAKER.—Before adjourning the House I want to announce that there is a little change in the Programme of Business for Monday. We will take up on that day Non-official Business.

Now the House will adjourn and meet at 12 o'clock on Monday the 24th September.

The House adjourned at Five minutes past six of the clock to meet again at Twelve of the Clock on Monday the 24th September 1956.

WD 1035—GPB—550—23-11-56

MYSORE LEGISLATIVE ASSEMBLY.

THIRTY-SIXTH DAY.

Monday, 24th September 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Nayisandrahally Colony, Chintamani Taluk (Construction of well).

Q.—512. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether they have issued orders for digging a well for agricultural purposes in the Nayisandrahally Colony, Chintamani Taluk ;

(*b*) since how many days the matter relating to it is under correspondence ;

(*c*) the reason for not yet commencing the well work ?

A.—Sri H. M. CHANNABASAPPA (Minister for Revenue and Agriculture).—

(*a*) The proposal to provide a well is approved.

(*b*) Since March 1954.

(*c*) The estimate is under scrutiny.

ಶ್ರೀ ಜೆ. ನಾರಾಯಣಪ್ಪ.—ಅರ್ಜಿಗಳನ್ನು ಕೊಟ್ಟು 2 ವರ್ಷಗಳಿಗೂ ಮೇಲಾಯಿತು. ಇಷ್ಟೊಂದು ಸಾವಕಾಶವಾಗಲು ಕಾರಣವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊಟ್ಟಮೊದಲನೆಯದಾಗಿ, ಅಲ್ಲಿ ಒಂದು ಬಾವಿಯನ್ನು ತೆಗೆಸತಕ್ಕ ಸಂದರ್ಭದಲ್ಲಿ 22 ಸಾವಿರ ರೂ. ಗಳಿಗೆ ಒಂದು ಅಂದಾಜನ್ನು ತಯಾರಿಸಲಾಗಿತ್ತು. ಆದರೆ ಆ ಅಂದಾಜನ್ನು ಬಹಳ ಜಾಸ್ತಿಯಾಯಿತೆಂದು ಪುನರ್ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಿಕೊಡಲಾಗಿದೆ. ಆ ಸ್ಟೇಜಿನಲ್ಲಿದೆ ಈಗ ಈ ವಿಚಾರ.

ಶ್ರೀ ಜೆ. ನಾರಾಯಣಪ್ಪ.—2 ಸಾರ್ತಿ ವಿಮರ್ಶೆಯಾಗಿ 2 ವರ್ಷಗಳ ಮೇಲ್ಪಟ್ಟು ಕಾಲ ವಿಳಂಬವಾಗಿರುವುದರಿಂದ ಅಲ್ಲಿರತಕ್ಕ ಹರಿಜನರಿಗೆ ಬಹಳ ತೊಂದರೆಯಾಗಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಈಗ ಒಂದು ಬಾವಿಯನ್ನು ತೆಗೆದರೆ ಅದರಿಂದ ಕೇವಲ ಹತ್ತು ಎಕರೆ ಜಮೀನನ್ನು ಸಾಗುವಳಿ ಮಾಡಲು ಅನುಕೂಲವಾಗುತ್ತದೆ. ಆದರೆ ಅಲ್ಲಿ ಹೆಚ್ಚು ಜನರ ಸಂಸಾರಗಳಿರುವುದರಿಂದ ಇದರಿಂದೇನೂ ಅಷ್ಟು ಅನುಕೂಲವಾಗಲಾರದೆಂದೂ ಅದಕ್ಕಾಗಿ ಅವರೆಲ್ಲರಿಗೂ ವಿಶೇಷ ರೀತಿಯ ಸಬ್‌ಸಿಡಿ ಮೊಬಲಗನ್ನು ಕೊಟ್ಟರೆ ಏಕೆ ಅನುಕೂಲವಾಗುವುದಿಲ್ಲ ಎಂಬ ಅಂಶವನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಜೆ. ನಾರಾಯಣಪ್ಪ.—ಹಾಗೆ ಸಬ್‌ಸಿಡಿ ಕೊಟ್ಟರೆ ಅದರಿಂದೇನೂ ಅನುಕೂಲವಾಗುವುದಿಲ್ಲ. ಅದಕ್ಕಾಗಿ ಆ ಹಣವನ್ನು ಅವರಿಗೆ ಮುಫತ್ತಾಗಿ ಕೊಡಬೇಕೆಂದು ಹಿಂದೆಯೇ ಒಂದು ಆರ್ಡರ್ ಆಗಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ. ಆದರೆ ಅಲ್ಲಿ ಒಂದು ಬಾವಿಯನ್ನು ತೆಗೆಸುವುದಕ್ಕೆ ಮಾತ್ರ ಸರ್ಕಾರ ಒಪ್ಪಿಕೊಂಡಿದೆ. ಆದರೆ ಅದರ ಬಗ್ಗೆ ತಯಾರಿಸಿದ್ದ 22 ಸಾವಿರ ರೂ. ಗಳ ಅಂದಾಜು ಜಾಸ್ತಿಯಾಯಿತೆಂದು ಅದನ್ನೀಗ ಪುನರ್ವಿಮರ್ಶೆಗಾಗಿ ಕಳುಹಿಸಿಕೊಡಲಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಬೇಗ ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದಷ್ಟು ಜಾಗ್ರತೆ ಮಂಜೂರು ಮಾಡುತ್ತೇವೆ.

Talagavara Amanikere and Palajogikere Tank beds (Persons granted land for temporary cultivation).

Q.—553. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) the names of persons to whom tank-beds of Talagavara Amanikere and Palajogikere have been granted for temporary cultivation in Dodballapur Taluk ;

*Asterisk indicates that the remarks or speeches have not been revised by the Member concerned.

(SRI R. MUNISWAMIAH)

(b) the names of those persons, the dates of such grant and the number of years for which these have been given for temporary cultivation ;

(c) the action taken to evict them as soon as the stipulated period is over;

(d) whether they have noticed that these cultivators have encroached more extent of land than the actual extent given to them ?

A.—Sri H. M. CHANNABASAPPA (Minister for Revenue and Agriculture).—

(a) Sri T. Muniyappa, Katchentpalya of Dodballapur Town.

(b) Sri T. Muniyappa, on 4th September 1954 for five years.

(c) The stipulated period of 5 years is not yet over.

(d) No.

ಶ್ರೀ ಆರ್. ಮುನಿಸ್ವಾಮಯ್ಯ.—ಈ ತಳಗುವಾಡಿ ಕೆರೆ ಅಂಗಳದಲ್ಲಿರತಕ್ಕ ಭೂಮಿಯನ್ನು ಸಾಗುವಳಿಗೆ ಕೊಡಬಾರದೆಂದು ಪಿ. ಡಬ್ಲ್ಯು. ಇಲಾಖೆಯ ಅಧಿಕಾರಿಗಳ್ ಸರ್ಕಾರಕ್ಕೆ ಒಪ್ಪಿಸಿರುವ ವರದಿಯಲ್ಲಿ ನಮೂದು ಮಾಡಿಲ್ಲವೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯೇನೂ ಬರೆದಿಲ್ಲ. ಆ ಸಂಬಂಧಪಟ್ಟ ಅಧಿಕಾರಿಗಳೆಲ್ಲರ ಅಭಿಪ್ರಾಯವನ್ನೂ ಪಡೆದುಕೊಂಡೇ ಇದನ್ನು ಮಾಡಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ತಾವಿಲ್ಲಿ ಸೂಚಿಸಿರತಕ್ಕ ಹೆಸರಿನ ಜನಗಳಿಗೆ ಆ ಇಲಾಖೆಯ ಅಧಿಕಾರಿಗಳು ಹೀಗೆ ಕೊಡಬಾರದೆಂದು ಸರ್ಕಾರಕ್ಕೆ ಕಳೆದ ಎರಡು ವರ್ಷಗಳಿಂದಲೂ ಶಿಫಾರ್ಸುಮಾಡುತ್ತಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರೀತಿ ಕೂಡದೆಂದು ಯಾವಾಗ್ಲೂ ಯಾವ ಅಧಿಕಾರಿಯೂ ಶಿಫಾರ್ಸು ಮಾಡಿರುವುದಿಲ್ಲ. ಮೇಲಾಗಿ ಈ ಜಮೀನುಗಳನ್ನೆಲ್ಲಾ ಇವರಿಗೆ ಈಗ ಕೇವಲ ಹಂಗಾಮಿಯಾಗಿ ಕೊಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಆರೀತಿ ಕೆರೆಯ ಮುಂಭಾಗದ ಜಮೀನನ್ನು ಸಾಗುವಳಿಗೆ ಕೊಟ್ಟರೆ ಕೆರೆಯನೀರಿಗೆ ತೊಂದರೆಯಾಗುತ್ತದೆ ಎಂದು ಜನರು ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಹಾಗೆ ಈಗ ವ್ಯವಸಾಯಕ್ಕೆ ಕೊಡಲಾಗಿರತಕ್ಕ ಭೂಮಿಗಳು ಕೆರೆಯ ವೇಸ್ಟ್ವೀರ್ ಲೆವಲ್ಲಿಗೆ ಮೂರು ಅಡಿ ಎತ್ತರದಲ್ಲಿರುತ್ತವೆ. ಆದಕಾರಣ ಅವುಗಳಿಂದ ಅಂಥ ತೊಂದರೆಯೇನೂ ಆಗುವುದಿಲ್ಲ.

ಶ್ರೀ ಆರ್ ಮುನಿಸ್ವಾಮಯ್ಯ.—ಅದರಿಂದ ಕೆರೆಯ ನೀರಿಗೆ ತೊಂದರೆಯಾಗುತ್ತದೆಂದು ಪಿ. ಡಬ್ಲ್ಯು. ಇಲಾಖಾಧಿಕಾರಿಗಳು ಸರ್ಕಾರಕ್ಕೆ ರಿಪೋರ್ಟು ಕಳುಹಿಸಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಪ್ರಶ್ನೆಗಳಿಗಾಗಲೇ ಉತ್ತರ ಕೊಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗೆ ಅವರು ಅಭಿಪ್ರಾಯ ಕೊಟ್ಟಿರುವುದು ನಿಜವೇ ಅಲ್ಲವೇ ಎಂಬುದನ್ನು ಪುನಃ ಪರೀಕ್ಷೆಮಾಡಿಸಿ ನೋಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅನಾವಶ್ಯಕವೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಆರೀತಿ ಕೆರೆಯ ಮುಂಭಾಗದ ಜಮೀನುಗಳನ್ನು ಸಾಗುವಳಿಗೆ ಕೊಡಬಾರದೆಂದು ಸರ್ಕಾರದ ಹುಕುಂ ಆಗಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆವಶ್ಯಕತೆ ಕಂಡು ಬಂದರೆ ಸಾಗುವಳಿಗೆ ಕೊಡತಕ್ಕ ಬಗ್ಗೆ ಕಾನೂನಿದೆ.

ಶ್ರೀ ಎಸ್. ಸಿದ್ದಪ್ಪ.—ಆ ರೀತಿ ಸರ್ಕಾರಿ ಹುಕುಂ ತಿದ್ದುಪಡಿ ಮಾಡಿದ ನಕಲನ್ನು ಈ ಸಭೆಯ ಮುಂದಿಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಜಮೀನನ್ನು ವ್ಯವಸಾಯಕ್ಕೆ ಕೊಟ್ಟರೆ ಯಾವ ಯಾವ ಕೆರೆಗಳಿಗೆ ತೊಂದರೆಯಾಗುತ್ತದೆ, ಯಾವ ಕೆರೆಗಳಿಗೆ ಅನಾನುಕೂಲವಾಗುವುದಿಲ್ಲ ಎಂಬ ಅಂಶಗಳನ್ನೆಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಂದ ಸಲಹೆ ಪಡೆದು ಅನಂತರವೇ ಭೂಮಿಯನ್ನು ಸಾಗುವಳಿಗೆ ಕೊಡಲಾಗುತ್ತದೆ.

Special Officers and Special Revenue Inspectors for Depressed Classes.

(Powers to dispose of Darkhast Lands)

Q.—633. Sri G. PUTTASWAMY (Chikmagalur—Mudigere — Scheduled Castes).—

Will the Government be pleased to state :—

(a) the duties of the Special Officers for Depressed Classes and the Special Revenue Inspectors for Depressed Classes;

(b) whether it has come to their notice that no darkhast records are being entrusted to some of the Special Revenue Inspectors for Depressed Classes in the State, which has resulted in great inconvenience to the Depressed Classes;

(c) whether they will implement the Government Order passed in this behalf ?

A.—Sri H. M. CHANNABASAPPA (Minister for Revenue and Agriculture).—

(a) *Vide* Statement appended.

(b) and (c) Experience has shown that it is not advantageous to have two parallel agencies for handling darkhast records as the land and not the applicant is the unit.

Powers and Duties of the Special Officers for Depressed Classes.

1. The Special Officers for the Depressed Classes shall work under the direct control of the District Development Officers but shall be subject to the supervision of their work by the Regional Officer of the Region concerned.

2. In addition to the other duties that have been assigned to him already it shall be his special duty to collect statistics relating to the dwelling conditions, drinking water facilities, prospects of and facilities required for cottage or home industries and other items of work connected with the Depressed Class uplift.

3. He shall endeavour to organise Co-operative Societies with the help of the co-operative department and try to improve the economic condition of the people by means of co-operative farming and collective aid to home industries.

4. He shall arrange for group meetings in order to impart to the people educative information through propaganda and otherwise.

5. He shall scrutinise the work of the Special Revenue Inspectors closely and effectively.

Duties of the Special Revenue Inspectors.

1. In addition to his work as Assistant Secretary to the Rural Development Committee of the Taluk he shall, whenever necessary build up darkhast records relating to Depressed Class people and submit them to the Amildar.

2. Subject to Statutory provisions to lay out, demarcate and assign sites to the applicants with the assistance of the Taluk Overseers and to supervise the construction of houses, etc.

3. Whenever necessary, build up acquisition records relating to the Depressed Class people.

4. To collect statistical information relating to literacy, industries, dwelling conditions and drinking water facilities.

5. To prepare a programme of works for the entire taluk and well in advance and place it for the acceptance of the taluk committee.

6. To be in charge of building materials, tiles and other property when he is so placed and to maintain forms, registers and other accounts as may be required in this behalf.

ANNEXURE I.

Particulars		*1953-54*		*1955-56*		*1956-57*	
		Gross	Net	Gross	Net	Gross	Net
Siding Fuel	...	2694	2011¼	1895½	1758½	867½	738
Coupe Fuel	...	3025	2510½	1827	1444½	Nil	Nil
Big Bamboo	...	1602	1145½	2519	2410	824	732½
Charcoal	...	3,84,804		2,98,422		1,22,452	

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದುಳಿದ ಪಂಗಡದವರಿಗೆ ಅಂದರೆ ನಿಮ್ಮ ತರಗತಿಗಳವರಿಗೆ ಸಂಬಂಧಪಟ್ಟ ದರಖಾಸ್ತ್ ಅರ್ಜಿಗಳು ಬೇಗ ವಿಲೇವಾರಿಯಾಗದೆ ಅವರಿಗೆ ಪೂರಾ ತೊಂದರೆಯಾಗಿರುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ಸಂದರ್ಭಗಳಾವವೂ ನನ್ನ ಗಮನಕ್ಕೆ ಬಂದಿಲ್ಲ. ಅಂಥ ನಿದರ್ಶನಗಳೇನಾದರೂ ಇದ್ದಲ್ಲಿ ತಾವು ಅವುಗಳನ್ನು ನನ್ನ ಗಮನಕ್ಕೆ ತಂದರೆ ಅವುಗಳನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಅವರಿಗೆ ಹೀಗೆ ನಿಧಾನವಾಗುತ್ತಿರುವುದರಿಂದ ಬಹಳ ಅನ್ಯಾಯವಾಗುತ್ತಿದೆ ಎಂಬುದನ್ನು ಆಲೋಚನೆ ಮಾಡಿರುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಏನೂ ತೊಂದರೆ ಆಗಿಲ್ಲವೆಂಬುದೇ ಸರ್ಕಾರದ ಅಭಿಪ್ರಾಯ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಬಗ್ಗೆ ತಾವು ಒಂದು ವಿಚಾರಣೆಯನ್ನು ಕೈಗೊಳ್ಳುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಅಲ್ಲಿ ಒಂದು ಡ್ಯೂಯಲ್ ಏಜೆನ್ಸಿ ಕೆಲಸ ಮಾಡುತ್ತಿದೆಯೆಂಬ ಅಂಶವೇ ಈ ತೊಂದರೆಗಳಿಗೆಲ್ಲಾ ಕಾರಣವಾಗಿದೆ ಎಂಬುದಾಗಿ ನಮಗೆ ಕಂಡು ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ನಿಮ್ಮ ಪಂಗಡದ ಅಧಿಕಾರಿಗಳಿರುವುದರಿಂದಲೇ ನಿಮ್ಮ ಪಂಗಡದವರಿಗೆ ತೊಂದರೆಯಾಗುತ್ತದೆಯೆಂಬುದು ತಮಗೆ ಮನವರಿಕೆಯಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೂ ಒಂದು ಕಾರಣವಿರಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ ನಿಧಾನವಾಗುತ್ತಿರುವುದರಿಂದ ಅನೇಕ ತೊಂದರೆಗಳಾಗಿ ಅಪೀಲ್ ಅರ್ಜಿಗಳು ರೆವಿನ್ಯೂ ಬೋರ್ಡಿಗೂ ಮತ್ತು ಸರ್ಕಾರಕ್ಕೂ ಬರಲು ಅವಕಾಶವಾಗಿದೆಯೆಂಬ ಅಂಶ ತಮಗೆ ಮನವರಿಕೆಯಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೊತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇದರಿಂದ ಆ ನಿಮ್ಮ ಪಂಗಡದವರಿಗೆ ಬಹಳ ಅನ್ಯಾಯವಾಗುತ್ತಿದೆಯೆಂಬ ಅಂಶ ತಮಗೆ ತಿಳಿದುಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ನಿಮ್ಮ ಪಂಗಡದವರಿಗೆ ಹೆಚ್ಚುಹೆಚ್ಚಾಗಿ ಜಮೀನು ಕೊಡಬೇಕಾದ ಅಗತ್ಯವಿದೆಯೆಂಬುದು ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಜಮೀನನ್ನು ನಿಮ್ಮ ವರ್ಗದವರಿಗೆ ಕೊಡುವ ವಿಚಾರದಲ್ಲಿ ರೆಡ್ ಟೇಪಿಸಂ ಜಾಸ್ತಿಯಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಡ್ ಟೇಪಿಸಂ ಇಲ್ಲದೆ ನಿಮ್ಮ ವರ್ಗದವರಿಗೆ ಜಮೀನು ಕೊಡಬೇಕೆಂದು ಕಟ್ಟಾಜ್ಞೆ ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರುಗಳ ವಿಷಯದಲ್ಲಿ ರೆಡ್ ಟೇಪಿಸಂ ಮಾಡುತ್ತಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ವರ್ಗದ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳ ಜೂರಿಸ್‌ಡಿಕ್ಷನ್ ಒಂದು ತಾಲ್ಲೂಕಿನಲ್ಲೆಲ್ಲ ಇದೆ. ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರ ಜೂರಿಸ್‌ಡಿಕ್ಷನ್ ಒಂದು ಹೋಬಳಿಯಲ್ಲಿ ಮಾತ್ರವಿದೆ. ಒಂದು ಜಮೀನಿಗೆ ಒಬ್ಬ ನಿಮ್ಮ ತರಗತಿಯವನೂ ಮತ್ತು ಇತರೆಯವನೂ ಅರ್ಜಿ ಕೊಟ್ಟರೆ ನಿಮ್ಮವರ್ಗದ ರೆವೆನ್ಯೂ ಇನ್ಸ್‌ಪೆಕ್ಟರು ರಿಕಾರ್ಡುತಯಾರು ಮಾಡುವುದರೊಳಗಾಗಿ ರೆಗ್ಯುಲರ್ ಇನ್ಸ್‌ಪೆಕ್ಟರ್ ರಿಕಾರ್ಡುಗಳನ್ನು ತಯಾರುಮಾಡಿ ಅದರಿಂದ ನಿಮ್ಮವರ್ಗದವರಿಗೆ ತೊಂದರೆಯಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದುದರಿಂದ ಈ ರೀತಿಯ dual policy ಸರಿಯಾದದ್ದಲ್ಲವೆಂದು, ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರು ಈ ಕೆಲಸವನ್ನು ನೋಡಿಕೊಳ್ಳಬೇಕೆಂದು ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸಂಸ್ಥಾನದಲ್ಲೆಲ್ಲ ಒಂದೇ ವಿಧವಾದ ನೀತಿಯನ್ನನುಸರಿಸುವುದು ಒಳ್ಳೆಯದಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಹಳ ಒಳ್ಳೆಯದು.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಕೆಲವು ಜಿಲ್ಲೆಗಳಲ್ಲಿ ಮತ್ತು ಕೆಲವು ತಾಲ್ಲೂಕುಗಳಲ್ಲಿ ನಿಮ್ಮ ವರ್ಗದವರಿಗೆ ಸಂಬಂಧಪಟ್ಟ ದರಖಾಸ್ತು ರಿಕಾರ್ಡುಗಳನ್ನು ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರು ಮಾಡುವುದು, ಇನ್ನು ಕೆಲವು ಜಿಲ್ಲೆಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ, ರೆಗ್ಯುಲರ್ ಇನ್ಸ್‌ಪೆಕ್ಟರ್ ಮಾಡುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯಸದಸ್ಯರು ಒಂದೇ ರೀತಿಯ ನೀತಿ ಇರಬೇಕೆಂದು ಅಭಿಪ್ರಾಯಪಟ್ಟರೆ ನಾಳೆಯೇ ಒಂದು ಆಜ್ಞೆ ಹೊರಡಿಸುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದವರಿಗೆ ಸಂಬಂಧಪಟ್ಟ ದರಖಾಸ್ತು ಅರ್ಜಿಗಳನ್ನು ನಿಮ್ಮ ವರ್ಗದವರ ಕಷ್ಟಸುಖಗಳನ್ನು ಅರಿಯದವರಿಗೆ ವಿಲೆ ಮಾಡುವುದಕ್ಕೆ ವಹಿಸಿದರೆ ಅನ್ಯಾಯ ಜಾಸ್ತಿಯಾಗುವುದರಿಂದ ನಿಮ್ಮ ವರ್ಗದ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೇ ಈ ಕೆಲಸವನ್ನು ವಹಿಸಬೇಕೆಂಬ ವಿಷಯವನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಕಿ ಅಂಶಗಳ ಆಧಾರದ ಮೇಲೆ, ನಮಗೆ ಬಂದಿರತಕ್ಕ ವರದಿಯ ಪ್ರಕಾರ ನಿಮ್ಮ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರುಗಳ ಜೂರಿಸ್‌ಡಿಕ್ಷನ್ ಬಹಳ ಹೆಚ್ಚಾಗಿರುವುದರಿಂದ, ನಿಮ್ಮ ವರ್ಗದವರಿಗೆ ತೊಂದರೆಯಾಗುತ್ತದೆ ಎಂದು ತಿಳಿದು ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಅನ್ಯಾಯವಾಗುತ್ತಿದೆಯೇ ಇಲ್ಲವೇ ಎಂಬುದನ್ನು ಸರ್ಕಾರದವರು ವಿಚಾರ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನ್ಯಾಯವಾಗಿರುವ ಸಂದರ್ಭಗಳನ್ನು ಮಾನ್ಯಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅವನ್ನೂ ಬಹಳ ಆಸಕ್ತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಸದಸ್ಯರು ಸರ್ಕಾರದ ಗಮನಕ್ಕೆ ಅಂಥ ಸಂದರ್ಭಗಳನ್ನು ತರದೆ ಇದ್ದರೆ ಏನು ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗ ಅನ್ಯಾಯವಾಗುತ್ತಿಲ್ಲವೆಂಬ ಅಭಿಪ್ರಾಯ ಬರುತ್ತದೆ.

ಶ್ರೀ ಜಿ. ದುಗ್ಗಪ್ಪ.—ಕೆಲವು ಕಡೆಗಳಲ್ಲಿ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳು ದರಖಾಸ್ತುಗಳ ಕೆಲಸವನ್ನೂ ಚೆನ್ನಾಗಿ ನಿರ್ವಹಿಸುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವರು ನಿರ್ವಹಿಸಿರಬಹುದು.

ಶ್ರೀ ಜಿ. ದುಗ್ಗಪ್ಪ.—ಆದುದರಿಂದ ಬೇರೆ ಕಡೆ ಇರುವ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೂ ಸಹ ಇಂಥ ಕೆಲಸಗಳನ್ನು ವಹಿಸುವುದು ಸೂಕ್ತವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿಲ್ಲವೋ, ಎಲ್ಲಿ ದಕ್ಷತೆ ಕಡಿಮೆಯಾಗಿದೆಯೋ ಅಂಥ ಸ್ಥಳಗಳಲ್ಲಿ ಮಾತ್ರ ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರಿಗೆ ಆ ಕೆಲಸವನ್ನು ವಹಿಸಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಸರ್ಕಾರದವರು ನಿಮ್ಮ ವರ್ಗದ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ಏತಕ್ಕೋಸ್ಕರ ನೇಮಕ ಮಾಡಿದ್ದಾರೆಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರು ಒದಗಿಸಿರುವ ಉತ್ತರದಲ್ಲಿ ಎಲ್ಲವನ್ನೂ ತಿಳಿಸಲಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರಿಗೆ ಕೊಟ್ಟಿರುವುದು ಖಾಯಂ ಕೆಲಸವೇ ಅಥವಾ ಹಂಗಾಮಿ ಕೆಲಸವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಸರ್ಕಾರದಲ್ಲಿ ಅವರ ಕೆಲಸ ಖಾಯಂ ಆದುದು, ಅವರನ್ನು ಖಾಯಂ ಆಗಿರತಕ್ಕ ಬೇರೆ ಜಾಗದಿಂದ ಈ ಕೆಲಸಕ್ಕೆ ನೇಮಕ ಮಾಡಲಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಇವರ ಕೆಲಸ ಖಾಯಂ ಆದರೆ ಸರ್ಕಾರದ ರೂಲ್ಸ್ ಮತ್ತು ರೆಗ್ಯುಲೇಷನ್ ಪ್ರಕಾರ ಇವರಿಗೆ ಕೊಡತಕ್ಕ ಇನ್‌ಕ್ರಿಮೆಂಟ್ ಮುಂತಾದುವನ್ನು ಕೊಡುತ್ತಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ 50 ರೂಪಾಯಿಗಳ ನಿಗದಿನಂಬಳ ಗೊತ್ತುಮಾಡಲಾಗಿದೆ.

ಅಧ್ಯಕ್ಷರು.—ಇದರಲ್ಲಿ ಸಂಬಳದ ವಿಷಯ ಬರುವುದಿಲ್ಲ. ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ದರಖಾಸ್ತು ಕೊಡಬೇಕೇ ಬೇಡವೇ ಎಂಬ ವಿಷಯದ ಮೇಲೆ ಏನಾದರೂ ಪ್ರಶ್ನೆಗಳಿದ್ದರೆ ಕೇಳಬಹುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳು ಹಿಂದುಳಿದ ಪಂಗಡದವರ ಅಭಿವೃದ್ಧಿಯ ವಿಚಾರದಲ್ಲಿ ಏನೇನು ಕೆಲಸ ಮಾಡಬೇಕೆಂದು ಅವರಿಗೆ ವಹಿಸಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲ ತಮ್ಮ ಮುಂದಿರುವ ಉತ್ತರದಲ್ಲಿ ಅಚ್ಚು ಮಾಡಲಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ದರಖಾಸ್ತು ಕೆಲಸವನ್ನು ವಹಿಸುವುದಕ್ಕಾಗುವುದಿಲ್ಲವೆಂದು ಹೇಳಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡುವುದಕ್ಕಾಗುವುದಿಲ್ಲವೆಂದು ಹೇಳಲಿಲ್ಲ. ಅವಶ್ಯಕವಾದ ಮತ್ತು ಅನಿವಾರ್ಯವಾದ ಸಂದರ್ಭಗಳಲ್ಲಿ ದರಖಾಸ್ತುಗಳನ್ನು ಬಿಲ್ಡ್‌ಅಪ್ ಮಾಡುವ ಜವಾಬ್ದಾರಿಯನ್ನೂ ಕೊಡಲಾಗುವುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಗಾದರೆ ಅವಶ್ಯಕವಾಗಿ, ಪೂರ್ತಿಯಾಗಿ, ಹಿಂದುಳಿದ ಪಂಗಡದವರಿಗೆ ಸಂಬಂಧಪಟ್ಟ ದರಖಾಸ್ತು ರಿಕಾರ್ಡು ಮತ್ತು ಇತರ ರಿಕಾರ್ಡುಗಳನ್ನು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಕೊಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ದರಖಾಸ್ತು ವಿಚಾರದಲ್ಲಿ ಮುಂದುವರಿದ ಜನಾಂಗಕ್ಕೇ ಬೇರೆ ಮತ್ತು ನಿಮ್ಮ ವರ್ಗದವರಿಗೇ ಬೇರೆ ಹೀಗೆ dual agencies ಇಟ್ಟುಕೊಂಡರೆ ನಿಮ್ಮ ವರ್ಗದವರಿಗೆ ತೊಂದರೆಯಾಗುವುದರಿಂದ ಒಂದೇ ಮಾರ್ಗವನ್ನು ಅನುಸರಿಸುವುದು ಸೂಕ್ತವೆಂದು ಸರ್ಕಾರಕ್ಕೆ ವರದಿ ಬಂದಿದೆ.

Jungle Coupes in Madhugiri Sub-Division (Suspension of Sale).

Q.—811. Sri MUDDURAMIAH (Koratagere).—

Will the Government be pleased to state :—

(*a*) whether the system of selling the jungle on coupe-basis was not suspended temporarily in the limits of Madhugiri Sub-Division ;

(*b*) whether it is a fact that these coupes have been recently sold to a person who belongs to Kolar District ?

A.—Sri H. M. CHANNABASAPPA (Minister for Revenue and Agriculture).—

(*a*) The sale of fuel coupes for 1956-57 has been suspended temporarily.

(*b*) A Military contractor of Srinivasapur, Kolar District, has been granted two coupes, *viz*., Kavali and Dodneermulga in Madhugiri Taluk and the same has subsequently been stayed for further examination of the grant.

ಶ್ರೀ ಮುದ್ದುರಾಮಯ್ಯ.—ಮಧುಗಿರಿ ಸಬ್‌ಡಿವಿಷನ್ನಲ್ಲಿ ಕಾಡನ್ನು ಕಡಿಯುತ್ತಿರುವುದರಿಂದ ಮಳೆ ಬಾರದೆ ತೊಂದರೆಯಾಗಿದೆ. ಆದುದರಿಂದ ತಾತ್ಕಾಲಿಕವಾಗಿ ಹತ್ತು ವರ್ಷಗಳ ಕಾಲವಾದರೂ ಕಾಡನ್ನು ಕಡಿಯಕೂಡದೆಂದು ಜನರು ಮನವಿ ಮಾಡಿಕೊಂಡಮೇಲೆ ಅಲ್ಲವೆ ಕಾಡು ಕಡಿಯುವುದನ್ನು ಸಸ್ಪೆಂಡ್ ಮಾಡಿರುವುದು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಜನರು ಮನವಿ ಮಾಡಿಕೊಂಡುದರ ಮೇಲೆ ಸಸ್ಪೆಂಡ್ ಮಾಡಲಿಲ್ಲ. ಸರ್ಕಾರದವರು ಫಾರೆಸ್ಟಿಗೆ ರೆಸ್ಟ್ ಕೊಡುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದಾರೆ ; ಅದಕ್ಕೆ ರೆಸ್ಟ್ ಕೊಡಬೇಕು ಎಂಬ ವಿಷಯದಲ್ಲಿ Conservator of Forests ರವರು report ಮಾಡಿದ್ದಾರೆ.

ಶ್ರೀ ಮುದ್ದುರಾಮಯ್ಯ.—ಈ ಫಾರೆಸ್ಟ್ ಕಡಿಯುವುದನ್ನು ಸಸ್ಪೆಂಡ್ ಮಾಡಿ ಎಷ್ಟು ಕಾಲವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಸ್ಪೆಂಡ್ ಮಾಡಿ ಕೊಂಚಕಾಲಮಾತ್ರವಾಗಿದೆ.

ಶ್ರೀ ಮುದ್ದುರಾಮಯ್ಯ.—ಕೇವಲ ಮೂರು ನಾಲ್ಕು ತಿಂಗಳು ಫಾರೆಸ್ಟಿಗೆ ರೆಸ್ಟ್ ಕೊಟ್ಟಮಾತ್ರಕ್ಕೆ ಫಾರೆಸ್ಟ್ ಅಭಿವೃದ್ಧಿಯಾಗುತ್ತದೆಂದು ತಮ್ಮ ಭಾವನೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ನಮ್ಮ ಭಾವನೆಯಲ್ಲ.

ಶ್ರೀ ಮುದ್ದುರಾಮಯ್ಯ.—ಇಷ್ಟು ಕಡಮೆ ಕಾಲ ಸಸ್ಪೆಂಡ್ ಮಾಡಿ ಪುನಃ ಕಡಿಯಲು ಅವಕಾಶ ಕೊಡುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—Defence purposes ಗೆ ಅವಶ್ಯಕವೆಂದು ಕಂಡುಬಂದುದರಿಂದ ಕಾಡನ್ನು ಕಡಿಯಲು ಅವಕಾಶ ಕೊಡಲಾಯಿತು. ಆದರೆ ಜನಗಳಿಂದ ತಕರಾರು ಬಂದದ್ದರಿಂದ ಪುನಃ ಪರಿಶೀಲನೆ ಮಾಡಬೇಕೆಂದು ಸ್ಟೇ ಮಾಡಿದ್ದೇವೆ.

ಶ್ರೀ ಮುದ್ದುರಾಮಯ್ಯ.—ಆ ಪ್ರದೇಶ ಅಭಾವ ಕ್ಷೇತ್ರವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಳೆ ಇಲ್ಲದಿರುವ ಕಾಲದಲ್ಲಿ ಅದು ಅಭಾವ ಕ್ಷೇತ್ರ.

ಶ್ರೀ ಮುದ್ದುರಾಮಯ್ಯ.—ಸಾಮಾನ್ಯವಾಗಿ ಅದು ಅಭಾವಕ್ಷೇತ್ರವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ವೇಸಾಧಾರಣವಾಗಿ ಆ ಪ್ರದೇಶದಲ್ಲಿ ಮಳೆಯು ಇತರ ಕಡೆಗಳಿಗಿಂತ ಕಡಮೆ ಬೀಳುತ್ತದೆ.

ಶ್ರೀ ಮುದ್ದುರಾಮಯ್ಯ.—ಕಾಡು ಸಂಪೂರ್ಣವಾಗಿ ನಾಶವಾದಮೇಲೆ ಆ ಪ್ರದೇಶದಲ್ಲಿ ಮಳೆ ಕಡಮೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಒಪ್ಪುವುದು ಕಷ್ಟ.

ಶ್ರೀ ಮುದ್ದುರಾಮಯ್ಯ.—ಆ ಪ್ರದೇಶದಲ್ಲಿ ತಾತ್ಕಾಲಿಕವಾಗಿ 5 ವರ್ಷದ ಮಟ್ಟಿಗಾದರೂ ಕಾಡನ್ನು ಕಡಿಯುವುದನ್ನು ನಿಲ್ಲಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನ ಪರಿಶೀಲನೆಮಾಡಬೇಕು.

ಶ್ರೀ ಡಿ. ಎಂ. ಗೋವಿಂದರಾಜು.—ಕಾಡನ್ನು ಅಫಾರೆಸ್ಟ್ ಮಾಡಬೇಕೆಂದಿರುವ ಉದ್ದೇಶವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿ ಡಿಫಾರೆಸ್ಟೇಷನ್ ಆಗಿದೆಯೋ ಅದನ್ನು ರಿಕೂಪ್ ಮಾಡುವುದಕ್ಕೆ ಅಫಾರೆಸ್ಟೇಷನ್ ಮಾಡುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಅಫಾರೆಸ್ಟೇಷನ್ ಜಾಸ್ತಿ ಮಾಡುವುದರಿಂದ ಮಳೆ ಜಾಸ್ತಿಯಾಗುತ್ತದೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಾಗಿ ಅಭಿಪ್ರಾಯ ಪಡುವವರು ಇದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಆದುದರಿಂದ ಕಾಡು ಕಡಿಯುವುದನ್ನು ಕಡಮೆ ಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ ಡಿನಲ್ಲಿ ಮರವನ್ನು ಪುನಃ ಕಡಿಯುವುದಕ್ಕಾಗಿಯೇ ಬೆಳೆಸತಕ್ಕದ್ದು.

ಶ್ರೀ ಬಿ. ರಾಚಯ್ಯ.—ಕೂಪುಗಳಲ್ಲಿ ಮರವನ್ನು ಕಡಿಯಲು ಕೊಡುವಾಗ ಅಡ್ವರ್ಟೈಸ್ ಮಾಡುತ್ತಾರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಡ್ವರ್ಟೈಸ್ ಮಾಡಬಹುದು, ಪ್ರಿಸ್ಕ್ರೈಬ್ಡ್ ರೇಟ್ ನಿಗದಿಮಾಡಿ ಕೊಡಬಹುದು. ಅದೆಲ್ಲ ಕಾನೂನಿನಲ್ಲಿ ವಿಧಾಯಕವಾಗಿದೆ.

ಶ್ರೀ ಬಿ. ರಾಚಯ್ಯ.—ಈ ಸಂದರ್ಭದಲ್ಲಿ ಕೂಪುಗಳನ್ನು ಇದ್ದಿಲು ಸುಡುವುದಕ್ಕೆ ಸೌದೆಕಡಿಯುವುದಕ್ಕೆ ಕೊಡುವುದಿಲ್ಲವೆಂದು ನೋಟಿಫಿಕೇಷನ್ ಕಳುಹಿಸಿದ್ದರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟಿಫಿಕೇಷನ್ ಕಳುಹಿಸಿರಲಿಲ್ಲ. ಸರ್ಕಾರದವರು ಕಾಡನ್ನು ಕಡಿಯುವುದನ್ನು ಕೆಲವು ಕಾಲ ನಿಲ್ಲಿಸತಕ್ಕ ಬಗ್ಗೆ ತಮ್ಮ ಅಭಿಪ್ರಾಯವೇನೆಂದು ಚೀಫ್ ಕನ್ಸರ್ವೇಟರನ್ನು ಕೇಳಲಾಯಿತು. ಅವರು ಹಂಗಾಮಿಯಾಗಿ ನಿಲ್ಲಿಸಿದ್ದೇವೆಂದು ನಮಗೆ ವರದಿ ಮಾಡಿದರು. ಅದರ ಮೇಲೆ ಈ ಪ್ರಶ್ನೆ ಉದ್ಭವವಾಗಿದೆ.

ಶ್ರೀ ಬಿ. ರಾಚಯ್ಯ.—ಕೋಲಾರ ಜಿಲ್ಲೆಯಿಂದ ಬಂದವರಿಗೆ ಈ ಕಾಡಿನಲ್ಲಿ ಕೂಪುಗಳನ್ನು ಕೊಡಲಾಗಿದೆ. ಈ ಕೆಲಸವನ್ನು ಮಾಡುತ್ತಿರುವ ಕಂಟ್ರಾಕ್ಟರುಗಳು ಲೋಕಲ್ ಆಗಿ ಯಾರೂ ಇರಲಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಕಾದಷ್ಟು ಜನರಿದ್ದಾರೆ.

ಶ್ರೀ ಬಿ. ರಾಚಯ್ಯ.—ಹಾಗಾದರೆ ಅವರಿಗೆ ಕೊಡದೆ ಕೋಲಾರ ಜಿಲ್ಲೆಯವರಿಗೆ ಕೊಡಲು ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—Defence purposesಗೆ ಅವಶ್ಯಕವೆಂದು ವರದಿ ಸಲ್ಲಿಸಿದ್ದರಿಂದ ಅದನ್ನು ಕೊಡಲಾಯಿತು. ಆಮೇಲೆ ಕಂಟ್ರಾಕ್ಟರುಗಳೂ, ಜನಗಳೂ ತಕರಾರು ಮಾಡಿದ್ದರಿಂದ ಸ್ಟೇ ಆರ್ಡರ್ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಆ ಕಂಟ್ರಾಕ್ಟರು ಎಷ್ಟು ವರ್ಷಗಳಿಂದ ಇದ್ದಿಲು ಸುಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಕಂಟ್ರಾಕ್ಟರಿಗೆ military purposesಗೆ ಕೊಡಲಾಗಿತ್ತೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದಮೇಲೆ ಎಲ್ಲಿಗೆ ಸರಕು ಕಳುಹಿಸಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲ ಪರಿಶೀಲನೆ ಮಾಡುವುದಕ್ಕೆ ಸ್ಟೇ ಆರ್ಡರ್ ಕೊಟ್ಟಿದ್ದೇವೆ.

ಶ್ರೀ ಜಿ. ಬಸಪ್ಪ.—ಕನ್ಸರ್ವೇಟರ್ ಆಫ್ ಫಾರೆಸ್ಟ್ ಹಂಗಾಮಿಯಾಗಿ ನಿಲ್ಲಿಸಿದ್ದಾರೆಂದರೆ, ಎಷ್ಟು ಕಾಲ ನಿಲ್ಲಿಸಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟು ದಿವಸವೆಂಬುದನ್ನು ಹೇಳಿಲ್ಲ.

Motor vehicles purchased by Government.

Q.—289. Sri V. M. MASCARENHAS (St. John's Hill)—Will the Government be pleased to state :—

(*a*) the number of cars, jeeps, station waggons and lorries purchased by them during the 12 months ending December 1955 and the total cost involved ;

(*b*) the departments to which these were allotted and the number allotted to each ?

A.—Sri T. CHANNIAH (Minister for Public Health aud Local Self-Government).—

No. of Qn.	Departments of Government	Cars	Jeeps	Station Waggons	Lorries	Cost
						Rs. a. p.
(*a*)	... ...	1	24	5	35	17,43,801 15·10
(*b*) 1	Police Department ...	1	8	1	...	
2	N.E.S. Block Hunsur...	...	1	...	...	
3	Geology Department ...	...	1	...	...	
4	Road Transport Department ...	...	2	...	...	
5	Animal Husbandry Department ...	...	1	1	...	
6	Electric Factory ...	...	...	1	1	
7	Rural Industrialisation Department ...	...	...	...	1	
8	Department of Public Instruction ...	...	6	1	...	
9	Electric Department ...	...	...	...	21	
10	Public Works Department ...	...	5	...	12	
11	Labour Housing Corporation ...	...	...	1	...	

Sri V. M. MASCARENHAS.—What are the circumstances that prompted Government to send 21 lorries to the Electric Department ?

Sri T. CHANNIAH—Because of the urgency of the various works that had to be executed materials had to be transported to various places.

Sri V. M. MASCARENHAS.—Has the Electrical Department got any large programme of work at present to justify purchasing 21 lorries in the same year ?

Sri T. CHANNIAH.—They have reported that they have enough work and to transport electric equipments to various places they needed these lorries.

Sri V. M. MASCARENHAS.—Will the Government be pleased to state why the Department of Public Instruction wanted 6 jeeps ?

Sri A. G. RAMACHANDRA RAO.—The Hon'ble Member knows that there have been three Divisions for each of which there is a Deputy Director of Public Instruction and they have extensive areas and they have got to do intensive work. Each of them has been given a jeep and one jeep is kept in the Central office. Regarding the other two I will ascertain and inform the Member.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ಈ ಜೀಪು, ಕಾರು ವಗೈರೆ, ಇಲಾಖೆಗಳಿಗೆ ಒದಗಿಸಿರುವುದು ಮನೋರಂಜನೆಗೇ ಅಥವಾ ಕೆಲಸ ಕಾರ್ಯಗಳಿಗೇ ?

ಅಧ್ಯಕ್ಷರು.—ಕೆಲಸ ಕಾರ್ಯಗಳಿಗೆ ಎಂಬುದು ಗೊತ್ತೇ ಇದೆ.

ಶ್ರೀ ವಿ. ಆರ್. ನಾಯ್ಡು.—ಈ ಅವಧಿಯಲ್ಲಿ ಕೊಂಡ ಕಾರು, ಜೀಪು ಮುಂತಾದುವುಗಳಲ್ಲಿ ಯಾವುದನ್ನಾದರೂ ಸರ್ಕಾರದ ಮಂತ್ರಿಗಳಿಗೆ ಒದಗಿಸಲಾಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಈಗ ಮಂತ್ರಿಮಂಡಲಕ್ಕೆ ಹೊಸ ಕಾರುಗಳನ್ನು ತರಿಸಲು ಆರ್ಡರು ಕೊಟ್ಟಿದ್ದೀರಾ ?

Sri A. G. RAMACHANDRA RAO.—No.

Sri A. BHEEMAPPA NAIK.—Are not the Deputy Directors of Public Instruction expected to keep their own vehicles for their travels ?

Sri A. G. RAMACHANDRA RAO.—Yes.

Sri A. BHEEMAPPA NAIK.—When that is the case why did Government supply the jeeps ?

Sri A. G. RAMACHANDRA RAO.—Sir, ordinary vehicle swould be all right on State Fund and District Board Roads. Schools are situated in interior and jeeps would be used to go there.

Sri A. BHEEMAPPA NAIK.—Can they not purchase jeeps in such a case because they are entitled for T.A. and D.A. as any other officer ?

Sri A. G. RAMACHANDRA RAO.—No, Sir ; it was examined and it was felt that supply of jeeps would expedite work.

Sri A. BHEEMAPPA NAIK.—Would they not claim T.A. and D.A ?

Sri A. G. RAMACHANDRA RAO.—They do claim.

Sri A. BHEEMAPPA NAIK.—If that is the case, why should Government supply jeeps at Government cost ?

Sri A. G. RAMACHANDRA RAO.—Those who are supplied with conveyance get a separate scale of T.A. and D.A.

Sri A. BHEEMAPPA NAIK.—May I know the different scale ?

Sri A. G. RAMACHANDRA RAO.—Notice.

Sri A. BHEEMAPPA NAIK.—May I know the expenditure incurred by a person who keeps his own jeep and a person supplied with Government jeep ?

Sri A. G. RAMACHANDRA RAO.—I have already asked for notice ; I do not remember the figure.

Sri A. BHEEMAPPA NAIK.—At east do you think that there is reduction in expenditure in supplying these eeps ?

Sri A. G. RAMACHANDRA RAO.—The criterion is not the reduction in expenditure but the efficiency in work.

Sri A. BHEEMAPPA NAIK.—Was there any such precedent in Mysore State of supplying jeeps to the officers ?

Sri A. G. RAMACHANDRA RAO.—Notice.

Sri A. BHEEMAPPA NAIK.—Will not the Revenue Officers move from place to place and even to villages ?

Sri A. G. RAMACHANDRA RAO.—Revenue Officers are of a different category. There is a Revenue Officer for a Hobli and a Taluk Revenue Officer and so on. So, it is not possible to compare their work with the work of these people.

Sri A. BHEEMAPPA NAIK.—Is the work of the Amildar more onerous or the work of a D.D.P.I. ?

Sri A. G. RAMACHANDRA RAO.—It is a matter of opinion.

Sri M. PALANIYAPPAN.—Was there any requisition from the Forest Department for jeeps and does not Government feel the necessity of supplying jeeps to District Forest Officers ?

Sri T. CHANNIAH.—It is under the consideration of the Government.

Sri M. PALANIYAPPAN.—By supplying jeeps to District Forest Officers, will it not help in preventing timber smuggling as it is dangerous to enter into forest without jeep ?

Sri T. CHANNIAH.—I said the proposal is under examination.

ಶ್ರೀ ಆರ್. ಮುನಿಸ್ವಾಮಯ್ಯ.—ಮರಾಮತ್ ಇಲಾಖೆಗೆ 5 ಜೀಪುಗಳನ್ನು ಕೊಟ್ಟಿರುವುದು ಸಾಕಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—12 ಲಾರಿಗಳನ್ನೂ ಮತ್ತು 5 ಜೀಪುಗಳನ್ನೂ ಕೊಟ್ಟಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಕೆರೆ ಕಟ್ಟೆ ಒಡೆದಾಗ ತಕ್ಷಣ ಹೋಗಿ ನೋಡಿ ಸರಿಪಡಿಸುವುದಕ್ಕೆ ಈ ವಾಹನ ಸೌಕರ್ಯವಿರಬೇಕಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೆಚ್ಚಿಗೆ ಜೀಪುಗಳನ್ನು ಕೇಳಿದ್ದಾರೆ. ಸರ್ಕಾರದವರು ಅದನ್ನು ಪರ್ಯಾಲೋಚಿಸುತ್ತಿದ್ದಾರೆ.

Sri K. LAKKAPPA.—May I know the amount spent for these jeeps and petrol, etc. ?

Sri A. G. RAMACHANDRA RAO.—I want notice.

Sri K. LAKKAPPA.—May I know whether they have fixed any maximun amount to be spent on this ?

Sri A. G. RAMACHANDRA RAO.—Sir, it is well known that T.A. and D.A. of officers have been fixed and they cannot exceed that limit. So, within that limit, they can make use of it.

Sri K. LAKKAPPA.—For petrol purposes ?

Sri A. G. RAMACHANDRA RAO.—I want notice for that.

Mr. SPEAKER.—If the Hon'ble Member wants further information regarding T.A. and D.A. of these officers who have been supplied with vehicles, Government would be able to furnish information tomorrow. This question will be taken up tomorrow. Now, question No. 654.

Dispensaries sanctionedfrom 1952 to 1956.

Q.—654. Sri V. M. MASCARENHAS (St. John's Hill).—Will the Government be pleased to state :—

(*a*) the number of dispensaries sanctioned from 1st April 1952 to 1st April 1956, districtwise ;

(*b*) the number actually functioning on 1st April 1956, districtwise :

(*c*) the causes for the remaining not functioning (figures may be furnished)?

A.—Sri T. CHANNIAH (Minister for Public Health and Local Self-Government).—

(*a*)	Bangalore District ...	10	Mandya District ...	3
	Chikmagalur District ...	1	Mysore District ...	7
	Chitaldrug District ...	6	Shimoga District ...	1
	Hassan District ...	3	Tumkur District ...	10
	Kolar District ...	2	Bellary District ...	2
(*b*)	Bangalore District ...	7	Mandya District ...	2
	Chikmagalur District ...	1	Mysore District ...	4
	Chitaldrug District ...	4	Shimoga District ...	1
	Hassan District ...	2	Tumkur District ...	9
	Kolar District ...	1	Bellary District ...	2
(*c*)	Want of building facilities—			
	Bangalore District ...	3	Mandya District ...	1
	Chitaldrug District ...	2	Mysore District ...	3
	Hassan District ...	1	Tumkur District ...	1
	Kolar District ...	1		

Sri V. M. MASCARENHAS.—Has any progress been shown during the current year in seeing that the remaining dispensaries are put into use?

Sri T. CHANNIAH.—Yes; three dispensaries have been very recently opened.

Sri V. M. MASCARENHAS.—Is it possible for the remaining being opened during the end of the year?

Sri T. CHANNIAH.—Action is being taken to open dispensaries as soon as buildings are made available.

ಶ್ರೀ ಜಿ. ಬಸಪ್ಪ.—ಆಸ್ಪತ್ರೆ ಮಂಜೂರು ಮಾಡುವುದರಲ್ಲಿ ಸರ್ಕಾರದ ನೀತಿಯೇನು? ಕಟ್ಟಡವಿರುವ ಕಡೆ ಮಂಜೂರು ಮಾಡಬೇಕೆಂದಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಸಾರ್ವಜನಿಕರು ಸರಿಯಾದ ಕಟ್ಟಡ ಒದಗಿಸಿದರೆ ತಕ್ಷಣ ಮಂಜೂರು ಮಾಡುತ್ತಾರೆ, ಇಲ್ಲದಿದ್ದರೆ ಸ್ವಲ್ಪ ನಿಧಾನ.

ಶ್ರೀ ಜಿ. ಬಸಪ್ಪ.—ಕೆಲವು ಕಡೆ ಕಟ್ಟಡ ಕಟ್ಟಿ ವರ್ಷಗಟ್ಟಲೆ ಕಾದರೂ ಮಂಜೂರು ಮಾಡದೆ ಇರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ. ಕೆಲವರು ಕಟ್ಟಡ ಕೊಡುತ್ತೇವೆಂದು ಭರವಸೆಕೊಟ್ಟು ಮಂಜೂರು ಮಾಡಿಸಿಕೊಂಡಿದ್ದಾರೆ. ಆದರೆ ಆಸ್ಪತ್ರೆ ನಡೆಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಸಾಮಾನ್ಯವಾಗಿ ಆಸ್ಪತ್ರೆ ಮಂಜೂರುಮಾಡಿರುವ ಕಡೆ ಪಬ್ಲಿಕ್ ಡೊನೇಷನ್ ಅರ್ಧ ಬಂದರೆ ಸರ್ಕಾರ ಅರ್ಧಕೊಟ್ಟು ಆಸ್ಪತ್ರೆಕಟ್ಟಡ ಕಟ್ಟಬೇಕೆಂಬುದು ಸರ್ಕಾರದ ನೀತಿಯಾಗಿದೆ. ಆ ನೀತಿ ಬರುವ ಕಡೆ ಸರ್ಕಾರ ಅರ್ಧಕೊಟ್ಟು ಮಂಜೂರಾತಿಯನ್ನು ನೀಡುತ್ತಾರೆ.

12-30 P. M.

ಶ್ರೀ ಜಿ. ಬಸಪ್ಪ.—ಕೆಲವು ಕಡೆ ಸ್ವಂತ ಖರ್ಚಿನಿಂದ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೇವೆಂದು ಕೇವಲ ಬಾಯಿ ಮಾತಿನಲ್ಲಿ ತಿಳಿಸಿರತಕ್ಕಂಥ ಕಡೆಗಳಲ್ಲಿ ಸರ್ಕಾರದವರು ಬೇಗ ಆಸ್ಪತ್ರೆಗಳನ್ನು ತೆರೆದಿರುವುದು ಸರಿಯೇ?

ಶ್ರೀ ಟಿ. ಚನ್ನಯ್ಯ.—ಕೆಲವು ಕಡೆ ಕಟ್ಟಗಳನ್ನೇನೋ ಕಟ್ಟಿಸಿರುತ್ತಾರೆ. ಆದರೆ ಅವು ಆಸ್ಪತ್ರೆಯನ್ನಿಡಲು ಸೂಕ್ತವಾಗಿರುವುದಿಲ್ಲವೆಂದು ವರದಿಗಳು ಬಂದುದರಿಂದಲೂ ಮತ್ತು ಅಲ್ಲಿ ಡಾಕ್ಟರುಗಳು-ನರ್ಸುಗಳೂ ಇತ್ಯಾದಿ ಸ್ಟಾಫಿನವರಿಗೆ ಬೇರೆ ವಾಸದ ಮನೆಗಳಿಲ್ಲದ ಕಾರಣ ಅಲ್ಲಿ ಆಸ್ಪತ್ರೆಗಳನ್ನು ತೆರೆಯಲು ಸಾಧ್ಯವಾಗಲಿಲ್ಲ.

ಶ್ರೀ ಜಿ. ಬಸಪ್ಪ.—ಹಾಗಾದರೆ ಸ್ಥಳದ ಜನರು ಸರಿಯಾದ ಕಟ್ಟಡಗಳನ್ನು ಕಟ್ಟಿಸಿಕೊಟ್ಟರೆ ತಾವು ಅಲ್ಲಿಗೆ ಆಸ್ಪತ್ರೆಗಳನ್ನು ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಹಾಗೆ ಕಟ್ಟಡಗಳನ್ನು ಕಟ್ಟಿಸಿ ಕೊಟ್ಟಮೇಲೆ ಬೇರೆ ಕಂಡೀಷನ್‌ಗಳು ಸಮರ್ಪಕವಾಗಿದ್ದರೆ ಅಂಥ ಕಡೆಗಳಿಗೆ ಆಸ್ಪತ್ರೆಯನ್ನು ಕೊಡಲು ಬೇಕಾದ ಎಲ್ಲ ಅಂಕಿ ಅಂಶಗಳನ್ನೂ ತರಿಸಿ ಅವುಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಕೊಡಲಾಗುತ್ತದೆ.

Sri H. C. LINGA REDDY.—In reply to question (a) you have stated that two hospitals have been sanctioned for Kolar District from 1st April 1952 to 1956. May I know the places to which these two hospitals have been sanctioned?

Sri T. CHANNIAH.—L. F. dispensary at Melur and R.F. dispensary at Dibburahalli.

Sri H. C. LINGA REDDY.—In reply to question (c) you have stated that one more hospital is not functioning for want of building. May I know which it is?

Sri T. CHANNIAH.—I will be able to give that information afterwards.

Sri Mulka GOVINDA REDDY.—May I know the places where the dispensaries are sanctioned in Chitaldrug District?

Sri T. CHANNIAH.—Six dispensaries are sanctioned, out of which three are actually functioning at Janakal, Hadadi, Kondlahalli. The names of places of the other three dispensaries which are not functioning are: Narayanagondanahally, Malladahalli, Kanda gal.

Sri Mulka GOVINDA REDDY.—Are there still any representations pending before the Government for sanction of dispensaries?

Sri T. CHANNIAH—There are a number of applications.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಜಿಲ್ಲೆಯಲ್ಲಿ ಕೆಲಸಮಾಡದಿರತಕ್ಕ ಆ ಮೂರು ಆಸ್ಪತ್ರೆಗಳು ಯಾವವು?

ಶ್ರೀ ಟಿ. ಚನ್ನಯ್ಯ.—ನಂದಿನಾಥಪುರ, ಚಪ್ಪರದಪುರ, ಕಬ್ಬಳ್ಳಿ.

ಶ್ರೀ ಯು. ಎಂ. ಮಾದಪ್ಪ.—ಅಲ್ಲೆಲ್ಲಾ ಕಟ್ಟಡಗಳಿದ್ದರೂ ಏಕೆ ಆಸ್ಪತ್ರೆಯನ್ನು ಪ್ರಾರಂಭಿಸಿಲ್ಲ?

ಶ್ರೀ ಟಿ. ಚನ್ನಯ್ಯ.—ಸಂಬಂಧಪಟ್ಟ ಅಧಿಕಾರಿಗಳು ಆ ಕಟ್ಟಡಗಳು ಸರಿಯಾಗಿಲ್ಲವೆಂದು ಹೇಳುತ್ತಿದ್ದಾರೆ. ಆದಕ್ಕಾಗಿ ಇನ್ನೂ ಆ ಸ್ಥಳಗಳಿಗೆ ಆಸ್ಪತ್ರೆಯನ್ನು ಮಂಜೂರು ಮಾಡಿಲ್ಲ.

ಶ್ರೀ ಟಿ. ಶಾಂತಪ್ಪ.—ತರೀಕೆರೆ ತಾಲ್ಲೂಕು ಷೋಲಾಪುರದಲ್ಲಿ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಿ ಎಷ್ಟು ವರ್ಷಗಳಾದವು?

ಶ್ರೀ ಟಿ. ಚನ್ನಯ್ಯ.—8-9 ವರ್ಷಗಳಾಗಿರಬಹುದು.

ಶ್ರೀ ಟಿ. ಶಾಂತಪ್ಪ.—ಇದುವರೆಗೂ ಅಲ್ಲಿ ಯಾವ ಕಾರಣದಿಂದ ಆಸ್ಪತ್ರೆಯನ್ನು ತೆರೆದಿಲ್ಲ!

ಶ್ರೀ ಟಿ. ಚನ್ನಯ್ಯ.—ಆ ಸ್ಥಳ ಅಜ್ಜಂಪುರಕ್ಕೆ ನಾಲ್ಕು ಮೈಲಿದೂರದಲ್ಲಿದೆಯೆಂಬ ಕಾರಣದಿಂದ ಇನ್ನೂ ಮಂಜೂರಾಗಿಲ್ಲ.

ಶ್ರೀ ಟಿ. ಶಾಂತಪ್ಪ.—ಶಿವನಿಯಲ್ಲಿ ಒಂದು ಆಸ್ಪತ್ರೆ ತೆರೆಯುವುದಾಗಿ ತಾವು ಹೇಳಿರಲಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಟಿ. ಶಾಂತಪ್ಪ.—ಈ ಎರಡು ಸ್ಥಳಗಳಿಗೂ ಬೇಗ ಮಂಜೂರು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪರಿಶೀಲನೆ ಮಾಡುತ್ತಿದ್ದೇವೆ.

Sri A. V. NARASIMHA REDDY.—For Bangalore you have given here that three of the dispensaries are not working for want of building. May I know when those dispensaries were sanctioned?

Sri T. CHANNIAH.—Notice.

Sri A. V. NARASIMHA REDDY.—May I take it that they were not sanctioned during the period given in answer to question (*a*), *viz*., 1st April 1952 to 1st April 1956?

Sri T. CHANNIAH.—Yes.

Sri A. V. NARASIMHA REDDY.—Government were pleased to announce that unless buildings are provided it is not their policy to sanction dispensary. In these three cases were any other considerations shown for sanctioning them?

Mr SPEAKER.—The Minister has already answered that.

Sri A. V. NARASIMHA REDDY.—Is it not a fact that in many villages people have come forward to hand over buildings for starting a dispensary and the Government have to fulfil their desire?

Sri T. CHANNIAH.—Dispensaries could be started provided the buildings offered are suitable.

Sri D. DEVARAJ URS.—As we could see from the figures furnished, 12 dispensaries are not functioning for want of suitable buildings. When the buildings are not provided, why not the Government cancel them and provide elsewhere where suitable buildings are available?

Sri T. CHANNIAH.—The proposal suggested by the Hon'ble Member is also under the consideration of Government.

Sri D. DEVARAJ URS.—According to the answer given, the cause for these dispensaries not functioning is mainly want of buildings. Shall we take that this is the only cause or it is also due to want of staff?

Sri T. CHANNIAH.—It is mainly for want of building and quarters for the staff.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೂಡಿಗೆರೆ ತಾಲ್ಲೂಕು ಬಾಳೆಯೊಳೆ ಡಿಸ್ಪೆನ್ಸರಿ ಕಟ್ಟಿಸಿಕೊಟ್ಟು ಎಷ್ಟು ವರ್ಷಗಳಾದವು ?

ಅಧ್ಯಕ್ಷರು.—ತಾವು ಕೇಳುತ್ತಿರುವ ಪ್ರಶ್ನೆ ಈ ಪ್ರಶ್ನೆಗೆ ಸಂಬಂಧ ಪಟ್ಟಿದ್ದೋ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲ. ಆದರೆ ಈಗತಾನೆ ಮಾನ್ಯ ಸಚಿವರು ಕಟ್ಟಡ ಕಟ್ಟಿಸಿಕೊಟ್ಟವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡುವುದಾಗಿ ಹೇಳಿದರು. ಈ ಕಟ್ಟಡಗಳೆಲ್ಲಾ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗಲೇ ಕಟ್ಟಿಸಲ್ಪಟ್ಟವುಗಳಾಗಿದ್ದರೂ ತಾವೇಕೆ ಇನ್ನೂ ಅಲ್ಲಿಗೆ ಆಸ್ಪತ್ರೆ ಕೊಟ್ಟಿಲ್ಲವೆಂದು ಕೇಳುತ್ತಿದ್ದೇನೆ ?

ಅಧ್ಯಕ್ಷರು.—ತಾವು ಆ ಬಗ್ಗೆ ಒಂದು ಪ್ರತ್ಯೇಕವಾದ ಪ್ರಶ್ನೆಯನ್ನೇ ತರಬೇಕಾಗಿತ್ತು. ಆದರೆ ತಾವು ಹಾಗೇಕೆ ಮಾಡಲಿಲ್ಲ ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸೂಟಬಲ್ ಕಟ್ಟಡಗಳನ್ನು ಕಟ್ಟಿಸಿರುವುದರಿಂದ ಅಲ್ಲಿಗೇಕೆ ಆಸ್ಪತ್ರೆಯನ್ನು ಕೊಡಬಾರದು ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಸರ್ಕಾರದವರ ಪರ್ಯಾಲೋಚನೆಗೆ ಇನ್ನೂ ಬಂದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸರಿಯಾದ ಡಿಸೈನ್ ಪ್ರಕಾರ ಕಟ್ಟಡ ಕಟ್ಟಿಸಿಕೊಟ್ಟರೆ ಅಲ್ಲಿಗೆ ಪ್ರೈಯಾರಿಟಿ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸರಿಯಾದ ಡಿಸೈನ್ ಪ್ರಕಾರ ಕಟ್ಟಿಸಿಕೊಟ್ಟರೆ ಸ್ಟಾಫಿಗೆ ಅನುಕೂಲವಾಗಿ ವಾಸದ ಮನೆಗಳಿದ್ದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ 1952 ರಿಂದ 1956ರವರೆಗೆ ಒಂದು ಆಸ್ಪತ್ರೆಯನ್ನು ಕೊಟ್ಟಿದ್ದೀರಿ. ಯಾವ ಊರಿಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬೀರೂರಿಗೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೊದಲೇ ಅಲ್ಲಿ ಒಂದು ಆಸ್ಪತ್ರೆ ಇರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕಂಬೈಂಡ್ ಡಿಸ್ಪೆನ್ಸರಿ ಕೊಡಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಶಿವಣಿ ಆಸ್ಪತ್ರೆ ಮಂಜೂರಾಗದೆ ಇರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಕಟ್ಟಡವು ಈಗತಾನೆ ಸಿದ್ಧವಾಗಿದೆ ಎಂದು ಗೊತ್ತಾಗಿದೆ. ಸರ್ಕಾರದವರು ಅವನ್ನು ಮಂಜೂರು ಮಾಡುವುದರಲ್ಲಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸೆಕ್ರೆಟರಿಯವರು ಅದನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಿಂದ ವಜಾ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ವಜಾ ಮಾಡಿಲ್ಲ.

ಶ್ರೀ ಎ. ಮುನಿಯಪ್ಪ.—ಆಸ್ಪತ್ರೆಗಳನ್ನು ಮಂಜೂರು ಮಾಡುವಾಗ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ಮಂಜೂರು ಮಾಡುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಎಲ್ಲವನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಆಸ್ಪತ್ರೆ ಕಟ್ಟಡಗಳಿಲ್ಲದ ಊರುಗಳಿಗೆ ಬಹಳ ಜಾಗ್ರತೆಯಾಗಿ ಮಂಜೂರು ಮಾಡುತ್ತೀರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಆ ತರಹ ಮಾಡುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಇನ್ನು ಮುಂದಾದರೂ ಸಹ ಕಟ್ಟಡವನ್ನು ಕಟ್ಟಿಸಿ, ಎಲ್ಲಿ ಕಟ್ಟಡಗಳಿವೆಯೋ ಅಲ್ಲಿ ಮಂಜೂರು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅವೆಲ್ಲವನ್ನೂ ನೋಡಿಕೊಂಡೇ ಮಂಜೂರು ಮಾಡುವುದು.

ಶ್ರೀ ಎಲ್. ಸಿದ್ದಪ್ಪ.—1952 ರಿಂದ 1956ವರೆಗೆ ನಾಲ್ಕು ವರ್ಷಗಳಲ್ಲಿ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಂದೊಂದು ಆಸ್ಪತ್ರೆಯನ್ನು ಮಾತ್ರ ಮಂಜೂರು ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಮಲೆನಾಡು ಪ್ರಾಂತಗಳಿಗೆ ಕೊಟ್ಟಿರುವಷ್ಟು ಆಸ್ಪತ್ರೆಗಳ ಸೌಕರ್ಯವನ್ನು ಮೈದಾನ ಪ್ರದೇಶಗಳಿಗೆ ಕೊಟ್ಟಿಲ್ಲ. ಯಾಕೆಂದರೆ ಮಲೆನಾಡು ಜಿಲ್ಲೆಗಳಲ್ಲಿ ಪೂರ್ತಿಯಾಗಿ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದ್ದೇವೆ. ಡಿಸ್ಪೆನ್ಸರಿಗಳು ಬೇಕು ಎಂದು ಕೇಳುತ್ತಿದ್ದಾರೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಂಥ ಕಡೆಗಳಲ್ಲೆಲ್ಲಾ ಕೊಡಲಾಗುತ್ತಿದೆ.

ಶ್ರೀ ಎಲ್. ಸಿದ್ದಪ್ಪ.—ಶಿವಣೆಯಲ್ಲಿ ಆಸ್ಪತ್ರೆ ಕಟ್ಟಡವಾದ ಕೂಡಲೇ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಮಂಜೂರ್ಮಾಡುತ್ತೇವೆಂದು ಹೇಳಿದಿರಿ. ಅಲ್ಲಿ ಆಸ್ಪತ್ರೆಯ ಕಟ್ಟಡ ಕಟ್ಟಿರುವುದು ಮಾತ್ರವಲ್ಲದೆ ಡಾಕ್ಟರು ವಾಸಮಾಡಲು ಮನೆಯನ್ನು ಕಟ್ಟಿಕೊಟ್ಟಿದ್ದೇವೆ. ಆದರೂ ಸಹ ಇನ್ನೂ ಆಸ್ಪತ್ರೆ ಮಂಜೂರಾಗಿಲ್ಲ ಎಂದು ಅಲ್ಲಿಯ ವಿ. ಪಿ. ಚೇರ್ಮನ್ನರವರು ಪತ್ರ ಬರೆದಿದ್ದರು. ಅದನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ (ಒಂದು ಕಾಗದವನ್ನು ಮಾನ್ಯ ಮಂತ್ರಿಗಳಿಗೆ ಕೊಡಲಾಯಿತು). ಆದುದರಿಂದ ಈಗಲಾದರೂ ಆಸ್ಪತ್ರೆಯನ್ನು ಮಂಜೂರ್ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಶಿವಣೆ ಗ್ರಾಮಕ್ಕೆ ಆಸ್ಪತ್ರೆಯನ್ನು ಕೊಡಬೇಕೆಂದು ಒಪ್ಪಿಕೊಂಡು, ಸರ್ಕಾರದವರು ಅದನ್ನೂ ಜಾಗ್ರತೆ ಮಾಡಿಕೊಡುತ್ತಾರೆ.

ಶ್ರೀ ಎಲ್. ಸಿದ್ದಪ್ಪ.—ಶಿಕಾರಿಪುರ ತಾಲ್ಲೂಕು ಕಮ್ಯುನಿಟಿ ಪ್ರಾಜೆಕ್ಟ್ ಏರಿಯಾ ಕೊರಟಗೆರೆ ಮತ್ತು ಸುಣ್ಣದಕೊಪ್ಪ ಗ್ರಾಮಗಳಿಗೆ ಒಂದು ಆಸ್ಪತ್ರೆ ಬೇಕೆಂದು ಮನವಿ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕೊರಟಗೆರೆಯಿಂದ ಬಂದಿರುವ ಹಾಗೆ ಕಾಣುತ್ತದೆ.

ಶ್ರೀ ಎಲ್. ಸಿದ್ದಪ್ಪ.—ಆ ಪ್ರದೇಶಕ್ಕೆ ಕೂಡಲೇ ಒಂದು ಡಿಸ್ಪೆನ್ಸರಿ ಮಂಜೂರ್ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನೂ ಪರಿಶೀಲಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಎಲ್ಲೆಲ್ಲಿ ಆಸ್ಪತ್ರೆಗಳು ಅತ್ಯಾವಶ್ಯಕವೆಂದು ತಿಳಿದುಬರುತ್ತದೆಯೋ ಅಲ್ಲಿ ತಮ್ಮ ಅಪ್ಪಣೆ ಪಡೆದು ಕಟ್ಟಡವನ್ನು ಕಟ್ಟಿದ್ದರೆ ಆಸ್ಪತ್ರೆ ಕೊಡುತ್ತೀರೋ ಅಥವಾ ಅಪ್ಪಣೆ ಪಡೆಯದೆ ಕಟ್ಟಿರುವ ಕಟ್ಟಡಕ್ಕೆ ಆಸ್ಪತ್ರೆ ಕೊಡುತ್ತೀರೋ, ಯಾವ ಪದ್ಧತಿ ಜಾರಿಯಲ್ಲಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಯಾರು ಕಟ್ಟಡಗಳನ್ನು ಕಟ್ಟಿ ಆಸ್ಪತ್ರೆ ಬೇಕು ಎಂದು ಸರ್ಕಾರದಲ್ಲಿ ಕೇಳುತ್ತಾರೆಯೋ ಅಂಥ ಸ್ಥಳಗಳಿಗೆ ಆಸ್ಪತ್ರೆಗಳನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಈಗ ಸಭೆಯಲ್ಲಿ ನಡೆದ ಚರ್ಚೆಯನ್ನು ನೋಡಿದರೆ ಕಟ್ಟಡಗಳನ್ನು ಕಟ್ಟಿರುವ ಕಡೆಗಳಲ್ಲೆಲ್ಲಾ ಆಸ್ಪತ್ರೆಗಳನ್ನು ಕೊಡಬೇಕೆಂದು ಅರ್ಥವಾಗುತ್ತದೆ. ಕಟ್ಟಡಗಳನ್ನು ಕಟ್ಟುವಾಗ ಸರ್ಕಾರದ ಅನುಮತಿ ಪಡೆದು ಕಟ್ಟಿರತಕ್ಕ ಕಟ್ಟಡಗಳಿಗೆ ಅವಕಾಶ ಕೊಡುತ್ತೀರೋ, ಅಥವಾ ಅನುಮತಿ ಇಲ್ಲದೆ ಕಟ್ಟಿರುವ ಕಟ್ಟಡಗಳಿಗೆ ಕೊಡುತ್ತೀರೋ ?

ಶ್ರೀ ಟಿ. ಚನ್ನಯ್ಯ.—ಚನ್ನರಾಯಪಟ್ಟಣದ ದಿಡಿಗದಲ್ಲಿ ಮಾತ್ರ ಸರ್ಕಾರದವರನ್ನು ಕೇಳಿ ಕಟ್ಟಡಗಳನ್ನು ಕಟ್ಟಿಲ್ಲ. ಆದರೆ ಇತರ ಕಡೆಗಳಲ್ಲಿ, ಬರೀ ವಾಸಮಾಡುವ ಮನೆಗಳು institutionsಗೆ ಕಟ್ಟಿಕೊಂಡಿರುವ ಕಟ್ಟಡಗಳು ಇವುಗಳನ್ನು ಕೊಡುತ್ತೇವೆ. ಆಸ್ಪತ್ರೆಯನ್ನು ಕೊಡಿ ಎಂದು ಬರುತ್ತಾರೆ. ಇದಕ್ಕಾಗಿ ನಾವು ಡವನ್ನು ಮೊದಲೇ ಕಟ್ಟಿಸಿದ್ದೇವೆ, ನಮಗೆ ಆಸ್ಪತ್ರೆ ಕೊಡಿ ಎಂದು ಯಾರೂ ಕೇಳಲು ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಶಿಕಾರಿಪುರದ ತಾಲ್ಲೂಕು ಸುಣ್ಣದಕೊಪ್ಪಕ್ಕೆ ಆಸ್ಪತ್ರೆ ಬೇಕೆಂದು ಕೇಳಿದ್ದು ಈ ಗ್ರಾಮವು ಇತರ ಗ್ರಾಮಗಳಿಗೆ ಮಧ್ಯ ಪ್ರದೇಶವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಟಿ. ಚನ್ನಯ್ಯ.—ನನಗೆ ಜ್ಞಾಪಕವಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಸುಣ್ಣದಕೊಪ್ಪ ಗ್ರಾಮದವರು ಆಸ್ಪತ್ರೆ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ನಿಯೋಗ ಬಂದಿದ್ದುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಟಿ. ಚನ್ನಯ್ಯ.—ಶಿವಮೊಗ್ಗ ಜಿಲ್ಲೆಯವರು ಕೆಲವರು ಆಸ್ಪತ್ರೆಬೇಕು ಎಂದು ಬಂದಿದ್ದುದು ಜ್ಞಾಪಕವಿದೆ. ಆದರೆ ಸುಣ್ಣದಕೊಪ್ಪದವರ ಪರವಾಗಿ ಬಂದಿದ್ದುದು ಜ್ಞಾಪಕವಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಅದನ್ನೂ ಕೂಡಲೆ ಏರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದರೆ ನೋಡೋಣ.

General Hospital, Mandya.

Q.—791. Sri G. S. BOMME GOWDA (Mandya).—

Will the Government be pleased to state :—

Whether the concerned officers have brought to their notice that the accommodation in the Mandya General Hospital is insufficient for patients and that the hospital building has to be extended ?

A.—Sri T. CHANNIAH (Minister for Public Health and Local Self-Government).—

Yes the matter is being examined.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮಂಡ್ಯ ಜನರಲ್ ಆಸ್ಪತ್ರೆಯಲ್ಲಿ ಎಷ್ಟು ಜನ ರೋಗಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿದೆ ?

ಶ್ರೀ ಟಿ. ಚನ್ನಯ್ಯ.—ಈಗ ಆ ಸಮಾಚಾರ ನನ್ನಲ್ಲಿಲ್ಲ. ಬೇಕಾದರೆ ತಿಳಿದು ಹೇಳುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಗ ತಾವು ಎಷ್ಟು ಸ್ಥಳಾವಕಾಶ ಕಲ್ಪಿಸಿದ್ದೀರೋ ಅದಕ್ಕೆ ಒಂದರಷ್ಟು ರೋಗಿಗಳು ಅಲ್ಲಿದ್ದಾರೆನ್ನುವುದು ತಮ್ಮ ಗಮನಕ್ಕೆ ಬಂದರೆ ನಾವು ಕೇಳಿರತಕ್ಕ ಕಟ್ಟಡದ ಬಡಾವಣೆಯನ್ನು ಆದಷ್ಟು ಜಾಗ್ರತೆ ಮಾಡಿಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸ್ಥಳದ ಅವಶ್ಯಕತೆ ಇದೆ ಎಂಬುದು ಗೊತ್ತಾಗಿದೆ. ಈಗಾಗಲೇ ಒಂದು ಔಟ್ ಪೇಷೆಂಟ್ ಕಟ್ಟಡ ಕಟ್ಟಸಬೇಕೆಂದು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದರ ಜೊತೆಗೆ 16 ಜನಕ್ಕೆ ಆಗುವಂಥ ಟಿ. ಬಿ. ವಾರ್ಡ್ ಕಟ್ಟಬೇಕೆಂದು ಪಬ್ಲಿಕ್ ಡೊನೇಷನ್ ಸಹ ವಸೂಲಾಗಿದೆ.

(ಶ್ರೀ ಟಿ. ಚನ್ನಯ್ಯ.)

ಈ ಎರಡು ಬ್ಲಾಕುಗಳನ್ನು ಕಟ್ಟಿಸತಕ್ಕ ವಿಷಯದಲ್ಲಿ ಸರ್ಕಾರದವರು ತೀವ್ರಾಲೋಚನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ—ಈ ಜನರಲ್ ಆಸ್ಪತ್ರೆಯ ಒರಿಜಿನಲ್ ಪ್ಲಾನ್‌ನಲ್ಲಿ ಇದಕ್ಕೆ ಮಹಡಿ ಹಾಕಲು ಅವಕಾಶ ಮಾಡಿದ್ದಾರೆ. ಇದನ್ನು ನೋಡಿ ಮಹಡಿ ಹಾಕಲು ಮಂಜೂರ್ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಒರಿಜಿನಲ್ ಎಸ್ಟಿಮೇಟ್ ಮತ್ತು ಪ್ಲಾನ್‌ನಲ್ಲಿ ಮಹಡಿ ಹಾಕಲು ಅವಕಾಶ ಕಲ್ಪಿಸಿರುವ ವಿಷಯ ಗೊತ್ತಿಲ್ಲ. ಆದರೆ ಈಗಿರತಕ್ಕದ್ದರಲ್ಲಿ additions ಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ತಾವು ಒರಿಜಿನಲ್ ಪ್ಲಾನ್ ತರಿಸಿಕೊಂಡು ಅದರಲ್ಲಿ ಮಹಡಿಗೆ ಅವಕಾಶವಿದ್ದರೆ ಆದಷ್ಟು ಜಾಗ್ರತೆ ಮಂಜೂರ್ಮಾಡಲು ಪ್ರಯತ್ನಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಆ ವಿಚಾರವನ್ನು ನೋಡಬೇಕು.

Ayurvedic College, Mysore.
(Shifting to Bangalore)

Q.—710 Sri M. RAJASEKHARA MURTHY (Yelandur).—

Will the Government be pleased to state :—

whether a committee has been constituted to give a report on the question of the shifting of the Ayurvedic College from Mysore to Bangalore ?

A.—Sri T. CHANNIAH (Minister for Public Health and Local Self-Government).—

No.

Sri M. RAJASEKHARA MURTHY.—Did not the then Chief Minister make a statement on the floor of this House that he would constitute a committee to consider the question of shifting the Ayurvedic College from Mysore to Bangalore.

Sri T. CHANNIAH.—He said on the floor of the Legislature that he would constitute a Committee or appoint a person who was competent to go into the matter and make a report and that after that report was received, Government wloud take a decision in the matter. That was the promise made by the Chief Minister.

Sri M. RAJASEKHARA MURTHY.—What were the compelling reasons for keeping silent over this matter for such a long time ?

Sri T. CHANNIAH.—It is under the consideration of the Government now because various views are expressed on the matter—that the present Ayurvedic College should be retained in Mysore and also there is an alternative that it should be shifted to Bangalore. These alternative proposals are being considered by the Government.

Sri M. RAJASEKHARA MURTHY.—Have the Government dropped the idea of constituting the committee then ?

Sri T. CHANNIAH.—We appointed Sri B. S. Murthy, Principal of the Ayurvedic and Unani College, Madras to go into this question and he has given his expert opinion in the matter that because Bangalore has got clinical facilities, it is suitable for shifting the College from Mysore to Bangalore.

Sri M. RAJASEKHARA MURTHY.—Are the Government aware that the refusal on the part of Government to shift the College from Mysore to Bangalore is one of the reasons for the strike that is now being conducted by the students of the Ayurvedic College ?

Sri T. CHANNIAH.—It may be one of the reasons.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಶ್ರೀ ಬಿ. ಎಸ್. ಮೂರ್ತಿಯವರು ವರದಿ ಕೊಟ್ಟಿದ್ದಾರೆಂದು ತಾವು ಹೇಳಿದಿರಿ. ಅದರಲ್ಲಿ ಏನು ಶಿಫಾರ್ಸು ಮಾಡಿದ್ದಾರೆ?

ಶ್ರೀ ಟಿ. ಚನ್ನಯ್ಯ.—ಅದನ್ನಾಗಲೇ ಹೇಳಿದೆ. ಕ್ಲಿನಿಕಲ್ ಫೆಸಿಲಿಟೀಸ್ ಎಲ್ಲಾ ಅನುಕೂಲವಾಗಿದೆ, ಬೆಂಗಳೂರಿನಲ್ಲಿ ರಿಸರ್ಚ್ ವರ್ಕ್‌ಗೆ ಅನುಕೂಲವಿದೆ, ಲ್ಯಾಬೋರೇಟರಿ ಫೆಸಿಲಿಟೀಸ್ ಇವೆ, ಬೆಡ್ ಸ್ಟ್ರೆಂಗ್ತ್ ಹೆಚ್ಚಾಗಿದೆ ಎಂಬ ಅಭಿಪ್ರಾಯವಿದೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರ ಆ ವರದಿಯ ಪ್ರಕಾರ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದಕ್ಕೆ ತೀರ್ಮಾನ ಮಾಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಮಾಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಏನು ಮಾಡಿದ್ದಾರೆ? ಯಾವಾಗ ಮಾಡುವುದು?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ತೀರ್ಮಾನ ಕೈಕೊಳ್ಳುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಈಗ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯದಲ್ಲಿ ಸರ್ಕಾರದ ಧೋರಣೆಯೇನು? ಮುಷ್ಕರ ಮುಂದುವರಿಯುತ್ತಿದೆ. ಅವರ ಬೇಡಿಕೆಗಳನ್ನು ಆ ಕಾಲೇಜನ್ನು ಈ ವರ್ಷ ಇಲ್ಲಿಗೆ ವರ್ಗಾಯಿಸಿ ಈಡೇರಿಸಲು ಸಾಧ್ಯವೆ? ಇಲ್ಲದಿದ್ದರೆ, ಅಲ್ಲೇ ಕೇಳಿರುವ ಕನಿಷ್ಠ

ಬೇಡಿಕೆಗಳನ್ನು ಪೂರೈಸಿ ಅಕೆಡಮಿಕ್ ಇಯರ್ ಮುಗಿಯುವುದಕ್ಕೆ ಮುಂಚೆಯೇ ಸೌಲಭ್ಯವನ್ನೊದಗಿಸುದಕ್ಕೆ ಸಾಧ್ಯವೆ ?

Mr. SPEAKER.—It does not arise. Hon'ble Member can put a short-notice question on that.

Sri S. GOPALA GOWDA.—Government have not provided any facility or made arrangement to provide any minimum facility to the students.

Sri T. CHANNIAH.—Government have issued a Press Note on 12th September and Government wish to bring to the notice of this House that they have gone beyond the demands put forward by the students; the shifting of the college remains unsettled but a decision would be taken in this matter very early.

ಶ್ರೀ ಶಿವನಂಜೇಗೌಡ.—ಈ ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲೇ ಕಟ್ಟುತ್ತೇವೆಂದು ಈ ಸಭೆಯಲ್ಲಿ ವಾಗ್ದಾನ ಮಾಡಿದ್ದು ನಿಜ ತಾನೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಆತರಹ ಭರವಸೆಯನ್ನೇನೂ ಕೊಟ್ಟಿಲ್ಲ.

ಶ್ರೀ ಶಿವನಂಜೇಗೌಡ.—ಎಂಟು ಲಕ್ಷ ರೂಪಾಯಿಗಳನ್ನು ಮೈಸೂರಿನಲ್ಲಿ ಆ ಕಾಲೇಜು ಕಟ್ಟಡ ಕಟ್ಟಲು ಕೊಡುವುದಾಗಿ ಜವಾಬು ಕೊಟ್ಟಿರುವುದನ್ನು ತೋರಿಸಲೆ ?

ಶ್ರೀ ಟಿ. ಚನ್ನಯ್ಯ.—ಹಾಗೆ ಕೊಟ್ಟಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕಾಗಿ ಸುಮಾರು 22·24 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಒದಗಿಸಿದ್ದೇವೆ. ಮೈಸೂರಿನಲ್ಲಿ ಬಡಾವಣೆಗೆ ಏಳು ಲಕ್ಷದ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಪಂಚವಾರ್ಷಿಕ ಯೋಜನೆಯಲ್ಲಿ ತೋರಿಸಿದೆಯೇ ಹೊರತು ಕಾಲೇಜು ಅಲ್ಲೇ ಇರಬೇಕೆಂದು ನಾವು ತೀರ್ಮಾನ ಮಾಡಿಲ್ಲ.

ಶ್ರೀ ಶಿವನಂಜೇಗೌಡ.—ಕಳೆದ ಬಡ್ಜೆಟ್ ಅಧಿವೇಶನದಲ್ಲಿ ನಾನು ಪ್ರಶ್ನೆ ಕಳುಹಿಸಿದ್ದು ಚರ್ಚೆಯಾದಾಗ, ನಾನು ಮತ್ತು ಶ್ರೀ ದೇವರಾಜ ಅರಸ್ ಮುಂತಾದ ನಾಲ್ಕು ಜನ ಪ್ರಶ್ನೆ ಕೇಳಿದಾಗ, 8 ಲಕ್ಷ ರೂಪಾಯಿಗಳಲ್ಲಿ ಕಟ್ಟಡ ಕಟ್ಟುವುದಾಗಿ ವಾಗ್ದಾನಮಾಡಿರುವುದು ಅಫಿಷಿಯಲ್ ರಿಪೋರ್ಟಿನಲ್ಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅಷ್ಟು ಹಣ ಒದಗಿಸಿರುವುದು ಅಲ್ಲಿಗೆ ಬೇಕಾದ ಬೇರೆ ಅನುಕೂಲತೆಗಳಿಗೆ; ಬರೀ ಕಟ್ಟಡ ಕಟ್ಟಲು ಅದನ್ನು ಒದಗಿಸಿರಲಿಲ್ಲ.

ಶ್ರೀ ಶಿವನಂಜೇಗೌಡ.—ಹೋದ ಬಡ್ಜೆಟ್ ಅಧಿವೇಶನದಲ್ಲಿ ಉತ್ತರ ಕೊಟ್ಟಿರುವುದನ್ನು ಅಫಿಷಿಯಲ್ ರಿಪೋರ್ಟಿನಲ್ಲಿ ತಾವು ನೋಡಬೇಕು.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ವರ್ಗಾವಣೆ ಮಾಡುವುದು ನಿಧಾನವಾಗಿರುವುದರಿಂದ ಜನತೆಗೂ ಮತ್ತು ವಿದ್ಯಾರ್ಥಿಗಳಿಗೂ ಅಸಮಾಧಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಇತ್ತೀಚೆಗೆ ಮುಷ್ಕರ ಹೂಡಿರುವ ವಿದ್ಯಾರ್ಥಿಗಳು ತಮ್ಮಲ್ಲಿ ನಿಯೋಗ ಬಂದಿದ್ದುದು ನಿಜವೆ ? ಮುಖಂಡರನ್ನು ಕರೆಸಿ ವಿದ್ಯಾರ್ಥಿಗಳ ಬೇಡಿಕೆಯನ್ನು ಈಡೇರಿಸುತ್ತೇವೆಂದು ಹೇಳಿರುವುದು ನಿಜವೆ ?

ಅಧ್ಯಕ್ಷರು.—ಮುಷ್ಕರದ ಪ್ರಶ್ನೆಗೆ ಇಲ್ಲಿ ಅವಕಾಶವಿಲ್ಲ.

Sri D. DEVARAJ URS—Have Government received a notice of demand by the students ?

Sri T. CHANNIAH.—Yes.

Sri D. DEVARAJ URS.—Is the question of shifting the College from Mysore to Bangalore included in that notice ?

Sri T. CHANNIAH.— I want notice.

Sri D. DEVARAJ URS.—Sir, I want a definite answer because Government say they have received a notice.

Mr. SPEAKER.—The member can table a short notice question. How can Government answer all these details ?

Sri D. DEVARAJ URS.—Since Government have received a notice, can they not answer whether that demand has been included in that or not ?

Sri T. CHANNIAH.—The information whether they have included this subject is not now available. I will let him know tomorrow.

Sri D. DEVARAJ URS.—All that depends on so many other questions. Will this question be taken up tomorrow ?

Mr. SPEAKER.—Not necessary.

Sri D. DEVARAJ URS.—So far, have not Government provided funds for the upgrading of this College ?

Sri T. CHANNIAH.—Yes, there is a proposal to upgrade the College and it is under the consideration of the Government and it is included in the Second Five-Year Plan.

Sri D. DEVARAJ URS.—I am not asking about the provision under the Second Five-Year Plan. Since 1952 up till now, have not Government provided in the Budget for upgrading this College ?

Sri T. CHANNIAH.—No ; we have not provided in the Budget.

Water Supply to Chikmagalur Town.

Q—831. Srimathi B. L. SUBBAMMA (Chikmagalur-Mudigere).--

Will the Government be pleased to state :—

(*a*) whether any steps have been taken for supplying water to Chikmagalur Town;

(*b*) whether estimate for water supply is sanctioned ;

(*c*) if so, for how much and the actual work so far carried out ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Yes.

(*c*) The total estimated cost is Rs. 6,53,232.

The work relating to improvement of existing water supply distribution system at an estimated cost of Rs. 1,22,100 is almost completed.

Tender for the work relating to water supply to Dantaramakki area in Chikmagalur Town at an estimated cost of Rs. 37,000 has been approved and the work will be taken up shortly.

Tender for another item of work for improving the capacity of Hirekolalu tank at an estimated cost of Rs.4,94,132 has been approved and the work is being taken up.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ಟೌನಿಗೆ ನೀರು ಸರಬರಾಯಿ ಮಾಡಲು ಅಂದಾಜು ಮಂಜೂರಾಗಿದೆಯೆಂದು ಹೇಳಿದೆ. ಮಂಜೂರಾಗಿ ಎಷ್ಟು ವರ್ಷವಾಯಿತು ?

ಶ್ರೀ ಟಿ. ಚನ್ನಯ್ಯ.—37,000 ರೂಪಾಯಿಗಳ ಅಂದಾಜು ದಂತರಮಕ್ಕಿ ಪ್ರದೇಶಕ್ಕೆ ನೀರು ಸರಬರಾಯಿ ಮಾಡಲು 19-7-1956ರಲ್ಲಿ ಮಂಜೂರಾಗಿದೆ. ಇನ್ನೊಂದು 4,94,132 ರೂಪಾಯಿಗಳ ಸ್ಕೀಂ ಕಳೆದ ತಿಂಗಳು ಮಂಜೂರಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರಿಗೆ ಎಷ್ಟು ವರ್ಷಗಳಿಂದ ನೀರಿನ ಆವಶ್ಯಕತೆಯಿದೆ ಯೆಂದು ಜನರು ಹೇಳುತ್ತಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಇದೊಂದೇ ಟೌನಲ್ಲ, ಎಲ್ಲ ಟೌನುಗಳಲ್ಲೂ ನೀರಿಗೆ ತೊಂದರೆಯಿದೆ. ಒಟ್ಟಾಗಿ ಸುಮಾರು 80 ಮುನಿಸಿಪಾಲಿಟಿಗಳಿಗೆ ಹಣ ಕೊಟ್ಟಿದೆ. ಅದರಲ್ಲಿ ಚಿಕ್ಕಮಗಳೂರೂ ಸೇರಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಪಬ್ಲಿಕ್ ವರ್ಕ್ಸ್ ಇಲಾಖೆ ನಿಧಾನ ಮಾಡುತ್ತಿದೆ, ಕೆಲಸ ಜಾಗ್ರತೆ ಆಗುತ್ತಿಲ್ಲ. ವಿಚಾರ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗ ಹಣ ಮಂಜೂರು ಮಾಡಿ ಜಾಗ್ರತೆ ಕೆಲಸ ನಡೆಯಬೇಕೆಂದು ಹೇಳಿದೆ. ಕೆಲಸ ಷುರು ಮಾಡಲು ಪ್ರಯತ್ನ ಮಾಡುತ್ತಿದ್ದೇವೆಂದು ಡಿ.ಪಿ. ಡಬ್ಲ್ಯು ಇಲಾಖೆಯವರು ಹೇಳಿದ್ದಾರೆ.

---

1 P.M.

District Board Advisory Committees.

Q.—820. Sri K. LAKKAPPA (Channarayapatna)—

Will the Government be pleased to state :—

When they will constitute District Board Advisory Committees ?

A.— Sri T. CHANNIAH (Minister for Public Health and Local Self-Government).—

The question is under consideration.

ಶ್ರೀ ಕೆ. ಲಕ್ಕಪ್ಪ.—ಈ ಜಿಲ್ಲಾಬೋರ್ಡ್ ಆಡಳಿತವನ್ನು ಡೆಪ್ಯುಟಿ ಕಮಿಷನರಿಗೆ ವಹಿಸಿ ಎಷ್ಟು ವರ್ಷಗಳಾಯಿತು ?

ಶ್ರೀ ಟಿ. ಚನ್ನಯ್ಯ.—ಒಂದು ವರ್ಷದ ಮೇಲಾಯಿತು.

ಶ್ರೀ ಕೆ. ಲಕ್ಕಪ್ಪ.—ಆ ಅಧಿಕಾರಿಗಳಿಗೆ ಸಲಹೆ ನೀಡಲು ಜಿಲ್ಲಾಬೋರ್ಡ್ ಸಲಹಾ ಸಮಿತಿಗಳನ್ನು ನೇಮಕ ಮಾಡದಿರುವುದರಿಂದ ಅಲ್ಲಿಯ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—This question has been answered more than once.

ಶ್ರೀ ಕೆ. ಲಕ್ಕಪ್ಪ.— I want a specific answer ಸುಮಾರು ಒಂದೂವರೆ ವರ್ಷದ ರಾಗಾಯಿತಿನಿಂದಲೂ ಈ ಸಂಸ್ಥೆಗೆ ಚುನಾವಣೆಗಳನ್ನೂ ನಡೆಸದೆ ಮತ್ತು ಅಧ್ಯಯಸರಿ ಸಮಿತಿಗಳನ್ನೂ ನೇಮಕ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.— ಈಗಿರತಕ್ಕ ಪರಿಸ್ಥಿತಿ ಒಂದು ಹೊಸರಾಜ್ಯ ಉದಯವಾಗುವದರ ಪರ್ವಕಾಲವಾಗಿರುವುದರಿಂದ ಇದನ್ನು ಮುಂದೆ ಆಲೋಚಿಸಲು ಅಮಾನತ್ತು ಇಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಅಧ್ಯಯಸರಿ ಸಮಿತಿಗಳನ್ನಾದರೂ ತಾವು ನೇಮಕ ಮಾಡಬಹುದಾಗಿತ್ತು. ಅವುಗಳನ್ನು ಮಾಡಲು ತಮಗೇನು ಅಂಥಾ ತೊಂದರೆ ಇತ್ತು ?

ಶ್ರೀ ಟಿ. ಚನ್ನಯ್ಯ.—ಆ ವಿಚಾರವನ್ನು ನಾವಿನ್ನೂ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಹಾಗಾದರೆ ಈ ಸಮಿತಿಗಳನ್ನು ಯಾವಾಗ ಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಆದಷ್ಟು ಜಾಗ್ರತೆ ಮಾಡುತ್ತೇವೆ.

Cement Factory near Honnali. (Steps to start.)

Q.—660—Sri B. MADHAVACHAR (Bhadravati).—

Will the Government be pleased to state :—

Whether they have received any representation to examine the possibilities of starting a Cement Factory near Honnali ?

A—Dr. R. NAGAN GOWDA (Minister for Industries and Excise).—

Yes.

ಶ್ರೀ ಬಿ. ಮಾಧವಾಚಾರ್.—ತಮಗೆ ಈ ಮನವಿ ಬಂದ ಮೇಲೆ ತಾವೇನು ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ ?

*ಡಾ॥ ಆರ್. ನಾಗನಗೌಡ.—ಈ ವಿಚಾರದಲ್ಲಿ ಹೊನ್ನಾಳಿ ತಾಲ್ಲೂಕಿನಲ್ಲಿ ಸರಿಯಾದಂಥ ಲೈಂಸ್ಟೋನ್ ಗಣಿಗಳು ಎಷ್ಟಿರುತ್ತವೆಂದು ಕೇಳಿದ್ದುದಕ್ಕೆ ಕೇವಲ ಕೆಲವೇ ಕೆಲವು ಇರುತ್ತವೆಂದು ನಮಗೆ ತಿಳಿದು ಬಂದಿದೆ. ನಮಗೆ ಈ ಫ್ಯಾಕ್ಟರಿ ಹಾಕಲು ಎಷ್ಟು ಪ್ರಮಾಣದ ಲೈಂಸ್ಟೋನ್ ಬೇಕಾಗುತ್ತದೆಂಬುದರ ಬಗ್ಗೆ ಒಂದು ವರದಿಯನ್ನು ಕೇಳಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಹಾಗಾದರೆ ಆ ಹೊನ್ನಾಳಿ ತಾಲ್ಲೂಕಿನಲ್ಲಿ ಸಾಕಷ್ಟು ಲೈಂಸ್ಟೋನ್ ಇಲ್ಲವೆಂದು ಹೇಳುತ್ತೀರಾ ?

*ಡಾ॥ ಆರ್. ನಾಗನಗೌಡ.—ಹೊನ್ನಾಳಿ ತಾಲ್ಲೂಕಿನಲ್ಲಿ ಕೆಲವು ಕಡೆ ಈ ವಸ್ತು ದೊರೆಯುತ್ತದೆ. ಅಲ್ಲದೆ ಅಜುಬಾಜು ಪ್ರದೇಶಗಳಲ್ಲಿ ಎಂದರೆ ಕುಂಸಿ, ಬಿಕ್ಕೋನ ಹಳ್ಳಿ, ಜೋಳದಹಾಳ್ ಇತ್ಯಾದಿ ಕೆಲವು ಸ್ಥಳಗಳಲ್ಲೂ ದೊರೆಯುವುದಾಗಿ ವರದಿಯಲ್ಲಿ ಸೂಚಿಸಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಹೊನ್ನಾಳಿಗೆ ಸಮೀಪದಲ್ಲಿರುವ ಹಿರೇಕೆರೂರು ತಾಲ್ಲೂಕು ಧಾರವಾಡ ಜಿಲ್ಲೆಯ ಈ ಸ್ಥಳದಲ್ಲಿ ಹೇರಳವಾಗಿ ಆ ಸಾಮಾನು ದೊರೆಯುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ನವೆಂಬರು ತಿಂಗಳು ಕಳೆದ ತರುವಾಯ ಆ ವಿಚಾರವನ್ನು ಪರ್ಯಾಲೋಚನೆ ಮಾಡಿ ನೋಡುತ್ತೇವೆ.

Sugar Factory at Maddur (Steps taken to start)

Q.—694. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that there have been a number of representations before Government to start a sugar factory at Maddur;

(*b*) whether it is not a fact that an Hon'ble Minister had called for a special meeting at Maddur to get the opinion of the Members and statistics to start a sugar factory;

(*c*) the further action taken in the matter ?
ಈಗ ಮೈಸೂರಿನಲ್ಲಿ ಒಳ್ಳೆಯ ರಾಸಿಲ್ಲ, ಒಳ್ಳೆಯ ತಳಿಯಿಲ್ಲ ಎಂದು ಹೇಳಿದರು. ತಳಿ ಒಳ್ಳೆಯದಿದೆ, ಅಭಿವೃದ್ಧಿ ಮಾಡುವುದಕ್ಕೆ ಏನು ಮಾಡಬೇಕು ಎಂಬುದನ್ನು ವೆಟರ್ನರಿ ಇಲಾಖೆ ಯೋಚನೆ ಮಾಡಿ ಕಾರ್ಯಕ್ರಮ ಕೈಕೊಂಡಿದ್ದಾರೆ. ಹಳ್ಳಿಕಾರಜಾತಿ ತಳಿ ಅಭಿವೃದ್ಧಿ ಮಾಡಿ ಹಳ್ಳಿಯವರು ಹೊರದೇಶಕ್ಕೆ ಹೆಚ್ಚಿನ ಬೆಲೆಗೆ ಮಾರಿ ಆದಾಯ ಪಡೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ. ತಳಿ ಅಭಿವೃದ್ಧಿ ಮಾಡಿ ಹೋರಿಗಳನ್ನು ಮಾರಬೇಕೆಂದು ಹಳ್ಳಿಕಾರಜಾತಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಆದರೆ ಹಾಲನ್ನು ಕೊಡುವ ಜಾತಿ ತಳಿಯನ್ನು ಅಭಿವೃದ್ಧಿ ಮಾಡುತ್ತಿಲ್ಲ. ಅಜ್ಜಂಪುರ, ಹೆಸರಗಟ್ಟ—ಇಲ್ಲಿರುವ ಫಾರಂಗಳಲ್ಲಿ ಹಾಲಿನ ಅಭಿವೃದ್ಧಿಗಾಗಿ ಜಾನುವಾರನ್ನು ಕೊಂಡು ಪ್ರಯೋಗ ನಡೆಸಿ ಹಾಲನ್ನು ಮಾರುತ್ತಿದ್ದಾರೆ. ಈಗ ಆಫೀಸರುಗಳ ಸಂಖ್ಯೆ ಹೆಚ್ಚಾದರೆ ಮಾಡಬೇಕಾದ ಕೆಲಸ ಕಾರ್ಯ ಸುಲಲಿತವಾಗಿ ನಡೆಯದೆ ಬಹಳ ಕಷ್ಟವಾಗುತ್ತದೆ. ಆದ್ದರಂದ ತಳಿ ಅಭಿವೃದ್ಧಿ ಮಾಡಬೇಕಾದರೆ ಖಾಸಗಿಯವರು ಮುಂದೆ ಬಂದು ಕೋ-ಆಪರೇಟೀವ್ ಸೊಸೈಟಿ ಮೂಲಕ ಮಾಡಿ ಹಾಲಿನ ಸರಬರಾಯಿ ಮಾಡಬಹುದು. ಬೆಂಗಳೂರಿನಲ್ಲಿ ನಾಲ್ಕೈದು ಹಾಲು ಸರಬರಾಯಿ ಮಾಡುವ ಸೊಸೈಟಿಗಳಿವೆ. ಅಂತಹ ಸೊಸೈಟಿಗಳಿಗೆ ಸರ್ಕಾರದಂದ ಗ್ರಾಂಟು, ಸಬ್‌ಸಿಡಿ ಕೊಟ್ಟು ಹಾಲನ್ನು ಕೊಡುವ ತಳಿ ಅಭಿವೃದ್ಧಿ ಮಾಡಬಹುದು. ಈಗಾಗಲೆ ಸರ್ಕಾರದವರು ಅಮೃತ ಮಹಲ್ ಕಾವಲಿನಲ್ಲಿದ್ದ ದರೋಗರಿಗೆ ಕ್ಯಾಟಲ್ ಏಡೆಡ್ ಫಾರಂ ಎಂದು ಮಾಡಿ ಕೆಲವು ಕಾವಲನ್ನು ವಹಿಸಿ ಕೆಲವು ಹಸುಗಳನ್ನು ತಳಿ ಅಭಿವೃದ್ಧಿಗಾಗಿ ಅವರ ವಶಕ್ಕೆ ಕೊಟ್ಟಿದ್ದಾರೆ. ಅಲ್ಲಿ ಬರೀ ಹೋರಿಗಳನ್ನು ಬೆಳೆಸುತ್ತಿದ್ದಾರೆ. ಅಜ್ಜಂಪುರದ ಫಾರಂನಲ್ಲಿ ಒಳ್ಳೆಯ ಕರುಗಳನ್ನು ತೆಗೆದುಕೊಂಡು ಕೆಟ್ಟ ಕರುಗಳನ್ನು ಮಾರಿ ತೆಗೆದುಕೊಂಡದ್ದನ್ನು ಬೆಳೆಸಿ ಅವು ಅಲ್ಲೇ ಹುಟ್ಟಿದ್ದು ಎಂದು ಹೇಳಿ ಹಳ್ಳಿಕಾರ'ಬ್ರೀಡ್' ಎಂದು ಮಾರುವ ಸನ್ನಿವೇಶವಿದೆ. ಆ ರೀತಿ ನಡೆಯುತ್ತಿದೆ. ನಮ್ಮ ಮಿತ್ರರು ಅದನ್ನು ನೋಡಿಲ್ಲದಿರಬಹುದು. ಅದಕ್ಕೆ ಅಂಕಿ ಅಂಶಬೇಕಾಗಿದೆ. ಇದೇ ಸಭೆಯಲ್ಲಿ ಹಿಂದೆ ಉತ್ತರ ಸಹ ಕೊಟ್ಟಿದ್ದಾರೆ. ಮಾನ್ಯಮಿತ್ರರು ಹೇಳಿದ ಹಾಗೆ ಹುಟ್ಟುವ ಕರುಗಳಿಗಿಂತ ಸಾಯುವ ಕರುಗಳ ಸಂಖ್ಯೆ ಹೆಚ್ಚಾಗಿದೆ. ಹುರುಳಿ ವಗ್ಯೆರೆ ಖರ್ಚು ತೋರಿಸಿದರೂ ಅದು ಸರಿಯಾಗಿ ದನಗಳಿಗೆ ಉಪಯೋಗವಾಗುತ್ತದೆಯೋ ಇಲ್ಲವೋ ಅನುಮಾನವಾಗಿದೆ. ಯಾವ ವಯಸ್ಸಿನ ಕರುಗಳು ಸಾಯುತ್ತವೆಂದು ಕೇಳಿದ್ದಕ್ಕೆ ಅಂಕಿ ಅಂಶ ಹಿಂದೆ ಕೊಟ್ಟಿದ್ದರು. ಆರು ತಿಂಗಳ ಕರುಗಳೇ ಹೆಚ್ಚಾಗಿ ಸಾಯುವುದು, ವರ್ಷವಾದ ಮೇಲೆ ಸಾಯುವುದಿಲ್ಲ ಎಂದು ಹಿಂದೆ ತಿಳಿಸಿದ್ದರು. ಸತ್ತ ಕರುಗಳಿಗೆ ಲೆಕ್ಕವಿರುವುದಿಲ್ಲ; ಸಪ್ಲಿಮೆಂಟ್ ಮಾಡುತ್ತಾರೆ. ಸಾಯುವ ಸ್ಥಿತಿಯಲ್ಲಿರುವ ದನಗಳಿದ್ದರೆ ಅವನ್ನು ಹೊರಕ್ಕೆ ಕಳುಹಿಸಿ ಚೆನ್ನಾಗಿರುವುದನ್ನು ತರಿಸಿಕೊಳ್ಳುತ್ತಾರೆ. ಈ ಇಲಾಖೆಯ ಆಡಳಿತ ಈ ರೀತಿಯಿದೆ. ಈ ತಳಿ ಅಭಿವೃದ್ಧಿ ಮಾಡುವ ವಿಷಯವನ್ನೂ ಅವರು ಸ್ವಂತವಾಗಿಟ್ಟುಕೊಂಡು ಅವರೇ ಈ ಅಭಿವೃದ್ಧಿ ಕಾರ್ಯ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಅಷ್ಟು ಹೊರತಾಗಿ ಇದಕ್ಕಾಗಿ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟನ್ನು ಮಾಡಬೇಕಾದ್ದಿಲ್ಲವೆಂದೂ ಈ ಬಾಬಿಗಾಗಿ ಈಗ ಸರ್ಕಾರದವರು ಕೊಡುತ್ತಿರುವ ಸಬ್‌ಸಿಡಿ ಪದ್ಧತಿಯನ್ನೇ ಇನ್ನೂ ಕೆಲ ಕಾಲ ಹೀಗೆ ಮುಂದುವರೆಸಿಕೊಂಡು ಹೋಗುತ್ತಿದ್ದರೆ ಒಳ್ಳೆಯದಾಗಬಹುದೆಂದೂ ನಾನು ಅಭಿಪ್ರಾಯಪಡುತ್ತೇನೆ.

*Sri S. SRINIVASA IYENGAR (T.-Narasipur).—Sir, I wish to oppose this resolution partly. This resolution consists of two parts; one part is that the Government have decided to set up an Animal Husbandry Department, and the other part is that exclusive development of cattle wealth in the State is necessary. Why the Government took a decision is explained there. It is, on the basis of the recommendation of Dr. Coleman that the Government took a decision to create the Animal Husbandry Department. The second part is about this exclusive development of cattle wealth in the State. So in accordance with the first part, I would like to know whether the Government have taken any decision like that. I can presume that they have taken a decision because the demands are placed in this House under the head "Animal Husbandry". Therefore, the department has already been created, and there is no need to stress the point that a department has to be created. Secondly even under the Five-Year Plan the group head of expenditure adopted by the Planning Commission is styled as 'Animal Husbandry' and dairy'. The veterinary aspect forms a section of the animal husbandry. Cattle wealth, and livestock development is another wing. If the desire of the Hon'ble Member is to stress the view that development of live-stock....

Sri D. DEVARAJ URS. (Hunsur).—In the Budget they have styled it as 'Veterinary'.

Sri S. SRINIVASA IYENGAR.—Animal Husbandry is the broad word. Veterinary is a section of it.

Sri D. DEVARAJ URS.—According to the Budget demand, it is placed under the major head 'Veterinary'.

Sri S. SRINIVASA IYENGAR.—In the Five-Year Plan Report there is no head of expenditure as 'Veterinary'. Therefore I stated it.

The Head of the Department is Director of Veterinary and Animal Hus-

bandry Services. That is why I stated that on the basis of the recommendation of Dr. Coleman Government might have passed an order styling the Director of the Department as Director of Veterinary and Animal Husbandry, So it is for the Government to take a decision.

In respect of the Planning Commission Report, page 91, under the group head of expenditure 'Agriculture' it is stated 'Animal Husbandry and Dairying.' These are the items mentioned :

Agriculture
Horticulture
Animal Husbandry and Dairying
Co-operation
Fisheries
Others.

There is no item called 'Veterinary'. In the provision of Animal Husbandry section, there is a provision for 'Veterinary.' If, suppose we have not changed the Budget head, I stand corrected to that effect. It would be better if the Government places before us that order that is alleged to have been passed.

Secondly, I fully support the part which deals with the development of Animal Husbandry, strengthening the activity, and taking greater measures to develop live-stock. It is very necessary. There was a hot debate in respect of the establishment of Ajjampur Farm and the Estimates Committee have visited that farm. We can certainly see that the purpose for which the Ajjampur farm was established has not been fulfilled. For the supply of 50 bulls two lakhs of rupees were sanctioned. 5 or 6 years ago and they have not supplied 50 bulls. So, the purpose of establishing this farm has not been fulfilled. Every year 5 to 6 bulls have been supplied. We have a number of research officers in the Animal Husbandry Department. There is a Research Officer at Hessaraghatta, Kurikuppe and Ajjampur. But they have not functioned satisfactorily. We have in Mysore State nearly 16 lakhs of breeding-fit cows. The number of bulls that are available in Mysore does not exceed 50,000. It is not a satisfactory position. The most important things are (1) better breeding facilities, (2) fodder facilities and (3) milk dairy and these things will require a lot of assistance under every item of this head, Government have not been successful. In the Five-Year Plan, it is proposed to have one artificial insemination centre for every 5,000 cows. At that rate 500 breeding bulls are required. Then alone we can successfully provide breeding facilities to 16 lakhs of breeding-fit cows. So, the first item is whether the Government have been successful in providing the required breeding facilities for upgrading the condition of the cattle in Mysore State. The answer is that the Government have failed. Their activity should be intensified in this field. Is it not possible to intensify the activity with the existing arrangement? If that is the question, the answer is that it is possible. The only thing is we have to provide larger funds and establishment to these centres and multiply the artificial insemination centres. The yield of cows with respect to milk in advanced countries is in the order of 8,000 lbs. In Mysore it may not be more than 500 lbs. The *per capita* consumption in milk—the minimum nutritive percentage is about 10 ounces per day. In Mysore State it may not be more than 3 ounces. Large quantity of milk is required. These are the issues which can never be opposed by any one That is the object of the Second Five-Year Plan also. In the Second Five-Year Plan for the whole of India a provision of 62 crores is made. Therefore intensive action should be taken to see that the cattle wealth is upgraded.

The other observation made by Sri Nagappa was that semen is extracted from bulls whose pedigree is not much. We have some bulls and use them for artificial insemination. For such of those bulls that are imported from outside, their pedigree is watched; their progeny is watched. Therefore we cannot say that that aspect of it has been forgotten. If it is forgotten that can never be excused.

There is a lot of indifference in the working of the Department and it is necessary that it should be remedied. In respect of fodder, no work has been done. Nobody seems to have taken any pain to know the nutritive value of the fodder and percentage to be sup-

(SRI S. SRINIVASA IYENGAR.)

plied to the cattle. I can say that in Mysore majority of the cattle do not yield more than one seer a day. So, this is a position which is to be highly regretted.

Sri D. DEVARAJ URS.—The subject matter is whether this department should be bifurcated or whether it should be kept as it is. We do understand and appreciate the Hon'ble Member's contention that all these things that have been stated should be done. But can we achieve it by continuing the Department as it is or to achieve this whether the Department should be bifurcated as contemplated in the resolution, is the point. Will the Hon'ble Member enlighten us on that point?

Mr. SPEAKER.—The Hon'ble Member has exceeded the time limit.

2 P.M.

Sri S. SRINIVASA IYENGAR.—'Exclusive Development of cattle wealth' is the wording used in the Resolution. How that exclusive development can be achieved is a point which I can dwell upon. Whether that can be done with the existing department is a matter which I should have an opportunity to substantiate. I think the House will not expect me to say that in one word without substantiating my view-point. However, as the Hon'ble Member has put it very correctly and as the Hon'ble Speaker has reminded me that my time-limit has besn exceeded, I wish to conclude by saying that the Department as it is can do this work provided it works more efficiently.

ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಪಶುಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರವಾಗಿ ವೆಟರಿನರಿ ಇಲಾಖೆಯಿಂದ ಸಂಪದಭಿವೃದ್ಧಿ ಇಲಾಖೆಯನ್ನು ಬೇರ್ಪಡಿಸಬೇಕೆಂದು ಈ ನಿರ್ಣಯದಲ್ಲಿರುವ ಹಾಗೆ ಕಾಣುತ್ತದೆ. ನಾನು ಈ ವಿಷಯದ ಮೇಲೆ ಮಾತನಾಡಬೇಕೆಂದಿರಲಿಲ್ಲ. ಆದರೆ ಶ್ರೀಮಾನ್ ಭೀಮಪ್ಪನಾಯಕರು ಮಾತನಾಡಿದಾಗ ನನಗೂ ಮಾತನಾಡಬೇಕೆಂದೆನ್ನಿಸಿತು. ನನಗೆ ಗೊತ್ತಿರುವ ಹಾಗೆ ವ್ಯವಸಾಯ ಇಲಾಖೆ, ವೆಟೆರಿನರಿ ಇಲಾಖೆ ಇವೆರಡೂ ಹಿಂದೆ ಒಂದೇ ಇಲಾಖೆಯಾಗಿದ್ದುವು. ಬಹಳ ವರ್ಷಗಳು ಇವೆರಡೂ ಒಂದೇ ಇಲಾಖೆಯಾಗಿದ್ದು ಬಹಳ ದಕ್ಷತೆಯಿಂದ ಕೆಲಸಮಾಡಿಕೊಂಡು ಹೋಗುತ್ತಿದ್ದುವು. ವ್ಯವಸಾಯ ಇಲಾಖೆ ವ್ಯಾಪಾರಕ್ಕೆ ಇಳಿಯಿತು. ವೆಟೆರಿನರಿ ಇಲಾಖೆ ಸಂಶೋಧನಾ ಕ್ಷೇತ್ರಗಳನ್ನು ಮಾಡಿಕೊಂಡು ಬಂದಿತು. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರೂ ಮತ್ತು ಭೀಮಪ್ಪ ನಾಯಕ್ ಅವರು ಹೇಳಿದ ಹಾಗೆ ನಮಗೆ ಹಣ ಖರ್ಚಾಗುತ್ತಿರುವುದು ಮಾತ್ರ ಕಾಣುತ್ತಿದೆ. ನೂರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಪಶು ಸಂಪತ್ತನ್ನು ಅಭಿವೃದ್ಧಿಪಡಿಸುತ್ತಿರುವುದು ಇಲಾಖೆಯೋ ಅಥವಾ ಜನಾಂಗವೇ ಎಂಬುದನ್ನು ನ್ಯಾಯವಾಗಿ ಯೋಚನೆ ಮಾಡಬೇಕಾಗಿದೆ. ಪಶು ಸಂಪತ್ತನ್ನು ಮೈಸೂರು ದೇಶದಲ್ಲಿ ನಮ್ಮ ಜನರು ಅಭಿವೃದ್ಧಿ ಪಡಿಸಿದ್ದಾರೆ; ಅದರ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿ ಅದನ್ನು ಅಭಿವೃದ್ಧಿ ಪಡಿಸಬೇಕು ಎನ್ನುವ ದೃಷ್ಟಿಯಿಂದ ನಮ್ಮವರು ಕೆಲಸಮಾಡಿದ್ದಾರೆ ಎಂದು ನಾವು ಹೆಮ್ಮೆ ಪಡಬೇಕಾಗಿದೆ. ಬೆಂಗಳೂರು ಜಿಲ್ಲೆ, ತುಮಕೂರು ಜಿಲ್ಲೆ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ಈ ನಾಲ್ಕು ಜಿಲ್ಲೆಗಳಲ್ಲಿ ಪಶು ಸಂಪತ್ತನ್ನು ಎಷ್ಟರ ಮಟ್ಟಿಗೆ ಅಭಿವೃದ್ಧಿ ಪಡಿಸಿದ್ದಾರೆಂದರೆ ಅದು ಲೋಕ ವಿಖ್ಯಾತವಾಗಿರುವ ವಿಷಯವಾಗಿದೆ. ನಮ್ಮ ಸರ್ಕಾರದವರು ಈಗ ಪಶುಸಂಪತ್ತಿನ ವಿಷಯದಲ್ಲಿ ಎರಡು ಭಾಗವನ್ನಾಗಿ ಮಾಡಿ ಹಾಲನ್ನು ಹೆಚ್ಚಿಗೆ ಉತ್ಪತ್ತಿ ಮಾಡತಕ್ಕ ಯೋಜನೆಯನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ಆದರೆ ನಮ್ಮ ಜನಗಳು, ನಾವು ಅವರ ಮೇಲೆ ಎಷ್ಟೇ ಒತ್ತಾಯ ಮಾಡಿದರೂ ಕೂಡ, ಎಷ್ಟೇ ಅನುಭವವನ್ನು ತುಂಬಿದರೂ ಕೂಡ ಕರುಗಳನ್ನು ಉತ್ಪತ್ತಿ ಮಾಡತಕ್ಕ ವಿಷಯಕ್ಕೆ ಗಮನ ಕೊಡತಕ್ಕದನ್ನು ಒಂದು ಭಾಗವಾಗಿ ಪರಿಗಣಿಸಿ, ಹಾಲಿನ ಉತ್ಪತ್ತಿ ಕಡೆಗೆ ಗಮನ ಕೊಡುವುದನ್ನು ಮತ್ತೊಂದು ಭಾಗವಾಗಿ ಪರಿಗಣಿಸಿದ್ದಾರೆ. ಒಂದು ಕಡೆ ಹಾಲಿನ ಉತ್ಪತ್ತಿಯೂ ಆಗಬೇಕು, ಮತ್ತೊಂದು ಕಡೆ ಬಹಳ ಉತ್ತಮವಾದ ಕರುಗಳೂ ಉತ್ಪತ್ತಿ ಯಾಗಬೇಕು ಎನ್ನುವ ವಿಷಯಕ್ಕೆ ನಮ್ಮ ಜನಗಳು ಹೆಚ್ಚು ಗಮನ ಕೊಡುತ್ತಿಲ್ಲ. ಅವರಿಗೆ ಅದು ಹಿಡಿಸಲೂ ಇಲ್ಲ. ಕಾರಣವೇನೆಂದರೆ, ಒಳ್ಳೆಯ ಕರುಗಳನ್ನು ಹಾಕತಕ್ಕ ಹಸುವಿನಲ್ಲಿ ಹೆಚ್ಚಿಗೆ ಹಾಲನ್ನು ಕರೆಯುತಕ್ಕ, ಒಂದು ವಿಧಾನವನ್ನು ಕಂಡುಹಿಡಿದು artificial insemination ನಿಂದ ಎಷ್ಟೇ ಪ್ರಯೋಗಗಳನ್ನು ಮಾಡಿದ್ದರೂ ಕೂಡ, ಅದನ್ನು ಜನರು ಲೆಕ್ಕ ಮಾಡುತ್ತಿಲ್ಲ. ಕಾರಣವಿಷ್ಟೆ. ತಾನು ನೇರವಾಗಿ ಹೋರಿಯನ್ನು ನೋಡಿ, ಆ ಹೋರಿಯನ್ನು ಉಪಯೋಗಿಸಿ, ಆ ಹೋರಿಯಿಂದ ಕರುವನ್ನು ಇಳಿಸತಕ್ಕ ಪ್ರಯತ್ನ ಮಾಡುತ್ತಾನೆಯೇ ಹೊರತು, ಎಷ್ಟೇ ಫಾಸಲೆ ಯಾಗಲಿ, 10-20 ಮೈಲಿ ಫಾಸಲೆ ಯಾಗಲಿ ತನಗೆ ಯಾವ ಹೋರಿ ಚೆನ್ನಾಗಿದೆ ಎಂದು ತಿಳಿದಿದೆಯೋ ತನಗೆ ಯಾವ ಹೋರಿಯ ಮೇಲೆ ಇಚ್ಛೆ ಇದೆಯೋ ಆ ಹೋರಿಯಿಂದ ಕರುವನ್ನು ಇಳಿಸುವುದಕ್ಕೆ ಇಷ್ಟಪಡುತ್ತಾನೆಯೇ ಹೊರತು ತಾನು ಕಣ್ಣಿನಿಂದ ನೋಡದೆ ಇರತಕ್ಕ ಹೋರಿಯಿಂದ ಕರುವನ್ನು ಇಳಿಸುವುದಕ್ಕೆ ಇಷ್ಟಪಡುವುದಿಲ್ಲ. ಹೀಗೆ ಈ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರಿಂದ ಉತ್ತಮ ಮಟ್ಟದ ಕರುಗಳನ್ನು ಪಡೆಯುತ್ತಿದ್ದಾರೆ. ಇಲಾಖೆಯವರು ಉತ್ತಮವಾದ ಹೋರಿಗಳನ್ನು ರೈತನಿಗೆ ಒದಗಿಸಿಕೊಡಿ ಎಂದರೆ ಈಗ ಆ ರೀತಿ ಮಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಹಳ್ಳಿಕಾರು, ಅಮೃತಮಹಲ್, ಇತ್ಯಾದಿ ಉತ್ತಮವಾದ ಹೋರಿಗಳನ್ನು ರೈತರಿಗೆ ಒದಗಿಸಿಕೊಡಿ ಎಂದರೆ ಅಷ್ಟನ್ನೂ ಕೂಡ ಮಾಡುವುದಕ್ಕೆ ಅವರು ಸಿದ್ಧವಾಗಿಲ್ಲ. ಇತ್ತೀಚಿಗೆ, ಅಂದರೆ 3-4 ವರ್ಷಗಳಿಂದ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಜನರು ಹಣದ ಅಭಾವದಿಂದ ಅಥವಾ ಯಾವುದೋ ಕಾರಣಗಳಿಂದ ಹೋರಿಗಳನ್ನು

ಆಯಾ ಸ್ಥಳಗಳಿಗೆ ಒದಗಿಸಿಕೊಳ್ಳುವುದಕ್ಕೆ ಅನಿವಾರ್ಯವಾಗಿ ಉತ್ತಮವಾದ ತಳಿಯನ್ನು ಅಭಿವೃದ್ಧಿ ಮಾಡಿಕೊಳ್ಳಲು ಕೊರತೆಯಾಗಿದೆ. ಸಂಶೋಧನಾ ಕ್ಷೇತ್ರಗಳಿಂದ ಖಂಡಿತವಾಗಿಯೂ ಹೆಚ್ಚು ಅನುಕೂಲವಾಗಿಲ್ಲವೆಂದು ಹೇಳಬಹುದು. ನಾನೊಮ್ಮೆ ಬಳ್ಳಾರಿ ಜಿಲ್ಲೆಯಲ್ಲಿರುವ ಕುರಿಕುಪ್ಪೆ ಸ್ಟೇಷನ್‌ಗೆ ಹೋಗಿದ್ದೆ. ಇಂಡಿಯಾ ಸರ್ಕಾರದವರು ಇದಕ್ಕೆ ಹೇರಳವಾದ ಹಣವನ್ನು ಖರ್ಚು ಮಾಡಿದ್ದಾರೆ. ಅಲ್ಲಿದ್ದ ಹಸುಗಳನ್ನೂ ಮತ್ತು ಹೋರಿಗಳನ್ನೂ ನೋಡಿದರೆ ನಮ್ಮ ರೈತರ ಮನೆಗಳಲ್ಲಿ ಅದಕ್ಕಿಂತಲೂ ನೋಡುವುದಕ್ಕೆ ಚೆನ್ನಾಗಿರುವ' ಲಾಯಖ್ಖಾಗಿರುವ ಕರುಗಳು, ಹಸುಗಳು ಮತ್ತು ಹೋರಿಗಳನ್ನು ಇಟ್ಟುಕೊಂಡಿರುತ್ತಾರೆ. ಸಂಶೋಧನಾ ಕ್ಷೇತ್ರಗಳಲ್ಲಿ ಇಂಥ ತಳಿಗಳನ್ನು ಇಟ್ಟುಕೊಂಡು ದೇಶಕ್ಕೆ ಅವನ್ನು ಹಂಚುತ್ತಾರಲ್ಲ, ಅವುಗಳನ್ನು ಮಾದರಿಯಾಗಿಟ್ಟು ಕೊಂಡಿದ್ದಾರಲ್ಲ ಎನ್ನಿಸಿತು. ಅವನ್ನು ನೋಡಿದರೆ ನಮ್ಮ ರೈತರಾರೂ ಒಪ್ಪುವುದಿಲ್ಲ, ಅಂಥವನ್ನು ಕುರಿಕುಪ್ಪೆಯಲ್ಲಿಟ್ಟು ಕೊಂಡಿದ್ದಾರೆ. ಸಂಶೋಧನಾ ಕ್ಷೇತ್ರಗಳು ಎಲ್ಲಿ ಸರಿಯಾದ ಉತ್ತಮವಾದ ತಳಿ ಇದೆಯೋ ಅದನ್ನು ಪಡೆದು, ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡತಕ್ಕ ಯೋಜನೆಯನ್ನು ವಿಸ್ತಾರ ಮಾಡಿಕೊಂಡು ಹೋಗುವುದಕ್ಕೆ ಸಹಾಯಕವಾಗಿರಬೇಕೇ ಹೊರತು ಇದಕ್ಕೇ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿ ಅದಕ್ಕೆ ಪ್ರತ್ಯೇಕವಾಗಿ ಹಣವನ್ನು ಒದಗಿಸಿದರೆ ಅದರಿಂದ ದೇಶಕ್ಕೆ ಎಷ್ಟರಮಟ್ಟಿಗೆ ಉತ್ತಮವಾದ ತಳಿಯನ್ನು ಒದಗಿಸಿಕೊಡುತ್ತಾರೆ ಮತ್ತು ಇದರಿಂದ ಎಷ್ಟು ಅಭಿವೃದ್ಧಿಯಾಗುತ್ತದೆ ಎನ್ನುವುದು ಬಹಳ ಅನುಮಾನಾಸ್ಪದವಾದ ವಿಷಯ. ಇದು ಅನಗತ್ಯವಾದ ವಿಷಯ. ತಾತ್ಕಾಲಿಕವಾಗಿ ಅನಗತ್ಯ. ಸರ್ಕಾರದವರು ಈ ಸಂಶೋಧನಾ ಕ್ಷೇತ್ರಗಳಿಗೆ ಖರ್ಚು ಮಾಡುವ ಹಣದಲ್ಲಿ ಅರ್ಧಭಾಗವನ್ನಾದರೂ ರೈತನಿಗೆ ಉತ್ತಮವಾದ ಹೋರಿಗಳನ್ನು ಒದಗಿಸುವುದಕ್ಕೆ ಖರ್ಚು ಮಾಡಿದರೆ ಅದರಿಂದ ದೇಶಕ್ಕೆ ಉತ್ತಮವಾದ ಪ್ರತಿಫಲ ಉಂಟಾಗುತ್ತದೆ. ಆದರೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಯೋಗವನ್ನು ಹೆಚ್ಚಿಗೆ ಮಾಡಬಾರದೆಂದು ಹೇಳುತ್ತಿಲ್ಲ. ಸಾಧಾರಣವಾಗಿ ಪಟ್ಟಣಗಳಲ್ಲಿ ಮೊದಲು. . . .

ಅಧ್ಯಕ್ಷರು.—ಈಗ ಬೇರೆ ಇಲಾಖೆ ಇರಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆಯಮೇಲೆ ಮಾತ್ರ ದಯವಿಟ್ಟು ಮಾತನಾಡಿ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದಕ್ಕೆ ಪ್ರತ್ಯೇಕ ಇಲಾಖೆ ಬೇಕಾಗಿಲ್ಲವೆನ್ನುವುದಕ್ಕೆ ಈ ಅಂಶಗಳನ್ನು ಹೆಚ್ಚು ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕೆ ಪ್ರತ್ಯೇಕ ಇಲಾಖೆ ಬೇಕಾಗಿಲ್ಲ. ಶ್ರೀಮಾನ್ ಭೀಮಪ್ಪ ನಾಯಕರು ಬೇಕಾದಷ್ಟು ವಿಷಯಗಳನ್ನು ಆಗಲೇ ತಿಳಿಸಿದ್ದಾರೆ. ನಾನು ಮತ್ತೆ ಅದನ್ನು ಹೇಳಲು ಇಚ್ಛಿಸುವುದಿಲ್ಲ.

ಈಗ ಅಜ್ಜಂಪುರದ ಸ್ಟೇಷನ್‌ನಲ್ಲಿರುವ ಒಬ್ಬ ಅಧಿಕಾರಿಗಳು ಕುಣಿಗಲ್ ಸ್ಟಡ್‌ಫಾರಂನಲ್ಲಿ ಕೆಲಸದ ಸೂಪರ್‌ವಿಷನ್ ಮಾಡಲು ಸೂಪರಿಂಟೆಂಡೆಂಟ್ ಆಗಬೇಕೆಂದು ಇಷ್ಟಪಟ್ಟು ಸರ್ಕಾರಿ ಆರ್ಡರ್ ಕೂಡ ಆಗುವುದರಲ್ಲಿತ್ತು. ಆಗ ನಾವು ಮಧ್ಯೆ ಪ್ರವೇಶಿಸಿ ಲಕ್ಷಾಂತರ ರೂಪಾಯಿಗಳ ಪ್ರಾಣಿಗಳಿರತಕ್ಕ ಸ್ಟಡ್‌ಫಾರಂ ಇವರ ಅಧೀನಕ್ಕೆ ಕೊಟ್ಟರೆ ಒಂದೇ ದಿನದಲ್ಲಿ ಅದನ್ನು ಮುಗಿಸುತ್ತಾರೆ, ಅದನ್ನು ಅಲ್ಲಿಯೇ ಇದ್ದು ನೋಡಿಕೊಳ್ಳುವವರೊಬ್ಬರು ಅದನ್ನು ಸೂಪರ್‌ವೈಜ್ ಮಾಡುವವರು ಎಲ್ಲಿಯೋ ಇರುವ ಮತ್ತೊಬ್ಬರು, ಇದರಿಂದ ಬಹಳ ನಷ್ಟವಾಗುತ್ತದೆಂದೂ, ಅವರನ್ನು ಕುಣಿಗಲ್‌ಸ್ಟಡ್‌ಫಾರಂ ಕೆಲಸಕ್ಕೆ ನೇಮಿಸಕೂಡದೆಂದೂ ಸರ್ಕಾರದ ಗಮನಕ್ಕೆ ತಂದು ತಕ್ಷಣ ಅದನ್ನು ಸರಿಪಡಿಸಲಾಯಿತು. ನಾನು ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ, research station ಏನೋ ಒಂದು ಕಾರಣದಿಂದ ಸರ್ಕಾರದವರು ಮಾಡುತ್ತಿದ್ದಾರೆ. ಅದು ಒಳ್ಳೆಯದು. ದೇಶಕ್ಕೆ ಮಾರ್ಗದರ್ಶನವಾಗುವ ರೀತಿಯಲ್ಲಿ ಲಾಭದಾಯಕವಾಗುವ ರೀತಿಯಲ್ಲಿ ಯೋಚಿಸಿ ಆ institution ಕೆಲಸ ಮಾಡಬೇಕಾಗಿದೆ. ಈ ಶಾಖೆಯನ್ನು ಪ್ರತ್ಯೇಕಗೊಳಿಸಿ. ಅದನ್ನು ಪ್ರತ್ಯೇಕವಾಗಿಡುವುದರಿಂದ ದೇಶಕ್ಕೆ ಹೆಚ್ಚು ಲಾಭದಾಯಕವಲ್ಲವೆಂದು ಹೇಳುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಸಭೆಯ ಮುಂದೆ ಇರತಕ್ಕ ಈ ನಿರ್ಣಯದ ವಿಷಯದಲ್ಲಿ ಮಾತನಾಡಿದ ಕೆಲವು ಮಾನ್ಯ ಸದಸ್ಯರು ತಮ್ಮ ವಾದವನ್ನು ಸಮರ್ಥಿಸುವ ಬಗ್ಗೆ, ಪುಷ್ಟೀಕರಿಸತಕ್ಕ ಬಗ್ಗೆ ಕೆಲವು ಅಂಕಿಅಂಶಗಳನ್ನು ಪ್ರತಿಪಾದಿಸುತ್ತಾ ಡಾ॥ ಎಲ್. ಸಿ. ಕೋಲ್ಮನ್ ಅವರು ಕೊಟ್ಟಿರುವ ವರದಿಯನ್ನು ಪ್ರಸ್ತಾಪ ಮಾಡಿದರು. ಡಾ॥ ಎಲ್. ಸಿ. ಕೋಲ್ಮನ್ ಅವರು ಸಂಸ್ಥಾನದಲ್ಲಿ ಈಚೆಗೆ ಅವರು ಸಂಚಾರ ಮಾಡಿ—ಸಂಸ್ಥಾನ ಸರ್ಕಾರದ ಕೋರಿಕೆಯ ಮೇಲೋ ಅಥವಾ ಅವರ ಸ್ವಂತ ಇಚ್ಛೆಯ ಮೇಲೋ ಸಂಚರಿಸಿ— ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಆ ವರದಿಯಲ್ಲಿ ಒಂದು ಅಂಶವೇನಿದೆ ಎಂದರೆ, ಇತ್ತೀಚೆಗೆ ಮೈಸೂರು ಸರ್ಕಾರದವರು ತಳಿಗಳ ಅಭಿವೃದ್ಧಿ ಮತ್ತು ಜಾನುವಾರುಗಳ ಅಭಿವೃದ್ಧಿ ಕಡೆಗೆ ಹೆಚ್ಚಾಗಿ ಗಮನ ಕೊಟ್ಟಿರುವುದು ಬಹಳ ಪ್ರಶಂಸನೀಯವಾದ ವಿಚಾರವಾಗಿದೆ ಎಂದು ತಿಳಿಸಿದ್ದಾರೆ; ಮತ್ತು ಇನ್ನೂ ಸರ್ಕಾರದವರು ಏನೇನು ಕೆಲಸ ಮಾಡಬೇಕು ಎಂಬ ಸೂಚನೆಯನ್ನೂ ಕೂಡ ಕೊಟ್ಟಿದ್ದಾರೆ. ಜೊತೆಗೆ ಶ್ರೀ ಭೀಮಪ್ಪನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ಒಬ್ಬ ಅಧಿಕಾರಿಗಳ ವಿಚಾರದಲ್ಲಿ ಏನು ಹೇಳಿದರೋ ಅಷ್ಟಾಗಿ ಅದು ಸರಿಯಾದದ್ದಲ್ಲ. ಡಾ॥ ಕೋಲ್ಮನ್‌ಅವರು ಆ ಅಧಿಕಾರಿಗಳ ವಿಷಯದಲ್ಲಿ ಬಹಳ ಒಳ್ಳೆಯ ಅಭಿಪ್ರಾಯವನ್ನು ಕೊಟ್ಟು ಅವರಿಗೆ ಉತ್ತೇಜನ ಕೊಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ಆ ವಿಭಾಗದಲ್ಲಿ ಮುಂದೆ ಇನ್ನೂ ಹೆಚ್ಚಿನ ಕೆಲಸ, ಫಲದಾಯಕವಾಗತಕ್ಕ ಕೆಲಸ ಮಾಡತಕ್ಕ ಅಧಿಕಾರಿಗಳಾಗತಕ್ಕವರು ಅಜ್ಜಂಪುರ ರೀಸರ್ಚ್ ಸ್ಟೇಷನ್‌ನಲ್ಲಿರತಕ್ಕ ಡಾಕ್ಟರ್ ಚಂದ್ರಶೇಖರ್ ಎಂಬುವರು ಎಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಹೀಗಿರುವಲ್ಲಿ ಒಬ್ಬರು ಅವರಿಗೆ ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಇಲ್ಲವೆಂದೂ, ಮತ್ತೊಬ್ಬರು ಇನ್ನೊಂದು ಬಗೆಯಾಗಿಯೂ ಹೇಳುವುದು ಸರಿಯಲ್ಲ. ಅಲ್ಲದೆ ಅವರು ಅಮೆರಿಕಾಕ್ಕೆ ಹೋಗಿ ಚೆನ್ನಾಗಿ ಕೆಲಸಮಾಡಿ, ಅವರಿಂದ ಪ್ರಶಸ್ತಿಯನ್ನು ಕೂಡ ಪಡೆದು ಬಂದಿದ್ದಾರೆ. ಅಲ್ಲದೆ ಈಚೆಗೆ ಅಜ್ಜಂಪುರ ರೀಸರ್ಚ್ ಸ್ಟೇಷನ್‌ನಲ್ಲಿ ಸಂಶೋಧನಾ ಕಾರ್ಯವನ್ನು ಹೆಚ್ಚಾಗಿ ಮಾಡಿ, ಒಂದು-ಒಂದೂವರೆ ವರ್ಷಗಳಲ್ಲಿ ಬಹಳ ಪ್ರಖ್ಯಾತಿಯನ್ನು ಪಡೆದಿದ್ದಾರೆ.

ನಾನು ಅವರ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರತ್ಯೇಕವಾದ ಇಲಾಖೆ ಇರಬೇಕು ಎಂದು ಹೇಳುತ್ತಿಲ್ಲ. ಯಾಕೆಂದರೆ, ಹಿಂದೆ ವೆಟರಿನರಿ ಶಾಖೆ ಸಹ ವ್ಯವಸಾಯ ಇಲಾಖೆಯಲ್ಲಿಯೇ ಇತ್ತು. ಆದರೆ ಈಗ ಕಾಲಕ್ರಮೇಣ ಈ ವಿಷಯಕ್ಕೆ ಹೆಚ್ಚಿಗೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ, ಹೆಚ್ಚಿಗೆ ಈ ಶಾಖೆಯಲ್ಲಿ ಕೆಲಸಮಾಡಬೇಕೆಂಬ ಉದ್ದೇಶದಿಂದ 10-12 ವರ್ಷಗಳ ಹಿಂದೆ ಇದನ್ನು ಒಂದು ಪ್ರತ್ಯೇಕ ಇಲಾಖೆ

(ಶ್ರೀ ಎಲ್. ಸಿದ್ದಪ್ಪ)

ಯನ್ನಾಗಿ ಮಾಡಿದರು. ಹೀಗೆ ಮಾಡಿದ ನಂತರ, ಈಗ್ಗೆ ಐದಾರು ವರ್ಷಗಳ ಹಿಂದೆ Veterinary Department ಎಂದಿದ್ದುದನ್ನು Department of Veterinary and Animal Husbandry Services ಎಂದು Veterinary ಗಿಂತ Animal Husbandry ವಿಭಾಗಕ್ಕೆ ಹೆಚ್ಚಿಗೆ ಆಸಕ್ತಿಯನ್ನು ವಹಿಸಬೇಕೆಂದು Veterinary and Animal Husbandry ಎಂದು ಎರಡು wings ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ, ನಮ್ಮಲ್ಲಿ ಪಶು ಸಂಪತ್ತು ಅಭಿವೃದ್ಧಿಯಾಗಬೇಕು. ನಮ್ಮ ಸಂಸ್ಥಾನದಲ್ಲಿ ಇರತಕ್ಕ ಎರಡು ಪ್ರಖ್ಯಾತ ತಳಿಗಳಾದ ಹಳ್ಳಿಕಾರು ಮತ್ತು ಅಮೃತಮಹಲ್ ಈ ಎರಡು ತಳಿಗಳನ್ನೂ ಅಭಿವೃದ್ಧಿಪಡಿಸತಕ್ಕದ್ದು ಬಹಳ ಅವಶ್ಯಕ. ಹೀಗೆ ಮಾಡುವುದು ನಮ್ಮ ಸಂಸ್ಥಾನದ ಹಿತದೃಷ್ಟಿಯಿಂದ ಮಾತ್ರವಲ್ಲದೆ, ಸಂಸ್ಥಾನದಿಂದ ಹೊರಗೆ ನಮ್ಮಲ್ಲಿನ ದನಗಳನ್ನು ಕೊಂಡುಕೊಂಡು ಹೋಗುವವರಿಗೂ ಸಹಾಯವಾಗುತ್ತದೆ. ಮದರಾಸು, ಬೊಂಬಾಯಿಗಳಲ್ಲಿ ಬಹಳ ಹೆಚ್ಚಿನ ಕೆಲಸ ನಡೆದಿದೆ ಎಂದು ಕೆಲವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಆಗಿರುವ ಕೆಲಸ ಬೊಂಬಾಯಿ, ಮದರಾಸುಗಳಲ್ಲಿ ಆಗಿಲ್ಲ. ಮದರಾಸು ಮತ್ತು ಬೊಂಬಾಯಿ ಸಂಸ್ಥಾನಗಳಲ್ಲಿ ನಮ್ಮ ಸೀಮೆಯ ದನಗಳು ಹೆಚ್ಚಾಗಿ ವ್ಯಾಪಾರವಾಗಿ ನಮಗೆ ಕೋಟ್ಯಾಂತರ ರೂಪಾಯಿಗಳ ಹಣ ದೊರೆಯುತ್ತಿದೆ. ಆದುದರಿಂದ ಡಾಕ್ಟರ್ ಕೋಲ್ಮನ್‌ಅವರು ಈ ಬಗ್ಗೆ ಹೆಚ್ಚಿನ ಕೆಲಸ ಮಾಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಒಪ್ಪಿಕೊಂಡಿದ್ದೇವೆಂದು ಸರ್ಕಾರದವರು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ತಿಳಿಸಿದ್ದಾರೆ. ಆ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನೆಲ್ಲ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವಾಗಿ ಹೇಳುತ್ತೇನೆ. ಪ್ರತ್ಯೇಕವಾದ ಒಂದು ಇಲಾಖೆ ಮಾಡಬೇಕೆಂದು ಮಾನ್ಯ ಸದಸ್ಯರು ಕೆಲವರು ಅಭಿಪ್ರಾಯಪಟ್ಟಿರುವುದನ್ನು ನಾನು ಖಂಡಿತವಾಗಿ ಒಪ್ಪುವುದಿಲ್ಲ. ಈ Animal Husbandry wing ಬಲಪಡಿಸಲು ಸರ್ಕಾರದವರು ಡಾ॥ ಕೋಲ್ಮನ್‌ಅವರ ವರದಿಯಲ್ಲಿರತಕ್ಕ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವೆನ್ಯೂ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸ್ವಾಮಿ, ಇಲ್ಲಿ ಈ ಠರಾವಿನಲ್ಲಿ ಏನು ವಿಷಯಗಳನ್ನು ನಮೂದು ಮಾಡಿದ್ದಾರೋ ಅಷ್ಟಕ್ಕೆ ಮಾತ್ರ ಉತ್ತರ ಕೊಡುವುದು ಸಾಧುವಾದುದೆಂದು ಕಾಣುತ್ತದೆ. ನಿರ್ಣಯದಲ್ಲಿ ಈ ರೀತಿ ಹೇಳಿದೆ:—"This Assembly is of the opinion that in accordance with the decision of Government on the recommendation of Dr. L. C. Coleman pertaining to Live-Stock Development in the State, it is essential to create a separate department of Animal Husbandry from Veterinary for the exclusive development of cattle wealth in the State." ಡಾ॥ ಕೋಲ್ಮನ್‌ರವರ ವರದಿಯಿಂದ ಯಾವುದಾದರೂ ಒಂದು ವಾಕ್ಯ ತೆಗೆದುಕೊಂಡು ಅದಕ್ಕೆ ಅಲಾಯಿದ ಗಮನ ಕೊಡಿ ಎಂದು ಹೇಳುವುದು ಸರಿಯಲ್ಲ. ಸರ್ಕಾರದವರು ಆ ವರದಿಯನ್ನೆಲ್ಲಾ ಪರಿಶೀಲಿಸಿದ್ದಾರೆ. ಡಾ॥ ಕೋಲ್ಮನ್‌ಅವರು ಅವರ ವರದಿಯಲ್ಲಿ 'The organisation of the Department of Agriculture, Animal Husbandry and Horticulture' ಎಂಬ ಹೆಡ್ಡಿಂಗ್ ಹಾಕಿ ನಾಲ್ಕು ವಾಕ್ಯ ಹೇಳಿದ್ದಾರೆ. ಅದನ್ನು ಓದಿದರೆ ಅವರ ಅಭಿಪ್ರಾಯ ಗೊತ್ತಾಗುತ್ತದೆ. ಅದು ಈ ರೀತಿಯಿದೆ:—"The three departments-Agriculture, Animal Husbandry and Horticulture in all Western countries with which I am familiar are three sections in the Agricultural Department They were united for a considerable period in Mysore. All three have as their function improvement of agriculture and it seems obvious that to maintain efficiently and save waste, their activity should be very closely co-ordinated. The only way of bringing co ordination is to place them all under a common head"

ಡಾ॥ ಕೋಲ್ಮನ್‌ರವರು ಹೇಳುವುದನ್ನೂ ಶ್ರೀ ನಾಗಪ್ಪಶೆಟ್ಟರು ಹೇಳುವುದನ್ನೂ ಒಂದರ ಪಕ್ಕದಲ್ಲಿ ಒಂದನ್ನು ಇಟ್ಟು ನೋಡಿದರೆ ಯಾವ ರೀತಿ ಅರ್ಥವಾಗುತ್ತದೆಂಬುದು ತಮಗೇ ಗೊತ್ತಾಗುತ್ತದೆ. ಅನಿಮಲ್ ಹಸ್ಬೆಂಡ್ರಿ ವೆಟರ್ನರಿ ಇಲಾಖೆಯ ಒಂದು ಭಾಗ. ಪಶು ಸಂಪತ್ತನ್ನು ಬೆಳೆಸಬೇಕು, ಇರುವುದನ್ನು ಚೆನ್ನಾಗಿ ಕಾಪಾಡಬೇಕು ಮತ್ತು ಅದರ ತಳಿಯನ್ನು ನಾನಾ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು. ಇವೆರಡನ್ನೂ ಉತ್ತಮದರ್ಜೆಯಲ್ಲಿ ನಡೆಸಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದನ್ನು ಉತ್ತಮದರ್ಜೆಯಲ್ಲಿ ನಡೆಸಬೇಕಾದರೆ ಉತ್ತಮ ರೀತಿಯಲ್ಲಿ ತರಪೇತಾದ ಜನ, ರೀಸರ್ಚ್ ಮಾಡಲು ಶಕ್ತಿಯಿರುವ ಜನ, ಒಳ್ಳೆಯ ಸಲಹೆ ಕೊಡುವವರು, ಉತ್ಸಾಹಿಗಳು ಆದವರು ಇಂಥವರನ್ನು ನೇಮಕ ಮಾಡಬೇಕಾದದ್ದು ಅವಶ್ಯಕ. ಈಗ ಅಷ್ಟನ್ನು ಮಾತ್ರ ಹೇಳಿದ್ದರೆ ಖಂಡಿತವಾಗಿ ಒಪ್ಪಿಕೊಳ್ಳುತ್ತಿದ್ದೆ. ಪಶು ಸಂಪತ್ತನ್ನು ವೃದ್ಧಿಪಡಿಸಬೇಕು, ಈಗಿರುವ ಪದ್ಧತಿಯಲ್ಲಿ ಅವ್ಯವಸ್ಥೆಯಿದೆ, ಅದನ್ನು ಸರಿಪಡಿಸಬೇಕು ಎಂಬ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಲೋಪದೋಷಗಳೇನಿವೆಯೋ ಅವನ್ನು ಒಪ್ಪಿಕೊಂಡು ಯಾವ ರೀತಿ ಉತ್ತಮಪಡಿಸಬೇಕೆಂದು ಸೂಚಿಸಿದ್ದಾರೋ ಆ ರೀತಿ ಮಾಡಲು ಪ್ರಯತ್ನಪಡುವುದು ಸೂಕ್ತವೆಂದು ಸೂಚಿಸಿ ಅವರ ಸಲಹೆಗಳನ್ನು ಬಹಳ ವಿಶ್ವಾಸದಿಂದ ಸ್ವಾಗತಿಸುತ್ತೇವೆ. ಈಗ ನಿರ್ಣಯದಲ್ಲಿ ಹೇಳಿರುವ ರೀತಿಯಲ್ಲಿ ಎರಡು ಇಲಾಖೆ ಮಾಡಿದರೆ ಅದರ ಪರಿಣಾಮವೇನೆಂಬುದನ್ನು ಮಾನ್ಯ ಸದಸ್ಯರು ಯೋಚನೆಮಾಡಬೇಕು. ಈಗಾಗಲೆ ವೈದ್ಯಇಲಾಖೆ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಎಂದು ಬೇರೆ ಬೇರೆಯಾಗಿರುವ ಎರಡು ದೊಡ್ಡ ಇಲಾಖೆಗಳನ್ನು ಸೇರಿಸಿ ಒಂದು ಇಲಾಖೆ ಮಾಡಲು ಸಾಧ್ಯವೆ ಎಂದು ಯೋಚನೆ ಮಾಡುತ್ತಿದ್ದೇವೆ. ಈಗ ಖರ್ಚು ಹೆಚ್ಚುತ್ತಿದೆ, ಕಡಮೆ ಮಾಡಬೇಕು ಎಂದು ಇರುವಾಗ ಇನ್ನೊಂದು ಪ್ರತ್ಯೇಕ ಇಲಾಖೆ ಮಾಡುವುದರಿಂದ ಖರ್ಚು ಹೆಚ್ಚುತ್ತದೆ. ವೆಟ

ನರಿ ಇಲಾಖೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಬ್ಬೊಬ್ಬ ಇನ್ಸ್‌ಪೆಕ್ಟರಿದ್ದಾರೆ. ಅನಿಮಲ್ ಹಸ್ಬೆಂಡ್ರಿ ಇಲಾಖೆ ಬೇರೆಯಾದರೆ ಪುನಃ ಸುಮಾರು 80 ಜನ ಇನ್ಸ್‌ಪೆಕ್ಟರುಗಳ ನೇಮಕವಾಗಬೇಕು. ಆಫೀಸಿಗೆ ಬೇಕಾದ ಟೈಪಿಸ್ಟುಗಳು ಮುಂತಾದ ಸಿಬ್ಬಂದಿ ಆಗ ಬೇಕು. ಆದ್ದರಿಂದ, it is not a practical proposition. But I do agree with the Hon'ble Members who supported this resolution that there is very great need to speed up development and strengthen the Animal Husbandry. I do not think a big argument is needed. Therefore, I hope the Hon'ble Member will kindly withdraw the resolution.

The resolution was, by leave, withdrawn.

No. 2—Perennial supply of water for portion of Atchkat under Bhadra Project Canals.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ). — ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ :

"ಪರಮಾವಧಿ ಪ್ರಮಾಣದಲ್ಲಿ ರೈತರು ಕಬ್ಬು ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆಯಿಸ ಲನುಕೂಲವಾಗಿರುವಂತೆ, ದೇಶಕ್ಕೆ ಭದ್ರಾ ಜಲಾಶಯದಿಂದ ಸಂಪೂರ್ಣವಾದ ಪ್ರಯೋಜನ ವನ್ನು ಹೊಂದಲು ಸುರಂಗದವರೆಗೆ ಎಡ ದಡದ ನಾಲೆಯ ಮತ್ತು ಬಲ ದಡದ ನಾಲೆಯ ಕೆಳಗಿರ ತಕ್ಕ ಕನಿಷ್ಠ ಪಕ್ಷ 1/3 ಭಾಗದಷ್ಟು ಅಚ್ಚುಕಟ್ಟು ಪ್ರದೇಶಕ್ಕಾದರೂ ಸದಾಕಾಲವೂ ನೀರು ಸರ ಬರಾಯಿಯಾಗುವಂತೆ ಸೌಲಭ್ಯಗಳನ್ನು ಕಲ್ಪಿಸ ಬೇಕೆಂದು ಈ ಸಭೆಯವರು ಅಭಿಪ್ರಾಯ ಪಡು ತ್ತಾರೆ."

ಇದು ತರೀಕೆರೆ, ಭದ್ರಾವತಿ ಮತ್ತು ಶಿವಮೊಗ್ಗ ಈ 3 ತಾಲ್ಲೂಕುಗಳಲ್ಲಿನ ರೈತರಿಗೆ ಸಂಬಂಧಪಟ್ಟ ಬಹಳ ಮುಖ್ಯವಾದ ಒಂದು ಪ್ರಶ್ನೆ. ತಮಗೆಲ್ಲಾ ತಿಳಿದಿರುವ ಹಾಗೆ ಭದ್ರಾ ಜಲಾಶಯ ನಿರ್ಮಾಣವಾದ ಮೇಲೆ ಸುಮಾರು 2 ಲಕ್ಷ 30 ಸಾವಿರ ಎಕರೆ ಪ್ರದೇಶಕ್ಕೆ ನೀರು ಸುಮಾರು 1859ನೆಯ ಇಸವಿಯಿಂದ ಒದಗು ತ್ತಿದೆ. ಈ ನೀರು ಭದ್ರಾವತಿ ಮತ್ತು ತರೀಕೆರೆ ಪ್ರದೇಶ ಮತ್ತು ಚಿತ್ರದುರ್ಗದ ಅಭಾವ ಪ್ರದೇಶಗಳಿಗೆ ಹೆಚ್ಚಿಗೆ ಸಹಾಯ ಮಾಡುತ್ತಿದೆ. ಇಲಾಖೆಯವರು ಸುಮಾರು 15 ವರ್ಷಗಳ ಹಿಂದೆ ಬತ್ತದ ಬೆಳೆಗೆ ತುಂಬ ಪ್ರೋ ತ್ಸಾಹ ಕೊಡಬೇಕಾದಂಥ ಸನ್ನಿವೇಶದಲ್ಲಿ ಸಾಯಿಲ್ ಸರ್ವೆ ಎಂದು ಮಾಡಿ ಕಬ್ಬು ಮುಂತಾದ ವಾಣಿಜ್ಯ ಬೆಳೆಗಳನ್ನು ಪ್ರೋತ್ಸಾಹಿಸಿದರು. ಆಗ ಕಬ್ಬು ಇಷ್ಟು ಪ್ರದೇಶದಲ್ಲಿ ಬೆಳೆಯಬೇಕೆಂದು ನಿರ್ಧಾರ ಮಾಡಿದರು. ಆದರೆ ಈ ದಿವಸ ಬತ್ತದ ಬೆಳೆ ಕಡಿಮೆಯಾಗುತ್ತಿದೆ ಯೆಂದು ಕಳೆದ ವರ್ಷ ಬತ್ತಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವ ಯೋಜನೆ ಮಾಡಿದರು. ಇನ್ನು ಮುಂದೆ ಅನೇಕ ನೀರಾವರಿ ಯೋಜನೆಗಳು ತಯಾರಾಗಲಿರುವು ದರಿಂದ ದೇಶದಲ್ಲಿ ಬತ್ತ ಹೆಚ್ಚಾಗಿ ಬೆಳೆಯಾಗುವುದು ಖಂಡಿತ. ಹಾಗಿರುವಾಗ ಸಾಧ್ಯವಾದಷ್ಟು ಕಬ್ಬು, ಆಲೂಗಡ್ಡೆ ಮೊದಲಾದ ವಾಣಿಜ್ಯ ಬೆಳೆಗಳ ಬೆಳವಣಿ ಗೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾದದ್ದು ಅತ್ಯಗತ್ಯ. ಈ ದೃಷ್ಟಿಯಿಂದಲೇ ಶಿವಮೊಗ್ಗಾದಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ. ತರೀಕೆರೆ ಮತ್ತು ಭದ್ರಾ ವತಿ ಮಧ್ಯೆ ಒಂದು ಕಡೆ ಸಕ್ಕರೆ ಕಾರ್ಖಾನೆ ಸ್ಥಾಪನೆ ಯಾಗಬೇಕೆಂದು ಮನವಿ ಸಲ್ಲಿಸಿದ್ದಾರೆ. ಅಲ್ಲದೆ ಈ ವಿಷಯದಲ್ಲಿ ಎಷ್ಟೇ ಪ್ರತಿಭಟನೆ ಬಂದರೂ ನಮ್ಮ ಮಾನ್ಯ ಸಚಿವರು ಬಹಳ ಆಸಕ್ತಿಯಿಂದ ಕೂಲಂಕಷವಾಗಿ ಪರ್ಯಾಲೋಚಿಸಿ ಪಂಚವಾರ್ಷಿಕ ಯೋಜನೆಯಲ್ಲಿ ಹರಿ ಹರದ ಕೊಡಗನೂರು ಪ್ರದೇಶದಲ್ಲೂ ಮತ್ತು ತರೀಕೆರೆ-ಭದ್ರಾವತಿ ಪ್ರದೇಶದಲ್ಲೂ ಸಕ್ಕರೆ ಕಾರ್ಖಾನೆ ಸ್ಥಾಪಿ ಸಲು ಅವಕಾಶ ಕಲ್ಪಿಸಿದ್ದಾರೆ. ಅದಕ್ಕಾಗಿ ಈ ಭಾಗದ ಜನರ ಪರವಾಗಿ ಈ ಸಂದರ್ಭದಲ್ಲಿ ಕೃತಜ್ಞತೆ ಸೂಚಿಸುತ್ತೇನೆ. ಈಗ ಇಲಾಖೆಯವರು ಹಿಂದೆ ನಿಗದಿ ಮಾಡಲ್ಪಟ್ಟ ಪ್ರದೇಶಗಳಿಗೆ ಮಾತ್ರ ನೀರನ್ನು ಸದಾ ಕಾಲ ಒದಗಿಸುತ್ತೇವೆ, ಬಾಕಿ ಪ್ರದೇಶಕ್ಕೆ ಸಾಧ್ಯವಿಲ್ಲ ಎಂದು ಹೇಳುವುದು ಕಂಡುಬರುತ್ತಿದೆ. ಕಬ್ಬು ಮೂರು ವರ್ಷಗಳಿಗೊಮ್ಮೆ ಬೆಳೆಯುವುದರಿಂದ ಈ ಅಚ್ಚುಕಟ್ಟು ಪ್ರದೇಶದಲ್ಲಿ 1/3 ಭಾಗಕ್ಕಾದರೂ ಸದಾ ನೀರು ಬರು ವಂತೆ ಮಾಡಿದರೆ ಈ ಪ್ರಾಜೆಕ್ಟಿನ ಸಂಪೂರ್ಣ ಪ್ರಯೋ ಜನವನ್ನು ಈ ಭಾಗದ ಜನರು ಹೊಂದಿದಂತಾಗುತ್ತದೆ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ನಾನು "ಸುರಂಗದವರೆಗೆ" ಎಂಬ ಪದ ಪ್ರಯೋಗ ಮಾಡಿರು ವುದಕ್ಕೆ ಕಾರಣ ಸುರಂಗದ ಮುಂದಕ್ಕೆ ಹೋದ ಹಾಗೆ ನೀರು ಇವಾಪರೇಟ್ ಆಗಲು ಅವಕಾಶವಿದೆ; ಎರಡ ನೆಯ ಬೆಳೆಗೆ ಕೊನೆಯವರೆಗೆ ನೀರನ್ನೊದಗಿಸಲು ಸಾಧ್ಯವಿದೆಯೆ, ಇಲ್ಲವೆ ಎಂಬುದನ್ನು ಇಂಜನಿಯರು ಪರಿಶೀಲಿಸಬೇಕಾಗಿದೆ. ಇಡೀ ಪ್ರಾಜೆಕ್ಟಿನ ಎಲ್ಲ ಅಚ್ಚುಕಟ್ಟಿಗೂ ನೀರು ಕೊಡುವುದಕ್ಕೆ ಸಾಧ್ಯವಾದರೆ ಬಹಳ ಒಳ್ಳೆಯದು. ಆದರೆ ಅದು ಅಸಾಧ್ಯವಾದರೆ ಅಣೆಕಟ್ಟಿನ ಸಮೀಪದಲ್ಲಿರುವ ಪ್ರದೇಶಗಳಿಗಾದರೂ ಕೂಡ ಎರಡು ಬೆಳೆಗೆ ನೀರು ಕೊಡಬೇಕು. ಈ ಅಂಶ ಸರ್ಕಾರ ಪರ್ಯಾಲೋಚಿಸಬೇಕು. ಹಾಗೆ ಮಾಡುವು ದರಿಂದ ಆ ಪ್ರದೇಶದ ರೈತರು ಕಬ್ಬನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಚಿತ್ರದುರ್ಗ ಜಿಲ್ಲೆಯ ಭೂಗುಣ ಹತ್ತಿ, ಆಲೂಗಡ್ಡೆ ಮೊದಲಾದ ಬೆಳೆಗೆ ಬಹಳ ಅನು ಕೂಲವಾಗಿದೆ, ಕಬ್ಬಿಗೆ ಅಷ್ಟು ಉತ್ತಮವಾಗಿಲ್ಲ. ಆದರೆ ತರೀಕೆರೆ ಭದ್ರಾವತಿ ಪ್ರದೇಶದ ಜನಗಳು ಅದರ ಭೂಗುಣಕ್ಕನುಗುಣವಾಗಿ ಬತ್ತದ ವಿನಾ ಇನ್ಯಾವ ಬೆಳೆಯನ್ನು ಬೆಳೆಯುವುದಕ್ಕೂ ಸಾಧ್ಯವಿಲ್ಲ. ಕಬ್ಬನ್ನು ಮಾತ್ರ ಬೆಳೆಯಲು ಸಾಧ್ಯ. ಆದ್ದರಿಂದ ಕಬ್ಬು ಅಥವಾ ಬತ್ತ ಇವೆರಡಕ್ಕೂ ಅವಕಾಶವಾಗುವಂತೆ ನೀರನ್ನೊದ ಗಿಸಬೇಕಾದದ್ದು ಆ ರೈತರ ಅಭಿವೃದ್ಧಿ ದೃಷ್ಟಿಯಿಂದ ಅತ್ಯಗತ್ಯ. ನಾನು ನಿರ್ಣಯದಲ್ಲಿ "1/3 ಭಾಗದಷ್ಟು" ಎಂದು ಹೇಳಿದ್ದೇನೆ. ಅರ್ಧಕ್ಕಿಂತ ಹೆಚ್ಚಿನ ಪ್ರದೇಶಕ್ಕೆ ಸಾಧ್ಯವಾದರೆ ಹೆಚ್ಚಾಗಿ ಒದಗಿಸಿ, ಹಾಗೆ ಸಾಧ್ಯ ವಿಲ್ಲದಿದ್ದರೆ ಕನಿಷ್ಠ ಪಕ್ಷ 1/3 ಭಾಗಕ್ಕಾದರೂ ಒದಗಿಸ ಬೇಕಾದದ್ದು ಅಗತ್ಯ. ಏಕೆಂದರೆ, ಸಕ್ಕರೆ ಕಾರ್ಖಾನೆ ನಾಳೆ ಸ್ಥಾಪನೆಯಾಗುವ ಕಾರ್ಖಾನೆಗೆ ಸುಮಾರು 12 ಅಥವಾ 14 ಸಾವಿರ ಎಕರೆ ಸ್ಟಾಂಡಿಂಗ್ ಕ್ರಾಪ್ 3 ತಾಲ್ಲೂಕುಗಳಿಂದ ದೊರೆಯುತ್ತದೆ. ಸುಮಾರು 40 ಸಾವಿರ ಎಕರೆಗಳಿಗೆ ತರೀಕೆರೆ, ಭದ್ರಾವತಿ ತಾಲ್ಲೂಕು ಗಳಲ್ಲಿ ನೀರು ಒದಗುತ್ತದೆ. ಶಿವಮೊಗ್ಗ, ಭದ್ರಾವತಿ ಗಳ ಸುಮಾರು 18 ಸಾವಿರ ಎಕರೆಗಳಿಗೆ ಎಡನಾಲೆ ಯಿಂದ ನೀರಿನ ಭರವಸೆಯಿದೆ. ಈ ಎರಡು ಪ್ರದೇಶ ಗಳ ಅರ್ಧಭಾಗಕ್ಕಾದರೂ ಸದಾ ಕಬ್ಬಿನ ಬೆಳೆಯು ಡಲು ಅನುಕೂಲವಾಗುವಂತೆ ಪ್ರಾಜೆಕ್ಟ್ ಅಧಿಕಾರಿ

(ಶ್ರೀ ಬಿ. ಮಾಧವಾಚಾರ್)

ಗಳು ತಮ್ಮ ಯೋಜನೆಯನ್ನು ಅಳವಡಿಸಿದರೆ ಆ ಭಾಗದ ರೈತರಿಗೆ ತುಂಬ ಉಪಕಾರಮಾಡಿದ ಹಾಗಾಗುತ್ತದೆ. ಇಲ್ಲವಾದರೆ ಅನಾನುಕೂಲ. ಈಗ ತರೀಕೆರೆಯಾಗಲಿ ಭದ್ರಾವತಿಯಾಗಲಿ ಚಿತ್ರದುರ್ಗ ಜಿಲ್ಲೆಯ ಹಾಗೆ ಹೆಚ್ಚು ಅಭಾವ ಪ್ರದೇಶವಲ್ಲ. ಜೊತೆಗೆ ಅಲ್ಲಿ 300 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆಗಿ ಅಲ್ಲಿನವರು ಮಳೆಗಾಲದಲ್ಲಿ ಮಾತ್ರ ನೀರನ್ನು ಪಡೆಯುವುದೆಂದರೆ ಬಹಳ ಕಷ್ಟವಾಗುತ್ತದೆ ಮತ್ತು ಅನ್ಯಾಯವಾಗುತ್ತದೆ.

2-30 P.M.

ಆದುದರಿಂದ ಈ ಪ್ರಾಜೆಕ್ಟಿನ ಅಂಕಿ ಸಂಖ್ಯೆಗಳಲ್ಲಿ ಯಾವಯಾವ ಭೂಭಾಗಕ್ಕೆ ಯಾವಯಾವ ಭಾಗದಲ್ಲಿ ಎಷ್ಟೆಷ್ಟು ನೀರು ಸರಬರಾಯಿಯಾಗುತ್ತಿದೆ ಎಂಬುದನ್ನು ನಿರ್ಧರಿಸಿ ಎಷ್ಟೋ ವರ್ಷಗಳಾಗಿವೆ. ಆ ಹಿಂದಿನ ಅಂಕಿ ಸಂಖ್ಯೆಗಳನ್ನು ತಾವೀಗ ಸರಿಯಾಗಿ ಬದಲಾವಣೆ ಮಾಡಿದರೆ ತುಂಬ ಅನುಕೂಲವಾಗುತ್ತದೆ. ಭದ್ರಾವತಿ ಮತ್ತು ತರೀಕೆರೆ ತಾಲ್ಲೂಕಿನಲ್ಲಿರತಕ್ಕ ರೈತರು ಸಲ್ಲಿಸಿರತಕ್ಕ ಮನವಿಯ ಬಗ್ಗೆ ಈ ವಿಚಾರವನ್ನು ಪುನರ್ವಿಮರ್ಶೆಮಾಡಿ ಅನಂತರ ಈ ಎಡಬಲ ನಾಲಾಬೈಲಿನ ಕೆಳಗೆ ಇರತಕ್ಕ ಜಮೀನಿನಲ್ಲಿ ಕನಿಷ್ಠಪಕ್ಷ ಮೂರನೆಯ ಒಂದು ಭಾಗದ ಅಚ್ಚುಕಟ್ಟಿಗಾದರೂ ನೀರು ದೊರೆಯುವಂತೆ ಮಾಡಬೇಕಾದದ್ದು ಬಹಳ ಆವಶ್ಯಕವೆಂಬ ಅಂಶವನ್ನು ನಾನೀಗ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅಷ್ಟೇ ಅಲ್ಲದೆ ಈಗ ಕಬ್ಬಿನ ಬೆಳೆಗೆ ಬೇಕಾಗತಕ್ಕ ನೀರು ಸರಬರಾಯಿ ಆ ಭತ್ತದ ಬೆಳೆಗೆ ಬೇಕಾಗತಕ್ಕ ನೀರಿನ ಪ್ರಮಾಣಕ್ಕಿಂತ ಬಹಳ ಕಡಿಮೆಯಾಗಿರುತ್ತೆಂಬ ಅಂಶವನ್ನು ನಾನು ರೈತರುಗಳಿಂದ ತಿಳಿದಿರುತ್ತೇನೆ. ಆದುದರಿಂದ ಸರ್ಕಾರದವರಿಗೆ ಈ ಬೇಡಿಕೆಯನ್ನು ಪೂರೈಸುವುದರಲ್ಲಿ ಅಷ್ಟೇನೂ ಕಷ್ಟವಾಗುವುದಿಲ್ಲ. ಕೆಲವರು ಇದಕ್ಕೆ ಅಡ್ಡಿಪಡಿಸಬೇಕೆಂಬ. ಇರಾದೆಯಿಂದ ನಿರಾಧಾರವಾದ ತಕರಾರುಗಳನ್ನು ಒಡ್ಡುತ್ತಿದ್ದಾರೆ. ಅವುಗಳನ್ನು ಮಾನ್ಯ ಸಚಿವರು ಕೂಲಂಕಷವಾಗಿ ವಿಮರ್ಶೆಮಾಡಿ ನಮ್ಮ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಇಷ್ಟು ವಿಚಾರಗಳನ್ನು ಹೇಳಿ ಈ ನಿರ್ಣಯಕ್ಕೆ ಈ ಸಭೆಯು ತನ್ನ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Motion moved :

"This Assembly is of the opinion that with a view to enable the country for availing the full benefits of Bhadra Reservoir Project perennial supply of water should be made available for at least one-third of the atchkat under the Left Bank and Right Bank Canals upto Tunnel so that the raiyats can grow maximum cash crops such as sugarcane, etc."

***Sri S. SRINIVASA IYENGAR** (T. Narasipur).—I support this resolution. For the Left Bank and Right Bank channels of the Bhadra, the Government will spend nearly Rs. 6½ crores. The tariff that has been prescribed by the Government is :

Rs. 25 per acre for sugarcane.
Rs. 15 per acre for paddy.
Rs. 7 per acre for semi-dry crops.

In the resolution it is notified as 'upto the tunnel'. Under the Right Bank Channel we have 40,000 acres. If one-third of the atchkat is provided perennial supply, then, the Government will have the benefit to levy Rs. 25 per acre for 13,300 acres. This will enhance the revenues of State to Rs. 6 to 7 lakhs a year. Since the outlay of the two canals is of the order of 6½ crores, additional sources of revenue will go a long way to reduce the burden of the Government. Secondly the impounding capacity of the dam cannot be questioned at all. The catchment area of the reservoir is of the order of 1,00,000 Mcft. and the Mysore Government is permitted to draw 57,000 Mcft. The rest goes to Madras as per the original agreement but now it comes to us. Therefore there seems to be no difficulty in impounding water. There is no fear of lowering of the level of the dam. Therefore I believe the Government can certainly expect thereby good revenue ensuring economic prosperity of the State.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವಿನ್ಯೂ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸ್ವಾಮಿ, ಈಗ ಶ್ರೀ ಮಾಧವಾಚಾರ್ ಅವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಠರಾವಿನ ಉದ್ದೇಶವೇನೋ ಬಹಳ ಒಳ್ಳೆಯದು. ಈ ವಿಚಾರದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಕಬ್ಬಿನ ಬೆಳೆಗೆ ನೀರು ಒದಗಿಸುವುದರ ಮೂಲಕ ರೈತರಿಗೆ ಪ್ರೋತ್ಸಾಹ ಕೊಡತಕ್ಕ ಬಗ್ಗೆ ಆ ಪ್ರದೇಶದಲ್ಲಿ ಕನಿಷ್ಠಪಕ್ಷ ಮೂರನೆಯ ಒಂದು ಭಾಗಕ್ಕಾದರೂ ನೀರು ಸರಬರಾಯಿಮಾಡಿಕೊಡಬೇಕೆಂದು ಕೇಳಿದ್ದಾರೆ. ಆ ರೀತಿಯಾಗಿ ಮಾಡತಕ್ಕದ್ದು ಒಳ್ಳೆಯದೇ ಎಂಬುದಾಗಿ ನಮಗೂ ಸಹ ಭಾಸವಾಗುತ್ತಿದೆ. ರೈತಾಪಿಗೆ ಆ ಪ್ರದೇಶದಲ್ಲಿ ಹೆಚ್ಚಿನ ರೀತಿಯಲ್ಲಿ ಕಬ್ಬನ್ನು ಬೆಳೆದು ಅವರ ಆರ್ಥಿಕ ಪರಿಸ್ಥಿತಿಯನ್ನು ತನ್ಮೂಲಕ ಉತ್ತಮಪಡಿಸಿಕೊಳ್ಳಲು ಇಂಥ ಅನುಕೂಲತೆಗಳನ್ನು ಕೇಳಿಕೊಳ್ಳುವುದು ಸಹಜವಾದುದೇ ಆಗಿದೆ. ಈಗ ಆ ಪ್ರಾಜೆಕ್ಟು ಸುಮಾರು 57 ಸಹಸ್ರ ಮಿಲಿಯನ್ ಕ್ಯುಬಿಕ್‌ಫೀಟ್ ಆಫ್ ವಾಟರನ್ನು ಹಿಡಿಯುತ್ತದೆಂದು ತಿಳಿದು ಬಂದಿದೆ. ಇದರಿಂದ 2 ಲಕ್ಷ 32 ಸಾವಿರದ 544 ಎಕರೆಗಳಷ್ಟು ಜಮೀನಿಗೆ ನೀರಿನ ಅನುಕೂಲತೆಯನ್ನು ಕಲ್ಪಿಸಿಕೊಡಬೇಕೆಂದು ನಾವು ಅಭಿಪ್ರಾಯವನ್ನಿಟ್ಟುಕೊಂಡಿದ್ದೇವೆ. ಹೀಗೆ ಅಲ್ಲಿರತಕ್ಕ ನೀರು ಅಲ್ಲಿರತಕ್ಕ ಭೂಮಿ ಇವುಗಳನ್ನು

ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಅದರಲ್ಲಿ ಎಷ್ಟರಮಟ್ಟಿಗೆ ಈ ವಿಚಾರದಲ್ಲಿ ಅನುಕೂಲಮಾಡಿಕೊಡಲು ಸಾಧ್ಯವಿರುತ್ತದೋ ಅಷ್ಟನ್ನೂ ಅನುಕೂಲಮಾಡಿಕೊಡಲು ಪ್ರಯತ್ನಮಾಡಲಾಗುತ್ತದೆ. ಅಲ್ಲಿರತಕ್ಕ ಜನಗಳಿಗೆಲ್ಲರಿಗೂ ಈ ಪ್ರಾಜೆಕ್ಟಿನಿಂದ ಅನುಕೂಲವಾಗಬೇಕು. ಎಷ್ಟರಮಟ್ಟಿಗೆ ಈ ಟನಲ್ ಹಿಂದಿರತಕ್ಕ ರೈತರಿಗೆ ಕಬ್ಬು ಬೆಳೆಯಲು ನೀರನ್ನು ಒದಗಿಸಲು ಸಾಧ್ಯವಾಗುತ್ತೆಂಬುದನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಈಗ ಮಾನ್ಯ ಸದಸ್ಯರು ಸರ್ಕಾರಕ್ಕೆ ಕೊಟ್ಟಿರತಕ್ಕ ಸಲಹೆಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ಕೆಲಸ ಪಡೆಸಲಾಗುತ್ತದೆಂಬ ಭರವಸೆಯ ನಿರೀಕ್ಷಣೆಯಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

Mr. SPEAKER.—Is the Hon'ble member prepared to withdraw the resolution?

Sri B. MADHAVACHAR.—In view of the kind assurances given, I am prepared to withdraw the resolution if the House permits.

The resolution was, by leave, withdrawn.

No. 5.—Steps to be taken for the Amelioration of the all Backward Classes on the basis of the recommendation of the Backward Class Commission.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ ತಾಲ್ಲೂಕು).—ಮಾನ್ಯ ಸಭಾಪತಿಗಳೇ, ನಾನು ಈ ಕೆಳಕಂಡ ನಿರ್ಣಯವನ್ನು ಈ ಮಾನ್ಯ ಸಭೆಯ ಒಪ್ಪಿಗೆಗೋಸ್ಕರವಾಗಿ ತಂದಿದ್ದೇವೆ. ಆ ನನ್ನ ನಿರ್ಣಯ ಈ ರೀತಿಯಾಗಿದೆ :—

"ಹಿಂದುಳಿದ ತರಗತಿಗಳಿಗೆ ಸಂಬಂಧಪಟ್ಟ ಕಮಿಷನ್ ಮಂಡಲಿಯವರ ಸಲಹೆಗಳನ್ನು ಸರ್ಕಾರದವರು ಪರಿಶೀಲಿಸಬೇಕೆಂದೂ ಮತ್ತು ಷೆಡ್ಯೂಲ್ಡ್ ಜಾತಿಗಳೂ ಮತ್ತು ಷೆಡ್ಯೂಲ್ಡ್ ಪಂಗಡಗಳೂ ಸೇರಿ ಎಲ್ಲಾ ಹಿಂದುಳಿದ ತರಗತಿಗಳ ಜನರ ಕಷ್ಟ ನಿವಾರಣೆಗಾಗಿ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಈ ಸಭೆಯು ಯವರು ಅಭಿಪ್ರಾಯಪಡುತ್ತಾರೆ"

ಎಂಬುದಾಗಿದೆ. ಸ್ವಾಮಿ, ನಾನು ಈ ನಿರ್ಣಯವನ್ನು ಕಳುಹಿಸಿಕೊಡುವಾಗ್ಗೆ ಆ ಕಮಿಷನ್ ಮಂಡಲಿಯವರ ವರದಿ ಇನ್ನೂ ಪಾರ್ಲಿಯಮೆಂಟಿನಲ್ಲಿ ಚರ್ಚೆಯಾಗಿರಲಿಲ್ಲ, ಅದರ ಪ್ರಸ್ತಾಪವೇ ಅಲ್ಲಿನ್ನೂ ಬಂದಿರಲಿಲ್ಲ. ಆದರೆ ನಾನು ಕಳುಹಿಸಿದ್ದರಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವರು ಈ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಅವರ ವರದಿಯನ್ನು ಚರ್ಚೆಗಾಗಿ ಪಾರ್ಲಿಮೆಂಟಿನ ಮುಂದೆ ಇಡುವಾಗ ಅವರು ಈ ವರದಿಯ ಬಗ್ಗೆ ಕೆಲವು ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಆ ವರದಿಯನ್ನು ಅವರು ಬಹಿರಂಗಪಡಿಸಿ ಸಾರ್ವಜನಿಕರ ಮುಂದೆ ಅವರ ಅಭಿಪ್ರಾಯಕ್ಕಾಗಿ ಇಟ್ಟಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೋ! ಆದರೆ ಈ ಬಗ್ಗೆ ಸಾರ್ವಜನಿಕರೆಲ್ಲರೂ ಏನೊಂದು ಉದ್ದೇಶ, ಆಸೆ ಆಕಾಂಕ್ಷೆಗಳನ್ನಿಟ್ಟುಕೊಂಡಿದ್ದರೋ ಆ ಉದ್ದೇಶಗಳಿಗೆಲ್ಲಾ ಈ ವರದಿ ತದ್ವಿರುದ್ಧವಾಗಿ ಅವರಿಗೆ ಅನಾನುಕೂಲವನ್ನುಂಟುಮಾಡತಕ್ಕ ರೀತಿಯಲ್ಲಿರುತ್ತದೆ. ಇಂಡಿಯಾ ದೇಶದಲ್ಲಿರತಕ್ಕ ಹಿಂದುಳಿದ ಬಹು ಸಂಖ್ಯಾತ ಜನರ ಅಭಿವೃದ್ಧಿಯ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಅಭಿಪ್ರಾಯದಿಂದ ಆ ಒಂದು ಸಮಿತಿಯನ್ನು ಭಾರತ ಸರ್ಕಾರದವರು ರಚಿಸಿದರು. ಆದರೆ ಈಗ ಅವರು ಈ ಸಂಬಂಧದಲ್ಲಿ ಬೇರೊಂದು ವರದಿಯನ್ನು ತರಿಸುತ್ತೇವೆ ಎಂಬ ಆಶ್ವಾಸನೆಯನ್ನು ಅಲ್ಲಿ ಕೊಟ್ಟಿದ್ದಾರೆ. ಆದರೆ ಈಗ ಒಪ್ಪಿಸಿರತಕ್ಕ ಆ ವರದಿಯಲ್ಲಿ ಯಾವ ರೀತಿ ತಿಳಿಸಿದ್ದಾರೋ ಆ ರೀತಿಯಲ್ಲಿ ಕಾರ್ಯಗತ ಮಾಡಬೇಕೆಂದು ಕೇಳತಕ್ಕದ್ದು ನನ್ನ ಉದ್ದೇಶವಲ್ಲ. ನಮಗೆ ಸ್ವಾತಂತ್ರ್ಯ ಬಂದು ಈಗಾಗಲೇ ಒಂಭತ್ತು ವರ್ಷಗಳ ಮೇಲಾಯಿತು. ಪ್ರಜಾಪ್ರಭುತ್ವ ಪ್ರಾರಂಭವಾಗಿ ಇಲ್ಲಿಗೆ ಐದು ವರ್ಷಗಳ ಮೇಲಾಯಿತು. ಇಷ್ಟೆಲ್ಲಾ ಆಗಿದ್ದಾಗ್ಯೂ ಇಲ್ಲಿಯವರೆಗೂ ಭಾರತ ದೇಶದಲ್ಲಿರತಕ್ಕ ನಿಮ್ನ ವರ್ಗದವರ ಹಾಗೂ ಈ ಹಿಂದುಳಿದ ಪಂಗಡದವರ ಅಭಿವೃದ್ಧಿಯ ಬಗ್ಗೆ ಸರ್ಕಾರಗಳು ಏನೊಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನೂ ಕೈಗೊಂಡಿರುವುದಿಲ್ಲವೆಂದು ಹೇಳಿದರೆ ಇದೇನೂ ಅಷ್ಟು ಉತ್ಪ್ರೇಕ್ಷೆಯ ಮಾತಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಕಾರಣಗಳೇನೆಂಬುದನ್ನು ನಾನೀಗ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಆದರೆ ಈ ಸಂದರ್ಭದಲ್ಲಿ ನಾನು ಮುಖ್ಯವಾಗಿ ಹೇಳಬೇಕಾಗಿರುವುದೇನೆಂದರೆ—ಈ ಹಿಂದುಳಿದ ಜನಾಂಗದವರಿಗೂ ಮತ್ತು ನಿಮ್ನ ಪಂಗಡಗಳವರಿಗೂ ನಿಜವಾಗಿಯೂ ಅವರಿಗೆ ಸಲ್ಲಬೇಕಾಗಿರುವ ಪ್ರಮಾಣದಲ್ಲಿ ಈ ವಿದ್ಯಾ ಸೌಕರ್ಯಗಳೂ ಮತ್ತು ಸರ್ಕಾರಿ ಕೆಲಸದಲ್ಲಿ ಅವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಕಿಲ್ಲವೆಂಬುದನ್ನು ತಿಳಿಸಬೇಕು ಎಂಬುದೇ ಆಗಿದೆ. ಈ ಜನರೆಲ್ಲ ಅವರ ಆಶೋತ್ತರಗಳು ಎಷ್ಟರಮಟ್ಟಿಗೆ ಈಡೇರಬೇಕೆಂದು ಅವರು ಹಂಬಲಿಸುತ್ತಿದ್ದರೋ ಅಷ್ಟರಮಟ್ಟಿಗೆ ಅನುಕೂಲವಾಗದಿದ್ದರೂ ಅಲ್ಪಸ್ವಲ್ಪವಾದರೂ ಆಗಿರುವುದಿಲ್ಲ. ಈ ಜನರ ಮೊರೆಯನ್ನು ಕೇಳಿ ಆ ಕೇಂದ್ರಸರ್ಕಾರದವರು ಒಂದು ಕಮಿಷನ್ನನ್ನು ಈ ಸಂಬಂಧವಾಗಿ ರಚಿಸಿ ಇವರ ಆಶೋತ್ತರಗಳನ್ನು ಈಡೇರಿಸಿ ಕೊಡುವುದಾಗಿ ತಿಳಿಸಿದ್ದರು. ಆ ಉದ್ದೇಶಕ್ಕಾಗಿಯೇ ಆ ಒಂದು ಕಮಿಷನ್ನನ್ನೂ ನೇಮಕಮಾಡಿದ್ದರು. ಆ ಕಮಿಷನ್ನವರೇನೋ ಕೆಲವು ಸೂಕ್ತ ಸಲಹೆಗಳನ್ನು ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದ ಆಡಳಿತವರ್ಗ ಆ ವರದಿಯಲ್ಲಿ ಹೇಳಿರುವ ಪ್ರಕಾರ ಅದನ್ನು ಅನುಸರಿಸಿದ್ದರೆ—ಅದರ ಪ್ರಕಾರ ಅನುಕೂಲ ಕಲ್ಪಿಸಿಕೊಟ್ಟಿದ್ದರೂ ನಾನು ಬಹಳ ಮಟ್ಟಿಗೆ ಸಂತೋಷಪಡುತ್ತಿದ್ದೆನು. ಆದರೆ ಪರಿಸ್ಥಿತಿಯೇ ಬದಲಾಯಿಸುವಂತೆ ಕಾಣುತ್ತಿದೆ. ಆ ಮಂಡಲಿಯವರಾದರೂ 2 ವರ್ಷಗಳ ಕಾಲ ಇಡೀ ಭಾರತದೇಶವನ್ನೇ ಸುತ್ತಿ ಜನರ ನಿಜಸ್ಥಿತಿಯನ್ನು ಕಂಡುಕೊಂಡು ಪ್ರತಿಯೊಂದು ವಿಚಾರವನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ತದನಂತರ ಕೇಂದ್ರ ಸರ್ಕಾರಕ್ಕೆ ಅವರು ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆದರೆ ಆ ವರದಿ ಇನ್ನೂ ಈಚೆಗೇ ಬಾರದಿರುವುದರಿಂದ ಅದರ ಬಗ್ಗೆ ನಾವೀಗ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಆದರೆ ಆ ವರದಿಯಲ್ಲಿರುವ ಅಭಿಪ್ರಾಯಗಳೇನು ಎಂಬುದನ್ನು ನಾನು ನನಗೆ ತಿಳಿದಿರುವ ಮಟ್ಟಿಗೆ ಹೇಳುವುದಾದರೆ—ಅವು ನಿಜವಾಗಿಯೂ ಜನರು ತಮ್ಮ ಮನಸ್ಸಿನಲ್ಲಿ ಏನೊಂದು ಅಭಿಪ್ರಾಯವನ್ನಿಟ್ಟುಕೊಂಡಿದ್ದರೋ ಅದನ್ನು ಅದ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಮುವುದಕ್ಕೆ ಅವರೀಗ ಪ್ರಯತ್ನ ಪಡುತ್ತಿರುವಂತೆ ಕಂಡುಬರುತ್ತದೆ. ಆದಕಾರಣ ಆ ವರದಿಯನ್ನು ಅಲ್ಲಿಡುವುದಕ್ಕೆ ಬದಲಾಗಿ ಸಾರ್ವಜನಿಕರ ಮುಂದೆ ಇಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು ಎಂದು ಅಭಿಪ್ರಾಯಪಡುತ್ತೇನೆ.

ಈಗ ನಾನು ಅಧ್ಯಕ್ಷರಾದ ತಮ್ಮ ಮೂಲಕ ಕೇಂದ್ರ ಸರ್ಕಾರಕ್ಕೂ ಮತ್ತು ತಮ್ಮ ಮೂಲಕ ನಮ್ಮ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರದ ಮೂಲಕ ಆ ಕೇಂದ್ರ ಸರ್ಕಾರಕ್ಕು ಈ ಹಿಂದುಳಿದಿರತಕ್ಕ ಎಲ್ಲ ಜನಾಂಗಗಳ ಅಭಿವೃದ್ಧಿಯ ಬಗ್ಗೆ ಈ ಎರಡು ಸರ್ಕಾರಗಳೂ ಕೂಡಲೇ ಏನೇನು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳೆಲ್ಲವನ್ನೂ ಈಗಲೇ ಪ್ರಾಂತೀಯ ಸರ್ಕಾರಗಳ ಹಾಗೂ ಕೇಂದ್ರ ಸರ್ಕಾರದ ಮಟ್ಟದಲ್ಲಿ ಕೈಗೊಳ್ಳತಕ್ಕ ಸೂಕ್ತ ಏರ್ಪಾಡುಗಳನ್ನು ಮಾಡಬೇಕೆಂದೂ ತನ್ಮೂಲಕ ದೇಶದ ಮತ್ತು ಈ ಹಿಂದುಳಿದ ಜನಾಂಗಗಳ ಸರ್ವತೋಮುಖವಾದ ಅಭಿವೃದ್ಧಿಗೆ ಅನುಕೂಲವಾಗತಕ್ಕ ವಿಶಿಷ್ಟ ಏರ್ಪಾಡುಗಳನ್ನೂ ಕೈಗೊಳ್ಳಬೇಕೆಂದೂ ಪ್ರಾರ್ಥಿಸಿಕೊಂಡು ನಾನು ಈ ನನ್ನ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Motion moved:

"This Assembly is of the opinion that the recommendations of the Backward Class Commission be examined by the Government and suitable steps taken for the amelioration of all the Backward Classes including the Scheduled Castes and Scheduled Tribes."

Sri A. BHEEMAPPA NAIK (Molakalmuru).—It is better Sri Mariappa enlightens us on the several aspects because he was our representative on the Backward Class Commission.

Mr. SPEAKER.—Nobody can force another Hon'ble Member to speak.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಎ. ವಿ. ನರಸಿಂಹರೆಡ್ಡಿಯವರು ಈಗತಾನೆ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತ ಇದರ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಈ ವಿಚಾರವಾಗಿ ನಾನು ಕಳೆದ ನಾಲ್ಕು ವರ್ಷಗಳಿಂದಲೂ ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ಅನೇಕ ವಿಚಾರಗಳನ್ನು ನಾನು ಈ ಸಂಬಂಧವಾಗಿ ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಆದರೆ ಸರ್ಕಾರದವರು ಅಷ್ಟಾಗಿ ನಿಗಾ ಕೊಡಲಿಲ್ಲವೆಂಬ ಅಂಶವನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಕಾರಣವೇನೆಂದರೆ ನಮ್ಮ ಭರತಖಂಡದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದಮೇಲೆ ಕಾಮನ್ ಮ್ಯಾನ್ ಎಂದು ನಾವು ಯಾರಿಗೆ ಹೇಳುತ್ತಿದ್ದೇವೋ ಅಂಥ ಜನರು ಈ ದಿವಸ ಬಹಳ ಹಿಂದುಳಿದವರಾಗಿದ್ದಾರೆ. ಆ ಜನರು ಅಭಿವೃದ್ಧಿಗೆ ಬಾರದ ಹೊರತು ಈ ಭರತಖಂಡಕ್ಕೆ ಕಲ್ಯಾಣವಿಲ್ಲ. ಆದುದರಿಂದ ಸಮಾಜದಲ್ಲಿ ಇಂಥ ಏರುಪೇರುಗಳಿರಕೂಡದು ಎಂಬುದಾಗಿ ಇದೇ ವಿಚಾರದಲ್ಲಿ ಅನೇಕ ಅಂಶಗಳನ್ನು ದೇಶದ ಮುಖಂಡರಲ್ಲಿ ಒತ್ತಿ ಒತ್ತಿ ಅನೇಕ ವರ್ಷಗಳಿಂದಲೂ ಹೇಳುತ್ತಲೇ ಬಂದಿದ್ದೇನೆ. ಇಂಡಿಯಾ ಸರ್ಕಾರದವರು ಕಾನೂನಿನಂತೆ ಈ ಬಗ್ಗೆ ಒಂದು ಕಮೀಷನ್ನನ್ನು ಏರ್ಪಾಡು ಮಾಡಿದರು. ಆ ಸಮಿತಿಯವರು ಸಮಗ್ರ ಭಾರತದಲ್ಲೆಲ್ಲಾ ಸಂಚಾರ ಮಾಡಿ ಹಿಂದುಳಿದ ಜನಾಂಗಗಳ ಹಾಗೂ ಷೆಡ್ಯೂಲ್ಡ್ ಪಂಗಡಗಳ ಮತ್ತು ಗುಡ್ಡಗಾಡುಗಳಲ್ಲಿಯೇ ವಾಸ ಮಾಡತಕ್ಕ ಜನರ ಮತ್ತು ನಿಮ್ನ ತರಗತಿಗಳವರ ನಿಜಚಿತ್ರದ ಬಗ್ಗೆ ಒಂದು ವರದಿಯನ್ನು ತಯಾರಿಸಿ ಅದನ್ನು ಪಾರ್ಲಿಯಮೆಂಟಿನ ಮುಂದಿಡಲು ಕೇಂದ್ರ ಸರ್ಕಾರಕ್ಕೆ ಅರ್ಪಿಸಿದ್ದಾರೆ. ಅವರು ಡೈರೆಕ್ಟಾಗಿ ರಾಷ್ಟ್ರಪತಿಗಳ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಅವರ ವರದಿಯು ಸಂಪೂರ್ಣವಾಗಿ ಇಡೀ ಭರತಖಂಡದ ಜನಗಳ ಸ್ಥಿತಿಗತಿಗಳನ್ನು ತೋರಿಸುತ್ತದೆ. ಅದರ ಒಂದು ಪ್ರತಿಯನ್ನೂ ಇವತ್ತಿನ ವರೆಗೂ, ನಾವು ಎಷ್ಟು ಒತ್ತಾಯಪೂರ್ವಕವಾಗಿ ಕೇಳಿದರೂ ಕೂಡ ತರಿಸಿಕೊಟ್ಟಿಲ್ಲ. ಈ ಕಮಿಷನವರು ಮಾಡಿರತಕ್ಕ ವರದಿಯಲ್ಲಿ ಯಾವಯಾವ ದೇಶಕ್ಕೆ ಯಾವ ಯಾವ ರೀತಿ ಇರಬೇಕು ಎಂಬುದನ್ನು ವಿಶದೀಕರಿಸಿದ್ದಾರೆ. ವಿದ್ಯಾಭ್ಯಾಸ ಹೇಗಿರಬೇಕು ಮುಂತಾದುವನ್ನೆಲ್ಲ ಕೂಲಂಕಷವಾಗಿ ವಿವರಿಸಿದ್ದಾರೆ. ಅದರ ಒಂದು ಕಾಪಿಯನ್ನು ತರಿಸಿಕೊಡಿ ಎಂದು ನಾಲ್ಕು ವರ್ಷಗಳಿಂದಲೂ ಕೇಳಿದರೂ ತರಿಸಿಕೊಟ್ಟಿಲ್ಲ. ಅದರ ಒಂದು ಪ್ರತಿಯನ್ನು ಸಭೆಯ ಮುಂದಿಡಬೇಕು, ಮೈಸೂರು ಸಂಸ್ಥಾನದಲ್ಲಿ ಅವರ ಶಿಫಾರಸುಗಳನ್ನು ಜಾರಿಗೆ ಕೊಡಬೇಕೆಂದು ಕೇಳಿದರೂ ಕೂಡ ಇವತ್ತಿನ ವರೆಗೂ ಏನೂ ಮಾಡಿಲ್ಲ. ಮಾನ್ಯ ಮಂತ್ರಿಗಳು ಈಗಲಾದರೂ ಅವರ ವರದಿಯ ಪ್ರತಿಗಳನ್ನು ತರಿಸುವುದು ಅತ್ಯಾವಶ್ಯಕ. ಅದರಲ್ಲಿರತಕ್ಕ ಸಲಹೆಗಳನ್ನು, ಒಂದು ನಿರ್ದಿಷ್ಟವಾದ ಕಾಲದಲ್ಲಿ ಜಾರಿಗೆ ತಂದ ಪಕ್ಷದಲ್ಲಿ, ಹರಿಜನರ, Scheduled Castes and Scheduled Tribes ಬುಡಕಟ್ಟಿನ ಜನರ ಅಭಿವೃದ್ಧಿಯಾಗುತ್ತದೆಂದು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ, ರಾಜ್ಯಾಂಗದ ಪ್ರಕಾರ Backward Class Commission ಎಂದು ಒಂದು ಕಮಿಷನ್ ನೇಮಕ ಮಾಡಿದರು. ನಮ್ಮ ಸಂಸ್ಥಾನದ ಪರವಾಗಿ ಶ್ರೀಮಾನ್ ಮರಿಯಪ್ಪನವರು ಆ ಸಮಿತಿಯಲ್ಲಿದ್ದು ಕೆಲಸ ಮಾಡಿದರು. ಅವರು ಇಡೀ ಭರತಖಂಡವನ್ನು ಟೂರ್ ಮಾಡಿ ಅವರ ಅಭಿಪ್ರಾಯಗಳನ್ನು ಕೊಟ್ಟಿದ್ದರೂ ಕೂಡ ವರದಿಯ ಒಂದು ಕಾಪಿ ಕೂಡ ಈ ಸಭೆಗೆ ಬಂದಿಲ್ಲ. ಇದು ಕಾಂಗ್ರೆಸ್ ಸರ್ಕಾರದ ತತ್ವವೋ ಏನೋ ಗೊತ್ತಿಲ್ಲ. ಎಲ್ಲವನ್ನೂ ಮಾಡುತ್ತೇವೆಂದು ಹೇಳಿದರೂ ಕೂಡ ಅದನ್ನು ಜಾರಿಗೆ ಕೊಡುವ ವಿಚಾರದಲ್ಲಿ ಹೆದರುತ್ತಾರೆಯೋ ಶಂಕೆ ಪಡುತ್ತಾರೆಯೋ ಏನುಮಾಡುತ್ತಾರೆಯೋ ನನಗಂತೂ ಅರ್ಥವಾಗುತ್ತಿಲ್ಲ.

ಈ Backward Class Commission ವಿಚಾರದಲ್ಲಿ ನಾನು ಒಂದೆರಡು ಸಲಹೆಗಳನ್ನು ಹೇಳುತ್ತೇನೆ. ಇದರ ಅಧ್ಯಕ್ಷರಾದ ಶ್ರೀಮಾನ್ ಕಾಕಾ ಕಾಲೇಲ್ಕರ್ ರವರು ದಯಮಾಡಿಸಿದ್ದಾಗ, ನಾವು ಅವರನ್ನು ಕಂಡು Scheduled Castes ವಿಚಾರದಲ್ಲಿ ಮತ್ತು Backward class ವಿಚಾರದಲ್ಲಿ ಯಾವರೀತಿಯಾಗಿ ಅಭಿ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವೆಂದು ಚರ್ಚೆಮಾಡಿದಾಗ Scheduled Castesಗೆ ಸಂಬಂಧಪಟ್ಟ ವರದಿಯೇ ಬೇರೆ, ಇತರ ಹಿಂದುಳಿದ ಪಂಗಡದವರ ವರದಿಯೇ ಬೇರೆ ಎಂದು classify ಮಾಡಿದ್ದೇವೆಂದು

ನಮ್ಮ ಗಮನಕ್ಕೆ ತಂದರು. ಹಿಂದುಳಿದ ಪಂಗಡದವರಿಗೂ, Scheduled Castes and Scheduled Tribes ಜನಗಳಿಗೂ ತುಂಬ ವ್ಯತ್ಯಾಸವಿದೆ. ಆದುದರಿಂದ ಇದರಲ್ಲಿ Advance Community ಯಾವ ರೀತಿ ಇದೆ, ಹಿಂದುಳಿದವರಲ್ಲಿ ಮುಂದೆ ಬಂದ advanced community ಹೇಗಿದೆ ಎಂದು ನೋಡಿಕೊಂಡು ಎ. ಬಿ. ಸಿ. ವರ್ಗಗಳಾಗಿ ಮಾಡಬೇಕು. ಹಿಂದುಳಿದ ಪಂಗಡಗಳಲ್ಲಿ Scheduled Castes ಮತ್ತು Scheduled Tribes ಸೇರಿಸುವುದಕ್ಕಾಗುವುದಿಲ್ಲ. ದೇಶದಲ್ಲಿರುವ untouchables ಎಲ್ಲರನ್ನೂ, 'C' class ನಲ್ಲಿ ಸೇರಿಸಿ ಈ ಜನಾಂಗವನ್ನು ಅಭಿವೃದ್ಧಿಪಡಿಸಬೇಕೆಂದು ಸಲಹೆಗಳನ್ನು ನಾವು ಕೊಟ್ಟಿದ್ದೆವು. ಈ ಕಮಿಷನ್ನವರು ಕೊಟ್ಟಿರುವ ವರದಿಯಲ್ಲಿ ಯಾವರೀತಿ ಇದೆಯೋ ನನಗೆ ಗೊತ್ತಿಲ್ಲ. ತಾವು ನಿಜವಾಗಿಯೂ ಹಿಂದುಳಿದ ಜನಾಂಗಗಳನ್ನು ಅಭಿವೃದ್ಧಿ ಮಾಡುವುದಾದರೆ, socialistic pattern ತತ್ವವನ್ನು ಸ್ಥಾಪಿಸುತ್ತೇವೆಂದು ನೀವು ಘಂಟಾಘೋಷವಾಗಿ ಹೇಳಿರುವ ದೆಸೆಯಿಂದ, ಖಂಡಿತವಾಗಿ ವಾಗ್ದಾನ ಮಾಡಿರುವಹಾಗೆ, ಪ್ರಮಾಣ ಮಾಡಿರುವ ಹಾಗೆ ಸಮಾಜ ವಾದದ ತತ್ವಗಳನ್ನು ಅನುಸರಿಸಿ ಅವುಗಳನ್ನು ಕಾರ್ಯರೂಪಕ್ಕೆ ತಂದು ದೇಶಕ್ಕೆ ಅನುಕೂಲವನ್ನು ಕಲ್ಪಿಸಿಕೊಡಿ, ಎಲ್ಲಾ ಪಂಗಡಗಳವರಿಗೂ ಒಂದೇ ರೀತಿಯ ಅನುಕೂಲವನ್ನು ಕಲ್ಪಿಸಿಕೊಡಿ ಮತ್ತು ಈ ರೀತಿ ಮಾಡುವುದರಿಂದ ಹಿಂದುಳಿದ ಪಂಗಡಗಳನ್ನು ಅಭಿವೃದ್ಧಿ ಸ್ಥಿತಿಗೆ ತೆಗೆದುಕೊಂಡು ಬರಬೇಕು, ನಮಗೆ ಬಂದಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬರಬೇಕು ಎಂದು ಹೇಳಿ ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

*Sri T. MARIAPPA (Mysore City North).—I shall speak after Tea, Sir, because I do not want to have a break in the middle.

Mr. SPEAKER.—The House will adjourn for lunch and meet at 3-30.

The House adjourned at Fifty Minutes past Two of the Clock and reassembled at Thirty Minutes past Three of the Clock.

[MR. SPEAKER in the Chair].

*Sri T. MARIAPPA.—Mr. Speaker, Sir, I beg to support the resolution fo my Hon'ble friend Sri A. V. Narasimha Reddy. The resolution by itself is innocuous. It merely states that the recommendations of the Backward Classes Commission be examined. Sir, it is unfortunate that the Backward Classes Commission's Report has not been examined in the spirit in which the Constitution envisages the consideration of the many problems that afflict the vast body of people constituting the Backward Classes. The Constitution envisages, Sir, appointment of a Commission to go in to the whole question of the problems that affect these Backward Classes.

Sir, with the dawn of independence, the framers of the Constitution realised that this country consisted of people who had not had uniform development during the course of history. It consisted of population at varying pace of development. Therefore, they thought it fit to insert a provision in the Constitution to have the whole problem examined with a view to ameliorate their conditions. It is not enough, Sir, if a few chosen people alone have all the opportunities of advancement. Under the Constitution equality of opportunity would have only real meaning when all the sections of the population are able to compete on equal terms. It is no good having a provision in the Constitution saying that equality of opportunity is afforded to all the people and yet if there are vulnerable sections of the population, if certain sections of the population are weak, they would not be able to hold their own particularly when there is keen competition either in the field of education or in the field of industries or in any other field of human activity. Therefore, the framers of the Constitution envisaged the collection of all the material necessary to assess exactly what the matter was. Therefore the provision was made for the appointment of a Commission.

Sir, the Commission was appointed in the year 1953 of which I had the privilege to be a member. The Commission toured round the country, covered nearly 40,000 miles, visited all the important centres, took evidence, heard the representatives of all the Backward Classes and representatives of even advanced classes, Ministers, Legislators and after a period of nearly two years they drew up a report and signed it on 18th March 1955. In this connection I beg to state that though the report was signed by the majority of members and nearly three members dissenting on the date on which this report was signed, yet the Chairman

(Sri T. MARIYAPPA)

of the Commission happened to write a forwarding note, forwarding the report to the President of India wherein he tried to examine the conclusions and recommendations of the Commission. It is true, Sir, that three persons had appended a note of dissent and one of the Dissenting Note was couched perhaps in extreme language because that person happened to feel the intensity of the whole question that confronted the Backward Classes in India.

A MEMBER.—Who was that person?

Sri T. MARIAPPA.—It is not necessary for me, Sir, to name the person ; if the report had been in the hands of Hon'ble Members as it should be, then the whole spirit would be understood.

Sir, it would have been much better if the State Legislatures had been consulted soon after the report was placed on the table of the Parliament. There was a specific provision in the Constitution that the report with a memorandum of the Government of India should be placed on the Table of the Parliament. In fact, it is only recently that the report was placed on the Table of the Parliament and the memorandum attached to it drafted by the Home Ministry was received with mixed fellings all over the country. Most of the recommendations of that report, except one relating to reservation in service, were unanimous and yet even those recommendations had not been accepted by the Government of India. It is true that there was difference of opinion with regard to reservation in service. Only one member, if my recollection is correct, said that the reservation of service was opposed by him on principle. And yet most of the members were in sympathy with the underlying sympathy of giving representation to the Backward Classes because it constituted one of the ways of uplifting them. The merits apart, I beg of the Hon'ble Members of this House to get copies of that report from the Government of India and Government of Mysore and have that report discussed impartially and see how many recommendations of that report could be accepted and implemented.

Sir, may I on this occasion say that most of those recommendations have been based on the experience gained in Mysore with regard to the tackling of problems of the Backward Classes. Mysore and some of the States in South India were the prioneers in this field. As early as 1918 that question cropped up in this House and the leaders of public opinion in those days had the courage and conviction to understand the problems in all its bearings and to tackle them in the right spirit. It is because of the right understanding of the problem and to some extent tackling it in the spirit in which it ought to have been tackled that the advancement by Mysore is specially good. Therefore, the Commission visited Mysore first. They examined many leaders of public opinion here. They got all the necessay materials from the Government of Mysore and most of the recommendations in the Commission's report are drawn on the experience gained by Mysore in tackling the problems of the Backward Classes. Sir, I do not want to weary the House from quoting numerous quotations of that report which is not, unfortunately, before us. I would like to say that the conditions in other parts of India, except South is highly deplorable. The problems of the Backward Classes have not been tackled in the spirit in which they ought have been tackled. Even after the advent of freedom these problems have not been considered at State level and less so at the Central level. Sir, these problems are not merely of economic nature ; they are also of social nature. In other countries Sir, we see clearly the class distinction. In India, fortunately or unfortunately, the distictions are vast and they are of not recent origin ; the origin could be traced beyond more than 5,000 years. Therefore, these problems are not merely of economic kind but of social kind also. The remedies suggested in that report are also comprehensive, for those problems could not be kept pending for a long time. The problems should be tackled soon and every section of the population should be allowed to develop

as speedily as possible. It is only then what we aspire could be realised.

Sir, with regard to the representation in service there is much divergent opinion. From the year 1920 some communal justice has been rendered to these classes who are left behind. But in the North the condition is entirely different. The other Backward Classes, apart from the Scheduled Castes and Scheduled Tribes, are more backward than the Scheduled Castes and the Scheduled Tribes. In the old Hyderabad before the reorganisation, the percentage of literacy is only 10 and in U.P. the literacy is only 10 per cent. Take the case of Rajasthan. It is about 9 per cent. Therefore, The economic conditions of these Backward Classes are highly deplorable in most of the Northen Indian States. There was a historical reason why this movement happened to take place in the North. In the South it started first in Kolahpur. His Highness the Maharaja of Kolahpur was greatly responsible for starting this movement in the South and he is the pioneer. He realised the plight of the Backward Classes and tried to uplift them. Gradually the movement spread towards the South in Mysore and Madras. If you compare the figures of representation in services in Mysore, for a period of 30 years the representation of the Forward Class has been reduced only by 30 per cent which shows for each year there has been an increase of one per cent of the Backward Classes. In 30 years we have been able to increase it to about 30 per cent. Therefore the oportunities thrown open for these Backward Classes have taken nearly 30 years to bear frint. Even then except one community all other communities have not been able to have that much of representation which is in proportion to population of that community. The problems are so complex that advancement is necessarily to be gradual. It is necessarily to be slow and spread over a course of years. Therefore we pleaded in that Commission that earnest efforts should be made from now onwards to give adequate right of representation in services. Even then only a few of these communities would have representation on the services. The Governments both in the Centre and State side by side should take steps for the educational advancement of these classes. One thing about which the opinion was almost unanimous is that adequate representation should be given to these Backward Classes in educational institutions. It was a unanimous recommendation and with that in view it was recommended 70 per cent of the seats in the higher professional and technical schools should be reserved for these classes. Even then they have to make very earnest, almost superhuman efforts, to catch up with the advanced communities. Nevertheless, Government of India and particularly the Home Ministry, with regard to this unanimous recommendation, say that in the Second Five-Year Plan there will be development all over the country and perhaps they will be able to provide institutions to cater to those who are likely to come into this. This is a very vague promise and statement. Advisedly we have omitted to cite instances wherein injustice has been done to the backward classes because we did not want to bring in the past and embitter the feelings. Our idea was not to conduct post-mortem examination. Our anxiety was that suitable steps should be taken so that these communities may advance. One of the dissenting notes makes it very clear. Opportunities should be provided for these Backward Classes who had practically no opportunities for centuries. We should create such conditions in which this class can compete.

Sir, having had the experience of two years in collecting evidence and going round the country, I can safely say that at least it takes three generations wherein the grandsons of these Backward Classes can openly compete in the public examinations. It is not the first generation unless he be a genius like Dr. Ambedkar. Ordinarily it would be very difficult for these Backward Classes to compete successfully in the open examination. Perhaps in the second generation a few may compete and in the third generation they may compete fully. Therefore they say equality of opportunity would be a

(SRI T. MARIAPPA.)

thing which would never appeal to the Backward Class much less help them. Therefore what we advocated was that a few percentage of seats might be reserved for these best men and others can be selected for selection from group of community or communities. That will be the only possible solution because no other alternative solution could be found. This demand for representation in the services and higher education in professional and technical sudjects was almost unanimous throughout the country. The urgency and speed with which recruitment is made and works are being executed, requires more educational amenities to be given to Backward Classes to enable them to catch up with the time and only after reserving certain percentage of seats that things can be better after some time.

It is often said that reservation of seats in educational institutions would hamper the progress of advanced classes. We have seen that the advancement of these classes should never be hampered. Our recommendations are to encourage item by means of giving more scholarships, freeships, etc It was never the intention of the Backward Classes to throw any hindrances on their part. But at the same time the whole leeway should be made up now by providing better amenities and making available seats. If I can say, I saw some of the educational institutions in some of the States in the North. Even with regard to admission of candidates belonging to Backward Classes it has to be made with herculian efforts. In the North it is easy to make out the community by mere names. Most of the students have stated that by merely seeing the names they have been deprived of admission. It is so because most of the educational institutions in the North are private owned and Government aided. They told us their miseries and about almost the herculian efforts made by them to secure admission. Some of the students showed us that after they changed their names they had secured admission. It was all in writing. Therefore human nature what it, being is, this class wanted only ordinary human treatment and this requires a natural reservation for at least a fixed period of years. They wanted only reservation for certain number of years which can certainly end and ultimately all the classes standing in the same footing. Therefore, with the best of intention the Backward Classes Commission drew up its report and with all the emphasis at my command and all humility to the Government of India, I say that unless these facts are taken into consideration and squarely faced, a situation will develop in the North which will not give rest to the leaders. Large volume of opinion is already growing and it is taking shape in the North and unless steps are taken in time to afford them real relief, I feel thing would not be easy for the State Governments in the North. At the same time I must pay a handsome complement to the Government of India for making immediately larger provision for scholarships to the Backward Classes. Of course the Government of India had to depend upon the list of Backward Classes supplied by the State Governments. Even those lists were not satisfactory but they served as a basis on which future work can be evolved. After taking into consideration all the data we drew up list of Backward Classes for each State. I do not know how the Government of India have enumerated 200 and odd communities in the body of the report. We happened to remarks that the communities are as numerous as about 2000, for in one of the Census reports of the Madhya Pradesh we happened to come across a list of those communities Madhya Pradesh is a meeting ground of East and West. Therefore numerous communities spring up in that particular area. Naturally when comminities mix up numerous communties spring up. Therefore almost 2,600 communities were enumerated in one of the Census Reports of the Madhya Pradesh. For each State we have supplied a separate list of communities, to be Classed under Backward Classes. Even there we made a distinction like-a little advanced, a little backward, etc. Therefore the State Governments

can try to render relief to those who are most backward so that they can also catch up with time along with others. It is therefore necessary, as my friend Sri Narasimha Reddy insisted, that the copies of the report should be got from the Government of India and this House should be given an opportunity to discuss those recommendations. The opinion of this Legislature would have the greatest weight because it has the necessary experience to give it to other States. I know there are many cynics who talk very glibly of the experience gained by Mysore in this field. In fact some of them state that there is greater communalism in Mysore than anywhere else. One of the Ministers in the North happened to have a dig at me and told me brilliant boys were not able to secure admission in medical and professional colleges and they had to go elsewhere. But I told him, having regard to the limited number of seats they have to be distributed; simply because a few could not get seat it did not reflect that there was communalism. In fact there was more equitable distribution here than in any other place.

4 P.M.

Therefore, Sir, these problems are human problems. Whatever may be the advance we may have made in other fields, unless we render satisfaction, unless we render justice—I do not say communal justice, but social justice,—it would be difficult. Satisfaction to the people of this country should be rendered; whatever may be the ideals of the legislature, whatever may be the type of society placed before us, whether it is of the Sarvodaya pattern or whether it is the socialistic pattern--the whole thing will be looked at from the point of view of the satisfaction that the individual derives and that can only come when he feels satisfied that he can have social justice at the hands of the Government that is governing them. That could only be done if the advancement in the field of education is not hampered, and the weakest section of the population gets the proper support from the Government; and even in the social sphere the people should feel that they are socially not inferior to others. It is only then that the psychological satisfaction could be derived and unless there is that emotional integration, Sir, several sections of the population will not integrate themselves, even though we may have an artificial integration in this State.

With these few words, Sir, I would request the Government to kindly get copies of this report from the Government of India and place them for the consideration of this House. I am of the opinion, Sir, that the suggestions of this House in the light of the experience gained should certainly be valuable to the other States, for the problems there are more acute than what they are here. We have made certain important beginnings. Therefore, our experience to other States would indeed be very valuable and the opinion of this House will certainly have a great weight in the Government of India, so that even they on their part should take certain steps to render social justice to the vast body of these Backward Classes.

One thing which might have frightened the Government of India is the vastness of the population of these Backward Classes. Their estimate of the Scheduled Tribes is seven crores. Their estimate of the Backward Classes is in the region of 12 crores. Sir, admitedly the problem is indeed vast as is the population of India. Therefore this should not frighten the Government of India. On the other hand it must spur them to greater effort so that they could see how things are. It is only then that the people will be able to derive the satisfaction through these ideals. Whenever high ideals are placed before the people, they would always judge by the way they are implemented. In fact, we came across many examples where the State Governments have taken steps for the amelioration of the Backward Classes. In the process of recruitment, their claims are entirely ignored. We heard complaints from some States that, whenever new recruits are taken; they recruit people who are known to them and who are socially advanced well whereas candidates belonging to Backward Classes were starving.

(SRI T. MARIAPPA.)

Therefore, we must know that people are too shrewd to be lured away by merely quoting ideals before them. They want concrete examples and concrete implementation of the policies by both the Government of India and the Governments of the States. It is high time that these problems are tackled early and speedily.

With these few words, I heartily support the resolution moved by my friend Sri A. V. Narasimha Reddy.

SRI S. GOPALA GOWDA (Sagar-Hosanagar).—I would like to know from the Government through you, Sir, whether they have received the report of the Commission.

ಸರ್ಕಾರದವರಿಗೆ ಈ ಕಮಿಷನ್‌ನವರ ವರದಿಯು ಬಂದಿದೆಯೇ? ಬಂದಿದ್ದರೆ ಅದರ ಪ್ರತಿಗಳನ್ನು ಸದಸ್ಯರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಪ್ರತಿ ಮಾತ್ರ ಬಂದಿದೆ.

*ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಸದಸ್ಯರಾಗಿರತಕ್ಕ ನರಸಿಂಹರೆಡ್ಡಿಯವರು ಸಭೆಯ ಮುಂದೆ ಈ ನಿರ್ಣಯವನ್ನು ಇಟ್ಟು ಮಾತನಾಡಿದ್ದಾರೆ. ಈ ನಿರ್ಣಯವನ್ನು Backward Class Commissionನವರು ಮಾಡಿರತಕ್ಕ ಶಿಫಾರಸುಗಳನ್ನು ಮೈಸೂರು ಸರ್ಕಾರದವರು ಪರಿಶೀಲನೆಮಾಡಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆನ್ನುವ ವಿಷಯವನ್ನು ಈ ಸಭೆಯು ಸರ್ಕಾರಕ್ಕೆ ಒತ್ತಾಯ ಮಾಡಬೇಕೆನ್ನುವ ಉದ್ದೇಶದಿಂದ ತಂದಿದ್ದಾರೆ. ಮುಖ್ಯವಾಗಿ ಈ ನಿರ್ಣಯ ಸಭೆಯ ಮುಂದೆ ಚರ್ಚೆಯಾಗುವುದಕ್ಕೆ ಮುಂಚೆ ನಮಗೆ ಕಮಿಷನ್ನಿನ ವರದಿ ಕೈಗೆ ಬಂದಿದ್ದು ಆ ವಿಷಯದಲ್ಲಿ ಸರ್ಕಾರದವರು ತಮ್ಮ ಸಲಹೆಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಆದರೆ ಈಗ ಕಮಿಷನ್ನಿನ ಸದಸ್ಯರಾಗಿದ್ದಂಥ ಶ್ರೀಮಾನ್ ಮರಿಯಪ್ಪನವರು ಸಭೆಗೆ ಕೆಲವು ವಿಷಯಗಳನ್ನು ತಿಳಿಸಿರುವುದರಿಂದ ಅದರ ಮೇಲೆ ನಮ್ಮ ಒತ್ತಾಯವನ್ನು ಸರ್ಕಾರಕ್ಕೆ ಸೂಚನೆ ರೂಪದಲ್ಲಿ ಕೊಡಬೇಕೆಂದು ಅಭಿಪ್ರಾಯಪಟ್ಟು ಒಂದೆರಡು ಮಾತುಗಳನ್ನಾಡಬೇಕೆಂದು ಇಷ್ಟಪಟ್ಟಿದ್ದೇನೆ.

ಶ್ರೀಮಾನ್ ಮರಿಯಪ್ಪನವರು ಈ ಕಮಿಷನ್ನಿನ ಒಬ್ಬ ಸದಸ್ಯರಾಗಿದ್ದು ಇಂಡಿಯಾ ದೇಶದಲ್ಲೆಲ್ಲ ಪ್ರವಾಸ ಮಾಡಿ ಮತ್ತು ಆ ವಿಷಯದಲ್ಲಿ ತಜ್ಞರಾಗಿರತಕ್ಕವರ ಅಭಿಪ್ರಾಯಗಳನ್ನು ಅಂಕಿ ಸಂಖ್ಯೆಗಳಿಂದ ಪಡೆದುಕೊಂಡು ಆ ವಿಷಯದ ಮೇಲೆ ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಸಭೆಗೆ ತಿಳಿಸಿದ್ದಾರೆ. ಶ್ರೀಮಾನ್ ನರಸಿಂಹರೆಡ್ಡಿಯವರು ಮತ್ತು ಶ್ರೀಮಾನ್ ಮರಿಯಪ್ಪನವರು, ಇವರಿಬ್ಬರೂ ಹಿಂದುಳಿದ ಪಂಗಡಗಳ ಮತ್ತು ನಿಮ್ನವರ್ಗಗಳ ಅಭಿವೃದ್ಧಿಗಾಗಿ ಸರ್ಕಾರದವರು ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಲಿಲ್ಲವೆನ್ನುವುದನ್ನು ಒಪ್ಪಿಕೊಂಡಿದ್ದಾರೆ. "Had not been even considered at the State level let alone by the Central Government" ಎನ್ನುವ ವಾಕ್ಯವನ್ನು ಹೇಳಿದ್ದಾರೆ. ಈ ರೀತಿ ಹೇಳುವುದು ಉತ್ಪ್ರೇಕ್ಷೆಯಾಗಲಾರದು ಎಂದೂ ತಿಳಿಸಿದ್ದಾರೆ. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ. ನಾವು, ವಿರೋಧ ಪಕ್ಷದ ಸದಸ್ಯರು ಈ ಮಾತನ್ನು ಆಡಿದ್ದರೆ ಬಹುಶಃ ಇತರ ಸದಸ್ಯರೆಲ್ಲರೂ ಅದನ್ನು ಪ್ರತಿಭಟಿಸಿ "ಅವರು ದುರುದ್ದೇಶದಿಂದ ಅಥವಾ ಅಪಾದನೆ ಮಾಡುವ ಉದ್ದೇಶದಿಂದ ಹೇಳುತ್ತಿದ್ದಾರೆಯೇ ಹೊರತು ಅದರಲ್ಲಿ ಸತ್ಯವಿಲ್ಲ" ಎಂದು ಅಂಕಿ ಅಂಶಗಳನ್ನು ಕೊಡುತ್ತಿದ್ದರು, ಆದುದರಿಂದ ಈಗ ಆ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಸಾಧ್ಯವಿಲ್ಲ, ಪ್ರಯತ್ನಗಳನ್ನು ಮಾಡಲಾಗಿದೆ ಆದರೆ ಪ್ರಾಮಾಣಿಕವಾಗಿ ಎಷ್ಟು ಪ್ರಯತ್ನವಾಡಬೇಕೋ ಅಷ್ಟು ಮಾಡಿಲ್ಲವೆನ್ನುವುದನ್ನು ಎಲ್ಲರೂ ಒಪ್ಪಿಕೊಂಡಂತಾಯಿತು. ಇನ್ನೊಂದು ಅಂಶವೇನೆಂದರೆ, ಶ್ರೀಮಾನ್ ಮರಿಯಪ್ಪನವರು ಮಾತನಾಡುತ್ತ ಕೆಲವರು ಸಿನಿಕ್ಸ್ ಇದ್ದಾರೆ, ಅವರೆಲ್ಲ ಮೈಸೂರು ಸಂಸ್ಥಾನದಲ್ಲಿ ಈ ಕ್ಷೇತ್ರದಲ್ಲಿ ಅಂದರೆ ಹಿಂದುಳಿದ ಪಂಗಡ ಮತ್ತು ನಿಮ್ನವರ್ಗದ ಜನಾಂಗದ ಅಭಿವೃದ್ಧಿ ಕ್ಷೇತ್ರದಲ್ಲಿ ಮೈಸೂರು ಸರ್ಕಾರ ಕಳೆದ ಅನೇಕ ವರ್ಷಗಳಿಂದ ಮಾಡಿರತಕ್ಕ ಪ್ರಯತ್ನ ಮತ್ತು ಪಡೆದಿರತಕ್ಕ ಅನುಭವವನ್ನು ಕುರಿತು ಅಡ್ಡಿ ತಡೆಗಳಿಲ್ಲದೆ ಮಾತನಾಡುತ್ತಾರೆ, ಆದರೆ ಈ ಕೆಲಸಕ್ಕೂ ಕಡಮೆಯಾದದ್ದೇನಲ್ಲ, ಬೇರೆ ಪ್ರಾಂತಗಳಿಗೆ ಮುಖ್ಯವಾಗಿ ಉತ್ತರದ ಅನೇಕ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ಮೈಸೂರು ಈ ವಿಷಯದಲ್ಲಿ ಎಷ್ಟೋ ಮುಂದುವರಿದಿದೆ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಆ ಕ್ಷೇತ್ರದಲ್ಲಿ ಬಹುಶಃ ಮೈಸೂರು ಕೆಲವು ವಿಷಯಗಳಲ್ಲಿ ಮುಂದುವರಿದಿರಬಹುದು. ಅದನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಆದರೆ ಇವೊತ್ತಿಗೂ ಕೂಡ ಆ ಸಮಸ್ಯೆಯ ನೂರರಲ್ಲಿ ಒಂದು ಅಂಶವೂ ಕೂಡ ಈ ಪ್ರಯತ್ನದಿಂದ ಪರಿಹಾರವಾಗಿದೆ ಎಂದು ನಾವು ಒಪ್ಪಿಕೊಳ್ಳುವುದು ಕಷ್ಟ. ಇವೊತ್ತಿಗೂ ನೋಡಿದರೆ ಹಾಸ್ಟೆಲ್‌ನಲ್ಲಿ ನಾಲ್ಕಾಣೆ ಬಾಕಿ ಇದ್ದವರಿಗೆ ಊಟ ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಯೂನಿವರ್ಸಿಟಿ ಆದಿಕರ್ಣಾಟಕ ಹಾಸ್ಟೆಲ್‌ನಲ್ಲಿ ಈ ರೀತಿಯಾಗಿ ನಡೆದಿದೆ. ಈ ಹಾಸ್ಟಲುಗಳನ್ನು ನಡೆಸಿಕೊಂಡು ಹೋಗತಕ್ಕ ಕ್ರಮದಿಂದ ಪ್ರಯೋಜನವೇನೋ ಆಗಿದೆ. ಆದರೆ ಅದು ಪರಿಪೂರ್ಣವಾಗಿಲ್ಲ, ಆ ಕೆಲಸದಲ್ಲಿ ಶ್ರದ್ಧೆ ಇಲ್ಲ ಮತ್ತು ಆ ಪ್ರಯತ್ನ ಪೂರ್ಣವಾಗಿ ಪ್ರಯೋಜನವಾಗಿಲ್ಲ. ಈ ಕ್ಷೇತ್ರದಲ್ಲಿ ನಾವು ಮಾಡಬೇಕಾದ ಪ್ರಯತ್ನ ಬಹಳವಾಗಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಸಮಸ್ಯೆ ಎಷ್ಟು ಬೃಹತ್ತರವಾಗಿದೆ ಎಂದು ಶ್ರೀಮಾನ್ ಮರಿಯಪ್ಪನವರು ಹೇಳುತ್ತ ಕಳೆದ ಐದು ಸಾವಿರ ವರ್ಷಗಳಿಂದಲೂ ನಮ್ಮ ದೇಶದಲ್ಲಿ ಈ ರೀತಿಯ ವರ್ಗಗಳನ್ನು (classes) ಕಾಣುತ್ತೇವೆ. ಇಲ್ಲಿ ಈ ಜಾತೀಯತೆ (castes) ಜೊತೆಗೆ ನಿಮ್ನವರ್ಗದವರು, ಟ್ರೈಬ್ಸ್ ಮತ್ತೆ ಇತರ ಕೆಲವು ಗುಂಪುಗಳು ಬಹಳ ವಿಶೇಷವಾಗಿರತಕ್ಕ ಸಾಮಾಜಿಕ ಸಮಸ್ಯೆಯನ್ನು ದೇಶದ ಮುಂದೆ ಒಡ್ಡಿವೆ. ನಾನು ಒಂದು ಸೋಷಿಯಲಿಸ್ಟ್ ಕೋಣ (angle)ದಿಂದ ನೋಡಿದರೂ ಕೂಡ ಈ ರೀತಿ—ಹಿಂದುಳಿದ ಪಂಗಡಗಳಲ್ಲಿ ಅನೇಕ ಜಾತಿಗಳು ಬರುತ್ತವೆ, ಹಾಗೆಯೇ Scheduled Castes ಜಾತಿಗಳೂ ಇವೆ—ಜಾತೀಯತೆಗಳನ್ನು ನಾವು ಹೆಚ್ಚು ಸುಭದ್ರಗೊಳಿಸುತ್ತಿದ್ದೇವೆ. ನಮ್ಮ ದೃಷ್ಟಿಯಿಂದ ನೋಡಿದರೆ ಅವುಗಳಿಗೆ ಪ್ರೋತ್ಸಾಹ ಕೊಡುತ್ತಿದ್ದೇವೆ ಎನ್ನುವ ಪ್ರಶ್ನೆ ಬರುತ್ತದೆ. ಸಾಮಾನ್ಯವಾಗಿ, ಸ್ಥೂಲವಾಗಿ ನೋಡಿದರೆ ವರ್ಗದೃಷ್ಟಿಯಿಂದ ನಾವು ಸಮಾಜವನ್ನು ನೋಡುತ್ತೇವೆ, ಶ್ರೀಮಂತವರ್ಗ, ಮಧ್ಯಮವರ್ಗ ಮತ್ತು ಸಾಮಾನ್ಯ ಬಡವರ ವರ್ಗ, ಕೂಲಿಗಾ

ರರ ವರ್ಗ ಎಂದು ಹೇಳಬಹುದು. ಆದರೆ ಇಲ್ಲಿ ಈ ಸಮಸ್ಯೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಎರಡು ದೃಷ್ಟಿಯಿಂದ ಹಿಂದುಳಿದಿರುವ, ತುಳಿಯಲ್ಪಟ್ಟ ಒಂದು ಜನಾಂಗವಿರುವುದು ನಮ್ಮ ದೇಶದಲ್ಲಿ ಒಂದು ವಿಶೇಷ ಸಮಸ್ಯೆಯಾಗಿದೆ. ಅದನ್ನು ಕಡೆಗಣಿಸಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಬಹು ಸಂಖ್ಯಾತ ಜನರು ಈ ರೀತಿ ಒಂದು ವಿದ್ಯಾಭ್ಯಾಸದಲ್ಲಾಗಲಿ, ಮತ್ತೆ ಇತರ ಕ್ಷೇತ್ರದಲ್ಲಿಯೇ ಆಗಲಿ ಅವರು ಹಿಂದುಳಿದಿರುವುದರಿಂದ ಇದಕ್ಕೆ ಒಂದು ಪ್ರಾಮುಖ್ಯವಾದ ಸ್ಥಾನವನ್ನು ಕೊಟ್ಟು ಈ ಸಮಸ್ಯೆಯನ್ನು ನಾವು ಈ ಹೊತ್ತು ಪರಿಹಾರ ಮಾಡಬೇಕಾಗಿದೆ. ಹಿಂದುಳಿದ ವರ್ಗಗಳ ಕಮಿಷನ್ನಿನವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆನ್ನುವುದನ್ನು ನಾವೇನೂ ಅವರ ವರದಿಯನ್ನು ನೋಡಿಲ್ಲ. ಅವರು ಹೇಳಿರುವ ಪ್ರಕಾರ 'ವಿದ್ಯಾಭ್ಯಾಸದಲ್ಲಿ ಸುಮಾರು 70 ಸೀಟುಗಳನ್ನು ಟೆಕ್ನಿಕಲ್ ಕಾಲೇಜುಗಳಲ್ಲಿ ಕೊಡಬೇಕೆಂದು ಶಿಫಾರ್ಸು ಮಾಡಿದ್ದೇವೆ, ಹಾಗೆಯೇ ಸ್ಕಾಲರ್‌ಷಿಪ್‌ಗಳನ್ನು ಹೆಚ್ಚು ಹೆಚ್ಚಾಗಿ ಕೇಂದ್ರ ಸರ್ಕಾರದವರು ಕೊಡಬೇಕು ಎಂದು ಶಿಫಾರ್ಸು ಮಾಡಿದ್ದೇವೆ' ಇತ್ಯಾದಿ ಕಲವು ಶಿಫಾರ್ಸುಗಳನ್ನು ಹೇಳಿದರು.

ಈಗ ಕೇಂದ್ರ ಸರ್ಕಾರದವರು ಹಿಂದುಳಿದ ಜನಾಂಗದವರಿಗೆ ಮತ್ತು ಇತರ ಜನಾಂಗದವರಿಗೆ ವಿದ್ಯಾರ್ಥಿ ವೇತನ ಕೊಡುತ್ತಿದ್ದಾರೆ. ಆದರೆ ಈ ಹೊತ್ತು ಕೂಡ ತಕ್ಕದ್ದು ಅತಿ ಕಡಮೆ. ಉದ್ದೇಶವೇನಿದೆಯೆಂಬುದನ್ನು ಶ್ರೀ ಮರಿಯಪ್ಪನವರು ಹೇಳಿದರು. ಇನ್ನು ಮೂರನೆಯ ಜನರೇಷನ್ ಬಂದಾಗ ಹಿಂದುಳಿದವರು ಮತ್ತು ನಿಮ್ನ ವರ್ಗದವರು ಸಾರ್ವತ್ರಿಕವಾಗಿ ಸ್ಪರ್ಧಿಸಿ ತಮ್ಮ ಸ್ಥಾನಗಳನ್ನು ಆರಿಸಿಕೊಳ್ಳುವುದಕ್ಕೆ ಅಥವಾ ಪಡೆಯುವುದಕ್ಕೆ ಸಮರ್ಥರಾಗಬಹುದು ಎಂದು ಹೇಳಿದರು. ಬಹುಶಃ ಈಗಿನ ಪ್ರಯತ್ನದ ಆಧಾರದ ಮೇಲೆ ಅವರು ಆ ರೀತಿ ಹೇಳಿದ್ದಾರೆಂದು ತಿಳಿದುಕೊಂಡಿದ್ದೇನೆ. ಈಗಿನ ಪ್ರಗತಿ ಮತ್ತು ಕಾರ್ಯಕ್ರಮ ನೋಡಿದರೆ 3 ಜನರೇಷನ್ ಅಲ್ಲ, 30 ಜನರೇಷನ್ ಆದರೂ ಆಗುವುದಿಲ್ಲ. ಈ ದಿವಸ ಪ್ರಯತ್ನಗಳು ಬರೀ ಮಾತಿನಲ್ಲಿ ನಡೆದಿವೆ. ಕಸಬೇನು, ಯಾವ ರೀತಿ ಇದ್ದಾರೆ ಎಂದು ಇನ್ನೂ ಸರ್ವೆಯಾಗುವುದರೊಳಗೇ ಇದೆ. ಸೆನ್ಸಸ್ ಆಧಾರದ ಮೇಲೆ ಸಂಗ್ರಹಿಸಿ ಒಂದು ಸ್ಥೂಲವಾದ ವರದಿಕೊಡುವ ಸಾಮರ್ಥ್ಯವನ್ನು ನಮ್ಮ ದೇಶದಲ್ಲಿ ಪಡೆದಿದ್ದಾರೆ ಈ ಹೊತ್ತು ನಿಪುಣರು ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದರಲ್ಲೇ ಇದ್ದಾರೆ. ಸ್ಥಾನಗಳನ್ನು ಮೀಸಲಾಗಿಡುವುದು ತಪ್ಪು ಎಂಬ ಅಭಿಪ್ರಾಯ ಒಂದು ಕಡೆ ಇದೆ. ಶ್ರೀಮಾನ್ ಅಂಬೇಡ್ಕರ್‌ರವರು ಹಿಂದೆ ಬೆಂಗಳೂರಿಗೆ ಬಂದಾಗ ಭಾಷಣಮಾಡುವಾಗ ನಿಮ್ನವರ್ಗದವರಿಗೆ ರೆಸರ್ವೇಷನ್ ಇರಬಾರದೆಂದು ತಿಳಿಸಿದರು. ಏಕೆ ಹಾಗೆ ಹೇಳಿದರೆಂದರೆ ಸ್ಥಾನಗಳನ್ನು ಮೀಸಲಾಗಿಡುವುದರಿಂದ ಹರಿಜನರಾಗಲಿ, ನಿಮ್ನವರ್ಗದವರಾಗಲಿ ಅವರೇ ಬೇರೆ ಇರುವ ಅವಕಾಶ ಹೆಚ್ಚುತ್ತದೆ ಮತ್ತು ಈ ಪ್ರತ್ಯೇಕತೆ ಹೆಚ್ಚು ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಮತ್ತು ಅವರು ಸಮಗ್ರ ಸಮಾಜದಲ್ಲಿ ಲೀನವಾಗುವುದಕ್ಕೆ ಅಥವಾ ಸೇರಿ ಹೋಗುವುದಕ್ಕೆ ಅದು ಸಹಕಾರಿಯಾಗಿಲ್ಲ ಎಂಬ ಅಭಿಪ್ರಾಯ ಅವರಿಗಿತ್ತು.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಜಾಯಿಂಟ್ ಎಲೆಕ್ಷನ್ ಇರುವುದರಿಂದ ಇತರರು ಪ್ರಭಾವ ಬೀರುವುದರಿಂದ ನಿಮ್ನ ವರ್ಗದಲ್ಲಿ ಯಾರು ಸರಿಯಾದ ಉಮೇದುವಾರರೆಂದು ಗೊತ್ತಾದರೂ ಅವರನ್ನು ತರುವುದಕ್ಕೆ ಈಗಿನ ಪರಿಸ್ಥಿತಿಯಲ್ಲಿ ಅವಕಾಶವಾಗಿಲ್ಲ. ಅದಕ್ಕಾಗಿ ಜಾಯಿಂಟ್ ಎಲೆಕ್ಷನ್ ಇರುವುದರಿಂದ ರಿಸರ್ವೇಷನ್ ಬೇಡ ಎಂದು ಈ ದಿವಸ ಹೇಳುತ್ತಿದ್ದೇನೆ ಎಂದು ಅವರು ಹೇಳಿದರು.

ಶ್ರೀ ಎಸ್. ಗೋಪಾಲಗೌಡ.—ಅವರ ಉದ್ದೇಶ ಪ್ರತ್ಯೇಕತೆ ಹೋಗಬೇಕೆಂಬುದು ಒಂದು, ಸಾಮಾನ್ಯವಾಗಿ ಸಾರ್ವತ್ರಿಕವಾಗಿ ಚುನಾವಣೆಗಳಲ್ಲಿ ನಿಂತುಕೊಳ್ಳಬೇಕೆಂಬುದು ಒಂದು. ಅದರಬಗ್ಗೆ ಹೆಚ್ಚಿನ ಚರ್ಚೆಯನ್ನು ಮುಂದುವರಿಸುವುದಕ್ಕೆ ಇಷ್ಟಪಡುವುದಿಲ್ಲ. ಇವರಲ್ಲಿ ಈ ಪ್ರತ್ಯೇಕತೆಯನ್ನು ಹೋಗಲಾಡಿಸಿ ಜೊತೆಗೆ ಅವರ ಅಭಿವೃದ್ಧಿಯನ್ನು ಸಾಧಿಸುವುದು ಹೇಗೆ ಎಂಬುದು ಮುಖ್ಯವಾದ ಸಮಸ್ಯೆ. ಈ ಸಮಸ್ಯೆಯಲ್ಲಿ ಮೂಲವಾಗಿ ಆರ್ಥಿಕ ಸಮಸ್ಯೆ ಹೆಚ್ಚು ಪ್ರಾಧಾನ್ಯವಾಗಿದೆ. ಜೊತೆಗೆ ಸಾಮಾಜಿಕವಾಗಿ ಕೂಡ ಸಮಾಜದಲ್ಲಿ ಅಸ್ಪೃಶ್ಯತೆ ಇತ್ಯಾದಿ ಅನರ್ಹತೆಗಳಿವೆ. ಅಂಥ ಅನರ್ಹತೆಗಳನ್ನು ಹೊಡೆದು ಹಾಕುವುದಕ್ಕೆ ಕೂಡ ಒಂದು ಹೆಚ್ಚಿನ ಪ್ರಯತ್ನ ಎರಡು ಮುಖವಾಗಿ ನಡೆಯಬೇಕಾಗಿದೆ. ಈಗ ಮಾಡುತ್ತಿರುವ ಪ್ರಯತ್ನಗಳಲ್ಲಿ ಲೋಪ ದೋಷಗಳು ಹೆಚ್ಚಾಗಿವೆ. ಇದರಿಂದ ಪ್ರಗತಿಯೇನೂ ಆಗುತ್ತಿಲ್ಲ. ಮನೆ ಕಟ್ಟಿಸಿಕೊಡುವ ಒಂದು ಯೋಜನೆಯಿದೆ; ಊಟ, ಉಚಿತ ವಸತಿ ಇವನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸುವ ಒಂದು ಯೋಜನೆಯಿದೆ; ಮತ್ತು ಕಾನೂನು ಪ್ರಕಾರ ರಿಸರ್ವಿಟಿ ತೆಗೆದು ಹಾಕಲು ಇವರೆಲ್ಲರೂ ದೇವಸ್ಥಾನಗಳಿಗೆ ಹೋಗಬಹುದೆಂದು ಹೇಳಿದೆ. ಆದರೂ ಅದು ಕಾರ್ಯತಃ ಬಹಳ ಕಡಿಮೆಯಾಗಿ ಜಾರಿಯಲ್ಲಿ ಬಂದಿದೆ. ಇದಕ್ಕೆ ಹೆಚ್ಚಿನ ಒಂದು ಪ್ರಯತ್ನ ಮಾಡಬೇಕಾಗುತ್ತದೆ. ಇದರಲ್ಲಿ ಕೆಲವುಕಾಲ ಮುಂದುವರಿದ ಜನಾಂಗಗಳು ಬಹಳವಾಗಿ ಸ್ಥಾನಗಳನ್ನು ಗಳಿಸಿಕೊಡುವ ಹಾಗೆ ಕೂಡ ಅವಕಾಶವಿದೆಯೆಂದು ಕಾಣುತ್ತದೆ. ಆದರೆ ಮುಂದುವರಿದ ಜನಾಂಗಗಳಿಗೆ ಸೀಟುಗಳನ್ನು ಕೊಡುವಾಗ ಅವರಿಗೆ ಡಿನೈ ಮಾಡಿ ಹಿಂದುಳಿದವರಿಗೆ ಹೆಚ್ಚಿಗೆ ಕೊಡುತ್ತೇವೆಂದು ಹೇಳುವ ವಾದದಲ್ಲಿ ಒಂದು ನ್ಯಾಯವಿರುವುದಿಲ್ಲ. ರಾಜ್ಯಾಂಗದ ಪ್ರಕಾರವಾಗಲಿ ಅಥವಾ ಒಂದು ಸಾಮಾನ್ಯ ನ್ಯಾಯವೆಂದು ಹೇಳುವ ರೀತಿಯಲ್ಲಾಗಲಿ ಹಿಂದುಳಿದ ಜನಾಂಗದವರಿಗೆ ಕೊಟ್ಟಿದ್ದೇವೆ, ನಿಮಗೆ ಬೇಡ ಎಂದು ಹೇಳಿದರೆ ಪರಿಣಾಮವೇನೆಂಬುದನ್ನು ನೋಡಬೇಕು. ಈ ಒಂದು ಸಮಸ್ಯೆಯ ವಿಷಯದಲ್ಲಿ ದೊಡ್ಡವರೂ ಕೂಡ ಅಭಿಪ್ರಾಯ ಸೂಚಿಸಿದ್ದಾರೆ. ಸರ್. ಎಂ. ವಿಶ್ವೇಶ್ವರಯ್ಯನವರೂ ಕೂಡ ಒಮ್ಮೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಜಾತಿ ಆಧಾರದ ಮೇಲೆ ಸೀಟನ್ನು ಹಂಚುವುದು ಒಂದು ಸಮಸ್ಯೆಯಾಗಿದೆ. ಮುಂದುವರಿದಿದ್ದಾರೆಂಬ ಜನಾಂಗದ ವಿದಾರ್ಥಿಗಳಿಗೆ, ಅಭ್ಯರ್ಥಿಗಳಿಗೆ ಸೀಟುಗಳು ಸಿಕ್ಕದೇ ಹೋದರೆ ಅದರಿಂದ ಪ್ರಗತಿಗೆ ಧಕ್ಕೆ ಬರುವುದಿಲ್ಲವೆ ಎಂಬ ಅವರ ಅಭಿಪ್ರಾಯ ನ್ಯಾಯವಾಗಿದೆ. ಈ ದಿವಸ ಶೇಕಡ 70 ಸೀಟುಗಳನ್ನು ಹಿಂದುಳಿದವರಿಗೆ ನಿಮ್ನ ವರ್ಗದವರಿಗೆ ಮೀಸಲಾಗಿಡುತ್ತೇವೆ. ಅವರಿಗೆ ಮತ್ತೆ ಪ್ರೋತ್ಸಾಹ ಕೊಡುತ್ತೇವೆ ಎಂದು ಹೇಳಿದ ಮೇಲೆ ಬೇರೆ ಮುಂದುವರಿದ ಜನಾಂಗಗಳಿಗೆ ನೀವು ಸೀಟುಗಳನ್ನು ಕಡಿಮೆಮಾಡಿದಂತಾಯಿತು, ಅಷ್ಟರಮಟ್ಟಿಗೆ ಅವರ ಪ್ರಗತಿ ಕುಂಠಿತವಾಗುತ್ತದೆ. ಈ ದಿವಸ ಹೆಚ್ಚು ಹೆಚ್ಚಾಗಿ ಶಾಲೆಗಳನ್ನು ತೆರೆಯಬೇಕು, ರಾಜ್ಯಾಂಗದ ಪ್ರಕಾರ 6 ವರ್ಷಗಳಾದ ಎಲ್ಲ ಮಕ್ಕಳಿಗೂ 14 ವರ್ಷಗಳವರೆಗೆ ವಿದ್ಯಾಭ್ಯಾಸವನ್ನು ಕೊಡಬೇಕು ಎಂದು ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿ ಹೇಳಿದ್ದಾರೆ. ಆದರೆ ಅದು ಈ ದಿವಸ ಸಾರ್ಥಕವಾಗಿಲ್ಲ. ಅದಕ್ಕೆ ಯಾವ ಒಂದು ನಿರ್ಧಾರವಾದ ಹೆಜ್ಜೆ ಇಟ್ಟಿಲ್ಲ.

(ಶ್ರೀ ಎಸ್. ಗೋಪಾಲಗೌಡ.)

ಮೈಸೂರು ಸರ್ಕಾರದಲ್ಲಿ ಪ್ರಗತಿ ಹೆಚ್ಚಾಗಿದೆ. ವಿದ್ಯಾಭ್ಯಾಸದ ಪ್ರಗತಿ ಹೆಚ್ಚಾಗಿದೆ ಎಂದು ಕೇಳಿಬರುತ್ತಿದೆ. ಮತ್ತು ಶ್ರೀಮಾನ್ ಹನುಮಂತಯ್ಯನವರ ಮುಖಂಡತ್ವದಲ್ಲಿ ಬಹಳ ಪ್ರಯತ್ನಪಟ್ಟು ಒಂದು ವಿದ್ಯಾಭ್ಯಾಸದ ಸುಧಾರಣಾ ಸಮಿತಿಯನ್ನು ಏರ್ಪಾಡುಮಾಡಿ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕೆಂದಿದ್ದಾರೆ. ಆ ಕೆಲಸ ಮುಂದುವರಿಯುತ್ತಿದೆ. ಆದರೆ ಅದು ಆರಂಭ ಶೂರತ್ವದಲ್ಲೇ ಕೊನೆಗೊಂಡಿದೆಯೇ ಹೊರತು ಕಾರ್ಯಗತಃ ಏನೂ ಆಗಿಲ್ಲ. ಸಂಸ್ಥಾನದಲ್ಲಿ ಇನ್ನೂ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳೇ ಇಲ್ಲ ಮತ್ತು ಪ್ರಾಥಮಿಕ ವಿದ್ಯಾಭ್ಯಾಸ ದೊರೆಯುತ್ತಿಲ್ಲ. ಮುಖ್ಯವಾಗಿ ನಿಮ್ನ ವರ್ಗದವರಿಗೆ ಕೊಡತಕ್ಕ ಪ್ರೋತ್ಸಾಹ ಬಹಳವಾಗಿ ಮಾತಿನ ಪ್ರೋತ್ಸಾಹವಾಗಿದೆ. ಹಿಂದುಳಿದ ಜನಾಂಗದಲ್ಲಿ ಶೇಕಡ 60 ಭಾಗದವರು ವಿದ್ಯೆಯನ್ನರಿಯದವರು ಹಳ್ಳಿಗಳಲ್ಲಿರುವಾಗ ಅವರನ್ನು ಸ್ಕೂಲಿಗೆ ತರುವುದುಕೂಡ ಕಷ್ಟವಾಗಿದೆ. ಆರ್ಥಿಕವಾಗಿ ಹೀನಸ್ಥಿತಿಯಿರುವುದರಿಂದ ಅವರು ಸ್ಕೂಲಿಗೆ ಬಾರದಿರುವ ಪರಿಸ್ಥಿತಿಯಿದೆ. ಆದ್ದರಿಂದ ಈ ಬೃಹತ್ ಸಮಸ್ಯೆಯನ್ನು ಸರ್ಕಾರದವರು ಆಳವಾದ ಯೋಚನೆಮಾಡಬೇಕು. ಬರೀ ಓಟು ತೆಗೆದುಕೊಳ್ಳುವ ದೃಷ್ಟಿಯಿಂದ ಇದುವರೆಗೆ ಪ್ರಯತ್ನ ನಡೆದಿದೆಯೆಂದು, ಬಹಳ ಕಹಿಯಾದರೂ ಈ ವಿಷಯವನ್ನು ಸತ್ಯದಿಂದ ಈ ದಿವಸ ಹೇಳಬೇಕಾಗಿದೆ. ಏಕೆಂದರೆ ಅವರ ಸಂಖ್ಯೆ ಹೆಚ್ಚು, ಅವರು ನಮ್ಮ ಜೊತೆಗೆ ಇರಬೇಕು. ಮಹಾತ್ಮ ಗಾಂಧಿಯವರು ಅವರ ವಿಷಯ ಬಹಳವಾಗಿ ಹೇಳಿದ್ದಾರೆ ಎಂದು ಅವರನ್ನು ಯಾವರೀತಿ ಗುಡ್ ಹ್ಯೂಮರ್‌ನಲ್ಲಿಡಬೇಕು, ಯಾವರೀತಿ ಬೇರೆ ಕಡೆಗೆ ಹೋಗದ ಹಾಗೆ ಆಶೆ ತೋರಿಸಬೇಕು ಎಂದು ಕಾಂಗ್ರೆಸ್ ಸರ್ಕಾರ ಇದುವರೆಗೆ ಪ್ರಯತ್ನ ಮಾಡಿದೆಯೆಂದು ಕಾಣುತ್ತದೆ. ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಫಲಿತಾಂಶ ನೋಡಬೇಕು. ದೇವಾಲಯ ಪ್ರವೇಶಕ್ಕೆ ಅವಕಾಶ ವೇನೋ ಕೊಟ್ಟಿದ್ದಾರೆ. ಆದರೆ ಕಾಶಿಯಲ್ಲಿ ವಿಶ್ವನಾಥನಿಗೆ ಹಾರ ಹಾಕಬೇಕೆಂದು ಹೋದಾಗ ಏನಾಯಿತೆಂಬುದನ್ನು ನೋಡಬೇಕು. ವಿಧಿಯಿಲ್ಲದೆ ಒಟ್ಟಿಗೆ ಕಲೆತಾಗ ಇತರರು ಹರಿಜನರೊಂದಿಗೆ ಊಟ ವಗೈರೆ ಮಾಡುತ್ತಾರೆ. ಆದರೆ ಬಹಳ ಕಷ್ಟದಿಂದ ಊಟ ಮಾಡಿ ಸ್ನಾನಮಾಡುವ ಜನರೂ ಇರುತ್ತಾರೆ. ರಿಸರ್ವೇಷನ್ ನಮ್ಮ ಹಕ್ಕಿಗೆ ಧಕ್ಕೆ ಬಾರದಿರುವ ಹಾಗೆ ಆಗಿ ಅಭಿವೃದ್ಧಿಯಾದರೆ ಆಗಲಿ, ಹೊರಗಡೆ ಮನೆ ಬೇಕಾದರೆ ಕಟ್ಟಿ ಕೊಡಲಿ, ಆದರೆ ಹೆಂಚಿನ ಮನೆ ಏಕೆ ಎಂದು ಹೇಳುವವರೂ ನಮ್ಮ ದೇಶದಲ್ಲಿದ್ದಾರೆ. ಆ ರೀತಿ ಅಭಿವೃದ್ಧಿ ಮಾಡುವುದರಿಂದ ಪ್ರಯೋಜನವಿಲ್ಲ. ಮುಖ್ಯವಾಗಿ ಯಾರು ಹಿಂದುಳಿದಿದ್ದಾರೋ ಅವರಲ್ಲಿ ಒಂದು ಜಾಗೃತಿಯನ್ನುಂಟುಮಾಡಿ ಅವರ ಹಕ್ಕು ಬಾಧ್ಯತೆಗಳನ್ನು ಉತ್ತಮಪಡಿಸಿ ಅವರು ಆಧುನಿಕ ಪ್ರಪಂಚದಲ್ಲಿ ಹೇಗಿರಬೇಕೆಂಬುದನ್ನು ಅರ್ಥಮಾಡಿಕೊಳ್ಳುವಂತೆ ಕೆಲವು ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಿ ಕ್ರಾಂತಿಕಾರಕವಾದ ಕೆಲವು ಹೆಜ್ಜೆಗಳನ್ನು ಸರ್ಕಾರ ಇಡದೇಹೋದರೆ ಮೂರು ಜನರೇಷನ್ ಅಲ್ಲ, ಮೂವತ್ತು ಜನರೇಷನ್ ಆದರೂ ಈಗಿರುವ ಸಮಸ್ಯೆ ಬಗೆಹರಿಯುವುದಿಲ್ಲ. ಮೈಸೂರಿನಲ್ಲಿ ಬಹಳ ಕೆಲಸ ನಡೆದಿದೆ. ಬಾಕಿ ಕಡೆ ಇಲ್ಲ ಎಂದು ಹೇಳುವುದರಿಂದ ಇದನ್ನೆಲ್ಲಾ ಹೇಳಬೇಕಾಗಿದೆ. ಮುಖ್ಯವಾಗಿ ಮೈಸೂರು ಸರ್ಕಾರ ಹೆಚ್ಚು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

4-30 P.M.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಇದುವರೆಗೂ ಇಲ್ಲಿನಡೆಸಿರತಕ್ಕಂಥ ಚರ್ಚೆಯನ್ನು ನಾವುಗಳೆಲ್ಲರೂ ಬಹಳ ಉತ್ಸಾಹದಿಂದ ನೋಡಿದ್ದೇವೆ ಮತ್ತು ಕೇಳಿದ್ದೇವೆ. ಆದರೆ ಈ ವಿಚಾರ ಇಲ್ಲಿ ಚರ್ಚೆಯಾಗುತ್ತಿರುವುದು ಇದೇ ಮೊದಲನೆಯ ಸಲವಲ್ಲ. ಒಂದಲ್ಲಾ ಒಂದುರೂಪದಲ್ಲಿ ಈ ವಿಚಾರ ಇದೇ ಸಭೆಯಲ್ಲಿ ಅನೇಕಸಾರ್ತಿ ಚರ್ಚೆಯಾಗಿದೆ. ಜನರಿಗಿರತಕ್ಕ ಅನಾನುಕೂಲ ಮತ್ತು ತೊಂದರೆಗಳು ಹಾಗೂ ಅವರಿಗಿರತಕ್ಕ ಕಷ್ಟ ಪರಂಪರೆಗಳನ್ನು ಇಲ್ಲಿ ತಿಳಿಸುವುದಕ್ಕೆ ಮಾತ್ರ ಅವಕಾಶಮಾಡಿಕೊಟ್ಟರೆ ಸಾಕೆಂಬ ತತ್ವವನ್ನು ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಶ್ರೀಮಾನ್ ಟಿ. ಮರಿಯಪ್ಪನವರು ಭಾಷಣಮಾಡಿದ ಕಾಲದಲ್ಲಿ ಅವರು ಇಡೀ ಇಂಡಿಯಾ ದೇಶದ ಒಂದು ಸಮಗ್ರ ಚಿತ್ರವನ್ನು ಇಡುವಾಗಲೇ ಇಂಡಿಯಾ ದೇಶದಲ್ಲಿರತಕ್ಕ ಈ ಸಮಾಜಗಳ ಒಂದು ಚಿತ್ರವನ್ನೂ ಸಹ ಇಟ್ಟಿದ್ದಾರೆ. ಅವರು ಹೇಳಿರತಕ್ಕ ವಿಚಾರ ಹೇಗಿದೆಯೆಂದರೆ, ಭಾರತ ದೇಶದಾದ್ಯಂತವೂ ತಿರುಗಿ ಸಮಗ್ರ ವಿಚಾರಗಳನ್ನು ಶೇಖರಣೆಮಾಡಿತದನಂತರ ಒಂದು ಮಹತ್ತರವಾದಂಥ ವರದಿಯನ್ನು ಭಾರತ ಸರ್ಕಾರಕ್ಕೆ ಒಪ್ಪಿಸಿರುವುದಾಗಿ ಹೇಳಿದ್ದಾರೆ. ಆ ವರದಿ ಮೈಸೂರಿಗೂ ಬಂದಿದೆ. ಅಷ್ಟಾಗಿದ್ದರೂ ಅದರಲ್ಲಿ ಸೂಚಿಸಿರುವ ಪ್ರಕಾರ ಕಾರ್ಯಕ್ರಮಗಳನ್ನು ಕೈಗೊಳ್ಳದಿರುವುದು ಬಹಳ ಆಶ್ಚರ್ಯವಾಗಿದೆ. ಇದನ್ನು ಇಲ್ಲಿಯವರೆಗೂ ಕಾರ್ಯಗತ ಮಾಡದಿರುವುದು ಇಂಡಿಯಾ ಸರ್ಕಾರದ ಮತ್ತು ಪ್ರಾಂತೀಯ ಸರಕಾರಗಳಿಗೆಲ್ಲ ತುಂಬ ನಾಚಿಗೇಡಾದಂಥ ವಿಚಾರವಾಗಿರುವುದಲ್ಲದೆ ಇದು ಬಹಳ ಅಕ್ಷಮ್ಯವಾದಂಥ ವಿಚಾರವೂ ಆಗಿದೆ. ಕೇಂದ್ರಕ್ಕೆ ಪ್ರತಿಯೊಂದು ಪ್ರಾಂತೀಯ ಸರ್ಕಾರಗಳೂ ಸಾಮಂತ ಸರ್ಕಾರಗಳಾಗಿರುವುದರಿಂದ ಆ ಕೇಂದ್ರದಲ್ಲಿ ಏನೇನು ಕಾರ್ಯಾಚರಣೆಗಳು ನಡೆಯುತ್ತವೆಯೋ ಅವುಗಳೆಲ್ಲವನ್ನೂ ಇಲ್ಲಿ ಸಂಸ್ಥಾನ ಸರ್ಕಾರಗಳು ಆಟೋಮ್ಯಾಟಿಕಾಗಿ ಇಲ್ಲಿಯೂ ಮಾಡಲೇಬೇಕೆಂಬ ನಿಯಮವಿರುವಾಗ ನಾವೇಕೆ ಹೀಗೆ ನಮ್ಮ ಸರ್ಕಾರವನ್ನು ಈ ವಿಚಾರದಲ್ಲಿ ಯಾವುದೋ ಒಂದುರೂಪದಲ್ಲಿ ಈ ಕಾರ್ಯವನ್ನು ಮಾಡಿ ಎಂದು ಏಕೆ ಒತ್ತಾಯಪಡಿಸಬೇಕು ? ಈ ಹಿಂದುಳಿದ ಜನಾಂಗಗಳ ಅಭಿವೃದ್ಧಿಯ ವಿಚಾರದಲ್ಲಿ ಒಂದು ಖಚಿತವಾದ ಭರವಸೆಯನ್ನು ಕೊಡಲು ಇಲ್ಲಿಗೆ 300 ವರ್ಷಗಳಿಂದಲೂ ಯಾರೂ ಕೂಡ ಮುಂದೆ ಬಂದಿಲ್ಲ. ಈ ಒಂದು ವಿಚಾರದಲ್ಲೇ ಅಲ್ಲ. ಇಂಥ ಅನೇಕ ವಿಚಾರಗಳಲ್ಲಿ ಯಾವತ್ತೂ ಸರ್ಕಾರಗಳೂ ಯೂನಿಫಾರಂ ಆಗಿ ಸೈಲೆಂಟಾಗಿರುತ್ತವೆ. ಮಹಾತ್ಮ ಗಾಂಧಿಯವರು ಸತ್ಯ, ಧರ್ಮ, ಅಹಿಂಸೆಗಳ ತಳಹದಿಯ ಮೇಲೆ ಯಾವ ಈ ಒಂದು ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸಿದರೋ ಮತ್ತು ನಿರ್ಮಾಣಮಾಡಿದರೋ ಅದಕ್ಕಿಂತಲೂ ಹಿಂದೆ ಇದ್ದ ಸರ್ಕಾರಗಳ ಕಾಲಕ್ಕೆ ಹಿಂದೆ ಕೂಡ ಆ ಮನು ಎಂಬತಕ್ಕವನು ಬರೆದಿರತಕ್ಕ ಧರ್ಮಶಾಸ್ತ್ರವನ್ನು ಇವತ್ತಿನವರೆಗೆ ಯಾವೊಂದು ಸರ್ಕಾರವೂ ಅನುಸರಿಸಿರುವುದಿಲ್ಲ. ಮುಂದೆ ಯಾವ ಕಾಲಕ್ಕೂ ಆ ರೀತಿ ನಡೆಯುವುದಿಲ್ಲ. ಆ ಧರ್ಮಶಾಸ್ತ್ರವನ್ನು ಬರೆದಾತ ಸುಮ್ಮನೆ ಹೇಳಿದ್ದಾನೆ "ಸರ್ವೇಜನಾ ಸ್ಸುಖಿನೋಭವಂತು," "ಆತ್ಮಾನಂ ಸರ್ವಭೂತೇಷು", "ಅಹಂ

ಬ್ರಹ್ಮಾಸ್ಮಿ '', '' ಸತ್ಯಮೇವ ಜಯತೆ '', ''ನಾನೃತಂ ಪುಣ್ಯಂ'' ಎಂದು ಇತ್ಯಾದಿ ಪಲ್ಲವಿಗಳನ್ನು ಎಷ್ಟೋ ಹಾಡಿದ್ದಾರೆ. ಆದರೆ ಇಂದು ಈ ಪಲ್ಲವಿಗಳನ್ನೆಲ್ಲಾ ಬದಲಾಯಿಸಬೇಕಾದಂಥ ಕಾಲಬಂದಿದೆ. ಈ ಪಲ್ಲವಿಗಳಲ್ಲಿ ಯಾವ ಬಲವೂ ತಿರುಳೂ ಇಲ್ಲದಿದ್ದಾಗ್ಯೂ ಇಂದಿನ ರಾಜಕಾರಣಿಗಳಿಗೆ ಇಂಥ ಪಲ್ಲವಿಗಳನ್ನು ಉಪಯೋಗಿಸಿಕೊಂಡು ತಮ್ಮ ಒಂದು ರಾಜನೀತಿಯನ್ನು ಹೇಳುವುದಕ್ಕೆ ಈ ದಿವಸ ಇವುಗಳೆಲ್ಲಾ ಒಂದು ಆಡಿಪಾಯವಾಗಿರುತ್ತವೆ. ಆದುದರಿಂದಲೇ ನಾವೀ ದಿವಸ ನಮ್ಮ ರಾಜ್ಯಂಗದಲ್ಲಿ ಇವುಗಳನ್ನೆಲ್ಲಾ ಬದಲಾಯಿಸಿರುತ್ತೇವೆ. ಹೊಸರಾಜ್ಯಾಂಗದಲ್ಲಿ ಹೇಳಿರುವುಕ್ಕೆ ಅನುಗುಣವಾಗಿ, we have to take the spirit of the Constitution. ಆ ರೀತಿ ಮಾಡುತ್ತಿಲ್ಲವೆಂದು ಹೇಳತಕ್ಕ ಜನರು ಈಗ ನಮ್ಮ ದೇಶದಲ್ಲಿದ್ದಾರೆ. ಆದರೆ ಈ ಹೊತ್ತು ನಾವು ಆ ನಮ್ಮ ರಾಜ್ಯಾಂಗದಲ್ಲಿ ಹೇಳಿರತಕ್ಕಂಥ Equality of opportunity ಎನ್ನುವುದು ಯಾವುದರ ಮೇಲೆ ನಿಂತಿದೆ? Every human being, man or woman, has got a nose and two eyes; therefore they are equal ಎಂದು ಹೇಳತಕ್ಕ ಲಾಜಿಕ್ಕಿಗೆ ನಾವೀಗ ಬಂದುಬಿಟ್ಟಿದ್ದೇವೆ. ಈಗ ಧರ್ಮವನ್ನ ಸಾರುತ್ತಿರುವಂಥ ಜನರು ರಾಜಕೀಯಕ್ಕೆ ಬಂದು ''ಮುರಾರಲ-ಇಪ್ಪತ್ತು'' ಅನ್ನುವುದನ್ನು ಒಪ್ಪಲೇ ಬೇಕು. ಹಾಗೆ ಒಪ್ಪದಿದ್ದರೆ ನೀವು ಈ ರಾಜಕೀಯದಲ್ಲಿ ನಿಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತೀರಿ ಎಂಬುದಾಗಿ ಹೇಳುವ ಕಾಲ ಬಂದಿದೆ. ಈ ರೀತಿಯಾಗಿ ಯಾರೇ ಹೇಳಲಿ ಆ ಶ್ರೀಮಾನ್ ನೆಹರು ಅವರೇ ಹೇಳಲಿ ಅಂಥ ಒಂದು ಪದವಿ ಯಾರ ಕೈಲೇ ಇರಲಿ ನೀವು ಹೇಳತಕ್ಕದ್ದು ಧರ್ಮಸಮನ್ವಯವಾದ್ದಲ್ಲ, ಲೆಕ್ಕಚಾರವಾದುದಲ್ಲ ಎಂದು ಹೇಳತಕ್ಕಂಥ ಘಟ್ಟಿನರಗಳುಳ್ಳಂಥ ಜನರಿಲ್ಲ. ಇದೇ ಬಂದಿರತಕ್ಕಕಷ್ಟ. 'I am not directing my voice entirely towards Nehru. There is something wrong somewhere. ಇದಕ್ಕೆ ಅನೇಕ ಷೇರ್‌ಹೋಲ್ಡರುಗಳಿದ್ದಾರೆ. ಈ ಹಿಂದುಳಿದ ಜನಾಂಗಗಳ ಅಭಿವೃದ್ಧಿಯ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬತಕ್ಕ ವಿಚಾರದಲ್ಲಿ ಈಗಾಗಲೆ ಒಂದು ವರದಿಯು ಕೇಂದ್ರಸರ್ಕಾರದವರ ಕೈಸೇರಿದೆ. ಆ ಸಮಿತಿಯಲ್ಲಿ ನಮ್ಮ ಈ ಮಾನ್ಯಸಭೆಯ ಸದಸ್ಯರಾದ ಶ್ರೀಮಾನ್ ಟಿ. ಮರಿಯಪ್ಪನವರೂ ಸದಸ್ಯರಾಗಿದ್ದರು. ಆದರೆ ಈ ದಿವಸ ಅಷ್ಟೆಲ್ಲಾ ಆದನಂತರವು ಆ ಇಂಡಿಯಾ ಸರ್ಕಾರದವರು ಹೊರಗೆಡವಿರತಕ್ಕಂಥ ರಿಪೋರ್ಟ್ ಆ human dignity or equalityಗೆ ಅನುಗುಣವಾಗಿರುವುದಿಲ್ಲ ಎಂದು ಹೇಳಿ ನಾವೀಗ ಇಲ್ಲಿ ನಮ್ಮ ಮಂತ್ರಿಗಳ ಮುಂದೆ ನಿಂತುಕೊಂಡು ಬಾಯಿಬಡಿದುಕೊಳ್ಳಬೇಕೇನು? ನಾವು ಎಷ್ಟೇ ಬಾಯಿಬಡಿದುಕೊಂಡಾಗ್ಯೂ ನಮ್ಮ ಸರ್ಕಾರದವರು '' ನಾವು ಆಲೋಚನೆ ಮಾಡುತ್ತಿದ್ದೇವೆ, ಪರಿಶೀಲನೆ ಮಾಡುತ್ತಿದ್ದೇವೆ '' ಎಂಬುದಾಗಿ ಒಂದೇಮಾತಿನಲ್ಲಿ ಉತ್ತರ ಹೇಳಿಬಿಡುತ್ತಾರೆ. ನಾವು ಅದನ್ನು ಒಪ್ಪಿಕೊಳ್ಳದಿದ್ದರೆ ಆಗ ನನ್ನನ್ನು ನಾನೇ ಕ್ಷಮಿಸಿಕೊಳ್ಳಬೇಕು. ಈ ದಿವಸ ಈ ಸಡಗರದಲ್ಲಿ ಆ ಐ.ಎ.ಎಸ್. ಎಂಬ ಒಂದು ವ್ಯವಸ್ಥೆಯನ್ನು ಬೇರೆ ಜಾರಿಗೆ ತಂದಿದ್ದಾರೆ. ಆ ಧರ್ಮಶಾಸ್ತ್ರವನ್ನು ಬರೆದ ಮನುಚಕ್ರವರ್ತಿಯೇನಾದರೂ ಈ ಹೊತ್ತು ಜೀವಂತನಾಗಿದ್ದಿದ್ದರೆ—ಈ human dignity or equality ಅನ್ನುವ ಪದಗಳಿಗೆ ಏನಾದರೂ ಬೆಲೆಯಿದ್ದ ಪಕ್ಷದಲ್ಲಿ ಆತನು ಮೊದಲು ಈ ಐ.ಎ.ಎಸ್. ಪದ್ಧತಿಯನ್ನು ಸಂಪೂರ್ಣವಾಗಿ ವಜಾ ಮಾಡಿಬಿಡುತ್ತಿದ್ದನೆಂದು ಹೇಳುತ್ತೇನೆ. It is giving some people whom I like. What is that policy in the name of democracy? ನಮಗೆ ಇಂಟಿಗ್ರೇಷನ್ ಆಯಿತು. ಇನ್ನು ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಆ ದೆಹಲಿಯಲ್ಲಿ ನಮ್ಮ ದೇವೇಂದ್ರಪ್ಪ-ನೆಹರು ಇದ್ದಾರೆ. ಅನುಕೂಲವಾಗುತ್ತೆ ಎಂಬ ಈ ನಾನಾ ಕಾರಣಗಳನ್ನು ಹೇಳುವುದರಲ್ಲೇ ಆ ತಿರುಮಲೆಯ ರಾಜಿಕ್ಕೆಲ್ಲಾ ಮುಗಿದುಹೋಯಿತು When we talk about Backward Classes and Scheduled Castes they say "Your cry is not substantial". ವಾಸ್ತವಾಂಶ ಹೀಗಿರುವಾಗ ನಾವು ಏನು ಹೇಳಿದರೆ ತಾನೆ ಏನು ಸಾರ್ಥಕ? ಹಾಗೆ not substantial ಎಂದು ಯಾರು ಹೇಳಿದ್ದರೋ ಅವರೇ ಮತ್ತೆ ಪುನಃ ಆ ಆವಡಿ ಅಧಿವೇಶನದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುವುದಾಗಿ ಸಾರಿದ್ದಾರೆ. ಆ''ಪ್ಯಾಟ್ರನ್'' ಎಂದರೇನು? ಆ ಅಮೇರಿಕಾದೇಶದಲ್ಲಿರತಕ್ಕಂಥ ಬಿಳಿಯಮಣ್ಣಿನ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂಬ ಚಿತ್ರವನ್ನು ನೋಡಿಕೊಂಡು ಇಲ್ಲಿ ನಾವು ಅದರಂತೆ ಒಂದು ಡ್ರಾಯಿಂಗ್ ಮಾಡಬೇಕೆಂಬುದಾಗಿ ಹೇಳಿರತಕ್ಕದ್ದೇ ಅವರು ಆ ಆವಡಿ ಅಧಿವೇಶನದಲ್ಲಿ ಹೇಳಿರತಕ್ಕಂಥ ಆ''ಪ್ಯಾಟ್ರನ್'' ಎಂಬ ಪದದ ಅರ್ಥ. ನಾವು ಹೇಳುತ್ತಿರುವ ಅನೇಕ ವಿಚಾರಗಳಲ್ಲಿ ಆ ಸತ್ಯ ಬಾಳುವಂತಿಲ್ಲ. There is something wrong in this process. There is much confusion, ಈ ಬ್ಯಾಕ್‌ವರ್ಡ್ ಕ್ಲಾಸಸ್‌ನಲ್ಲಿ ಕೇವಲ 2½ಸಾವಿರ ಜನಾಂಗವಿದೆಯೆಂದ ಹೇಳುತ್ತಿರುವುದು ಎಷ್ಟು ಶೋಚನೀಯವಾದ ವಿಷಯ! ಈ ಷೆಡ್ಯೂಲ್ಡ್ ಕ್ಯಾಸ್ಟುಗಳ ಮತ್ತು ಬ್ಯಾಕ್‌ವರ್ಡ್ ಕ್ಲಾಸಿನಲ್ಲಿ ವೆರಿ ಬ್ಯಾಕ್‌ವರ್ಡ್ ಎಂತಲೂ ಷೆಡ್ಯೂಲ್ಡ್ ತರಗತಿಗಳಲ್ಲಿ ತೀರಾ ಹಿಂದುಳಿದಿರತಕ್ಕಂಥವರಿಗೆ ಅನುಸೂಚಿತ ಜಾತಿಗಳು ಎಂಬುದಾಗಿ ಕರೆದಿರುತ್ತಾರೆ. ಆದರೇನು? ನಮ್ಮ ಸಮಾಜದಲ್ಲಿನ್ನೂ ಆ ಹಳೆಯ ಸೂಪರ್‌ಸ್ಟಿಷನ್ ಭಾವನೆಗಳು ಮಾಯವಾಗಿಲ್ಲ. ಈ ನಿಮ್ನವರ್ಗದ ಒಬ್ಬ ಯಾರಾದರೂ ದೊಡ್ಡ ಅಧಿಕಾರಿ—ಗೆಜೆಟೆಡ್ ದರ್ಜೆಯಲ್ಲಿರತಕ್ಕವರು ಬಂದರೆ ಆತನ ವ್ಯವಹಾರ ಎಷ್ಟೇ ನಾಗರಿಕತೆಯಿಂದ ಕೂಡಿದ್ದಾಗ್ಯೂ ಆತನಿಗೆ ವಾಸಕ್ಕೊಂದು ಮನೆ ಸಿಕ್ಕುವುದು ಇಂದಿಗೂ ಬಹಳ ದುರ್ಲಭವಾಗಿದೆ. Special treatment for special ಜನಾಂಗ ಎಂಬ ಮನೋಭಾವನೆಗಳಿರುವಾಗ ಮೇಲಿನಿಂದ ಒಂದು ರಿಪೋರ್ಟ್ ಬರುತ್ತದಂತೆ ನಾವದನ್ನು ಇಲ್ಲಿ ಪುಷ್ ಮಾಡಬೇಕಂತೆ! ಇದ್ಯಾವ ವಿಚಿತ್ರವೋ ನಾನು ಕಾಣೆ. ಆದರೆ ನಮಗೆ ನಮ್ಮ ಹಕ್ಕುಗಳನ್ನು ಕೇಳಲು ನರಗಳು ಗಡುಸಾಗಿಲ್ಲ ಅದಕ್ಕೋಸ್ಕರವಾಗಿಯೇ ಅವರೀಗ ಹೀಗೆ ನಮ್ಮ ಕಣ್ಣುಗಳನ್ನು ಒರಸುವುದಕ್ಕೆ ಒಂದು ಉಪಾಯ ಹುಡುಕಿದ್ದಾರೆಂದು ನಾನು ತಿಳಿಯುತ್ತೇನೆ. There is inconsistency between the State Government and the Central Government. ಇದರಿಂದ ಈ ಹಿಂದುಳಿದ ಸಂಗಡದವರ ಅಭಿವೃದ್ಧಿಯ ಮೂವ್‌ಮೆಂಟ್ ಹಿಂದಕ್ಕೆ ಹೋಗುತ್ತಿದೆ. ಈ ಅಂಶವನ್ನು ಒಪ್ಪಿಕೊಳ್ಳಲು ನಮ್ಮ ಸರ್ಕಾರಕ್ಕೆ ಧೈರ್ಯವಿಲ್ಲ. ಈ ಹಿಂದೆಯಿದ್ದಂಥ ಆ ಬಿಳಿ ಜನರ ಸರ್ಕಾರ

(ಶ್ರೀ ಕೆ. ಪ್ರಭಾಕರ್.)

ವೇಸಿತ್ತೋ ಅದರ ವೈವಿಧ್ಯಗಳೇ ಇಂದೂ ಜಾರಿಯಲ್ಲಿರುತ್ತವೆ. ಆದರೆ ಆಗಿರತಕ್ಕ ಒಂದು ಬದಲಾವಣೆ ಏನೆಂದರೆ—ಆ ಬಿಳಿ ಜನರ ಸರ್ಕಾರ ಹೋಗಿ—ಬಿಳಿ ಟೋಪಿಯವರ ಸರ್ಕಾರ ಬಂದಿದೆ. ಆದಕಾರಣ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು ಏಕೆ ಸರ್ಕಾರದವರು ಧೈರ್ಯವಾಗಿ ಇಷ್ಟನ್ನಾದರೂ ಹೇಳಿಬಿಡಬಾರದು? ಒಂದು ವೇಳೆ ಹಾಗೆ ಹೇಳಿ ಬಿಟ್ಟರೂ ಹೇಳಬಹುದು! Why wonder? ಇಂಥ ಭಾವನೆಗಳೆಲ್ಲ ಅವರು ಮನಸ್ಸಿನಲ್ಲಿಟ್ಟುಕೊಂಡಿದ್ದಾಗ್ಯೂ ಮೇಲೆ ಜನರ ಕಣ್ಣುಗಳನ್ನು ಒರೆಸುವುದಕ್ಕಾಗಿ ಆ ಆವಡಿ ಅಧಿವೇಶನದಲ್ಲಿ "Landto the Landless" ಎಂದು ಹೇಳಿರತಕ್ಕದ್ದು how grand it is! ಆದರೆ ಈ ಸಭೆಯಲ್ಲಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮೊದಲು ಟೆನೆನ್ಸಿಬಿಲ್ಲನ್ನು ತಂದು,ಅದಕ್ಕೊಂದು ತಿದುಪಡಿ ಸೂಚಿಸಿ ಎಂದರೆ ಈಗ ಅವರು ಅತ್ತಕಡೆಗೆ ಬೆರಳನ್ನು ತೋರಿಸುತ್ತಿದ್ದಾರೆ. What a foolish argument is this? ಹಾಗಿಲ್ಲವೆನ್ನುವುದಾದರೆ ಯಾವಾಗ ತಾವು ಒಂದು ತತ್ವವನ್ನು ಒಪ್ಪಿ ಕೊಳ್ಳುತ್ತೀರೋ ಆಗ ಅದರಂತೆ ಕಾರ್ಯಕ್ರಮ ಕೈಗೊಳ್ಳಬೇಕು. ಅಂದೇ ಈ ಕಾಂಗ್ರೆಸ್ಸಿಗೂ ಮತ್ತು ಆ ನಮ್ಮ ರಾಜ್ಯಾಂಗಕ್ಕೂ ಬೆಲೆ ಮತ್ತು ಗೌರವ ಬರುತ್ತದೆ. ಅಲ್ಲಿ ಹೇಳಿರುವುದೇ ಒಂದು ಇಲ್ಲಿ ಕಾರ್ಯತಃ ಅನುಸರಿಸುತ್ತಿರುವುದೇ ಒಂದಾಗಿದೆ. ಆದರೆ ನಾನೀಗ ಒಂದು ಜಾತಿಯ ಹೆಸರನ್ನು ಮಾತ್ರ ಹೇಳುವುದಿಲ್ಲ. ಆ ಷೆಡ್ಯೂಲ್ಡ್ ಕ್ಲಾಸಿನವರಿಗೆ ಮನೆಯಿಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಸರ್ವೀಸಿನಲ್ಲಿ ಅವರಿಗೆ ಮೀಸಲು ಸ್ಥಾನವನ್ನು ಇಡುತ್ತೇವೆಂದು ಹೇಳಿದ್ದು ಏಕೆ? ಈಗ ಅನೇಕ ನೌಕರಿಗಳಲ್ಲಿ ಅವರನ್ನು ಕೈಬಿಟ್ಟಿದ್ದಾರೆ! ಈ ದಿವಸ ಅವರಿಗೆ ಸಾಕಷ್ಟು ವಿದ್ಯೆಯ ಸೌಕರ್ಯವಿಲ್ಲ, ನೀರಿನ ಸೌಲಭ್ಯವಿಲ್ಲ; ಊಟಕ್ಕಿಲ್ಲ, ಬಟ್ಟೆಗಿಲ್ಲ. ಹೀಗಿರುತ್ತಿರುವಾಗ, land to the landless, home to the homeless, food to the hungry ಎಂದು ಬಾಯಿನಲ್ಲಿ ಹೇಳುತ್ತಿದ್ದಾರೇ ಶಿವಾಯಿ the country is not prepared for it. There is something wrong. You start serving on the side of the Harijans if they stand in line. ಏಕೆಂದರೆ ನೀವು ಈಗ ಏನು ಹೇಳುತ್ತಿದ್ದೀರೋ ಆ ಅನುಕೂಲಗಳನ್ನು ನೀಡುತ್ತಿರುವುದರಲ್ಲಿ ಬಹಳ hotch-potch policy ಆಗಿದೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಗೆ ಪ್ಲಾನು ಹಾಕಿದರೆ ಅಲ್ಲಿ ತಾವು ಕಟ್ಟಿಸುವುದೊಂದು ಗೋವುಕಟ್ಟೆ ಮಾತ್ರ. ಪ್ರಾರಂಭ ಮಾಡುವುದೆಲ್ಲಾ ದೊಡ್ಡದಾಗಿ, ಅದಕ್ಕೆ ರಿಪೋರ್ಟುಗಳನ್ನು ತರಿಸುವುದು, ಹೀಗೆ ಆದಿಯಲ್ಲಿ ಎಲ್ಲಾ ತತ್ವಗಳನ್ನೂ ಒಪ್ಪಿಕೊಳ್ಳುತ್ತಾರೆ. ಆದರೆ ಕಡೆಯಲ್ಲಿ ಸರ್ಕಾರದವರು ಹೇಳುವುದೇನು? That is the will of the people ಎಂದು. Students of politics ಏನಿದ್ದಾರೋ ಅವರು 'the difference between implications of the general 'will' and the will of the all' ಎಂದು ಹೇಳುವಾಗ ಅವರು ಮಾಡತಕ್ಕದ್ದೇನೆಂದರೆ ಜನರೆಲ್ಲರಿಗೂ ಒಂದೇ ಸಮನಾಗಿರುವ ಮೂಗನ್ನು ಎಣಿಸುವುದು. It is a definite will which is capable of being good to the entire community. ಆ will ಎಂಬ ಪದಕ್ಕೆ ಇರತಕ್ಕ ಅರ್ಥ ಇಷ್ಟೇ. ನಾವೀ ದಿವಸ ಈ ನಿಮ್ಮ ಐ. ಎ. ಎಸ್. ಸ್ಕೀಂ ಬೇಡ ಎಂದು ಹೇಳಿದರೂ ಅದಕ್ಕೆ ಆ ನಮ್ಮ ನೆಹರೂ ಅವರು ಒಪ್ಪುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಹಾಗೆ ಅವರು ಏನೊಂದು ಅವರ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೋ ಆ ಅಭಿಪ್ರಾಯ ಅವರೇ ತಯಾರಿಸಿರತಕ್ಕಂಥ ಅವರ ರಾಜ್ಯಾಂಗಕ್ಕೆ ತದ್ವಿರುದ್ಧವಾಗಿದೆ. ಅವರು ಹೇಳುತ್ತಿರುವಂಥ ಅಭಿಪ್ರಾಯ ಸರಿಯಾದುದಲ್ಲ ಎಂದು ಅವರಿಗೆ ಧೈರ್ಯದಿಂದ ಅವರ ತಪ್ಪನ್ನು ತೋರಿಸಿಕೊಡುವಂಥ ಪರಿಸ್ಥಿತಿಯಿಲ್ಲವೆಂದು ಹೇಳತಕ್ಕ ಮನುಷ್ಯರು ಮನುಷ್ಯರೇ ಅಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ. ಹೀಗೆ ಅವರು ಹೇಳುತ್ತಿರುವುದಕ್ಕೆ there is something wrong somewhere. ಅದನ್ನೇ ನಾನೀಗ ಒತ್ತಿ ಹೇಳುತ್ತಿರುವುದು.

ಇನ್ನು ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮೈಸೂರು ಸರ್ಕಾರದವರಾಗಲಿ ಕೇಂದ್ರ ಸರ್ಕಾರದವರಾಗಲಿ ಒಂದು group of human beings elevate ಮಾಡಬೇಕಾದರೆ ಏನು data ಇರಬೇಕೋ, ಏನು information ಇರಬೇಕೋ, ಏನು ಅವರಿಗೆ sources ಇರಬೇಕೋ, ಅದು ಸಂಪೂರ್ಣವಾಗಿಲ್ಲ. ಅವರನ್ನು ಕೇಳಿದರೆ ಎಲ್ಲ ಗೊತ್ತಿದೆ ಎಂದು ಉತ್ತರ ಕೊಡುತ್ತಾರೆ. ಕೇಳಿದ್ದು ಬಿಟ್ಟು ಉಳಿದುದೆಲ್ಲ ಗೊತ್ತಿರುತ್ತದೆ ಎನ್ನುವಂತೆ ಇರುತ್ತದೆ ಇವರು ಹೇಳುವ ಉತ್ತರಗಳು. ಇದು ಭೂಮಿಯಲ್ಲಿ ಕಾಗೆ-ಭಂಗಾರ ಹುಡುಕಿದ ಹಾಗಾಗುತ್ತದೆ. ಮಧ್ವಾಚಾರ್ಯರು, ಬಸವಣ್ಣನವರು ಸಮಾಜದಲ್ಲಿದ್ದ ಜನರನ್ನೆಲ್ಲ ಸರಿಯಾಗಿ treat ಮಾಡಿದ್ದರೆ reformationಗೆ ಅವಶ್ಯಕತೆ ಇರುತ್ತಿರಲಿಲ್ಲ. ಈಗ ಸಮಾಜದ ಆಗುಹೋಗುಗಳೇನಿವೆಯೋ ಅವೆಲ್ಲ ರಾಜಕೀಯ sphereಗೆ ಬಂದಿವೆ. Today the arena of politics seems to be deciding the fate of human beings, at least in India. ಆದುದರಿಂದ ಈ ವಿಷಯದ ಕಡೆಗೆ ಗಮನಕೊಟ್ಟು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. Government should become genuine, powerful and strong. ಅದಿಲ್ಲದಿದ್ದರೆ ಈ Backward Class ಅವರ ಅಭಿವೃದ್ಧಿಯಾಗುವುದಿಲ್ಲ. ಇದಕ್ಕಾಗಿ ಒಂದು ಸಣ್ಣ ಯೋಜನೆಯನ್ನು ಹಾಕಿಕೊಳ್ಳಬೇಕು. ಆ ರೀತಿಯ ಒಂದು programme ಇಲ್ಲದೆ ಹೋದರೆ ನಾವು ನಿಜವಾಗಿಯೂ ಮುಂದುವರಿಯುವುದಿಲ್ಲ. ವಿದ್ಯಾಭ್ಯಾಸದಲ್ಲಿ ಸೀಟುಗಳನ್ನು ಮೆರಿಟ್‌ಮೇಲೆ ಕೊಡದೆ ಇತರೆಯವರಿಗೆ ಕೊಟ್ಟಾಗ ಆ ವಿಚಾರವು ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿ ತೀರ್ಮಾನವಾಯಿತು. ಶೇಕಡ 90 ನಂಬರು ಬಂದಿದ್ದವರಿಗೆ ಸೀಟು ದೊರೆಯಲಿಲ್ಲವಾದ್ದರಿಂದ ಅವರ ಹಕ್ಕು ಹೋಗಲಿಲ್ಲವೇ ಎಂದು ಸುಪ್ರೀಂ ಕೋರ್ಟು ಮುಂದೆ ಹೋಯಿತು. ಒಂದು ಕಡೆ we have to elevate them ಎಂದು ಒಪ್ಪಿಕೊಳ್ಳುತ್ತಾರೆ. ಒಂದು ಸಲ ಒಪ್ಪಿಕೊಂಡಮೇಲೆ, he deserves, he must be given ಎಂದು ಮಾಡಬೇಕು. They should tolerate the custodians of the Constitution to equalise these things. ಆದುದರಿಂದ ಸರ್ಕಾರದವರು ಈ ಸಂಬಂಧದಲ್ಲಿ ಒಂದು wholesale survey ಕೈಗೊಂಡು ಭೂಮಿಯ ಸಂಬಂಧದಲ್ಲಾಗಲಿ, ವಿದ್ಯಾಭ್ಯಾಸದಲ್ಲಾಗಲಿ ಸರ್ವೆ ತೆಗೆದುಕೊಂಡು ಹತ್ತುವರ್ಷಗಳ ಒಂದು ಯೋಜನೆ

(Ten Year Plan) ಹಾಕಿಕೊಂಡು ಕೆಲಸಮಾಡಿದಲ್ಲಿ ಹಿಂದುಳಿದ ಪಂಗಡಗಳವರ ಅಭಿವೃದ್ಧಿಯಾಗಿ ಮೈಸೂರಿಗೆ ಕೀರ್ತಿ ಬರುತ್ತದೆ. ಇಷ್ಟುಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವೆನ್ಯೂ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ನರಸಿಂಹ ರೆಡ್ಡಿಯವರು ನಮ್ಮ ಮುಂದೆ ಇಟ್ಟಿರತಕ್ಕ ಠರಾವಿನ ಮೂಲ ಉದ್ದೇಶ Backward Class Commission ಅವರು ಮಾಡಿರತಕ್ಕ ಶಿಫಾರ್ಸುಗಳನ್ನು ಸರ್ಕಾರದವರು ಪರಿಶೀಲಿಸಿ ಅವುಗಳನ್ನು ಜಾರಿಗೆ ಕೊಡುವ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬುದಾಗಿದೆ. ಹಿಂದುಳಿದ ಪಂಗಡದ ಪುರೋಭಿವೃದ್ಧಿಯನ್ನು ಯಾವರೀತಿ ಸಾಧಿಸಬೇಕು ಎನ್ನುವ ವಿಷಯದಲ್ಲಿ ಸಲಹೆಗಳನ್ನು ಕೊಡುವುದಕ್ಕೋಸ್ಕರವಾಗಿ ಭಾರತ ಸರ್ಕಾರದವರು ಈ ಕಮಿಷನ್ ಏರ್ಪಾಡು ಮಾಡಿದರು. ಶ್ರೀಮಾನ್ ಮರಿಯಪ್ಪನವರು ಹೇಳಿದಂತೆ ಅವರು ಎರಡು ವರ್ಷಗಳ ಕಾಲ ಭಾರತಾದ್ಯಂತ ಪ್ರವಾಸಮಾಡಿ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆ ವರದಿಯಲ್ಲಿ ಏನೇನು ಶಿಫಾರ್ಸುಗಳನ್ನು ಮಾಡಿದ್ದಾರೆನ್ನುವುದು ಇನ್ನೂ ಹೊರಬಿದ್ದಿಲ್ಲ. ಆ ವರದಿಯ ಪ್ರತಿಯನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಶ್ರೀಮಾನ್ ಮರಿಯಪ್ಪನವರು ಹೇಳಿದಂತೆ ಆ ವರದಿಯು ಸರ್ವಾನುಮತದಿಂದ ತಯಾರಾಗಿದೆ. ಅದರಲ್ಲಿ ಕೆಲವರು ಭಿನ್ನಾಭಿಪ್ರಾಯಗಳನ್ನು ಸಹ ಸೂಚಿಸಿದ್ದಾರೆ. ನನಗೆ ತಿಳಿದುಬಂದದ್ದರಲ್ಲಿ ಮುಖ್ಯವಾಗಿ basic principles, ಮೂಲತತ್ವಗಳ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಎಲ್ಲರೂ ಕೂಡ ಮೂಲತತ್ವಗಳ ಬಗ್ಗೆ ಒಪ್ಪಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಯಾರು ಯಾರು ಹಿಂದುಳಿದವರು ಎಂಬುದನ್ನು ನಿರ್ಧರಮಾಡಬೇಕೆನ್ನುವ ವಿಷಯದಲ್ಲಿ ಬಹುಮಟ್ಟಿಗೆ ಭಿನ್ನಾಭಿಪ್ರಾಯಗಳು ಬಂದಿವೆ. ನನಗೆ ತಿಳಿದಮಟ್ಟಿಗೆ ಹಿಂದುಳಿದವರು ಯಾರುಯಾರೆಂಬುದನ್ನು ನಿರ್ಧರಮಾಡಲು ಯಾವ criteria apply ಮಾಡಬೇಕು, ವಿದ್ಯಾಭ್ಯಾಸದಿಂದ ಮಾಡಬೇಕೇ, ಆರ್ಥಿಕ ಪರಿಸ್ಥಿತಿಯನ್ನು ತೆಗೆದುಕೊಳ್ಳಬೇಕೇ ಅಥವಾ service representation ಎಷ್ಟಿದೆ ಎನ್ನುವುದರಮೇಲೆ ಮಾಡಬೇಕೇ, ಭೂಮಿಕಾಣಿ ಆಸ್ತಿಗಳ ಆಧಾರದ ಮೇಲೆ ಮಾಡಬೇಕೇ, ವ್ಯಾಪಾರ ವ್ಯವಹಾರ ಇವುಗಳಲ್ಲಿ ಮುಂದುವರಿದವರೇ ಅಥವಾ ಹಿಂದುಳಿದವರೇ ಎನ್ನುವುದರಮೇಲೆ ಮಾಡಬೇಕೇ ಹೀಗೆ ನಾನಾ ತರಹ criteria ಇವೆ. ಹೀಗೆ ಇವುಗಳಲ್ಲಿ ಯಾವ ಆಧಾರದಮೇಲೆ ಹಿಂದುಳಿದವರು ಅಥವಾ ಮುಂದುವರಿದವರು ಎಂದು ನಿರ್ಧರಮಾಡಬೇಕೆಂಬ ಬಗ್ಗೆ ತುಂಬ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಇದರಲ್ಲಿ ಅವರು ಒಂದು ಸಲಹೆ ಮಾಡಿರುವ ಪ್ರಕಾರ ಜಾತಿಯಲ್ಲಿ Backward Class, ಈಗ ಯಾವ ಯಾವ ಜಾತಿಯವರು ಸಾರ್ವಜನಿಕ ಕ್ಷೇತ್ರದಲ್ಲಿ ಅವರ ಪ್ರಭಾವ ಚೆನ್ನಾಗಿ ಕಂಡು ಬರುತ್ತಿಲ್ಲ ಮತ್ತು ವಿದ್ಯಾಭ್ಯಾಸದಲ್ಲಿ ಮತ್ತು ಆರ್ಥಿಕವಾಗಿ, ರಾಜಕೀಯವಾಗಿ ಎಲ್ಲದರಲ್ಲಿಯೂ ಕಡಮೆಯಾಗಿದ್ದಾರೆ ಅಂಥ ಜಾತಿಗಳನ್ನು Backward Classes ಎಂದು ಪರಿಗಣಿಸತಕ್ಕದ್ದು ಒಂದು ಸಲಹೆ. ಆ ರೀತಿಯಾಗಿ ಲೆಕ್ಕ ಹಾಕಿದರೆ 2,399 ಜಾತಿಗಳಿವೆ.

ಶ್ರೀ ಮಹಮ್ಮದ್ ಇಮಾಂ (ಜಗಳೂರು).—ಅವನ್ನೆಲ್ಲ ಒಂದು ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬೇರೆ ವಿಷಯ. ಈ 2,399 ಜಾತಿಗಳಲ್ಲಿ 913 ಜಾತಿಗಳು ಹನ್ನೊಂದೂವರೆ ಕೋಟಿ ಪ್ರಜಾಸಂಖ್ಯೆಯಾಗುತ್ತದೆ. Scheduled Castes and Tribes ಸೇರಿಸಿದರೆ ಸುಮಾರು ಒಟ್ಟು $18\frac{1}{2}$ಕೋಟಿ ಪ್ರಜಾಸಂಖ್ಯೆಯಾಗುತ್ತದೆ. ಇದು 913 ಜಾತಿಗಳ ಮತ್ತು Scheduled Castes ಮತ್ತು Tribes ಇಷ್ಟರ ಪ್ರಜಾಸಂಖ್ಯೆಯಾಯಿತು. 2,399ರಲ್ಲಿ ಇನ್ನುಳಿದ ಜಾತಿಗಳನ್ನು ಸೇರಿಸಿದರೆ ನಮ್ಮ ರಾಷ್ಟ್ರದ ಬಹುಭಾಗದ ಜನ ಈ ಗುಂಪಿಗೆ ಬರುತ್ತಾರೆ. ಇಡೀ ರಾಷ್ಟ್ರವೇ ಹಿಂದುಳಿದ ರಾಷ್ಟ್ರವೆಂದು ಪರಿಗಣಿಸಿ ಕೆಲಸ ಮಾಡಬೇಕಾಗಿದೆ.

ಎರಡನೆಯದು ಜಾತೀಯತೆಯನ್ನು ಮೂಲೋತ್ಪಾಟನ ಮಾಡಬೇಕೆನ್ನುವ ವಿಷಯ. ಅದನ್ನೇ ಮುಂದುವರಿಸಿಕೊಂಡು ಹೋಗುವುದು ಒಳ್ಳೆಯದಲ್ಲ, ರಾಷ್ಟ್ರದ ಐಕ್ಯತೆಗೆ, ಭದ್ರತೆಗೆ ಧಕ್ಕೆಬರುತ್ತದೆನ್ನುವ ಅಭಿಪ್ರಾಯವಿದೆ. ಇದರಲ್ಲಿ ಭಿನ್ನಾಭಿಪ್ರಾಯ ಬಂದು ನಮಗೆ ತಿಳಿದಮಟ್ಟಿಗೆ ಕೇಂದ್ರ ಸರ್ಕಾರದವರು ಯಾವ criteria ಮೇಲೆ ಹಿಂದುಳಿದವರೆಂದು ನಿರ್ಧಾರಮಾಡಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ವಿಷಯದಲ್ಲಿ ನಿರ್ಧಾರಕ್ಕೆ ಬಂದಿಲ್ಲ. ಈ ಬಗ್ಗೆ ಮೈಸೂರು ಸರ್ಕಾರಕ್ಕೂ ಸಹ ಒಂದು ಪತ್ರವನ್ನು ಬರೆದಿದ್ದರು. ಅದರ ಜೊತೆಯಲ್ಲಿ ಈ ಕಾಪಿಯನ್ನು ಕಳುಹಿಸಿಕೊಟ್ಟು, ಅದರಲ್ಲಿ ಯಾವ criteria ನಿಮ್ಮ ಅಭಿಪ್ರಾಯದಲ್ಲಿ ಉತ್ತಮವಾದದ್ದು ಆ ಬಗ್ಗೆ ಸಲಹೆ ಮಾಡಿ ಎಂದು ತಿಳಿಸಿದ್ದರು. ಇದರ ಜೊತೆಗೆ ಮೈಸೂರಿನ ಮುಖ್ಯ ಮಂತ್ರಿಗಳು ಭಾರತ ಸರ್ಕಾರದ ಹೋಂ ಮಿನಿಸ್ಟರಲ್ಲಿಯೂ ಮಾತನಾಡಿದ್ದರು. ಮೈಸೂರು ಸರ್ಕಾರದವರು ಈ ವಿಷಯವನ್ನೆಲ್ಲ ಪರ್ಯಾಲೋಚನೆ ಮಾಡಿ ಕೇಂದ್ರ ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ಸಹ ತಿಳಿಸಿದ್ದರು. ನನಗೆ ತಿಳಿದ ಹಾಗೆ ಈ ವಿಷಯವು ಭಾರತದ ಲೋಕ ಸಭೆಯಲ್ಲಿ ಪರ್ಯಾಲೋಚನೆಗೆ ಬರಬಹುದು. ಪರಿಸ್ಥಿತಿ ಹೀಗಿರುವಾಗ ಆ ಕಮಿಷನ್ನಿನ ವರದಿಯ ಪ್ರಕಾರ ಯಾವ ಯಾವ ಕೆಲಸಕಾರ್ಯಗಳನ್ನು ಮಾಡಬೇಕು ಎಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮುನ್ನ Backward Classes ಯಾವುವು ಎಂಬುದು ನಿರ್ಧಾರವಾಗಬೇಕು. ಅದಾದ ಮೇಲೆ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಸಂಸ್ಥಾನದಲ್ಲಿ ಹಿಂದುಳಿದವರ ಪುರೋಭಿವೃದ್ಧಿಗೋಸ್ಕರವಾಗಿ, ಭಾರತದ ಬೇರೆ ಪ್ರಾಂತಗಳವರು ಇಷ್ಟು ಉತ್ಸಾಹದಿಂದ ಈ ಬಗ್ಗೆ ಕಾರ್ಯಕ್ರಮವನ್ನು ತೆಗದುಕೊಳ್ಳುವುದಕ್ಕೆ ಮುನ್ನ, ಬಹುಕಾಲದಿಂದ ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ ಮತ್ತು ಪ್ರೋತ್ಸಾಹವನ್ನೂ ಕೊಟ್ಟಿದ್ದಾರೆ. ರಾಜ್ಯಾಂಗವು ಜಾರಿಗೆ ಬಂದ ಮೇಲೆ ಹಿಂದುಳಿದ ಪಂಗಡಗಳಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದನ್ನೆಲ್ಲ ಈಗ ಹೇಳುವುದು ಅನಾವಶ್ಯಕ. ಒಂದು ವಿಷಯವನ್ನು ಮಾತ್ರ ಹೇಳಬೇಕೆಂದು ನನ್ನ ಆಸೆ. ಶ್ರೀಮಾನ್ ಗೋಪಾಲಗೌಡರು ಮುಖ್ಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅಧಿಕಾರಕ್ಕೆ ಬಂದ ಮೇಲೆ ಕೇವಲ ಓಟುಗಳನ್ನು ಪಡೆಯುವುದರ ಸಲುವಾಗಿ ಕೆಲಸವನ್ನು ಮಾಡುವುದು ಸರಿಯಲ್ಲವೆಂದು ತಿಳಿಸಿದರು. ನಾನು ಅವರಿಗೆ ವಿನಯದಿಂದ explain ಮಾಡುತ್ತೇನೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಹಿಂದುಳಿದವರು, ದೀನರು, ದಲಿತರು, ಇವರುಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ಕಾಂಗ್ರೆಸ್ ಸಂಸ್ಥೆ ತೋರಿಸಿದೆ ಎಂದು ಒತ್ತಿ ಹೇಳುತ್ತೇನೆ. ಆದುದರಿಂದ ಇವೊತ್ತು ಹೊಸದಾಗಿ ಕಾಂಗ್ರೆಸ್‌ನವರು ಈ ಭಗ್ಗೆ ಆಸಕ್ತಿಯನ್ನು ವಿಶೇಷವಾಗಿ ತೋರಿಸುತ್ತಿಲ್ಲ. ಕಾಂಗ್ರೆಸ್‌ನವರು ಅಧಿಕಾರದಲ್ಲಿಲ್ಲದೆ ಇರುವಾಗಲೂ ಕೂಡ ಹರಿಜನರ ಅಭಿವೃದ್ಧಿ ವಿಷಯದಲ್ಲಿ ತುಂಬ ಆಸಕ್ತಿಯಿಂದಿದ್ದು ರಚನಾತ್ಮಕ ಕಾರ್ಯವನ್ನು ಕಾಂಗ್ರೆಸ್ ಸಂಸ್ಥೆಯ ಅಂಗವಾಗಿ ಇಟ್ಟುಕೊಂಡು ಬಂದಿರುವುದರಿಂದ ಈ ಒಂದು ಆಪಾದನೆಗೆ, ತಪ್ಪು ಅಭಿಪ್ರಾಯಕ್ಕೆ, ಅವಕಾಶವಿಲ್ಲ.

ಈಗ ನಮ್ಮ ಸಂಸ್ಥಾನದಲ್ಲಿ ಏನು ಕಾರ್ಯಕ್ರಮವನ್ನು ನಾವು ಹಿಂದಿನಿಂದ ಹಾಕಿಕೊಂಡು ಬಂದಿದ್ದೇವೋ ಅವುಗಳ ವಿಚಾರದಲ್ಲಿ ಸರಿಯಾಗಿ ಕೆಲಸ ನಡೆಸಿಕೊಂಡು ಬರುತ್ತಿದ್ದೇವೆ. ಮತ್ತು ಭಾರತ ಸರ್ಕಾರದವರು ಷೆಡ್ಯೂಲ್ಡ್ ಕ್ಯಾಸ್ಟ್‌ಗಳ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಹಿಂದುಳಿದ ಜನಾಂಗ ಇವರ ಅಭಿವೃದ್ಧಿಗಾಗಿ ಏನೇನು ಅನುಕೂಲ ಹೇಗೆ ಮಾಡಬೇಕು ಎಂದು ಪ್ರೋಗ್ರಾಂ ಹಾಕಿದ್ದಾರೆ. ಅದನ್ನು ಕೂಡ ಮೈಸೂರು ಸರ್ಕಾರ ಅನುಸರಿಸಿ ಹಣವನ್ನು ಒದಗಿಸಿ ಕೆಲಸ ಮಾಡಿಕೊಂಡು ಬರುತ್ತಿದೆ. ಬಹುಶಃ, ಅನೇಕ ಮಾನ್ಯ ಸದಸ್ಯರು ಹೇಳಿದಂತೆ ಈ ಸಮಸ್ಯೆ ಬಹಳ ದೊಡ್ಡ ಸಮಸ್ಯೆ, ಬೃಹದಾಕಾರದ ಸಮಸ್ಯೆ. ನಾವು ಮಾಡುವ ಕೆಲಸ, ಉಂಟಾಗಿರುವ ಪರಿಣಾಮ ಆಶೆಯಿಷ್ಟಿದೆಯೋ ಆ ಪ್ರಮಾಣದಲ್ಲಿ ಆಗಿಲ್ಲದೆ ಇರಬಹುದು. ಹಿಂದುಳಿದವರನ್ನು ಮುಂದಕ್ಕೆ ತರಲು ನಾವು ಹೃತ್ಪೂರ್ವಕವಾಗಿ ಮಾಡಿರುವ ಕೆಲಸವನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. 'Rome was not built in a day' ಎಂಬು ಹೇಳುವಂತೆ ದೇಶದಲ್ಲಿ ಬಡತನ, ಕಷ್ಟನಷ್ಟ ಬೇಕಾದಷ್ಟಿರುವಾಗ ಒಂದೇ ದಿವಸದಲ್ಲಿ ಮಾಪಾರ್ಟು ಮಾಡುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಒಂದು ಪ್ಲಾನ್ ಪ್ರಕಾರ, ಒಂದು ಜಯಪ್ರದವಾದ ಕಾರ್ಯಕ್ರಮದ ಪ್ರಕಾರ ನಮ್ಮಲ್ಲಿರುವ ಹಣಕಾಸು ಮತ್ತು ಇತರ ಸಾಧನಸಂಪತ್ತು ಅವುಗಳಿಗನುಗುಣವಾಗಿ ನಾವು ವ್ಯವಹಾರವನ್ನು ಮಾಡಿಕೊಂಡು ಹೋಗಬಹುದು. ಒಟ್ಟಿನಲ್ಲಿ ಈ ನಿರ್ಣಯವೇನಿದೆ, ಈ ಠರಾವಿನ ಮೂಲೋದ್ದೇಶವೇನಿದೆ ಆ ಉದ್ದೇಶದ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನವರು ಬಹುಶಃ ಅನೇಕ ಸಲಹೆ ಮಾಡಿರಬಹುದು ; ಅದು ಸಭೆಯ ಮುಂದಿಲ್ಲ ; ಮಾನ್ಯ ಸದಸ್ಯರಿಗೆ ಅದು ಗೊತ್ತಿಲ್ಲ. ನಾನೂ ಕೂಡ ತಪಶೀಲಾಗಿ ಓದಿಲ್ಲ. ಆ ಕಮಿಷನ್ ಸಲಹೆಗಳಲ್ಲಿ ಕೆಲವು ನಮ್ಮ ಸಂಸ್ಥಾನಕ್ಕೆ ಹೊಂದಬಹುದು, ಕೆಲವು ಹೊಂದದೆ ಇರಬಹುದು. ಅವರು ಸಾರ್ವತ್ರಿಕವಾಗಿ ಇಡೀ ಭರತ ಖಂಡಕ್ಕೆಲ್ಲಾ ಅನ್ವಯವಾಗುವ ಹಾಗೆ ಸಲಹೆ ಮಾಡಿದ್ದಾರೆ. ನಮ್ಮ ಸಂಸ್ಥಾನಕ್ಕೆ ಇಲ್ಲಿನ ಪರಿಸ್ಥಿತಿಗೆ ಹೊಂದುವ ಸಲಹೆಗಳನ್ನೆಲ್ಲಾ ಸ್ವಾಗತ ಮಾಡಿ ಜಾರಿಗೆ ಕೊಡುವ ವಿಷಯದಲ್ಲಿ ಬಹುಶಃ ಈ ಸಭೆಯಲ್ಲಿ ಯಾರೂ ಭಿನ್ನಾಭಿಪ್ರಾಯಪಡುವವರಿಲ್ಲ. ಸರ್ಕಾರ ಖಂಡಿತ ಈ ವಿಷಯದಲ್ಲಿ ಭಿನ್ನಾಭಿಪ್ರಾಯಪಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಹಿಂದುಳಿದವರು ಯಾರಾರೆಂಬುದನ್ನು ನಿರ್ಧರ ಮಾಡಿದ್ದಾರೆ, ಯಾವ್ಯಾವ ಶಿಫಾರ್ಸು ಮಾಡಿದ್ದಾರೆ ಎಂಬುದನ್ನು ತಮ್ಮೆಲ್ಲರೊಂದಿಗೆ ಸಮಾಲೋಚನೆ ಮಾಡಿ ಯಾವಯಾವ ಕಾರ್ಯಕ್ರಮ ಎಷ್ಟು ಪ್ರಮಾಣದಲ್ಲಿ ಹೇಗೆ ತೆಗೆದುಕೊಳ್ಳಬೇಕು ಎಂದು ವ್ಯವಸ್ಥೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುವ ವಿಷಯದಲ್ಲಿ ಸರ್ಕಾರಕ್ಕೆ ಭಿನ್ನಾಭಿಪ್ರಾಯವಿಲ್ಲವೆಂಬುದನ್ನು ನಾನು ಈ ಸಭೆಯಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಬೇಕೆಂದು ನಾನು ಆಶೆಪಡುತ್ತೇನೆ. ಆದರೆ ಕಮಿಷನ್ ವರದಿಯಲ್ಲಿ ಏನೇನು ಅಡಕವಾಗಿದೆಯೆಂಬುದೇ ಗೊತ್ತಿಲ್ಲದಿರುವಾಗ ಅದರ ಬಗ್ಗೆ ಆ ವರದಿಯಲ್ಲಿ ಹೇಳಿರುವ ಎಲ್ಲ ಅಂಶಗಳನ್ನೂ ಜಾರಿಗೆ ತರುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತತ್ವಶಃ ಒಪ್ಪುವುದಾದರೂ ನಿರ್ಣಯ ಫ್ರೇಂ ಮಾಡಿರುವ ರೀತಿಯಲ್ಲಿ ಅದನ್ನು ಒಪ್ಪುವುದಕ್ಕೆ ಸ್ವಲ್ಪ ಕಷ್ಟವಾಗಿದೆ. ಆದ್ದರಿಂದ ಈ ತತ್ವವನ್ನು ನಾವು ಒಪ್ಪಿಕೊಂಡಿರುವಾಗ ಪರಿಶೀಲನೆ ಮಾಡುವುದರ ಜೊತೆಗೆ ನಿಮ್ಮನ್ನು ನಮ್ಮ ಅಂತರಂಗಕ್ಕೆ ತೆಗೆದುಕೊಂಡು ನಾವೂ ನೀವೂ ಚರ್ಚೆಮಾಡಿ ಒಂದು ಸಾಧಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅಭ್ಯಂತರವಿಲ್ಲ. ಸ್ವಲ್ಪ ಕಾಲ ಸುಧಾರಿಸುವುದಾದರೆ ಸಲಹೆಯೇನಿದೆಯೆಂಬ ವಿಷಯದಲ್ಲಿ ಶಿಫಾರ್ಸನ್ನು ನೋಡಿ ತಮ್ಮೆಲ್ಲರ ಅಭಿಪ್ರಾಯ ಪಡೆದು ಮುಂದೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಡುತ್ತೇನೆ. ಈ ವಿಷಯದಲ್ಲಿ ಸರ್ಕಾರದ ಸಹಾನುಭೂತಿ ಬಹಳಮಟ್ಟಿಗೆ ಸಂಪೂರ್ಣವಾಗಿದೆ ಎಂಬ ಭರವಸೆ ಕೊಟ್ಟಿದ್ದರ ಮೇಲೆ ಮಾನ್ಯ ಸದಸ್ಯರು ಈ ನಿರ್ಣಯವನ್ನು ....

ಶ್ರೀ ಟಿ. ಎನ್. ಮೂಡಲಗಿರಿಗೌಡ.—ತತ್ವ ಒಪ್ಪಿದ ಮೇಲೆ ಅಂಗೀಕಾರ ಮಾಡಬಹುದಲ್ಲವೆ ?

Sri H. M. CHANNABASAPPA.—As it is, it is not desirable to accept the resolution. So, I would appeal to the Hon'ble Member, in view of the assurance given by Government, to withdraw the resolution. The resolution is not very happily worded.

Sri A. V. NARASIMHA REDDY.—I am unable to reconcile with the Hon'ble Minister when he stated that theresolution is not happily worded. I want to know on what basis he says that.

Sri H. M. CHANNABASAPPA.—I wish to assure the Hon'ble Member that Government is second to none in implementing such of the recommendations which the Backward Class Commission has made which are results in the upliftment of the Backward Classes. In the light of the assurance, I request the Hon'ble Member to withdraw the resolution.

Sri A. V. NARASIMHA REDDY.—I request permission of the House to withdraw the resolution.

Mr. SPEAKER.—Does the House permit the Hon'ble Member to withdraw his resolution ?

Sri S. SRINIVASA IYENGAR.—No.

Mr. SPEAKER.—Then I shall put it to the vote of the House. The question is :

"That this Assembly is of the opinion that the recommendations of the Backward Class Commission be examined by the Government and suitable steps taken for the amelioration of all the Backward Classes including the Scheduled Castes and Scheduled Tribes."

Motion was adopted.

Mr. SPEAKER.—The House will now adjourn to meet at 12 O'Clock tomorrow.

The House adjourned at Fifty-eight Minutes past Four of the Clock to meet at Twelve of the Clock on 25th September 1956.

WD 1036—GPB—550—24-11-56

V-3 31 N 56
N56-14 : part-4
(O) 4729

MYSORE LEGISLATIVE ASSEMBLY

THIRTY-SEVENTH DAY.

Tuesday, the 25th September 1956.

The House met in the Assembly Hall, Atara Kacheri, Bangalore at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Direct Recruitment of Scheduled Castes and Scheduled Tribes

(Reservation of 18%)

Q.—554. Sri. R. MUNISWAMIAH (Bangalore North--Scheduled Castes).—

Will the Government be pleased to state :—

(*a*) whether G.O. No. E. 185-285—R & P.S. 35-54-2, dated 6th April 1955, laying the procedure for giving effect to the reservation of 18 per cent of direct recruitment appointments to Scheduled Castes and Scheduled Tribes, has not been followed in any department;

(*b*) if so, in which department and by how much the percentage falls short of the above Government Order?

A.—Sri Kadidal MANJAPPA (Chief Minister).—

(*a*) The procedure for giving effect to the reservation of 18 per cent of all direct recruitment appointments to Scheduled Castes and Scheduled Tribes, is being followed in all the departments.

(*b*) It is too early to assess the results of the above Government Order.

Sri R. MUNISWAMIAH.—What are the places that have been reserved for the scheduled castes in the cycle of appointments Sir?

Sri Kadidal MANJAPPA.—Out of 12 vacancies, two are reserved for scheduled castes, and tribes, seven for backward classes and 3 general and out of the remaining four to make up 100, two are reserved for scheduled castes.

Sri R. MUNISWAMIAH.—What are the places reserved in the cycle of appointments?

*Sri Kadidal MANJAPPA.—I have already said 2 scheduled caste, 7 backward class, 3 general. Out of that, the first and the sixth or the seventh, if I remember aright.

Sri R. MUNISWAMIAH.—Are the Government aware that in the recent selection of probationers to the Engineering Department, this cycle of appointments was not strictly observed?

Sri Kadidal MANJAPPA.—It is not yet decided. It is still pending.

Sri R. MUNISWAMIAH.—About six months back, two engineers were appointed, Sir.

Sri Kadidal MANJAPPA.—I do not remember.

Sri R. MUNISWAMIAH.—Will you call for a report and get the thing remedied, Sir?

Sri Kadidal MANJAPPA.—If Rules permit, I am ready to set right the matter.

Sri R. MUNISWAMIAH.—Are not the Public Service Commission carrying out the instructions of the Government of Mysore?

Sri Kadidal MANJAPPA —They are.

Sri R. MUNISWAMIAH.—Then why was not the rank fixed for scheduled caste candidates taken into consideration by them?

Sri Kadidal MANJAPPA.—I have not admitted that the Public Service Commission are not adhering to the instructions contained in the Government Order.

* Asterisk indicates that the remarks or speeches have not been revised by the Member concerned.

Sri R. MUNISWAMIAH.—When the Village level workers were taken recently, how many depressed class candidates were taken, Sir ?

Sri Kadidal MANJAPPA.—I want notice. Is it in connection with the N.E.S. Blocks, Sir ?

Sri R. MUNISWAMIAH.—Yes.

Sri Kadidal MANJAPPA.—I want notice.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಪಾಯಿಂಟ್‌ಮೆಂಟ್ಸ್ ಕ್ಲಾಸಿಫೈ ಮಾಡುವವರು ಪಬ್ಲಿಕ್ ಸರ್ವಿಸ್ ಕಮಿಷನವರೇ ಅಥವಾ ಯೂನಿಟ್ ಆಫೀಸರುಗಳೇ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನವರ ಶಿಫಾರಸು ಮೇರೆಗೆ, ಸರ್ಕಾರದವರ ಅಪ್ರೂವಲ್ ತೆಗೆದುಕೊಂಡು, ಜನರಲ್ ಆಗಿ ಕ್ಲಾಸಿಫಿಕೇಷನ್ ಮಾಡಿರುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಿದ್ದಮೇಲೆ ಒಂದು ಯೂನಿಟ್ ಆಫೀಸಿನವರು ಏಪ್ರಿಲ್ 6 ನೇ ತಾರೀಖು ಸರ್ಕಾರಿ ಆಜ್ಞೆಯಾಗಿದ್ದರೂ ಕೂಡ ಡಿಸೆಂಬರ್ 5 ನೇ ತಾರೀಖು ಒಂದು ಅಪಾಯಿಂಟ್‌ಮೆಂಟ್ ಅಡ್ವರ್ಟೈಸ್ ಮಾಡುವಾಗ ಕ್ಲಾಸಿಫಿಕೇಷನ್ ಗೊತ್ತಿಲ್ಲ, ಸರ್ಕಾರಿ ಆರ್ಡರೇ ಆಗಿಲ್ಲವೆಂದು ಅನಿಮಲ್ ಹಸ್ಬೆಂಡ್ರಿ ಇಲಾಖೆಯವರು ತಿಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri Kadidal MANJAPPA.—I want notice.

Sri M. CHIKKALINGIAH.—There is a specific Government Order regarding this particular case.

Mr. SPEAKER.—All the Recruitment Rules cannot be discussed here.

Sri M. CHIKKALINGIAH.—The Unit Officer has not followed the Government Order. Has it come to the notice of the Government ?

Sri Kadidal MANJAPPA.—If there are any concrete instances, it is open to the Hon'ble Member to bring to my notice.

Sri M. CHIKKALINGIAH.—Recruitment of probationer and the appointment in the Kunigal Stud Farm. Has it come to the notice of the Government that the Unit Officer has not followed strictly the Government Order ?

Sri Kadidal MANJAPPA.—There is an interpellation in regard to this appointment, Sir. We can take up the matter at that time.

Sri M. CHIKKALINGIAH.—Has it not come to the notice of the Government that the Departmental officer has agreed that the Superintendent's post is the first vacancy ?

Sri Kadidal MANJAPPA.—I want notice.

Sri M. CHIKKALINGIAH.—Will the Government consider this point after calling for a report in regard to this, Sir ?

Sri Kadidal MANJAPPA.—The matter will be examined.

ಶ್ರೀ ಟಿ. ಹನುಮಯ್ಯ.—(ಬಿ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿ ಈಗ ಶೇಕಡ 18 ಕ್ಕಿಂತ ಕಡಮೆ ಇದೆ ಎಂದು ತಿಳಿದುಕೊಳ್ಳೋಣವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹೇಳಲಾರೆ. ಪಬ್ಲಿಕ್ ಸರ್ವಿಸ್ ಕಮಿಷನ್ ವರದಿ ಬಂದನಂತರ ಶೇಕಡ 18ಕ್ಕಿಂತ ಕಡಮೆ ಇದೆಯೇ ಅಥವ ಹೆಚ್ಚಾಗಿದೆಯೇ ಎಂದು ಹೇಳಬಹುದೇ ಹೊರತು ಅಲ್ಲಿಯವರೆಗೆ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಲೆಕ್ಕಮಾಡುವುದಕ್ಕೆ ಬಹಳ ಕಷ್ಟವೆಂದು ತಿಳಿದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ ಪಬ್ಲಿಕ್ ಸರ್ವಿಸ್ ಕಮಿಷನವರು ಒಂದು ವರದಿಯನ್ನು ಕೊಡುತ್ತಾರೆ, ಆ ವರದಿಯ ಮೇಲೆ ಗೊತ್ತಾಗಬೇಕು ; ಇಲ್ಲದೆ ಇದ್ದರೆ ಗೊತ್ತಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಪರ್ಸೆಂಟೇಜನ್ನು ಸರಿಯಾಗಿ ಮೈಂಟೈನ್ ಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೀರಾ ಅಥವ ಕಡಮೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಿ ಆಜ್ಞೆಯಲ್ಲಿ ಏನು ವಿಧಾಯಕವಾಗಿದೆಯೋ ಆ ಪರ್ಸೆಂಟೇಜನ್ನು ಅವರು ಅನುಸರಿಸುತ್ತಿದ್ದಾರೆಂದು ನಮ್ಮ ಭಾವನೆ.

Probationers.

Q.—770. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether they had called for applications for appointment of probationers to various departments ;

(*b*) whether they have received any direction from the Government of India to stop taking probationers ?

A.—Sri Kadidal MANJAPPA (Chief Minister).—

(*a*) Yes.

(*b*) No direction as such has been received from the Government of India who have merely advised postponement of recruitment of probationers in view of the impending States Reorganisation.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾನಾ ಇಲಾಖೆಗಳಿಗೆ ಪ್ರೊಬೇಷನರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಶ್ನೆ ನಾಲ್ಕೈದು ವರ್ಷಗಳಿಂದಲೂ ಸರ್ಕಾರದ ಮುಂದೆ ಇತ್ತಲ್ಲವೆ ?

*ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಕೆಲವು ವರ್ಷಗಳ ಕೆಳಗೆ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ನಾನಾ ಇಲಾಖೆಗಳಿಗೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪ್ರೊಬೇಷನರುಗಳನ್ನು ತೆಗೆದುಕೊಳ್ಳುವುದು ಈಗಾಗಲೇ ಖಾಲಿ ಬಿದ್ದಿರುವ ಜಾಗಗಳನ್ನು ಭರ್ತಿಮಾಡುವುದಕ್ಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದರೂ ಕೂಡ ತಾವು ಪ್ರೊಬೇಷನರುಗಳನ್ನು ತೆಗೆದುಕೊಳ್ಳುವ ಪ್ರಶ್ನೆಯನ್ನು ಮುಂದಕ್ಕೆ ಹಾಕಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೇಂದ್ರ ಸರ್ಕಾರದವರು ಹೊಸ ಪ್ರಾಂತ ಉದಯವಾಗುವ ಕಾಲ ಬಹಳ ಸಮೀಪವಾಗಿರುವುದರಿಂದ ಇಷ್ಟೊಂದು ಸಂಖ್ಯೆಯಲ್ಲಿ ಪ್ರೊಬೇಷನರುಗಳನ್ನು ನೇಮಕ ಮಾಡುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನು ಸಲಹಾ ರೂಪದಲ್ಲಿ ಕೊಟ್ಟರು. ಅದೂ ಅಲ್ಲದೆ ಎಷ್ಟು ಪ್ರಯತ್ನಪಟ್ಟಿದ್ದರೂ ಕೂಡ ಹೊಸ ಪ್ರಾಂತ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಎಲ್ಲ ಇಲಾಖೆಗಳಿಗೂ ಕೂಡ ಪ್ರೊಬೇಷನರುಗಳನ್ನು ನೇಮಕ ಮಾಡುವುದಕ್ಕಾಗುವುದಿಲ್ಲವೆಂಬ ಕಾರಣದ ಮೇಲೆ ಕೆಲವು ಇಲಾಖೆಗಳಿಗೆ ನಿಲ್ಲಿಸಲಾಯಿತು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಡಳಿತ ದೃಷ್ಟಿಯಿಂದ ಮತ್ತು public interest ದೃಷ್ಟಿಯಿಂದಲೂ ಕೂಡ ಈ ಪ್ರೊಬೇಷನರುಗಳನ್ನು ನೇಮಕ ಮಾಡಿಕೊಳ್ಳುವುದು ಅಗತ್ಯವಿದ್ದರೂ ಕೂಡ ಇಷ್ಟು ನಿಧಾನ ಮಾಡುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾ ಕಾರಣಗಳಿಂದ ಕೊಂಚ ವಿಳಂಬವಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೀಗೆ ಪಬ್ಲಿಕ್ ಇಂಟರೆಸ್ಟ್ ಮತ್ತು ಆಡಳಿತ ಸೌಕರ್ಯ ಎರಡೂ ಇರುವುದರಿಂದ ತಾವು ಇಂಡಿಯಾ ಸರ್ಕಾರದವರು ಕೊಟ್ಟ ಸಲಹೆಗೆ ಏನು ಜವಾಬು ಬರೆದಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸಾರ್ವಜನಿಕ ಆರೋಗ್ಯ ಇಲಾಖೆ, ವೈದ್ಯ ಇಲಾಖೆ ಮತ್ತು ಮರಾಮತ್ತು ಇಲಾಖೆಗಳಿಗೆ ಮಾತ್ರ ನಾವು ಪ್ರೊಬೇಷನರುಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಉಳಿದ ಇಲಾಖೆಗಳಿಗೆ, ತಮ್ಮ ಸಲಹೆ ಮೇರೆಗೆ, ಯಾರನ್ನೂ ತೆಗೆದುಕೊಳ್ಳುವುದಿಲ್ಲವೆಂದು ಬರೆದಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ದೇಶದಲ್ಲಿನ ಅಭಿಪ್ರಾಯ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕು ಎಂದು ಬಹಳವಾಗಿದ್ದರೂ ಕೂಡ ಕೇಂದ್ರ ಸರ್ಕಾರದವರು ಇದಕ್ಕೆ ಅಡ್ಡಿ ಬರತಕ್ಕುದು ನ್ಯಾಯವಾದುದೇ ಮತ್ತು ತಾವು ಅದಕ್ಕೆ ಒಪ್ಪುವುದು ಸರಿಯಾದುದೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ನಾನಾಗಲೇ ಕಾರಣ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದವರು ಅಡ್ಡಿಬಂದರೆಂದು ಹೇಳುವುದಕ್ಕಾಗುವುದಿಲ್ಲ. ಅವರು ಸಲಹಾ ರೂಪದಲ್ಲಿ ಕಾಗದವನ್ನು ಬರೆದರು. ಅವರು ಹೇಳಿದ್ದರಲ್ಲಿ ಸ್ವಲ್ಪ ಸತ್ಯವಿದೆ ಎಂದು ಕಂಡುಬಂದದ್ದರಿಂದ ಮತ್ತು ಇಷ್ಟೆಲ್ಲ ಪ್ರಯತ್ನ ಪಟ್ಟಾಗ್ಯೂ ಕೂಡ ನವಂಬರ್ ಒಂದನೇ ತಾರೀಖಿನೊಳಗಾಗಿ ಪ್ರೊಬೇಷನರುಗಳನ್ನು ನೇಮಕ ಮಾಡುವುದು ಅಸಾಧ್ಯವೆಂಬುದು ಕಂಡುಬಂದುದರಿಂದಲೂ ಕೆಲವು ಇಲಾಖೆಗಳಿಗೆ ಪ್ರೊಬೇಷನರುಗಳನ್ನು ನೇಮಕಮಾಡುವುದನ್ನು ನಿಲ್ಲಿಸಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಅಷ್ಟು ಹೆಚ್ಚು ಸಂಖ್ಯೆಯಲ್ಲಿ ನೇಮಕ ಮಾಡುವುದಕ್ಕೆ ಇಂಡಿಯಾ ಸರ್ಕಾರದವರು ಅಡ್ಡಿಬಂದರೆ ? ಹಾಗಿದ್ದರೆ ಅವಶ್ಯಕ ಇದ್ದುದಕಿಂತ ಹೆಚ್ಚಿಗೆ ಸ್ಥಾನಗಳಿಗೆ ಅರ್ಜಿಗಳನ್ನು ಕರೆದಿದ್ದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕತೆ ಎಷ್ಟಿತ್ತೋ ಅಷ್ಟು ಸ್ಥಾನಗಳಿಗೆ ಮಾತ್ರ ಪ್ರೊಬೇಷನರುಗಳನ್ನು ನೇಮಕ ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದರು.

ಶ್ರೀ ಬಿ. ಹುಚ್ಚೇಗೌಡ.—ಈಗಿರುವ ಮೈಸೂರಿನಲ್ಲಿ ತಾನೆ ಅಷ್ಟು ಸ್ಥಾನಗಳ ಅವಶ್ಯಕತೆ ಇರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದಮೇಲೆ ನವಂಬರು ಒಂದನೇ ತಾರೀಖು ಹೇಗೆ ಅಡ್ಡಬಂತು? ಈ ಸ್ಥಾನಗಳಿಗೆ ಮೈಸೂರು ಸರ್ಕಾರದವರು ಪ್ರೊಬೇಷನರುಗಳನ್ನು ನೇಮಕ ಮಾಡಬೇಕಾದ್ದು ಸಾಧುವಾದದ್ದು ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧುವಾದದ್ದು ನಿಜ. ಆದರೆ ನವಂಬರು ಒಂದನೇ ತಾರೀಖಿನೊಳಗಾಗಿ ಪಬ್ಲಿಕ್ ಸರ್ವಿಸ್ ಕಮಿಷನವರು ಅವರನ್ನೆಲ್ಲ ಕರೆದು, ಇಂಟರ್‌ವ್ಯೂಮಾಡಿ ಪರೀಕ್ಷೆ ಮಾಡಿ, ಅವರ ಶಿಫಾರ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿ ಸರ್ಕಾರದವರು ಅವುಗಳನ್ನು ಪರಿಶೀಲನೆಮಾಡಿ ನಂತರ ತೀರ್ಮಾನ ಮಾಡಬೇಕಾದರೆ ಸ್ವಲ್ಪಕಾಲ ಹಿಡಿಯುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದಮೇಲೆ ಅವರ ಕೆಲಸ ಅವರು ಮಾಡುತ್ತಿದ್ದಾರೆಯೇ ಅಥವ ಹಾಗೇ stand-still ಆಗಿನಿಲ್ಲಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಇಲ್ಲ ಪಬ್ಲಿಕ್ ಸರ್ವಿಸ್ ಕಮಿಷನವರು ಅವರ ಸಲಹೆಗಳನ್ನು ಒಂದು ಇಲಾಖೆಯ ವಿಚಾರದಲ್ಲಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇನ್ನೊಂದು ಇಲಾಖೆಯ ಸಲಹೆಗಳನ್ನು ಕಳುಹಿಸುವುದರಲ್ಲಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಅನೇಕ ಇಲಾಖೆಗಳಲ್ಲಿ ಈಗ ಸ್ಥಾನಗಳು ಖಾಲಿ ಬಿದ್ದು ಹಂಗಾಮಿಯಾಗಿ ಭರ್ತಿಮಾಡಿ ಕೆಲಸ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಇಲಾಖೆಗಳಲ್ಲಿ ಹಂಗಾಮಿಯಾಗಿ ಸ್ಥಾನಗಳನ್ನು ಭರ್ತಿಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದರೆ ಮುಂದೆ ಮೈಸೂರಿನಲ್ಲಿ ಸೇರುವ ಪ್ರದೇಶದಿಂದ ಹೆಚ್ಚು ಜನರು ಬರುತ್ತಾರೆ ಅವರಿಗೆ ಸ್ಥಾನಗಳನ್ನು ಮೀಸಲಾಗಿಡುವುದಕ್ಕೆ ಈ ಉದ್ದೇಶವೆಂದು ಭಾವನೆ ಮಾಡೋಣವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಭಾವನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಕೇಂದ್ರ ಸರ್ಕಾರದವರು ತಮಗೆ ಸಲಹೆ ಮಾಡಿದಾಗ ಈಗಿರುವ ಸಂಸ್ಥಾನಕ್ಕೆ ಎಷ್ಟು ಆವಶ್ಯಕವೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುವುದಾಗಿ ಅಡ್ವರ್ಟೈಸ್ ಮಾಡಿದ್ದೇವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಅದನ್ನು ತಿಳಿಸಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಹಾಗಿದ್ದಮೇಲೆ ಆ ರೀತಿ ತಿಳಿಸಿದಮೇಲೆ ತಾವು ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದನ್ನು ನಿಧಾನಮಾಡಲು ಕಾರಣವೇನು ?

4729
ಪ್ರಾಪ್ತಿ ಕ್ರಮಾಂಕ Acc. No....(R)...
ದಿನಾಂಕ Date..............................

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ಏನು ತಿಳಿಸಿದ್ದೇನೋ ಅದಕ್ಕಿಂತ ಹೆಚ್ಚಿನ ವಿವರ ಕೊಡುವುದಕ್ಕೆ ನಾನು ಶಕ್ತನಾಗಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಅಡ್ವರ್ಟೈಸ್ ಮಾಡುವಾಗಲೆ, ಕಾಲ ಸಾಲದೆಂಬುದು ಸರ್ಕಾರಕ್ಕೆ ಗೊತ್ತಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲ ಸಾಕಾಗಬಹುದೆಂಬ ನಿರೀಕ್ಷೆಯಿಂದ ನಾವು ಪಬ್ಲಿಕ್ ಸರ್ವಿಸ್ ಕಮಿಷನ್ ಅವರನ್ನು ರಿಕ್ವೆಸ್ಟ್ ಮಾಡಿಕೊಂಡಿದ್ದೆವು.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈಗ ತಪ್ಪನ್ನು ಊಹೆಮಾಡುವುದು ಬಿಡುವುದು ಸೂಕ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಪ್ಪು ಊಹೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಪ್ರಾಂತ ಪುನರ್ವಿಂಗಡಣೆಯಾದಮೇಲೆ ಪ್ರೊಬೇಷನರಗಳನ್ನು ನೇಮಿಸಿಕೊಳ್ಳುತ್ತೀರಾ ?

ಅಧ್ಯಕ್ಷರು.—ಅದು ಊಹಾಪೋಹದ ಪ್ರಶ್ನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದಮೇಲೆ ಈಗ ಅರ್ಜಿಹಾಕಿಕೊಂಡಿರುವವರ ಗತಿಯೇನು ?

ಉತ್ತರವಿಲ್ಲ ; ನಗು !

Sri K. S. VASAN.—Will the application fees so far received by Government be considered at the time of recruitment of probationers ?

Sri Kadidal MANJAPPA.—That we will consider.

ಶ್ರೀ ಜೆ. ಮಹಮ್ಮದ್ ಇಮಾಂ.—ಸರ್ಕಾರದವರು ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ಯಾವ ತಾರೀಖಿನಲ್ಲಿ ನಿರ್ಧರಿಸಿದರು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ಮುಂದೆ ಈ ರೀತಿ ತೊಂದರೆ ಬರುತ್ತದೆಂದು ಕೆಲವರು ಈ ಸಭೆಯಲ್ಲಿ ಹೇಳಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Sri J. MOHAMED IMAM.—When applications were called for, did the Government consult the Centre ?

Sri Kadidal MANJAPPA.—At that time, it was not necessary.

Sri J. MOHAMED IMAM.—Did the Government verify that there were hundred vacancies ?

Sri Kadidal MANJAPPA.—Yes; at the time when Government took decision there were vacancies.

Sri J. MOHAMED IMAM.—Are Government sure that there are those vacancies even now ?

Sri Kadidal MANJAPPA.—Yes.

Mr. SPEAKER.—Questions 817, 819, and 827, 830, may be taken up together.

National Extension Service Blocks.

Q.—817. Sri S. H. THAMMIAH *alias* HANUMANTHE GOWDARA THAMMIAH (Krishnarajanagar).—

Will the Government be pleased to state :—

(*a*) the taluk in Mysore District in which they are contemplating to start National Extension Scheme ;

(*b*) the policy they adopt in selecting taluks for introducing the abovesaid scheme ?

A.—Sri Kadidal MANJAPPA (Chief Minister).—

(*a*) Periyapatna.

(*b*) The factors generally kept in view in selecting the taluks are—

(i) administrative convenience;

(ii) the probable number of blocks allottable to a District on the basis of the total rural population and the percentage of population covered by the existing blocks;

(iii) the contiguity of new blocks to be started to those already started ;

ಶ್ರೀ ಡಿ. ದೇವರಾಜಅರಸ್.—ಸ್ವಾಮಿ, ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ಮಸೂದೆಯಲ್ಲಿ ಎರಡು ಭಾಗವಿದೆ, ಒಂದು ಖಾದಿವಿಚಾರ, ಇನ್ನೊಂದು ದೊಡ್ಡ ಗ್ರಾಮ ಕೈಗಾರಿಕೆಗಳವಿಚಾರ. ಈಗಾಗಲೇ ಮಾತನಾಡಿದಂಥ ಶ್ರೀಮಾನ್ ಪಟ್ಟಾಭಿರಾಮನ್ ಅವರು ಖಾದಿಯ ತತ್ವದ ವಿಚಾರವಾಗಿ ಅದರ ಏಕನಾಮಿ ವಿಚಾರವಾಗಿ ಬಹಳ ಸ್ವಾರಸ್ಯವಾಗಿ ಮನದಟ್ಟಾಗುವ ರೀತಿಯಲ್ಲಿ ಸಲಹೆ ಮಾಡಿದ್ದಾರೆ. ಅದರಮೇಲೆಹೆಚ್ಚು ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ. ಹಳ್ಳಿಯ ಕೈಗಾರಿಕೆಗಳ ವಿಷಯದಲ್ಲಿ ಈ ಮಸೂದೆಯಲ್ಲಿ ನಮೂದಿಸಿರತಕ್ಕ 15 ಕೈಗಾರಿಕೆಗಳು ಮತ್ತು ಸರ್ಕಾರದವರು ಆಗಾಗ್ಗೆ ಆ ಲಿಸ್ಟಿಗೆ ಸೇರಿಸಬೇಕಾದ ಕೈಗಾರಿಕೆ ವಿಚಾರಕೂಡ ಪ್ರಸ್ತಾಪ ಮಾಡಬಹುದೆಂದಿದೆ; ಮತ್ತು ಈಗ ನಾವು ಸ್ಥಾಪನೆ ಮಾಡತಕ್ಕ ಈ ಬೋರ್ಡ್ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ತನ್ನ ಕೆಲಸ ಸಾಧನೆಮಾಡಬಹುದು, ಕೈಗಾರಿಕೆ ಅಭಿವೃದ್ಧಿಗೆ ಈ ಸೊಸೈಟಿಗಳನ್ನು ಉಪಯೋಗಿಸಕೊಳ್ಳಬಹುದು ಎಂದು ಕಾಣುತ್ತದೆ. ಈ ಒಂದು ಅವಕಾಶ ಕಲ್ಪಿಸಿದೆ. ಈ ವಿಚಾರವಾಗಿ ಶ್ರೀ ವೀರಣ್ಣಗೌಡರು ಸ್ವಲ್ಪ ಶಂಕೆಯನ್ನು ವ್ಯಕ್ತಪಡಿಸಿದರು. ತಾತ್ವಿಕವಾಗಿ ಯಾವ ಒಂದು ಸ್ಕೀಂ ಎಷ್ಟೇ ಉತ್ತಮವಾಗಿದ್ದರೂ ಕೂಡ ಅದು ಕಾರ್ಯತಃ ನಡೆಯುವಾಗ ಅನೇಕ ಎಡರು ತೊಡರುಗಳು ಬರಬಹುದು, ಈ ಸ್ಕೀಂ ಉದ್ದೇಶ ಸಫಲವಾಗದೆ ತೊಂದರೆಯಾಗಬಹುದು, ಹಣ ದುರುಪಯೋಗವಾಗಬಹುದು ಎಂದು ಈ ಎಲ್ಲ ಶಂಕೆಗಳನ್ನೂ ವ್ಯಕ್ತಪಡಿಸಿದ್ದಾರೆ. ಈ ರೀತಿಯ ಶಂಕೆಯನ್ನು ನಾವು ವ್ಯಕ್ತಪಡಿಸುವಾಗ ಈ ವಿಚಾರ ಬರೀ ವಿಶ್ವೇಶ್ವರಯ್ಯ ಸ್ಕೀಂಗೆಮಾತ್ರ ಅನ್ವಯಿಸುವುದಿಲ್ಲ. ನಾವೇನು ಒಂದು ಘನೋದ್ದೇಶದಿಂದ ಈ ಮಸೂದೆಯಲ್ಲಿ ನಮೂದು ಮಾಡಿರುವ ಒಂದು ಬೋರ್ಡನ್ನು ಸ್ಥಾಪನೆಮಾಡಿ ಅದರಮೂಲಕ ಕೆಲಸ ಮಾಡಬೇಕೆಂದಿದ್ದೇವೋ ಅದರಲ್ಲಿ ಕೆಲಸಮಾಡತಕ್ಕ ಜನರಿಗೆ ಸರಿಯಾದ ಮನೋವೃತ್ತಿಯಿಲ್ಲದಿದ್ದರೆ ಈ ಮಸೂದೆಯ ಉದ್ದೇಶಕೂಡ ಶೋಚನೀಯವಾಗಿ ಪರ್ಯವಸಾನವಾಗುತ್ತದೆ. ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಇಂಡಿಯಾ ಸರ್ಕಾರದವರು ಕೊಟ್ಟಿರುವ ಕೋಟ್ಯಾ ಹಣವನ್ನು ಈ ಕೈಗಾರಿಕೆಗಳಿಗೆ ಅದರಲ್ಲೂ ಗೃಹ ಕೈಗಾರಿಕೆಗಳಿಗೆ ಕೊಡುತ್ತಿದ್ದಾರೆ; ಎಲ್ಲ ಪ್ರಾಂತಗಳಿಗೂ ಕೊಡುತ್ತಿದ್ದಾರೆ. ಆ ಹಣದ ಪ್ರತಿಫಲವನ್ನು ನಮ್ಮ ದೇಶದಲ್ಲೂಕೂಡ ಹೊಂದುವುದಕ್ಕೆ ಆಲ್‌ಇಂಡಿಯಾ ಬೋರ್ಡ್ ಏನಿದೆಯೋ ಅದೇ ತತ್ವದ ಮೇಲೆ ಇನ್ನೊಂದು ಬೋರ್ಡನ್ನು ಸ್ಥಾಪಿಸ ಬೇಕಾಗಿರುವುದರಿಂದ ಆ ರೀತಿ ಸ್ಥಾಪನೆಮಾಡಲು ಈ ಮಸೂದೆಯನ್ನು ತರಲಾಗಿದೆ. ನಮ್ಮ ಸಂಸ್ಥಾನದಲ್ಲಿ ಈ ಬೋರ್ಡಿಲ್ಲದಿರುವಾಗ ಆಲ್ ಇಂಡಿಯಾ ಬೋರ್ಡೇ ಅನೇಕ ವ್ಯವಹಾರಗಳಿಗೆ ಹಣ ಒದಗಿಸಿದೆ. ಆ ಹಣ ಒದಗಿಸಿದ್ದರೂಕೂಡ ಯಾವ ವರ್ಗದ ಜನ ಯಾವರೀತಿ ಅದನ್ನು ಉಪಯೋಗ ಮಾಡುತ್ತಿದ್ದಾರೆಂಬುದನ್ನು ಗಮನಿಸಿದರೆ ಕೆಲವು ಭಾಗದ ಹಣ ದುರ್ವಿನಿಯೋಗವಾಗಿದೆ. ಅದರಿಂದ ಈ ಹಣದ ಉಪಯೋಗ ಮಾಡುವ ಎಲ್ಲ ಜನರಿಗೂ ಒಂದು ಅನರ್ಹತೆ, ದೂಷಣೆ ಬಂದಿದೆ.

ಶ್ರೀ ಪಟ್ಟಾಭಿರಾಮನ್ ಅವರು ಮಾತನಾಡುತ್ತಾ ಸರ್ಕಾರದವರು ಈ ಬೋರ್ಡಿನ ಸದಸ್ಯರನ್ನು ನಾಮಿನೇಟ್ ಮಾಡಬೇಕೆಂದಿದ್ದಾರೆ, ಈ ರೀತಿ ನಾಮಿನೇಟೆಡ್ ಬಾಡಿಯಿರುವುದು ಸೂಕ್ತವೆ ಎಂದು ಶಂಕೆಯನ್ನು ವ್ಯಕ್ತಪಡಿಸಿದರು. ಸರ್ಕಾರದವರು ಈ ರೀತಿಯಾದ ನಾಮಿನೇಷನ್‌ಗೆ ಅವಕಾಶವಿಟ್ಟುಕೊಂಡಿರುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಏಕೆಂದರೆ ಮುನಿಸಿಪಾಲಿಟಿಗಳಲ್ಲಿ ಅಥವಾ ಗ್ರಾಮಪಂಚಾಯಿತಿಗಳಲ್ಲಿ ಛೇರ್ಮನ್ ಎಲೆಕ್ಷನ್‌ಗೆ ಸ್ಪರ್ಧೆಯಾಗುವ ಹಾಗೆ ಷುರುವಾಗುತ್ತದೆ. ಎಲೆಕ್ಟೆಡ್ ಬಾಡಿಯನ್ನು ಇದಕ್ಕೆ ಗೊತ್ತು ಮಾಡಿದರೆ ಅಂಥ ಸ್ಪರ್ಧೆ ಷುರುವಾಗಿ ಮೂಲೋದ್ದೇಶ ಗಾಳಿಯಲ್ಲಿ ತೂರಿ ಹೋಗಬಹುದು. ಆ ಕಾರಣದಿಂದ ನಾಮಿನೇಟೆಡ್ ಬಾಡಿ ಇರುವುದು ಒಳ್ಳೆಯದು. ಆದರೆ ಸರ್ಕಾರದವರು ಇದಕ್ಕೆ ಜನರನ್ನು ಚುನಾಯಿಸುವಾಗ ಛೇರ್ಮನ್, ವೈಸ್ ಛೇರ್ಮನ್ ಮತ್ತು ಮೆಂಬರುಗಳನ್ನು ಚುನಾಯಿಸುವಾಗ ಅವರಿಗೆ ಒಂದು ಎಚ್ಚರಿಕೆಯನ್ನು ಕೊಡಲು ಇಷ್ಟಪಡುತ್ತೇನೆ. ಖಾದಿಯ ತತ್ವದ ಗಂಧಪೂರ್ಣವಾಗಿ ಗೊತ್ತಿರಲಿ, ಗೊತ್ತಿಲ್ಲದೆ ಇರಲಿ, ನಂಬಿಕೆ ಇರಲಿ, ಬಿಡಲಿ, ಖಾದಿ ಹಾಕಿಕೊಳ್ಳುತ್ತಿದ್ದರೆ ಸಾಕು ಅಥವಾ ಒಂದು ಪಕ್ಷದ ಸದಸ್ಯರಾಗಿದ್ದರೆ ಸಾಕು ಎಂದು ಯಾವುದೋ ಒಂದು ತಾತ್ವಿಕವಾದ ಕಾರಣದಿಂದ ಅಥವಾ ರಾಜಕೀಯ ಅಥವಾ ಬೇರೆ ಕಾರಣಗಳಿಂದ ಬೇಕಾದವರೊಬ್ಬರಿಗೆ ಕೆಲಸ ಕೊಡುವ ಉದ್ದೇಶದಿಂದ ಬೋರ್ಡನ್ನು ರಚಿಸುತ್ತಿಲ್ಲವೆಂದು ತಿಳಿದಿದ್ದೇನೆ. 4ನೆಯ ಸೆಕ್ಷನ್‌ನಲ್ಲಿ :

> "The Chairman, the Vice-Chairman and other members shall receive such allowances as may be prescribed"

ಎಂದು ಹೇಳಿರುವುದರಿಂದ ಸರ್ಕಾರದವರು ಭತ್ಯಗಳನ್ನು ಕೊಟ್ಟು ಒಬ್ಬರಿಗೆ ಜೀವನೋಪಾಯ ಕಲ್ಪಿಸಲು ಇದನ್ನು ಮಾಡಿದ್ದಾರೆಂಬ ಆಕ್ಷೇಪಣೆಬರಲು ಅವಕಾಶಕೊಡಬಾರದು. ಹಾಗೆ ಅವಕಾಶ ಕೊಟ್ಟದ್ದೇ ಆದರೆ ಈ ಬೋರ್ಡನ್ನು ಸ್ಥಾಪನೆಮಾಡುವ ಉದ್ದೇಶ ಸಾರ್ಥಕವಾಗುವುದಿಲ್ಲ. ಮೊದಲೇ ಹೇಳಿದ ಹಾಗೆ ಇಂಡಿಯಾ ಸರ್ಕಾರದಿಂದ ಸಹಾಯ ಹೊಂದಿ ಅನೇಕ ಕೈಗಾರಿಗೆಗಳಲ್ಲಿ ತೊಡಗಿರುವವರು ಸಹಾಯ ದ್ರವ್ಯವನ್ನು ಬೇರೆ ರೀತಿ ದುರ್ವಿನಿಯೋಗ ಮಾಡಿಕೊಂಡು ಇಷ್ಟು ಜೇನುಗೂಡು ಕಟ್ಟಿದ್ದೇವೆ, ಕೈಗಾಣದ ಕೆಲಸ ಮಾಡುತ್ತಿದ್ದೇವೆ ಎಂದು ಸುಳ್ಳು ಲೆಕ್ಕ ಬರೆದು ಸಹಾಯ ಪಡೆಯುತ್ತಿದ್ದಾರೆಂದು ಅನೇಕ ಕಡೆ ಆಕ್ಷೇಪಣೆಯಿದೆ.

ಇದರ ಜೊತೆಗೆ ಇನ್‌ಸ್ಪೆಕ್ಟರುಗಳಂತ ಬೇರೆ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿರುತ್ತಾರೆ. ಅವರು ಅಲ್ಲಿ ಇಲ್ಲಿ ತಿರುಗಾಡಿಕೊಂಡು ತಿಂಗಳಿಗೆ ಸರಿಯಾಗಿ ತಮ್ಮ ಸಂಬಳವನ್ನು ಪಡೆಯುತ್ತಿದ್ದಾರೆಂಬ ಆಕ್ಷೇಪಣೆಗಳೂ ಬಂದಿರುತ್ತವೆ. ಇದರ ಒಂದು ಘನವಾದ ಉದ್ದೇಶವೇನಿದೆಯೋ ಅದು ಕೈಗೂಡುವುದಕ್ಕೆ

ನಮ್ಮ ಕೈಗಾರಿಕಾನೀತಿ ಮುಂದುವರೆದು ನಮ್ಮ ಕೈಗಾರಿಕೆಗಳ ಅಭಿವೃದ್ಧಿ ಸರ್ವತೋಮುಖವಾಗಿ ಸಾಗಬೇಕೆಂಬ ಅಭಿಪ್ರಾಯವೇನೋ ಬಹಳ ಸಾಧುವಾದುದೇ ಸರಿ. ಆ ಉದ್ದೇಶದಿಂದಲೇ ಈ ಮಸೂದೆಯನ್ನು ತರಲಾಗಿದೆ. ಆದರೆ ಸರ್ಕಾರದವರು ಉದ್ದೇಶಿಸಿರತಕ್ಕಂಥ ಅಭಿಪ್ರಾಯಗಳಿಗೆ ಧಕ್ಕೆ ಯಾವಾಗ ಬರುತ್ತದೆಂದರೆ ಈ ಮಸೂದೆಯಲ್ಲಿ ತಿಳಿಸಿರುವ ಪ್ರಕಾರ ಇದರ ಉದ್ದೇಶಗಳನ್ನು ಕಾರ್ಯಗತಮಾಡಲು ಆರಿಸಲ್ಪಡತಕ್ಕಂಥ ಜನರು ಒಳೆಯವರಾಗಿದ್ದರೆ ಯೋಜನೆಗೆ ಒಳ್ಳೆಯದಾಗುತ್ತದೆ, ಇಲ್ಲವೇ ಅವರು ಕೆಟ್ಟವರಾಗಿದ್ದರೆ ಯೋಜನೆಗೆ ಕೆಟ್ಟ ಪರಿಣಾಮಗಳುಂಟಾಗುವುದು ಸಹಜವಾಗಿಯೇ ಇದೆ. ಆದಕಾರಣ ಮುಂದೆ ಸರ್ಕಾರದವರು ಈ ಬಾಬಿಗೆ ಜನರನ್ನು ನಾಮಕಾರಣ ಮಾಡುವಾಗ ಈ ಒಂದು ತತ್ವಗಳಲ್ಲಿ ಯಾರಿಗೆ ಶ್ರದ್ಧೆ ಮತ್ತು ನಂಬಿಕೆಗಳಿರುತ್ತವೆಯೋ ಅಂಥ ಜನರನ್ನೇ ನೋಡಿ ಚುನಾಯಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೊಂದು ಸಲಹೆಯನ್ನು ತಮ್ಮ ಮೂಲಕ ತಿಳಿಸಲು ಇಚ್ಛೈಪಡುತ್ತೇನೆ. ಆದರೆ ಈಗ ನಮ್ಮ ಸಭೆಯ ಮುಂದೆ ಚರ್ಚೆಗಾಗಿ ಬಂದಿರತಕ್ಕ ಈ ಬಿಲ್ಲನ್ನು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗಾಗಿ ಕಳುಹಿಸಿಕೊಡಬೇಕೆಂಬ ಒಂದು ಸೂಚನೆ ಕೂಡ ಬಂದಿದೆ. ಆ ಸೂಚನೆಗೆ ನಾನೂ ಸಹ ಬೆಂಬಲ ನೀಡತಕ್ಕವನಾಗಿದ್ದೇನೆ, ಈ ಮಸೂದೆಯನ್ನು ಕೂಡ ಸ್ವಾಗತಿಸತಕ್ಕವನಾಗಿದ್ದೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಮಸೂದೆಯನ್ನು ನಾನು ಈಗ ಅದು ಇರತಕ್ಕ ಸ್ವರೂಪದಲ್ಲಿ ಒಪ್ಪುವುದಕ್ಕಾಗುವುದಿಲ್ಲ. ಅದಕ್ಕೆ ಕಾರಣವಾದರೂ ಇಷ್ಟೇ. ಈಗ ಸರ್ಕಾರದವರು ಈ ಮಸೂದೆಯ ಉದ್ದೇಶ ಮತ್ತು ಕಾರಣಗಳಲ್ಲಿ ಸೂಚಿಸಿರುವಪ್ರಕಾರ ಅದರಲ್ಲಿ ಏನು ತಿಳಿಸಿದ್ದಾರೆಂದರೆ.

> "The State Government considered that there should be a similar Board for the State of Mysore and have accordingly constituted a Khadi and Village Industries Board for the State..."

ಎಂದು ಹೇಳಿದ್ದಾರೆ. ಇವರು ನಮ್ಮ ಇಂಡಿಯಾ ದೇಶದಲ್ಲಿ ಭಾರತ ಸರ್ಕಾರದವರು ಯಾವ ರೀತಿಯಾಗಿ ಇಂಡಸ್ಟ್ರಿಯಲ್ ಬೋರ್ಡುಗಳನ್ನು ರಚನೆ ಮಾಡಿದ್ದಾರೋ ಮತ್ತು ಯಾವ ರೀತಿಯಾಗಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಬಗ್ಗೆ ಒಂದು ಪಂಚಾಯಿತಿಯನ್ನು ನೇಮಕಮಾಡಿದ್ದಾರೋ ಅದೇ ರೀತಿ ನಾವೂ ಕೂಡ ನಮ್ಮ ಮೈಸೂರು ದೇಶದಲ್ಲಿ ಈ ಬೋರ್ಡುಗಳ ಸ್ಥಾಪನೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಆದರೆ, ಅವರು ಆ ರೀತಿ ಸಮಿತಿಗಳನ್ನು ರಚನೆ ಮಾಡತಕ್ಕ ಕಾಲದಲ್ಲಿ ಶಾಸನವತ್ತವಾದಂಥಾ ಸಮಿತಿಗಳನ್ನು ಏಕೆ ರಚನೆ ಮಾಡಲಿಲ್ಲ? ಅದನ್ನು ಮಾಡದಿರುವುದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಲಿಲ್ಲ. ಈ ಖಾದಿ ಕೈಗಾರಿಕೆಯ ತತ್ವ ಮತ್ತು ಇದರ ಸ್ಫೂರ್ತಿ ಇತ್ಯಾದಿಗಳೆಲ್ಲಾ ಅಭಿವೃದ್ಧಿ ಹೊಂದಬೇಕಾಗಿದ್ದರೆ ಅಂಥ ಆಕಾಂಕ್ಷೆಗಳು ಇವರಿಗೆ ಇದ್ದುದೇ ಆಗಿದ್ದರೆ ಇವರು ಶಾಸನದತ್ತವಾದಂಥ ಸಮಿತಿಗಳನ್ನೇಕೆ ರಚನೆ ಮಾಡಲಿಲ್ಲ ಎಂದು ಕೇಳುತ್ತೇನೆ. ಅಷ್ಟೇ ಅಲ್ಲದೆ ಮಾನ್ಯ ಸಚಿವರು ಈಗ ಇರತಕ್ಕ ವ್ಯವಸ್ಥೆಯಲ್ಲಾದರೂ ಇರತಕ್ಕ ತೊಂದರೆಯೇನು ಎಂಬುದನ್ನಾದರೂ ವಿವರವಾಗಿ ತಿಳಿಸಿರುವುದಿಲ್ಲ. ಅವರು ನಮಗೆ, ಈಗಿರತಕ್ಕಂಥ ಪದ್ಧತಿಯಲ್ಲಿ ಇಂಥ ತೊಂದರೆಗಳಿರುತ್ತವೆ. ಅವುಗಳಿಂದ ಸುಸೂತ್ರವಾಗಿ ಕೆಲಸ ಜರುಗುವುದಿಲ್ಲ. ಆದುದರಿಂದ ನಾವೀಗ ಈ ಸ್ಟ್ಯಾಚ್ಯೂಟರಿ ಬಾಡಿಗಳನ್ನು ಮಾಡಬೇಕೆಂದು ಉದ್ದೇಶಿಸಿರುತ್ತೇವೆ ಎಂಬುದಾಗಿ ತಿಳಿಸಿದ್ದರೆ ಆಗ್ಗ ನಾನು ಇದಕ್ಕೆ ಒಪ್ಪಿಕೊಳ್ಳಬಹುದಾಗಿತ್ತು. ಇದರಲ್ಲಿ ಅಂಥ ನ್ಯೂನತೆಗಳಿದ್ದರೆ ಅವರು ಅವುಗಳನ್ನೆಲ್ಲ ನಮಗೆ ತಿಳಿಸಲಿ. ಇನ್ನು ಈ ಸಮಿತಿಗಳನ್ನು ರಚನೆ ಮಾಡತಕ್ಕ ವಿಚಾರದಲ್ಲಿ ನಾಲ್ಕನೆಯ ಕ್ಲಾಜಿನಲ್ಲಿ ಒಂದು ಅವಕಾಶ ಕಲ್ಪಿಸಿರುತ್ತಾರೆ. ತಾವಾಗಲೇ ಅಪ್ಪಣೆ ಕೊಡಿಸಿರುವ ಹಾಗೆ ಆ ಕ್ಲಾಜಿನಲ್ಲಿ ಸದಸ್ಯರನ್ನು ನಾಮಕರಣ ಮಾಡಬೇಕೆಂದು ತಿಳಿಸಿದೆ. ಆದರೆ ಹಾಗೆ ರಚನೆ ಮಾಡತಕ್ಕ ಸಮಿತಿಗಳಿಗೆ ಎಷ್ಟು ಜನ ಸದಸ್ಯರಿರಬೇಕು ಏನು ಎತ್ತ ಎಂಬ ವಿಚಾರವನ್ನೇ ಹೇಳಿಲ್ಲ. ಇದೊಂದು ಅಂಥ ಸ್ಟ್ಯಾಚ್ಯೂಟರಿ ಬಾಡಿಯಾಗಬೇಕಾದರೆ ಅದಕ್ಕೆ ಎರಡು ಶಾಸನ ಸಭೆಗಳೂ ತಮ್ಮ ಅನುಮತಿಯನ್ನು ಕೊಡಬೇಕಾಗಿದೆ. ಆ ವಿಚಾರವನ್ನು ಸಹ ಇಲ್ಲಿ ತಿಳಿಸಿಲ್ಲ. ಮೇಲಾಗಿ ಆ ಸ್ಟ್ಯಾಚ್ಯೂಟರಿ ಬಾಡಿಯಲ್ಲಿ ಎಷ್ಟು ಜನ ಸದಸ್ಯರಿರಬೇಕು ಏನು 100 ಜನರಿರಬೇಕೇ 200 ಜನರು ಇರಬೇಕೇ ಎಂಬ ವಿಚಾರವನ್ನೇ ಅವರು ನಿಖರವಾಗಿ ತಿಳಿಸಿಲ್ಲ. ಈಗಾಗಲೇ ಶ್ರೀಯುತ ಮಹಮ್ಮದ್ ಇಮಾಂರವರು ತಿಳಿಸಿರುವ ಹಾಗೆ ಈ ಸದಸ್ಯರೆಲ್ಲರೂ ಸರ್ಕಾರದವರಿಂದ ನಾಮಕರಣ ಮಾಡಲ್ಪಡತಕ್ಕಂಥ ಸದಸ್ಯರುಗಳಾಗಿರುತ್ತಾರೆ. ಇಂದಿನ ಸರ್ಕಾರಿ ಆಡಳಿತ ಕಾಂಗ್ರೆಸ್ ಪಕ್ಷದವರಕೈಲಿದೆ. ಆದರೆ ಅವರು ಎಂಥವರನ್ನು ಈ ಸಮಿತಿಗಳಿಗೆ ನೇಮಕ ಮಾಡುತ್ತಾರೆಂಬ ವಿಷಯ ನಮಗೆ ಮುಂದೆ ಗೊತ್ತಾಗಬೇಕಾಗಿದೆ. ಈ ವಿಚಾರಗಳಲ್ಲೆಲ್ಲಾ ಅವರೇಕೆ ಖಚಿತವಾದ ಒಂದು ಅಭಿಪ್ರಾಯ ಕೊಡಲಿಲ್ಲವೋ ಅದು ನನಗೆ ತಿಳಿಯದಾಗಿದೆ. ಈ ನಾಮಕರಣ ಮಾಡತಕ್ಕಂಥ ಪದ್ಧತಿ ಎಷ್ಟೋ ಸಂದರ್ಭಗಳಲ್ಲಿ ಜಾರಿಗೆ ತರಲ್ಪಟ್ಟಿದೆ. ಈ ಸಮಿತಿಯಾದರೋ ಸರ್ಕಾರದವರ ಕೈಕೆಳಗೆ ಕೆಲಸ ಮಾಡತಕ್ಕಂಥ ಅನೇಕ ಇಲಾಖೆಗಳಲ್ಲೊಂದಾಗಿರುವಂಥಾದ್ದಾಗಿದೆ. ಇಂಥ ಸಮಿತಿಗೆ ಸ್ಟ್ಯಾಚ್ಯೂಟರಿ ಪವರುಗಳನ್ನು ಕೊಟ್ಟರೆ ಯಾವರೀತಿಯಲ್ಲಿ ಮುಂದೆ ಅದರಿಂದ ಅನುಕೂಲಗಳು ಜಾಸ್ತಿ ಆಗುತ್ತವೆ ಎಂಬುದನ್ನು ಅವರು ಖಚಿತವಾಗಿ ಹೊರಗೆಡಹಲಿಲ್ಲ. ಈ ಸ್ಟ್ಯಾಚ್ಯೂಟರಿ ಬಾಡಿಗೆ ನೇಮಕವಾಗತಕ್ಕಂಥ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಮತ್ತು ಎಲ್ಲ ಸದಸ್ಯರುಗಳೂ ಕೂಡ ಸರ್ಕಾರದಿಂದ ನಾಮಕರಣ ಮಾಡಲ್ಪಡತಕ್ಕಂಥ ಜನಗಳಾಗಿರುತ್ತಾರೆ. ಈ ಪೈಕಿ ಯಾರೊಬ್ಬರೇ ಆಗಲೀ ರಾಜೀನಾಮೆಯನ್ನು ಕೊಟ್ಟರೂ ಕೂಡ ಅದು ಸರ್ಕಾರದಿಂದ ಅಂಗೀಕೃತವಾಗಬೇಕು. ಇಂಥ ಸಂಸ್ಥೆಗೆ ಈ ಅಧಿಕಾರಗಳನ್ನೇಕೆ ಕೊಡಬೇಕು? ನನ್ನ ಅಭಿಪ್ರಾಯದಲ್ಲಿ ಈ ಅಧಿಕಾರಗಳೆಲ್ಲ ಈ ಸಂಸ್ಥೆಗೆ ಬಹಳ ಜಾಸ್ತಿಯಾಯಿತೆಂದೇ ಅನ್ನಿಸುತ್ತಿದೆ. ಹೀಗೆಲ್ಲಾ ಈ ಮಸೂದೆಯಲ್ಲಿ ಅನೇಕ ನ್ಯೂನಾತಿರಿಕ್ತಗಳಿರುವುದರಿಂದ ಇದನ್ನು ಸೆಲೆಕ್ಟ್ ಸಮಿತಿಗೆ ಸೂಕ್ತ ತಿದ್ದುಪಡಿಗಾಗಿ ಕಳುಹಿಸಿದರೆ ಆ ತಿದ್ದುಪಡಿಗಳನ್ನು ಸರ್ಕಾರದವರು ಬಹುಶಃ ಒಪ್ಪಿಕೊಳ್ಳಬಹುದೆಂದು ನನ್ನ ಭಾವನೆ.

ಇನ್ನು ಎರಡನೆಯದಾಗಿ ಇಂಥ ಒಂದು ಕೈಗಾರಿಕೆಯ ಸಂಸ್ಥೆ ಒಂದು ಸಬ್ ಕಮಿಟಿಯನ್ನು ಇಷ್ಟಪಟ್ಟರೆ ಮಾಡಿಕೊಳ್ಳಬಹುದೆಂದು ಅದಕ್ಕೂ ಕೂಡ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಅಂಥ ಕೈಗಾರಿಗಳು ಈ ಬಿಲ್ಲಿನಲ್ಲಿ ಸೂಚಿಸಿರುವ ಪ್ರಕಾರ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಹದಿನಾರು ಇರುತ್ತವೆ. ಹೀಗೆ ಈ ಪ್ರತಿಯೊಂದು ಕೈಗಾರಿಕೆಗೂ ಒಂದೊಂದು ಇಂಥ ಸಬ್ ಕಮಿಟಿಗಳನ್ನು ನೇಮಿಸಲು ಅವಕಾಶವಿದೆಯೇ ಎಂಬುದನ್ನೂ ಮತ್ತು ಅಂಥ ಅವಕಾಶವಿದ್ದರೆ ಎಷ್ಟು ಸಬ್ ಕಮಿಟಿಗಳನ್ನು ನೇಮಿಸಲು ಅವಕಾಶವಿದೆ, ಆ ರೀತಿ ಎಷ್ಟು ಸಬ್ ಕಮಿಟಿಗಳು ಆಗಬೇಕಾಗುತ್ತದೆ ಎನ್ನುವುದರ ಬಗ್ಗೆ ಮಂತ್ರಿಗಳು ನಿಖರವಾಗಿ ಏನೂ ಹೇಳಿಲ್ಲ. ಹೀಗೆಲ್ಲಾ ಸಮಿತಿ ಉಪಸಮಿತಿಗಳನ್ನು ನೇಮಕ ಮಾಡುತ್ತಾ ಹೋದರೆ ಖರ್ಚು ಬಾಬುಗಳು ವಿಶೇಷವಾಗುತ್ತವೆ.

ಇನ್ನು ಮೂರನೆಯದಾಗಿ ಈ ಸಮಿತಿಯವರಿಗೆ ಏನು ಅಧಿಕಾರಗಳನ್ನು ಕೊಟ್ಟಿದ್ದಾರೆಂಬುದನ್ನು ಸ್ವಲ್ಪ ವಿಮರ್ಶೆ ಮಾಡೋಣ. ಇವರಿಗೆ ಯಾವ ಅಂಥ ಒಂದು ಅಧಿಕಾರವನ್ನೂ ಕೊಟ್ಟಿರುವಂತೆ ಕಂಡುಬರುವುದಿಲ್ಲ. ಇವರು ಒಂದು ವರ್ಷದಲ್ಲಿ ಏನೇನು ಕೆಲಸಗಳನ್ನು ಕೈಗೊಳ್ಳಬೇಕೆಂದು ಉದ್ದೇಶಿಸುತ್ತಾರೋ ಅವುಗಳಿಗೆಲ್ಲ ಸರ್ಕಾರದ ಒಪ್ಪಿಗೆ ದೊರೆಯಬೇಕಾಗಿದೆ. ಇವರು ಮಾಡಿದಂಥ ಸಲಹೆಗಳನ್ನೂ ಮತ್ತು ಪ್ರೋಗ್ರಾಮನ್ನೂ ಬದಲಾವಣೆ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕಿದೆ. ಹೀಗೆ ಈ ಸಮಿತಿಯವರು ಸರ್ಕಾರವನ್ನು ಕೇಳದೆ ಯಾವ ಒಂದು ಕೆಲಸವನ್ನೂ ಸಹ ಮಾಡುವಂತಿಲ್ಲ. ಇವರ ನಿಖರವಾದ ಕರ್ತವ್ಯಗಳೇನೆಂಬುದನ್ನು ತಿಳಿಸದೆಯಿರುವಾಗ ಇವರಿಗೇಕೆ ಈ ಸ್ಟ್ಯಾಚ್ಯೂಟರಿ ಅಧಿಕಾರಗಳನ್ನು ಕೊಡಬೇಕೆಂಬುದೇ ತಿಳಿಯದಾಗಿದೆ. ಇದಕ್ಕೆ ಬೇಕಾಗತಕ್ಕಂಥ ಪ್ರತಿವರ್ಷದ ಬಡ್ಜೆಟ್ಟನ್ನೂ ಸರ್ಕಾರದವರೇ ಮಂಜೂರುಮಾಡಬೇಕೆಂದು ಹೇಳಿದ್ದಾರೆ. ಖಾದಿ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು, ನೂಲುವುದು, ಈ ವಸ್ತುಗಳ ಮಾರಾಟ ಮತ್ತು ಈ ಕೈಗಾರಿಕೆಗಳ ಅಭಿವೃದ್ಧಿ ಎಲ್ಲಾ ಈ ಬೋರ್ಡಿಗೇ ಸೇರಿದಾಗ್ಯೂ ಈ ಪ್ರತಿಯೊಂದು ವಿಚಾರದಲ್ಲೂ ಸರ್ಕಾರದ ಅನುಮತಿ ಬೇಕೇ ಬೇಕು. ಸರ್ಕಾರದ ಅನುಮತಿ ಅನಗತ್ಯವೆಂದು ಹೇಳುತ್ತೇನೆ. ಅವರು ಪ್ರತಿಯೊಂದು ಬಾಬಿಗೂ ಹಣವನ್ನು ಖರ್ಚು ಮಾಡಬೇಕಾದರೆ ಅವರು ಸರ್ಕಾರದ ಮಂಜೂರಾತಿಯನ್ನು ಪಡೆಯಬೇಕಾಗಿದೆ. ಅವರ ರಾಜೀನಾಮೆಯನ್ನೂ ಸಹ ಸರ್ಕಾರ ಒಪ್ಪಿದರೆ ಉಂಟು ಇಲ್ಲದಿದ್ದರೆ ಇಲ್ಲ. ಹೀಗಿರುವಾಗ ಈ ಸಮಿತಿಗೆ ಈ ಸ್ಟ್ಯಾಚ್ಯೂಟರಿ ಅಧಿಕಾರಗಳನ್ನು ಕೊಟ್ಟರೂ ಸಹ ಅದರಿಂದೇನೂ ಸಾರ್ಥಕವಾಗುವುದಿಲ್ಲ, ಪ್ರಯೋಜನವಾಗುವುದಿಲ್ಲ. ಈ ಮಸೂದೆಯಲ್ಲಿ ಮತ್ತೊಂದು ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಇಂಥ ಒಂದು ಸ್ಟ್ಯಾಚ್ಯೂಟರಿ ಬಾಡಿಯಿದ್ದರೆ ಅದಕ್ಕೆ ಗ್ರ್ಯಾಂಟುಗಳನ್ನೂ ಮತ್ತು ಸಬ್‌ವೆನ್ಷನ್, ಡೊನೇಷನ್, ಗಿಫ್ಟು, ಸಾಲ ಇತ್ಯಾದಿಗಳನ್ನೆಲ್ಲಾ ಸ್ಟೇಟ್ ಸರ್ಕಾರದಿಂದಲೂ ಮತ್ತು ಕೇಂದ್ರ ಸರ್ಕಾರದಿಂದಲೂ ಪಡೆಯಲು ಸಹಾಯ ವಾಗುತ್ತದೆಂದು ಹೇಳಿದ್ದಾರೆ. ಆದರೆ ಆ ಸಬ್‌ವೆನ್ಷನ್ನನ್ನು ಎಷ್ಟು ಕಾಲದವರೆಗೆ ಕೊಡಲಾಗುತ್ತದೆ ಎಂಬ ಭರವಸೆಯ ಬಗ್ಗೆ ಇಲ್ಲಿ ಏನೂ ಹೇಳಿಲ್ಲ. ಹೌಸಿಂಗ್ ಬೋರ್ಡ್ ಬಿಲ್ಲಿನಲ್ಲೂ ಸಹ ಇದೇ ರೀತಿಯ ಒಂದು ಪ್ರಾವಿಜನ್ನನ್ನು ಇಟ್ಟಿದ್ದರು. ಆದರೆ ಅದರಿಂದೇನು ಪ್ರಯೋಜನವಾಯಿತು? ಈ ದಿವಸ ನಮ್ಮ ದೇಶದಲ್ಲಿರತಕ್ಕ (1) ಬದನವಾಳ ಸ್ಪಿನ್ನಿಂಗ್ ಸರ್ಕಲ್ (2) ಐಮಂಗಲದ ಖಾದಿ ಕೇಂದ್ರ (3) ಬೆಂಗಳೂರಿನಲ್ಲಿರುವ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಕೇಂದ್ರ ಎಂಪೋರಿಯಂ ಮತ್ತು (4) ಸೆಂಟ್ರಲ್ ಖಾದಿ ಡೆವಲಪ್‌ಮೆಂಟ್ ಸ್ಕೀಂ ಈ ನಾಲ್ಕು ಬಾಬಿಗೆ ರೂ.10,500 ರೂಪಾಯಿಗಳನ್ನು ಸಬ್‌ವೆನ್ಷನ್ ರೂಪವಾಗಿ ಕೊಟ್ಟಿದ್ದಾರೆ. ವರ್ಷವರ್ಷವೂ ನಾವು ತಪ್ಪದಂತೆ ಇಷ್ಟು ಮೊಬಲಗನ್ನು ಪ್ರತಿ ವರ್ಷದ ಬಡ್ಜೆಟ್ಟಿನಲ್ಲೂ ಮೀಸಲಾಗಿಡುತ್ತೇವೆಂದೇನೂ ಅವರು ಈ ಮಸೂದೆಯಲ್ಲಿ ತಿಳಿಸಿಲ್ಲ. ಹಾಗೆ ಇವರಿಗೆ ಈ ಕೈಗಾರಿಕೆಗಳನ್ನೆಲ್ಲಾ ಅಭಿವೃದ್ಧಿಪಡಿಸಬೇಕೆಂಬುದಾಗಿದ್ದರೆ, ಇವುಗಳನ್ನು ಉದ್ಧಾರಮಾಡಬೇಕೆಂಬ ಹೃತ್ಪೂರ್ವಕವಾದ ಆಕಾಂಕ್ಷೆಯುಳ್ಳವರಾಗಿದ್ದರೆ ನೀವು ಕೊಡಬೇಕೆಂದು ಹೇಳಿರತಕ್ಕ ಮೊಬಲಗನ್ನು ಕೆಲವು ವರ್ಷಗಳವರೆಗೆ ಹೀಗೆ ಕೊಡಿ, ಈ ಕೈಗಾರಿಕೆಗಳ ಕಾರ್ಯಾಚರಣೆಯನ್ನು ಬಲಪಡಿಸಿ ಅದಕ್ಕೆ ಬೇಡ ಎಂದು ನಾನು ಹೇಳುವುದಿಲ್ಲ. ತಾವು ಕೊಡತಕ್ಕ ಗ್ರ್ಯಾಂಟನ್ನು ಸರ್ಕಾರದ ವಿಮರ್ಶೆಗೊಳಪಟ್ಟಿರುವಂತೆ ಬೇಕಾದರೆ ಮಾಡಿ, ಆ ಗ್ರ್ಯಾಂಟನ್ನು ತಾವುಕೊಡಿ. ಆದರೆ ಸರ್ಕಾರದವರ ವಿಮರ್ಶೆಗೊಳಪಟ್ಟು ಕೊಡತಕ್ಕಂಥಾ ಗ್ರ್ಯಾಂಟ್ ಮೊಬಲಗೇನಿದೆಯೋ ಅದು ಈ ಸಭೆಯ ಮುಂದೆ ಬರತಕ್ಕ ಬಡ್ಜೆಟ್ಟಿನಲ್ಲಿ ಬರುವುದಿಲ್ಲ. ಇದರಿಂದ ಮುಂದೆ ತೊಂದರೆಯಾಗುತ್ತದೆ. ಇದನ್ನೀಗಲೇ ತಾವು ಖಚಿತ ಮಾಡಬೇಕು.

ಇನ್ನು ನಾಲ್ಕನೆಯದಾಗಿ—ಈ ಗ್ರಾಮ ಕೈಗಾರಿಕೆಗಳ ವಿಚಾರದಲ್ಲಿ ಕೆಲವು ಅಗತ್ಯವಾದ ಬದಲಾವಣೆಗಳನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಆದರೆ ಈಗ ಕೇಂದ್ರದ ಸಹಾಯ ಪಡೆಯುತ್ತಿರುವಂಥ ಕೆಲವು ಕೈಗಾರಿಕೆಗಳು ಈಗ ನಮ್ಮಲ್ಲಿವೆ. ಈ ಕೈಗಾರಿಕೆಗಳಿಗೆಲ್ಲ ಕೇಂದ್ರ ಸರ್ಕಾರದ ಇಂಡಸ್ಟ್ರಿಯಲ್ ಆಕ್ಟನ್ನು ಅನ್ವಯಿಸಲಾಗುತ್ತದೆ. ಆ ಆಕ್ಟಿನಲ್ಲಿ ಹೇಳಿರುವ ನಿಯಮಾವಳಿಗಳನ್ನು ಈ ಕೈಗಾರಿಕಾ ಸಂಸ್ಥೆಗಳು ಅನುಸರಿಸುವುದಾದರೇನೇ ಅವರು ಆ ಹಣದ ಸಹಾಯವನ್ನು ಒದಗಿಸುವುದಾಗಿ ತಿಳಿಸಿದ್ದಾರೆ. ಆ ನಿಯಮಗಳನ್ನು ಇನ್ನುಮುಂದೆ ಪ್ರಾರಂಭಿಸತಕ್ಕ ಕೈಗಾರಿಕೆಗಳಿಗೆ ಅನ್ವಯಿಸಲಾಗುವುದಿಲ್ಲವೆಂದು ಈಗಾಗಲೇ ಅವರು ಹೇಳುತ್ತಿದ್ದಾರೆ. ಹಾಗಾಗುವಪಕ್ಷಕ್ಕೆ ಇನ್ನು ಮುಂದೆ ದೊಡ್ಡ ದೊಡ್ಡ ಕೈಗಾರಿಕೆಗಳು ಹೇಗೆ ಬೆಳೆಯಲು ಸಾಧ್ಯವಾಗುತ್ತದೆ? ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ ಅವರೇನು ಕೊಟ್ಟಿದ್ದಾರೆ? ಹಿಂದೆ ಬಿದ್ದಿರತಕ್ಕ ಕೈಗಾರಿಕೆಗಳನ್ನೆಲ್ಲಾ ಬಲಪಡಿಸಬೇಕೆಂಬುದೇ ಅವರ ಅಭಿಪ್ರಾಯ ಆಗಿದೆ ಎಂದು ನಾನು ಕೇಳುತ್ತಿದ್ದೇನೆ. ಇದರಿಂದ ಅಧಿಕಾರ ಒಂದೇಕಡೆ ಮತ್ತೆ ಕೇಂದ್ರೀಕೃತವಾಗುತ್ತದೆ. ಇದರಿಂದ ಮುಂದೆ ಬಹಳ ಅನಾಹುತಗಳಾಗುತ್ತವೆ. ಈ ಬೋರ್ಡ್ ರಚನೆಯಿಂದ ಮತ್ತೆ ಅಧಿಕಾರ ಕೇಂದ್ರೀಕೃತವಾಗುತ್ತದೆ. ಈ ಬೋರ್ಡಿಗೆ ನೇಮಕವಾಗತಕ್ಕಂಥ ಛೇರ್ಮನ್ ಸರ್ಕಾರದಿಂದ ನಾಮಕರಣ ಮಾಡಲ್ಪಡತಕ್ಕಂಥ ಮನುಷ್ಯನಾಗಿರುತ್ತಾನೆ. ಈತನು 10 ಸಾವಿರದೊಳಗಿರತಕ್ಕ ಖರ್ಚುವೆಚ್ಚಗಳನ್ನು ಮಾಡಬಹುದು ಅದಕ್ಕೆ ಮೇಲ್ಪಟ್ಟ ಪ್ರತಿಯೊಂದು ಐಟಂಗೂ ಸರ್ಕಾರದ ಅನುಮತಿ ಪಡೆಯಲೇಬೇಕಾಗಿದೆ. ಆದುದರಿಂದ ನಾವೀಗ ಈ ಬಿಲ್ಲು ಇರತಕ್ಕ ರೀತಿಯಲ್ಲಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ. ತಮಗೆ ನಿಜವಾಗಿಯೂ ಈ ಗ್ರಾಮ ಕೈಗಾರಿಕೆಗಳನ್ನೂ, ಖಾದೀ ಕೈಗಾರಿಕೆಯನ್ನೂ ಅಭಿವೃದ್ಧಿ ಪಡಿಸಲೇಬೇಕೆಂಬ ಆಕಾಂಕ್ಷೆಯಿದ್ದರೆ ತಾವು ಈ ಬಿಲ್ಲನ್ನು ಬದಲಾವಣೆಮಾಡಿ. ಈಗ ಇರತಕ್ಕ ರೀತಿಯಲ್ಲಿ ಈ ಬಿಲ್ಲಿನಲ್ಲಿ ಅನೇಕ ಲೋಪದೋಷಗಳಿವೆ. ಆದಕಾರಣ ನಾನು ಇಲ್ಲಿಯವರೆಗೆ ಸೂಚಿರತಕ್ಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇದು ಸೆಲೆಕ್ಟ್ ಸಮಿತಿಯವರ ಮುಂದೆ ಹೋದಾಗ ಸೂಕ್ತ ರೀತಿಯಲ್ಲಿ ಬದಲಾವಣೆಮಾಡುವುದು ಅಗತ್ಯವೆಂದು ಭಾವಿಸುತ್ತೇನೆ. ತಾವು ಈ ಬೋರ್ಡಿನ ಸದಸ್ಯರನ್ನು ಏಕೆ ಚುನಾವಣೆ ಮೂಲಕ

ಆರಿಸಬಾರದೆಂಬುದಕ್ಕೆ ಶ್ರೀ ದೇವರಾಜಅರಸರವರು ಅದರಿಂದ ತೊಂದರೆಯಾಗಬಹುದೆಂದು ಹೇಳಿದರು. ಒಂದು ಕೈಗಾರಿಕೆಯ ಅಭಿವೃದ್ಧಿಗೆ ಒಂದು ಸಹಕಾರ ಸಮಿತಿಯಿರಬೇಕಾದ್ದು ಅಗತ್ಯ. ಅಲ್ಲಿ ತಯಾರಾಗಿರುವ ಪದಾರ್ಥಗಳಿಗೆ ಸಾಕಷ್ಟು ಗಿರಾಕಿಗಳು ಇರಬೇಕು. ಈ ಕೈಗಾರಿಕೆಗಳೆಲ್ಲ ಸೈಂಟಿಫಿಕ್ ನಾಲೆಡ್ಜ್‌ನಿಂದ ಮುಂದುವರಿಯಬೇಕು. ಈರೀತಿ ಮಾಡುವಪಕ್ಷಕ್ಕೆ ಈ ಕೈಗಾರಿಕೆಯೂ ಮುಂದುವರಿಯಲು ಅವಕಾಶವಾಗುತ್ತದೆ. ಆದರೆ ಅಂಥ ಯಾವ ತತ್ವಗಳಾಗಲೀ ಅಥವಾ ಅಂಶಗಳಾಗಲೀ ಈ ಮಸೂದೆಯಲ್ಲಿ ಅಡಕವಾಗಿಲ್ಲ. ಆದಕಾರಣ ಈ ಬಿಲ್ಲಿಗೆ ನಮ್ಮ ಅಂಗೀಕಾರ ನೀಡಲು ಸಾಧ್ಯವಿಲ್ಲ. ಈ ಮಸೂದೆ ಸಲೆಕ್ಟ್ ಸಮಿತಿಯ ಮುಂದೆ ಹೋಗಿ ಈಗ ಸೂಚಿಸಿರತಕ್ಕಂಥ ತಿದ್ದುಪಡಿಗಳನ್ನೆಲ್ಲಾ ಅದರಲ್ಲಿ ಅಳವಡಿಸುವಂತೆಮಾಡಿ ಅನಂತರ ಇದನ್ನು ಈ ಸಭೆಯ ಪರಿಶೀಲನೆಗೆ ತರತಕ್ಕದ್ದು ಸೂಕ್ತವಾಗಿದೆಯೆಂದು ನಾನು ಹೇಳುತ್ತೇನೆ.

2-30 P.M.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಲ್ಲಿ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ ಖಾದಿ ಈಗ ಹೊಸದಾಗಿ ಬಂದಿದೆ ಎನ್ನುವ ರೀತಿಯಲ್ಲಿ ಕೆಲವರು ಮಾತನಾಡಿದ್ದಾರೆ. ಖಾದಿಯು ಸ್ವರಾಜ್ಯವನ್ನು ತಂದಿದೆ ಎನ್ನುವುದನ್ನು ಮರೆತಿದ್ದಾರೆನ್ನುವಹಾಗೆ ಕಾಣುತ್ತದೆ. ಈ ಮಸೂದೆಯನ್ನು ನಾನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಮಾತ್ರ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಶ್ರೀ ಇಮಾಂರವರು ಆ ತತ್ವವನ್ನೇ ಪ್ರತಿಪಾದನೆ ಮಾಡದೆ ಅವರು ಸಂಪೂರ್ಣವಾಗಿ ವಿರೋಧವನ್ನೇಮಾಡಿ ಮಿಲ್ ಬಟ್ಟೆಯನ್ನು ಪ್ರತಿಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆದರೆ ಪ್ರಜಾಸೋಷಿಯಲಿಸ್ಟ್ ಪಾರ್ಟಿಯಲ್ಲಿ ಮುಖಂಡರಾಗಿರುವವರು ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಮೊದಲು ಉತ್ತೇಜನ ಕೊಡಬೇಕು; ಖಾದಿಯನ್ನು ಧರಿಸಬೇಕು ಎಂಬ ನಿಯಮವಿದೆ! ಅದನ್ನು ಮರೆತಹಾಗೆ ಕಾಣುತ್ತದೆ. ಅವರು ಮನೆಯಲ್ಲಿ ಅಡಿಗೆ ಮಾಡತಕ್ಕ ಪದ್ಧತಿಯನ್ನು ತಪ್ಪಿಸಿ ಸ್ಪೆನ್ಸರ್ ಹೋಟಲಿನಿಂದ ಊಟ ತರಿಸುವ ವಿಧಾನಕ್ಕೆ ಪ್ರಚಾರ ಮಾಡುವಹಾಗೆ ಕಾಣುತ್ತದೆ. ನಮ್ಮ ಗ್ರಾಮಗಳಲ್ಲಿ ಏನೇನು ಕಚ್ಚಾ ಪದಾರ್ಥಗಳು ದೊರೆಯುತ್ತವೆಯೋ ಅದನ್ನೆಲ್ಲ ಪಕ್ಕ ವಸ್ತುಗಳನ್ನಾಗಿ ಮಾಡಿ ಜನರಿಗೆ ಉಪಯೋಗ ಮಾಡಿಕೊಡುವುದಕ್ಕೆ ಪ್ರಯತ್ನ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಇಡೀ ಹಿಂದೂಸ್ತಾನದಲ್ಲಿ ಬ್ರಿಟಿಷರು ಲಕ್ಷಾಂತರ ರೂಪಾಯಿಗಳನ್ನು ಹಾಕಿ ಪ್ರತಿಯೊಂದು ಕೈಗಾರಿಕೆಯನ್ನೂ ಸ್ಥಾಪನೆಮಾಡಿ ಗ್ರಾಮ ಕೈಗಾರಿಕೆಗಳನ್ನು ಹಾಳುಮಾಡಿದರು. ಕಾಂಗ್ರೆಸ್ ಸರ್ಕಾರ ಬಂದನಂತರ ಗ್ರಾಮ ಕೈಗಾರಿಕೆಗಳಲ್ಲಿ ಜನರಿಗೆ ಉತ್ತೇಜನ ಕೊಡಬೇಕು, ಅವರಿಗೆ ಊಟ ಕೊಡಬೇಕು ಎಂದು ಹಿಂದಿನ ಕೈಗಾರಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಯಿತು. ಅಂತೂ ಈ ಉದ್ದೇಶದಿಂದಲೇ All-India Khadi and Village Industries Board ಸ್ಥಾಪನೆಯಾಯಿತೇ ವಿನಾ ಇಲ್ಲದಿದ್ದರೆ ಇದನ್ನು ಸ್ಥಾಪನೆ ಮಾಡುವುದರ ಅವಶ್ಯಕತೆಯೇ ಇರಲಿಲ್ಲ. ಮಿಲ್ ಸೆಸ್‌ಫಂಡ್ ಸುಮಾರು ಆರುಕೋಟಿ ರೂಪಾಯಿಗಳಷ್ಟು ಹಣ ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೈಮಗ್ಗದ (handloom) ಮತ್ತು ಖಾದಿ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಆ ಹಣವನ್ನು ಖರ್ಚುಮಾಡಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಈ ಬೋರ್ಡ್ ಸುಮಾರು ಮೂರು ವರ್ಷಗಳ ಕೆಳಗೆ ಸ್ಥಾಪನೆಯಾಗಿದ್ದರೆ ಸುಮಾರು ಹತ್ತು ಲಕ್ಷ ರೂಪಾಯಿಗಳ ಹಣ ನಮ್ಮ ಸಂಸ್ಥಾನಕ್ಕೆ ಒದಗುತ್ತಿತ್ತೆಂದು ಗೊತ್ತಾಗಿದೆ. ಕೈಮಗ್ಗದ ಶಾಖೆಗೆ ಸುಮಾರು ಹದಿನೆಂಟು ಲಕ್ಷ ರೂಪಾಯಿಗಳ ಹಣವನ್ನು ಹಿಂದೂಸ್ತಾನ ಸರ್ಕಾರದವರು ಕೊಟ್ಟಿದ್ದಾರೆ. ಅದೇ ರೀತಿ ಖಾದಿ ಶಾಖೆಗೂ ಕೂಡ ಹತ್ತು ಲಕ್ಷ ರೂಪಾಯಿಗಳ ಹಣ ದೊರೆಯುವಂತಾಗಲು ಸದ್ಯಕ್ಕೆ ಒಂದು Statutory Board ಆಗಬೇಕೆನ್ನುವುದರಲ್ಲಿ ಅನುಮಾನವಿಲ್ಲ. ಆದರೆ ವೈಯಕ್ತಿಕವಾಗಿ ಪ್ರತಿಯೊಂದು ಕೈಗಾರಿಕೆಯಲ್ಲಿಯೂ ನಿರತರಾಗಿರುವವರಿಗೆ ಸರ್ಕಾರದವರು ಏನು ಮಾಡುತ್ತಾರೆಂದು ಜನಗಳು ಕಾತುರರಾಗಿ ನೋಡುತ್ತಿದ್ದಾರೆ. All-India Board ನವರ ನಿಯಮವೇನೆಂದರೆ ಒಬ್ಬ ವೈಯಕ್ತಿಕ ಕೆಲಸಗಾರನಾಗಿ ಸಹಾಯವನ್ನು ಕೊಡಲು ಹೇಗಿರಬೇಕೆಂದರೆ Charitable Scieties Act ನಿಂದ ರಿಜಿಸ್ಟರಾಗಿರಬೇಕು; ಟ್ರಸ್ಟಿ ಬೋರ್ಡು ಆಗಿರಬೇಕು, charities committee ಆಗಿರಬೇಕು, ವಿಲೇಜ್ ಪಂಚಾಯಿತಿಯಾಗಲಿ, ಜಿಲ್ಲಾ ಬೋರ್ಡ್ ಆಗಲಿ ಇಲ್ಲದಿದ್ದರೆ ಮೈಸೂರು ಸರ್ಕಾರದವರು ನೇರವಾಗಿ ನಡೆಸತಕ್ಕ ಕೇಂದ್ರವಾಗಿರಬೇಕು. ಯಾವುದಾದರೂ ಒಂದು ಸಂಸ್ಥೆ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡುವುದಾಗಿರಬೇಕು. ಇಂಥ ಸಂಸ್ಥೆಗಳಿಗೆ ಮಾತ್ರ ಸಹಾಯ, ಗ್ರಾಂಟ್ ಮತ್ತು ಸಬ್ಸಿಡಿ ಎಲ್ಲ ಕೊಡುತ್ತಾರೆಂದು ಹೇಳುತ್ತಾರೆಯೇ ಹೊರತು ಬೇರೆಯವರಿಗೆ ಕೊಡುವುದಿಲ್ಲ. ಮೈಸೂರು ಸರ್ಕಾರದವರು ಗ್ರಾಮ ಕೈಗಾರಿಕಾ ಕೇಂದ್ರವನ್ನು ಪ್ರಾರಂಭ ಮಾಡಿದರೆ ತಮ್ಮ ಹಣದಿಂದಲೇ ಮಾಡಲಿ ಎಂದು ಹೇಳುತ್ತಾರೆ. ಬೇರೆ ಸಂಸ್ಥೆಗಳು ಮಾಡಿದರೆ ಆ ಸಂಸ್ಥೆಗಳಿಗೆ ಸಹಾಯ ಸೌಲಭ್ಯಗಳನ್ನು ಕೊಡುತ್ತಾರೆ. ಆದುದರಿಂದ ಈ ಬೋರ್ಡನ್ನು ರಚನೆ ಮಾಡತಕ್ಕ ಅವಶ್ಯಕತೆ ಬಂದಿದೆ. ಸರ್ಕಾರದವರೂ ಈ ನಿಯಮವನ್ನು ಒಪ್ಪಿದ್ದಾರೆ.

ಶ್ರೀ ಇಮಾಂಅವರು ಸಣ್ಣಸಣ್ಣ ಕೈಗಾರಿಕೆಗಳಿಗೆ, ಜನಗಳಿಗೆ ಉತ್ತೇಜನ ಸಿಕ್ಕುತ್ತದೆಯೇ ಎಂದು ಕೇಳಿದರು. Bamboo Industry ವಿಚಾರ ನೋಡಿದರೆ ಜಪಾನ್ ದೇಶದವರು ಇಲ್ಲಿಂದ ಸಸಿಗಳನ್ನು ತೆಗೆದುಕೊಂಡುಹೋಗಿ ಅವರು ಸುಮಾರು 60 ನಮೂನೆಯ ಬೊಂಬು ಬೆಳೆದಿದ್ದಾರೆ. ಪ್ರತಿಯೊಂದು ಗೃಹ ಕೈಗಾರಿಕೆಗೂ ಇದನ್ನು ಉಪಯೋಗಿಸುತ್ತಿದ್ದಾರೆ. ಮತ್ತು ಇದಕ್ಕೆ Indian Bomboo ಎಂಬ ಹೆಸರನ್ನು ಕೊಟ್ಟಿದ್ದಾರೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ನಮ್ಮಲ್ಲಿ ಬೊಂಬನ್ನು ಪೇಪರು ತಯಾರಿಸಲು ಮಾತ್ರ ಹೆಚ್ಚಾಗಿ ಉಪಯೋಗಿಸುತ್ತಾರೆ. ಬೇರೆ ಕೆಲವು ಕೈಗಾರಿಕೆಗಳಿಗೆ ಸ್ವಲ್ಪಮಟ್ಟಿಗೆ ಉಪಯೋಗವಾಗುತ್ತಿದೆ. ಈಗ ನಮ್ಮ ಸಂಸ್ಥಾನದಲ್ಲಿ ಬೆಂಕಿಯಕಡ್ಡಿ ತಯಾರಾಮಾಡುವ ಕೈಗಾರಿಕೆಗೆ ಸಾಕಷ್ಟು ಮರ (timber) ಒದಗದೆ ಅದನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಂದ ತರಿಸುತ್ತಿದ್ದಾರೆ. ಶ್ರೀ ಸತೀಶ್ ಚಂದ್ರ ಬೋಸರು ಬಂಗಾಳದಲ್ಲಿ Cottage Industries Scheme introduce ಮಾಡಿ ಬೊಂಬಿನ ಕಡ್ಡಿಗಳನ್ನು ಬೆಂಕಿಕಡ್ಡಿ ತಯಾರಿಸಲು ಉಪಯೋಗಿಸಬಹುದು ಎಂದು ತೋರಿಸಿದ್ದಾರೆ. ನಮ್ಮ ಅರಣ್ಯ ಇಲಾಖೆಯವರು ಬೊಂಬು ಹೆಚ್ಚಾಗಿ ಬೆಳೆದಿದ್ದರೆ ಅದನ್ನು ಸುಟ್ಟು ಹಾಕುತ್ತಿದ್ದಾರೆ. ಬೊಂಬನ್ನು ಹೆಚ್ಚಾಗಿ ಉಪಯೋಗಿಸುತ್ತ ಬಂದರೆ ನಮ್ಮ ದೇಶದ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಸಂಪತ್ತು (national wealth) ನಿಜವಾಗಿಯೂ ಹೆಚ್ಚುತ್ತದೆಂಬುದರಲ್ಲಿ ಅನುಮಾನವಿಲ್ಲ. ಈ Bomboo Industryಗೆ ಉತ್ತೇಜನ ಕೊಟ್ಟರೆ ಹಳ್ಳಿಯ ಜನಗಳಿಗೆ ಕಸಬು ದೊರೆಯುತ್ತೆಂಬುದರಲ್ಲಿ ಅನುಮಾನವಿಲ್ಲ.

Bee-keeping ವಿಚಾರದಲ್ಲಿ ಅರಣ್ಯಗಳಲ್ಲಿ ಜೇನು ಗೂಡುಗಳು ಲಕ್ಷಾಂತರ ಗೂಡುಗಳು ಬಿಟ್ಟಿರುತ್ತವೆ. ಅದನ್ನು ತೆಗೆಯಲು ನಮ್ಮ ಜನಗಳು ಸಾಮಾನ್ಯವಾಗಿ ಬೆಂಕಿ ಹಚ್ಚಿ, ಹುಳುಗಳನ್ನು ಸಾಯಿಸಿ ಸ್ವಲ್ಪ ಜೇನು ತುಪ್ಪವನ್ನು ತರುತ್ತಾರೆ. ಯಾವರೀತಿ ಜೇನು ಗೂಡನ್ನು ಸಾಕಬೇಕ , ಎಲ್ಲಿ ಯಾವ ರೀತಿ ಜೇನನ್ನು ಸಂಗ್ರಹಿಸಬೇಕು, ಯಾವ ವಿಧಾನದಿಂದ ಹೆಚ್ಚು ಜೇನನ್ನು ಸಂಗ್ರಹಿಸಬಹುದು ಎಂಬುದನ್ನು ಜನರಿಗೆ ತಿಳಿಯುವಂತೆ ಮಾಡಲು ಈ Bee-keeping Industryಯನ್ನು introduce ಮಾಡುತ್ತಿದ್ದಾರೆ.

Cottage Leather Industry ವಿಚಾರದಲ್ಲಿ ಹೇಳಬೇಕೆಂದರೆ ಸುಮಾರು ಆರುಕೋಟಿ ರೂಪಾಯಿಗಳ ಕಚ್ಚಾ ಚರ್ಮವನ್ನು ಪರದೇಶಗಳಿಗೆ ರವಾನೆ ಮಾಡಿ, ಹದಮಾಡಿದ ಚರ್ಮವನ್ನು ಪುನಃ ನಮ್ಮ ದೇಶಕ್ಕೆ ಆಮದುಮಾಡಿಕೊಳ್ಳುತ್ತಿದ್ದಾರೆ. ಚರ್ಮವನ್ನು ಹದಮಾಡುವ ಕೆಲಸವನ್ನು ಇಲ್ಲಿಯೇ ಮಾಡಿದರೆ ಕಚ್ಚಾ ಚರ್ಮವನ್ನು ಹದಮಾಡಲು ಪರದೇಶಗಳಿಗೆ ಕಳುಹಿಸುವುದು ತಪ್ಪಿ ನಮ್ಮ ಹಳ್ಳಿಯವರಿಗೆ ಅನುಕೂಲವಾಗಿ ಚರ್ಮದ ಕೈಗಾರಿಕೆಯು ಅಭಿವೃದ್ಧಿಯಾಗುತ್ತದೆ. ಈ ಉದ್ದೇಶದಿಂದ ಇದನ್ನು ಸೇರಿಸಿದ್ದಾರೆ.

Gūr and Khandasari ವಿಷಯದಲ್ಲಿ ನಮ್ಮ ದೇಶದಲ್ಲಿ ಬೆಲ್ಲವನ್ನು ಮಾಡುತ್ತಿದ್ದಾರೆ. ಇದರ ವಿಷಯವಾಗಿ ಅವರಿಗೆ ಏನು ಹೇಳಿಕೊಡಬೇಕಾಗಿದೆ ಎಂದು ಹೇಳಬಹುದು. ಆದರೆ economy of fuel ಮತ್ತು ಒಲೆ ಕಟ್ಟತಕ್ಕ ಕ್ರಮವನ್ನೂ, ಹೆಚ್ಚಿಗೆ ಜ್ಯೂಸ್ ಎಕ್ಸ್‌ಟ್ರ್ಯಾಕ್ಟ್ ಮಾಡಿ ಹೆಚ್ಚು ಬೆಲ್ಲವನ್ನು ಉತ್ಪನ್ನ ಮಾಡುವ ಕ್ರಮವನ್ನೂ ಮತ್ತು ಈಗ ವೇಸ್ಟೇಜ್ ಆಗುತ್ತಿರುವುದನ್ನೂ ಕಡಮೆಮಾಡಿ ಉತ್ಪನ್ನ ಜಾಸ್ತಿ ಬರುವಂತೆ ಮಾಡುವ ಕ್ರಮವನ್ನು ತಿಳಿಸಲು ಇದನ್ನು ಸೇರಿಸಿದ್ದಾರೆ.

Hand-made paper, hand operated and bullock driven chakkis ವಿಷಯ. ಶ್ರೀಮಾನ್ ವೀರಣ್ಣಗೌಡರು ಹೇಳಿರುವಂತೆ ನೀರಾವರಿ ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲಿ ರೈತರಿಗೆ ಮೂರುತಿಂಗಳಕಾಲ ಮಾತ್ರ ಕೆಲಸವಿದ್ದು ವರ್ಷದಲ್ಲಿ 9 ತಿಂಗಳು ಕೆಲಸವಿಲ್ಲದೆ ಇರುವುದರಿಂದ ಅವರಿಗೆ ಒಂದು ಕೆಲಸವನ್ನು ಒದಗಿಸಿ ಅವರ ಉತ್ಪಾದನಾಶಕ್ತಿಯನ್ನು ಹೆಚ್ಚಿಸಬೇಕೆಂಬ, ಪ್ರತಿಯೊಂದು ಹಳ್ಳಿಯವರನ್ನೂ ಅಭಿವೃದ್ಧಿಗೆ ತರಬೇಕೆಂಬ ಉದ್ದೇಶದಿಂದ ಈ ಕೈಗಾರಿಕೆಯನ್ನು ತೆರೆಯಬೇಕೆಂದು ಮಾಡಿದ್ದಾರೆ. ಈ ಗ್ರಾಮ ಕೈಗಾರಿಕೆಗಳಿಂದ ಹಳ್ಳಿಯವರನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕು ಪ್ರತಿ ಗ್ರಾಮದವರಿಗೂ ಒಂದೊಂದು ಕೈಗಾರಿಕೆಯು ದೊರೆಯಬೇಕು, ಮತ್ತು ಅವರು ಉತ್ತಮ ಜೀವನವನ್ನು ನಡೆಸುವಂತಾಗಬೇಕು ಎಂದು ಈ ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕೆಂದಿದ್ದಾರೆ. ಆದುದರಿಂದ ಇವೆಲ್ಲವೂ ಕೂಡ ಹಳ್ಳಿಯ ಜನಗಳಿಗೆ ಸಹಾಯವಾಗುವಂತೆ ಮಾಡಲು ಸರ್ಕಾರದವರು ಆಶಿಸಿದ್ದಾರೆ.

ಸೋಪನ್ನು ತಯಾರ್ಮಾಡಲು ದೊಡ್ಡ ಫ್ಯಾಕ್ಟರಿ ಇದೆ. ಸರ್ಕಾರದವರು 25 ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಒಂದು ಸಾಬೂನು ಕಾರ್ಖಾನೆಯನ್ನು ನಡೆಸುತ್ತಿದ್ದಾರೆ. ಆದುದರಿಂದ ಸಾಬೂನು ಕೈಗಾರಿಕೆ ಯಾಕೆ ಬೇಕು ಎಂದು ಕೇಳಬಹುದು. ಆದರೆ ಕಾಡಿನಲ್ಲಿ ಬೇವಿನಬೀಜ, ಹಿಪ್ಪೆಬೀಜ ಮುಂತಾದ ಎಣ್ಣೆಯ ಬೀಜಗಳೇನಿವೆ ಅವೆಲ್ಲವೂ ವಿನಾಕಾರಣದಿಂದ ಹಾಳಾಗಿ ಹೋಗುತ್ತಿವೆ. ಅವನ್ನೆಲ್ಲ ತೆಗೆದುಕೊಂಡು non-edible oils ಉಪಯೋಗಿಸಿಕೊಂಡು ಸಾಬೂನು ಮಾಡಿದರೆ ಹಳ್ಳಿಗಳಲ್ಲಿರತಕ್ಕ ಜನಗಳಿಗೆ ಆ ಸಾಬೂನನ್ನು ಕಡಮೆ ದರದಲ್ಲಿ ಕೊಡಬಹುದು. ಇವೊತ್ತು ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಸಾಬೂನಿನ ಮೇಲೆ ಬಾರ್ ಒಂದಕ್ಕೆ ನಾಲ್ಕಾಣೆ ಸೆಸ್ ಹಾಕಿದ್ದಾರೆ. ಒಂದು ಬಾರ್‌ಸೋಪಿಗೆ 1-4-0ರಿಂದ 1-6-0 ವರೆಗೆ ಬೆಲೆಯಿದೆ. ಹಳ್ಳಿಯಲ್ಲಿ ತಯಾರಾಗತಕ್ಕ ಸಾಬೂನನ್ನು ಬಾರು ಒಂದಕ್ಕೆ ಹತ್ತಾಣೆಯಂತೆ ಕೊಡಬಹುದು ಮತ್ತು ಗುಣದಲ್ಲಿ ಕಾರ್ಖಾನೆಗಳಲ್ಲಿ ತಯಾರಾಗತಕ್ಕ ಸಾಬೂನಿಗಿಂತ ಉತ್ತಮವಾಗಿರುತ್ತೆ. ಕೊಬ್ಬರಿ ಎಣ್ಣೆಯನ್ನು ಉಪಯೋಗ ಮಾಡುವುದು ಬೇಡ. Non-edible oils ಉಪಯೋಗ ಮಾಡಬೇಕು ಎಂದು ಸರ್ಕಾರದವರು ಈ ಕೈಗಾರಿಕೆಯನ್ನು ಮುಂದಕ್ಕೆ ತರಬೇಕೆಂದು ಪ್ರಯತ್ನಪಟ್ಟಿದ್ದಾರೆ.

All-India Khadi and Village Industries Board ನಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 250 ಕೋಟಿ ರೂಪಾಯಿಗಳನ್ನು ಇಡೀ ಹಿಂದೂಸ್ಥಾನದಲ್ಲಿ ಖರ್ಚುಮಾಡತಕ್ಕ ಅವಶ್ಯಕತೆ ಇದೆ. ಅಂಥದರಲ್ಲಿ ಮೈಸೂರು ಸಂಸ್ಥಾನದಲ್ಲಿ ಖಾದಿ ಮತ್ತು ಕಾಟೇಜ್ ಇಂಡಸ್ಟ್ರೀಸ್ ಬೋರ್ಡನ್ನು ಸ್ಟ್ಯಾಚ್ಯೂಟರಿಯಾಗಿಮಾಡಿ ಇದಕ್ಕೆ ಒಂದು ಅಧಿಕಾರವನ್ನು ವಹಿಸಿಕೊಡುವುದಾದರೆ ಮೈಸೂರು ಸಂಸ್ಥಾನದಲ್ಲಿರತಕ್ಕ ಹಳ್ಳಿಯ ಜನಗಳ ಜೀವನದ ಮಟ್ಟವನ್ನು ಉತ್ತಮ ಪಡಿಸುವುದಕ್ಕೆ ಸುಮಾರು 50 ಲಕ್ಷದಿಂದ ಒಂದುಕೋಟಿ ರೂಪಾಯಿಗಳ ಹಣವನ್ನು ಉಪಯೋಗಿಸಿಕೊಳ್ಳಲು ಅವಕಾಶವನ್ನು ಈ ಬಿಲ್ಲಿನಲ್ಲಿ ಮಾಡಲಾಗಿದೆ. ಇದರಲ್ಲಿ ಒಂದೆರಡು ಬದಲಾವಣೆಗಳಾಗಬೇಕಾದ ಅವಶ್ಯಕತೆ ಇದೆ. ಇದರಲ್ಲಿ functions ಎಂದು ಹೇಳಿರುವುದರಲ್ಲಿ ಯಾರು ಯಾರು ಈ ಕೈಗಾರಿಕೆಯನ್ನು ಮಾಡಬೇಕೆಂದು ಹೇಳಿದ್ದಾರೆ.

1 To encourage the establishment of Co-operative societies for Khadi and Village industries ;

2 to utilise the services of Rural Industrial Co-operative Societies for starting village industries ;

3 to help people by providing them with work in their homes.

ಆದರೆ help the people ಎಂದರೆ ಒಬ್ಬ ಮನುಷ್ಯನಿಗೆ, ಒಂದು ಮನೆಯಲ್ಲಿ ಕೈಗಾರಿಗೆ ಮಾಡುವುದಕ್ಕೆ ದಿನಕ್ಕೆ ನಾಲ್ಕಾಣೆ, ಎಂಟಾಣೆ ಕೂಲಿ ಸಿಗುವುದಕ್ಕೆ ಅನುಕೂಲವಾಗಲು ಸೊಸೈಟಿಯಲ್ಲಿ ಸದಸ್ಯನಾಗಿದ್ದರೆ ಅನುಕೂಲ ಮಾಡಬೇಕು ಎಂದಿದೆ. ಇದನ್ನು ಹಿಂದೂಸ್ಥಾನದಲ್ಲಿ Charitable Institutions Act ಪ್ರಕಾರ ರಿಜಿಸ್ಟರಾಗಿರುವ ಸೊಸೈಟಿಗಳು ಟ್ರಸ್ಟಿ, ಬೋರ್ಡುಗಳು ಮುಂತಾದ ಸಂಸ್ಥೆಗಳಿಗೆ ಅವಕಾಶವಿಲ್ಲದಂತಾಗಿದೆ. ಹೈದರಾಬಾದಿನಲ್ಲಿ ಟ್ರಸ್ಟಿಬೋರ್ಡು ಇದೆ. ಹತ್ತುಲಕ್ಷ ರೂಪಾಯಿಗಳ ಬಂಡವಾಳ ಈ ಸಂಸ್ಥೆಯಲ್ಲಿದೆ. ಧಾರ್ವಾಡದಲ್ಲಿ, ಬೆಳಗಾಂನಲ್ಲಿ ಟ್ರಸ್ಟಿ ಬೋರ್ಡುಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇದೆ.

ಮೈಸೂರು ಸಂಸ್ಥಾನದಲ್ಲಿ ಕೂಡ Charitable Societies Act ಪ್ರಕಾರ ರಿಜಿಸ್ಟರಾಗಿರುವ ಸರ್ವ ಸೇವಾಸಂಘವಿದೆ. ತಗಡೂರಿನಲ್ಲಿ ಟ್ರಸ್ಟೀ ಕಮಿಟಿ ಇದೆ. ಮೈಸೂರು ಚರಕಾಪ್ರಚಾರ ಸಂಘವು ಮೈಸೂರಿನಲ್ಲಿದೆ. ಈ ಕ್ಲಾಜಿನಲ್ಲಿ ನೋಡಿದರೆ ಈ ಸಂಸ್ಥೆಗಳಿಗೆ ಯಾವ ತರಹವಾದ ಸಹಾಯ, ಸೌಲಭ್ಯಗಳನ್ನು ಕೊಡ ಕೂಡದು ಮತ್ತು ಕೊಆಪರೇಟಿವ್ ಸೊಸೈಟಿಗಳಿಗೆ ಮಾತ್ರ ಅನುಕೂಲ ಕಲ್ಪಿಸಿದ್ದಾರೆಂಬ ಅನುಮಾನ ಕಂಡು ಬರುತ್ತದೆ. ಆದುದರಿಂದ ಇಡೀ ಹಿಂದೂಸ್ಥಾನದಲ್ಲಿ ಬೇರೆ ಪ್ರಾಂತಗಳಲ್ಲಿ ಯಾವ ರೀತಿಯಾಗಿ ಟ್ರಸ್ಟಿಬೋರ್ಡುಗಳಿಗೆ, ಚಾರಿಟಿ ಕಮಿಟಿಗಳಿಗೆ, ಚಾರಿಟಬಲ್ ಇನ್ಸ್ಟಿಟ್ಯೂಷನ್ಗಳಿಗೆ, ಮತ್ತು ರಿಜಿಸ್ಟರಾಗಿರತಕ್ಕ ಸಂಸ್ಥೆಗಳಿಗೆ ಏನೇನು ಅನುಕೂಲತೆಗಳು ಸಿಗುತ್ತಿವೆಯೋ ಅದೇ ರೀತಿಯಲ್ಲಿ ವಿಶಾಲ ಮೈಸೂರಿನಲ್ಲಿಯೂ, ಈಗ ತಂದಿರುವ ಮಸೂದೆಯಿಂದ ಅನುಕೂಲತೆಗಳು ದೊರೆಯುವ ಹಾಗೆ ಈ ಕ್ಲಾಜನ್ನು ತಿದ್ದುಪಡಿ ಮಾಡಬೇಕೆಂಬ ಸಲಹೆಯನ್ನು ಸಭೆಯ ಮುಂದಿಡುತ್ತೇನೆ.

ಅಂಬರ್ ಚರಕ ಸ್ಕೀಂ ಎಲ್ಲರಿಗೂ ಗೊತ್ತಿದೆ. ಅದರಲ್ಲಿ ಒಬ್ಬ ಮನುಷ್ಯ ಒಂದು ಮನೆಯಲ್ಲಿ ಕುಳಿತುಕೊಂಡು ಹತ್ತಾಣೆಯಿಂದ ಒಂದು ರೂಪಾಯಿನವರೆಗೂ ಒಂದು ದಿನಕ್ಕೆ ಸಂಪಾದಿಸಲು ಅವಕಾಶವಿದೆ. ಈ ಯೋಜನೆಯನ್ನು ಇದರಲ್ಲಿ ಅಳವಡಿಸಿಕೊಂಡು ಕೆಲಸಮಾಡುವುದಕ್ಕೆ ಅವಕಾಶವಿದೆ. Mysore State Aid to Industries Act ಎಂದು ಕೊನೆಯಲ್ಲಿ ಒಂದು ಕ್ಲಾಜ್ ಇದೆ. ಆ ಸ್ಟೇಟ್ ಇಂಡಸ್ಟ್ರೀಸ್ ಆಕ್ಟ್‌ನಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಹಾಯ ಕೊಡಬೇಕು ಎಂದಿರುವುದನ್ನು ಮನ್ನಾಮಾಡಿ ಈ ಬೋರ್ಡಿನಿಂದ ಸಹಾಯ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಇದು ಸಾಧುವಾದದ್ದು. ಈ ಒಂದು ತಿದ್ದುಪಡಿಯನ್ನು ಆ ಆಕ್ಟಿಗೆ ತಂದಿರುವುದು ಸಾಧುವಾಗಿದೆ.

ಸೆಕ್ರೆಟರಿ ಒಬ್ಬರನ್ನು ನೇಮಕ ಮಾಡುವುದರಲ್ಲಿ ಹತ್ತಾರು ವರ್ಷಗಳಿಂದ ಕೆಲಸಮಾಡಿ ವಿಶೇಷ ಮಾಹಿತಿ ಪಡೆದಿರುವವರನ್ನು ಮಾತ್ರ ಸೆಕ್ರೆಟರಿಯಾಗಿ ನೇಮಿಸಿದರೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದಿದ್ದರೆ ಅಷ್ಟಾಗಿ ಕೆಲಸವಾಗುವುದಿಲ. ಏಳನೆ ಕ್ಲಾಜಿನಲ್ಲಿ—

> "7. (1) The State Government shall from among its officers appoint the Secretary and the Accounts Officers of the Board."

ಎಂದು ಹೇಳಿದ್ದಾರೆ. 'With the consent of the Board' ಎಂದು ಸೇರಿಸಿಕೊಂಡರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. 'such persons to the staff who have been trained in Khadi and Village industries' ಎಂಬುದನ್ನೂ ಸೇರಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಸುಮ್ಮನೆ ಎಸ್.ಎಸ್.ಎಲ್.ಸಿ. ಪಾಸಾದ ತಕ್ಷಣ ಅವರನ್ನು ಈ ಉದ್ಯಮಕ್ಕೆ ಸೇರಿಸಿದರೆ ಅವರಲ್ಲಿ ನಂಬಿಕೆ ಇದೆಯೋ, ಇಲ್ಲವೇ ಎನ್ನುವುದು ಗೊತ್ತಾಗುವುದಿಲ್ಲ. ಅವರಿಗೆ ಬೇರೆ ಶಿಕ್ಷಣವಾಗಬೇಕು ಮತ್ತು ಈ ಕೆಲಸಕ್ಕೆ ಸೇರಿಸಿದ ನಂತರ ಅವರನ್ನು ಖಾಯಂ ಆಗಿ ತೆಗೆದುಕೊಳ್ಳದೆ ಹಂಗಾಮಿಯಾಗಿ ತೆಗೆದುಕೊಂಡು ಅವರು ಸರಿಯಾಗಿ ಕೆಲಸಮಾಡದೆ ಹೋದರೆ ಅವರನ್ನು ಕೆಲಸದಿಂದ ತೆಗೆಯುವ ಅಧಿಕಾರವಿರುವುದಿಲ್ಲ. ಆದುದರಿಂದ ಅವರನ್ನು ನೇಮಕಮಾಡಿಕೊಳ್ಳತಕ್ಕ ಕಾಲವನ್ನು ಐದುವರ್ಷಗಳ ಕಾಲಮಾತ್ರವೆಂದು ತಿಳಿಸಿ, ಆ ಕೈಗಾರಿಕೆಯಲ್ಲಿ ಉತ್ತೀರ್ಣರಾಗಿದ್ದಾರೆಯೋ ಕೆಲಸ ಮಾಡುತ್ತಿದ್ದಾರೆಯೋ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಸರಿಯಾಗಿ ಕೆಲಸ ಮಾಡುತ್ತಿದ್ದರೆ ಐದು ವರ್ಷಗಳನಂತರ ಪುನಃ ಅವರಿಗೆ ಕೆಲಸ ಕೊಡಬಹುದು, ಇಲ್ಲದೆಯಿದ್ದರೆ ಆ ಕೆಲಸದಿಂದ ತೆಗೆದು ಅವರ ಸ್ಥಳದಲ್ಲಿ ಬೇರೆಯವರನ್ನು ಇಟ್ಟುಕೊಳ್ಳುವ ಅಧಿಕಾರ ಬೋರ್ಡಿಗೆ ಇರಬೇಕು. ಬೋರ್ಡಿಗೆ, ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳುವ ಅಧಿಕಾರವಿದೆ. ಆದರೆ ಅವರು ಕೆಲಸವಾಡಲಿಲ್ಲವೆಂದರೆ ಆ ಬೋರ್ಡಿಗೆ ಅವರನ್ನು ತೆಗೆಯಲು ಅಧಿಕಾರ ಕೊಟ್ಟಿಲ್ಲ. ಸಿಬ್ಬಂದಿಯನ್ನು ನೇಮಕ ಮಾಡುವುದು ಮತ್ತು ಅವರನ್ನು ತೆಗೆದುಹಾಕುವುದು, ಈ ಅಧಿಕಾರವನ್ನು ಬೋರ್ಡಿಗೆ ಕೊಡಬೇಕಾದ್ದು ಸರಿ ಎಂದು ಹೇಳುತ್ತೇನೆ.

Chairman and Vice Chairman ಎಂದು ಇಬ್ಬರಿಗೆ ಅವಕಾಶ ಕೊಟ್ಟಿದ್ದಾರೆ. ಆದರೆ Chairman and Vice-Chairman ಇವರ ಡ್ಯೂಟಿಗಳೇನು, ಎಷ್ಟು ಕೆಲಸ ಮಾಡಬೇಕೆನ್ನುವುದರ ಕಡೆಗೆ ಗಮನ ಕೊಟ್ಟಹಾಗೆ ಕಾಣುವುದಿಲ್ಲ. ಈ ಎರಡು ಸ್ಥಾನಗಳಲ್ಲಿ ಕೆಲಸ ಮಾಡುವವರಿಗೆ ಒಂದು ಆಫೀಸಿದ್ದು, ಅವರು ಅದನ್ನು ಕಂಡಕ್ಟ್‌ಮಾಡಿ ಸಂಸ್ಥಾನಕ್ಕೆ ಸಂಬಂಧಪಟ್ಟ ಕೆಲಸವನ್ನೆಲ್ಲ ಮಾಡುವಂತಾಗಬೇಕೇ ವಿನಾ ಮುನಿಸಿಪಲ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರು ಇವರುಗಳಹಾಗೆ ದಿನಕ್ಕೆ ಒಂದುಗಂಟೆ ಕಾಲ ಕಾಗದಗಳಿಗೆ ರುಜುಹಾಕಲು ಹೋಗಿ ಬಂದರೆ ಕೆಲಸವಾಯಿತು ಎಂದು ತಿಳಿದುಕೊಳ್ಳಬೇಕಾಗಿಲ್ಲ. ರೆಗ್ಯುಲರ್ ಆಗಿ ಆಫೀಸಿಗೆ ಹೋಗಿ ಎಂಟು ಗಂಟೆಗಳ ಕಾಲ ಕೆಲಸಮಾಡಿ ಆಫೀಸನ್ನು ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಇದರಲ್ಲಿ ಸೂಚಿಸಿರುವಂತೆ ವೈಸ್ ಛೇರ್‌ಮನ್‌ರವರ ಅವಶ್ಯಕತೆ ಕಂಡುಬರುವುದಿಲ್ಲ. ಛೇರ್ಮನ್‌ರವರೊಬ್ಬರೇ ಸಾಕು. ಇವರಿಬ್ಬರಿಗೂ difference of opinion ಬರಬಾರದು ಎಂದು ಹೇಳುತ್ತೇನೆ.

ಇದರಲ್ಲಿ ಮತ್ತೊಂದು ವಿಚಾರವೇನೆಂದರೆ ಯಾರಾದರೂ ಒಬ್ಬ ಮನುಷ್ಯ ಒಂದು ಕೈಗಾರಿಕೆಯನ್ನು ನಡೆಸುತ್ತಿದ್ದು ಹಣದ ಮುಗ್ಗಟ್ಟಿನಿಂದ ಸಹಾಯ ಪಡೆಯಬೇಕಾದ ಸಂದರ್ಭ ಬಂದಾಗ All India Board ನಿಂದ ಸಹಾಯ ಅಥವ ಗ್ರಾಂಟ್ ಪಡೆಯುವುದಕ್ಕೆ ಅವಕಾಶವಿದ್ದ ಹಾಗೆ ಕಾಣುವುದಿಲ್ಲ. ಬರೀ ಕೋ-ಆಪರೇಟಿವ್ ಸೊಸೈಟಿಗಳಿಗೆ ಮಾತ್ರ ಕೊಡುತ್ತಾರೆಂದು ಕಾಣುತ್ತದೆ. ಈ ವಿಷಯವನ್ನು ಕೂಡ ಸೇರಿಸಿಕೊಂಡು ಅವಶ್ಯಕವಾದ ಮಾರ್ಪಾಡುಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಈ ಖಾದಿಬೋರ್ಡ್ ಸ್ಟ್ಯಾಟ್ಯೂಟರಿ ಬೋರ್ಡು ಆಗುವುದರಿಂದ ಮೈಸೂರು ಸಂಸ್ಥಾನದಲ್ಲಿರುವ ಗ್ರಾಮಾಂತರ ಜನಗಳಿಗೆ ಆದಷ್ಟು ಉತ್ತೇಜನ ದೊರೆತು ಈ ಮಸೂದೆಯಲ್ಲಿ ತೋರಿಸಿರುವ ಕೈಗಾರಿಕೆಗಳೆಲ್ಲ ಪ್ರಗತಿಗೆ ಬರುತ್ತವೆಂಬ ನಂಬಿಕೆಯುಳ್ಳವನಾಗಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

(Sri K. PATTABHIRAMAN in the Chair)

*Sri T. MARIAPPA (Mysore City North).—Sir, in according my whole-hearted support to the Mysore Khadi and Village Industries Bill sponsored by the Government, I would like to make a few remarks. I am indeed happy that this Bill has at least been placed before this House. We have

(SRI T. MARIAPPA)

lost nearly three years in coming to a conclusion whether we should have a Statutory Board in the State of Mysore or merely an Advisory Board constituted under executive powers of the Government. It is true, Sir, that the Government of Mysore also had appointed an Advisory Board on the lines of the Khadi and Village Industries Board. But the question repeatedly came up before that Board whether any substantial results had been achieved by vitiating the policy that was pursued ever since the constitution of the Board. Then, the Government of India suggested that it would be better for implementation of the progress before the country that a Statutory Board should be set up. My Hon'ble friend Sri Srinivasa Iyengar found fault with the provisions of the Bill on the ground thatthe powers and functions of the Board are not comprehensive enough and it still continues to be a nominated body subject to the interference by the Government. I was not able to follow him when he said that instead of nomination to the Board there ought to have been provision for election of members. Sir, even a cursory examination would reveal that it would be very difficult to constitute a Board with elected members because it would be very difficult to find the interests to be represented in this Board by means of election. What is envisaged is that instead of the Government undertaking the implementation of that policy of enouraging, organising or starting village industries, that function should be entrusted to a Board with statutory power. Even the Government of India had not been very definite regarding the form that the All-India Khadi and Village Industries Board should take. They ultimately came to a decision that instead of a Board constituted on an executive power, a Statutory Board should be appointed to replace the present All-India Khadi and Rural Industries Board. It is only in the last session of the Parliament that that policy was accepted and legislation was enacted to give a statutory shape to the present All-India Khadi and Village Industries Board. On the same lines each State was asked to enact legislation so that Statutory Khadi and Village Industries Board could be set up. It is true, Sir, that this Board is not autonomous. But, that does not prevent the Board from implementing the policy of the All-India Khadi and Village Industries Board because in the main the policy has been accepted by the Parliament and by the State Government. Secondly, Sir, the implementation of this policy should take a concrete shape in that the needs of the nation so far as the consumer goods are concerned must be met by the rural and village industries. The author of the plan made it abundantly clear that in any undeveloped country it would be very difficult to find funds for the establishment of heavy industries unless the consumer needs of the country is met by the household or village industries, for vast amounts are needed for the establishment of heavy industries.

Sir, you are aware and the House is also quite aware that India is a ancient country with occupational groups spread all over the country. These occupational groups have been, to some extent, meeting the consumers' demands of the nation. There was a time when these village, cottage and household industries were fully meeting the demands of the country and they were in a position at some time of the history of this country, even to export goods which any country could be proud of. Those were best days. We need not at this stage think merely of the past. We must spend all our energy t revive at least those industries which have a survival value. Sir, I had the opportunity of touring the country from 1953 to 1955. It was most unfortunate that in almost all the States those people to whom the destiny had entrusted the adiministration of the industries department had practically no faith in the revival of rural and village industries. Most of these permanent servants who were in charge of this department were of the definite opinion that most of the cottage and rural industries had no survival value in the context of world conditions. But the author of the plan has made it very

clear that if India had to find resources from internal source then the whole nation must think of meeting the consumer needs from the local industries, house-hold industries, village industries. It is only then that we would be able to find funds for the heavy industries. Therefore, he made it condition precedent for the successful working of the Second Five-Year Plan the rural, house-hold and village industries should be revived and they should be made use of to meet at least part of the consumer goods. In that particular context that all the State Governments should reconsider the whole policy and try to revive not only the tiny rural industries but rejuvenate them and as far as possible try to produce goods which will, to some extent, meet the consumers' needs. It was therefore the Government of India established an All-India Khadi and Village Industries Board. They in turn requested all the State Governments to constitute similar Boards so that at least on functional basis most of these industries could be revived and rejuvenated and even new industries on this line be started so that we might produce goods to meet the consumers needs.

Mr. CHAIRMAN (SRI K. PATTABHIRAMAN.)—I think the Hon'ble Member needs some more time.

Sri T. MARIAPPA.—Yes.

Mr. CHAIRMAN.—So, we shall rise for lunch now and meet at 3-30.

The House rose for Lunch at Three of the Clock and re-assembled at Thirty Minutes past Three of the Clock.

[MR. CHAIRMAN (SRI K. PATTABHIRAMAN) in the Chair]

Sri T. MARIAPPA.—Sir, I was referring to the importance of rural and cottage industries in the context of the Second Five-Year Plan where a great emphasis has been laid on the industrialisation in this country.

Sir, the importance of rural industries on the revitalisation of Indian economy, is not necessary for me to reiterate, for, many years to come, it will certainly exert a great deal of influence on the economy of the country. India is still largely agricultural and any subsidiary income which would go to help the agriculturists is a great thing indeed to help in raising the standard of life of the people. It is in that context, Sir, that the Planning Commission reviewed the whole question of revitalising the rural and cottage industries. They even got the whole field of rural and cottage industries examined by a Special Committee of which Sri Karve was the Chairman. Unfortunately, I have not got that report with me. I have read it very carefully and the conclusions of that Committee are well worth adoption. In the light of the recommendations made by that Committee, the programme of the All-India Cottage and Rural Industries was well conceived in the interests of developing the rural economy of the country. Sir, the Karve Committee have accepted the programme and plans of All-India Khadi and Village Industries Board. They were also of the opinion that the All-India Khadi and Village Industries Board should have a statutory form so that they could carry on their work unhampered by executive interference. It is in pursuance of that policy that the Parliament accepted the All-India Khadi and Village Industries Bill.

Sir, even here, the Government of Mysore have been encouraging the khadi and rural industries to some extent. Khadi work in Mysore, no doubt, is pioneering work and is as old as a quarter of a century, and yet Sir, we have not been able to make much headway. I may be pardoned, if I could say, that we made all these years only half-hearted effort in resuscitating the rural and village industries. The whole approach to the problem was not properly defined till now. It is only the Karve Committee there went into the whole question, with the problem, the nature of the difficulties to be met with, the perspective needed for reorientating the policy and the impro-

(Sri T. MARIAPPA)

ved equipment that have to be brought into play and the financial assistance that is needed to revive or revitalise this rural and cottage industries. It is therefore necessary Sir, that the State Government also should fall in line with that policy and try their best to take all the steps necessary for placing these rural industries on very stable and firm footing.

Sir, I am not one of those who would plead that all the rural and cottage industries should have a revival value, but majority of these indutries certainly have a survival value for at least a decade or two to come. Till then instead of trying to rely mainly on the big industries and tackling the problem of over-industrialisation of this country which would certainly come in their way, it is better that we should also, as large an extent as possible, decentralise the industrial development of this country so that in the rural areas the age-old industries could be revived.

Sir, ample scope is made in this Bill for the revival of these 16 industries. No doubt 15 are put in the schedule, but in the body of the Bill khadi is also mentioned. Therefore including khadi, we have got 16 industries solely to be under this one Board. Doubts are no doubt expressed whether these industries could be revived especially in view of the fact that this Board is subject to interference by the Government. When once the policy is accepted when once the Board is set up and at least in form, certain autonomy is conceded to the Board, I am sure, Sir, that there is no need to entertain any misapprehension in regard to the steps that would be taken by the Board.

I may quote in this connection the work of the Handloom Board. Though the work done may not be to the extent we expected, yet it is doing its best to rejuvenate the age-old handloom industry in this State. The Handloom Board or the Provincial Handloom Co-operative Society which is carrying on that work is modelled almost on similar lines of the All-India Handloom Board. So also the present Mysore Khadi and Village Industries Board will almost in a similar manner function in the State for the development of these 16 industries. It is true that we can improve a great deal later on after finding how far the present provisions of the Bill would work in actual practice. It is in that spirit that I would request the Hon'ble Members of this House to accord their unstinted support for this measure. Whatever may be the short-comings, because this Bill is modelled on the lines of the Bombay Act,—even the Sourashtra Act is almost on similar lines. therefore let us work this Act for sometime and if certainly there is interference by Government, it will be time enough to think of giving more autonomy to this Board.

My friend Sri Nagappa Setty is not here. He is a great constructive worker and is enthused in the development of khadi and has abundant faith in the revival of rural and cottage industries. Sir, I have heard people urging for the revival of this industry not only on the floor of this House but also in meetings of the Khadi and Village Advisory Board set up by the Government of Mysore. Whatever might have been our lapses in the past, at least we are now awake to the need for going ahead by this Act to take immediate steps in this behalf. Incidentally, I may refer to one aspect which has not received the attention which it deserves by the Government of Mysore, *viz.*, the Ambar Charka in Mysore. I would certainly plead with the Government, to take a more realistic view of that programme. Though the Government of India and the All-India Khadi and Village Industries Board have been insisting that the Government of Mysore should take immediate steps for the introduction of Ambar Charka, I am sorry to say that practically no tangible actions have yet been taken in that direction. If my memory is correct, I was told that by the end of March, the Government of Mysore are required to introduce about 3,700 Ambar Charkas in the State. It requires a lot of organisational set up, the field work and the entertainment of necessary staff for the introduction of Ambar Charka. Sir, in this behalf, if I may quote the instance of Madras, how earnestly they are keen about this

business. They have even taken the responsibility of manufacturing Ambar Charkas to the extent of 24,000 and spreading it over throughout the State. The Government of Mysore have not taken action for the manufacture of Ambar Charkas. I am told that the Government have entrusted the manufacture of Ambar Charkas to a private firm in Mysore, who, if my information is correct, manufacture about 150 charkas per month. Government are not lacking in resources. They have got industrial workshops to entrust this work to them. Though there are several workshops in the State and yet it passes my comprehension how they have failed to grasp this opportunity of taking over the responsibility of manufacturing Ambar Charkas. They could have given employment to more people if they themselves had started manufacturing of charkas; it would have helped our own people to a great deal. Government of India have accepted the policy of introducing Ambar Charkas all over India.

Sir, I would plead with the Government of Mysore to look into this particular point and at least even now they should go ahead with the work. We are already in the fag end of September: after two or three weeks they would be very busy with regard to the problems of integration. Therefore they will have no time; unless they decide their policy immediately and unless they give a green signal to the departmental officers to go ahead with this work, we would be too late in the field. While all other States in India have made much headway in this direction, may I tell them in all humility, it does not redound to their credit if they keep over this matter any longer? Therefore Sir, it is time to set up training centres for recruiting people. We must entertain persons who have faith in this industry. We want old khadi workers who have faith in this industry to come into this field. Let them be given training and let them set up industries all over Mysore State, particularly where there are no other industries. Why I am laying emphasis on this fact is not because it has got any merit but because ordinarily it will not succeed in a place where people get higher wages. Personally I feel that this Ambar Charkas should be introduced in places where there are no industries. It would solve the unemployment problem and it would help people to earn at least 12 annas or a rupee per day.

Sir, we know that the agriculturist will have a lot of spare time. If Ambar charka is properly organised and if people are trained properly and then necessary accessories are made available to them, necessary organisational set up is ensured so that the work could go on smoothly; then the programme will be certainly successfull because it has been proved to be a success in other parts of India

With regard to other industries, I want to say a few words. Sir, it is almost a case with every Government that whenever a scheme is sponsored, when they think of starting a new industry, they forget the old occupational groups. We are practically either unemployed or under-employed in that particular area. Because over the last two centuries most of these village industries have been disorganised for want of State support and for want of market facilities for their products, they have fallen on evil days. They are not doing the work in the manner in which they ought to have done. Therefore let these occupational groups be put into the field as they have got hereditary experience. However primitive their equipment may be, but that is the very reason why even the Karve Committee recommended to encourage the persons who are already engaged in these cottage industries; they should be encouraged not in a haphazard manner but in a systematic way. They should be given monetary assistance. The bombob industry, smithy, carpentry, and leather industry should be encouraged. In these industries there are already professional groups; it is left to the Government to organise them on a functional basis. They may be given improved equipment. if not in the initial stages, after sometime and then make provision may be made for marketing their products. It would be

(SRI T. MARIAPPA.)

very easy to organise an industry but it is very difficult to make it successful.

My friend Sri T. Hanumiah was pleading on behalf of the people who are engaged in tanning and bark industries. That is almost a part of the cottage and leather industry. If all those people who are engaged in the leather industry and in industries incidental to the leather industry, the Government would give them very substantial grant for the revival of these cottage industries.

And if I can extend and stretch a point in their favour. Sir, perhaps all these people who are engaged in the leather industry, in the preparation of hides and skins—perhaps this is the one field in which even Government should make both ends meet. They could make that functional organisation self-supporting almost in the course of a few years provided they put in the necessary technical personnel and give monetary help when that industry needs it.

So also in the case of pottery industry. Sir, I had occasion to go to the Porcelain Factory. The officers in charge of the Porcelain Factory said that they are going to introduce cottage industry for this particular field. What they do is, they pick out ten families and they give them moulds and see that they manufacture some of these articles of crockery. Is that enough for ten families to be merely engaged in this? What is envisaged in this programme is not the question of training families anew, but the question of reviving all the potteries in the State. There are at least 50,000 to 60,000 people who are making a living out of this industry. We have left them to their fate. But we take these ten families placed in urban areas and try to do something. That is where we do not succeed. What ought to be done is not training new people, but encouraging those people who are already in this field of pottery.

With these few words, I extend my cordial support to the Bill.

(*Sri B. Hutche Gowda rose.*)

DR. R. NAGAN GOWDA.—Since so many Hon'ble Members have suggested that the Bill may go to the Select Committee, I think we should now decide to send it to the Select Committee and after the Bill is reported back from the Select Committee, there will be an occasion to discuss further.

SRI MULKA GOVINDA REDDY.—Members who are anxious to give out some suggestions for the improvement of the Bill, must be given an opportunity to say what they have to say, Sir.

MR. CHAIRMAN.—We need not spend much time at this stage. We shall, nevertheless, hear one or two more members. I am sure Sri Hutche Gowda will appreciate the temper in the House and be short and sweet.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಇದರಲ್ಲಿ ಒಂದು ಮುಖ್ಯವಾದ ಭಿನ್ನಾಭಿಪ್ರಾಯ ಬಂತು. ಈ ವಿಚಾರದಲ್ಲಿ ಒಂದೆರಡು clarification ಕೊಡಬೇಕೆಂಬುದು ನನ್ನ ಇಷ್ಟ. ಮುಖ್ಯವಾಗಿ ಇದರ ಉದ್ದೇಶದಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ನಿರುದ್ಯೋಗವನ್ನು ನಿವಾರಣೆಮಾಡುವುದಕ್ಕೆ ಮುಖ್ಯವಾಗಿ ಗ್ರಾಮ ಕೈಗಾರಿಕೆಗಳು ಅತ್ಯಾವಶ್ಯಕ. ನಮ್ಮ ದೇಶದ ಜನಗಳ ಜೀವನದಮಟ್ಟ ಮತ್ತು ನಮ್ಮ ಜನರ ಆರ್ಥಿಕಸ್ಥಿತಿಯನ್ನು ನೋಡಿಕೊಂಡರೆ ಗ್ರಾಮ ಕೈಗಾರಿಕೆಗಳಿಗೆ ಸಾಕಾದಷ್ಟು ಪ್ರೋತ್ಸಾಹ ಕೊಡಬೇಕು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಬಿಲ್ಲಿನಿಂದ ಅದಕ್ಕೆ ಎಷ್ಟುಮಟ್ಟಿಗೆ ಸಹಾಯವಾಗುತ್ತದೆನ್ನುವುದರಲ್ಲಿ ಒಂದು ಸಂದೇಹವಿದೆ. ಅದೂ ಅಲ್ಲದೆ ಅವರು ಅನುಸರಿಸತಕ್ಕಮಾರ್ಗ, ರೀತಿ ಮತ್ತು ಯಾವ ರೀತಿ ಅದರಿಂದ ಜನಗಳಿಗೆ ಪ್ರಯೋಜನವಾಗುತ್ತದೆನ್ನುವುದರಲ್ಲಿ ನಮಗೆ ಸಂಪೂರ್ಣ ನಂಬಿಕೆ ಇಲ್ಲ. ಈ ಒಂದು ವಿಚಾರವನ್ನು ಮಾತ್ರ ನಾವು ಆಕ್ಷೇಪಿಸಬೇಕಾಗಿದೆ. ಏನೆಂದರೆ ಈ ಕೆಲಸ ಮಾಡುವುದರಲ್ಲಿ ಸರ್ಕಾರದವರಿಗೆ ಶ್ರದ್ಧೆ ಇಲ್ಲವೆಂದು ಒತ್ತಿ ಹೇಳಬೇಕಾಗಿದೆ. ಶ್ರೀಮಾನ್ ಮರಿಯಪ್ಪನವರು ಪೂರ್ಣ ಬೆಂಬಲವನ್ನು ಈ ಮಸೂದೆಗೆ ಕೊಡಬೇಕೆಂದು ಹೇಳಿದರು. ಕೊನೆಗೆ Brutus is an hon'ble man ಎಂದು ಹೇಳುವುದನ್ನು ಬಿಡಲಿಲ್ಲ. ಇದರಲ್ಲಿ ಮೊದಲನೆಯದಾಗಿ ಖಾದಿ ಎನ್ನುವುದಕ್ಕೆ ಡೆಫೆನಿಷನ್ ಕೊಡಬೇಕು. ಅದು ಕೈಯಿಂದ ನೂಲನ್ನು ತೆಗೆದು ಅದರಿಂದ ಬಟ್ಟೆಯನ್ನು ನೇಯ್ದ ಖಾದಿಯೇ, ಮಿಲ್ ಖಾದಿಯೇ ಎಂಬುದನ್ನು ತಿಳುಹಿಸಬೇಕು. ಅದರಮೇಲೆ ಆ ಖಾದಿಗೆ ಎಷ್ಟು ಹುಟ್ಟುವಳಿಯಾಗುತ್ತಿದೆ, ಅದಕ್ಕೆ ನಮ್ಮ ದೇಶದಲ್ಲಿ ಎಷ್ಟು ಗಿರಾಕಿಯಿದೆ, ಎಂಬುದನ್ನು ತಿಳುಹಿಸಬೇಕು. ಮುಖ್ಯವಾಗಿ ಪ್ರತಿಯೊಂದು ಕೈಗಾರಿಕೆಯಲ್ಲೂ ಇರತಕ್ಕ ಒಂದು ಕೊರತೆ ಏನೆಂದರೆ ಅನೇಕರು ಕೈಗಾರಿಕೆಯನ್ನು ಅವಲಂಬಿಸುತ್ತಿದ್ದರೂ ತಯಾರಾದ ಪದಾರ್ಥಗಳಿಗೆ ಗಿರಾಕಿ ಸಿಕ್ಕುತ್ತಿಲ್ಲ, ಅದಕ್ಕೆ ಪ್ರೋತ್ಸಾಹವಿಲ್ಲ. ಸರ್ಕಾರದವರು ಯಾವ ಕೆಲಸವನ್ನು ಮಾಡಬೇಕಾದರೂ half-hearted ಎಂದು ಹೇಳುತ್ತಾರಲ್ಲ ಹಾಗೆ ಅರೆಮನಸ್ಸಿನಿಂದ ಕಳೆದ ಹತ್ತು ವರ್ಷಗಳಿಂದಲೂ ಮಾಡಿಕೊಂಡು ಬಂದಿದ್ದಾರೆಂದು ಶ್ರೀಮಾನ್ ಮರಿಯಪ್ಪನವರು ಹೇಳಿದರು. ಅದಕ್ಕೆ ನಮ್ಮ ಪೂರ್ಣ ಒಪ್ಪಿಗೆ ಇದೆ.

ಇದರಲ್ಲಿ ಇನ್ನೊಂದು ವಿಷಯವೇನೆಂದರೆ ಖಾದಿಗೆ ಈಗ 8 ವರ್ಷಗಳಹಿಂದೆ ಎಷ್ಟು ಗಿರಾಕಿ ಇತ್ತು, ಈಗ ಎಷ್ಟಿದೆ, ಖಾದಿಯಿಂದ ದೇಶಕ್ಕೆ ಎಷ್ಟು ಉಪಕಾರವಾಗಿದೆ ಎಂಬುದನ್ನು ನಾವು ನೋಡಬೇಕು. ಹಿಂದೆ ಅರವತ್ತು ಕೋಟಿ ರೂಪಾಯಿ ಬಟ್ಟೆಯನ್ನು ಹೊರದೇಶಗಳಿಂದ ತರಿಸುತ್ತಿದ್ದೆವು. ಯಾವ ಇಂಗ್ಲೆಂಡ್ ದೇಶದಿಂದ ನಾವು ಬಟ್ಟೆಯನ್ನು ತರಿಸುತ್ತಿದ್ದೆವೋ ಆ ಇಂಗ್ಲೆಂಡಿಗೆ ಈಗ ನಾವು ಬಟ್ಟೆಯನ್ನು ಕಳುಹಿಸುತ್ತಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಖಾದಿ ಪ್ರಭಾವವಿಲ್ಲವೆಂದು ತಿಳಿದುಕೊಂಡಿದ್ದೇನೆ. ಖಾದಿಯಿಂದ ನಮ್ಮ ದೇಶದಲ್ಲಿ ಎಷ್ಟೋ ಪರಿಣಾಮವಾಗಿದೆ ಎಂದು ಹೇಳುವಾಗ, ನೂಲುವುದರಲ್ಲಿ ಮತ್ತು ಆ ತತ್ವವನ್ನು ಅನುಸರಿಸುವುದರಲ್ಲಿ ಅವರು ಎಲ್ಲರಿಗಿಂತ ಹೆಚ್ಚಾಗಿ ಹೇಳಿಕೊಳ್ಳುತ್ತಿದ್ದಾರೆ. ಇವೊತ್ತು ಕಾಂಗ್ರೆಸ್ ಸದಸ್ಯರ ಸಂಖ್ಯೆ ಎಷ್ಟಿದೆ; ಅವರು ಮಾತ್ರ ಖಾದಿಯನ್ನು ಹಾಕಿದರೆ 20 ಕೋಟಿ ಗಜ ಬಟ್ಟೆ ಬೇಕು. ಆದರೆ ಈಗ ಅವರೇ ಹೇಳುವಂತೆ ಬಟ್ಟೆ ಎಲ್ಲಾ ಕೊಳೆಯುತ್ತಿದೆ. ಹೀಗೆ ಪ್ರೋತ್ಸಾಹವಿಲ್ಲದೆ ಇರುವಾಗ ಯಾವರೀತಿ ಕೆಲಸ ಮಾಡುವುದಕ್ಕಾಗುತ್ತದೆ. ಈಗ ಖಾದಿಯನ್ನು ಯಾವ ದೃಷ್ಟಿಯಿಂದ ಇವೊತ್ತಿನ ದಿವಸ ಮಾಡಬೇಕಾಗಿದೆ, ಹಿಂದೆ ಯಾವ ದೃಷ್ಟಿಯಿಂದ ಮಾಡಿತ್ತು, ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆಮುಂಚೆ ಯಾವ ರೀತಿ ಇತ್ತು ಎಂದು ನೋಡಬೇಕು. ಇವೊತ್ತು ನಾವು ಪ್ರತಿಯೊಬ್ಬ ಖಾದಿ ಕೆಲಸಗಾರನಿಗೂ ಖಾದಿಯನ್ನು ತಯಾರುಮಾಡುವವನಿಗೂ ಕೊಡತಕ್ಕ ಮಜೂರಿ ಲೆಕ್ಕ ಹಾಕಿದರೆ, ಇತರ ಯಾವ ಕೈಗಾರಿಕೆಯಲ್ಲಿಯೇ ಆಗಲಿ ಎಷ್ಟು ಕೂಲಿ ದೊರೆಯುತ್ತದೆ ಅದೇ ಅವನಿಗೂ ಸಹ ಬರಬೇಕು. ಆ ರೀತಿಯಾಗಿ ಬರದೆ ಅವನು ಮೂರಾಣೆ ಕೂಲಿ ಪಡೆದು, ರಾಜಕೀಯ ಧುರೀಣರಿಗೆ ಬಟ್ಟೆಯನ್ನು ಕಡಮೆ ದರದಲ್ಲಿ ಒದಗಿಸಬೇಕು ಎಂದು ಹೇಳಿದರೆ ಅದರಲ್ಲಿ ಅರ್ಥವೇನು? ನಾವೆಲ್ಲ ಪ್ರಜಾ ಸೋಷಿಯಲಿಸ್ಟ್ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರ ಹಿಂಬಾಲಕರೆಂಬ ಹೆಮ್ಮೆ ಇದೆ. ಕೃಪಲಾನಿಯವರು 35 ವರ್ಷಗಳಹಿಂದೆ ಖಾದಿ ಬೋರ್ಡಿಗೆ ಅಧ್ಯಕ್ಷರಾಗಿದ್ದರು. ಆಗ ಅವರು ಹೇಳಿರುವುದನ್ನು ಕೇಳಿದ್ದೇನೆ ಒಂದುಸಲ ಮಹಾತ್ಮ ಗಾಂಧಿಯವರು ಪ್ರತಿಯೊಬ ಕಾಂಗ್ರೆಸ್ ಸದಸ್ಯರೂ ಸಹ ಎರಡುಸಾವಿರ ಗಜ ನೂಲನ್ನು ಕೊಟ್ಟೇತೀರಬೇಕು ಎಂದು ಹೇಳಿದಾಗ ಕೃಪಲಾನಿಯವರು ಅದನ್ನು ಮೊದಲನೆಯದಾಗಿ ವಿರೋಧಮಾಡಿದರು. ಎರಡು ಸಾವಿರ ಗಜ ನೂಲನ್ನು ಕೊಡಿ ಎಂದರೆ ಅದರ ಅರ್ಥವೇನೆಂದು ಅವರು ಆವಾಗ ಚೆನ್ನಾಗಿ ವಿವರಿಸಿದರು. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನಗೆ ಬರುವುದಿಲ್ಲ. ತಾವೇ ಸ್ವತಃ ನೂಲನ್ನು ನೂತು ಕೊಡಬೇಕು ಎಂಬುದು ಮಹಾತ್ಮ ಗಾಂಧಿಯವರ ಇಚ್ಛೆಯೇ ಹೊರತು ಯಾರಾದರೂ ನೂತಿರುವುದನ್ನು ಕೊಂಡುಕೊಂಡು ಕೊಡಿ ಎಂಬುದಾಗಿ ಅಲ್ಲವೆಂದು ವಿವರಿಸಿದರು. ಖಾದಿ ಬಟ್ಟೆಯನ್ನು ಹಾಕುವುದನ್ನು ವಿರೋಧಮಾಡುವುದಿಲ್ಲ. ಆದರೆ ಅವರಿಗೋಸ್ಕರ ಮತ್ತೊಬ್ಬರು ನೂತುಕೊಡಬೇಕು ಎಂಬುದನ್ನು ಒಪ್ಪುವುದಿಲ್ಲವೆಂದು ಹೇಳಿದರು. ಶ್ರೀಮಾನ್ ಮರಿಯಪ್ಪನವರು ಹೇಳಿದಂತೆ, ಸರ್ಕಾರಕ್ಕೆ ನಂಬಿಕೆ ಇಲ್ಲ, ಮಂತ್ರಿಗಳಿಗೆ ನಂಬಿಕೆ ಇಲ್ಲ. ಹೀಗಿರುವಾಗ ಯಾರೇ ಆಗಲಿ ನಂಬಿಕೆ ಇಲ್ಲದಿರುವ ಕೆಲಸವನ್ನು ಯಾಕೆ ಮಾಡಬೇಕು? ಯಾವ ಕೆಲಸವನ್ನು ಮಾಡಬೇಕಾದರೂ ಪೂರ್ಣನಂಬಿಕೆ ಇರಬೇಕು. ಸರ್ಕಾರಕ್ಕೆ ಈ ಉದ್ಯೋಗದಲ್ಲಿ ಅಚಲವಾದ ಭಕ್ತಿ ಇದೆಯೋ ಅವರ ತತ್ವ ಒಂದೇ ಆಗಿದೆಯೆ ಮುಂದೆ ಆಗತಕ್ಕ ಪರಿಣಾಮ ಎಲ್ಲಿಯವರೆಗೆ ಇದೆ ಎಂಬುದನ್ನೆಲ್ಲ ತಿಳಿದುಕೊಂಡು ಅವುಗಳನ್ನೆಲ್ಲ ಅನುಸರಿಸಿದ್ದರೆ ನಾನು ಅದಕ್ಕೆ ಖಂಡಿತವಾಗಿಯೂ ಒಪ್ಪುತ್ತಿದ್ದೆ. ಅಷ್ಟು ಪ್ರಾಮುಖ್ಯವಾದ ಒಂದು ಮಸೂದೆ ನಮ್ಮ ಸಭೆಯಮುಂದೆ ಬರಬೇಕಾದರೆ, ಅದಕ್ಕೆ ಬೇಕಾದ ಸಮಸ್ತ ಅಂಶಗಳನ್ನೂ ಕೂಡ ಮಾನ್ಯಮಂತ್ರಿಗಳು ಸಭೆಯ ಮುಂದಿಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು. ಆದರೆ ಅವರು ಒಂದೇಒಂದು ವಿಚಾರವನ್ನು ಕೂಡ ಹೇಳಲಿಲ್ಲ. ಇದೂ ಅಲ್ಲದೆ ಅಂಬರ್ ಚರಕ ವಿಷಯದಲ್ಲಿ ಒಂದು ಮಾತನ್ನೂ ಹೇಳಲಿಲ್ಲ. ಅದರ ಅವಶ್ಯಕತೆ ಏನಿದೆ! ಅಂಬರ್ ಚರಕದ ವಿಷಯದಲ್ಲಿ ಕೇಂದ್ರ ಮಂತ್ರಿಮಂಡಳದಲ್ಲಿ ಭಿನ್ನಾಭಿಪ್ರಾಯವಿದೆ, ಕಾಂಗ್ರೆಸ್ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯವಿದೆ ಮತ್ತು ಖಾದಿ ಬೋರ್ಡಿನಲ್ಲಿ ಅವರು ಇದನ್ನು ಖಂಡಿತ ಒಪ್ಪುವುದಿಲ್ಲ. ಅಂಬರ್ ಚರಕದಿಂದ ತಯಾರಾದ ಬಟ್ಟೆಯನ್ನು ಖಾದಿ ಎಂದು ಒಪ್ಪಕೂಡದೆಂಬ ಅಭಿಪ್ರಾಯವಿದೆ. ಈ ವಿಚಾರವನ್ನು ಹೇಳಬೇಕಾದ್ದು ಅವರ ಕರ್ತವ್ಯವಾಗಿತ್ತು. ಅದ್ಯಾವುದೂ ಇಲ್ಲದೆ ಮೊಗುಂಳಿಗಿ ತಂದು ಅದಕ್ಕೆ ಒಪ್ಪಿಗೆ ಕೊಡಬೇಕೆಂದರೆ ಹೇಗೆಸಾಧ್ಯ? ಸುಮ್ಮನೆ ಒಂದು show ಎಂದರೆ ತೋರಿಕೆಗಾಗಿ ಇದನ್ನು ತೆಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಕೊಟ್ಟಿರುವಂತೆ 7,10,000 ರೂಪಾಯಿಗಳು ಹೇಗೆ ಖರ್ಚಾಗುತ್ತದೆಂಬುದನ್ನೂ ಸರಿಯಾಗಿ ತಿಳಿಸಿಲ್ಲ. ಉದಾಹರಣೆಗೆ ಈ ಖಾದಿ ಕೇಂದ್ರಗಳನ್ನು ಜಿಲ್ಲಾ ಬೋರ್ಡುಗಳವರು ನಡೆಸುತ್ತಿದ್ದರು. ನಮ್ಮ ತುಮಕೂರು ಜಿಲ್ಲೆಯಲ್ಲಿ ಆರು ಖಾದಿಕೇಂದ್ರಗಳಿದ್ದುವು. ಅದಕ್ಕೆ ಜಿಲ್ಲಾಬೋರ್ಡಿನ ಪ್ರತಿಒಬ್ಬ ಸದಸ್ಯರೂ ವಿರೋಧವಾಗಿದ್ದರು. ನಾವು ಹಾಗೂ ಸಹ ಅವರ ವಿರೋಧವನ್ನೂ ಸಹಿಸಿಕೊಂಡು ಈ ಕೇಂದ್ರಗಳನ್ನು ನಡೆಸಿಕೊಂಡು ಬಂದೆವು. ಕೊನೆಯವರೆಗೂ ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ. ಅದರಿಂದ ಖರ್ಚುಮಾತ್ರ ಇತ್ತೇ ಹೊರತು ಆದಾಯವಿರಲಿಲ್ಲ. ಅದನ್ನು ಕೊಂಡುಕೊಳ್ಳುವವರೂ ಇಲ್ಲ. ಮುಖ್ಯವಾಗಿ ಯಾವ ಗೃಹ ಕೈಗಾರಿಕೆಯೇ ಆಗಲಿ, ಅದರಲ್ಲಿ ಉತ್ಪತ್ತಿ ಮಾಡುವ ಪದಾರ್ಥಕ್ಕೆ ಬೆಲೆದೊರೆತು ಅದರಲ್ಲಿ ಕೆಲಸ ಮಾಡುವವನಿಗೆ ಸಾಕಾದಷ್ಟು ಕೂಲಿ ದೊರೆಯಬೇಕು. ಅವನಿಗೆ ಒಂದು ದಿವಸಕ್ಕೆ ಎಷ್ಟು ನೂಲುವುದಕ್ಕೆ ಸಾಧ್ಯವೋ ನೇಯುವುದಕ್ಕೆಸಾಧ್ಯವೋ ಅದಕ್ಕೆ ಸರಿಯಾದ ಕೂಲಿ ಬರದೆ ಇದ್ದರೆ ಅವನು ಹೇಗೆ ಮುಂದುವರಿಯುತ್ತಾನೆ? ಖಾದಿಯನ್ನು ರಾಜಕೀಯದಲ್ಲಿರುವವರೂ, ಕಾಂಗ್ರೆಸ್ ಸಂಸ್ಥೆಯ ಸದಸ್ಯರೂ, ಸಂಸ್ಥೆಯಿಂದ ತೆಗೆದು ಹಾಕುತ್ತಾರೋ ಏನೋ ಎನ್ನುವ ಭಯವಿರುವವರೂ ತೆಗೆದುಕೊಳ್ಳುತ್ತಾರೆಯೇ ಹೊರತು ಇತರರು ಯಾರೂ ತೆಗೆದುಕೊಳ್ಳುವುದಿಲ್ಲ. ತಯಾರಾಗುವ ಪದಾರ್ಥಕ್ಕೆ ಸರಿಯಾದ ಡಿಮ್ಯಾಂಡ್ ಇರಬೇಕು. ಅದಿಲ್ಲದಿದ್ದರೆ ಯಾವುದೂ ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಈಗ ಐಮಂಗಲದಲ್ಲಿರುವ ಖಾದಿ ಕೇಂದ್ರಕ್ಕೆ ಒಂದೂವರೆ ಕೋಟಿ ರೂಪಾಯಿ ಕೊಡಬೇಕೆಂದು ಸೂಚಿಸಿದ್ದಾರೆ. ಕಾಂಗ್ರೆಸ್ ಸರ್ಕಾರದವರೂ ಹಿಂದಿನ ಸರ್ಕಾರದವರೂ ಈ ಸಂಸ್ಥೆಗೆ ಎಂಟುವರ್ಷಗಳಿಂದ ಎಷ್ಟು ಹಣವನ್ನು ಕೊಟ್ಟಿರು, ಅದು ಯಾವರೀತಿ ಪರಿಣಾಮವಾಗಿದೆ, ಅದಕ್ಕೆ ಅಲ್ಪ ಸ್ವಲ್ಪ ಸಾಲಕೊಟ್ಟಿರೆ, ಎಲ್ಲವನ್ನೂ ಗಮನಿಸಬೇಕು. ಇವೊತ್ತಿನ ದಿವಸ ಆ ಕೇಂದ್ರವು ಬಹಳ ಶೋಚನೀಯ ಸ್ಥಿತಿಯಲ್ಲಿದೆ. ಸರ್ಕಾರದವರು ಇದ

(ಶ್ರೀ ಬಿ. ಹುಚ್ಚೇ ಗೌಡ)

ನ್ನೆಲ್ಲ ಯೋಚನೆ ಮಾಡಬೇಕು. ಒಟ್ಟಿನಲ್ಲಿ ಹೇಳಬೇಕಾದರೆ sincerity ಇರಬೇಕು; ಪ್ರಯತ್ನಗಳು ನಡೆಯಬೇಕು, ಅವರಿಗೆ ಪ್ರೋತ್ಸಾಹ ಕೊಡಬೇಕು, ಯಾವ ಯಾವ ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ, ಏನೇನು ಮಾಡಿದ್ದಾರೆಂಬ ವಿಚಾರದಲ್ಲಿ ಒಂದನ್ನು ಶ್ರೀಮಾನ್ ನಾಗಪ್ಪಶೆಟ್ಟರು ಒತ್ತಿ ಹೇಳಿದರು

4 P.M.

ಈಗ ಕೈಗಾರಿಕೆಗಳನ್ನು ಒಂದೊಂದಾಗಿ ತೆಗೆದುಕೊಳ್ಳೋಣ, ಬೊಂಬಿನ ಕೈಗಾರಿಕೆಯಿದೆ. ಇಂಥಾದ್ದನ್ನೆಲ್ಲಾ ಸರ್ಕಾರದ ಸಹಾಯವಿಲ್ಲದೆ ಮಾಡಿಕೊಂಡು ಹೋಗುತ್ತಿದ್ದಾರೆ. ಅವರಿಗೇನೂ ಪ್ರೋತ್ಸಾಹವಿಲ್ಲ. ಕೊಟ್ಟಣದ ಅಕ್ಕಿ ಎಂದು ಬತ್ತ ಕುಟ್ಟಿ ಅಕ್ಕಿಮಾಡಲು ಪಲ್ಲಕ್ಕೆ 12 ಆಣೆ ತೆಗೆದುಕೊಳ್ಳುತ್ತಿದ್ದಾರೆ. ಹಾಗೆ ಮಾಡುವಾಗ ಹೆಚ್ಚಿಗೆ ಕೊಟ್ಟಿದ್ದಂತೆ ಲೆಕ್ಕ ಹೇಳಿ ಹಣ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ನೋಡಿಕೊಳ್ಳಲು 250 ರೂಪಾಯಿಗಳ ಸಂಬಳ ಪಡೆಯುವ ಇನ್‌ಸ್ಪೆಕ್ಟರಿದ್ದಾರೆ; ಇಂಡಿಯಾ ಸರ್ಕಾರದಿಂದ ಸಂಬಳ ಬರುತ್ತದೆ. ಈ ದೇಶದಲ್ಲಿ ಯಾವ್ಯಾವ ಕೈಗಾರಿಕೆಗಳಿಗೆ ಇಂಡಿಯಾ ಸರ್ಕಾರದವರು ಪ್ರೋತ್ಸಾಹ ಕೊಡುತ್ತಾರೆಂಬುದು ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿದರೆ ನಮಗೊಂದೂ ಗೊತ್ತಿಲ್ಲ, ಲಕ್ಷಾಂತರ ರೂಪಾಯಿಗಳನ್ನು ಸಂಸ್ಥಾನದ ಸರ್ಕಾರಕ್ಕೆ ತಿಳಿಸದೆ ಕೊಟ್ಟಿದ್ದಾರೆ, ಸಾಲ ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ ಎಂದು ಹೇಳಿದರು. ಈ ರೀತಿಯಾಗಿ ನಡೆಯುತ್ತಿದೆ? ಕೇವಲ ಕೆಲವರಿಗೆ ಸಂಭಾವನೆಕೊಡುವುದಕ್ಕೆ ಅಥವಾ ಸ್ಥಾನ ಕೊಡುವುದಕ್ಕೆ ಬೋರ್ಡ್ ಸ್ಥಾಪಿಸುವುದಾದರೆ ಸರಿಯಲ್ಲವೆಂದು ಹೇಳಿದರು. ತಪ್ಪುಭಾವನೆಯಿಂದ ವಿರೋಧಿಸುತ್ತಾರೆಂದು ಹೇಳುತ್ತಾರೆ. ದೇಶದಲ್ಲಿ ಬಡ ಜನರು ಅವರಿಗಿರುವ ಅವಕಾಶದಲ್ಲಿ ಅಲ್ಪ ಸ್ವಲ್ಪ ಕೈಗಾರಿಕೆ ಮಾಡುತ್ತಿದ್ದಾರೆ. ಅವರಿಗೆ ಕೊಂಚ ಸಹಾಯ ಮಾಡಿದರೆ ಯಾರುತಾನೆ ವಿರೋಧಿಸುತ್ತಾರೆ.

ಶ್ರೀ ಮುಯಪ್ಪನವರು ಇಷ್ಟೆಲ್ಲಾ ಮಾಡಿದರೂ ಒಂದೆರಡು ಡಿಕೇಡ್ ನಡೆಯಬಹುದೆಂದು ಹೇಳಿದರು. ಅಲ್ಲಿಗೆ ಪ್ರೋತ್ಸಾಹ ಕಡಮೆಯಾದ ಹಾಗಾಗುತ್ತದೆ; ಎಲ್ಲಿಯವರೆಗೆ ಪ್ರೋತ್ಸಾಹವಿದೆಯೋ ಅಲ್ಲಿಯವರೆಗೆ ಇರುತ್ತದೆ ಎಂದು ಹೇಳುತ್ತಾರೆ. ಜಪಾನ್ ದೇಶದಲ್ಲಿ ಗಡಿಯಾರಗಳನ್ನು ತಯಾರುಮಾಡುತ್ತಾರೆಂದು ಹೇಳುತ್ತಾರೆ. ಅಂಥಾದ್ದಕ್ಕೆ ನಮ್ಮ ದೇಶದಲ್ಲೂ ಪ್ರೋತ್ಸಾಹ ಕೊಡಬೇಕು. ನಮ್ಮಲ್ಲಿ ಕೆಲವರು ಕ್ಷೌರದ ಕತ್ತಿ, ಅಕ್ಕಸಾಲೆ ಕೆಲಸ ಬಹಳ ಚೆನ್ನಾಗಿ ಮಾಡುತ್ತಾರೆ. ಅವರು ಆ ಕೆಲಸಗಳಲ್ಲಿ ನಿಪುಣರು. ಅವರಿಗೆ ಸಾಲ ಕೂಡ ಸಿಕ್ಕಲಿಲ್ಲ. ನಾನು ಕೆಲವರಿಗೆ ಜಮೀನು ಆಧಾರದ ಮೇಲೆ ಒಂದು ಸಾವಿರ ರೂಪಾಯಿಗಳನ್ನು ಕೊಡಿ, ಪರ್ಸನಲ್ ಬಾಂಡಿನ ಮೇಲೆ ಒಂದು ಸಾವಿರ ರೂಪಾಯಿಗಳನ್ನು ಕೊಡಿ ಎಂದು ಕೊಡಿಸಿದೆ. ನಮ್ಮಲ್ಲಿ ಕಬ್ಬಿಣ ಸಿಕ್ಕುತ್ತದೆ. ಗುಳ ಮುಂತದವನ್ನು ಹಿಂದಿನಿಂದ ಅನೇಕರು ಮಾಡುತ್ತಿದ್ದರು. ಈಗ ಅದು ನಿಂತಿದೆ; ಅದಕ್ಕೆ ಪ್ರೋತ್ಸಾಹವಿಲ್ಲ. ನಿಜವಾಗಿಯೂ ಕೈಗಾರಿಕೆಗಳಲ್ಲಿ ನಿರತರಾಗಿರುವವರಿಗೆ ಪ್ರೋತ್ಸಾಹವಿಲ್ಲ. ಕೈಗಾರಿಕೆ ಮಾಡುವವರು ಸಂಬಂಧಪಟ್ಟ ಇನ್‌ಸ್ಪೆಕ್ಟರು ಹೇಳಿದ ಹಾಗೆ ಕೇಳಬೇಕು, ಇನ್‌ಸ್ಪೆಕ್ಟರಿಗೆ ದಯೆಯಿರುವುದಿಲ್ಲ. ಜನರಿಗೆ ಉಪಕಾರವಾಗುವ ಹಾಗೆ ಉದ್ಯೋಗದಲ್ಲಿ ನಿರತರಾಗಿರುವವರಿಗೆ ಸಹಾಯ ಮಾಡಬೇಕು. ಹುದ್ದೆಗಳನ್ನು ಯಾರೋ ಕೆಲವರಿಗೆ ಕೊಡುತ್ತಾರೆ. ಕಾರಣ ವಿದ್ಯಾವಂತರು ಬೇಕು. ಅನೇಕರಿಗೆ ಓನಾಮ ಬರುವುದಿಲ್ಲ; ಆದರೆ ಕಮ್ಮಾರರು ಬೇಕಾದ ಆಯುಧಗಳನ್ನು ಮಾಡಲು ಸಿದ್ಧರಾಗಿದ್ದಾರೆ; ಅವರಿಗೆ ಪ್ರೋತ್ಸಾಹವಿಲ್ಲ. ಎಲ್ಲರೂ ಕಾಲೇಜುಗಳಲ್ಲಿ ಓದಿಬರಲು ಸಾಧ್ಯವಿಲ್ಲ. ಆದ್ದರಿಂದ ಓದದಿದ್ದರೂ ಕಸಬುಗಳಲ್ಲಿ ಪರಿಶ್ರಮವಿರುವವರಿಗೆ ಉತ್ತೇಜನ ಕೊಡಬೇಕೆಂದು ಒತ್ತಿ ಹೇಳುತ್ತೇನೆ.

ಮುಖ್ಯವಾಗಿ ಕೈಗಾರಿಕೆಯಿಂದ ಸಾಮಾನ್ಯ ಜನರ ಆರ್ಥಿಕ ಸ್ಥಿತಿ ಸುಧಾರಿಸಬೇಕು, ಅವರ ಜೀವನ ಮಟ್ಟ ಹೆಚ್ಚಬೇಕು. ಆ ತರಹ ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಯಾವ ಕೈಗಾರಿಕೆಗೆ ಎಲ್ಲಾಕಡೆಯೂ ಡಿಮ್ಯಾಂಡ್ ಇರುತ್ತದೆಯೋ ಅದೇ ಮುಖ್ಯವಾದುದು. ಹತ್ತೊಂಭತ್ತು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ಮಂತ್ರಿಗಳು ಹೇಳಿದರು. ಅದರಲ್ಲಿ ನಮಗೆ ಕೈಗಾರಿಕೆಗೆ 7,10,500 ರೂಪಾಯಿಗಳನ್ನ ಮತ್ತು ಸಿಬ್ಬಂದಿಗೆ 60 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. 13 ಸಾವಿರ ಅಂಬರ್ ಚರಕ ಕೇಂದ್ರದಲ್ಲಿ ತಯಾರು ಮಾಡುತ್ತಾರೆಂದು ಹೇಳಿದರು. ನಮ್ಮ ದೇಶದಲ್ಲಿ ಏನು ಪ್ರಯತ್ನ ನಡೆದಿದೆ, ಹೊರಗಿನಿಂದ ತರಿಸಿರುವರೆ, ಅದು ಕಾಟೇಜ್ ಇಂಡಸ್ಟ್ರಿಗೆ ಸೇರುತ್ತದೆಯೆ, ಇಲ್ಲವೆ ಎಂಬುದನ್ನು ಸ್ಥೂಲವಾಗಿಯಾದರೂ ತಿಳಿಸಿದ ಹೊರತು ಮುಂದುವರಿಯುವುದಕ್ಕೆ ನಮಗೆ ಅವಕಾಶವಿಲ್ಲ.

ಈ ವಿಚಾರದಲ್ಲಿ ಸರ್ಕಾರದ ನೀತಿ ಸ್ಪಷ್ಟವಾಗಬೇಕು. ಅಧಿಕಾರಿಗಳನ್ನು ನೇಮಕ ಮಾಡುವಾಗ ಯಾರಿಗೆ ಶ್ರದ್ಧೆ ಇದೆಯೋ ಅವರನ್ನು ನೇಮಿಸಬೇಕು. ಅಂಥವರು ದೊರೆಯುವುದು ಕಷ್ಟ. ಆದ್ದರಿಂದ ಈಗಿರತಕ್ಕ ಖಾಸಗಿ ಸಂಸ್ಥೆಗಳಿಗೆ ಇದನ್ನು ವಹಿಸುವುದು ಮೇಲು. ಸರ್ಕಾರದವರು ಇದರ ಆಡಳಿತ ಇಟ್ಟುಕೊಳ್ಳಕೂಡದು; ಸೂಪರ್‌ವೈಸ್ ಮಾಡುವ ಕೆಲಸ ಮಾತ್ರ ಇಟ್ಟುಕೊಂಡು ಸರ್ಕಾರದ ಹಣ ದುರ್ವ್ಯಯವಾಗದಂತೆ ನೋಡಿಕೊಳ್ಳಬೇಕು. ಅನೇಕರು ತಜ್ಞರಿದ್ದಾರೆ, ಹೆಚ್ಚು ಆಸಕ್ತಿಯಿಂದ ಭಕ್ತಿಯಿಂದ ಕೆಲಸ ಮಾಡುವವರಿದ್ದಾರೆ. ಅವರ ವಿವೇಚನೆಗೆ ಬಿಡುವುದು ಮೇಲು. ಕಾಂಟ್ರಾಕ್ಟ್ ವಿಚಾರದಲ್ಲಿ ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕೆ ಮೇಲ್ಪಟ್ಟ ವೆಚ್ಚ ಸರ್ಕಾರ ಮಂಜೂರು ಮಾಡಬಹುದು, 10 ಸಾವಿರ ರೂಪಾಯಿಗಳು ಮತ್ತು ಅದಕ್ಕೆ ಮೇಲ್ಪಟ್ಟು ಬೋರ್ಡಿನವರು ಮಂಜೂರು ಮಾಡಬಹುದು ಎಂದು ಹೇಳಿದೆ. ಆದರೆ 10 ಸಾವಿರ ರೂಪಾಯಿಗಳೊಳಗಿದ್ದರೆ ಯಾರು ಮಂಜೂರು ಮಾಡಬೇಕೆಂಬುದನ್ನು ನಮೂದಿಸಿಲ್ಲ.

15 ಕೈಗಾರಿಕೆಗಳ ಹೆಸರನ್ನು ಕೊಟ್ಟಿದ್ದಾರೆ. ಪ್ರತಿಯೊಂದಕ್ಕೂ ಒಂದೊಂದು ಸಬ್-ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ಇನ್ನೂ ಅನೇಕ ಕೈಗಾರಿಕೆಗಳಿವೆ. ಟ್ಯಾನಿಂಗ್ ಇಂಡಸ್ಟ್ರಿ ಇದೆ. ಮಾಮೂಲಾಗಿ ಅದನ್ನು ಮಾಡುವವರಿದ್ದಾರೆ. ಅವರನ್ನು ಬಿಟ್ಟು ಬೇರೆ ಒಬ್ಬ ಇನ್‌ಸ್ಪೆಕ್ಟರನ್ನು ನೇಮಕ ಮಾಡುತ್ತಾರೆ. ಅವರಿಗೆ ಕೈಗಾರಿಕೆ ಪರಿಶ್ರಮ ಅಷ್ಟಾಗಿ ಇರುವುದಿಲ್ಲ. ಬೇರೆಯವರಿಗೆ ಬಿಡುವುದಿಲ್ಲ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಹುಲಿಕುಂಟೆಯಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಸರಿಯಾದ ಪ್ರಯೋಜನ ದೊರೆಯುತ್ತಿಲ್ಲ. ಇದು ವ್ಯಸನಕರ. ಆದ್ದರಿಂದ ಮುಖ್ಯವಾಗಿ ಸರ್ಕಾರದವರು ಜನರನ್ನು ಮೆಚ್ಚಿಸಲು ಇಂಥ ಬಿಲ್ಲನ್ನು ತರುವುದರಿಂದ ಪ್ರಯೋಜನವಾಗುವುದಿಲ್ಲ. ಇಂಥ ಹತ್ತಾರು ಬಿಲ್ಲುಗಳನ್ನು ಹಿಂದೆ ಅಂಗೀಕಾರ ಮಾಡಿದ್ದೇವೆ. ಅವುಗಳಿಂದ ಜನರಿಗೆ ಸಹಾಯವಾಗಿಲ್ಲ. ತಮ್ಮ ಪ್ರತಿಷ್ಠೆ ಮತ್ತು ಸಂಸ್ಥೆ ಮುಂದುವರಿಸುವುದಕ್ಕೆ ಅವನು

ಉಪಯೋಗಿಸುತ್ತಿದ್ದಾರೆ. ಈಗ ತಾಲ್ಲೂಕು ಬೋರ್ಡ್ ಮಾಡಿದ್ದಾರೆ. ಅಲ್ಲಿ ಎಲ್ಲಾ ಕಾಂಗ್ರೆಸ್ ಮೆಂಬರುಗಳೇ ಇದ್ದಾರೆ, ಆ ರೀತಿ ಮಾಡುವುದು ಸರಿಯಲ್ಲ ಈ ಬಿಲ್ಲನ್ನು ಪೂರ್ಣವಾಗಿ ಬದಲಾವಣೆ ಮಾಡಿ ಅಥವಾ ವಾಪಸು ತೆಗೆದುಕೊಂಡು ಎಲ್ಲರಿಗೂ ಅವಕಾಶ ಮಾಡಿ ಕಾರ್ಯರೂಪಕ್ಕೆ ತಂದರೆ ಜನರಿಗೆ ಅನುಕೂಲವಾಗುತ್ತದೆ. ಖಂಡಿತ ಈ ಮಸೂದೆಯಿಂದ ಪ್ರಯೋಜನವಿಲ್ಲ. ಪ್ರತಿಯೊಂದು ಕ್ಲಾಜನ್ನೂ ಕೂಡ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ವಿವರಿಸಿದ್ದಾರೆ. ಸಂಸ್ಥೆಯು ಅನುಕೂಲಕ್ಕಾಗಿ, ಅದನ್ನು ಬೆಳೆಸಲು ಚುನಾವಣೆ ಹತ್ತಿರಕ್ಕೆ ಬಂದಿದೆಯೆಂದು ಈ ಮಸೂದೆ ತಂದಿದ್ದಾರೆ. ಇದು ಸರಿಯಲ್ಲ. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬದಲಾವಣೆ ಮಾಡಬೇಕಾದ್ದು ಅವಶ್ಯಕ.

(Several Members rose)

Mr. CHAIRMAN.—I think sufficient discussion has taken place on the Bill. If Hon'ble Members feel that they must go on with the debate, by all means they are entitled to do so. Even without the Minister's reply we will have to close it for want of time. If the House agrees, I shall call upon the Minister to reply and after the Bill comes back from the Select Committee, members will have opportunity again to discuss.

Sri Mulka GOVINDA REDDY.—Every day we are saying that Government want to push through such measures in a hurry without giving proper opportunities to members to discuss.

Mr. CHAIRMAN.—That does not apply in this case because the Bill is not going to be passed now. It comes back to you from the Select Committee.

Sri Mulka GOVINDA REDDY.—Debate can be continued tomorrow also before the matter is referred to the Select Committee.

Dr. R. NAGAN GOWDA—If the Bill is sent to the Select Committee, it comes back with the changes that the Select Committee might make. As a result of the suggestions made by many Hon'ble Members, the debate could probably be continued tomorrow; and many of the difficulties that are now experienced might not be found in the Bill after it emerges from the Select Committee. So, I would suggest that it might be sent to the Select Committee and the discussion might be closed now.

Mr. CHAIRMAN.—Two ways are open to you, I see about four Hon'ble Members are desirous of speaking now. If you all agree each of them would be given two minutes. Why not this compromise be accepted? We will restrict the time. Each member can take two or three minutes. I think this compromise is a workable one. The members can stick to the time limit and cover up the points without repetition.

Sri S. GOPALA GOWDA.—I want an explanation from you, Mr. Chairman, or from the Government about the hurry to push through this Bill today alone. . . .

Mr. CHAIRMAN.—I will leave this matter into the safer hands of the Hon'ble Speaker.

(At this stage Mr. Speaker occupied the Chair.)

Sri A. V. NARASIMHA REDDY (Bangalore South).—Sir, just before you entered the House, the matter under discussion was whether discussion might be allowed on the general Bill as it is; or whether the discussion be allowed after referring the Bill to the Select Committee. My friend was suggesting that he wanted further time to be given to speak on the main Bill and he was at the same time telling that the Government should not insist upon hustling through the Bill. That was the stage at which you entered the Assembly Hall. But I want to submit to the Chair that this is a very small measure. Most of my friends have already spoken on the Bill. We are at the fag end of the day, and the Government are anxious to refer it to the Select Committee where the various clauses of the Bill would be examined and after it emerges from the Select Committee there can be further discussion over the matter. My friend Sri Gopala Gowda seems to be very insistent to continue the debate on the general principles of the Bill itself. If that is the contention of my friend and if that should be the attitude that we have to adopt, I wish to move for the closure of the discussion on the general principles of the Bill.

Mr. SPEAKER.—The Hon'ble Member cannot move for the closure of the discussion at this stage. He can move it only after the final stage of the Bill is reached. I have not given

(MR. SPEAKER.)

opportunity to all the members to speak. This Bill will be referred to the Select Committee; therefore, this is not the final stage of the Bill. After the Bill emerges from the Select Committee, Hon'ble Members can speak on the Bill. Sri Gopala Gowda can speak now.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಸರ್ಕಾರದವರು ಅನೇಕ ವರ್ಷಗಳನಂತರ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಬಗ್ಗೆ ಕಣ್ಣು ತೆರೆದಂತೆ ಕಾಣುತ್ತಿದೆ. ಶ್ರೀ ನಾಗಪ್ಪ ಶೆಟ್ಟರು ಮಾತನಾಡುತ್ತ ಈ ಖಾದಿ ನಮಗೆ ಸ್ವರಾಜ್ಯವನ್ನು ತಂದುಕೊಟ್ಟಿತು ಎನ್ನುವುದಾಗಿ ಒಂದು ದೊಡ್ಡ ಮಾತನ್ನು ಹೇಳಿದರು. ಆ ತರುವಾಯ ಶ್ರೀಯುತರಾದ ಕೆ. ಪಟ್ಟಾಭಿರಾಮರ್‌ರವರು ಸ್ವದೇಶಿ ವಿಚಾರ, ಖಾದಿ ವಿಚಾರ, ಗ್ರಾಮೋದ್ಯೋಗ, ಸರ್ವೋದಯ ಇತ್ಯಾದಿ ತತ್ವಗಳಲ್ಲಿ ಅಚಲ ನಂಬಿಕೆಯನ್ನಿಟ್ಟುಕೊಂಡಿರತಕ್ಕಂಥವರು ಈ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಶ್ರೀಮಾನ್ ಟಿ. ಮರಿಯಪ್ಪನವರೂ ಕೂಡ ಕೆಲವು ಪ್ರಾಮುಖ್ಯವಾದಂಥ ವಿಷಯಗಳನ್ನು ಈ ಮಸೂದೆಗೆ ಸಂಬಂಧಪಟ್ಟಹಾಗೆ ಮಾತನಾಡಿದ್ದಾರೆ. ಈ ಮಸೂದೆ ಯಾವ ರೀತಿಯಲ್ಲಿ ಈ ಸಭೆಯ ಮುಂದೆ ಈಗ ತರಲ್ಪಟ್ಟಿದೆ ಎನ್ನತಕ್ಕ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಪ್ರಸ್ತಾಪಮಾಡಬೇಕೆಂದು ಇಚ್ಛಿಸಿದ್ದೇನೆ. ಈ ಮಸೂದೆಯ ಬಗ್ಗೆ ಶ್ರೀ ಟಿ. ಮರಿಯಪ್ಪನವರು ಒಂದು ಮಾತನ್ನು ತಿಳಿಸಿದರು. ಆದರೆ ನಾನೂ ಸಹ ಬಹಳ ವಿಷಾದದಿಂದ ಆ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ಆ ವಿಷಯವೇನೆಂದರೆ—ಈ ಕೈಗಾರಿಕೆಯನ್ನು ಅಭಿವೃದ್ಧಿಮಾಡತಕ್ಕ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಇನ್ನೂ ಯಾವ ಒಂದು ಖಚಿತವಾದ ತೀರ್ಮಾನಕ್ಕೆ ಬರಲು ಅಷ್ಟಾಗಿ ಅವರಿಗೆ ಸಾಧ್ಯವಾಗಿಲ್ಲ ಎಂಬುದು.

ಶ್ರೀ ಟಿ. ಮರಿಯಪ್ಪ.—ನಾನು ಆ ರೀತಿ ಯಾಗೇನೂ ಹೇಳಲಿಲ್ಲ. ಅವರು ಎಲ್ಲಾ ಸಿದ್ಧತೆಗಳನ್ನೂ ಮಾಡಿದ್ದಾರೆಂತಲೇ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ನಾನು ಏನು ಅವರಿನ್ನೂ ಒಂದು ಖಚಿತವಾದ ತೀರ್ಮಾನಕ್ಕೆ ಬಂದಿಲ್ಲವೆಂದು ತಿಳಿದುಕೊಂಡು ಹೇಳುತ್ತಿದ್ದೇನೋ ಇದನ್ನೇ ಶ್ರೀ ಟಿ. ಮರಿಯಪ್ಪನವರೂಕೂಡ ಬೇರೊಂದು ರೂಪವಾಗಿ ಹೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಸ್ಟೇಟುಗಳಲ್ಲಿರುವ ಕೈಗಾರಿಕೆಗಳನ್ನು ನೋಡುತ್ತಿದ್ದಾಗ ಈ ಕೈಗಾರಿಕೆಗಳಲ್ಲಿರತಕ್ಕಂಥ ಪರ್ಮನೆಂಟ್ ಅಧಿಕಾರಿಗಳು ಈ ಕೈಗಾರಿಕೆಗಳ ಸರ್ವೈವ್ ಆಗತಕ್ಕವೆಂಬುದರ ಮೇಲೆ ಅವರಿಗೆ ನಂಬಿಕೆಯಿಲ್ಲವೆಂಬುದಾಗಿ ತಿಳಿಸಿದರೆಂದು ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಹೋಗಲಿ ಯಾರೋ ಅಂತೂ ಈ ಗ್ರಾಮಕೈಗಾರಿಕೆಗಳು ಉಳಿಯುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆಂತಲೇ ಭಾವಿಸೋಣ. ಆದರೆ ಶ್ರೀಮಾನ್ ಟಿ. ಮರಿಯಪ್ಪನವರಿಗೆ ಈ ಕೈಗಾರಿಕೆಗಳಲ್ಲಿ ಎಷ್ಟರಮಟ್ಟಿಗೆ ನಂಬಿಕೆಯಿದೆ ಎಂದರೆ—ಈ ಕೈಗಾರಿಕೆಗಳಲ್ಲಿ ಎರಡೋ 10-2-0 ಮಾತ್ರ ಹಾಗೆ ಸರ್ವೈವಲ್ ಆದಾವು ಎಂಬುದಾಗಿ ಹೇಳಿದರು.

ಶ್ರೀ ಟಿ. ಮರಿಯಪ್ಪ.—ಹಾಗೆ ನಾನು ಹೇಳದಿರುವುದನ್ನೆಲ್ಲಾ ನೀವು ಹೀಗೆ 'ಮಿಸ್‌ಕೋಟ್' ಮಾಡಬಾರದು.

Sri S. GOPALA GOWDA.—He said in English that at least some of these industries would survive for a decade or two. ಈ ಅರ್ಥ ಬರುವಂತೆ ಅವರೊಂದು ವಾಕ್ಯದಲ್ಲಿ ಹೇಳಿದರು. ಅವರ ಅಭಿಪ್ರಾಯವನ್ನು ಹಾಗೆ 'ಮಿಸ್‌ಕೋಟ್' ಮಾಡಬೇಕಾದ ಪ್ರಮೇಯ ನನಗಿಲ್ಲ. ಈ ವಿಷಯವನ್ನು ನಾನು ಮೊದಲನೇಯದಾಗಿ ಏಕೆ ಪ್ರಸ್ತಾಪ ಮಾಡಿದೆನೆಂದರೆ ಇದರಲ್ಲಿ ಇನ್ನೊಂದು ಅಭಿಪ್ರಾಯ ಅಡಗಿದೆ ಈಗ್ಗೆ 25 ವರ್ಷಗಳ ಹಿಂದೆಯೇ ತಯಾರಿಸಿದಂಥ ಒಂದು ಯೋಜನೆಯಲ್ಲಿ ಈ ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕಾದರೆ ಪ್ರೊ॥ ಮೋಹನ ರಾಯ್ ನಬಿಯವರು ಎಲ್ಲಾ ಕನ್ಸ್ಯೂಮರ್ಸ್ ಗೂಡ್ಸನ್ನೂ ಈ ಗ್ರಾಮಕೈಗಾರಿಕೆಗಳಿಂದಲೇ ಪಡೆಯಬೇಕು ಎಂಬ ಅಂಶವನ್ನು ಒತ್ತಿಹೇಳಿದ್ದಾರೆ. ಇದಾದನಂತರ ಕೇಂದ್ರ ಸರ್ಕಾರದವರು ಕಾರ್ವೆಸಮಿತಿಯೆಂಬ ಒಂದು ಸಮಿತಿಯನ್ನು ರಚಿಸಿದರು. ಆ ಸಮಿತಿಯವರೂ ಒಂದು ವರದಿಯನ್ನು ತಯಾರಿಸಿ ಅದನ್ನು ಅವರೀಗ ಸರ್ಕಾರಕ್ಕೆ ಒಪ್ಪಿಸಿದ್ದಾರೆಂದೂ ಮತ್ತು ಆ ವರದಿಯಲ್ಲಿ ಅವರು ನೀಡಿರತಕ್ಕ ಶಿಫಾರಸುಗಳಲ್ಲಿ ಕೆಲವು ಬಹಳ ಅನುಕರಣೀಯವಾಗಿರುತ್ತವೆಂದೂ ಇವರು ತಮ್ಮ ಭಾಷಣದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗೆ ಆ ವಿಷಯವನ್ನು ಪ್ರಸ್ತಾಪ ಮಾಡುತ್ತ ನಮ್ಮ ಮೈಸೂರು ಸರ್ಕಾರ ವಿಚಾರದಲ್ಲಿ ಏನೊಂದು ಕಾರ್ಯಕ್ರಮವನ್ನೂ ಈವರೆಗೆ ಕೈಗೊಳ್ಳದಿರುವುದು ಒಂದು ದೊಡ್ಡ ಕರ್ತವ್ಯಲೋಪವೆಂದ ಹೇಳಿದರು. ಈಗ ಕೇಂದ್ರ ಸರ್ಕಾರದಿಂದ ಬರತಕ್ಕ 10 ಲಕ್ಷರೂ.ಗಳು ಗ್ರಾಂಟ್ ಮೊಬಲಗು ಮೈಸೂರು ಸರ್ಕಾರ ಇಲ್ಲಿ ಈ ಕೈಗಾರಿಕೆಗಳ ಬಗ್ಗೆ ಒಂದು ಬೋರ್ಡನ್ನು ಈ ತಹಲ್‌ವರೆಗೂ ರಚನೆ ಮಾಡದಿದ್ದ ಕಾರಣ ಲ್ಯಾಪ್ಸಾಗಿ ಹೋಯಿತೆಂದೂ ಹೇಳಿದ್ದಾರೆ. ಈಗ ಈ ಮಸೂದೆಯನ್ನು ತಂದಿರುವುದಕ್ಕೆ ಕಾರಣ ಇಷ್ಟೆ. ಈ ಬಿಲ್ಲು ಆ ಪಾರ್ಲಿಯಮೆಂಟಿನಲ್ಲಿ ಅಂಗೀಕಾರವಾಗಿರತಕ್ಕ ಪ್ರಕಾರ ಎಂದರೆ ಅವರು ಅಡಕಮಾಡಿರತಕ್ಕ ನಿಯಮಾವಳಿಗಳ ಪ್ರಕಾರ ಯಾವ ಯಾವ ಸ್ಟೇಟುಗಳಲ್ಲಿ ಈ ಇಂಡಸ್ಟ್ರಿಯಲ್ ಬೋರ್ಡುಗಳು ಅಸ್ತಿತ್ವಕ್ಕೆ ಬಂದಿರುತ್ತವೋ ಅಂಥವುಗಳಿಗೆ ಮಾತ್ರ ಕೇಂದ್ರ ಸರ್ಕಾರದವರು ಸಬ್‌ವೆನ್ಷನ್ ಕೊಡುವುದಾಗಿ ಹೇಳಿದಾರೆ. ಅದಕ್ಕಾಗೇ ಈಗ ನಮ್ಮ ಸರ್ಕಾರದವರೂ ಕೂಡ ಆ ಸಬ್‌ವೆನ್ಷನ್ ಮೊಬಲಗನ್ನು ಪಡೆಯಲು ಈಗ ಇಷ್ಟು ಜರೂರಾಗಿ ಈ ಮಸೂದೆಯನ್ನು ತಂದಿದ್ದಾರೆ. ಆದರೆ ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಒಂದುವೇಳೆ ಇದ್ದಾಗ್ಯೂ ಈ ಬೋರ್ಡು ಜಾರಿಗೆ ಬಂದೇ ಬರುತ್ತದೆಂದೂ ನಾನು ಅರಿತಿದ್ದೇನೆ. ಆದರೆ ಇದರಲ್ಲಿ ಪ್ರಥಮತಃ ಮೂಲಭೂತವಾದಂಥವಾದ ಪ್ರಶ್ನೆ ಏನಿದೆ ಎಂಬುದನ್ನು ನೋಡುವಾಗ ಪಾಶ್ಚಿಮಾತ್ಯ ರಾಜ್ಯಗಳ ಔದ್ಯೋಗೀಕರಣ ಮಾದರಿಯಲ್ಲಿ ದೊಡ್ಡ ದೊಡ್ಡ ಯಂತ್ರಗಳ ಸಹಾಯದಿಂದ ಕೈಗಾರಿಕೆಗಳು ನಡೆಸಲ್ಪಟ್ಟರೆ ಆಗ ನಮ್ಮ ದೇಶದ ಉತ್ಪಾದನೆ ಹೆಚ್ಚಾಗುತ್ತದೆ ಆ ರೀತಿಯೇ ಮಾಡಬೇಕು, ಅದೇ ಸರಿಯಾದ ಮಾರ್ಗ ಅನ್ನತಕ್ಕ ಜನರು ಬಹಳ ಭಾಗ ಇರುತ್ತಾರೆ.

4-30 P.M.

ಇನ್ನು ಮಹಾತ್ಮಾ ಗಾಂಧಿಯವರ ಚಿತ್ರದಲ್ಲಿ ಚರಕವನ್ನು ನೋಡಿ ಅದರಿಂದ inspire ಆಗಿ ನಮ್ಮ ದೇಶದಲ್ಲಿಯೂ ಕೈಗಾರಿಕೆಗಳಿದ್ದುವು, ಅವುಗಳನ್ನು revive ಮಾಡಬೇಕು ಎನ್ನುವ ಒಂದು ಅಭಿಪ್ರಾಯಪಡತಕ್ಕ

ಜನ, ಶ್ರೀಮಾನ್ ನಾಗಪ್ಪಶೆಟ್ಟರಂಥ ಸದಸ್ಯರು. ಶ್ರೀಮಾನ್ ನಾಗಪ್ಪಶೆಟ್ಟರು ಅದೇ ಕೆಲಸಕ್ಕಾಗಿ ಬಹಳ ದುಡಿದಿರುವರು. ಚರಕಾದಲ್ಲಿ ನೂಲು ತೆಗೆಯುವುದು ಮತ್ತು ಖಾದಿಗಾಗಿ 20 ವರ್ಷಗಳಿಂದ ದುಡಿದಿದ್ದಾರೆ. ಅವರಿಗೆ ಅದರಲ್ಲಿ ನಂಬಿಕೆಯೂ ಇದೆ. ಇಂಥವರು ಕೆಲವರು. ಮತ್ತೆ ಇಂಗ್ಲಿಷ್ ಭಾಷೆ, ಪಾಶ್ಚಿಮಾತ್ಯ ಕೈಗಾರಿಕೆ ಮತ್ತು ಅಧುನಿಕ ವಿಜ್ಞಾನದ ಆಧಾರದ ಮೇಲೆ ಬೆಳೆದು ಬಂದಿರುವ ಬೇರೆ ದೇಶದ ದೊಡ್ಡ ದೊಡ್ಡ ಬೃಹತ್ ಕೈಗಾರಿಕೆಗಳು ಇವುಗಳನ್ನು ನೋಡಿ ಅದೇ ರೀತಿ ಇಂಡಿಯಾ ದೇಶವೂ ಕೈಗಾರಿಕೀಕರಣವಾಗಬೇಕೆಂದು ಆಶೆಪಡುವವರು ಕೆಲವರು. ಈ ಎರಡು ಅಭಿಪ್ರಾಯಗಳವರಿಗೂ ಘರ್ಷಣೆಗಳು ನಮ್ಮಲ್ಲಿ ನಡೆಯುತ್ತಿವೆ. ಹಿಂದೊಮ್ಮೆ ಶ್ರೀಮಾನ್ ರಾಜಗೋಪಾಲಾಚಾರಿಯವರಿಗೂ ಮತ್ತು ಶ್ರೀಮಾನ್ ಕೃಷ್ಣಮಾಚಾರಿಯವರಿಗೂ ಒಂದು ದೊಡ್ಡ ವಿವಾದವು ನಡೆದದ್ದು ಇವೊತ್ತಿಗೂ ನೆನಪಿಗೆ ಬರುತ್ತದೆ. ಇನ್ನು ಅಂಬರ್ ಚರಕವನ್ನು ಕಂಡುಹಿಡಿದ ತಕ್ಷಣ ಅದರ ಬಗ್ಗೆ ದೇಶದಲ್ಲಿ ಬಹಳವಾಗಿ controversy ನಡೆಯಿತು. ಆಮೇಲೆ ಅಂಬಾಲಾ ಜಿಲ್ಲೆಯಲ್ಲಿ ಅದರ ಪ್ರಯೋಗ ಮಾಡಿ ನೋಡಬೇಕು ಎನ್ನುವ ಅಭಿಪ್ರಾಯ ಕೂಡ ಬಂತು. ಆಮೇಲೆ ಅವುಗಳ ಸಂಖ್ಯೆಯನ್ನು ಮಿತಿಗೊಳಿಸಬೇಕು ಮತ್ತು ದೇಶದಲ್ಲಿ ಇಂಥಿಂಥ ಕಡೆ ಇಷ್ಟಿಷ್ಟು ಚರಕಗಳಿರಬೇಕೆಂದುಮಾಡಿದರು. ಆದನಂತೆ ಮೈಸೂರು ದೇಶದಲ್ಲಿ 3,700 ಚರಕಗಳು ಮಾತ್ರ ಜಾರಿಗೆ ಬರಬೇಕು ಎಂದು ಮಾಡಿದರು. ಇಂಥ ನಿರ್ಬಂಧಗಳುಯಾಕೆ ಇವೆ ಎಂದರೆ ದೊಡ್ಡಕೈಗಾರಿಕೆಗಳ ಹಿತದೃಷ್ಟಿಯಿಂದ ಇವೆ. ಅಂಬರ್ ಚರಕವನ್ನು ಮಾಡುವುವುದು ಕಷ್ಟವೇನೂ ಅಲ್ಲ. ಇಷ್ಟೇ ಚರಕಗಳಿರಬೇಕು, ಇಂಥ ಕಡೆಯೇ ಇರಬೇಕು. ಅಂಬಾಲ ಜೈಲಿನಲ್ಲಿ ಅಥವಾ ಇನ್ನೊಂದು ಕಡೆ ಅದರ ಪ್ರಯೋಗ ನಡೆಯಬೇಕು ಎನ್ನುವುದರಲ್ಲಿ half-hearted ಅಂದರೆ ಅರೆ ಮನಸ್ಸಿನಿಂದ ಕೆಲವರನ್ನು ಸಂತೈಸಲು ಮಾಡಿದ್ದಾರೆಂದು ಕಾಣುತ್ತದೆ. ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳಬೇಕೆಂಬ principle ಬಿಟ್ಟರೆ ಇನ್ನು ಯಾವುದಾದರೂ principle ಇದರಲ್ಲಿದೆಯೇ ಎನ್ನುವುದನ್ನು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ Khadi ಮತ್ತು Village Industries ಎಂದು ಇದೆ. Village Industries ಇದರಲ್ಲಿ ಸೇರಿಸಿದ್ದಾರೆ. ನಮ್ಮ ದೇಶದಲ್ಲಿರುವ, ಇದ್ದಂಥ, artisans ಕಸಬುಮಾಡಿ ಜೀವಿಸತಕ್ಕ ಬಡಗಿ, ಕಮ್ಮಾರ, ಕುಂಬಾರ, ನೇಕಾರ, ಮೇದಾರ, ಗುಡಿಕಾರ, ಚಿನಿವಾರ ಇತ್ಯಾದಿ ಹೆಸರುಗಳನ್ನು ಕೇಳುತ್ತೇವೆ. ಅವರನ್ನು ಜಾತಿಯನ್ನಾಗಿ ನೋಡುತ್ತೇವೆ. ಅವರೆಲ್ಲ ಕಸಬನ್ನು ಕಳೆದುಕೊಂಡಿದ್ದಾರೆ. ಇವೊತ್ತು ಮುಖ್ಯವಾಗಿ ನಮ್ಮ ದೇಶ ಕೃಷಿಪ್ರಾಧಾನ್ಯವಾಗಿರುವ ದೇಶ. ಆದರೂ ನಮ್ಮ ದೇಶದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಏನೇನು ಸಾಮಾನುಗಳನ್ನು ನಾವು ಮಾಡಿಕೊಳ್ಳಬಹುದಾಗಿತ್ತೋ ಆ ಸಾಮಾನುಗಳನ್ನು ಮಾಡಿಕೊಳ್ಳುವುದಕ್ಕೆ ರಾಷ್ಟ್ರದಲ್ಲಿ ಇನ್ನೂರು ವರ್ಷಗಳಿಂದ ಇದ್ದಂಥ ಒಂದು ರಾಜಕೀಯ ಪರದಾಸ್ಯದಿಂದ ದೇಶದ ಕೈಗಾರಿಗಳು ಹೆಚ್ಚಿ, ನೂತನ ಆಧುನಿಕ ವಿಜ್ಞಾನದ ಆಧಾರದ ಮೇಲೆ ಯಂತ್ರೋಪಕರಣಗಳ ಮೇಲೆ ಕೈಗಾರಿಕೆಗಳು ಬೆಳೆದುಬರುತ್ತ ಹೆಚ್ಚುಹೆಚ್ಚಾಗಿ ಜಾರಿಗೆ ಬಂದು ಈಗ ಒಂದು ಪರ್ವಕಾಲದಲ್ಲಿದ್ದೇವೆ. ಇವುಗಳನ್ನು ಪುನರುದ್ಧಾರಮಾಡತಕ್ಕ ಪ್ರಯತ್ನವನ್ನು ಮಾಡುವುದರಲ್ಲಿ ಇಂಡಿಯಾ ಸರ್ಕಾರದವರಿಗಾಗಲಿ, ಮೈಸೂರು ಸರ್ಕಾರದವರಿಗಾಗಲಿ ಅಥವಾ ಇನ್ಯಾವುದೇ ಸರ್ಕಾರದವರಿಗಾಗಲಿ ಒಂದು ವಿಶ್ವಾಸ, ನಂಬಿಕೆ, ಅದನ್ನು ಪ್ರಾಮಾಣಿಕವಾಗಿಮಾಡಬೇಕೆನ್ನುವ ಒಂದು ಇಚ್ಛೆ ಇದೆ ಎಂದು ನನಗೆ ಅದರ ಕಾರ್ಯಕ್ರಮದಿಂದ ವ್ಯಕ್ತವಾಗಲಿಲ್ಲ. ಇವೊತ್ತಿನ ದಿವಸ ಅದನ್ನು ವ್ಯಕ್ತಪಡಿಸುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆ. ನನಗೆ ಈ ಸಂದರ್ಭದಲ್ಲಿ ಕೆಲವು ವಿಷಯಗಳು ಜ್ಞಾಪಕಕ್ಕೆ ಬರುತ್ತವೆ. Hand pounding of Rice, ಕೈಯಲ್ಲಿ ಭತ್ತವನ್ನು ಕುಟ್ಟಿ ಅಕ್ಕಿ ಮಾಡುವ ಸಂಬಂಧದಲ್ಲಿ ಕೆಲವರನ್ನು ಬೊಂಬಾಯಿಗೆ ಕಳುಹಿಸಿ ಅಲ್ಲಿ ಇದನ್ನು ಕಲಿತುಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಹೆಂಗಸರು ಭತ್ತ ಕುಟ್ಟಿ ಅಕ್ಕಿಯನ್ನು ಮಾಡುತ್ತಾರೆ. ಗಂಡಸರು ಬಹಳ ಕಷ್ಟ ಪ್ರಸಂಗದಲ್ಲಿ ಅಂದರೆ ಕೊಟ್ಟಣ ಕುಟ್ಟುವಾಗ ಕೆಲಸ ಮಾಡುವುದು ವಾಡಿಕೆ. ಭತ್ತಕುಟ್ಟುವುದು ಹೆಂಗಸರ ಕೆಲಸ. ಅವರಿಗೆ ಎಷ್ಟು ಬೇಕೋ ಅಷ್ಟನ್ನು ಕುಟ್ಟಿ ಅಕ್ಕಿಮಾಡಿಕೊಳ್ಳುತ್ತಾರೆ. ಆದರೆ ಈ ಭತ್ತ ಕುಟ್ಟುವ ಸಂಬಂಧದಲ್ಲಿ ನಮ್ಮ ಸ್ನೇಹಿತರೊಬ್ಬರಿದ್ದಾರೆ. ಭತ್ತ ಕುಟ್ಟಿಸಿ, ಒಂದು ಪಲ್ಲ ಅಕ್ಕಿಮಾಡಿದೆ ಎಂದು ಚೀಟಿ ಕೊಟ್ಟರೆ, ಕಮಿಷನ್ ಅಲ್ಲ ಅದಕ್ಕೆ ಬೇರೆ ಶಬ್ದ ಉಪಯೋಗಿಸುತ್ತಾರೆ. ಹೀಗೆ ಎಷ್ಟು ಭತ್ತ ಕುಟ್ಟಿದ್ದೀರಿ ಎಂದು ದುಡ್ಡು ಕೊಡುತ್ತಾರೆ. ಹೀಗೆಲ್ಲ ನಡೆಯುತ್ತಿದೆ, ಅಕ್ಕಿ ಕುಟ್ಟುವ ಕೆಲಸ. ಇದರಲ್ಲಿ ವಿವಾದಾಸ್ಪದವಾದ ವಿಷಯಕ್ಕೆ ಅಂದರೆ ಕುಟ್ಟಿದ ಅಕ್ಕಿ ಒಳ್ಳೆಯದೇ, ಅಥವಾ ಪಾಲಿಷ್ ಆದ ಅಕ್ಕಿ ಒಳ್ಳೆಯದೇ ಎನ್ನುವ ವಿಷಯಕ್ಕೆ ನಾನು ಹೋಗುವುದಿಲ್ಲ. ಇದರಲ್ಲಿ ಇಂಥ ಒಂದು ಪ್ರಯತ್ನ ನಡೆದಿದೆ. ಹಾಗಾದರೆ ಈ ಪ್ರಯತ್ನಕ್ಕೆ ಇನ್ನೊಂದುಕಡೆ ಜನ ಹೇಗೆ ಬರುತ್ತಾರೆಂದರೆ ನನಗೆ ತಿಳಿದ ಹಾಗೆ ನಮ್ಮ ಒಂದು ತಾಲ್ಲೂಕು ಅಥವಾ ಒಂದು ಹತ್ತಾರು ಮೈಲಿ ಫಾಸಲೆಯಲ್ಲಿ ಮೂರು ರೈಸ್‌ಮಿಲ್‌ಗಳಿವೆ. ಇವೆಲ್ಲ ಹೊಸದಾಗಿಸ್ಥಾಪನೆಯಾಗಿದೆ. ಹೀಗೆ ರೈಸ್‌ಮಿಲ್ಲುಗಳಿರುವ ಕಡೆ ಕೊಟ್ಟಣ ಕುಟ್ಟಬೇಕೆಂದು ಒಬ್ಬ ಮಹನೀಯರು ಹೇಳಿಕೊಂಡು ಹೋಗುತ್ತಿದ್ದಾರೆ. ಈ ರೀತಿಯಾಗಿ ಪ್ರಯತ್ನಗಳು ನಡೆಯುತ್ತವೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಕೊಟ್ಟೆ.

ಶ್ರೀಮಾನ್ ನಾಗಪ್ಪಶೆಟ್ಟರು ಜಪಾನ್ ದೇಶದಲ್ಲಿ ಬೊಂಬು ಒಂದರಿಂದಲೇ 50-60 ಕೈಗಾರಿಕೆಗಳನ್ನು ಮಾಡುತ್ತಾರೆ, 50-60 ಏಕೆ, ಎಲ್ಲ ಕೈಗಾರಿಕೆಗಳಿಗೂ ಅದನ್ನು ಉಪಯೋಗಿಸುತ್ತಾರೆ, ಅಷ್ಟು ಮುಂದುವರಿದಿದೆ ಆ ದೇಶ ಎಂದು ಹೇಳಿದರು. ಬೊಂಬನ್ನು ಇಂಡಿಯಾ ದೇಶದಿಂದ ತೆಗೆದುಕೊಂಡುಹೋಗಿ ಅಲ್ಲಿ ಅನೇಕ ವೆರೈಟಿ ಮಾಡಿ ಬೆಳೆದು ಅದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆಂದು ಹೇಳಿದರು. ನಮ್ಮಲ್ಲಿ ಬರೀ ಕಾಗದ ತಯಾರಿಸುವುದಕ್ಕೆ ಮಾತ್ರ ಉಪಯೋಗಿಸುತ್ತಾರೆಂದೂ ಹೇಳಿದರು. ಅದಕ್ಕೆ ನಾನು ನಮ್ಮಲ್ಲಿ ಹೆಣ ಹೊರುವುದಕ್ಕೂ ಉಪಯೋಗಿಸುತ್ತಾರೆ. ಎಂದು ಹೇಳಿದ್ದಕ್ಕೆ ಅವರು ನನ್ನ ಮೇಲೆ ಸಿಟ್ಟಾಗಿ ಬಿಟ್ಟು ಪಿ.ಎಸ್.ಪಿ. ಯವರು ಸತ್ತು ಹೋದರೆ ಉಪಯೋಗಿಸುತ್ತಾರೆಂದರು, as though no other person uses it. ಎಲ್ಲರೂ ಅದರ ಮೇಲೆಯೇ ಹೋಗುವುದು (ನಗು). ನಾನು ಆ ಮಾತನ್ನು ಹೇಳಿದಾಗ ನಗಿಸುವುದಕ್ಕಾಗಲಿ ಅಥವಾ ಹಾಸ್ಯ ಮಾಡುವುದಕ್ಕಾಗಲಿ ಹೇಳಲಿಲ್ಲ-ಅದನ್ನು ಬಹಳ ವಿಷಾದದಿಂದ ಹೇಳಿದೆ. ನಮ್ಮಲ್ಲಿ ಬೊಂಬು ಹೇರಳವಾಗಿ ಬೆಳೆದಿದೆ. ಆದರಿಂದ ಯಾವ ಉಪಯೋಗವನ್ನೂ ನಾವು ಪಡೆದುಕೊಳ್ಳುತ್ತಿಲ್ಲ. ಅದು ಬೇಸಿಗೆಯಲ್ಲಿ ಸುಟ್ಟು ಬೂದಿಯಾಗಿ ಹೋಗುತ್ತಿದೆ. ಅದು ಒಂದು ರೀತಿಯ

(ಶ್ರೀ ಎಸ್. ಗೋಪಾಲಗೌಡ)

hindrance ಆಗಿರುತ್ತದೆ. ಕಾಡಿನಲ್ಲಿ ಅದೃಷ್ಟಕ್ಕೆ ಅದು ಬೆಳೆದಿರುತ್ತದೆ. ಅದನ್ನು ಯಾರೂ ಬೆಳೆಸುತ್ತಿಲ್ಲ. ಇದನ್ನೆಲ್ಲ ಯಾಕೆ ಹೇಳಿದೆನೆಂದರೆ ಆ ಕಡೆ ಪ್ರಯತ್ನಗಳು ನಡೆಯುತ್ತಿಲ್ಲ. ಒಂದು ವೇಳೆ ಪ್ರಯತ್ನಗಳು ನಡೆದರೆ ಅರೆ ಮನಸ್ಸಿನ ಪ್ರಯತ್ನಗಳು ನಡೆಯುತ್ತವೆ. ಇದರಲ್ಲಿ ಮೂಲಭೂತವಾದುದು ಯೋಜನೆಗಳನ್ನು ತಯಾರ್ಮಾಡತಕ್ಕವರು ಮತ್ತು ಯೋಜನೆಗಳನ್ನು ಕಾರ್ಯಗತ ಮಾಡತಕ್ಕವರು ಇವರುಗಳಲ್ಲಿ ಅವರು ಮಾಡತಕ್ಕ ಕೆಲಸದಲ್ಲಿ ನಂಬಿಕೆ ಇಲ್ಲದಿರುವುದು. ಇವೊತ್ತು ಈ ನಂಬಿಕೆ ಹುಟ್ಟಬೇಕಾದದ್ದು ಅಥವಾ ನಂಬಿಕೆ ಯಾವುದರಲ್ಲಿದೆಯೋ ಅದನ್ನು ಮುಂದುವರಿಸಿಕೊಂಡು ಹೋಗಬೇಕಾದುದು ಸೂಕ್ತವೆಂದು ಕಾಣುತ್ತದೆ. ಸರ್ಕಾರದಲ್ಲಿರುವವರು ಒಂದು ತೀರ್ಮಾನವನ್ನು ಪ್ರಜಾ ಪ್ರಜಾತ್ಮ್ಯರೀತಿಯಲ್ಲಿ ಅಥವಾ ಒಬ್ಬರೇ ತೀರ್ಮಾನವನ್ನು ತೆಗೆದುಕೊಂಡರೆ ಕೊನೆಯತನಕ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. Honest efforts must be made to implement any programme that you adopt. ಅದಿಲ್ಲ ತಮ್ಮಲ್ಲಿ. ಪ್ರಯತ್ನ ಮಾಡುವುದರಲ್ಲಿ ಒಂದು ಪ್ರಾಮಾಣಿಕತೆಯಿರಬೇಕು; ಅದಿಲ್ಲ ತಮ್ಮಲ್ಲಿ. ಆದ್ದರಿಂದ ಬೇರೆ ಉದ್ದೇಶದಿಂದ ತಂದಿದ್ದೇವೆಂದು ಹೇಳದಿದ್ದರೆ ತಂದಿರತಕ್ಕ ಉದ್ದೇಶಗಳು ಸಾರ್ಥಕವಾಗದೆ ಹೋಗಿ ಹಣ ಪೋಲಾಗುತ್ತದೆ. ಈ ದಿವಸ ಈ ಮಸೂದೆ ಹೇಗಿದೆಯೆಂಬುದನ್ನು ನೋಡೋಣ. ಮುಂಬಯಿ, ಸೌರಾಷ್ಟ್ರಗಳಲ್ಲಿರುವ ಮಸೂದೆಯಂತೆ ಇದನ್ನು ತರಲಾಗಿದೆಯೆಂದು ಶ್ರೀ ಮರಿಯಪ್ಪನವರು ಹೇಳಿದರು. ಇದರ ಪ್ರಕಾರ ರಚಿಸುವ ಸಂಸ್ಥೆ ನಾಮಕರಣಸಂಸ್ಥೆ ನಾಮ್ಕಾವಾಸ್ತೆ ಸಂಸ್ಥೆಯೆಂದು ಹೇಳದಿದ್ದರೂ ಸರ್ಕಾರದ ಒಂದು ಸ್ಟ್ಯಾಚ್ಯುಟರಿ ಬಾಡಿ, ಆದ್ದರಿಂದ ಇದಕ್ಕೆ ನಾಮಕರಣ ಮಾಡಿಕೊಳ್ಳಬಹುದು. ಚುನಾವಣೆ ಮಾಡಿದರೆ ಕೆಟ್ಟು ಹೋಗುತ್ತದೆಂದು ಶ್ರೀ ದೇವರಾಜ ಅರಸ್‌ರವರು ಹೇಳಿದರು. "The Board shall consist of such number of members as the state Government may appoint." ಎಂದು ಹೇಳಿದೆ. ಇದೇನು ಭಾಷೆ! ನಮ್ಮಲ್ಲಿ ಕೆಲಸದವರಿಗೆ ಅಂಗಿ ಹೊಲಿಸುವುದು ಒಂದು ವಿಚಿತ್ರ. ಕೂಲಿ ಆಳುಗಳು ಎಂದಿರುತ್ತಾರೆ. ಒಂದೂ ಕಾಲುಗಜದಲ್ಲಿ ಬಟ್ಟೆ ತಂದು ಅದರಲ್ಲಿ ಆಳಿಗೆ ಅಂಗಿ ಹೊಲದು ಕೊಡು ಎಂದು ದರ್ಜಿಗೆ ಕೊಡುತ್ತಾರೆ. ದರ್ಜಿ ಅದು ಸಾಲುವುದಿಲ್ಲ, ತೋಳು ಪೂರಾ ಬರುವುದಿಲ್ಲ, ಜೇಬಿಡುವುದಕ್ಕಾಗುವುದಿಲ್ಲ, ಕೊರಳು ಪಟ್ಟಿ ಕಡಿಮೆ ಬರುತ್ತದೆ ಎಂದು ಹೇಳಿದರೆ ಪರವಾಗಿಲ್ಲ ಎಷ್ಟು ಬಂದರೆ ಅಷ್ಟೇ ಸಾಕು, ಹೇಗೋಮಾಡಿ ಅಂಗಿ ಹೊಲದು ಕೊಟ್ಟರೆ ಸಾಕು ಎಂದು ಹೇಳುತ್ತಾರೆ. ಈ ಮಸೂದೆ ತಂದಿರುವುದು ಆ ರೀತಿಯಾಗಿದೆ. ಅಧಿಕಾರಿಗಳಿಗೆ ಸಂಬಂಧಪಟ್ಟ ಮಂತ್ರಿಗಳಿಂದ ಒತ್ತಾಯ ಬಂದಿದ್ದರ ಮೇಲೆ ಹೇಗೋ ಮಸೂದೆ ರಚಿಸಿದ್ದಾರೆ. ಸ್ಟ್ಯಾಚ್ಯುಟರಿ ಬಾಡಿ ಆದ ಹೊರತು ಸಹಾಯ ಕೊಡುವುದಕ್ಕಾಗುವುದಿಲ್ಲವೆಂದು ಒತ್ತಾಯ ಬಂದಿದೆ. ಆ ಒತ್ತಾಯದ ಮೇಲೆ ಒಂದು ಮಸೂದೆ ನಮ್ಮ ಮುಂದೆ ಬಂದಿದೆ. ಅದರ ಭಾಷೆ ಪರಮ ವಿಚಿತ್ರವಾಗಿದೆ. 11ನೆಯ ಸೆಕ್ಷನ್‌ನಲ್ಲಿ Functions and the powers of the Board ಹೇಳಿದೆ. ಆ ಸೆಕ್ಷನ್ (2) (b) (i) ರಲ್ಲಿ "to manufacture tools and implements required for carrying on village industries and to manufacture the products of such industries;" ಎಂದು ಹೇಳಿದೆ. ಈ ಬೋರ್ಡಿನವರೂ ಶ್ರೀ ನಾಗಪ್ಪ ಶೆಟ್ಟರೂ ಏನು ಸಾಧನ ಸಲಕರಣೆಗಳನ್ನು ತಯಾರಿಸುತ್ತಾರೆ? ಅವರಿಂದ ಸಾಧ್ಯವೆ? ಹೀಗಿದೆ (ನಗು), ಆಮೇಲೆ ಈ ಬೋರ್ಡು ಏನಿದ್ದರೂ ರೆಕಮೆಂಡೇಟರಿ ಬಾಡಿ. ಏನಾದರೂ ಇದ್ದರೆ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಮೊದಲು ಒಂದು ಪ್ಲಾನ್ ಕೊಡಬೇಕು. ಅದನ್ನು ಸರ್ಕಾರ ಒಪ್ಪಬಹುದು. ಇನ್ನೊಂದು ಸಲ ಸಪ್ಲಿಮೆಂಟರಿ ಪ್ಲಾನ್ ಕೊಡಬೇಕು, ಬಜೆಟ್ ಮಾಡುವ ಹಾಗೆ ಮಾಡಬೇಕು. ಇದಕ್ಕೆಲ್ಲಾ ಸಲಹೆ ಮಾಡಲು ಬೋರ್ಡಿನವರಿಗೆ ಬಹಳ ಉದಾರವಾಗಿ ಅವಕಾಶ ಕೊಟ್ಟಿದ್ದಾರೆ.

22ನೆಯ ಪ್ರಕರಣ ಚೆನ್ನಾಗಿದೆ, ಅದರಲ್ಲಿ:

> "The State Government may sanction the budget submitted to it with such modifications as it deems proper."

ಎಂದು ಹೇಳಿದೆ. ನಾನೊಂದು ಸಾಲಕೊಡುವ ಕೈಗಾರಿಕಾ ಬೋರ್ಡಿನಲ್ಲಿದ್ದೆ. ಧಾರಾಳವಾಗಿ ಸಾಲಕೊಡುತ್ತಿದ್ದೆವು. ಅದು ಬೋರ್ಡಿನಲ್ಲಿ ಮಂಜೂರಾಗುತ್ತಿತ್ತು. ಸರ್ಕಾರದಲ್ಲಿ ಕೆಲಸ ಬೇಗ ಆಗುವುದು ಕಷ್ಟ; ಪಾಪ, ಖಾದಿ ಬೋರ್ಡಿಗೆ ಮಂಜೂರಾಗುತ್ತದೆಯೋ, ಇಲ್ಲವೋ, ಮಸೂದೆಯಲ್ಲಿ ಹೇಳಿರುವ ಪ್ರಕಾರ 60 ಸಾವಿರ ರೂಪಾಯಿಗಳು ಖರ್ಚಿಗಾಗಿ ಬೋರ್ಡಿಗೆ ದೊರೆಯುತ್ತದೆ. "This amount is proposed to be given as a grant to the Board from the consolidated fund." ಎಂದು ಹೇಳಿರುವಂತೆ, ಪ್ರತಿವರ್ಷ ಮೈಸೂರು ದೇಶದಲ್ಲಿ 60 ಸಾವಿರ ರೂಪಾಯಿಗಳು ಖರ್ಚಾಗುವುದಕ್ಕೆ ಅವಕಾಶವಾಗುತ್ತದೆಯೇ ವಿನಾ ಇನ್ನೇನೂ ಇಲ್ಲ; ಇದೇ ಕೆಲಸ. My intention is not to ridicule the Bill or the purpose of the Government. But it itself speaks that it is ridiculous. The Bill itself shows that Government are making a half-hearted attempt. ಯಾವುದೇ ವಿಷಯದಲ್ಲಾಗಲಿ ನಂಬಿಕೆಬರುವಂತೆ ಮಾಡಬೇಕು. ಅದನ್ನು ಸಭೆಯ ಮುಂದೆ, ದೇಶದ ಮುಂದೆ ಇಟ್ಟು ಪ್ರಯತ್ನಮಾಡುವುದು ಒಳ್ಳೆಯದು. ಈ ಬೋರ್ಡನ್ನು ರಚಿಸಿದ ಮೇಲೆ ನಿಮಗೆ ಸೂಕ್ತವಾದವರನ್ನು ವೈಸ್ ಪ್ರೆಸಿಡೆಂಟ್, ಪ್ರೆಸಿಡೆಂಟ್‌ಮಾಡಿ, ಸದಸ್ಯರನ್ನು ನಾಮಕರಣ ಮಾಡುತ್ತೀರಿ. ಬೋರ್ಡಿಗಾಗಿ ಕೇಂದ್ರದವರು ಹಣ ಸಹಾಯ ಎಷ್ಟೋ ಕೊಡುತ್ತಾರೆ. ನೀವು ಅದನ್ನು ಒದಗಿಸುತ್ತೀರಿ. ಊರುಗಳಿಗೆ ಹೋಗಿ ಚರಕದಿಂದ ನೂಲಬೇಕು, ಕೊಂಡುಕೊಳ್ಳಬೇಕು ಎಂದು ಪ್ರಚಾರ ಮಾಡುತ್ತೀರಿ. ಅದಕ್ಕೆ ಅಭ್ಯಂತರವಿಲ್ಲ. ಈಗ ಇಂಥ ಕಾರ್ಯಕ್ರಮ ಎಷ್ಟೋ ಇದೆ. ನಾವು ಅದನ್ನು ತಡೆದಿಲ್ಲ. ಇದನ್ನು ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಈ ಪ್ರಯತ್ನದಲ್ಲಿ ಪ್ರಾಮಾಣಿಕತೆ ಮತ್ತು ನಂಬಿಕೆ ಸ್ವಲ್ಪವಾದರೂ ಇರಲಿ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗುವುದಾದರೆ ಮಾನ್ಯಸದಸ್ಯರು ಕೆಲವರು ಬಹಳಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನು ಪರಿಶೀಲಿಸಿ ಸ್ವಲ್ಪಮಟ್ಟಿಗಾದರೂ ಈ ಬೋರ್ಡನ್ನು ಜೀವಂತ ಸಂಸ್ಥೆಯಾಗಿ ಮಾಡಬಹುದು ಮತ್ತು ಇದರ ಹಣ ಸದ್ವಿನಿಯೋಗವಾಗುವಂತೆ, ಇದು ಕೆಲಸಮಾಡುವ ವಿಧಾನ

ಕಾರ್ಯತಃ ಸುಲಲಿತವಾಗಿರುವಂತೆ ಬದಲಾಯಿಸ ಬಹುದು. ಮಾನ್ಯ ಸದಸ್ಯರ ಸಲಹೆಗಳನ್ನು ಅಳವಡಿಸಿ ಈ ಮಸೂದೆಯನ್ನು ಸ್ವಲ್ಪ ಪರಿಣಾಮಕಾರಿಯಾಗಿ ಮಾಡಿ ಜಾರಿಗೆತಂದರೆ ಸ್ವಲ್ಪವಾದರೂ ಈ ಪ್ರಯತ್ನ ಸಾರ್ಥಕವಾದೀತೆಂದು ಸೂಚಿಸಿ ಈ ಮಸೂದಾ ಕಾನೂನನ್ನು ಅನುಮೋದಿಸುತ್ತೇನೆ.

Mr. SPEAKER.—Now the Minister will reply.

Dr. R. NAGAN GOWDA.—Sir, more than about ten members have spoken on this and a very large number of points have been raised. I would prefer to answer some of the important points that have been raised at a later stage after the Bill comes back from the Select Committee. Now I request that this consideration motion may be put.

Mr. SPEAKER.—The question is :

"That the Mysore Khadi and Village Industries Bill, 1956, be taken into consderation."

The motion was adopted.

Dr. R. NAGAN GOWDA.—Sir, I move:

"That the Mysore Khadi and Village Industries Bill, 1956, be referred to a Select Committee consisting of the following members with instruction to present the report tomorrow :

Sriyuts :

T. Mariappa
S. R. Nagappa Setty
T. N. Mudalagiri Gowda
B. C. Nanjundiah
D. Devaraja Urs
H. K. Veeranna Gowdh
V. M. Mascarenhas
G. Duggappa
K. Pattabhiraman
J. Mohamed Imam
K. Prabhakar."

Mr. SPEAKER.—The question is :

"That the Mysore Khadi and Village Industries Bill, 1956, be referred to a Select Committee consisting of the following members with instruction to present the report tomorrow :

Sriyuts :

T. Mariappa
S. R. Nagappa Setty
T. N. Mudalagiri Gowda
B. C. Nanjundaiya
D. Devaraja Urs
H. K. Veeranna Gowdh
V. M. Mascarenhas
G. Duggappa
K. Pattabhiraman
K. Prabhakar."

The motion was adopted.

Mr. SPEAKER.—The member in-charge of the Bill, *viz.*, the Minister for Industries and Excise will be also a member of this Committee.

Under rule 57 (1) I appoint the Minister for Law to be the Chairman of the Committee.

MYSORE ESSENTIAL SERVICES MAINTENANCE (AMENDMENT) BILL, 1956.

Motion to consider.

Sri A. G. RAMACHANDRA RAO (Minister for Law and Education).—Sir, I beg to move :

"That the Mysore Essential Services Maintenance (Amendment) Bill, 1956, be taken into consideration."

While moving this motion, I may bring to the notice of this House that two amendments have been proposed. One is by Messrs D. Venkatesh and B. Madhavachar and I have also tabled another amendment so that a comprehensive view might be taken, balance might be struck, justice done both to the society as well as to labour.

Sir, the House is aware that in 1955 there was an electricity strike. I am giving this instance because the necessity for the legislation of this nature would become patent by reference to that dispute. At that time, there was strike and before that strike there was conciliation and during the

(SRI A. G. RAMACHANDRA RAO.)

course of the strike, the services to tac society were interrupted seriously and Government had to employ extra officers, staff and labour as well, to continue the service of that department to the public. Further Sir, even we had to summon the aid of the Military to keep the continuity of the service which entailed a good deal of cost to the State and considerable anxiety among the public was also felt. At that time, a suggestion was made that the strike might be declared illegal. If we had taken that step, the consequences would have been serious both to the labour as well as to the community ; and we advisedly did not take that step. While considering the proposal, we also felt as to how best to avoid the situation at that time and to prevent recurrence of such a contingency in future. We discussed the matter in detail with the Union Government also and after a good deal of discussion and consideration, we have proposed this measure.

Another point which I wish to bring to the notice of this House is that a motion for this Bill was tabled in October Session 1955. Some of my labour friends wanted time to consider and they requested that this may be taken up later so that they might consider the proposition that is before the House. I did not press the motion at that time ; and even from that day, often they have been discussing the amendment. I have been trying my best to show the reasonableness and the necessity for this measure. Some of my labour friends have agreed that there is reason and that there is necessity also. Unfortunately some have not agreed. Even so, Sir, it is incumbent upon this House to provide for continuing the service of a public utility concern, and all attempts to interrupt that service should not be encouraged and at the same time the relief that we think necessary in case of a labour dispute should also be ensured. It is the object of this ment to keep the balance.

Now I may be permitted to speak a few words about the Industrial Disputes Act which is meant to investigate into the causes of disputes and also to bring about settlement. That is provided in the Industrial Disputes Act, 1947, which is a Central Act. Before that, Mysore had the Labour Act and after the extension of the Industrial Disputes Act, the Labour Act was repealed. We have another Act to ensure continuty of the public utility services and it is called the Mysore Essential Services (Maintenance) Act of 1942. By that Act, the Government by a notification declare certain industries to come under the purview of that Act. There is also a declaration that the strike resulting as a result of the dispute should not be resorted to. This amendment is meant only to ensure continuty of the services. I beg to refer to section 5 of the Essential Services Act 1942 which reads as follows.—

"5. Any person engaged in any employment or class of employment to which this Act applies who—

(a) disobeys any lawful order given to him in the course of such employment, or

(b) without reasonable excuse abandons such employment or absents himself from work, or

(c) departs from any area specified in an order under subsection(1) of section 4 without the consent of the authority making that order,

and any employer of a person engaged in an employment or class of employment declared under section 3 to be an employment or class of employment to which this Act applies, who without reasonable cause —

(i) discontinues the employment of such person, or

(ii) by closing an establishment in which such person is engaged, causes the discontinuance of his employment, is guilty of an offence under this Act."

Now Sir, under (b) which states "without reasonable excuse abandons such employment or absents himself from work.",

the question arose as to whether in a strike which for purposes of argument I concede now is a legal strike,—whether an abandonment of work under the plea of that abandonment is under a legal strike, would be a sufficient excuse. Considerable doubt has been expressed on that point; that if a person goes on a legal strike, the authority cannot compel him to do the work. In order to ensure the continuity of service and in order to clarify that, this amending Bill has been brought up.

Next, Sir, as I instanced the case of the Electrical Department there was failure of conciliation. There was strike and the strike ended in failure. The demand that was put forward by the Labour Union did not end in any relief to the labourers, nor were the demands satisfied. Now with the amendments proposed, the balance will be restored. Abandonment of work even under plea of legal strike, shall not be accepted. He should attend to work and at the same time make it obligatory on the Government to refer such disputes in connection with the strike either to Conciliation Board or to a Tribunal. I want to emphasise this point. On the one hand, powers will be given to Government to continue the services by not accepting the plea of reasonableness, when the plea of reasonableness is that it is a legal strike. On the other hand, since they have no deciding way out of the difficulty, it makes it obligatory on the Government to refer such dispute which ended in a strike either to a Conciliation Board or to a Tribunal.

I believe Sir, the House will readily concede the reasonableness and the necessity of this important measure both in the interest of continuing the essential services to the community as well as protecting the rights of labour. When I referred to the Bill, I have also generally referred to the proposed amendments.

With these few words, I request that the amendments proposed may be considered by the House.

Mr. SPEAKER.—Motion moved:

"That the Mysore Essential Services Maintenance (Amendment) Bill, 1956, be taken into consideration."

Let us continue it tomorrow. It is 5 O'Clock.

Sri A. G. RAMACHANDRA RAO.—We do not want to hustle through this Bill. We want a reasonable support from all sections of the House. A few members may speak on this Bill now and then we can adjourn.

Sri Mulka GOVINDA REDDY (Chitaldrug).—We want to say something on this Bill. But I am not prepared to say anything just now since it is the fag end of the day.

Sri K. S. VASAN (Kolar Gold Fields).—Sir, the Hon'ble Minister has already pointed out that this piece of legislation is very small. But it will have far-reaching consequences. Now that it is before the House for consideration, discussion on the consideration motion may be taken up tomorrow or at a later date.

Mr. SPEAKER.—The suggestion is that we may sit a little late now, so that tomorrow we can save a lot of time for other work.

Sri Mulka GOVINDA REDDY.—If there is no proper opportunity for us to make our observations, we will not take part in this Bill.

Mr. SPEAKER.—You should not non-cooperate with the Government. If you non-cooperate, you will not serve the purpose for which you are here.

Sri Mulka GOVINDA REDDY.—Anyhow, the Government have a steam-roller majority.

Sri A. G. RAMACHANDRA RAO.—Sir, I have given reasons. I shall be glad to give careful consideration for the reasons that they may advance.

Business of the House.

Mr. SPEAKER.—The Hon'ble Leader of the opposition wanted to know the programme for the rest of the Session.

Programme of business for the next five days will be as follows. This has been finalised after consultation with the Government, the Leader of the Opposition and certain other Members.

(MR. SPEAKER.)

Wednesday 26th—

Legislative business (carried over from today)

Resolution regarding ratification of the Constitution (Seventh Amendment) Bill.

Consideration of Finance Enquiry Committee Report.

Thursday 27th—

Voting of Demands for Additional and Supplementary Grants.

If there is time, further consideration of Finance Enquiry Committee Report.

Friday 28th—

Consideration of Reports of the Public Accounts Committee.

Saturday 29th—

Voting of Demands for Excess Grants. Appropriation Bill on Additional Grants. Other Legislative Business.

Monday 1st October—

Appropriation Bill on Excess Grants; Other Legislative Business.

Cut motions on Demands for Additional grants may be sent to the Office before 3 P.M. tomorrow. I may mention that, in respect of the main demands, we have more or less evolved the wholesome practice of debating the demands themselves without moving any cut motions and the same practice could well be adopted in respect of the additional grants also.

The House will now adjourn and meet at Twelve tomorrow.

The House adjourned at Five of the Clock to meet again at Twelve of the Clock the next day Wednesday, the 26th September 1956.

WD 1048—GPB—550—30-11-56

MYSORE LEGISLATIVE ASSEMBLY

THIRTY-EIGHTH DAY.

Wednesday, 26th September 1956.

The House met in the Assembly Hall, Atara Kacheri, Bangalore at Twelve of the Cloak.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Probationers

Q.—677. Sri M. PALANIYAPPAN (Ulsoor).—Will the Government be pleased to state :—

(*a*) whether they have called for applications for Probationers;

(*b*) if so, the departments for which the applications are called for;

(*c*) the departments for which the applicants have been interviewed?

A.—Sri Kadidal MANJAPPA (Chief Minister).—

(*a*) Yes.

(*b*) Public Works Department; Medical and Public Health; Electrical; Industries and Commerce; Printing; Revenue; Sales Tax; Accounts; Co-operation and Education.

(*c*) Public Works Department, Medical and Pubic Health Departments.

Sri M. PALANIYAPPAN.—Was there any necessity for calling for applications for recruiting probationers?

*Sri Kadidal MANJAPPA.—It was explained yesterday to a similar question. There was necessity and therefore applications were called for.

Sri M. PALANIYAPPAN.—May I know when these applications were called for?

Sri Kadidal MANJAPPA.—I do not exactly remember the date; I want notice.

Sri M. PALANIYAPPAN.—Are Government aware that it is more than six months.?

MR. SPEAKER.—Applications were called for in the month of April.

Sri M. PALANIYAPPAN.—Why were they not recruited to other departments except Public Works, Medical and Public Health?

Sri Kadidal MANJAPPA.—Under the advice of the Government of India we had to drop the idea of recruiting probationers in the case of other departments.

Sri M. PALANIYAPPAN.—Government were pleased to state that there was necessity. So, when Government found that there was necessity, did the Government of India consult the State Government before they sent a circular not to recruit probationers?

Sri Kadidal MANJAPPA.—The decision was taken after some correspondence between this Government and the Government of India.

Sri M. PALANIYAPPAN.—May I take it that the State Government have failed to impress the Central Government about the necessity of recruiting probationers?

Sri Kadidal MANJAPPA.—No, Sir; we have impressed them.

Sri M. PALANIYAPPAN.—Then, where was the necessity for the Government of India to send the circular to stop recruiting probationers?

Sri Kadidal MANJAPPA.—Sir, yesterday I submitted that in spite of best efforts of this Government and the Public Service Commission, it would not have been possible for us to take

*Asterisk indicates that the remarks or speeches have not been revised by the Member concerned.

(SRI KADIDAL MANJAPPA.)

a final decision before 1st November 1956.

Sri M. PALANIYAPPAN.—Are Government aware that the erstwhile Chief Minister said that applications would be called throughout India and not from Mysore only ?

Sri Kadidal MANJAPPA.—When applications were called for, it was not restricted to candidates residing in Mysore State alone; it was opened to others also.

Sri M. PALANIYAPPAN.—If that was the case, would it not have been better if probationers had been recruited prior to reorganisation of States and would it not have facilitated the matter ?

Sri Kadidal MANJAPPA.—It is a matter of opinion.

Sri M. PALANIYAPPAN.—What are the basis on which selections were made to the departments of Public Works, Medical and Public Health ?

Sri Kadidal MANJAPPA.—There are rules governing the selection of probationers and those rules were followed.

Sri M. PALANIYAPPAN.—I want to know from Government whether selection is made on the caste basis or on merit basis and what the other considerations were.

Sri Kadidal MANJAPPA.—Selections were not made purely on caste basis but on the basis of efficiency, of course keeping in view the need for giving reservation to Scheduled Castes and Backward Classes.

Sri M. PALANIYAPPAN.—Will the Government consider the question of giving adequate representation in these departments to the Backward Class and minority communities and those communities where they have no representation at all ?

Sri Kadidal MANJAPPA.—Provided they are unrepresented or under-represented.

ಶ್ರೀ ಜಿ. ಪುಟ್ಟಸ್ವಾಮಿ.—ಮರಾಮತ್ ಇಲಾಖೆ ಮತ್ತು ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಲಿಸ್ಟು ಸರ್ಕಾರಕ್ಕೆ ತಲುಪಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನವರು ಶಿಫಾರಸನ್ನು ಕಳುಹಿಸಿದ್ದರು. ನಮಗೆ ಕೆಲವು ವಿವರ ಬೇಕಾಗಿತ್ತು, ಅದಕ್ಕಾಗಿ ಪಬ್ಲಿಕ್ ಸರ್ವಿಸ್ ಕಮಿಷನರಿಗೆ ಬರೆದಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಲಿಸ್ಟು ತಮ್ಮಲ್ಲಿಗೆ ಬಂದಿತ್ತೆಂದು ಹೇಳಿದಿರಿ. ಈಗ ಅದು ತಮ್ಮಲ್ಲಿದೆಯೋ ಅಥವಾ ಪಬ್ಲಿಕ್ ಸರ್ವಿಸ್ ಕಮಿಷನರ ಬಳಿ ಇದೆಯೋ ?

Mr. SPEAKER.—It may be a confidential matter.

ಶ್ರೀ ಜಿ. ಪುಟ್ಟಸ್ವಾಮಿ.—ಮರಾಮತ್ ಇಲಾಖೆ ಮತ್ತು ಮೆಡಿಕಲ್ ಇಲಾಖೆ ಲಿಸ್ಟನಲ್ಲಿ ಕೆಲವು ಹಿಂದುಳಿದ ಜಾತಿಗಳಿಗೆ ಸರಿಯಾದ ಅವಕಾಶ ಪ್ರಾತಿನಿಧ್ಯ ಕೊಟ್ಟಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Sri Kadidal MANJAPPA.—We have not taken a final decision and therefore I do not want to give any reply.

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದುಳಿದ ಜನಾಂಗಕ್ಕೆ ಸರಿಯಾದ ಪ್ರಾತಿನಿಧ್ಯ ದೊರೆಯದೆ ಅನ್ಯಾಯವಾಗಿದ್ದರೆ ಅದನ್ನು ಪರಿಶೀಲಿಸಿ ಲಿಸ್ಟಿಗೆ ಆ ಜನಾಂಗದವರ ಹೆಸರನ್ನು ಸೇರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಹೈಪೊತೆಟಿಕಲ್. ಅನ್ಯಾಯವಾಗಿದ್ದರೆ ಸರಿಪಡಿಸುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಪೋಲೀಸ್ ಇಲಾಖೆಗೇಕೆ ಪ್ರೊಬೇಷನರುಗಳನ್ನು ಕಾಲ್‌ಫಾರ್ ಮಾಡಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಲೇ ಕಾರಣ ಕೊಟ್ಟಿದೆ.

ಶ್ರೀ ವಿ. ಆರ್. ನಾಯ್ಡು.—ಪ್ರೊಬೇಷನರುಗಳನ್ನು ತೆಗೆದುಕೊಳ್ಳುವಾಗ ಸಾಧಾರಣವಾಗಿ ಇಲಾಖೆಗಳಲ್ಲಿರುವ ಹೆಣ್ಣುಮಕ್ಕಳನ್ನು ಬಿಟ್ಟಿರುವುದಕ್ಕೆ ಕಾರಣವೇನು ? ಅವರಿಗೆ ಪ್ರೊಬೇಷನರುಗಳಾಗಿ ತೆಗೆದುಕೊಂಡು ಅಮಲ್ದಾರಿ ಕೆಲಸ, ಸಬ್‌ಡಿವಿಜನ್ ಆಫೀಸರ ಕೆಲಸ, ಡೆಪ್ಯುಟಿ ಕಮಿಷನರ ಕೆಲಸ ಕೊಡುವುದಕ್ಕೆ ಕಷ್ಟವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಬಿಟ್ಟಿಲ್ಲ.

ಶ್ರೀ ವಿ. ಆರ್. ನಾಯ್ಡು.—ಎಷ್ಟು ಜನ ಹೆಣ್ಣು ಮಕ್ಕಳು ಅರ್ಜಿ ಹಾಕಿಕೊಂಡಿದ್ದರೆಂಬ ವಿಚಾರವನ್ನು ಅವರು ಏಕೆ ತಿಳಿಸಲಿಲ್ಲ ?

ಅಧ್ಯಕ್ಷರು.—ಅವರು ಯಾರೂ ಅರ್ಜಿ ಹಾಕಿಕೊಂಡಿರಲಿಲ್ಲವೆಂದು ಆಗಲೇ ತಿಳಿಸಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ಅರ್ಜಿಗಳು ನನಗೆ ಬರುವುದಿಲ್ಲ. P.S.C.ಗೆ ಕಳುಹಿಸುತ್ತಾರೆ. ಆದಕಾರಣ ಆ ವಿಚಾರ ನನಗೆ ಗೊತ್ತಿಲ್ಲ.

Vyali Kaval Extension.

Q.—753. Sri V. R. NAIDU (Malleswaram).—

Will the Government be pleased to state :—

(*a*) when the sites in Vyali Kaval Extension were disposed of and the number of sites so disposed of;

(*b*) the average cost of the site per square yard ;

(*c*) whether they are aware that these rates are high for the middle class people;

(*d*) whether they have not received complaints from the people about the inadequacy of roads, water and lighting facilities even though such a heavy amount is paid ?

A.—Sri T. CHANNIAH.—(Minister for Public Health and Local Self-Government).—

(*a*) { From 1951
{ 481 Sites.

(*b*) Rs. 6 per sq. yd., for sites measuring up to 200 sq. yds.
Rs. 8 ,, 201 to 400 sq. yds.
Rs. 10 ,, above 400 sq. yds.

(*c*) No.

(*d*) Yes.

ಶ್ರೀ ವಿ. ಆರ್. ನಾಯ್ಡು.—ತಾವು ಈ ಟ್ರಸ್ಟ್ ಬೋರ್ಡನ್ನು ನೇಮಕಮಾಡಿದ್ದು ಬಡವರಿಗೆ ಉಪಕಾರ ಮಾಡುವುದಕ್ಕಾಗಿಯೇ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸ್ವಂತ ವಾಸಕ್ಕೆ ಮನೆಗಳಿಲ್ಲದವರಿಗೆ ನಿವೇಶನವನ್ನು ಕೊಡುವುದಕ್ಕೂ ಮತ್ತು ಬಡವರಿಗೆ ಉಪಕಾರ ಮಾಡಬೇಕೆಂತಲೂ ನೇಮಕ ಮಾಡಲಾಗಿದೆ.

ಶ್ರೀ ವಿ. ಆರ್. ನಾಯ್ಡು.—10 ಸೈಟುಗಳಿದ್ದವರಿಗೇನೇ 11ನೆಯ ಸೈಟನ್ನೂ ಕೂಡ ಮಂಜೂರು ಮಾಡಿರುವ ವಿಚಾರ ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಹರಾಜಿನಲ್ಲಿ ಆ ರೀತಿ ಪಡೆದಿರಬಹುದು.

ಶ್ರೀ ವಿ. ಆರ್. ನಾಯ್ಡು.—ಹಿಂದೆ ಈ ಸೈಟುಗಳನ್ನು ನ್ಯಾಯವಾದ ಬೆಲೆಗೆ ಮಾರಾಟ ಮಾಡುತ್ತಿದ್ದರು. ಈಗ ಏಕಾಏಕಿ ಒಂದಕ್ಕೆ ನಾಲ್ಕರಷ್ಟು ಬೆಲೆಯನ್ನು ಏರಿಸಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ರಸ್ತೆಗಳು, ಒಳಚರಂಡಿ, ನೀರಿನ ಸೌಕರ್ಯ ಇತ್ಯಾದಿಗಳನ್ನೆಲ್ಲಾ ಒದಗಿಸಿದ ಜಾಗಕ್ಕೆ ಒಂದು ಚ. ಗಜಕ್ಕೆ ಎಷ್ಟು ರೇಟು ಆಗುತ್ತದೆ ಎಂಬುದನ್ನೆಲ್ಲಾ ಪರಿಶೀಲನೆಮಾಡಿ ಆ ರೇಟುಗಳನ್ನು ನಿಗದಿಮಾಡಿದ್ದಾರೆ. ಬಡವರಿಗೆ 200 ಚದರಗಜದೊಳಗಿರತಕ್ಕ ನಿವೇಶನಗಳನ್ನು ಚದರಗಜ ಒಂದಕ್ಕೆ 6 ರೂಪಾಯಿಗಳ ಪ್ರಕಾರ ಕೊಡಲು ಅವಕಾಶಮಾಡಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಒಂದು ವರ್ಷದ ಹಿಂದಿದ್ದಂಥ ರೇಟನ್ನು ಅನಿರೀಕ್ಷಿತವಾಗಿ ಈಗ ಒಂದಕ್ಕೆ ನಾಲ್ಕರಷ್ಟು ಜಾಸ್ತಿಮಾಡಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಹಿಂದೆ ಯಾವ ರೀತಿಯಾಗಿತ್ತೋ ಈಗಲೂ ಅದೇ ರೇಟಿರುತ್ತದೆ.

ಶ್ರೀ ವಿ. ಆರ್. ನಾಯ್ಡು.—ಆ ಬಡಾವಣೆಯಲ್ಲಿ ನಲ್ಲಿಗಳಿಲ್ಲ, ದೀಪಗಳಿಲ್ಲ, ರಸ್ತೆಗಳಿಲ್ಲ. ಆದಾಗ್ಯೂ ಆ ಖರ್ಚನ್ನೆಲ್ಲಾ ಸೇರಿಸಿ ಈಗ ಹೇಗೆ ದುಡ್ಡನ್ನು ತೆಗೆದುಕೊಂಡಿರುತ್ತಾರೆ ?

ಶ್ರೀ ಟಿ. ಚನ್ನಯ್ಯ.—ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜವಲ್ಲ. ಅಲ್ಲಿ ನಲ್ಲಿ, ದೀಪ, ರಸ್ತೆ ಎಲ್ಲಾ ಸೌಕರ್ಯಗಳನ್ನು ಒದಗಿಸಲಾಗಿದೆ.

ಶ್ರೀ ವಿ. ಆರ್. ನಾಯ್ಡು.—ಮಾನ್ಯ ಮಂತ್ರಿಗಳು ನಾನು ಸುಳ್ಳು ಹೇಳುತ್ತಿದ್ದೇನೆಂದು ತಿಳಿಸಿದ್ದಾರೆ. ಈ ಬಗ್ಗೆ ತಾವು ರೂಲಿಂಗನ್ನು ಕೊಡಬೇಕು, ಸ್ವಾಮಿ.

ಅಧ್ಯಕ್ಷರು.—ಈ ಸಂದರ್ಭದಲ್ಲಿ ಮಂತ್ರಿಗಳು ಹೇಳುತ್ತಿರುವುದು ಸರಿ ಎಂಬುದಾಗಿ ತಾವು ಭಾವಿಸಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ವೈಯ್ಯಾಲಿಕಾವಲ್ ಬಡಾವಣೆಯಲ್ಲಿ ಸೆಕ್ರೆಟೇರಿಯೆಟ್ ಮತ್ತು ಸೀರಂ ಇನ್‌ಸ್ಟಿಟ್ಯೂಟ್ ನೌಕರರುಗಳಿಗೆ ನಿವೇಶನಗಳನ್ನು ಕೊಡಬೇಕೆಂಬುದಾಗಿ ಸರ್ಕಾರ ಹುಕುಂ ಮಾಡಿರುವುದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ನನಗೆ ಗೊತ್ತಿಲ್ಲ, ತಿಳಿದು ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ಆ ಸ್ಥಳದಲ್ಲಿ ಈ ಇಲಾಖೆಗಳ ನೌಕರರುಗಳಿಗೆ ನಿವೇಶನವನ್ನು ಕೊಡುವುದಕ್ಕೆ ಮುಂದಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ನಿವೇಶನಗಳಿದ್ದರೆ ಅನುಕೂಲಮಾಡಿಕೊಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ಆ ನೌಕರರುಗಳಿಗೆ ಸೈಟು ಕೊಡಲು ಈ ಟ್ರಸ್ಟ್ ಬೋರ್ಡು ಒಂದು ಮತ್ತು ಸೊಸೈಟಿ ಒಂದು ಹೀಗೆ ಎರಡು ಏಜನ್ಸಿಗಳು ಕೆಲಸ ನಡೆಸುತ್ತಿವೆ. ಇನ್ನು ಮುಂದಕ್ಕೆ ಆ ನೌಕರರುಗಳಿಗೆಲ್ಲಾ ಸೈಟುಗಳನ್ನು ಈ ಟ್ರಸ್ಟ್ ಬೋರ್ಡು ಮೂಲಕವೇ ಕೊಡುವಂತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆಗಲಿ, ಹಾಗೇ ತಿಳಿಸಲಾಗುತ್ತದೆ.

Ayurvedic College (Shifting from Mysore to Bangalore).

Q.—755. Sri V. R. NAIDU (Malleswaram).—

Will the Government be pleased to state :—

(*a*) whether the decision has been implemented about the shifting of the Ayurvedic College from Mysore to Bangalore ;

(*b*) whether the concerned Minister had not given an assurance in this behalf during the previous Session ;

(*c*) whether they will fulfil this assurance before the close of this Session ?

A.—Sri. T. CHANNIAH (Minister for Public Health and Local Self-Government).—

(*a*) The matter is under consideration of Government.

(*b*) The Chief Minister had promised that the matter would be investigated.

(SRI T. CHANNIAH.)

(c) The matter has been investigated, and expert opinion obtained. A final decision will be taken as early as possible.

ಶ್ರೀ ಎ. ಆರ್. ನಾಯ್ಡು.—ಉತ್ತರದಲ್ಲಿ "ಸರ್ಕಾರ ಈ ವಿಷಯವನ್ನು ಪರ್ಯಾಲೋಚನೆಮಾಡುತ್ತಿದೆ" ಎಂದು ತಿಳಿಸಿದ್ದೀರಿ. ಎಷ್ಟು ವರ್ಷಗಳಿಂದ ಹೀಗೆ ಸರ್ಕಾರ ಈ ವಿಷಯವನ್ನು ಪರಿಶೀಲಿಸುತ್ತಿದೆ?

ಅಧ್ಯಕ್ಷರು.—ಆ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡಿದ್ದೇವೆ; ಪರಿಶೀಲನೆ ಮಾಡಲಾಗುತ್ತಿದೆ ಎಂದು ನಿನ್ನೆ ತಾನೆ ತಿಳಿಸಿದ್ದಾರೆ.

ಶ್ರೀ ಎ. ಆರ್. ನಾಯ್ಡು.—ಈಗ ಆ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿಗೆ ಹೋಗುತ್ತಿದ್ದಾರೋ ಅಥವಾ ಸ್ಟ್ರೈಕ್ ಮಾಡಿರುತ್ತಾರೋ?

*ಶ್ರೀ ಕಡಿದಾಳ್ ಮಂಜಪ್ಪ.—ಸ್ಟ್ರೈಕ್ ಮಾಡಿದ್ದಾರೆ.

ಶ್ರೀ ಎ. ಆರ್. ನಾಯ್ಡು.—ಅನೇಕ ವಿದ್ಯಾರ್ಥಿಗಳು ಇದಕ್ಕೆ ಸಹಕಾರವನ್ನಿತ್ತಿದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಸ್. ಗೋಪಾಲಗೌಡ.—ಈ ಆಯುರ್ವೇದ ಕಾಲೇಜನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸತಕ್ಕ ಬಗ್ಗೆ ಈ ವರ್ಷವೇ ತೀರ್ಮಾನ ಕೈಗೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಮಾಡಬೇಕೆಂಬ ಉದ್ದೇಶವಿದೆ.

ಶ್ರೀ ಎಸ್. ಗೋಪಾಲಗೌಡ.—ಈ ವರ್ಷ ಹಾಗೊಂದುವೇಳೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕ ಸಂಭವದಲ್ಲಿ ಈಗ ಆ ವಿದ್ಯಾರ್ಥಿಗಳು ಕೇಳಿಕೊಂಡಿರತಕ್ಕ ಅನುಕೂಲಗಳನ್ನು . . .

Mr. SPEAKER.—I do not allow that question. You can ask information only regarding shifting of the College.

Sri B. NARAYANASWAMY.—May I know who is the expert that gave that opinion?

Sri Kadidal MANJAPPA.—One, Sri Murthy.

Sri B. NARAYANASWAMY.—What is he? What are his qualifications?

Sri Kadidal MANJAPPA.—He is a retired Principal of the Madras Ayurvedic College.

Sri B. NARAYANASWAMY.—Before giving his opinion, has he taken any evidence? Did he visit the place where the College is situated?

Sri Kadidal MANJAPPA.—I presume he has taken into consideration all aspects.

Sri B. NARAYANASWAMY.—My question is whether the so-called expert paid a visit to Mysore City and taken evidence from the public of Mysore?

Sri Kadidal MANJAPPA.—I am told he has paid a number of visits to Mysore City. It is not necessary to consult all people in Mysore City.

Sri B. NARAYANASWAMY.—Are they aware that very many people in Mysore City are interested in the Ayurvedic College that is situated there?

Sri Kadidal MANJAPPA.—Every man in the State is interested in it.

Sri B. NARAYANASWAMY.—I am not asking the Chief Minister whether the State is interested or not. My question is, are there not men in Mysore City interested in this?

Sri Kadidal MANJAPPA.—It is not the people of Mysore City alone but everybody in the State is interested in it.

Sri B. NARAYANASWAMY.—Is it not a fact that several great Ayurvedic Pundits and others in Mysore are interested in this Ayurvedic College?

Mr. SPEAKER.—How do you know that others are not interested? You can only ask whether they have consulted the people in Mysore or not.

Sri B. NARAYANASWAMY.—With due respect to the Chair, my question does not presume that others in the State are not interested. I am particularly asking the Chief Minister as to whether it is not a fact that several people in Mysore including Ayurvedic Pundits and others are interested in this question.

Sri Kadidal MANJAPPA.—They may be interested as anybody else in the State.

Sri B. NARAYANASWAMY.—Was it not necessary for the so-called expert to visit Mysore City and take evidence?

Sri Kadidal MANJAPPA.—I submit that this expert has visited Mysore.

Sri B. NARAYANASWAMY.—May I request the Hon'ble Chief Minister to kindly place that report before this House?

Sri Kadidal MANJAPPA.—I will consider it.

T. B. in Mandya (Facilities for treatment of Patients).

Q.—789. Sri G. S. BOMME GOWDA (Mandya).—

Will the Government be pleased to state :—

(*a*) the number of patients from Mandya District who are under treatment in the Sanatorium at Mysore;

(*b*) whether recommendations have been sent by the concerned officers to the Government for the construction of necessary wards for eradication of T.B. in Mandya ?

A.—Sri T. CHANNIAH (Minister for Public Health and Local Self-Government).—

(*a*) 66.

(*b*) Yes.

ಶ್ರೀ ಜಿ. ಎಸ್. ಬೊಮ್ಮೇಗೌಡ,—ಮೈಸೂರಿನಲ್ಲಿರುವ ಸ್ಯಾನಟೋರಿಯಂನಲ್ಲಿ ಎಷ್ಟು ಜನ ರೋಗಿಗಳನ್ನು ಸೇರಿಸಲು ಅವಕಾಶವಿದೆ.

Sri T. CHANNIAH.—Do you want the total strength ? it is more than 300 patients.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮಂಡ್ಯ ಜಿಲ್ಲೆಯ ಕೆಲವರಿಗೆ ಅಲ್ಲಿ ಸ್ಥಳಾವಕಾಶ ಸಿಕ್ಕದೆ ಕೆಲವರಿಗೆ ಒಂದೆರಡು ತಿಂಗಳು ಬಿಟ್ಟು ಬರಬೇಕೆಂದ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri T. CHANNIAH.—We are not allocating tuberculosis patients district-wise. If the cases are very serious and urgent, such cases will be admitted irrespective of the district from which the patient comes.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಗ ಮಂಡ್ಯದಲ್ಲಿ ಕಟ್ಟಬೇಕೆಂದಿರುವ ವಾರ್ಡಿನಲ್ಲಿ ಎಷ್ಟು ಜನ ರೋಗಿಗಳನ್ನು ಸೇರಿಸುವುದಕ್ಕೆ ಅವಕಾಶವಿರುವಂತೆ ಅಂದಾಜು ಮಾಡಲಾಗಿದೆ ?

ಶ್ರೀ ಟಿ. ಚನ್ನಯ್ಯ.—ಈಗ 16 ಹಾಸಿಗೆಗಳನ್ನು ಕ್ಷಯದ ರೋಗಿಗಳಿಗೆ ಒದಗಿಸಲು ಅಂದಾಜು ತಯಾರು ಮಾಡಿ ಕಳುಹಿಸಬೇಕೆಂದು ತಿಳಿಸಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮಂಡ್ಯ ಜಿಲ್ಲೆಯ 66 ಜನ ರೋಗಿಗಳಿದ್ದಾರೆಂದು ಹೇಳಿದ್ದೀರಿ. ಮಂಡ್ಯದಲ್ಲಿ 16 ಜನ ರೋಗಿಗಳನ್ನು ಸೇರಿಸುವುದಕ್ಕೆ ಅವಕಾಶ ಕಲ್ಪಿಸಬೇಕೆಂದಿರುವುದು ಬಹಳ ಕಡಿಮೆಯಾದುದರಿಂದ ಇನ್ನೂ ಹೆಚ್ಚು ಜನರಿಗೆ ಅವಕಾಶವಿರುವಂತೆ ಮಾಡಬೇಕಾದದ್ದು ಅಗತ್ಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಮೈಸೂರು ನಗರದೊಳಗೆ ಸ್ಯಾನಿಟೋರಿಯಂ ಇದೆ. ಇದರಲ್ಲಿ ಮೈಸೂರು ನಗರದವರು ಮಾತ್ರವಲ್ಲ, ಸಂಸ್ಥಾನಾಮುಳೆಯಿಂದಲೂ ಮತ್ತು ಸಂಸ್ಥಾನದ ಹೊರಗಡೆಯಿಂದಲೂ ಇಲ್ಲಿಗೆ ರೋಗಿಗಳು ಬರುತ್ತಾರೆ. ಮಂಡ್ಯದಲ್ಲಿ 16 ಜನರಿಗೆ ಅವಕಾಶ ಮಾಡಿ ಉಳಿದ ರೋಗಿಗಳು ಬೇಕಾದರೆ ಮೈಸೂರಿನಲ್ಲಿರುವ ಸ್ಯಾನಿಟೋರಿಯಂನಲ್ಲಿ ಸೇರುವುದಕ್ಕೆ ಅವಕಾಶವಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮಂಡ್ಯದಲ್ಲಿ ಕಟ್ಟಬೇಕೆಂದಿರುವ ವಾರ್ಡಿನ ಅಂದಾಜನ್ನು ಯಾವಾಗ ಮಂಜೂರು ಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಗವರ್ನ್ಮೆಂಟ್ ಆರ್ಕಿಟೆಕ್ಟರವರಿಗೆ ಪ್ಲಾನ್, ಡಿಸೈನ್ ಮತ್ತು ಎಸ್ಟಿಮೇಟು ತಯಾರು ಮಾಡಿ ಕಳುಹಿಸಿಕೊಡಬೇಕೆಂದು ಕೇಳಲಾಗಿದೆ. ಅದು ಬಂದ ತರುವಾಯ ಮಂಜೂರು ಮಾಡುತ್ತೇವೆ.

Colleges for Kolar Gold Fields

Q.—696. Sri K. S. VASAN (Kolar Gold Fields).—

Will the Government be pleased to state :—

The action they propose to take for starting a college in the City of Kolar Gold Fields ?

A.—Sri A. G. RAMACHANDRA RAO (Minister for Law and Education).—

It is under the consideration of Government.

Sri K. S. VASAN.—I have no supplementaries.

Sri H. C. LINGA REDDY.—Since how long has the proposal been under the consideration of Government to start a college at Kolar ?

Sri A. G. RAMACHANDRA RAO.—We are considering that along with the case of other colleges also, and a comprehensive view will be taken and the matter decided.

Sri H. C. LINGA REDDY.—In view of the large population and the urgency of the case, will the Government consider it necessary to open it very early, because the population of K.G.F. is growing and also in view of its importance ?

Sri A. G. RAMACHANDRA RAO.—The policy of the Government is that hereafter the colleges should be private colleges with the aid of the University or Government.

Vidhana Soudha Enquiry Committee (Amendment to terms of Reference)

Q.—724 Sri. A. V. NARASIMHA REDDY (Bangalore South).—

Will the Government be pleased to state :—

(*a*) whether the Government have been addressed by some members of the public requesting to amend the terms of reference of the Vidhana Soudha Enquiry Committee;

(*b*) if so, the action taken by them ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise.

Sri A. V. NARASIMHA REDDY.—What are the terms of reference of this Committee, Sir ?

Sri A. G. RAMACHANDRA RAO.—The terms of reference are published Sir.

Sri A. V. NARASIMHA REDDY.—In answer to (*a*), you have said 'No'.

Sri A. G. RAMACHANDRA RAO.—The question as I saw it is: "whether the Government has been addressed by some members of the public requesting the amendment of the terms of reference to the Vidhana Soudha Enquiry Committee." The reply is that no representations have been received.

Sri A. V. NARASIMHA REDDY.—Sir, if that is the position even to this day, will the Government please amend the terms of reference so as to bring within its purview the power to investigate into even some of the procedures that they have adopted in giving contracts, sub-contracts and various other items of work in the Vidhana Soudha at least now ?

Sri A. G. RAMACHANDRA RAO.—This has got to be examined, Sir.

Sri A. V. NARASIMHA REDDY.—The anxiety of members who have tried to elicit information from the Government on previous occasions, if I remember aright, is that there has been a lot of wastage of money in the execution of that work. That was a matter which they wanted to be enquired into. So far as the terms of reference you have given them are concerned, they do not include these things. Therefore, to see that these members are given powers to go into that question also, it is necessary to amend the terms of reference, Sir.

Sri A. G. RAMACHANDRA RAO.—I believe Sir, the terms of reference are comprehensive enough and I would advise the Hon'ble friends to approach the Committee and if there is need felt, we will examine the question.

Sri A. V. NARASIMHA REDDY.—Has it not come to the notice of Government Sir, that the enquiry by this Committee should in most cases be *in camera* and the public also have expressed their opinion that it should not be *in camera* ?

20	1953	(*i*) Kolar Gold Fields ...	22-2-1953	1	....
21		(*ii*) Kyalanur Village (Kolar Taluk), Kolar District.	3-4-1953	1	3
22		(*iii*) Mysore City ...	8-10-1953	4	5
	1954	... ...	...	...	...
	1955	... ...	...	...	...
23	1956	Devanahalli Town (Bangalore District).	10-3-1956	..	...
		Total ...	...	32	67

ABSTRACT.

Year		*No. of incidents of opening fire*	*Number of Persons Killed*	*Injured*
1947	...	15	23	52
1948	...	...	...	...
1949	...	2	1	...
1950	...	...	...	...
1951	...	1	...	1
1952	...	1	2	6
1953	...	3	6	8
1954	...	...	...	...
1955	...	...	...	...
1956	...	1	...	...
Total	...	23	32	67

Sri Mulka GOVINDA REDDY.—May I know whether judicial enquiries were instituted into all these police firings on 23 occasions ?

*Sri H. SIDDAVEERAPPA.—No, except one.

Sri Mulka GOVINDA REDDY.—May I know whether the public resorted to killing police ; which prompted them to open fire ?

Sri H. SIDDAVEERAPPA.—It is such a general question which I cannot answer.

Sri Mulka GOVINDA REDDY.—May I know the reasons that prompted police to open fire on the public on all these 23 occasions ?

Sri H. SIDDAVEERAPPA.—There are quite a large number of instances; I place that list on the Table of the the House.

Sri Mulka GOVINDA REDDY.—Are Government aware that for the last 100 or 150 years in Britain where there is democracy, they have not resorted to firing on the public on any occasion ?

Sri H. SIDDAVEERAPPA.—I do not know. But, I may tell the Hon'ble Member that all the items of

firings in the year 1947 belong to pre-independence days.

Sri Mulka GOVINDA REDDY.—Is it not a fact that under the Congress regime it has become a chronic habit with the Government to open fire on the innocent public?

Sri H. SIDDAVEERAPPA.—It is not a fact.

Sri Mulka GOVINDA REDDY.—May I know whether any compensation was given at any time to the dependents of the victims?

Sri H. SIDDAVEERAPPA.—Yes, for those that suffered in the Satyagraha days on account of firing.

Sri Mulka GOVINDA REDDY.—May I know if compensation was given to those that suffered after the Congress regime came into being?

Sri H. SIDDAVEERAPPA.—Then there was no suffering.

Sri Mulka GOVINDA REDDY.—Did not the dependents of those who were killed by police suffer?

Sri H. SIDDAVEERAPPA.—If they are killed it is unfortunate; it is only consequential.

1 P.M.

Sri Mulka GOVINDA REDDY.—May I know whether the Government instituted any departmental enquiry for these police firings?

Sri H. SIDDAVEERAPPA.—Yes.

Sri Mulka GOVINDA REDDY.—Will the Government be pleased to state the findings of these departmental enquiries?

Sri H. SIDDAVEERAPPA.—The findings of the departmental enquiries are that firing was justified on each occasion.

Sri Mulka GOVINDA REDDY.—May I know whether on all these occasions persons who opened fire had full power to do so?

Sri H. SIDDAVEERAPPA.—Firing was resorted to according to rules.

Sri Mulka GOVINDA REDDY.—Is it not a fact that in certain cases firing was opened without the permission of the Magistrate concerned?

Sri H. SIDDAVEERAPPA.—I do not know to what incident the member refers.

Sri Mulka GOVINDA REDDY.—Is it not a fact that when the firing was resorted to on 8th October 1953 in Mysore, it was done without the proper orders of the concerned District Magistrate?

Sri H. SIDDAVEERAPPA.—The matter is *sub judice*.

Sri Mulka GOVINDA REDDY.—May I know whether in 1948 firing was resorted to on the striking policemen in Bangalore?

Sri H. SIDDAVEERAPPA.—My report is that in 1948 no firing was resorted to.

Sri Mulka GOVINDA REDDY.—During the Police strike in 1948, did not the military use force and open fire?

Sri H. SIDDAVEERAPPA.—The question here is in regard to firing opened by the police on the public.

Sri Mulka GOVINDA REDDY.—May I know whether in 1948 firing was resorted to by the military on the striking policemen who were in mufti at that time?

Sri H. SIDDAVEERAPPA.—It does not come under the category that is asked for in this question.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನನ್ನ ಪ್ರಶ್ನೆಯೂ ಇದರಲ್ಲೇ ಬರುತ್ತದೆಯೇ? ಕಾರಣ— "ನಾನು ಕೇಳಿರತಕ್ಕದ್ದು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಮೇಲೆ ಸಂಸ್ಥಾನದಲ್ಲಿ ಮೈಸೂರು ಸರ್ಕಾರದವರು ಎಷ್ಟು ಬಾರಿ ಗೋಳಿಬಾರ್ ಮಾಡಿದರು" ಎಂದು:

ಅಧ್ಯಕ್ಷರು.—ಆ ಪ್ರಶ್ನೆಗೇ ಇದನ್ನೂ ಲಗತ್ತಿಸಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಪ್ರಶ್ನೆಯೂ ಸೇರುತ್ತದೆ.

Q.—775. Sri S. GOPALA GOWDA (Sagar-Hosanagar).—

Will the Government be pleased to state:—

(*a*) on how many occasions the Government of Mysore had to resort to firing after the Congress Party came into power in the State;

(*b*) the number of persons that were killed or injured;

(*c*) whether any judicial enquiry was held;

(*d*) whether any compensation was paid to the victims?

A.—Sri H. SIDDAVEERAPPA (Minister for Home and Finance).—

(*a*) Eight.

(*b*) Nine persons were killed and 15 injured.

(SRI H. SIDDAVEERAPPA.)

(*c*) Judicial enquiry was held in one case during 1952 by the *Ex-officio* First Class Magistrate, Tiptur.

(*d*) No.

ಶ್ರೀ ಎಸ್. ಗೋಪಾಲಗೌಡ.—ಮೈಸೂರು ಸರ್ಕಾರದವರು 1947ರಿಂದ ಈಚೆಗೆ ಗೋಳೀಬಾರ್ ಮಾಡಿರತಕ್ಕಂಥ 23 ಸಂದರ್ಭಗಳಲ್ಲಿ ಆ ರೀತಿಗೋಳೀಬಾರ್ ಮಾಡಿದ್ದು ಸರಿ ಎನ್ನುವುದಾಗಿ ತಮ್ಮ ಡಿಪಾರ್ಟ್‌ಮೆಂಟ್ ಜಸ್ಟಿಫೈ ಮಾಡಿದೆಯೆಂದು ತಾವು ತಿಳಿಸೋಣವಾಯಿತು. ಆ ಸಂದರ್ಭಗಳಲ್ಲಿ ಜನರು ಯಾರಾದರೂ ಅಥವಾ ಯಾವ ಒಂದು ಸಂಸ್ಥೆಯಾದರೂ ಆಗಲಿ ಆ ಸಂದರ್ಭಗಳಲ್ಲಿ ಸರ್ಕಾರವನ್ನು ಉರುಳಿಸುವುದಕ್ಕಾಗಲೀ ಅಥವಾ ಜನರನ್ನು ಕೊಲ್ಲುವುದಕ್ಕಾಗಲೀ—ಆ ರೀತಿಯ ಉದ್ದೇಶಗಳನ್ನಿಟ್ಟುಕೊಂಡು ಕತ್ತಿ ಇತ್ಯಾದಿ ಆಯುಧಗಳನ್ನು ಹಿಡಿದುಕೊಂಡು ಸರ್ಕಾರಿ ಆಫೀಸುಗಳ ಮೇಲೆ ಧಾಳಿಮಾಡಲಾಗಿತ್ತೇ?

Mr. SPEAKER.—Where is it stated 23 times?

Sri H. SIDDAVEERAPPA.—It is eight times. It may lead to confusion and therefore I will make it clear. Between 12th September 1947 and 22nd September 1947, fifteen times firing was resorted to. In 1948 only once, in 1949 twice, in 1951 only once, in 1953 thrice and in 1956 once. Therefore from October 1947 upto now Police opened fire only eight times.

ಶ್ರೀ ಎಸ್. ಗೋಪಾಲಗೌಡ.—ಆ ಎಂಟು ಸಂದರ್ಭಗಳಲ್ಲಿ ನಾನಾಗಲೇ ಕೇಳಿರುವಂತೆ ಏನಾದರೂ ಹತ್ಯಾರಗಳನ್ನು ಹಿಡಿದುಕೊಂಡು ಹತ್ಯಮಾಡಬೇಕೆಂಬ ಉದ್ದೇಶದಿಂದ ಏನಾದರೂ ಅವರು ಏರಿಹೋಗಿದ್ದರೇ? ಅಂಥ ಸಂದರ್ಭಗಳೇನಾದರೂ ಇದ್ದುವೇ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಕೇಳುತ್ತಿರುವುದು ಬಹಳ ಜನರಲ್ ಪ್ರಶ್ನೆ ಆಯಿತು. ಆದರೆ ಈಗ ತಾವು ಕೇಳಬಹುದಾದ ವಿಚಾರಗಳನ್ನು ತಮಗೆ ನಾವು ಪರಿಶಿಷ್ಟದಲ್ಲಿ ಎಲ್ಲಾ ಅಂಶಗಳನ್ನು ಒದಗಿಸಿದ್ದೇವೆ. ಆ ಬಗ್ಗೆ ತಮಗೇನಾದರೂ ವಿಷಯಗಳು ಬೇಕಾಗಿದ್ದರೆ ಕೇಳಿ ಅವುಗಳಿಗೆ ಉತ್ತರ ಕೊಡಲಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಆ ಎಂಟು ಸನ್ನಿವೇಶಗಳಲ್ಲಿ ಇಂಥ ಸಂದರ್ಭವೇನಾದರೂ ಇತ್ತೆಂದು ತಿಳಿಯ ಬಂದಿತ್ತೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೇ ಕೇಳಿದರೆ ನಾನು ಆ ಎಂಟು ಸನ್ನಿವೇಶಗಳಲ್ಲಿ ಪ್ರತಿಯೊಂದು ಐಟಂಗೂ ಪ್ರತ್ಯೇಕ ಪ್ರತ್ಯೇಕ ಕಾರಣಗಳನ್ನು ತಿಳಿಸಬೇಕಾಗುತ್ತದೆ, ಅದಕ್ಕಾಗಿ ಆ ಎಲ್ಲ ಅಂಶಗಳನ್ನೂ ಒಳಗೊಂಡಂಥ ತಖ್ತೆಯನ್ನು ಈ ಸಭೆಯ ಮುಂದಿಡುತ್ತೇನೆ. ತಾವು ನೋಡಿಕೊಳ್ಳಬಹುದು.

Subject to one condition that information cannot be used for any other purpose because some of the cases are still *sub judice*. When it is laid on the Table of the House, if it is made use of for any other purpose, I will not be responsible.

Mr. SPEAKER.—May I bring it to the notice of the Hon'ble Minister that in case where they are still *sub judice* the information need not be laid on the Table?

Sri H. SIDDAVEERAPPA.—I would like to do it only with your permission. Since some of them are *sub judice*, I do not wish to place them on the Table of the House.

Sri S. GOPALA GOWDA.—Sir, you may order the Government just to withdraw such cases which are *sub judice* or still proceeding in courts, and give out information regarding other cases, ತಾವು ಇಷ್ಟು ಸಂದರ್ಭಗಳ ಪೈಕಿ ಒಂದು ಸಂದರ್ಭ ಮಾತ್ರ ಜುಡಿಷಿಯಲ್ ಎಂಕ್ವೈರಿ ಮಾಡಲಾಯಿತೆಂದು ಹೇಳಿದ್ದೀರಿ. ಅದರಲ್ಲಿ ಏನು ತೀರ್ಮಾನ ಕೊಟ್ಟಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಜನರು ತಪ್ಪು ಮಾಡಿರುವುದರಿಂದ ಪೋಲೀಸಿನವರು ಆತ್ಮ ಸಂರಕ್ಷಣೆಯ ಬಗ್ಗೆ ಗುಂಡುಹಾರಿಸಿರುತ್ತಾರೆ. ಈ ಕಾರಣದಿಂದ ಅವರು ಗುಂಡು ಹಾರಿಸಿರುವುದರಲ್ಲಿ ತಪ್ಪೇನೂ ಇಲ್ಲ ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಜನ ಆ ಗೋಳಿಬಾರಿನಲ್ಲಿ ಸತ್ತರು? ಎಷ್ಟು ಜನ ಘಾಯಗೊಂಡರು?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಮೃತ ಹೊಂದಿದವರ ಸಂಸಾರದವರಿಗೇನೂ ಪರಿಹಾರ ಕೊಡಲಿಲ್ಲವೆನ್ನುವುದಾಗಿ ತಿಳಿಸಲಾಗಿದೆ. ಏನು ಕಾರಣದಿಂದ ಹಾಗೆ ಆ ಪರಿಹಾರ ನೀಡುವುದನ್ನು ನಿಲ್ಲಿಸಲಾಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ರೂಲ್ಸಿನಲ್ಲಿಯೂ ಹಾಗೆ ಪರಿಹಾರ ಕೊಡುವಂತೆ ಹೇಳಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಪರಿಹಾರ ಕೊಡಬೇಕೆಂದು ಮೃತ ಪಟ್ಟವರ ಹಾಗೂ ಘಾಯಗೊಂಡವರ ಸಂಸಾರದವರು ಮನವಿಗಳನ್ನೇನೂ ಮಾಡಿಕೊಂಡಿರಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರ ನನಗೆ ಜ್ಞಾಪಕವಿಲ್ಲ. ಅಂಥ ಸನ್ನಿವೇಶವೇನೂ ಇದ್ದ ಹಾಗೂ ಕಂಡು ಬರಲಿಲ್ಲ.

Mr SPEAKER.—The question hour is over.

QUESTIONS FOR ANSWERS ON THE DAY

(But not taken up)

Vate Hole, Hassan District (Construction of Anicut)

Q.—686. Sri H. K. SIDDAIYA (Belur—Scheduled Castes).—

Will the Government be pleased to state :—

the steps taken by them in regard to the construction of an anicut across

Vate Hole in the P.W. Division of Sakalespur, Hassan District, for which provision of Rs. 10,000 has been made in the Budget Estimates for 1956-57 ?

A.—Sri A. G. RAMACHANDRA RAO (Minister for Law and Education).—

Arrangements have been made for conducting gaugings of Vate Hole during this season to determine the yield available for irrigating the atchkat of 640 acres.

High Level Causeway in Marur-Kudur Road and Tavarekere-Sondekoppa Road in Magadi Taluk.

Q.—745. Sri S. SIDDAPPA (Magadi).—

Will the Government be pleased to state :—

the stage at which the construction of the High Level Causeway in Marur-Kudur Road and Tavarekere-Sondekoppa Road in Magadi Taluk stands ?

A.—Sri A. G. RAMACHANDRA RAO (Minister for Law and Education).—

High level causeway in Marur-Kudur Road.

The estimate is administratively sanctioned and is under scrutiny for technical sanction.

High level causeway in Tavarekere—Sondekoppa Road.

An estimate for Rs. 94,000 for the construction of a bridge across Arkavathi near Sondekoppa is under examination.

Electric Power (Supply to Villages in Bangalore District)

Q.—743. Sri D. M. GOVINDARAJU (Nelamangala).—

Will the Government be pleased to state :—

(*a*) the names of villages and the names of taluks in Bangalore district to which electricity has been supplied for the purpose of electric lights during the years 1954-55 and 1955-56 ;

(*b*) the names of villages from which representations have been received for supplying electricty (details to be given talukwise and villagewise) ?

A.—Sri H. M. CHANNABASAPPA (Minister for Revenue and Agriculture).—

(*a*) *Vide* List 'A' appended,

(*b*) *Vide* List 'B' appended.

LIST 'A'

List of Villages electrified in Bangalore District for 1954-55, 1955-56

Sl. No.	Names of Villages	Taluk
	1954-55	
1	Lakkappanahalli	Ramanagaram
2	Itchangur village	Anekal
3	Gungarahalli	Ramanagaram
4	Naginapalya	Bangalore North
5	Kenchanakuppe	Ramanagaram
6	Burgunta	Anekal
7	Holdevanahalli	Anekal
8	Mellahally	Ramanagaram
9	Kolipur	Devanahally
10	Huttanahalli	Bangalore North
11	Thimmasandra	Devanahally
12	Addiganahalli	Bangalore North
13	Belathur	Hoskote

(SRI H. M. CHANNABASAPPA.)

LIST 'A' (*concld*).

Sl. No.	Names of Villages	Taluk
	1955-56	
14	Jakkasandra	Kanakapura
15	Attahalli	Kanakapura
16	Laxmipura village	Ramanagaram
17	Manchegowdanahalli	Bangalore North
18	Arasinakunte	Nelamangala
19	Byandahalli	Bangalore North
20	Puttianapalya	Bangalore Suth

LIST 'B'

List of Villages in Bangalore District for which representations have been received for electrification for 1954-55 and 1955-56.

Sl. No.	Village	Taluk
1	Tatanahalli village	Anekal
2	Srirampur	Bangalore
3	Krishnayanpalya	K. R. puram, Bangalore
4	Kavalhosahalli	Anekal
5	Ramaswamypalya	Bangalore South
6	Harpanahalli	Anekal
7	Sonnahallipura	Hoskote
8	Anjanahalli	Anekal
9	Sonavara	Anekal
10	Sooranasey	Hoskote
11	Somathanahalli	Hoskote
12	Hebbegudi	Anekal
13	Narayangatta	Anekal
14	Kodamballi	Magadi
15	Hebbur patatan	Channapatna
16	Higgalur	Channapatna
	Kirkanahalli	
	Vedagarahalli	
17	Sankalagere	Channapatna
18	Mandarakuppe	Channapatna
19	Ujjanahalli	Channapatna
20	Honganur	Channapatna
	Hodikehosahalli...	
21	Totahalli	Kanakapura
22	Honnaganahalli	Kanakapura
23	Rayasandra	Kanakapura
24	Gabbadi	Kanakapura
	Harobela	
	Varalavadi	

LIST 'B' (*concld.*)

Sl. No.	Village	Taluk
25	Virupasandra	Kanakapura
26	Varadanhalli	Kanakapura
27	Anadevadi	Kanakapura
28	Hulugandanahalli	Kanakapura
29	Kudihalli	Kanakapura
30	Honnekuppe	Ramanagaram
31	Golláradoddi	Ramanagaram
32	Jalamangala	Ramanagaram
	Nadikavagalu	
	Talwadi	
33	Achalu	Ramanagaram
	Kailancha	
	Chikkanahalli	
	Chickegowdan Doddi	
	Vaddarahalli	
	Bibuthigere	
	Bamaikanapura	
	Shanbboganaballi	
	Kudagal	
34	Puttadahalli	Doddaballapur
35	Basathihalli	Doddaballapur
36	Gobbargunte	Devanahalli
37	Singahalli	Devanahalli
38	Chickejala	
	Kemarahalli	Devanahalli
39	Dudagere	
	Channarayapatna	Devanahalli
40	Oblapura and Mane	Nelamangala

Mysore University Senate Election results.

MR. SPEAKER.—The Chair desires to announce that in the election held yesterday to the Senate of the University, the following members are declared elected:—

1. Sm. Lakshmidevi Ramanna

Sriyuts :

2. N. C. Nagaiah Reddy
3. B. Narayanaswamy
4. N. Huchmasthy Gowda
5. K. Prabhakar
6. T. C. Shantappa
7. G. A. Thimmappa Gowda
8. B. Hutche Gowda
9. Mulka Govinda Reddy.

DEMANDS FOR ADDITIONAL AND SUPPLEMENTARY GRANTS FOR 1956-57.

MR. SPEAKER.—Next item is Voting of Demands for Additional and Supplementary Grants for the year 1956-57. Shall I read all the demands and make use of this time for the general debate ?

SRI M. MADIAH (Nanjangud).—Sir, it is better to allot certain time for each demand.

MR. SPEAKER.—I would like to fix up time like this :

Land Revenue ...	Half hour
General Administration ..	Half hour
Industries & Supplies ...	Half hour
Famine Relief ...	One hour

(MR. SPEAKER.)

Capital Outlay on Industries ... Half hour.

*Sri J. MOHAMED IMAM (Jagalur).—I seek one information from the Chair. In the list of business yesterday the discussion on the Report of the Mysore Finance Enquiry Committee was included. May I take that it will be taken up next day?

*Sri H. SIDDAVEERAPPA (Minister for Home and Finance).—May I make a suggestion, Sir? If the House agrees that the Madhava Rau Committee Report is to be debated upon, it may be possible if the House co-operates to complete this transaction regarding the supplementary grants by about the tea time and take up the report afterwards.

Sri J. MOHAMED IMAM.—I submit we cannot do full justice in the course of one or two hours. That is a report which demands debate for at least one complete day. If it is not possible to take it up at this session, we can take it up at the next session.

There is a rumour that there is going to be a session at Mysore. I want the Government either to confirm or deny it because some of us want to chalk out our programmes.

Sri H. SIDDAVEERAPPA.—I cannot either confirm or deny it. But, I can tell him this much that he can anticipate such a thing in view of the important measures that are likely to come up. As to when it is, and where it is going to be held, the Leader of the House will announce.

Sri J. MOHAMED IMAM.—That shows the efficiency of the Government. They cannot come to a decision even in this small matter.

Sri H. SIDDAVEERAPPA.—We have come to a decision. It is for the Leader of the House to announce it.

Sri T. MARIAPPA (Mysore City North).—Mr. Speaker, I request that you may kindly allot at least one hour for Demand No. 41 because the Government want to take over the assets and liabilities of the Mysore Silk Filatures at a cost of Rs. 18.70 lakhs.

Mr. SPEAKER.—I shall bear that in mind. We shall begin.

Sri S. SRINIVASA IYENGAR (T.-Narasipur).—I think we have to devote at least 30 minutes for charged items. Under Demand No. 1, you have allotted some time. There is a charged item for which some time must be devoted.

Mr. SPEAKER.—If Land Revenue Demand is finished much earlier, we can take it up.

DEMAND No. 1.—LAND REVENUE

1. LAND REVENUE.

Mr. SPEAKER.—Motion moved:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Land Revenue'."

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು.)—ಸ್ವಾಮಿ, ಒಂದನೇ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ರೆವೆನ್ಯೂ ಆಫೀಸುಗಳಲ್ಲಿರತಕ್ಕ ಕೆಲವು ತೊಂದರೆಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ನಾವೆಲ್ಲ ತಿಳಿದಿರುವ ಹಾಗೆ ರೆವೆನ್ಯೂ ಆಫೀಸ್ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟು ಕೆಲಸ ಮಾಡುವ ಹಾಗೆ ಕಾಣುತ್ತದೆ. ಇದು ಪ್ರಾರಂಭದ ಕಚೇರಿ ಎಂದೂ ತಿಳಿಯಬಹುದು. ಅಮಲ್ದಾರರೇ ತಾಲ್ಲೂಕು ಆಫೀಸುಗಳಲ್ಲಿ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟಂತೆ ವ್ಯವಹಾರ ನಡೆಸುತ್ತಿರುವುದು ನಮಗೆ ಅರಿವಾಗುತ್ತದೆ. ರೆವೆನ್ಯೂ ಇಲಾಖೆಯಲ್ಲಿ ಮುಖ್ಯವಾಗಿ ಕಂದಾಯವನ್ನು ವಸೂಲ್ಮಾಡುವುದು, ದರಖಾಸ್ತುಗಳನ್ನು ವಿಲೇವಾರಿ ಮಾಡುವುದು; ಅಕ್ಷಿಜಿಷನ್ ಕೇಸುಗಳನ್ನು ತೀರ್ಮಾನ ಮಾಡುವುದು, ಯಾರಾದರೂ ಅಪ್ಪಣೆ ಇಲ್ಲದೆ ಭೂಮಿಯನ್ನು ಆಕ್ರಮಿಸಿಕೊಂಡಿದ್ದರೆ ತಕರಾರು ತಃಖ್ತೆ ಹಾಕುವುದು—ಇಂಥ ಕೆಲಸಗಳು ನಡೆಯುತ್ತವೆ.

Sri S. SRINIVASA IYENGAR.—Sir, he is not dealing with the matter contained in the Demand. It relates to hissa work in Bangalore Villages.

ಅಧ್ಯಕ್ಷರು.—ಎರಡನೇ ಖೋತಾ ಸೂಚನೆಗೆ ಅವಕಾಶ ಕೊಟ್ಟಿದ್ದೇನೆ. ಅದರ ಮೇಲೆ ಮಾತ್ರ ಮಾತನಾಡಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಬೆಂಗಳೂರು ಜಿಲ್ಲೆಯಲ್ಲಿ ಜಮೀನ್ದಾರಿ ಪದ್ಧತಿ ಹೋಗುವ ಸಂಬಂಧದಲ್ಲಿ ಅವನ್ನು ನೋಡಿಕೊಳ್ಳುವುದಕ್ಕೋಸ್ಕರವಾಗಿ ಡಿಸ್ಟ್ರಿಕ್ಟ್ ಆಫೀಸರನ್ನೂ ತಾಲ್ಲೂಕು ಆಫೀಸರುಗಳನ್ನೂ ನೇಮಿಸಿದ್ದಾರೆ. ಹೀಗೆ ಭೂಮಿಯನ್ನು ಕಳೆದುಕೊಳ್ಳತಕ್ಕ ಮತ್ತು ಕಳೆದುಕೊಂಡಿರತಕ್ಕ ಜಮೀನ್ದಾರರು ಅವರ ಭೂಮಿಗಳನ್ನು ಅಳತೆಮಾಡಿ ಅವುಗಳ ಬೆಲೆ

ಕೊಡತಕ್ಕ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರವಾಗಿ ಕಚೇರಿಗಳಿಗೂ, ಅವರವರ ಊರುಗಳಿಗೂ ಸುಮಾರು 20—30 ಸಲ ಓಡಾಡಿರುವುದನ್ನು ನಾನು ಗಮನಿಸಿದ್ದೇನೆ. ಬೆಂಗಳೂರು ಜಿಲ್ಲೆಯಲ್ಲಿ ಇದಕ್ಕಾಗಿ ನೇಮಿಸಿರತಕ್ಕ ಅಧಿಕಾರಿಗಳು, ಜಮೀನ್ದಾರಿ ರದ್ದಿಯಾತಿ ಪದ್ಧತಿಯಿಂದ ಭೂಮಿಯನ್ನು ಕಳೆದುಕೊಳ್ಳುವವರು ಬಂದು ಈ ಅಧಿಕಾರಿಗಳನ್ನು ವಿಚಾರಿಸಿದಾಗ ಅವರು ಸಾಕಾದಷ್ಟು ರೀತಿಯಲ್ಲಿ ವಿವರಗಳನ್ನು ಕೊಡದೆ, ವಿವರಣೆಗಳನ್ನು ತಿಳಿಸದೆ ತಮಗೆ ಏನೂ ಗೊತ್ತಿಲ್ಲವೆನ್ನುವ ಹಾಗೆ ನಟಿಸಿಕೊಂಡು ಮುಂದೆ ನೋಡೋಣ, ಪರಿಶೀಲನೆ ಮಾಡೋಣವೆಂದು ಹೇಳಿ ಕಳುಹಿಸುತ್ತಿರುವುದು ಬಹಳ ಶೋಚನೀಯವಾಗಿದೆ. ಅದಕ್ಕೋಸ್ಕರವಾಗಿ ಸಂಬಂಧಪಟ್ಟ ಮಂತ್ರಿಗಳು, ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ವಿವರಗಳನ್ನು ಜನರಿಗೆ ಕೊಡುವಂತೆ ತಿಳಿಸಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಒಂದನೆ ಡಿಮ್ಯಾಂಡಿನಲ್ಲಿ ಕೇಳಿರುವ ಟೋಕನ್ ಗ್ರಾಂಟ್ ವಿಚಾರದಲ್ಲಿ ಒಂದೆರಡು ವಿಷಯ ಹೇಳಬೇಕೆಂದಿದ್ದೇನೆ. ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಇನಾಂ ಗ್ರಾಮಗಳಿವೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಬೆಂಗಳೂರು ಜಿಲ್ಲೆಯಲ್ಲಿರುವ ಎಲ್ಲ ಇನಾಂ ಗ್ರಾಮಗಳಲ್ಲಿಯೂ ಹಿಸ್ಸೆ ಕೆಲಸವನ್ನು ಪೂರೈಸಬೇಕಾಗಿದೆ ಎಂದು ಸರ್ಕಾರದವರಿಗೆ ಕಂಡುಬಂದರೆ ಅವರು ನೇಮಕ ಮಾಡಿಕೊಳ್ಳುವ ಸಿಬ್ಬಂದಿ ಸಾಕಾಗುತ್ತದೆಯೋ? ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕು. ಎಲ್ಲ ಗ್ರಾಮಗಳನ್ನೂ ಸರ್ಕಾರದವರು ತೆಗೆದುಕೊಳ್ಳಬೇಕು. ಇದಕ್ಕಾಗಿ ಹಿಸ್ಸೆ ಕೆಲಸ ಮಾಡುತ್ತ ಹೋದರೆ ನಿಖರವಾದ ಲೆಕ್ಕ ಬೇಗ ಸಿಕ್ಕುವುದಿಲ್ಲ. ಆದುದರಿಂದ ಈ ಕಾನೂನನ್ನು ಕೂಡಲೆ ಜಾರಿಗೆ ತರುವ ಉದ್ದೇಶದಿಂದ, ಈಗ ಸರ್ಕಾರದವರು ಕೇಳಿರುವ ಸಿಬ್ಬಂದಿ ಈ ಹಿಸ್ಸೆ ಸರ್ವೆ ಕೆಲಸವನ್ನು ಮಾಡಿ ಮುಗಿಸುತ್ತಾರೆಯೋ, ಇಲ್ಲವೇ ಎಂದು ಗೊತ್ತಾಗುವುದಿಲ್ಲ. ನನಗೆ ತಿಳಿದಮಟ್ಟಿಗೆ ಈ ಹಿಸ್ಸೆ ಸರ್ವೆ ಬಹಳ ನಿಧಾನವಾದ ಕೆಲಸ. ಆದುದರಿಂದ ಈ ಕೆಲಸವನ್ನು ಬೇಗಬೇಗ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಸಿಬ್ಬಂದಿಯನ್ನು ನೇಮಕ ಮಾಡಬೇಕೇ ಹೊರತು ಕಡಮೆ ಜನರನ್ನು ನೇಮಿಸಿದರೆ ಬೇಗ ಕೆಲಸವಾಗುವುದಿಲ್ಲ. ಈ ಕೆಲಸಕ್ಕೆ ಎಷ್ಟು ಜನ ಬೇಕು ಎನ್ನುವುದನ್ನು ಇದರಲ್ಲಿ ಕೊಟ್ಟಿಲ್ಲ. ಇನ್ನು ನವೆಂಬರ್ ಒಂದನೆ ತಾರೀಖು ಹೊಸ ಸಂಸ್ಥಾನದ ಉದಯವಾಗುತ್ತದೆ. ಅಷ್ಟರೊಳಗಾಗಿ ಈ ಕಾರ್ಯವನ್ನು ಮುಗಿಸುವುದಕ್ಕಾಗುತ್ತದೆಯೋ? ಹೊಸ ಸಂಸ್ಥಾನವಾದ ಮೇಲೆ ಈ ಸಿಬ್ಬಂದಿ ಮುಂದುವರಿದುಕೊಂಡು ನಿಧಾನವಾಗಿ ಈ ಹಿಸ್ಸೆ ಸರ್ವೆ ಕೆಲಸ ನಡೆಯುತ್ತ ಇರುತ ದೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವಿನ್ಯೂ ಮತ್ತು ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ತಾಲ್ಲೂಕು ಆಫೀಸಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಇನಾಂ ರದ್ದಿಯಾತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರಿಯಾದ ತಿಳುವಳಿಕೆಯನ್ನು ರೈತರಿಗೆ ಕೊಡುತ್ತಿಲ್ಲ. ಆ ರೀತಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಶ್ರೀ ಮುನಿಸ್ವಾಮಯ್ಯನವರು ತಿಳಿಸಿದರು. ಸರಿಯಾದ ತಿಳಿವಳಿಕೆ ಸಂಬಂಧಪಟ್ಟ ಜನಗಳಿಗೆ ತಿಳಿಯುವಂತೆ ವ್ಯವಸ್ಥೆ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೂ ಮತ್ತು ಮಾನ್ಯ ಸದಸ್ಯರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರು ಸರ್ಕಾರವು ಅಂಥಾ ಸನ್ನಿವೇಶವನ್ನೇನಾದರೂ ತಂದರೆ ಅವಶ್ಯಕವಾಗಿ ಅದನ್ನು ಸರಿಪಡಿಸುವುದಲ್ಲದೆ ಇನಾಂ ರದ್ದಿಯಾತಿಗೆ ಸಂಬಂಧಪಟ್ಟ ವಿಷಯಗಳನ್ನು ಎಷ್ಟು ಪ್ರಮಾಣದಲ್ಲಿ ಯಾವಯಾವ ವಿಷಯಗಳನ್ನು ಜನಗಳಿಗೆ ತಿಳಿಯಪಡಿಸಬೇಕೋ ಅವೆಲ್ಲವನ್ನೂ ತಿಳಿಸುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಬೆಂಗಳೂರು ಜಿಲ್ಲೆಯಲ್ಲಿ ಇನಾಂ ಗ್ರಾಮಗಳೆಷ್ಟಿವೆ, ಹಿಸ್ಸೆ ಕೆಲಸ ಯಾವುದಕ್ಕೆ ಆಗಬೇಕು, ಈಗಿರತಕ್ಕ ಸಿಬ್ಬಂದಿ ಸಾಕಾಗುವುದಿಲ್ಲ, ಆದುದರಿಂದ ಅವಶ್ಯಕ ಪ್ರಮಾಣದಲ್ಲಿ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಳ್ಳಬೇಕೆಂಬ ಸಲಹೆಯನ್ನು ಕೊಟ್ಟರು. ಸರ್ಕಾರದವರ ಆಶಯವಾದರೂ ಅಷ್ಟೆ. ಬೆಂಗಳೂರು ಜಿಲ್ಲೆಯಲ್ಲಿ ಒಟ್ಟು 636 ಇನಾಂ ಗ್ರಾಮಗಳಿವೆ. ಅದರಲ್ಲಿ ಸರ್ವೆ ಆಗಿರತಕ್ಕದ್ದು 161 ಗ್ರಾಮಗಳು. ಸರ್ವೆ ಆಗಿಲ್ಲದೆ ಇರುವುದು 475 ಗ್ರಾಮಗಳು, ಮತ್ತು ಈಗ notify ಮಾಡಿರುವುದು 113 ಗ್ರಾಮಗಳು. ಸರ್ವೆ ಸೆಟಲ್‌ಮೆಂಟ್ ಆಗಿಲ್ಲದೆ ಇರುವ ಗ್ರಾಮಗಳಲ್ಲಿ ಪೋಡಿ ಹಿಸ್ಸೆ ಸಂಬಂಧದಲ್ಲಿ revenue side of the work ಮಾಡುವುದಕ್ಕೆ ಈ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೇವೆ. ಆದಷ್ಟು ಬೇಗ ಉಳಿದ 1650 ಗ್ರಾಮಗಳಲ್ಲಿ ಸರ್ವೆ ಕೆಲಸ ಮಾಡಬೇಕಾಗಿದೆ. ನಾವು ರೆವಿನ್ಯೂ ಸೈಡಿನಲ್ಲಿ ಕೆಲಸ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕಾದರೂ ಒದಗಿಸಿಕೊಳ್ಳಬಹುದು. ಅದಕ್ಕೆ trained personnel ಇದೆ. ಆದರೆ ಸರ್ವೆ ಕೆಲಸಕ್ಕೆ ಅಗತ್ಯವಾದ trained personnel ನಮ್ಮಲ್ಲಿಲ್ಲ. ಆದುದರಿಂದ ಇರತಕ್ಕ trained personnelನಿಂದ ಎಷ್ಟು ಸರ್ವೆ ಕೆಲಸ ಮಾಡಬಹುದೋ ಅದಕ್ಕನುಗುಣವಾಗಿ ರೆವೆನ್ಯೂ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಂಡಿದ್ದೇವೆ. ಸಾಧ್ಯವಾದಷ್ಟೂ ಸರ್ವೆಮಾಡಲು ಜನಗಳು ಹೆಚ್ಚಿಗೆ ಸಿಕ್ಕಿದಂತೆಲ್ಲ revenue side work ಅದೇ ಪ್ರಮಾಣದಲ್ಲಿ ನಡೆಯಲು ತಕ್ಕಷ್ಟು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತೇವೆ. ಈಗಿರತಕ್ಕ ರೀತಿಯಲ್ಲಿ ಸರ್ವೆ ಸಾಧಾರಣವಾದ ಲೆಕ್ಕಗಳನ್ನು ನೋಡಿಕೊಳ್ಳಲು ರೆವೆನ್ಯೂ ಸಿಬ್ಬಂದಿಯನ್ನು ಏರ್ಪಾಡುಮಾಡಿಕೊಂಡಿದ್ದೇವೆ. ಈಗಾಗಲೇ ಸುಮಾರು 14-15 ತರಹ ಲೆಕ್ಕಗಳನ್ನು ಸರ್ವೆಯಾಗದ ಗ್ರಾಮಗಳಲ್ಲಿ ಬರೆಯುತ್ತಿದ್ದಾರೆ. ಇದುವರೆಗೆ 183 ಗ್ರಾಮಗಳಲ್ಲಿ ಈ 14-15 ಲೆಕ್ಕಗಳನ್ನು ಬರೆದಾಗಿದೆ. ಐವತ್ತು ಗ್ರಾಮಗಳಲ್ಲಿ ಪೂರೈಕೆಗೆ ಬಂದಿದೆ. ಈ ಕೆಲಸವನ್ನು ಬೇಗ ಮುಗಿಸಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸರ್ವೆ ಮಾಡುವುದಕ್ಕೆ ಯೋಗ್ಯರಾದ ಜನಗಳು ಸಾಕಾದಷ್ಟಿಲ್ಲದೆ ಇರುವುದರಿಂದ ರೆವೆನ್ಯೂ ಅಧಿಕಾರಿಗಳನ್ನು ಹೆಚ್ಚಿಗೆ ತೆಗೆದುಕೊಂಡಿಲ್ಲ. ಇಷ್ಟು ಭರವಸೆಯನ್ನು ಕೊಡುವುದರಿಂದ ಮಾನ್ಯ ಸದಸ್ಯರು ಈ ಡಿಮ್ಯಾಂಡನ್ನು ಮಂಜೂರು ಮಾಡಬೇಕೆಂದು ಕೇಳುತ್ತೇನೆ.

Mr. SPEAKER.—Sri Srinivasa Iyenger wants to speak on charged item.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, Charged item ಬಗ್ಗೆ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ. ರಿಸರ್ವ್ ಬ್ಯಾಂಕಿನವರು ಸ್ವಲ್ಪ ದಿವಸಗಳ ಹಿಂದೆ 15 ಸರ್ಕಾರಗಳಿಗೆ ಸಾಲವೆತ್ತುವ ಒಂದು ಯೋಜನೆಯನ್ನು ಪ್ರಕಟಣೆ ಮಾಡಿದ್ದರು. ಅದರಲ್ಲಿ ಕೆಲವು ಸರ್ಕಾರಗಳಿಗೆ ನೂರು ರೂಪಾಯಿಕೊಟ್ಟರೆ ನೂರು ರೂಪಾಯಿಗಳ ಬಾಂಡು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಕೊಡುತ್ತೇವೆಂದು ನಮೂದುಮಾಡಿದ್ದರು. ನಮ್ಮ ಮೈಸೂರು ಸರ್ಕಾರದ ಸಾಲಕ್ಕೆ ರೂ. 99-8-0 ಕೊಟ್ಟರೆ ನೂರು ರೂಪಾಯಿಗಳ ಬಾಂಡ್ ಕೊಡುತ್ತೇವೆಂದು, ಎಂಟಾಣೆ discount ಮೇಲೆ ಪ್ರಚಾರ ಮಾಡಿದ್ದರು. ಇದರಿಂದ ಏನಾಯಿತೆಂದರೆ ಮೈಸೂರು ಸರ್ಕಾರಕ್ಕೆ ಬಂದಿರತಕ್ಕ 410 ಲಕ್ಷ ರೂಪಾಯಿಗಳ ಸಾಲಕ್ಕೆ ನಮಗೆ ಎಷ್ಟು ನಷ್ಟವಾಗುತ್ತದೆಂದರೆ, ಎರಡು ಲಕ್ಷ ಐದುಸಾವಿರ ರೂಪಾಯಿಗಳು. ಇಷ್ಟು ಹಣವನ್ನು discount ರೂಪದಲ್ಲಿ ನಾವು ಬಿಟ್ಟು ಕೊಡಬೇಕು ಎಂದು ಇದನ್ನು ತಂದಿರುವುದು. ನಾನು ಏನು ಅಭಿಪ್ರಾಯದಿಂದ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ ಹಿಂದೆಯಾದರೆ ಮೈಸೂರು ಸರ್ಕಾರದವರೇ ಸಾಲವನ್ನು ತೆಗೆಯುತ್ತಿದ್ದರು. ಈಗ ರಿಸರ್ವ್ ಬ್ಯಾಂಕ್‌ನವರು ಸಾಲಕ್ಕೆ ಹಣ ತೆಗೆದುಕೊಳ್ಳುತ್ತಾರೆ ಮತ್ತು ಸಾಲ ತೀರಿಸುತ್ತಾರೆ. ಆದುದರಿಂದ discount ಕೊಡುವ ಹಣವನ್ನು charged item ಎಂದು ಭಾವಿಸಬೇಕಾಗುತ್ತದೆ. ಯಾವ ತರಹ ಹೀಗೆ ಎಂಟಾಣೆಯನ್ನು ಕಡಿಮೆ ಕೊಟ್ಟರು; ಯಾವ ದೃಷ್ಟಿಯಿಂದ ಎಂಟಾಣೆ discount ಕೊಟ್ಟರು? ಪಶ್ಚಿಮ ಬಂಗಾಳ ಸರ್ಕಾರದಲ್ಲಿ ಮಾತ್ರ ಜನಗಳಿಗೆ ನಂಬಿಕೆ ಇದೆಯೇ? ಅದಕ್ಕೆಮಾತ್ರ ನೂರಕ್ಕೆ ನೂರು ರೂಪಾಯಿ ಕೊಡಬೇಕೆಂದು ಮಾಡುವುದಕ್ಕೆ ಏನು ಕಾರಣ? ಬೊಂಬಾಯಿ ಸರ್ಕಾರದ ಸಾಲ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಸಾಲಗಳಿಗೆ ಈ ರೀತಿ discount ಕೊಟ್ಟಿದ್ದಾರೆಯೇ? ಮೈಸೂರು ಸರ್ಕಾರದ ಸಾಲಕ್ಕೆ ಮಾತ್ರ discount ಕೊಡಬೇಕಾಗಿತ್ತೇ? ಈ ವಿಷಯಗಳೆಲ್ಲವನ್ನೂ ತಿಳುಹಿಸಬೇಕು. ಇದಲ್ಲದೆ ಈಗ್ಗೆ ಎರಡು ವರ್ಷಗಳ ಹಿಂದೆಯೂ ಸಹ ಸಾಲವನ್ನೆತ್ತಿದಾಗ ಎಂಟಾಣೆ discount ಕೊಟ್ಟರು. ಮದರಾಸ್ ಸರ್ಕಾರದ ಸಾಲಕ್ಕೆ ಮಾತ್ರ ನಾಲ್ಕಾಣೆ discount ಕೊಟ್ಟಿದ್ದಾರೆ. ಆದುದರಿಂದ ರಿಸರ್ವ್ ಬ್ಯಾಂಕಿನವರಿಗೆ ಈ ಅಭಿಪ್ರಾಯ ಬರುವುದಕ್ಕೆ ಏನು ಕಾರಣ; ಅದನ್ನೇನಾದರೂ ಸರಿಪಡಿಸುವುದಕ್ಕೆ ಸಾಧ್ಯವೇ? ನಮ್ಮ ಸರ್ಕಾರದ ಭದ್ರತೆಯ ವಿಷಯದಲ್ಲಿ ಅವರಿಗೆ ಅನುಮಾನವಿದೆಯೆ? ಯಾವ ಕಾರಣದಿಂದ ಈ ರೀತಿ ಮಾಡುತ್ತಾರೆ? ಸರ್ಕಾರಕ್ಕೆ ತಿಳಿಯಪಡಿಸದೆ, ಸರ್ಕಾರದವರ ಅಭಿಪ್ರಾಯ ತೆಗೆದುಕೊಳ್ಳದೆ ಈರೀತಿಯಾಗಿ ಮಾಡಿದ್ದಾರೆಯೇ? ಎಂಬ ವಿಷಯಗಳನ್ನೆಲ್ಲ ತಿಳಿಯಬೇಕೆಂಬ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಸರ್ಕಾರದವರು ಈ ವಿಚಾರದಲ್ಲಿ ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

1-30 P.M.

*Sri H. SIDDAVEERAPPA (Minister for Home and Finance).—Sir, Hon'ble Member Sri Srinivasa Iyengar is aware that the issue rate is fixed in consultation with the Reserve Bank of India. They have the integrated policy of co-ordinating all the loans that will have to be raised in the country. It does not in any way affect the credit-worthiness of the State at all. While fixing the issue rate, there are various factors to be taken into consideration, that is, the availability of local resources, the time and circumstances under which the loan has been raised. If the Hon'ble Member takes into consideration the various issue rates that have been fixed for various Governments, he will come to know that there is absolutely no discriminatory treatment so far as Mysore Government is concerned. As a matter of fact the credit of Mysore Government is so high that even before the loan was floated 70per cent of it was promised. It is only in Bombay and Bengal it is issued on par. You know most of the capital of this country is locked in the important cities like Bombay and Calcutta. There are big financiers, big business concerns where by a flash they can get all the money. But, here our idea is to get as much as possible from the rural parts.

Sir, in Bombay it is on par and the only other Government which put it on par was Bengal. 15 Governments raised loans simultaneously and except these two Governments no other Government had that privilege. The two important cities of this country are located as the capitals of those Governments where money is easily available. Take the case of Madras; it was issued at Rs. 99-12-0. Andhra, Hyderabad and Mysore it was Rs. 99-8-0. In some States it was Rs. 99-4-0. It all depends on the incentive to pump out money from people who have it. It does not at all affect the credit-worthiness. Therefore, my friend may please correct the impression he has in his mind that because our credit-worthiness is lower it is issued at Rs. 99-8-0.

Sri S. SRINIVASA IYENGAR.—I never said that I doubted the credit-worthiness was low. I want to know how the Reserve Bank viewed it. The issue rate is decided by the Government of Mysore in consultation with the Reserve Bank. I would like to know the data on which they fixed Rs. 99-8-0.

Sri H. SIDDAVEERAPPA.—I am thankful to you for the correction. As I have already said, the Reserve Bank had in view the availability of the local resourees and also various other considerations which the Hon'ble Member is aware of. The idea is, these

loans hereafter will become almost frequent. Therefore, certain incentive is necessary to the affording public.

Sri S. SRINIVASA IYENGAR.—The Minister did not furnish the analysis of this loan subscription. The idea is to draw capital from the rural parts, he said. Have they really realised that hope ?

Sri H. SIDDAVEERAPPA.—If the Hon'ble Member puts a short-notice question, I will answer it

Mr. SPEAKER.—The question is:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Land Revenue.''

The motion was adopted.

DEMAND No. 11—GENERAL ADMINISTRATION

25. GENERAL ADMINISTRATION EXCEPT THE SUB-MAJOR HEADS B AND C

Mr. SPEAKER.—Motion moved :

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'General Administration (Except the sub-major heads B and C.).''

Sri Muniswamiah has sent some cut motions.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ಇನಾಮುಗಳನ್ನು ತೆಗೆದುಹಾಕತಕ್ಕ ಸಂಬಂಧದಲ್ಲಿ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸರ್ಕಾರದವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಯಾವ ಯಾವ ಡಿಸ್ಟ್ರಿಕ್ಟುಗಳಲ್ಲಿ ಎಷ್ಟೆಷ್ಟು ಇನಾಂಗ್ರಾಮಗಳನ್ನು ಪಟ್ಟಿಯಲ್ಲಿ ಸೇರಿಸಬೇಕು, ಯಾವ ಯಾವ ಅಧಿಕಾರಿಗಳು ಇನಾಂಗ್ರಾಮಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿದೆ, ಸರ್ವೇಯರು, ಮೋಜಿನಿದಾರರು, ಅಸೆಸ್ ಮಾಡುವವರು, ರೆವೆನ್ಯೂ ಆಫೀಸರ ಎಷ್ಟು ಮಂದಿ ಬೇಕು ಇವುಗಳನ್ನು ಒಂದು ಕ್ರಮವಾಗಿ ಪಟ್ಟಿ ಮಾಡಿರುವ ಹಾಗೆ ಕಾಣಲಿಲ್ಲ. ಇದಕ್ಕೆ ಕೆಲವು ಅಧಿಕಾರಿಗಳನ್ನು ಇಂಥ ಕಡೆ ನೇಮಕ ಮಾಡಿದ್ದೇವೆ, ಮುಂದಾಲೋಚನೆ ಮಾಡಿರಲಿಲ್ಲ, ಈಗ ನಾವು ಹಣ ಒದಗಿಸಬೇಕಾಗಿದೆ ಎಂದು ಹೇಳುತ್ತಿರುವ ಹಾಗೆ ಕಾಣುತ್ತದೆ. ನೀವು ಹೇಗಾದರೂ ಇನಾಂಗ್ರಾಮಗಳನ್ನು ತೆಗೆದುಹಾಕುವುದು ಖಚಿತವಾಗಿದೆ. ಅದಕ್ಕೆ ಎಷ್ಟು ಹಳ್ಳಿಗಳಲ್ಲಿ ಎಷ್ಟು ಎಕರೆ ಅಳತೆ ಮಾಡಬೇಕು, ಎಷ್ಟು ಅಸೆಸ್ ಮಾಡಬೇಕು, ಸರ್ವೆಯರು ಎಷ್ಟು ಮಂದಿಬೇಕು, ಟ್ರೈನಿಂಗ್ ಆಗಿರುವವರು ಎಷ್ಟಿದ್ದಾರೆ, ರಿಟೈರ್ ಆಗಿ ಗಟ್ಟಿಮುಟ್ಟಾಗಿರುವವರನ್ನು ನೇಮಕ ಮಾಡಿ ಜಾಗ್ರತೆ ಕೆಲಸ ಮುಗಿಸುವುದಕ್ಕೆ ಸಾಧ್ಯವಿದೆಯೆ ಎಂಬುದನ್ನು ಯೋಚಿಸಬೇಕು ಎಂದು ಹೇಳುವುದಕ್ಕಾಗಿ ಖೋತ ಸೂಚನೆಯನ್ನು ಕಳುಹಿಸಿದ್ದೇನೆ. ಇದನ್ನು ತಡ ಮಾಡುತ್ತಾ ತೆಗೆಯುವುದು ಸರಿಯಲ್ಲ, ಇದಕ್ಕೆ ಒಂದು ಸಮಿತಿ ಮಾಡಿ ಜಾಗ್ರತೆ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಏನೇನು ಕ್ರಮಗಳನ್ನು ನಡೆಸಬೇಕೋ ಅವನ್ನು ಮಾಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಪರ್ಸನಲ್ ಅಂಡ್ ಮಿಸಲೇನಿಯಸ್ ಇನಾಂ ಅಬಾಲಿಷನ್ ಆಕ್ಟಿಗೆ ಸಂಬಂಧಪಟ್ಟಂತೆ ಕೆಲವು ಇನಾಂಗ್ರಾಮಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆಂದು ಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಣೆ ಮಾಡಿದ್ದಾರೆ, ಕೆಲವನ್ನು ಮಾತ್ರ ಪ್ರಕಟಿಸಿ ಕೆಲವನ್ನು ಬಿಟ್ಟಿರುವುದಕ್ಕೆ ಕಾರಣ ಹೇಳಿದ್ದಾರೆ, ಸರ್ವೆ ಆಗಿರುವ ಗ್ರಾಮಗಳು ಕೆಲವನ್ನು ಮಾತ್ರ ಈ ದಿವಸ ಸರ್ಕಾರದವರು ಇಷ್ಟನೆಯ ತಾರೀಖಿನಿಂದ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಕೆಲವು ಸರ್ವೆ ಆಗದಿರುವ ಗ್ರಾಮಗಳನ್ನು ತೆಗೆದುಕೊಂಡಿಲ್ಲ. ಮೈಸೂರು ಜಿಲ್ಲೆಯ ವಿಷಯವನ್ನು ಹಿಂದೆ ಈ ಸಂಬಂಧವಾದ ಬಿಲ್ಲು ಬಂದಾಗ ಹೇಳಿದ್ದೆ. ಯಳಂದೂರು ಜಹಗೀರಿಯ ಸರ್ವೆ ಸೆಟ್ಲ್‌ಮೆಂಟ್ ಆಗಿದೆ, ಅದಕ್ಕೆ ಯಾವ ವಿಧವಾದ ಸರ್ವೆಯೂ ಬೇಕಾಗಿಲ್ಲ, ಅದನ್ನು ಬೇಗ ತೆಗೆದುಕೊಳ್ಳಬೇಕು. ಸರ್ಕಾರದವರು ಇನ್ನೊಂದು ನೋಟಿಫಿಕೇಷನ್ ಹೊರಡಿಸುವುದಾಗಿ ಹೇಳಿದ್ದಾರೆ. ತಕ್ಷಣ ಹೊರಡಿಸಬೇಕು. ಕಾರಣ ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಹೆಚ್ಚಿನ ಮಳೆಯ ಅಭಾವದಿಂದ ಯಾವ ವಿಧವಾದ ಕಾಂಗಾರಿಯನ್ನು ಇನಾಂಗ್ರಾಮಗಳಲ್ಲಿ ತೆಗೆದುಕೊಳ್ಳಬೇಕಾದರೂ ಇನಾಂದಾರರ ಒಪ್ಪಿಗೆಯಾಗಬೇಕು, ಸರ್ಕಾರದವರು ಆ ಗ್ರಾಮಗಳನ್ನು ತೆಗೆದುಕೊಳ್ಳುವ ಸಂದರ್ಭವಿರುವುದರಿಂದ ಇನಾಂದಾರರು ಒಪ್ಪಿಗೆ ಕೊಡಲು ಹಿಂದು ಮುಂದೆ ನೋಡುತ್ತಿದ್ದಾರೆ. ಒಟ್ಟಿನಲ್ಲಿ ಅವರಿಗೆ ಮನಸ್ಸಿಲ್ಲ. ಸರ್ಕಾರ ತೆಗೆದುಕೊಂಡ ಮೇಲೆ ಆ ಕೆಲಸ ಕಾರ್ಯ ಮಾಡಲಿ ಎಂಬ ಧೋರಣೆ ತೋರಿಸುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಯಳಂದೂರು ಜಹಗೀರಿಯನ್ನು ಬೇಗ ತೆಗೆದುಕೊಳ್ಳಬೇಕು. ಬೇರೆ ಗ್ರಾಮಗಳಲ್ಲಿ ತಕಾವಿ ಸಾಲ ಅಥವಾ ಬೇರೆ ವಿಧವಾದ ಸಾಲ ರೈತರಿಗೆ ಅಭಾವ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ಕೊಡಬೇಕಾದರೂ ಕೂಡ ಇನಾಂದಾರರ ಅನುಮತಿ ಬೇಕಾಗಿದೆ. ಅದನ್ನು ಕೂಡ ಅವರು ಕೊಡದಿರುವುದರಿಂದ ಈ ವಿಶೇಷ ಪರಿಸ್ಥಿತಿಯಲ್ಲಿ ಸರ್ಕಾರದವರೇನು ಸೌಲಭ್ಯ ಅಭಾವ ಪ್ರದೇಶಗಳಿಗೆ ಒದಗಿಸಿದ್ದಾರೋ ಅದು ಇನಾಂಗ್ರಾಮಗಳಲ್ಲಿ ದೊರೆಯದೆ ಹೆಚ್ಚಿನ ಕಷ್ಟ ಒದಗಿದೆ. ಆ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿನ ಒಂದು ಸಿಬ್ಬಂದಿಯನ್ನು ಸರ್ಕಾರದವರು ಬೇಗ ಏರ್ಪಾಡು ಮಾಡಿ ಸರ್ವೆ ಆಗದಿರುವುದನ್ನೂ ಮತ್ತು ಸರ್ವೆ ಆಗಿರುವುದನ್ನೂ ಮೈಸೂರು ಜಿಲ್ಲೆಯಲ್ಲಿ ಆದಷ್ಟು ತ್ವರಿತವಾಗಿ ತೆಗೆದುಕೊಳ್ಳಬೇ

(ಶ್ರೀ ಬಿ. ರಾಚಯ್ಯ)

ಕೆಂದು ಈ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ ತಿಳಿಸಿ ಈ ಡಿಮ್ಯಾಂಡನ್ನೂ ಅನುಮೋದಿಸುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.- ನರಸೀಪುರ).—ಸ್ವಾಮಿ, 11ನೆಯ ಡಿಮ್ಯಾಂಡಿನಲ್ಲಿ ನೂರು ರೂಪಾಯಿಗಳ ಟೋಕನ್ ಗ್ರಾಂಟ್ ಮಾತ್ರ ಕೇಳಿದ್ದಾರೆ. ಅದೇಕೆಂದರೆ ಒಬ್ಬ ಡೆಪ್ಯುಟಿ ಕಮಿಷನರನ್ನು ಹೆಚ್ಚಾಗಿ ನೇಮಕ ಮಾಡಿಕೊಳ್ಳುತ್ತೇವೆ ಮತ್ತು ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ, ತುಮಕೂರು ಜಿಲ್ಲೆ ಈ 3 ಜಿಲ್ಲೆಗಳಿಗೆ ಮೂರು ಅಮಲ್ದಾರರನ್ನು ನೇಮಕ ಮಾಡುತ್ತೇವೆ, ಅದಕ್ಕೆ ಹಣ ಖರ್ಚಾಗುತ್ತದೆ, ಬಡ್ಜೆಟ್ ಮಾಡುವಾಗ ಇದನ್ನು ಸೇರಿಸುವುದಕ್ಕಾಗಲಿಲ್ಲ, ಕಾರಣ ಏಪ್ರಿಲ್ ಕಳೆದ ಮೇಲೆ ಸರ್ಕಾರಿ ಆರ್ಡರ್ ತಲಪಿತು ಎಂದು ಹೇಳಿದ್ದಾರೆ. ಇದಕ್ಕೆ ಎಷ್ಟು ಖರ್ಚಾಗುತ್ತದೆಂದು ಕೇಳಿಲ್ಲ. ಟೋಕನ್ ಗ್ರಾಂಟಿಗೆ ಒಪ್ಪಿಗೆ ಕೊಡೋಣ. ಸಿಬ್ಬಂದಿಗೆ ಎಸ್ಟಿಮೇಟ್ ಎಷ್ಟು ನವೆಂಬರ್ 1941ರ ವರೆಗೆ ಎಷ್ಟು ಖರ್ಚಾಗುತ್ತದೆ ಎಂದು ಹೇಳಬೇಕಾಗಿತ್ತು. ಎರಡನೆಯದು ಈ 3 ಜಿಲ್ಲೆಗಳಿಗೆ ಈ ರೀತಿ ಏರ್ಪಾಡು ಮಾಡಿದ್ದಾರೆ; ಉಳಿದ 7 ಜಿಲ್ಲೆಗಳಲ್ಲಿ ಅಲ್ಲಿರುವ ಡೆಪ್ಯುಟಿ ಕಮಿಷನರು, ಅಮಲ್ದಾರರು ಇವರ ಮುಖಾಂತರ ಕೆಲಸ ಮಾಡಿಸಬೇಕು ಎಂಬುದು ಸರ್ಕಾರದ ಅಭಿಪ್ರಾಯವೇ ಎಂಬುದನ್ನು ತಿಳಿಯಬೇಕು. ಮೂರು ಜಿಲ್ಲೆಗಳಲ್ಲಿ ಮಾತ್ರ ಎಂದು ಹೇಳಿರುವುದರಿಂದ ಈ ಪ್ರಶ್ನೆ ಉದ್ಭವವಾಗುತ್ತದೆ, ಕೆಲಸ ಜಾಗ್ರತೆ ಆಗಬೇಕೆಂದು ಹೇಳುತ್ತಾರೆ. ಒಂಬತ್ತು ಜಿಲ್ಲೆಗಳಲ್ಲಿ ಸರ್ವೆ ಆಗಿರುವ ಇನಾಂ ಗ್ರಾಮಗಳನ್ನು ತೆಗೆದುಕೊಳ್ಳುವುದಾಗಿ ನೋಟಿಫಿಕೇಷನ್ ಹೊರಡಿಸಿದ್ದಾರೆ; ಒಂಬತ್ತು ಜಿಲ್ಲೆಗಳ ಹೆಸರುಗಳೂ ನಮೂದಾಗಿವೆ. ಅಕ್ಟೋಬರ್ ಎರಡರಿಂದ ಜಾರಿಗೆ ಬರುತ್ತದೆಂದು ಹೇಳಿ ಒಂಬತ್ತು ಜಿಲ್ಲೆ ಹೆಸರುಗಳನ್ನು ಸೂಚಿಸಿರುವಾಗ ಒಬ್ಬ ಡೆಪ್ಯುಟಿ ಕಮಿಷನರನ್ನು ಮೂರು ಡಿಸ್ಟ್ರಿಕ್ಟುಗಳಿಗಾಗಿ ನೇಮಕ ಮಾಡುತ್ತೇವೆಂದು ಹೇಳುತ್ತಾರೆ. ಅವರ ಸಹಾಯಕ್ಕೆ ಮೂರು ಜನ ಅಮಲ್ದಾರರನ್ನು ತೆಗೆದುಕೊಳ್ಳುತ್ತಾರೆ. ಒಂದೊಂದು ಜಿಲ್ಲೆಗೆ ಒಬ್ಬ ಅಮಲ್ದಾರರು ಬೇಕೆಂದು ಹೇಳಿದ್ದಾರೆ. ಮೂರು ಜಿಲ್ಲೆಗಳ ಅಮಲ್ದಾರರು ಮಾಡುವ ಕೆಲಸವನ್ನು ಒಬ್ಬ ಡೆಪ್ಯುಟಿ ಕಮಿಷನರು ನೋಡಿಕೊಳ್ಳಬೇಕು. ಈಗ ಹಾಲಿ ಇರುವ ಡೆಪ್ಯುಟಿ ಕಮಿಷನರುಗಳಿಗೆ ಆ ಕೆಲಸ ನೋಡಿಕೊಳ್ಳಲು ಸಾಧ್ಯವಿಲ್ಲವೆ, ಹಾಗೆ ಅವರೇ ನೋಡಿಕೊಂಡು ಕಡಮೆ ಖರ್ಚಿನಲ್ಲಿ ಈ ಕೆಲಸ ನಡೆಸಲು ಆಗುವುದಿಲ್ಲವೆ ಎಂಬುದನ್ನು ಪರ್ಯಾಲೋಚಿಸಬೇಕು. ಈಗ ಮೊದಲು ಮೂರು ಜಿಲ್ಲೆಯ ಇನಾಂ ಗ್ರಾಮಗಳನ್ನು ತೆಗೆದುಕೊಂಡು ಕ್ರಮಕ್ರಮವಾಗಿ ಆಮೇಲೆ ಬೇರೆ ಜಿಲ್ಲೆ ಇನಾಂ ಗ್ರಾಮ ತೆಗೆದುಕೊಳ್ಳುವುದಾದರೆ ಕೆಲಸ ನಿಧಾನವಾಗುತ್ತದೆ. ಅಕ್ಟೋಬರ್ ಎರಡರಿಂದ ಜಾರಿಗೆ ಬರಬೇಕಾದರೆ ಎಲ್ಲಾ ಜಿಲ್ಲೆಗಳಲ್ಲೂ ತಕ್ಕ ಏರ್ಪಾಡನ್ನು ಮಾಡಿರಬೇಕು. ಅದನ್ನು ಮಾಡಿದ್ದಾರೆಯೆ ಎಂಬುದು ಗೊತ್ತಾಗುವುದಿಲ್ಲ. ಇದನ್ನೂ ತಿಳಿಸಬೇಕು.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನಾನು ಈ 11ನೆಯ ನಂಬರಿನ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಈಗಾಗಲೆ ಸರ್ಕಾರದಿಂದ ಕೆಲವು ವಿವರಣೆಗಳನ್ನು ಕೇಳಿದ್ದಾರೆ. ಅದರ ಜೊತೆಗೆ ನಾನು ಈ ಸಂದರ್ಭದಲ್ಲಿ ಇನಾಂ ರದ್ದಿಯಾತಿ ಬಗ್ಗೆ ಸರ್ಕಾರದ ಕರ್ತವ್ಯಲೋಪ ಮತ್ತು ಔದಾಸೀನ್ಯ ಮನೋಭಾವ ಇವುಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ನಾವು ಆ ರೈತರುಗಳ ಕುಂದುಕೊರತೆಗಳ ಬಗ್ಗೆ ಇದೇ ಸಭೆಯಲ್ಲಿ ಅನೇಕ ವೇಳೆ ಎಷ್ಟೋ ವಿಚಾರಗಳನ್ನು ತಿಳಿಸಿರುತ್ತೇವೆ. ಈ ದಿವಸ ಮುಖ್ಯವಾಗಿ ಆ ಜಹಗೀರ್‌ದಾರರ ಮತ್ತು ಇನಾಂದಾರರ ಗ್ರಾಮದಲ್ಲಿ ವಾಸಿಸುತ್ತಿರುವ ರೈತರ ಗೋಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆ ರೈತರು ಅಲ್ಲ ಯಾವ ಒಂದು ಅಭಿವೃದ್ಧಿ ಕೆಲಸ ಮಾಡುವುದಕ್ಕೂ ಸಾಧ್ಯವಾಗುವುತ್ತಿಲ್ಲ. ಈ ಇನಾಂ ಗ್ರಾಮಗಳೆಲ್ಲಾ ಬಹಳ ಹಿಂದುಳಿದಂಥಾ ಪ್ರದೇಶಗಳಾಗಿರುತ್ತವೆ ಎಂದು ಅನೇಕ ಸಾರ್ತಿ ಎಷ್ಟೋ ಸಬ್‌ಜೆಕ್ಟುಗಳನ್ನು ನಾವೇ ಈ ಸಭೆಯ ಮುಂದೆ ತಂದಿದ್ದೇವೆ. ಅಷ್ಟು ವರ್ಷಗಳ ಕೂಗು ಕೇಳಿದನಂತರ ಸರ್ಕಾರದವರು ಇವರ ತೊಂದರೆಗಳನ್ನು ನಿವಾರಣೆ ಮಾಡುತ್ತೇವೆಂದು ಎರಡು ಬಗೆಯಾದ ಕಾನೂನುಗಳನ್ನು ಸಹ ಮಾಡಿದರು. ಆಪೈಕಿ ಒಂದು ದೇವಾದಾಯ ರದ್ದಿಯಾತಿ ಕಾನೂನು ಮತ್ತೊಂದು ವ್ಯಕ್ತಿಸಂಬಂಧವಾದಂಥಾ ಇನಾಂ ರದ್ದಿಯಾತಿ ಕಾನೂನು ಎಂದು ಮಾಡಿದ್ದರು. ಹೀಗೆ ಈಗಾಗಲೇ ಕೆಲವು ಕಾನೂನುಗಳನ್ನು ಈ ಸಂಬಂಧವಾಗಿ ಕಡತಕ್ಕೇರಿಸಲಾಗಿದೆ. ಆದರೆ ಇತ್ತೀಚೆಗೆ ವಿದ್ಯಾಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಎಲ್ಲೋ ಒಂದು ಸಂದರ್ಭದಲ್ಲಿ ಭಾಷಣ ಮಾಡುತ್ತಿದ್ದಾಗ ಈ ಇನಾಂ ರದ್ದಿಯಾತಿ ಕಾನೂನು ದೇಶಾದ್ಯಂತವೂ ಜಾರಿಗೆ ಬರಬೇಕಾಗಿದ್ದರೆ ಇನ್ನೂ 5 ವರ್ಷಗಳ ಮೇಲೆ ಬೇಕಾಗುತ್ತದೆಂದು ಹೇಳಿದ್ದಹಾಗೆ ನನಗೆ ಜ್ಞಾಪಕವಿದೆ. ಅವರ ಭಾಷಣ ಆ ರೀತಿ ಇತ್ತೆಂದು ನಾನು ಎಲ್ಲಿಯೋ ಒಂದಾವರ್ತಿ ಓದಿದ ಜ್ಞಾಪಕವಿದೆ. ಈ ಧೋರಣೆಯನ್ನು ನೋಡಿದರೆ ಸರ್ಕಾರದಲ್ಲೇ ಈ ಇನಾಂದಾರರೂ ಮತ್ತು ಜಹಗೀರ್‌ದಾರರೂ ಇದ್ದಾರೋ ಏನೋ, ಅದರಿಂದ ಸರ್ಕಾರಕ್ಕೆ ಈ ಕಾನೂನನ್ನು ಸ್ವಾಗತಿಸಲು ಇಷ್ಟವಿಲ್ಲವೇನೋ ಅನ್ನುವ ಹಾಗೆ ಕಾಣುತ್ತದೆ. ಆ ಜಹಗೀರ್‌ದಾರರು ಇದೇ ಮಂತ್ರಿಮಂಡಲದಲ್ಲಿದ್ದರೂ ಇರಬಹುದು, ಆದರೆ ಆಬಗ್ಗೆ ಸ್ವಲ್ಪ ಸಂಶಯವಿರುವುದಾದರೂ ಈ ಸಭೆಯಲ್ಲಂತೂ ಇದ್ದೇ ಇದ್ದಾರೆ ಎಂದು ಹೇಳಿದರೆ ಅದೇನೂ ಒಂದು ಆಶ್ಚರ್ಯವಾದ ವಿಚಾರವಲ್ಲ. ಈಬಗ್ಗೆ ಯಾವಾಗ ಒಂದು ಕಾನೂನನ್ನು ರಚಿಸಿದರೋ ಆಗ ಅದನ್ನು ದೇಶಾದ್ಯಂತವೂ ಕೂಡಲೇ ಜಾರಿಗೆ ತರಬೇಕಾದದ್ದು ಅತ್ಯಗತ್ಯ. ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ತಿಳಿಸಿದಂತೆ ಸಾಮಾನ್ಯವಾಗಿ ಒಂಭತ್ತು—ಹತ್ತು ಜಿಲ್ಲೆಗಳಲ್ಲೂ ಇನಾಂತಿಗಳಿರುವ ಗ್ರಾಮಗಳು ಇದ್ದೇ ಇವೆ. ಸರ್ವೆ ಆಗದಿರುವಂಥಾ ಗ್ರಾಮಗಳೂ ಇವೆ. ಹೀಗಿದ್ದಾಗ್ಯೂ ಈಗ ಸರ್ಕಾರದವರು ಸಂಸ್ಥಾನದ ಜಿಲ್ಲೆಗಳ ಪೈಕಿ ಮೈಸೂರು, ಮಂಡ್ಯ ಮತ್ತು ತುಮಕೂರು ಈ ಮೂರು ಜಿಲ್ಲೆಗಳನ್ನು ಆರಿಸಿಕೊಂಡು ಅವುಗಳಿಗೋಸ್ಕರವಾಗಿ ಒಬ್ಬ ಡೆಪ್ಯುಟಿ ಕಮಿಷನರ್ ಮತ್ತು ಮೂರು ಜನ ಅಮಲ್ದಾರರುಗಳನ್ನು ಅಕ್ಟೋಬರ್ ತಿಂಗಳು ಆಖೈರುವರೆಗೆ ನೇಮಿಸತಕ್ಕ ಬಗ್ಗೆ ಆಗತಕ್ಕಂಥ ಖರ್ಚನ್ನು ನಾವು ಈ ಕನ್ಸಾಲಿಡೇಟೆಡ್ ಫಂಡಿನಿಂದ ಕೊಟ್ಟುಕೊಂಡು ಹೋಗುತೇವೆ ಎಂದು ಏನೋ ಒಂದು ರಾಜೀಮನೋಭಾವದಿಂದ ಈ ಮನವಿಯನ್ನು ತಂದಿರುವ ಹಾಗೆ ಹೇಳಿದ್ದಾರೆ. ಆದರೆ ಸರ್ಕಾರದವರು ಕಾನೂನು ಆದ ಮೇಲೆ ಎಷ್ಟೋ ವರ್ಷಗಳು ಕಳೆದ ನಂತರ ಈಗ ಇಷ್ಟನ್ನಾದರೂ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಲೇಬೇಕು. ನಮ್ಮ ಸರ್ಕಾರದವರ ಸ್ವಭಾವ ಆ ಕುಂಭಕರ್ಣನ ಸ್ವಭಾವದಂಥಾದ್ದು. ಇವರನ್ನು ಜಾಗ್ರತಗೊಳಿಸುವುದು ಬಹಳ ಕಷ್ಟ. ಸರ್ಕಾರಕ್ಕೆ ಈ ರೈತರಬಗ್ಗೆ

ಏಕೆ ಇಂಥ ಮನಸ್ಸಿದೆಯೋ ತಿಳಿಯಲಿಲ್ಲ. ಇಷ್ಟಕ್ಕಾಗಿ ಸರ್ಕಾರದವರು ಏಕೆ ಇಂಥ ದೊಡ್ಡದೊಡ್ಡ ಘೋಷಣೆಗಳನ್ನು ಮಾಡಬೇಕಾಗಿತ್ತು? ಬಾಯಲ್ಲಿ ಹೊರಡತಕ್ಕ ಮಾತುಗಳು ಎಷ್ಟರ ಮಟ್ಟಿಗಿರುತ್ತವೆ! ಹೀಗೆ ನೋಡಿದರೆ ಸರ್ಕಾರದವರು ಆಡುವುದೂ, ಮಾಡುವುದೂ ಎಲ್ಲಾ ಒಂದು ನಾಟಕ. ಈ ನಾಟಕವೆಲ್ಲ ಏಕೆ ಬೇಕು? ತಮಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅದನ್ನಾದರೂ ಹೇಳಿಬಿಡಿ. ಆ ಇನಾಂ ಗ್ರಾಮಗಳಲ್ಲಿರುವ ರೈತರ ಕಷ್ಟಗಳು ನಿಮಗೇನೂ ಗೊತ್ತಿಲ್ಲವೆ? ತಮ್ಮ ಕಣ್ಣುಗಳೇನು ಇಂಗಿ ಹೋಗಿವೆಯೋ? ನಿಮ್ಮ ಕಿವಿಗಳೇನು ಬಿದ್ದುಹೋಗಿವೆಯೇ? ನೀವು ಏಕೆ ಹೀಗೆ ಮಾತಾಡುತ್ತಿದ್ದೀರಿ ಅನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಆದರೆ ಈಗ ನಾನು ಒಂದು ವಿಷಯವನ್ನು ಸರ್ಕಾರದವರಿಂದ ಖಚಿತವಾಗಿ ತಿಳಿದುಕೊಳ್ಳಬೇಕೆಂದು ಆಶಿಸಿದ್ದೇನೆ. ಒಂದು—ಈ ವಿಚಾರದಲ್ಲಿ ಸರ್ಕಾರದವರ ನಿಜವಾದ ಅಭಿಮತವೇನು ಎನ್ನುವುದು ಇನ್ನೂ ನನಗೆ ಗೊತ್ತಾಗಿರುವುದಿಲ್ಲ. ಈ ವಿಚಾರದಲ್ಲಿ ಹೀಗೆ ಏನೋ ಒಂದು ಹೇಳುತ್ತಾ ಇವರ ಕಣ್ಣುಗಳನ್ನು ಒರೆಸಿಬಿಟ್ಟರಾಯಿತು ಎನ್ನುವ ಉದ್ದೇಶವೇ ಇವರದು? ಅಥವಾ ಏನಾದರೂ ಮಾಡಿ ತಮ್ಮ ಕರ್ತವ್ಯವ ನಿರ್ವಹಿಸಲೇಬೇಕು ಎನ್ನುವ ಉದ್ದೇಶ ಇವರಿಗಿದೆಯೋ? ಈ ವಿಚಾರಗಳ ಬಗ್ಗೆ ಇವರ ಮನೋಭಿಪ್ರಾಯ ಯಾವ ರೀತಿಯಾಗಿದೆ ಎನ್ನುವುದನ್ನು ಅವರು ತಿಳಿಸಬೇಕೆಂಬುದಾಗಿ ನಾನು ಈ ಸಂದರ್ಭದಲ್ಲಿ ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪಾಪಣ್ಣ (ಚಿಕ್ಕಬಳ್ಳಾಪುರ-ಶಿಡ್ಲಘಟ್ಟ).—ಮಾನ್ಯ ಅಧ್ಯಕ್ಷರೇ, ಈ ಮಸೂದೆ ನಮ್ಮ ಶಾಸನ ಸಭೆಯಲ್ಲೇ ಚರ್ಚೆ ಆಗಿ ಇದು ಇಲ್ಲೇ ಪಾಸಾಗಿ ಆಕ್ಟಾಗಿದ್ದರೂ ಸಹ ಇದನ್ನು ಇಲ್ಲಿಯವರೆಗೂ ದೇಶದಲ್ಲಿ ಜಾರಿಗೆ ತಾರದಿರುವುದರಿಂದ ಇನಾಂ ಗ್ರಾಮಗಳಲ್ಲಿರತಕ್ಕ ರೈತರ ತೊಂದರೆ ಇಷ್ಟೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ದಿವಸ ಅನೇಕ ಜೋಡೀದಾರರು ಜೋಡೀ ಗ್ರಾಮಗಳಲ್ಲಿ ಜಮೀನುಗಳನ್ನು ಮಾರಾಟ ಮಾಡುತ್ತಿದ್ದಾರೆ. ಅವುಗಳನ್ನು ಜಮೀನಿರುವ ಮತ್ತು ಜಮೀನು ಇಲ್ಲದ ರೈತರುಗಳು ಕೊಂಡುಕೊಳ್ಳುತ್ತಿದ್ದಾರೆ. ಡೆಪ್ಯುಟೀ ಕಮೀಷನರ ಅನುಮತಿಯನ್ನು ಪಡೆಯದೆ ಗೋಮಾಳ ಇತ್ಯಾದಿ ಜಮೀನುಗಳನ್ನು ಸಹ ಜೋಡೀದಾರರು ಮಾರಾಟ ಮಾಡಿ ಹೋಗುತ್ತಿದ್ದಾರೆ. ಇಂಥಾ ಗ್ರಾಮಗಳನ್ನು ನಾಳೆ ಸರ್ಕಾರ ತನ್ನ ವಶಕ್ಕೆ ತೆಗೆದು ಕೊಂಡಾಗ ದನಕರುಗಳಿಗೆ ಮೇಯಲು ಸ್ಥಳ ಕೊಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದರೆ ಸರ್ಕಾರದವರು ಹೇಳಬಹುದು. ನಾವು ಒಂದು ಕಾನೂನನ್ನೂ ಮಾಡಿದ್ದೇವೆ. ಅದಕ್ಕನುಸಾರವಾಗಿ ಜಿಲ್ಲಾಧಿಕಾರಿಗಳ ಅನುಮತಿ ಪಡೆಯದೆ ಜಮೀನುಗಳನ್ನು ಯಾರೂ ಮಾರಬಾರದು ಯಾರೂ ಕೊಳ್ಳಲೂ ಬಾರದು ಎಂಬುದಾಗಿ ಕಾನೂನು ಮಾಡಿದ್ದೇವೆ ಎಂದು. ಜಮೀನನ್ನು ಸಂಪಾದನೆ ಮಾಡಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಈ ಬಗ್ಗೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಒಂದು ದಾಖಲೆಯಿದ್ದರೆ ಸಾಕು ಮುಂದೆ ನೋಡಿಕೊಳ್ಳೋಣ ಎಂದು ಜನರು ಧಾರಾಳವಾಗಿ ದುಡ್ಡು ಕೊಟ್ಟು ಜಮೀನುಗಳನ್ನು ಆ ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೇನೇ ಕೊಂಡುಕೊಳ್ಳುತ್ತಿದ್ದಾರೆ. ಜಮೀನನ್ನು ಒಂದು ಸಾವಿರ ರೂಪಾಯಿಗಳಿಗೆ ಮಾರಿದಾಗ್ಯೂ ಕ್ರಯ ಪತ್ರದಲ್ಲಿ ಕೇವಲ ನೂರು ರೂಪಾಯಿಗಳನ್ನು ಮಾತ್ರ ನಮೂದಿಸುತ್ತಿದ್ದಾರೆ. ಹೀಗೆ ರೈತರನ್ನು ಜೋಡೀದಾರರು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ನಾಳೆ ದಿವಸ ಸರ್ಕಾರದವರು ಈ ಗ್ರಾಮಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ ಅವರಿಗೆ ಸರಿಯಾದ ಪರಿಹಾರ ಸಹ ಸಿಕ್ಕುವುದಿಲ್ಲ. ಇತ್ತಲಾಗಿ ಸರ್ಕಾರಕ್ಕೆ ಸರಿಯಾಗಿ ಸ್ಟ್ಯಾಂಪ್ ಫೀಜೂ ಸಹ ಬರುತ್ತಿಲ್ಲ. ಏನಾದರೂ ಆಗಲಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲೆಯಿದ್ದರೆ ಸಾಕೆಂದು ಅನೇಕರು ಜಮೀನುಗಳನ್ನು ಕ್ರಯಕ್ಕೆ ಕೊಂಡಿರುತ್ತಾರೆ. ಈ ಬಗ್ಗೆ ತಮಗೆ ಸತ್ಯಾಂಶ ಬೇಕಾಗಿದ್ದರೆ ಸಬ್‌ರಿಜಿಸ್ಟ್ರಾರ್ ಆಫೀಸುಗಳಿಂದ ಅಂಕೀ ಅಂಶಗಳನ್ನು ತರಿಸಿಕೊಂಡರೆ ಆಗ ತಮಗೇ ಇದೆಲ್ಲವೂ ವೇದ್ಯವಾಗುತ್ತದೆ. ಹೀಗೆ ಮಾರಾಟ ಮಾಡುವುದನ್ನಾದರೂ ತಾವು ಕೂಡಲೇ ಕಡೆಗಟ್ಟಬೇಕು.

ಮತ್ತೊಂದು ತೊಂದರೆ ಏನೆಂದರೆ, ಜೋಡೀ ಗ್ರಾಮದಲ್ಲಿರತಕ್ಕ ರೈತರಿಗೆ ಸರ್ಕಾರದಿಂದ ಸಾಲ ವಗೈರೆ ಏನೂ ದೊರೆಯುವ ಹಾಗಿಲ್ಲ. ಈ ಹಿಂದೆ ಮಂತ್ರಿಗಳು ಅವರಿಗೂ ಸಹ ಈ ರಿಯಾಯಿತಿಗಳು ದೊರೆಯುವಂತೆ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಅದನ್ನು ಇನ್ನೂ ಈಡೇರಿಸಿಲ್ಲ. ಹೀಗೆ ಸರ್ಕಾರ ಅವರಿಗೆ ನೆರವನ್ನೂ ನೀಡದೆ ಅತ್ತ ಆ ಗ್ರಾಮಗಳನ್ನೂ ತೆಗೆದುಕೊಳ್ಳದೆ ಹೀಗೆ ನಿಧಾನ ಮಾಡುತ್ತಾ ಹೋದರೆ ಆ ರೈತರ ಗತಿ ಏನಾಗಬೇಕು? ಆದಕಾರಣ ಆ ರೈತರ ಹಿತ ದೃಷ್ಟಿಯಿಂದ ತಾವು ಕೂಡಲೇ ಅವರಿಗೆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತರುಗಳಿಗೆ ನೀಡುತ್ತಿರುವಂಥ ಎಲ್ಲ ಸೌಕರ್ಯಗಳನ್ನೂ ನೀಡಬೇಕೆಂದೂ—ಜಾಗ್ರತೆ ಇವುಗಳನ್ನೆಲ್ಲ ಸರ್ಕಾರ ತಮ್ಮ ಕೈಗೆ ತೆಗೆದು ಕೊಳ್ಳಬೇಕೆಂದೂ ಮನವಿ ಮಾಡಿಕೊಳ್ಳುತ್ತೇನೆ.

Sri H. C. LINGA REDDY (Malur).—Sir, it was only very recently we heard that the Government would be implementing the Inams Abolition Act in the surveyed and settled villages. But I consider the implementation of the Inams Abolition Act is more urgently needed in other villages which are not surveyed and settled because it is in these unsurveyed and unsettled villages that the relationship between the landlord and tenants is more strained. It is here that we find a good deal of litigation between the tenants and landlords and rights of both the landlords and tenants are indefinite and unsettled. In spite of it we hear the Government taking action only in the settled and surveyed villages and not in the unsettled and unsurveyed villages.

Again, Sir, this demand confines itself to only three districts, Myosre, Mandya and Tumkur. I do not know what the Government propose to do with regard to Kolar and many other districts where this problem is more acute than in Bangalore, Mysore or Mandya District. The remedy is to be given to those

(SRI H. C. LINGA REDDY.)

places where there is disease. I do not mean to say that this should not be extended to these three districts but at the same time we have to see that the Inams Abolition Act is implemented not only in surveyed and settled villages but also in other villages very early. In fact the Inams Abolition Act was passed two years ago and it got stuck up in the Government of India for those two years and during this long period I do not know why the Government have not been sufficiently alive to the urgency and have not introduced the measure. Therefore I strongly urge that the Inams Abolition Act has to be introduced not merely in these three districts but to other districts also where survey and settlement has not been introduced. We have now about 2100 jodi villages in the State and out of this 700 have been surveyed and settled 1,400 still remain to be surveyed and settled. Now if the Act were to be introduced only in these 700 villages, the remaining 1,400 villages will not have the benefit of this Act. Now what is happening in these 1,400 villages is, landlords have been alienating the lands and have been evicting the tenants and if you were to introduce this Inams Abolition Act in these villages very late after all the havocs have been done by the inamdars to the tenants, I am afraid the very object of the Inams Abolition Act will be frustrated and it will be something like closing the stable after the horse is stolen. Therefore, I urge the Government to see that urgent action is taken and relief given to the tenants.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲು).—ಸ್ವಾಮಿ, ನಾನು ಎಲ್ಲರೂ ಹೇಳಿದ್ದನ್ನೇ ಹೇಳುವುದಕ್ಕೆ ಹೋಗುವುದಿಲ್ಲ, ಈಗ ಸರ್ಕಾರದವರು ಯಾವ ಯಾವ ಜಿಲ್ಲೆಯಲ್ಲಿ ಸರ್ವೆ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೋ ಅಂಥ ಕಡೆಗಳಲ್ಲಿ ಆ ಸರ್ವೆ ಕೆಲಸ ಯಾವರೀತಿ ನಡೆಯುತ್ತಿದೆ, ಅಲ್ಲಿ ಸರ್ವೆ ಕೆಲಸಕ್ಕೆ ಏನು ಏರ್ಪಾಡಾಗಿದೆ ಎನ್ನುವುದನ್ನು ಈಗ ನಾನು ಈ ಸಭೆಯ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಎರಡು ಮಾತನ್ನು ಆಡಲಿಚ್ಛಿಸುತ್ತೇನೆ: ಸರ್ವೆ ಕೆಲಸಕ್ಕೆ ಹೋಗತಕ್ಕಂಥ ಅಧಿಕಾರಿಗಳು ಈ ಹೊತ್ತು ಸಂಪೂರ್ಣವಾಗಿ ಇನಾಂದಾರರ ಕೈವಾಡಕ್ಕೆ ಸಿಕ್ಕಿ ಬಿದ್ದಿದ್ದಾರೆ. ಈ ದಿವಸ ನಮ್ಮ ತಾಲ್ಲೂಕಿನಲ್ಲಿ ಸರ್ವೆ ಕೆಲಸ ನಡೆಯುತ್ತಿದೆ, ನಮ್ಮ ಕುಣಿಗಲ್ ತಾಲ್ಲೂಕು ಜೋಡಿ ಚನ್ನಾಪುರ ಎಂಬ ಗ್ರಾಮದಲ್ಲಿ ಈ ಸರ್ವೆ ಕೆಲಸ ಎಷ್ಟರಮಟ್ಟಿಗೆ ನಡೆಯುತ್ತಿದೆ; ಆ ಗ್ರಾಮದ ರೈತರಿಗೆ ಈ ಸರ್ಕಾರದವರಿಂದ ರಕ್ಷಣೆ ಎಷ್ಟರಮಟ್ಟಿಗೆ ಸಿಕ್ಕುತ್ತಿದೆ ಎನ್ನುವ ಬಗ್ಗೆ ಕೆಲವು ಅಂಶಗಳನ್ನು ಈಗ ತಿಳಿಸಬೇಕೆಂದಿರುತ್ತೇನೆ. ಈ ದಿವಸ ಸರ್ವೆ ಪರಿಣಾಮದಿಂದ ಸುಮಾರು ಒಂದು ಸಾವಿರ ಜನರು ತಮ್ಮ ಜಮೀನನ್ನು ಕಳೆದುಕೊಂಡು ಬೀದಿಯ ಭಿಕಾರಿಗಳಾಗಿದ್ದಾರೆ. ಅಂಥಾ ಜನರನ್ನೆಲ್ಲಾ ಈ ದಿವಸ ಆ ಊರಿನಿಂದಲೇ ಆಚೆಗೆ ಓಡಿಸಿಬಿಡಬೇಕೆಂಬ ಪ್ರಯತ್ನಗಳನ್ನು ಕೂಡ ನಡೆಸುತ್ತಿದ್ದಾರೆ. ಇದಕ್ಕೆಲ್ಲಾ ಸಹಾಯಗಳನ್ನು ಸರ್ವೆ ಇಲಾಖೆಯವರು ಇನಾಂದಾರರಿಗೆ ಒದಗಿಸುತ್ತಿದ್ದಾರೆ. ರೈತರು ತಮ್ಮ ಹಕ್ಕುಬಾಧ್ಯತೆಗಳನ್ನು ದೃಢಪಡಿಸಿಕೊಳ್ಳಲು ಎಷ್ಟೇ ಪ್ರಯತ್ನ ಮಾಡಿದಾಗ್ಯೂ ಈ ಸರ್ವೆ ಇಲಾಖೆಯವರು ಅದನ್ನು ತಳ್ಳಿಹಾಕಿರುವ ನಿದರ್ಶನಗಳನ್ನು ನಾವು ಕಣ್ಣಾರೆ ನೋಡಿದ್ದೇವೆ. ಈ ದಿವಸ ಸರ್ಕಾರ ಅನ್ನುವುದೊಂದು ಇದೆಯೋ ಇಲ್ಲವೋ ಎಂಬ ಅನುಮಾನ ಉಂಟಾಗತಕ್ಕ ರೀತಿಯಲ್ಲಿ ಅವರು ವರ್ತಿಸುತ್ತಿದ್ದಾರೆ. ಇಂಥಾ ರೀತಿಯ ಸರ್ವೆ ಆಗುವುದಾದರೆ ಅದರಿಂದ ಏನೂ ಪ್ರಯೋಜನವಿಲ್ಲ.

2 P.M.

ಈ ರೀತಿಯಾಗಿ ಸರ್ವೆ ಇಲಾಖೆಯವರು ಸರಿಯಾಗಿ ಕೆಲಸ ಮಾಡದೆ ರೈತಾಪಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ಇವರು ಸರಿಯಾದ ರೀತಿಯಲ್ಲಿ ಅವರ ಸ್ಪಷ್ಟವಾದ ಕೆಲಸವೇನಿದೆಯೋ ಆ ರೀತಿಯಾಗಿ ಮಾಡದೆ ಹೋದರೆ ಏನೂ ಪ್ರಯೋಜನವಿಲ್ಲ. ಅವರುಗಳು ಸರಿಯಾಗಿ ಕೆಲಸ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಇನಾಂ ಗ್ರಾಮಗಳಲ್ಲಿ ಸರ್ವೆಮಾಡುವ ಸಂದರ್ಭದಲ್ಲಿ ಸರ್ವೆ ಇಲಾಖೆಯವರು ಯಾವ ಕ್ರಮವನ್ನನುಸರಿಸುತ್ತಾರೆನ್ನುವ ವಿಚಾರದಲ್ಲಿ ಹೇಳುವುದಾದರೆ, ಗ್ರಾಮಾಧಿಕಾರಿಗಳು ಬರೆದಿರತಕ್ಕ ಭೂಮಿ ಮಾಲೀಕತೆಯ ರಿಜಿಸ್ಟರ್‌ಗಳಂತೆ ಫೋಡು ಮಾಡುವ ರೂಢಿ ಇರುತ್ತದೆ. ಅದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ವಿಚಾರ. ಸರ್ವೆ ಇಲಾಖೆಯವರು ಇದರಲ್ಲಿರುವ ಅಂಶಗಳನ್ನು ತಾವು ಜಮೀನು ಅಳೆಯುವುದಕ್ಕೆ ಬಂದಾಗ ತಾವು ಬರೆದುಕೊಳ್ಳುವುದಕ್ಕೆ ಮಾತ್ರ ಉಪಯೋಗಿಸುತ್ತಾರೆ. ಜಮೀನು ಯಾರದು, ಯಾರ ಹೆಸರಿನಲ್ಲಿದೆ, ಯಾರ ಜಮೀನು ಯಾರ ಹೆಸರಿಗೆ ಬರೆದಿರುತ್ತಾರೆ ಎಂಬುದನ್ನು ಅವರು ನೋಡುವುದಿಲ್ಲ. ಅವರು ಬರೆದಿರುವ ಪುಸ್ತಕದಿಂದ ತಮಗೆ ಬೇಕಾದ ವಿಷಯಗಳನ್ನು ಬರೆದುಕೊಂಡು, ಸರ್ವೆ ಕೆಲಸ ಮುಗಿಸಿಕೊಂಡು ಬರುತ್ತಾರೆ. ಈ ಸಂಬಂಧದಲ್ಲಿ ನನ್ನ ಮನಸ್ಸಿನಲ್ಲಿರುವ ಒಂದು ವಿಚಾರವೇನೆಂದರೆ ಸರ್ವೆಮಾಡುವಾಗ ಗ್ರಾಮಗಳಿಗೆ ಹೋಗುವುದಕ್ಕೆ ಮುನ್ನ ರೆವಿನ್ಯೂ ಆಫೀಸಿಗೆ ಹೋಗಿ, ಅಮಲ್ದಾರರಗಳನ್ನು ಮುಖ್ಯವಾಗಿ ಕರೆದುಕೊಂಡು ಹೋಗಿ, ಇಂಥಿಂಥ ಜಮೀನುಗಳು ಇಂಥಿಂಥವರ ಹೆಸರಿಗೆ ಬರೆದಿದ್ದಾರೆ, ಯಾವರೀತಿ ಬರೆದಿದ್ದಾರೆ ಎಂಬ ಲೆಕ್ಕಾಚಾರವನ್ನೆಲ್ಲ, ರೈತರ ಸಭೆಯನ್ನು ಸೇರಿಸಿ, ಆ ಸಭೆಯಲ್ಲಿ ಓದಿ ತಿಳಿಸಿ, ಅವರ ತೊಡಕುಗಳೇನಾದರು ಇದ್ದರೆ ಅವುಗಳನ್ನು ಕೇಳಿ ಸರಿಮಾಡುವುದಿಲ್ಲ. ಅದಕ್ಕೆ ಬದಲಾಗಿ ಇವರುಗಳು ಹಳ್ಳಿಗೆ ಹೋದಾಗ ನಾನಾಗಲೇ ಹೇಳಿದಂತೆ ಮಾಡುವುದರಿಂದ ಹಳ್ಳಿಯವರ ಅನೇಕ ತೊಡಕುಗಳು ಸ್ಥಳದಲ್ಲಿಯೇ ಪರಿಹಾರವಾಗಿ, ಆಮೇಲೆ ರೈತರು ಕೋರ್ಟಿಗೆ ಹೋಗುವುದು ತಪ್ಪುತ್ತದೆ. ನೆಲಮಂಗಲ ತಾಲ್ಲೂಕು ಜೋಡಿ ಬಾಣಸವಾಡಿ

ಗ್ರಾಮದಲ್ಲಿ ಒರಿಜಿನಲ್ ಸರ್ವೆ ಕಾಲದಲ್ಲಿ ಸರ್ವೆ ಕೆಲಸ ನಡೆದಾಗ ನಾಲ್ಕಾರು ಜನರ ಹಕ್ಕನ್ನು ತಪ್ಪಿಸಿ ಒಬ್ಬ ಜೋಡಿದಾರರು ಒಬ್ಬ ರೈತನಿಗೆ ಬರೆದರು. ಹೀಗೆ ಮಾಡುವಾಗ ಅಣ್ಣ ತಮ್ಮಂದಿರಲ್ಲಿಯೇ ಭಿನ್ನಾಭಿಪ್ರಾಯಗಳು ಹುಟ್ಟುವಂತೆ ಮಾಡಿ, ಅವರಿಬ್ಬರೂ ಜಗಳವಾಡುತ್ತಿದ್ದರೆ ತಾವು ಸುಸೂತ್ರವಾಗಿ ರೂಢಿಸಿಕೊಳ್ಳಬಹುದೆಂಬ ಮನೋಧರ್ಮಉಳ್ಳವರಾಗಿರುತ್ತಾರೆ. ಸರ್ವೆ ಇಲಾಖೆಯವರು ಮುಂಚಿತವಾಗಿ ರೈತರಿಗೆ ತಿಳಿಸಿ ಸರ್ವೆಮಾಡುವಾಗ ಯಾರ ಹಕ್ಕಿಗೆ ಧಕ್ಕೆ ಬಂದಿದೆ ಎಂದು ನೋಡಿ ಮಾಡಿಲ್ಲವೆಂದು ನನಗನ್ನಿಸುತ್ತದೆ. ಮಾಗಡಿ ತಾಲ್ಲೂಕು ತಿರುಮಳಾಪುರ ಗ್ರಾಮದಲ್ಲಿ ವೃತ್ತಿಗಳನ್ನು ಮಾರಿ ರೈತರಿಗೆ ತೊಡಕನ್ನು ತಂದು ಹಾಕಿದ್ದಾರೆ. ಸರ್ವೆ ಮಾಡುವ ಕಾಲದಲ್ಲಿ ಅವರವರ ಹಕ್ಕನ್ನು ಬರೆದುಕೊಂಡು ಆದಷ್ಟು ಜಾಗ್ರತೆ ಪರಿಶೀಲನೆಮಾಡಿ ಸರ್ವೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅವರು ಹಾಗೆ ಮಾಡದೆ ತಮಗೆ ತೋಚಿದ ರೀತಿಯಲ್ಲಿ ಬರೆದುಕೊಂಡು ಹೋಗಿ, ಬೇಕಾದರೆ ನೀವು ಕೋರ್ಟಿಗೆ ಹೋಗಿ ಎಂದು ಅನೇಕ ಜನರನ್ನು ಅನಾವಶ್ಯಕವಾಗಿ ಕೋರ್ಟಿಗೆ ಕಳುಹಿಸುತ್ತಾರೆ. ಇದನ್ನು ಕೂಡಲೇ ತಪ್ಪಿಸಬೇಕು.

ಅಲ್ಲದೆ ಇನಾಂ ಗ್ರಾಮಗಳಲ್ಲಿ ಜಮೀನು ಮಾರಾಟ ಮಾಡಬೇಕಾದರೆ ಡೆಪ್ಯುಟಿ ಕಮಿಷನರ ಗಮನಕ್ಕೆ ತಂದು ಅವರಿಂದ ಅಪ್ಪಣೆಯನ್ನು ಪಡೆಯಬೇಕಾಗಿದೆ. ಆದರೆ ಕೆಲವು ಕಡೆಗಳಲ್ಲಿ ಈ ರೀತಿ ಡೆಪ್ಯೂಟಿ ಕಮಿಷನರ ಅಪ್ಪಣೆ ಪಡೆಯದೆಯೇ ಜಮೀನುಗಳು ವಿಲೇವಾರಿಯಾಗಿವೆ. ಈ ರೀತಿಯಾಗಿ ಎಲ್ಲೆಲ್ಲೂ ನಡೆಯುತ್ತಿದೆ ಎಂದು ತಿಳಿದುಬಂದಿದೆ, ಇದು ಬಹಳ ಅಕ್ರಮವಾದದ್ದು. ಇಂಥ ವ್ಯಾಪಾರಗಳನ್ನು ಕೂಡಲೇ ಸರ್ಕಾರದವರು ನಿಲ್ಲಿಸಬೇಕು. ಬೆಂಗಳೂರು ಜಿಲ್ಲೆಯಲ್ಲಿ ನಡೆದ ಒಂದು ಸಂಗತಿಯನ್ನು ತಿಳಿಸುತ್ತೇನೆ. ನೆಲಮಂಗಲ ತಾಲ್ಲೂಕು ಭೂಸಂಧ್ರ ಗ್ರಾಮ ದಲ್ಲಿ ಒಂದು ಜಮೀನನ್ನು ಮಾರುವುದಕ್ಕೆ ಡೆಪ್ಯುಟಿ ಕಮಿಷನರ ಹತ್ತಿರ ಅಪ್ಪಣೆಯನ್ನು ತೆಗೆದುಕೊಂಡು 200-300 ವರ್ಷಗಳಿಂದಲೂ ಒಬ್ಬನು ಅನುಭವಿಸುತ್ತಿದ್ದ ಜಮೀನನ್ನು ಬೇರೆಯೊಬ್ಬರಿಗೆ ಮಾರಿದ್ದಾರೆಂದು ತಿಳಿದು ಬಂತು. ಇಂಥಾದ್ದು ಪೂರ ಅನ್ಯಾಯ. ಹೀಗೆಲ್ಲ ನಡೆಯಬಾರದು. ಆದುದರಿಂದ ಇಂಥ ಅನ್ಯಾಯಗಳೆಲ್ಲ ತಪ್ಪಬೇಕಾದರೆ ಎಲ್ಲ ಜೋಡಿ ಗ್ರಾಮಗಳನ್ನೂ ಏಕಕಾಲದಲ್ಲಿ ಸರ್ವೆ ಮಾಡುವುದಕ್ಕೆ ತೆಗೆದುಕೊಂಡು, ಒಂದು ವ್ಯವಸ್ಥಿತ ರೂಪದಲ್ಲಿ ಸರ್ವೆ ಮಾಡಿಸಬೇಕು. Batch by batch ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಸರ್ವೆಮಾಡಿಸಿದರೆ ಸರ್ವೆ ಕೆಲಸವೇನೋ ಆಗುತ್ತದೆ. ನಾನಾಗಲೇ ಹೇಳಿದಂತೆ ಸರ್ವೇಯರ್ ಅವರ ಒಂದು ಕಾರ್ಯಕ್ರಮ ಈಗ touring talkies ನಂತೆ ಇದೆ. ಬೇಗ ಮುಗಿಯುವುದಿಲ್ಲ, ತಮ್ಮ ಪ್ರೋಗ್ರಾಂ ಪ್ರಕಾರ ಪ್ರತಿ ಸ್ಥಳವಲ್ಲಿಯೂ ತಂಗಿ ಆಯಾ ಗ್ರಾಮಗಳಲ್ಲಿ ಜಮೀನುಗಳ ಬಗ್ಗೆ ತಕರಾರುಗಳೇನಾದರೂ ಇದ್ದರೆ ಅವುಗಳನ್ನು ಅಮಲ್ದಾರರ ಗಮನಕ್ಕೆ ತಂದು ಆಯಾ ಸ್ಥಳಗಳಲ್ಲಿಯೇ ಪರಿಹಾರಮಾಡುವ ಏರ್ಪಾಡನ್ನು ಮಾಡಿದರೆ ರೈತರಿಗೆ ಉಪಯೋಗವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ).—ಸ್ವಾಮಿ, ಇನಾಂ ರದ್ದಿಯಾತಿ ಬಿಲ್ಲನ್ನು ಜಾರಿಗೆ ತರಲು ನಿಧಾನ ಮಾಡುವುದರಿಂದ ಎಷ್ಟು ತೊಂದರೆಗಳಿವೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಒಂದೆರಡು ಮಾತುಗಳನ್ನಾಡುತ್ತೇನೆ. ಇನಾಂ ಗ್ರಾಮಗಳ ಕೆರೆ ಕಟ್ಟೆಗಳು ಒಡೆದು ಹತ್ತಾರು ವರ್ಷಗಳಾಗಿ ಬಹಳ ನೀರು ಫಲವತ್ತಾದ ಅಚ್ಚುಕಟ್ಟಿನ ಮೇಲೆ ಹರಿದು, ಆ ಜಮೀನೆಲ್ಲ ಕೊರೆದುಕೊಂಡು ಹೋಗಿ ದೊಡ್ಡ ಹಳ್ಳಗಳಾಗಿ ರೈತರಿಗೆ ಭಾರಿ ನಷ್ಟವಾಗಿದೆ. ಈ ಕೆರೆಗಳನ್ನು ರಿಪೇರಿಮಾಡಿಕೊಡುವ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಕೆಲವು ಸಂದರ್ಭಗಳಲ್ಲಿ ಜೋಡಿ ರೂಲ್ಸ್ ವಗೈರೆ ಏನೂ ನೋಡದೆ, ಕೆಲವು ಜೋಡಿ ಗ್ರಾಮಗಳಿಗೆ ಸೇರಿದ ಕೆರೆ ಕಟ್ಟೆಗಳನ್ನು ಮಾತ್ರ ದುರಸ್ತು ಮಾಡಿಸಿದ್ದಾರೆ; ಇನ್ನು ಕೆಲವು ಸಂದರ್ಭಗಳಲ್ಲಿ, ಕೆಲವು ಜೋಡಿಗ್ರಾಮಗಳ ಕೆರೆ ಕಟ್ಟೆಗಳನ್ನು ದುರಸ್ತು ಮಾಡಿಕೊಡಬೇಕೆಂದು ಕೇಳಿದಾಗ ಅವರ ವಿಷಯದಲ್ಲಿ ಮಾತ್ರ ಈ ಜೋಡಿ ರೂಲ್ಸ್ ಏನಿವೆಯೋ ಅವುಗಳನ್ನು ಬಲವಾಗಿ ಹಿಡಿದುಕೊಂಡು, ಜೋಡಿ ಗ್ರಾಮದ ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳ ತೊಂದರೆಗಳಾಗಿವೆ. ಉದಾಹರಣೆಗೆ ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ಮೇಡಿಹಾಳ ಎಂಬ ಗ್ರಾಮಕ್ಕೆ ಸೇರಿದ ಕೆರೆಯು ಒಡೆದುಹೋಗಿ 20 ವರ್ಷಗಳಾಗಿವೆ. ಡೆಪ್ಯುಟಿಕಮಿಷನರ್ ಅವರು ಸರ್ವೆ ಮಾಡುವುದಕ್ಕಾಗಿ 50 ರೂಪಾಯಿಗಳನ್ನು ಕೂಡ ಖಜಾನೆಗೆ ಕಟ್ಟಿಸಿಕೊಂಡರೆ, ಅದನ್ನು ಸರ್ವೆಮಾಡಿಸಿ, ಮಂಜೂರಾತಿಗೆ ಕಳುಹಿಸಿಕೊಟ್ಟರು. ರೆವಿನ್ಯೂ ಕಮಿಷನರ್ ಅವರು ಸರ್ವೇ ಸೆಟಲ್‌ಮೆಂಟ್ ಆಗುವ ವರೆಗೂ ಅದನ್ನು ಮಾಡಕೂಡದೆಂದು ಆಜ್ಞೆ ಮಾಡಿದ್ದಾರೆ. ಇಂಥ ಅನೇಕ ತೊಂದರೆಗಳಾಗುತ್ತಿವೆ. ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ತರಲು ನಿಧಾನ ಮಾಡುವುದರಿಂದ ಇನಾಂ ಗ್ರಾಮಗಳ ರೈತರಿಗೆ ಬಹಳ ತೊಂದರೆಗಳುಂಟಾಗುತ್ತಿವೆ. ಆದುದರಿಂದ ಇದನ್ನು ತಕ್ಷಣ ಜಾರಿಗೆ ಮಾಡುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವೆನ್ಯೂ ಮತ್ತು ವ್ಯವಸಾಯ ಶಾಖಾ ಮಂತ್ರಿಗಳು).—ಸ್ವಾಮಿ, ಈ ಡಿಮ್ಯಾಂಡಿನಲ್ಲಿ ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ಕೊಡಲಿಕ್ಕೆ ಅವಶ್ಯಕವಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ತಗಲತಕ್ಕ ಖರ್ಚಿನ ಬಗ್ಗೆ ತಮ್ಮ ಅಂಗೀಕಾರವನ್ನು ಕೊಡಬೇಕೆಂದು ಕೇಳಿದ್ದೇವೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ಹೇಳಿದಂತೆ ಈ ಪ್ರಪೋಸಲ್ ಬಜೆಟ್ ತಯಾರಾದ ಮೇಲೆ ಮಂಜೂರಾತಿಯನ್ನು ಪಡೆದದ್ದರಿಂದ ಈ ಸಭೆಯ ಮುಂದೆ ಬರಬೇಕಾಗಿ ಬಂತು. ನಾವು ನೂರು ರೂಪಾಯಿಗಳನ್ನು ಕೇಳಿರುವುದು ಒಂದು ಸಾಂಕೇತಿಕ ಗ್ರಾಂಟ್ ಮಾತ್ರ. ಇದಕ್ಕೆ ಸಂಬಂಧಪಟ್ಟ ಖರ್ಚನ್ನು ಆ ಇಲಾಖೆಗೆ ಒದಗಿಸಿರತಕ್ಕ ಹಣದಲ್ಲಿ ಒದಗಿಸಲು ಸಾಧ್ಯವಾಗಿರುವುದರಿಂದ ಎಷ್ಟು ಖರ್ಚಾಗುತ್ತದೆಂಬುದು ಸಂಪೂರ್ಣವಾಗಿ ಇಲ್ಲಿ ನಮೂದಾಗಿಲ್ಲ.

ಶ್ರೀಮಾನ್ ಮುನಿಸ್ವಾಮಯ್ಯನವರು ಒಟ್ಟು ಎಷ್ಟು ಖರ್ಚಾಗುತ್ತದೆ, ಎಷ್ಟು ಸಿಬ್ಬಂದಿಬೇಕು, ಎಲ್ಲ ಗ್ರಾಮಗಳನ್ನೂ ತೆಗೆದುಕೊಳ್ಳಬೇಕಾದರೆ, ಎಲ್ಲ ಗ್ರಾಮಗಳಲ್ಲಿಯೂ ಕೂಡ ಈ ಕಾನೂನನ್ನು ಜಾರಿಗೆ ಕೊಡಬೇಕಾದರೆ ಎಷ್ಟು ಖರ್ಚಾಗುತ್ತದೆ, ಮತ್ತು ಇದಕ್ಕೆ ಬೇಕಾದ ಸಿಬ್ಬಂದಿಯನ್ನೆಲ್ಲ ಏಕ ಕಾಲದಲ್ಲಿ ನೇಮಕ ಮಾಡಿಕೊಂಡು ಕೆಲಸಮಾಡಬೇಕೆಂದು ಸಲಹೆಮಾಡಿದರು. ಶ್ರೀಮಾನ್ ರಾಚಯ್ಯನವರು ಮೈಸೂರು ಜಿಲ್ಲೆಯಲ್ಲಿರುವ ಯಳಂದೂರು ಜಹಗೀರನ್ನು ಇದರಲ್ಲಿ ಸೇರಿಸಿಲ್ಲ, ಆದರಿಂದ ಬಹಳ ತೊಂದರೆಗಳಿವೆ, ಅವುಗಳನ್ನು ಸರಿಪಡಿಸುವುದು ಬಹಳ ಅವಶ್ಯಕವೆಂದು ಹೇಳಿದರು. ನಾವು ಇನಾಂ ಗ್ರಾಮಗಳಿಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡುವುದಾದರೆ, ಸಂಸ್ಥಾನದಲ್ಲಿ ಒಟ್ಟು 2106 ಇನಾಂ ಗ್ರಾಮಗಳಿವೆ, ಇವುಗಳಪೈಕಿ 1347 ಗ್ರಾಮಗಳ ಸರ್ವೆ ಆಗಿಲ್ಲ; 759 ಗ್ರಾಮಗಳ ಸರ್ವೆ ಆಗಿದೆ. ಅವುಗಳಪೈಕಿ ಜಿಲ್ಲಾ ವಾರು ಸಂಖ್ಯೆ ಈ ರೀತಿಯಿದೆ. ಬೆಂಗಳೂರು ಜಿಲ್ಲೆಯಲ್ಲಿರುವ 636 ಗ್ರಾಮಗಳ ಪೈಕಿ 475 ಸರ್ವೆ ಆಗಿಲ್ಲ; 161 ಸರ್ವೆ ಆಗಿ, 113 ಗ್ರಾಮಗಳು ನೋಟಿಫೈ ಆಗಿವೆ. ಕೋಲಾರ ಜಿಲ್ಲೆಯ 590 ಗ್ರಾಮಗಳಪೈಕಿ 523 ಸರ್ವೆ ಆಗಿಲ್ಲ; 67 ಸರ್ವೆ ಆಗಿ, 31 ಗ್ರಾಮಗಳು ನೋಟಿಫೈ ಆಗಿವೆ. ತುಮಕೂರು ಜಿಲ್ಲೆಯ 193 ಗ್ರಾಮಗಳ ಪೈಕಿ 125 ಸರ್ವೆ ಆಗಿಲ್ಲ, 68 ಸರ್ವೆ ಆಗಿ 34 ಗ್ರಾಮಗಳು ನೋಟಿಫೈ ಆಗಿವೆ. ಮೈಸೂರು ಜಿಲ್ಲೆಯ 200 ಗ್ರಾಮಗಳಲ್ಲಿ 36 ಸರ್ವೆ ಆಗಿಲ್ಲ, 164 ಸರ್ವೆ ಆಗಿವೆ, ಇದರಲ್ಲಿ ಮೊದಲನೆಯ ಸಲ 111 ಗ್ರಾಮಗಳು ನೋಟಿಫೈ ಆಗಿವೆ. ಇನ್ನೂ 27 ಗ್ರಾಮಗಳನ್ನು ಸಹ ನೋಟಿಫೈ ಮಾಡುವುದಕ್ಕೆ ಆಜ್ಞೆಯಾಗಿದೆ. ಬಹುಶಃ ನೋಟಿಫಿಕೇಷನ್ ಇಷ್ಟೊ ಆಗಿರಬೇಕು; ಅಥವಾ ಇಷ್ಟರಲ್ಲಿಯೇ ಆಗುತ್ತದೆ. ಮಂಡ್ಯ ಜಿಲ್ಲೆಯ 139 ಗ್ರಾಮಗಳಪೈಕಿ 29 ಸರ್ವೆಯಾಗಿಲ್ಲ, 110 ಸರ್ವೆ ಆಗಿ 71 ಗ್ರಾಮಗಳು ನೋಟಿಫೈ ಆಗಿವೆ. ಹಾಸನ ಜಿಲ್ಲೆಯ 178 ಗ್ರಾಮಗಳಪೈಕಿ 86 ಗ್ರಾಮಗಳ ಸರ್ವೆ ಆಗಿಲ್ಲ, 92 ಸರ್ವೆಯಾಗಿ 43 ಗ್ರಾಮಗಳು ನೋಟಿಫೈ ಆಗಿವೆ. ಶಿವಮೊಗ್ಗ ಜಿಲ್ಲೆಯ 75 ಗ್ರಾಮಗಳ ಪೈಕಿ 35 ಸರ್ವೆ ಆಗಿಲ್ಲ, 40 ಸರ್ವೆಆಗಿ 6 ಗ್ರಾಮಗಳು ನೋಟಿಫೈ ಆಗಿವೆ. ಚಿತ್ರದುರ್ಗ ಜಿಲ್ಲೆಯ 36 ಗ್ರಾಮಗಳ ಪೈಕಿ 20 ಸರ್ವೆ ಆಗಿಲ್ಲ, 16 ಸರ್ವೆ ಆಗಿ 11 ಗ್ರಾಮಗಳು ನೋಟಿಫೈ ಆಗಿವೆ. ಚಿಕ್ಕಮಗಳೂರು ಜಿಲ್ಲೆಯ 59 ಗ್ರಾಮಗಳಪೈಕಿ 18 ಸರ್ವೆ ಆಗಿಲ್ಲ, 41 ಸರ್ವೆ ಆಗಿ 3 ಗ್ರಾಮಗಳು ನೋಟಿಫೈ ಆಗಿವೆ. ಒಟ್ಟು ಸರ್ವೆ ಆಗಿರುವ 759 ಗ್ರಾಮಗಳಪೈಕಿ 450 ಗ್ರಾಮಗಳನ್ನು ನೋಟಿಫೈ ಮಾಡಲಾಗಿದೆ. ಇನ್ನೂ 310 ಗ್ರಾಮಗಳನ್ನು ಮಾಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸರ್ವೆ ಆಗಿ ಸೆಟಲ್‌ಮೆಂಟ್ ಆಗದೆ ಬಾಕಿ ಇರುವ ಗ್ರಾಮಗಳೆಷ್ಟಿವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ವೆ ಅಂಡ್ ಸೆಟ್ಲ್‌ಮೆಂಟ್ ಎಲ್ಲಿ ಪೂರ್ತಿಯಾಗಿರುವ ಗ್ರಾಮಗಳ ಸಂಖ್ಯೆಯನ್ನು ಮಾತ್ರ ನಾನು ಹೇಳಿದ್ದೇನೆ. ಬಾಕಿ ವಿವರಗಳು ಈಗ ನನ್ನಮುಂದೆ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಕೊಡುತ್ತೇನೆ. ಸರ್ವೆ ಸೆಟಲ್‌ಮೆಂಟ್ ಆಗಿರುವ 759 ಗ್ರಾಮಗಳಲ್ಲಿ ಕೇವಲ 450 ಗ್ರಾಮಗಳನ್ನು ನೋಟಿಫೈ ಮಾಡಿದ್ದೀರಿ. ಉಳಿದ ಗ್ರಾಮಗಳನ್ನು ಯಾತಕ್ಕೋಸ್ಕರ ನೋಟಿಫೈ ಮಾಡಿಲ್ಲವೆಂದು ಕೆಲವರು ಕೇಳಿದರು. ಇದರಲ್ಲಿ ನಮಗಿರುವ ತೊಂದರೆ ಏನೆಂದರೆ mixed inams, ಸಮಸ್ಯೆಷ್ಟಿ, ದೇವದಾಯ ಇತ್ಯಾದಿ ಮಿಶ್ರಣವಾಗಿರುವುದರಿಂದ ಸ್ವಲ್ಪ ಪರಿಶೀಲನೆಮಾಡಿ ನೋಟಿಫೈ ಮಾಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದೇವೆ. ಆದ್ದರಿಂದ ಇವುಗಳನ್ನು ಸಾಧ್ಯವಾದಷ್ಟು ಬೇಗ ನೋಟಿಫೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ಮೇಲೆ ಈಗ ಕೇಳಿರುವ ಸಿಬ್ಬಂದಿ 450 ಗ್ರಾಮಗಳಿಗೂ ಕೂಡ ಸಾಕಾಗುತ್ತದೆಯೇ! ಇನ್ನೂ ಒಬ್ಬ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿಕೊಂಡು ಬೇರೆ ಹೆಡ್‌ಕ್ವಾರ್ಟರ್ಸ್ ಮಾಡಿಕೊಂಡು ಯಾಕೆ ಕೆಲಸವನ್ನು ಮಾಡಬಾರದೆಂದು ಹೇಳಿದರು. ಈಗ ವ್ಯವಸ್ಥೆಮಾಡಿರುವ ಪ್ರಕಾರ ಪ್ರತಿ 50 ಗ್ರಾಮಗಳಿಗೂ ಒಬ್ಬ ಅಮಲ್ದಾರ್ ಬೇಕು. ಒಬ್ಬ ಅಮಲ್ದಾರರಿಗೆ ಇಬ್ಬರು ರೆವೆನ್ಯೂ ಇನ್‌ಸ್ಪೆಕ್ಟರುಗಳೂ, ಒಬ್ಬ ಮೊದಲನೆ ದರ್ಜೆ ಗುಮಾಸ್ತೆ, ಇಬ್ಬರು ಎರಡನೆ ದರ್ಜೆ ಗುಮಾಸ್ತರು, ಒಬ್ಬ ಅಟೆಂಡರ್ ಮತ್ತು ಮೂರುಜನ ಜವಾನರು ಬೇಕು ಎಂದು ನಿರ್ಧಾರಮಾಡಿದ್ದೇವೆ. ಒಬ್ಬ ಜಿಲ್ಲಾಧಿಕಾರಿಗಳನ್ನು ಮಾರ್ಚಿ ತಿಂಗಳು 17ನೇ ತಾರೀಖು ನೇಮಕ ಮಾಡಲಾಯಿತು. ಒಬ್ಬ ಅಮಲ್ದಾರರನ್ನೂಸಹ ಅವಾಗ ನೇಮಕ ಮಾಡಲಾಯಿತು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಾರ್ಚಿ 17ರಲ್ಲಿ ಸರ್ಕಾರಿ ಹುಕುಂ ಆದಮೇಲೆ ತಾನೆ ಜಿಲ್ಲಾಧಿಕಾರಿಗಳನ್ನು ನೇಮಕಮಾಡುವುದು? ಹಾಗಿರುವಾಗ ಮಾರ್ಚಿ ತಿಂಗಳಲ್ಲೇ ಏಕೆ ಬಡ್ಜೆಟ್ಟಿನಲ್ಲಿ ಈ ಸಂಬಂಧವಾದ ಖರ್ಚನ್ನು ಸೇರಿಸಲಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರಣ ಇಷ್ಟೆ: ಬಡ್ಜೆಟ್ಟೆಲ್ಲಾ ಫೆಬ್ರವರಿ ಆಖೈರಿನಲ್ಲಿ ಫೈನಲೈಸ್ ಆಗುತ್ತದೆ. ಆದ್ದರಿಂದ ಮಾರ್ಚಿ 17ರಲ್ಲಿ ಆರ್ಡರಾದುದನ್ನು ಬಡ್ಜೆಟ್ಟಿನಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. 450 ಗ್ರಾಮಗಳಿಗೆ ಅನ್ವಯವಾಗುವಂತೆ ಒಂಭತ್ತು ಜನ ಅಮಲ್ದಾರರುಗಳನ್ನು ನೇಮಕಮಾಡುತ್ತೇವೆ ಮತ್ತು ಅವರಿಗೆ ತಕ್ಕ ಸಿಬ್ಬಂದಿ ಸಹ ನೇಮಕ ಮಾಡುತ್ತೇವೆ. ಈಗ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಕಮಾಡಿದ್ದೇವೆ. ಅವರನ್ನು ಕೋಲಾರ ಮತ್ತು ಬೆಂಗಳೂರು ಈ ಎರಡು ಜಿಲ್ಲೆಗಳಿಗೆ ನೇಮಕಮಾಡಿದ್ದೇವೆ. ಈಗ 450 ಗ್ರಾಮಗಳನ್ನು ನೋಟಿಫೈ ಮಾಡಿದೆ. ಬಾಕಿ ಎಲ್ಲಾ ಇನಾಂ ಗ್ರಾಮಗಳೇನು ನೋಟಿಫೈ ಮಾಡಲ್ಪಟ್ಟಿವೆಯೋ ಅಲ್ಲಿ ಇರತಕ್ಕ ಜಿಲ್ಲಾಧಿಕಾರಿಗಳೇ ಕೆಲಸಮಾಡಲು ಸಾಧ್ಯವಿದೆ. ಹೇರಳವಾದ ಸ್ಕೇಲ್‌ನಲ್ಲಿ ನೋಟಿಫೈ ಮಾಡಿರುವ ಕಡೆ ವಿಶೇಷ ಸಿಬ್ಬಂದಿ ಬೇಕು. ಈಗ ಇರುವ ಕಾರ್ಯಕ್ರಮದ ಬಗ್ಗೆ ನೇಮಕ ಮಾಡಿರುವ ಸಿಬ್ಬಂದಿ ಖರ್ಚುಬಗ್ಗೆ ಮಾತ್ರ ಡಿಮ್ಯಾಂಡ್ ಬಂದಿದೆ. ಇನ್ನು ಮುಂದೆ ನೋಟಿಫೈಮಾಡಿರುವ 450 ಗ್ರಾಮಗಳಿಗನುಗುಣವಾಗಿ ಸಿಬ್ಬಂದಿ ಏರ್ಪಾಡು ಮಾಡುತ್ತೇವೆ. ಸಾಧ್ಯವಾದಷ್ಟು ಶೀಘ್ರವಾಗಿ ಈ ಕೆಲಸ ನಡೆಯುವಂತೆ ವ್ಯವಸ್ಥೆಮಾಡುತ್ತೇವೆ.

Sri M. LINGANNA (Nanjangud).—Could not the same work got done by the Deputy Commissioners and the present Revenue Officers?

Sri H. M. CHANNABASAPPA.—I hope this House is anxious to get the work done expeditiously. If the opinion is to get the work done from the same Amildars and the same Revenue Inspectors, yon can well imagine with what speed the work could be got done.

ಈ ವಿಷಯದ ಬಗ್ಗೆ ತಾತ್ಸಾರವಾದ ಮನೋಭಾವನೆಯಿದೆಯೆಂಬ ಮನೋಭಾವನೆ ಮಾನ್ಯ ಸದಸ್ಯರಿಗಿರಬೇಕಾದ್ದು ಅನಾವಶ್ಯಕ. ಶ್ರೀ ಲಿಂಗಾರೆಡ್ಡಿಯವರು ಸರ್ವೆಯಾಗಿಲ್ಲದಿರುವ ಗ್ರಾಮಗಳನ್ನೇಕೆ ನೋಟಿಫೈ ಮಾಡಬಾರದೆಂದು ಕೇಳಿದರು. ಹಾಗೆ ಮಾಡಿದರೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಅಂಕಿ ಅಂಶಬೇಕು. ಸರ್ವೆ ಸೆಟ್ಲ್‌ಮೆಂಟ್ ಮಾಡದೆ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ಮೊದಲನೆಯ ಸ್ಟೇಜಿನಲ್ಲಿ ಬಹಳ ಖರ್ಚಾಗುತ್ತದೆ. ಆದ್ದರಿಂದ ಸರ್ವೆ

ಸೆಟ್ಲ್‌ಮೆಂಟ್ ಆಗಿರುವ ಗ್ರಾಮಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವ ಬಗ್ಗೆ ಕಾರ್ಯಕ್ರಮ ಕೈಕೊಂಡಿದೆ.

Sri H. C. LINGA REDDY.—The action taken is so belated. You should have taken this action much earlier.

Sri H. M. CHANNABASAPPA.—I would like to make it very clear that Government is as anxious as the Hon'ble members are to implement the Act.

ಸರ್ವೆ ಆಗಿಲ್ಲದಿರುವ ಗ್ರಾಮಗಳಬಗ್ಗೆ ಸಹ ಏಕ ಕಾಲದಲ್ಲೇಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದರು. ಅದಕ್ಕೆ ಉತ್ತರ ಒಂದನೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳಿದೆ; ಕಷ್ಟವೇನೆಂದರೆ ಸರ್ವೆ ಮಾಡುವ ಸಿಬ್ಬಂದಿ ಸಾಕಾದಷ್ಟು ಪ್ರಮಾಣ ದಲ್ಲಿಲ್ಲದಿರುವುದರಿಂದ ಏಕಕಾಲದಲ್ಲಿ ಸರ್ವೆ ಆಗಿಲ್ಲದಿ ರುವ 1,237 ಗ್ರಾಮಗಳನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ. ಇದು ಪ್ರಾಕ್ಟಿಕಲ್ ಡಿಫಿಕಲ್ಟಿ. ಆದಕಾ ರಣ ಇರುವ ಸಿಬ್ಬಂದಿ ಕೆಲಸ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟಕ್ಕೆ ಸೂಕ್ತ ಕಾರ್ಯಕ್ರಮ ವಿದೆಯೇ ವಿನಾ ಅನ್ಯಥಾ ಇಲ್ಲ. ಶ್ರೀ ಮೂಡ್ಲಗಿರಿ ಗೌಡರು ಜೋಡಿ ಚನ್ನಾಪುರದ ವಿದ್ಯಮಾನ ಹೇಳಿ ದರು. . . .

*Sri K. PATTABHIRAMAN (Kolar).—Just a clarification from the Hon'ble Minister. So far as the unsurveyed and unsettled villages are concerned, survey and settlement operations must come before this notification is issued in respect of them. Will he consider the suggestion of the Finance Enquiry Committee where they have considered this question and made a concrete suggestion where the survey and settlement would be very difficult? They have made very concrete alternative proposals. Will the Government consider them?

Sri H. M. CHANNABASAPPA.—We have absolutely no difference of opinion with respect to the implementation of the Act as expeditiously as possible. Immediately after notifying all the villages, the question of how best the unsurveyed villages are to be tackled will be taken up in all seriousness.

ಮಾಗಡಿ ತಾಲ್ಲೂಕಿನಲ್ಲಿ ಕೆಲವು ಅನರ್ಥಗಳು ನಡೆದಂತೆ ಚೆನ್ನಾಪುರ ಗ್ರಾಮದಲ್ಲೂ ಕೂಡ ನಡೆದಿವೆಯೆಂದು ಶ್ರೀ ಮೂಡಲಗಿರಿಗೌಡರು ಮತ್ತು ಶ್ರೀ ಪ್ರಭಾಕರ್‌ಅವರು ಗಮನಕ್ಕೆ ತಂದರು. ಕುಣಿಗಲ್ ಕಡೆ ಹೋಗಿದ್ದಾಗ ಚನ್ನಾಪುರದ ಗ್ರಾಮ ಸ್ಥರು ಕೆಲವರು ಬಂದಿದ್ದರು. ಈಬಗ್ಗೆ ಅವರು ಸರಿಯಾದ ವಿಷಯ ಹೇಳಲಿಲ್ಲ; ತೊಂದರೆ ಕೊಡುತ್ತಿ ದ್ದಾರೆಂದು ಹೇಳಿದರು; ವಿಶದವಾಗಿ ತಿಳಿಸಲಿಲ್ಲ; ತಿಳಿಸಿದ್ದರೆ ಒಂದು ದಿವಸ ನಿಧಾನವಾದರೂ ಅಲ್ಲೇ ಇದ್ದು ಪರಿಶೀಲನೆ ಮಾಡಿಕೊಂಡು ಬರುತ್ತಿದ್ದೆ. ಜಿಲ್ಲಾ ಧಿಕಾರಿಗಳಿಗೆ ಸೂಚನೆ ಕೊಟ್ಟಿದೆ. ಈ ವಿಷಯದಲ್ಲಿ ಸತ್ಯ ಧರ್ಮಗಳಿಗನುಗುಣವಾಗಿ ಕೆಲಸ ನಡೆಯಬೇಕಾ ದರೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿ ಕೆಲಸ ಮಾಡಬೇಕಾಗಿದೆ. ತೆರೆಮರೆಯಲ್ಲಿ ನಡೆಯುವ ಕೆಲಸ ಕಾರ್ಯವನ್ನು ಬಹಿರಂಗಕ್ಕೆ ತಂದು ಅದರ ಬಗ್ಗೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ದೊಡನೆ ಸಹಕಾರಮಾಡಿ ಎಲ್ಲ ಜನರೂ ಮತ್ತು ಸದ ಸ್ಯರೂ ಸಹಾಯ ಮಾಡಬೇಕಾದದ್ದು ಅವರ ಕರ್ತವ್ಯ. ಇಂಥ ಸಂದರ್ಭಗಳಲ್ಲಿ ಎಲ್ಲಿ ಏನು ನಡೆಯುತ್ತ ದೆಂಬುದನ್ನು ನಮ್ಮ ಗಮನಕ್ಕೆ ತಂದು ಉಪಕಾರ ಮಾಡಬೇಕು. ಸಾಧ್ಯವಾದಷ್ಟು ಪ್ರಯತ್ನಮಾಡಿ ಸರ್ಕಾರಕೂಡ ಈ ಬಗ್ಗೆ ಕಾನೂನುರೀತ್ಯಾ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡು ತ್ತದೆ. ಬಹುಶಃ ಮಾನ್ಯ ಸದಸ್ಯರು ಎತ್ತಿದ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇದು ಅತಿ ಜರೂರಾಗಿ ಆಗಬೇಕಾದ್ದು ಮತ್ತು ಮಾನ್ಯ ಸದಸ್ಯರು ಮತ್ತೊಂದು ಸಿಬ್ಬಂದಿ ಏರ್ಪಾಡುಮಾಡಿ ಬೇಗ ಕೆಲಸ ಮಾಡಬೇಕೆಂದು ಇಚ್ಛೆಪಟ್ಟಿದ್ದಾರೆ. ಆದ್ದರಿಂದ ಈ ಡಿಮ್ಯಾಂಡನ್ನು ಅಂಗೀಕಾರ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಭಾವಿಸಿದ್ದೇನೆ.

Mr. SPEAKER.—The question is:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'General Administration (Except the sub-major heads B and C')."

The motion was adopted.

DEMAND No. 26—INDUSTRIES AND SUPPLIES INCLUDING SERICULTURE.

43. INDUSTRIES AND SUPPLIES.

Mr. SPEAKER.—Motion moved;

"That a further sum not exceeding Rs. 400 be granted to the Government to defray the charges which will come in course of payment during the period ending 31st day October 1956, in respect of 'Industries and Supplies'."

Sri T. MARIAPPA (Mysore City North).—Demands 26 and 41 may be taken up together.

Mr. SPEAKER.—They may be taken up for discussion together but vote would be taken separately.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಹಳ್ಳಿಗಳಕಡೆ ಕೈಗಾರಿಕಾ ಇಲಾಖೆಯವರು ಸಾಲಗಳನ್ನು ಕೊಟ್ಟು ಕೆಲವು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಮರಗೆಲಸ, ಕಬ್ಬಿಣದಕೆಲಸ ಮೊದಲಾದ ಕೆಲಸಗಳನ್ನು ಕೈಗಾರಿಕಾ ಪಟ್ಟಿಯಲ್ಲಿ ಸೇರಿಸಿಕೊಂಡು ಅವುಗಳನ್ನೆಲ್ಲಾ ಗ್ರಾಮಾಂತರ ಕೈಗಾರಿಕೆಗಳೆಂದು ಕರೆದು ಅದಕ್ಕೇ ಒಂದು ಇಲಾಖೆ ನೇಮಕಮಾಡಿ ದೊಡ್ಡ ಸಿಬ್ಬಂದಿ ಏರ್ಪಾಡುಮಾಡಿದ್ದಾರೆ. ಬದನವಾಳದಲ್ಲಿ ಬಹಳ ವರ್ಷಗಳಿಂದ ಖಾದಿಯನ್ನು ತಯಾರುಮಾಡುತ್ತಿದ್ದಾರೆ. ಸರ್ಕಾರದವರೂ ಸಹ ಅಲ್ಲಿ ಖಾದಿ ತಯಾರಿಸಲು ಒಂದು ಇಲಾಖೆಯನ್ನು ನೇಮಿಸಿ ಬಹಳ ಶ್ರೇಷ್ಠವಾದ ಖಾದಿಯನ್ನು ತಯಾರಿಸಿ ಬೆಂಗಳೂರು ಮತ್ತು ಇತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೆಲಸಕ್ಕೆ ಸೇರಿರುವ ಕೆಲಸಗಾರರು, ನೆಯ್ಗೆಯವರು ಮತ್ತು ಮಾರಾಟದಲ್ಲಿ ನಿರತರಾಗಿರುವವರು ತಮಗೆ ಕೊಡತಕ್ಕ ಸಂಬಳಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡಿಲ್ಲವೆಂದು ನಿರುತ್ಸಾಹದಿಂದ ಕೈಗಾರಿಕೆಯಲ್ಲಿ ಸಾಕಾದಷ್ಟು ಉತ್ಸಾಹವನ್ನು ತೋರಿಸುತ್ತಿಲ್ಲ. ಕೈಗಾರಿಕೆಯನ್ನು ಎಷ್ಟು ಉತ್ತಮಪಡಿಸಬಹುದೋ ಅಷ್ಟು ಉತ್ತಮಪಡಿಸುತ್ತಿಲ್ಲ. ಆಮೇಲೆ ಅಲ್ಲಿರುವ ಕೆಲಸಗಾರರು 10, 11, 14 ಎಂದು ನಂಬರಿರುವ ನೂಲುಗಳನ್ನು ವಿಂಗಡಿಸುವಾಗ ಸರಿಯಾಗಿ ನಿಗಾಕೊಡದೆ ಅನೇಕ ವೇಳೆ ನಂಬರನ್ನು ಎಣಿಸದೆ ಒಟ್ಟಾಗಿ ಸೇರಿಸಿ ಮೋಸಮಾಡುವ ಹಾಗೆ ಕಾಣುತ್ತದೆ. ಸರ್ಕಾರದಿಂದ ನಡೆಸುವ ಕೈಗಾರಿಕೆಗಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಂಡು ಅಲ್ಲಿರುವ ಸಿಬ್ಬಂದಿಗೆ ತೊಂದರೆ ಕೊಡದಹಾಗೆ ನೂಲು ಮಾಡಿಕೊಂಡು ಬರುವವರಿಗೆ ಎಷ್ಟನೆಯ ನಂಬರು ನೂಲನ್ನು ಮಾಡುತ್ತಾರೋ ಅದನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿ ತರುವಂತೆ ವ್ಯವಸ್ಥೆಮಾಡಿ, ಮಿಶ್ರಗಾಗುವುದಕ್ಕೆ ಅವಕಾಶವಿಲ್ಲದಂತೆ ಏರ್ಪಡಿಸಿ ಕೆಲಸಗಾರರಿಗೆ ಸರಿಯಾದ ವೇತನ ಕೊಡುವಂತೆ ವ್ಯವಸ್ಥೆ ಮಾಡಬೇಕು.

*ಶ್ರೀ ಎಂ. ಮಾದಯ್ಯ. (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ಖೋತಾ ಸೂಚನೆ ಮುದ್ರಣವಾಗಿರುವುದರಲ್ಲಿ 'expending' ಎಂದು ತಪ್ಪಾಗಿ ಮುದ್ರಣವಾಗಿದೆ, ಅದು 'expanding' ಎಂಬುದಾಗಿರಬೇಕು. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಮುನಿಸ್ವಾಮಯ್ಯನವರು ಹೇಳಿದ್ದನ್ನು ಕೇಳಿ ತುಂಬ ವ್ಯಸನವಾಗುತ್ತಿದೆ. ಏಕೆಂದರೆ ಖಾದಿ ಕೆಲಸ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ, ಸಿಬ್ಬಂದಿ ಮುತವರ್ಜಿ ವಹಿಸುತ್ತಿಲ್ಲ, ನಿರೀಕ್ಷಿಸಿದಷ್ಟು ನೂಲಿನ ಉತ್ಪತ್ತಿಯಿಲ್ಲ ಎಂದು ಹೇಳಿದಂತೆ ಕಂಡು ಬಂತು.

2-30 P.M.

ಸ್ವಾಮಿ, ನಾನು ಬದನವಾಳ ಖಾದಿ ಕೇಂದ್ರಕ್ಕೆ ಕೇವಲ ಮೂರು ಮೈಲಿ ಫಾಸಲೆಯಲ್ಲಿ ವಾಸ ಮಾಡತಕ್ಕ ಮನುಷ್ಯ. ಕಳೆದ ಸಾಲಿನಲ್ಲಿ ಇದಕ್ಕೆ ಒಂದು ಲಕ್ಷ 75 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಮೊಬಲಗೂ ಸಹ ಸಾಲದೆ ಹೋಯಿತು. ಡಿಪ್ರಿಸಿಯೇಷನ್, ವೇಜಸ್ ಇತ್ಯಾದಿಗಳನ್ನೆಲ್ಲಾ ಕೊಟ್ಟಿದ್ದರಿಂದ ಆ 1 ಲಕ್ಷ 75 ಸಾವಿರ ರೂಪಾಯಿಗಳು ಖರ್ಚಾಗಿ ಹೋದವು. ಈ ಮೊಬಲಗನ್ನು ಸಾಲವಾಗಿ ಕೊಡಲಾಗಿತ್ತು. ಈ ಸಾಲಕ್ಕೆ ಲಾಭವನ್ನೂ ಸಹ ಕೊಡಲಾಗಿದೆ. ಪ್ರತಿವರ್ಷವೂ ಈ ಕೇಂದ್ರದ ವೆಚ್ಚ ಬೆಳೆಯುತ್ತಲೇ ಬರುತ್ತಿದೆ. ಕಳೆದ 5 ವರ್ಷಗಳ ಬಡ್ಜೆಟ್ ಸರಾಸರಿ ಲೆಕ್ಕವನ್ನು ತಾವು ನೋಡಿದರೆ ಸರ್ಕಾರ ಎಷ್ಟೆಷ್ಟು ಹಣವನು ಇದಕ್ಕಾಗಿ ಹೆಚ್ಚಿಗೆ ಅಪ್ರೋಪ್ರಿಯೇಟ್ ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ಕಾರಣ ಸಾರ್ವಜನಿಕರು ಈಗ ಅಷ್ಟು ಹೆಚ್ಚು ಹೆಚ್ಚಾಗಿ ಈ ಮಾಲನ್ನು ಕೊಂಡುಕೊಳ್ಳಲು ಮುಂದೆ ಬರುತ್ತಿರುವುದೇ ಇದರ ಅಭಿವೃದ್ಧಿಗೆ ಒಂದು ದೊಡ್ಡ ನಿದರ್ಶನವೆಂದು ಹೇಳಬಹುದಾಗಿದೆ. 1955ರಲ್ಲಿ ಕೊಡಲಾಗಿದ್ದ 1ಲಕ್ಷ 75ಸಾವಿರ ರೂಪಾಗಳು ಕಚ್ಚಾ ಮಾಲನ್ನು ಕೊಳ್ಳಲು ಕೇವಲ 5 ತಿಂಗಳಿಗೆ ಮಾತ್ರ ಅವಕಾಶವಿದ್ದಿತು. ಆಗ ಈ ಉದ್ಯಮಕ್ಕೆ ಇನ್ನೂ 5 ಲಕ್ಷ ರೂಪಾಯಿಗಳು ಹೆಚ್ಚಿಗೆ ಬೇಕಾಗುತ್ತದೆಂಬ ಅಂದಾಜ ಹೊಳೆಯಿತು. On the advice of the Government the Head of the Department spent the entire Budget allotment. ನಮ್ಮಲ್ಲಿ ಈ ದಿವಸ ಈ ಖಾದಿ ಸೆಂಟರುಗಳು ಒಂಭತ್ತಿರುತ್ತವೆ. ಹತ್ತು ಸಾವಿರ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಕ್ಷಾಮ ಬಂದ ಮೇಲಂತೂ ವ್ಯವಸಾಯಗಾರರಿಗೆ ಕೆಲಸವಿಲ್ಲದಂತಾಯಿತು. ಹೀಗಾಗಿ ಈ ದಿವಸ ಪ್ರತಿಯೊಂದು ಮನೆಯಲ್ಲೂ ಈ ನೂಲುವ ಕೆಲಸಗಾರರ ಸಂಖ್ಯೆ ಹೆಚ್ಚುತ್ತಾ ಇದೆ. ಅದಕ್ಕೆ ಸರಿಯಾಗಿ ತಯಾರಾದ ವಸ್ತುಗಳಿಗೆ ಮಾರುವ ಕಟ್ಟೆಗಳೂ ಕೂಡ ಹೆಚ್ಚುತ್ತಿವೆ. ಈ ದಿವಸ ಹಾಸನ-ಬಳ್ಳಾರಿ-ಚಿತ್ರದುರ್ಗ-ಬೆಂಗಳೂರು-ಕೆ.ಜಿ.ಎಫ್. ಹೀಗೆ 5 ಸ್ಥಳಗಳಲ್ಲಿ ಈ ಸೆಂಟರುಗಳು ಇವೆ. ಇಷ್ಟಾಗಿದ್ದರೂ ಸರ್ಕಾರ ನೂಲುವುದಕ್ಕೆ ಸಾಕಷ್ಟು ಉತ್ತೇಜನ ಕೊಡುತ್ತಿಲ್ಲ. ಈ ಖಾದಿ ಕೈಗಾರಿಕೆಗೆ ಹೆಚ್ಚು ಉತ್ತೇಜನ ನೀಡತಕ್ಕ ಬಗ್ಗೆ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡಬೇಕೆಂದೂ, ಕೊಡತಕ್ಕ ಗ್ರಾಂಟಿನಲ್ಲಿ ಮೊಬಲಗನ್ನು ಖೋತಾ ಮಾಡದೆ ಆ ಪೂರಾ ಮೊಬಲಗನ್ನು ಖರ್ಚು ಮಾಡುವಂತೆ ಅವಕಾಶ ನೀಡಬೇಕೆಂದೂ ಕೇಳಿಕೊಳ್ಳುತ್ತೇನೆ. ಈ ವರೆಗೆ ಸರ್ಕಾರದವರು ಈ ಇಂಡಸ್ಟ್ರಿಯಲ್ ಕೆಲಸಗಾರರಿಗೆ ಕೊಟ್ಟಿರತಕ್ಕ ದ್ರವ್ಯ ಸಹಾಯಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಆದರೆ ನಾನು ಈ ಸಂಬಂಧವಾಗಿ ಸರ್ಕಾರಕ್ಕೆ ಮೂರು ಲಕ್ಷ ರೂಪಾಯಿಗಳ ಸಾಲ ನೀಡಬೇಕೆಂದು ಕೇಳಿದ್ದೇನೆ. ಈ ದಿವಸ ಸುಮಾರು 20ಸಾವಿರ ಕುಟುಂಬಗಳು ಈ ಉದ್ಯೋಗದಲ್ಲಿ ನಿಂತಿರುತ್ತವೆ. ನಾವು ಆ ರೀತಿ ಕೇಳಿರುವಾಗ ಸರ್ಕಾರದವರು ಕೇವಲ ಒಂದು 100 ರೂಪಾಯಿಗಳ ಟೋಕನ್ ಗ್ರಾಂಟ್ ಕೊಟ್ಟು ಬರುವ ಅಕ್ಟೋಬರ್ ಆಖೈರುವರೆಗೆ 50 ಸಾವಿರ ರೂಪಾಯಿಗಳನ್ನು ಮಾತ್ರ ಕೊಡುವುದಾಗಿ ತಿಳಿಸಿದ್ದಾರೆ. ಸರ್ಕಾರದವರು ಕೊಡತಕ್ಕ ಹಣಕ್ಕೆ ನಾವು ಬಡ್ಡಿ ಸಹ ಕೊಡುತ್ತಿದ್ದೇವೆ...

ಶ್ರೀ ಎಚ್. ಸಿದ್ದವೀರಪ್ಪ.—ನೀವು ಯಾವ ಯಾವಾಗ ಎಷ್ಟೆಷ್ಟು ಬಡ್ಡಿ ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಾದಯ್ಯ.—ವೇಜಸ್, ಡಿಪ್ರಿಸಿಯೇಷನ್ ಇತ್ಯಾದಿಗಳೆಲ್ಲಾ ಕಳೆದು 5 ಸಾವಿರಕ್ಕೂ ಮೇಲ್ಪಟ್ಟು ಲಾಭ ಕೊಟ್ಟಿದ್ದೇವೆ. ನಿಮ್ಮನ್ನು ನಾವು ಯಾವತ್ತೂ ಉಚಿತವಾಗಿ ಕೊಡಿ ಎಂದು ಕೇಳಿಲ್ಲ. ಈಗ 3ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರೆ ಈ ಪವಿತ್ರ ಖಾದಿ ಉದ್ಯಮಕ್ಕೆ ಬಹಳ ಸಹಾಯ ನೀಡಿದಂತಾಗುತ್ತದೆ. ಈಗಲೂ ಸಹ ನಮ್ಮ ಸರ್ಕಾರ ಕೇಂದ್ರಕ್ಕೆ ಶಿಫಾರ್ಸು ಮಾಡಿ ಈ ಉದ್ಯಮಕ್ಕೆ 5ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಿಸಿದರೆ ಇವರ 50ಸಾವಿರ ರೂಪಾಯಿಗಳನ್ನು ನಾವು ವಾಪಸ್ಸು ಕೊಡುತ್ತೇವೆ. ನಾಳೆ ಬರುವ ಅಕ್ಟೋಬರ್

31ನೆಯ ತಾರೀಖಿನಿಂದ ಮಾರ್ಚಿ ಆಖೈರುವರೆಗೆ ಸುಮಾರು ಇನ್ನೂ ಮೂರು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ತಾವು ಏನಾದರೂ ಪ್ರಯತ್ನ ಮಾಡಿ ಕೇಂದ್ರದಿಂದ ಸಾಲ ತರಿಸಿಕೊಡಿ. ನಿಮ್ಮ 50 ಸಾವಿರ ರೂಪಾಯಿ ನಮಗೆ ಬೇಕಾಗಿಲ್ಲ. ನಾವು ಈಗ 3 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಿ ಎಂದು ಕೇಳಿದ್ದರೆ ಇಲ್ಲವೆಂದು ಹೇಳುತ್ತಿದ್ದಾರೆ. ಇದು ಸರಿಯೇ ಎಂದು ಕೇಳುತ್ತೇನೆ.

Sri H. SIDDAVEERAPPA.—The work has not been stopped even for one day.

ಶ್ರೀ ಎಂ. ಮಾದಯ್ಯ.—ಈಗ ತಾವು ಹೇಳುವ ಮೊಬಲಗು ಅಕ್ಟೋಬರ್‌ವರೆಗೆ ಮಾತ್ರ ಆಗುತ್ತದೆ ಎಂದು ಹೇಳುತ್ತಿದ್ದೀರಿ. ಈ ಮೊಬಲಗು 15 ದಿವಸಗಳಿಗೂ ಸಹ ಸಾಲುವುದಿಲ್ಲವೆಂದು ನಾನು ಹೇಳುತ್ತೇನೆ. ಆದ ಕಾರಣ ನಾನು ಈಗ ಕೇಳುತ್ತಿರುವುದು ಕೇಂದ್ರ ಸರ್ಕಾರದಿಂದ ಸಾಧ್ಯವಾಗದೆ ಹೋದರೆ ಆಗ ತಾವೇ ನಮಗೆ 3 ಲಕ್ಷ ರೂಪಾಯಿಗಳ ಸಾಲ ಮಂಜೂರು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಆ ಬದನವಾಳ ಕೇಂದ್ರದಲ್ಲಿ ಈಗ 20 ಸಾವಿರಕ್ಕಿಂತ ಹೆಚ್ಚಾಗಿ ಜನರು ಕೆಲಸ ಮಾಡುತ್ತಿದ್ದಾರೆ. ಒಬ್ಬೊಬ್ಬ ನೂಲುವವನೂ ದಿನ ಒಂದಕ್ಕೆ ಒಂದು ರೂಪಾಯಿಗಿಂತ ಹೆಚ್ಚು ಸಂಪಾದನೆ ಮಾಡುತ್ತಿದ್ದಾನೆ. ಆ ಕೂಲಿಗೆ ಆಗುವಷ್ಟು ಮೊಬಲಗನ್ನಾದರೂ ಸರ್ಕಾರದವರು ಕೊಟ್ಟರೆ ಸಾಕೆಂದು ಹೇಳುತ್ತಿದ್ದೇವೆ. ದಿವಸಕ್ಕೆ ಸರಾಸರಿ ಹತ್ತು ಸಾವಿರ ರೂಪಾಯಿಗಳ ಬಟವಾಡೆ ಆಗುತ್ತಿದೆ. ತಾವೀಗ ಕೊಡುವಂಥ ಹಣ ಅಲ್ಲಿ ಐದು ದಿವಸಗಳಿಗೆ ಮುಗಿದುಹೋಗುತ್ತವೆ. ಆದಕಾರಣ ಈ ಹಣ ಸಾಲದು, ಇನ್ನೂ ಹೆಚ್ಚು ಮೊಬಲಗನ್ನು ಕೊಡಬೇಕೆಂದು ಡಿಸ್ಟ್ರಿಕ್ಟ್ ರಿಲೀಫ್ ಸಮಿತಿಯಲ್ಲಿ ತೀರ್ಮಾನ ಮಾಡಿ ಕಳುಹಿಸಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಕ್ಷಾಮ ಉಂಟಾಗಿ ಜನರು ಜೀವನಕ್ಕೆ ತುಂಬಾ ಕಷ್ಟಪಡುತ್ತಿದ್ದಾರೆ. ಈ ಮಧ್ಯೆ ಸರ್ಕಾರದವರು ಒಂದು ಸರ್ಕ್ಯುಲರನ್ನು ಹೊರಡಿಸಿ ಎಲ್ಲೆಲ್ಲಿ ಕ್ಷಾಮಪರಿಸ್ಥಿಯುಂಟಾಗಿ ಜನರ ಜೀವನಕ್ಕೆ ತೊಂದರೆಯುಂಟಾಗಿದೆಯೋ ಅಲ್ಲೆಲ್ಲಾ—ಅಂಥಾ ಅಭಾವ ಪ್ರದೇಶಗಳಲ್ಲಿ—ಜನರಿಗೆ ಕೂಲಿ ಸಿಕ್ಕತಕ್ಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿಸಲಾಗಿತ್ತು. ಆ ಉದ್ದೇಶದಿಂದ ಈವರ್ಷದ ಬಡ್ಜೆಟ್ಟಿನಲ್ಲಿ ನಮ್ಮ ಜಿಲ್ಲೆಗೆ ಬದನವಾಳು ಖಾದಿ ಕೇಂದ್ರಕ್ಕೆ ಒದಗಿನಲಾಗಿದ್ದ ಮೊಬಲಗೆಲ್ಲಾ ಖರ್ಚಾಯಿತು. ಇಲ್ಲಿಗೆ ಒಂದು ತಿಂಗಳ ಹಿಂದೆ ನೂಲುವವರಿಂದ ನೂಲು ಕೊಳ್ಳಲು ದುಡ್ಡಿಲ್ಲದಂತಾಯಿತು. ಆಗ ಸರ್ಕಾರ ಅಡವ ಡೈರೆಕ್ಟರ್‌ರಿಂದ ಬದನವಾಳ ಸೆಂಟರಿನಲ್ಲಿ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸುವಂತೆ ಒಂದು ಸರ್ಕ್ಯುಲರ್ ಬಂದಿತು. ನಮ್ಮ ಜಿಲ್ಲೆಯಲ್ಲಿ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಯ ಸಂಬಂಧವಾಗಿ ಈ ಸೆಂಟರಿಗೆ ಸಂಬಂಧಪಟ್ಟ ಹಾಗೆ 30 ಟ್ರೈನಿಂಗ್ ಸೆಂಟರುಗಳನ್ನು ತೆರೆಯಲಾಗಿತ್ತು. ಈಗ ಆ ಒಂದು ಸರ್ಕ್ಯುಲರ್ ಬಂದನಂತರ ಅಲ್ಲಿಯ ನೂಲುವವರಿಗೆ ಬಹಳ ಕಷ್ಟಪರಿಸ್ಥಿತಿಯುಂಟಾಗಿದೆ. ಇದೇನೂ ಉತ್ಪ್ರೇಕ್ಷೆಯ ಮಾತಲ್ಲ. ಅಲ್ಲಿಯ ಅನುಭವವಿರುವ ಕೆಲವು ಮಾನ್ಯ ಸದಸ್ಯರು ಇಲ್ಲೇ ಇದ್ದಾರೆ. ತಾವು ಅವರಿಂದ ಈ ವಿಚಾರ ತಿಳಿದುಕೊಳ್ಳಬಹುದು. ಈ ದಿವಸ ಅಲ್ಲಿ 50 ಸಾವಿರ ಜನರಿಗೆ ಕೆಲಸವಿಲ್ಲದಂತಾಗಿದೆ. ತಾವು ಆಗಲೇ ಒಂದು ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಬಹುದು. ಆದರೆ ಈ ಹಿಂದೆ ಸರ್ಕಾರದವರು ಇದಕ್ಕೆ 10 ಲಕ್ಷ ರೂಪಾಯಿಗಳು ಬೇಕಾದರೂ ಕೊಡುತ್ತೇವೆಂದು ಹೇಳಿದ್ದರು. ಈಗ ನಮ್ಮ ಮೈಸೂರು ಜಿಲ್ಲೆಯ ಡಿಸ್ಟ್ರಿಕ್ಟ್ ರಿಲೀಫ್ ಕಾಂಗಾರಿ ಕಮಿಟಿಯ ಅಧ್ಯಕ್ಷರಾಗಿರತಕ್ಕವರೂ ಮತ್ತು ಇಲ್ಲಿ ರೆವಿನ್ಯೂ ಮಂತ್ರಿಗಳಾಗಿರತಕ್ಕವರೂ ಆದ ಶ್ರೀಮಾನ್ ಚನ್ನಬಸಪ್ಪನವರು ಈ ಅಂಶವನ್ನು ಹಿಂದೆ ಹೊರಪಡಿಸಿದ್ದರು. ಈಗ ಕೊಟ್ಟಿರತಕ್ಕ ಮೊಬಲಗು ಆ ಫ್ಯಾಮಿನ್ ರಿಲೀಫ್ ಫಂಡಿನಿಂದ ಕೊಡಲ್ಪಟ್ಟಿದೆ. . . .

Mr. SPEAKER.—This is explained in the note. Please refer to it.

ಶ್ರೀ ಯು. ಎಂ. ಮಾದಪ್ಪ.—ನಾನು ಹೇಳುತ್ತಿರುವುದೂ ಸ್ಪಷ್ಟವಾಗಿಯೇ ಇದೆ. ಈಗ ತಾವು ಈ ಕಂಟಿನ್ ಜೆನ್ಸಿ ಫಂಡಿನಿಂದ ಕೊಡತಕ್ಕ 50 ಸಾವಿರ ರೂಪಾಯಿಗಳು 5-6 ದಿನಗಳಿಗೂ ಸಹ ಸಾಲುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಅಷ್ಟು ಮೊಬಲಗಿನ ಪದಾರ್ಥಗಳು ತಯಾರಾಗಿ-ಅವುಗಳನ್ನು ಮಾರಾಟ ಮಾಡಿದಾಗ ಮತ್ತೆ ಅದಕ್ಕೂ ಹೆಚ್ಚಿನ ಹಣ ಬಂದೇ ಬರಬೇಕಲ್ಲವೆ?

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದವರು ಕೊಡತಕ್ಕ ಹಣ ವೇನೂ ಹಾಗೆ ಲುಕ್ಸಾನಾಗುವುದಿಲ್ಲ. ತಯಾರಾದ ಪದಾರ್ಥಗಳಲ್ಲಿ ಅರ್ಧಭಾಗವನ್ನು ಯಾರು ತಯಾರಿಸುತ್ತಾರೋ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಈ ಅರ್ಧಭಾಗ ಬಟ್ಟೆ ರೂಪದಲ್ಲಿ ಅಡ್ಜಸ್ಟ್ ಆಗುತ್ತಿದೆ. ಇನ್ನುಳಿದ ಅರ್ಧ ಭಾಗ ಹೊರಗಡೆ ಮಾರಾಟಕ್ಕೆ ಹೋಗುತ್ತದೆ. ಅದರಿಂದ ನಾವು ಈ ಹಣವನ್ನು ಪಡೆಯಬೇಕಾಗಿದೆ. ಈ ಕೈಗಾರಿಕೆಗಳ ಉತ್ಪತ್ತಿ ಹೆಚ್ಚಾಗುತ್ತಿರುವುದರಿಂದಲೇ ಇತ್ತೀಚೆಗೆ ತಾವು ಒಂದು ಬೋರ್ಡನ್ನು ಸಹ ರಚನೆ ಮಾಡಬೇಕೆಂದು ಹೇಳುತ್ತಿದ್ದೀರಿ. ಹಾಗೆ ತಾವು ಈ ಗೃಹ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ಭಾವನೆಗೆ ಈಗ ತೋರಿಸುತ್ತಿರುವ ಭಾವನೆ ಒಂದು ದೊಡ್ಡ ಧಕ್ಕೆಯನ್ನು ತರುತ್ತಿದೆ. ಆದ್ದರಿಂದ ತಾವು ಮುಂದೆ ತೆರೆಯುವ ಬೋರ್ಡು ನಾಮಕಾವಸ್ತೆ ಬೋರ್ಡ್ ಎಂದು ಆಗಬಾರದು. ಈ ದಿವಸ ಆ ಪ್ರದೇಶದಲ್ಲಿ ಅನೇಕ ಜನ ಹೆಣ್ಣು ಮಕ್ಕಳೂ ಸಣ್ಣ ಮಕ್ಕಳೂ ಉದ್ಯೋಗವಿಲ್ಲದೆ ಜೀವನಕ್ಕೆ ತೊಂದರೆ ಪಡಬೇಕಾದ ಸ್ಥಿತಿ ಬಂದಿದೆ. ಇಂಥಾ ಒಂದು ಭಯಂಕರ ಪರಿಸ್ಥಿತಿ. ನಂಜನಗೂಡು, ಚಾಮರಾಜನಗರ, ಯಳಂದೂರು, ಟಿ. ನರಸೀಪುರ ಇತ್ಯಾದಿ ಸ್ಥಳಗಳಲ್ಲಿ ಸಂಭವಿಸಿದೆ. ಆ ಪ್ರದೇಶದಲ್ಲಿ ಇಲ್ಲಿಯವರೆಗೂ ಮಳೆ ಬಿದ್ದಿಲ್ಲ. ಆದ್ದರಿಂದ ಈ ಬದನವಾಳದ ವ್ಯಾಪ್ತಿ ಆ ಒಂದು ಸಬ್‌ಡಿವಿಜನ್‌ಗೆ ಪೂರ್ತಿಯಾಗಿ ಹರಡಿ ಕೊಂಡಿರುತ್ತದೆ. ಆದುದರಿಂದ ನಾವೀಗ ಸರ್ಕಾರದವರನ್ನು ಎರಡು ಲಕ್ಷ ರೂಪಾಯಿಗಳನ್ನು ಉಚಿತವಾಗಿ ಕೊಡಿ ಎಂದೇನೂ ಕೇಳುತ್ತಿಲ್ಲ. ಇದರಲ್ಲಿ ಸರ್ಕಾರದವರ ಜವಾಬ್ದಾರಿಯೂ ಕೂಡ ಜಾಸ್ತಿ ಯಾಗಿದೆ. ಜನರಿಗೆ ಯಾವತ್ತೂ ಜೀವನಕ್ಕೆ ಮಾತ್ರ ತೊಂದರೆ ಆಗಬಾರದು. ದಿನಕ್ಕೆ ಒಂದು ರೂಪಾಯಿ ಕೂಲಿ ಮಾಡಿ ಎಂಟು ಆಣೆ ತೆಗೆದುಕೊಂಡು ಹೋಗತಕ್ಕ ಮನುಷ್ಯ ಯಾವರೀತಿ ಜೀವನ ಮಾಡಬೇಕು, ಅತನಿಗೆ ಎಷ್ಟು ಕಷ್ಟವಿದೆ ಎನ್ನುವುದನ್ನು ತಾವು ಮನಗಾಣಬೇಕು. ಈ ಹೊತ್ತು ಅಲ್ಲಿಯ ಜನರ ಜೀವನ ಬಹಳ ಕಾಠಿಣ್ಯ ಸ್ಥಿತಿಗೆ ಬಂದಿದೆ.

ಇನ್ನು ಎರಡನೇಯದಾಗಿ ಈ ರೇಷ್ಮೆ ವಿಚಾರವಾಗಿ ಈ ಕೈಗಾರಿಕೆ ಬರುವ ನವೆಂಬರ್ ತಿಂಗಳಿಂದ ನಡೆ

(ಶ್ರೀ ಯು. ಎಂ. ಮಾದಪ್ಪ)

ಯಲು ಒಂದೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿದ್ದಾರೆ. ಈಗ ಆ ಫ್ಯಾಕ್ಟರಿಗಳಿವೆ. ಈ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು ಒಂದು ದಿವಸಕ್ಕೂ ಸಹ ಸಾಲುವುದಿಲ್ಲ. ಈಗ ಎಷ್ಟು ಬೇಸಿನ್‌ಗಳು ಕೆಲಸ ಮಾಡುತ್ತಿವೆ, ಎಷ್ಟು ಗೂಡು ಉತ್ಪನ್ನವಾಗುತ್ತಿದೆ, ಉತ್ಪನ್ನವಾಗುವ ಎಲ್ಲಾ ಗೂಡನ್ನೂ ಕಾರ್ಖಾನೆಯಲ್ಲಿ ನೂಲು ಬಿಚ್ಚಲು ಇನ್ನೂ ಎಷ್ಟು ಬೇಸಿನ್ ಬೇಕಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಹೀಗೆ ಎಲ್ಲಿಯವರೆಗೆ ಹೊಸ ಬೇಸಿನ್‌ಗಳನ್ನು ಪ್ರಾರಂಭ ಮಾಡುವುದಿಲ್ಲವೋ ಅಲ್ಲಿಯತನಕ ಈ ರೇಷ್ಮೆಯ ಬೆಲೆಯ ಏರು-ಪೇರು ಹೋಗುದಿಲ್ಲ. ಇವು ತಗ್ಗಬೇಕಾದರೆ. . . .

Sri H. SIDDAVEERAPPA.—Proposals regarding the working of the concerns and their development under the control of the Department are being worked out by the Director of Sericulture and pending examination of the question fresh funds from 1st November 1956 would be necessary. For this purpose it would be necessary to place at the disposal of the Department an amount of 1·5 lakhs from that date in order that the concern may be kept going during the interim period.

ಶ್ರೀ ಯು. ಎಂ. ಮಾದಪ್ಪ.—ನಾನು ಮುಂದೆ ಹೇಳುವಾಗ ಅದು ಅರ್ಥವಾಗುತ್ತದೆ. ಇಂಟೆರಿಮ್ ರಿಲೀಫ್ ಕೊಡುವುದನ್ನು ಒಪ್ಪಿಕೊಳ್ಳುತ್ತೇನೆ. ನಾನು ಮುಂದಿನ ಒಂದು ದೃಷ್ಟಿಯಿಂದ ಹೇಳುತ್ತೇನೆ. ಮುಂದೆ work out ಮಾಡುವಾಗ ಈ ಅಭಿಪ್ರಾಯವನ್ನಿಟ್ಟುಕೊಂಡು workout ಮಾಡಬೇಕು ಎಂದು ಹೇಳುತ್ತೇನೆ. Work out ಆಗುವಾಗ ಕ್ಯಾಪಿಟಲ್ ಎಷ್ಟಿತ್ತು, ಅವರು ರೇಷ್ಮೆಗೂಡನ್ನು ಸಾಲ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆಯೋ, ಹಾಗಿದ್ದರೆ ಆ ರೀತಿ ಸಾಲ ಎಷ್ಟಿದೆ ಎಂದು ನೋಡಿ; ಓಬೀರಾಯನ ಕಾಲದ ಬಡ್ಜೆಟ್ ಮುಂದುವರಿಸದೆ ಇರಲಿ ಎಂದು ನನ್ನ ಅಭಿಪ್ರಾಯ. ಜಾಯಿಂಟ್ ಸ್ಟಾಕ್ ಕಂಪೆನಿಯ ಆದಳಿತದಲ್ಲಿದ ಬಡ್ಜೆಟ್ಟೇ Departmental budget ಆಗ ಪರಿವರ್ತನೆ ಆಗದಿರಲಿ. ಹಾಲಿ ಎಷ್ಟು ಬಿಸಿನೆಸ್ ಇದೆ, ಎಷ್ಟು ನಡೆಸುವುದಕ್ಕೆ ಅವಕಾಶವಿದೆ, ರೈತರಿಂದ ನೇರವಾಗಿ ಗೂಡನ್ನು ಕೊಂಡುಕೊಳ್ಳುವುದಕ್ಕೆ ಏನು ಏರ್ಪಾಡುಗಳಿವೆ ಎಂಬುದನ್ನೆಲ್ಲ ಕೂಲಂಕಷವಾಗಿ ಪರಿಶೀಲನೆ ಮಾಡಿ full swingನಲ್ಲಿ ತರಬೇಕೆಂದು ಪ್ರಾರ್ಥಿಸುತ್ತೇನೆ.

***Sri M. LINGANNA** (Nanjangud).—Sir, it is rather a sorry state of affairs if I reveal the truth why the Badanaval Centre could not work for a week at least. Of course by a subsequent circular from the Head of the Department, the Centre was asked to resume the activities as usual because they got a grant of nearly Rs. 50,000. Why I say this is, as was explained by my other colleague, the present prevailing position in the Badanaval area and round about is that of distress conditions. This particular avocation of spinning gives relief to those people who cannot go out of the doors and resort to work either on roads or on tanks and naturally during this period, the spinners have increased by leaps and bounds quite beyond 20,000 to 25,000. So, Sir, naturally the amount that was granted to this Centre has been expended more speed ly than was expected by the Department. Now the centre is being replenished to the extent of Rs. 50,000 and a token sum of Rs. 100 is being asked to be voted by this House. My point is that once the centre is being run by the Government and when the necessity of continuing and developing the activity of this particular centre which was closed even prior to the attainment of Independence, is all the greater. Because of the distress conditions in the area, I submit that Government has asked the Distress Relief Committee to advance more than the money included in the grant.

There is one more lacuna. The amount that is being sanctioned by the Government to the centre will be converted into yarn or cloth and a particular portion of it will be spent on stock and when once the yarn is converted into cloth, that will be sold away and the amount realised will be credited to the treasury and not even a single pie of the amount so credited could be operated upon by the Spinning Centre. Whatever amount is being given into the Government treasury will be converted into asset. There seems to be some lurking doubt that this Spinning Centre is always working under loss. That is certainly not the case. They have given their balance sheet and I certainly believe that this centre is working at a profitable rate. The percentage of profit may be less. All the more so, if we take into consideration the principles that are responsible for the starting of this centre, we should not consider the percentage of profit that is going to be accumulated out of this

centre. Moreover, Sir, the Government should make such arrangements by means of which the centre or the Department can once again operate upon the amounts that are being remitted to the treasury from time to time. Suppose they can put three lakhs as working capital and that amount is allotted to the Department which can be operated by the concerned centre, then all this difficulty will automatically vanish. Simply because the amount that is being advanced by the Government will be automatically and speedily spent, the Centre will have to be kept closed for a large part of the year. Therefore, I submit that Government should make necessary arrangements to see that the centre works properly and works with more capital and at the same time every worker in the centre should not be under the impression that at some time the centre is going to be closed.

Sir, I more emphatically say this, that because distress conditions are still continuing in that area, for some more months, I request Government to make speedy arrangements to expand the activities of the centre by opening the relief centres also. There is, I believe, one proposal sent by the Head of the Department to give substantial relief in the distress area and that is to open a few more relief centres. I believe the proposal involves three lakhs of rupees. There is also a special resolution of the Relief Committee that three lakhs should be allotted by the Government for the working of these relief centres. Till now, I do not know what has happened to that. It only means that either the Government is not in a position to give the amount asked or the Government is reluctant.

Sri H. SIDDAVEERAPPA.—Spend out of ten lakhs that has already been given.

Sri M. LINGANNA.—Out of that amount, I believe there is only one lakh remaining and, even that one lakh is being asked by the Deputy Commissioner to be distributed to several taluk under distress to be spent on relief works like roads, desilting of tanks and other things. There is therefore practically no amount to be spent out of that amount. My point is that the Government should give outright three lakhs of rupees to the Badanaval centre so that relief work may be taken up at once.

So far as the other item is concerned, namely, the Silk Factory at T. Narsipur, it is being taken over by the Government. After incessant demand by this House and the Members of the particular area, Government has been generous enough to examine the question of taking over the factory and they have not provided 1.00 lakh of working capital. My point is that the basins working in the factory are not up-to-date and with the present basins, I believe the silk that we are producing will not be up to the standard. Therefore, there is more responsibility on the Government to improve the basins on modern lines so as to work the factory on an efficient basis.

With these few remarks, I support the demand and request that the Government should be generous enough to grant three lakhs of rupees to the Badanaval Centre in order to take up relief works because of the urgency of the matter and because of the distress conditions prevailing in that area.

*ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಈಗ ಮಾನ್ಯ ಸದಸ್ಯರು ಮಾಡಿದ ಚರ್ಚೆಯಲ್ಲಿ ನನಗೆ ಒಂದು ಅರ್ಥವಾಗುತ್ತದೆ. ಇದರಲ್ಲಿ ಹೆಚ್ಚಾಗಿ ದುಡ್ಡು ಕೊಡುವುದಕ್ಕೆ ಸರ್ಕಾರಕ್ಕೆ ತೊಂದರೆ ಇದೆ ಎಂದು ಮಾತನಾಡಿದರು. ಇದರಲ್ಲಿ ಕೊಟ್ಟಿರುವ ವಿವರಣೆ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿದೆ ಎಂದು ತಾವು ಆಗಲೇ ಅಪ್ಪಣೆ ಕೊಡಿಸಿದಿರಿ. ಈಗ ಸರ್ಕಾರದವರು ಕೊಟ್ಟಿರುವ 50 ಸಾವಿರ ರೂಪಾಯಿಗಳನ್ನು ಕಂಟಿಜೆನ್ಸಿ ಫಂಡಿನಿಂದ ಕೊಟ್ಟಿದ್ದಾರೆ ನಾವು ಕಂಟಿಜೆನ್ಸಿ ಫಂಡ್ ಎಂದು ಬಡ್ಜೆಟ್ ಮಾಡಿದ ಕಾಲದಲ್ಲಿ ಸರ್ಕಾರದವರ ವಶದಲ್ಲಿ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. Consolidated Fund ನಿಂದ ಖರ್ಚು ಮಾಡಬೇಕಾದರೆ ಈ ಸಭೆಯ ಅನುಮತಿ ಬೇಕು. Contigency Fund ಸರ್ಕಾರದವರ ಬಳಿಯಲ್ಲಿಯೇ ಇರುವುದರಿಂದ ಅವರು ಏನಾದರೂ ಒಂದು ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಪ್ರವಾಹ ಬಂದಿರತಕ್ಕ ಜಾಗದಲ್ಲಿ ತಕ್ಷಣ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ ಸನ್ನಿವೇಶ ಒದಗಿದರೆ, ಅಂಥ ಸಂದರ್ಭಗಳಲ್ಲಿ ಹಣವನ್ನು ಒದಗಿಸಲು ಸಹಾಯವಾಗಲಿ ಎಂದೂ, ಸರ್ಕಾರದವರು ಈ ಸಭೆಯ ಅನುಮತಿಗಾಗಿ ಅಂಥ ಸಮಯಗಳಲ್ಲಿ ಕಾದು ಕುಳಿತುಕೊಳ್ಳಬಾರದು, ಹಣವನ್ನು ಅಂಥ ಕಾರ್ಯಗಳಿಗೆ ತಕ್ಷಣ ಕೊಡಲಿ ಎಂಬ ಉದ್ದೇಶದಿಂದ Contingency Fund ಕೊಟ್ಟಿದ್ದೇವೆ. ಅದರಲ್ಲಿ 50

(ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್)

ಸಾವಿರ ರೂಪಾಯಿಗಳನ್ನು ಕೊಡವುದಕ್ಕೆ ಸರ್ಕಾರದವರು ಅನುಮತಿ ಪಡೆಯಬೇಕಾಗಿಲ್ಲವೆಂದು ಆಗಲೇ ಹೇಳಿದೆ. ಈಗ ಕೊಟ್ಟಿರುವ 50 ಸಾವಿರ ರೂಪಾಯಿಗಳಿಗೆ ಅಧಿಕಾರ ತೆಗೆದುಕೊಳ್ಳಲು ಟೋಕನ್ ಗ್ರಾಂಟ್ ಕೇಳಿರುತ್ತಾರೆ. 50 ಸಾವಿರ ಮಾತ್ರವಲ್ಲ 5 ಲಕ್ಷ ರೂಪಾಯಿ ಬೇಕಾದರೂ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಸರ್ಕಾರದವರು ಯಾಕೆ ಹಿಂತೆಗೆಯುತ್ತಿದ್ದಾರೆಂಬುದು ತಿಳಿಯಲಿಲ್ಲ. ಈಗ ಟೋಕನ್ ವೋಟ್ ತೆಗೆದುಕೊಳ್ಳುವುದರಿಂದ ನನಗೂ ಸಹ ಒಂದು ಸಂತೋಷ. ಹೇಗೆಂದರೆ ಎಷ್ಟು ಬೇಕಾದರೂ ಖರ್ಚು ಮಾಡುವುದಕ್ಕೆ ಸರ್ಕಾರದವರಿಗ ಅಧಿಕಾರಬರುತ್ತದೆ. ನವಂಬರ್ ಒಂದನೆ ತಾರೀಖಿನ ತನಕ ಕಂಟಿನ್‌ಜೆನ್ಸಿ ಫಂಡಿನಲ್ಲಿ 30 ಲಕ್ಷ ರೂಪಾಯಿಗಳು ಖರ್ಚಾಗುವವರೆಗೂ ಸರ್ಕಾರಕ್ಕೆ ಸ್ವಾತಂತ್ರ್ಯವಿದೆ. ಅದಿಲ್ಲದೆ ಒಂದು ಗೊತ್ತಾದ ಗ್ರಾಂಟ್ ಕೊಟ್ಟಿದ್ದರೆ ಕಷ್ಟವಾಗುತ್ತಿತ್ತು.

ಎರಡನೆಯದಾಗಿ ಇದರಲ್ಲಿ ಇನ್ನೊಂದು ವಿಷಯವಿದೆ. ಏನೆಂದರೆ ಮಾನ್ಯ ಹಣಕಾಸಿನ ಮಂತ್ರಿಗಳು ಒಂದು ಅಭಿಪ್ರಾಯವನ್ನು ತಿಳಿಸಿದರು. ಖಾದಿ ಕೇಂದ್ರದಲ್ಲಿ ವ್ಯಾಪಾರವಾಗುವುದರಿಂದ ಆ ದುಡ್ಡು ಪುನಃ ಅಲ್ಲಿಯೇ ಬರುತ್ತದೆ. ಅದನ್ನೇ ಯಾಕೆ roll ಮಾಡಬಾರದು ಎಂದು ಹೇಳಿದರು. ಸಂಸ್ಥಾನದ ಲೆಕ್ಕಗಳನ್ನು 1950ನೆ ಇಸವಿಯಿಂದಲೂ ಬೇರೆ ರೀತಿಯಾಗಿ ಇಡುತ್ತಿದ್ದಾರೆ. ಯಾವ ಸರ್ಕಾರಿ ಕೈಗಾರಿಕೆಯಲ್ಲಿಯೇ ಆಗಲಿ, ಮಾಲನ್ನು ಮಾರಾಟಮಾಡಿದರೆ ಆ ಹಣವು ಜಮಾ ಬಾಬಿಗೆ ಹೊರಟು ಹೋಗುತ್ತದೆ. ಯಾವ ಸರ್ಕಾರಿ ಕಾರ್ಖಾನೆಯಲ್ಲೇ ಆಗಲಿ ಖರ್ಚು ಮಾಡಬೇಕಾದರೆ ಖರ್ಚಿನ ಬಾಬಿನಲ್ಲಿ ಶಾಸನಸಭೆ ಯಾವ ಲಿಮಿಟ್ ಗೊತ್ತು ಮಾಡುತ್ತದೆಯೋ ಅದರೊಳಗೇ ಖರ್ಚು ಮಾಡಬೇಕು. ಐವತ್ತು ಸಾವಿರ ರೂಪಾಯಿಗಳ ಮಿತಿ (limit) ಕೊಟ್ಟರೆ ಅದು ಖರ್ಚಾಗಿ ಹೋದರೆ ಪುನಃ ಹೆಚ್ಚಿಗೆ ಗ್ರಾಂಟಿಗೆ ಶಾಸನಸಭೆಗಳ ಮುಂದೆ ತರಬೇಕು. ನಾನು ಈ ಸಭೆಗೆ ತಿಳಿಯಪಡಿಸುವುದೇನೆಂದರೆ, ಯಾವ ಸರ್ಕಾರಿ ಇಲಾಖೆಯಲ್ಲಿಯೋ ಆಗಲಿ ಏನು ಖರ್ಚು ಮಾಡಬೇಕಾದರೂ ಶಾಸನಸಭೆಗಳಲ್ಲಿ ಏನು ಖರ್ಚು ಮಾಡಬೇಕೆಂದು ಮಿತಿಯನ್ನು ಗೊತ್ತುಮಾಡುತ್ತಾರೆಯೋ ಆ ಮಿತಿಗೊಳಪಟ್ಟು ಖರ್ಚು ಮಾಡಬೇಕು. ಜಮಾಬಬನಲ್ಲಿ ಬರತಕ್ಕ ಹಣವನ್ನು ಅವರು ಖರ್ಚು ಮಾಡುವ ಹಾಗಿಲ್ಲ. ಖರ್ಚು ಬಾಬಿಗೆ ಹಣವನ್ನು ತೆಗೆದುಕೊಳ್ಳಬೇಕಾದರೆ Consolidated Fund ನಿಂದ ತೆಗೆದುಕೊಳ್ಳಬೇಕು. ಸರ್ಕಾರದ ಹಣವೇನಿದೆ ಅದರಿಂದ ಖರ್ಚು ಮಾಡುವುದಕ್ಕೆ 50 ಸಾವಿರ ರೂಪಾಯಿಗಳವರೆಗೂ ಹೆಚ್ಚಿನ ಮಿತಿಯನ್ನು ಈಗ ಕೊಟ್ಟ ಹಾಗಾಯಿತು. ಜಮಾಬಾಬಿನಲ್ಲಿ ಹಣವನ್ನು ತೆಗೆದುಕೊಂಡು ಖರ್ಚು ಮಾಡುವ ಅಧಿಕಾರ ಸರ್ಕಾರಕ್ಕೆ ಬರುವುದಿಲ್ಲ. ಹಿಂದೆ ಒಂದೊಂದು ಇಲಾಖೆಗೂ ಸಹ ಅಡ್ವಾನ್ಸ್ ಕೊಡುತ್ತಿದ್ದರು. 10-15 ಲಕ್ಷ ರೂಪಾಯಿಗಳನ್ನು ವ್ಯವಸಾಯ ಇಲಾಖೆಯ ಡೈರೆಕ್ಟರ್ ಅವರಿಗೆ personal advance ಎಂದು ಕೊಟ್ಟಿದ್ದಾರೆಂದರೆ ಆ ಅಡ್ವಾನ್ಸಿನಲ್ಲಿ ಕೊಳ್ಳುವುದು ಮಾರುವುದು ಎರಡನ್ನೂ ಮಾಡುತ್ತಿದ್ದರು. ಈಗ ಹಾಗೆ ಅಡ್ವಾನ್ಸ್ ಕೊಡುವುದಿಲ್ಲ. ಆ ಪದ್ಧತಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿಲ್ಲ. ಆದುದರಿಂದ ನಾವು ಹೇಳುವುದೇನೆಂದರೆ, ಯಾವಾಗ ಖರ್ಚು ಮಾಡತಕ್ಕ ಮಿತಿಯನ್ನು ಶಾಸನಸಭೆ ಗೊತ್ತು ಮಾಡುತ್ತದೆಯೋ ಅವಾಗ ಹೆಚ್ಚಿಗೆ ಖರ್ಚಿಗೆ ಈ ಸಭೆಯ ಮುಂದೆ ಬರಬೇಕಾಗುತ್ತದೆ.

ಈಗ ಬದನವಾಳ ಖಾದಿ ಕೇಂದ್ರದಲ್ಲಿ ಏನು ವರಮಾನವಿದೆ, ಏನು ಖರ್ಚಿದೆ ಎಂದು ನಮಗೆ ಗೊತ್ತಿಲ್ಲ. ಕೆಲವರು ವರಮಾನ ಬರುತ್ತದೆಂದು ಹೇಳುತ್ತಾರೆ. ಹಾಗೆ ಅದರ ವಿವರಣೆ ಗೊತ್ತಾಗಬೇಕಾದರೆ ಆ ಕೇಂದ್ರದ ಲಾಭನಷ್ಟದ ಲೆಕ್ಕವನ್ನು ತೆಗೆದುಕೊಂಡು ನೋಡಿದರೆ ಸಂಪೂರ್ಣವಾಗಿ ಭರವಸೆ ಬರುತ್ತದೆ. ಅದರಲ್ಲಿ ಒಂದು ವೇಳೆ ನಷ್ಟವಾದರೆ ಅದು ನ್ಯಾಯವಾದ ನಷ್ಟವಾಗುತ್ತದೆ. ಹಾಗಾಗುವುದಕ್ಕೆ ಅವಕಾಶವಿಲ್ಲ, ಇದರಲ್ಲಿ ಹಣವೇನೂ ಹೋಗುವುದಿಲ್ಲ. ಹೋದರೂ ಸಹ ಅದು ನಷ್ಟವೆಂದು ಹೇಳುವುದಕ್ಕಾಗುವುದಿಲ್ಲ. ಯಾಕೆಂದರೆ ಆ ಖಾದಿ ಕೇಂದ್ರದ ಉದ್ದೇಶ ಹೆಚ್ಚು ಜನರಿಗೆ ಕೆಲಸ ಕೊಡುವುದು. ಶ್ರೀಮಾನ್ ಪಟ್ಟಾಭಿರಾಮನ್ ಅವರು ಬಹಳ ಸ್ಫೂರ್ತಿದಾಯಕವಾದ ವಿಷಯಗಳನ್ನು ಹೇಳಿದರು. ಖಾದಿಯ ವಿಚಾರದಲ್ಲಿ ಅದಕ್ಕೆ ಲಗತ್ತಾಗಿರುವ ಭಾವನೆ, ಆ ದೃಷ್ಟಿ, ಪೂಜ್ಯ ಭಾವನೆ, ಇವುಗಳಿಂದ ಸ್ವಲ್ಪ ಹಣ ಖರ್ಚಾದರೂ ಅದು ನಷ್ಟವೆಂದು ನಾವು ಹೇಳುವುದಕ್ಕಾಗುವುದಿಲ್ಲ, ಆದುದರಿಂದ ಸರ್ಕಾರದವರು ಪುನರಾಲೋಚನೆ ಮಾಡಿ, ಇದನ್ನು ಮಂಡಿಸುವುದಕ್ಕೆ ಮುಂಚೆ ಒಂದು ತಿದ್ದುಪಡಿಯನ್ನು ಕೊಟ್ಟರೆ ಒಳ್ಳೆಯದೆಂದು ತಿಳಿದು ಕೊಂಡಿದ್ದೇನೆ. ಆದರಲ್ಲಿ ಏನೂ ಇಜ್ಜತ್ ಇಲ್ಲದೆ ಇರಲಿ ಎಂದು ಹೇಳುತ್ತೇನೆ.

3 P.M.

"For expanding its activities in the distress areas of Mysore District" ಎಂದು ನಮೂದಿಸಿದ್ದಾರೆ. ಆ ಆಕ್ಟಿವಿಟೀಸ್ ಏನೆಂದು ಹೇಳಿಲ್ಲ. ಈಗ ಮೈಸೂರು ಡಿಸ್ಟ್ರಿಕ್ಟಿನಲ್ಲಿ ನರಸೀಪುರ, ನಂಜನಗೂಡು, ಚಾಮರಾಜನಗರ, ಎಳಂದೂರು, ಮೈಸೂರು ತಾಲ್ಲೂಕಿನಲ್ಲಿ ಕೆಲವು ಕಡೆ ಡಿಸ್ಟ್ರೆಸ್ ಏರಿಯಾಸ್ ಇವೆ. ಅಲ್ಲೇನು ಕಾರ್ಯಕ್ರಮ ಕೈಕೊಳ್ಳಬೇಕು, ಸೆಂಟರ್ ಓಪನ್ ಮಾಡಬೇಕೆ ಟ್ರೈನಿಂಗ್ ಕೊಡಬೇಕೆ, ನಷ್ಟವಾಗಿದ್ದರೆ ಅದನ್ನು ಹೋಗಲಾಡಿಸಿ ಲಾಭ ಬರುವಂತೆ ಮಾಡಬೇಕೆ ಎಂಬುದನ್ನು ಸೂಚಿಸಲಿಲ್ಲ. ಯಾವ ಕಾರ್ಯಕ್ರಮ ಈಗಿವೆ, ಮುಂದೇನು ಮಾಡಬೇಕು ಎಂಬ ತಪಶೀಲನ್ನು ಕೊಡಬೇಕು. ಈಗೇನು ಕಾರ್ಯಕ್ರಮವಿದೆ. ಅದರಿಂದ ಕ್ಷಾಮ ಪರಿಹಾರಕ್ಕೆ ಅನುಕೂಲವಾಗಿ ಜನರಿಗೆ ಅನುಕೂಲವಾಗುತ್ತಿದೆಯೆ ಎಂಬ ದೃಷ್ಟಿಯಿಂದ ವಿಮರ್ಶೆ ಮಾಡಬೇಕು.

ಮೂರನೆಯದಾಗಿ ಸಿಲ್ಕ್ ಫ್ಯಾಕ್ಟರಿ ವಿಚಾರ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ತಾನೆ ಯಾವ ರೀತಿ ಸರ್ಕಾರದವರು ಅದನ್ನು ತೆಗೆದುಕೊಂಡು ಖರ್ಚು ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆಂಬುದಕ್ಕೆ ಒಂದು ಉದಾಹರಣೆ ಕೊಟ್ಟಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಅಕ್ಟೋಬರ್ ಒಂದರಿಂದ ನವೆಂಬರ್ ಒಂದರವರೆಗೆ ಆರು ಕಾರ್ಖಾನೆಗಳನ್ನು ಸರ್ಕಾರ ತೆಗೆದುಕೊಂಡು ನಡೆಸುತ್ತದೆಂದು ಹೇಳಿದರು, ಸಂತೋಷ. ಅಕ್ಟೋಬರ್ ಒಂದರಿಂದ 3-4 ದಿವಸಗಳಲ್ಲಿ ಆರು ಕಾರ್ಖಾನೆಗಳು ಸರ್ಕಾರಿ ಆಡಳಿತದಲ್ಲಿ ಕೆಲಸ ಮಾಡುತ್ತವೆ, ಬಹಳ ಸಂತೋಷ. ಅದಕ್ಕಾಗಿ ವಂದನೆಗಳು. ಏಕೆಂದರೆ ಎರಡು ಸಾವಿರ ಕೆಲಸಗಾರರಿಗೆ ಅನುಕೂಲವಾಗುತ್ತದೆ ಮತ್ತು ಕ್ಷಾಮ ಕಾಲದಲ್ಲಿ ಇದರಿಂದ ಬಹಳ ಉಪಕಾರವಾಗುತ್ತದೆಂದು ಖಂಡಿತವಾಗಿ ಹೇಳುತ್ತೇನೆ. ಇವನ್ನು ಯಾವ ರೀತಿ ನಡೆಸುತ್ತಾರೆಂಬುದಕ್ಕೆ ವಿವರಣೆ ಕೊಟ್ಟಿಲ್ಲ. ಯಾವ ರೀತಿ ವ್ಯವಸ್ಥೆ ಮಾಡಬೇಕೆಂದು ವಿಮರ್ಶೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನವೆಂಬರ್ ಒಂದರಿಂದ ಜಾರಿಗೆ ಬರುತ್ತದೆಯೇ ಅಥವಾ ಅಕ್ಟೋಬರ್ ಒಂದರಿಂದ ಜಾರಿಗೆ ಬರುತ್ತದೆಯೆ ?...

ಶ್ರೀ ಎಚ್. ಸಿದ್ದವೀರಪ್ಪ.—ನವೆಂಬರ್ ಒಂದರಿಂದ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ನವೆಂಬರ್ ಒಂದರವರೆಗೆ ಯಾವರೀತಿ ಮಾಡಲಾಗುವುದು? ಕಾರ್ಮಿಕ ವರ್ಗದ-ಹಿತ ನನಗೆ ಮುಖ್ಯವಾದುದು. ಆಲ್ ಇಂಡಿಯಾ ಸಿಲ್ಕ್ ಬೋರ್ಡ್ ಇದೆ. ಅದರಿಂದ ಕೂಡ ಬೇಕಾದಷ್ಟು ಹಣ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ, 20 ಲಕ್ಷ ರೂಪಾಯಿಗಳನ್ನು ಬೇಕಾದರೂ ತರಬಹುದೆಂದು ಒಂದು ಸಲ ಹೇಳಿದರು. ಅದನ್ನು ಬರಮಾಡಿಕೊಳ್ಳದಿದ್ದರೆ ನವೆಂಬರ್ ಒಂದರಿಂದ ಕಷ್ಟವಾಗಬಹುದು, ಈಗಲೇ ಆ ಹಣ ಬರಮಾಡಿಕೊಂಡರೆ ಒಳ್ಳೆಯದು ಎಂಬ ದೃಷ್ಟಿಯಿಂದ ಎರಡು ಮಾತನ್ನು ಹೇಳಿದ್ದೇನೆ. 41ನೆಯ ಡಿಮ್ಯಾಂಡ್ ವಿಚಾರ ಆ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ.

Sri H. SIDDAVEERAPPA.—Lest I may forget, I may tell you that on the 6th of October there is a meeting here. They are considering this question as to what to do to T.-Narasipur Centre.

Mr. SPEAKER.—The House will now rise for lunch and meet at 3-35.

The House adjourned for lunch at Five minutes past Three of the Clock and reassembled at Thirty-five Minutes past Three of the Clock.

[MR. SPEAKER in the Chair.]

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಖಾದಿಯ ವಿಚಾರದಲ್ಲಿ ಈ ದಿವಸ ಜೋತಾ ಸೂಚನೆ ಕಳುಹಿಸಿರುವುದನ್ನು ನೋಡಿ ಬಹಳ ಸಂತೋಷವಾಗಿದೆ. ಕೈಗಾರಿಕೆ ವಿಚಾರದಲ್ಲಿ ಬಹಳ ಹೆಚ್ಚಿನ ಆಸಕ್ತಿಯನ್ನು ವಹಿಸಿರುವ ನಮ್ಮ ಮಾನ್ಯ ಮಂತ್ರಿಗಳು ಕೈಮಗ್ಗ ಮುಂತಾದುವಕ್ಕೆ ಬೇಕಾದಷ್ಟು ಹಣ ಒದಗಿಸಿದ್ದಾರೆಂಬುದು ಸಂಬಂಧಪಟ್ಟ ಸಮಿತಿಯಲ್ಲಿ ನಾನಿದ್ದುದರಿಂದ ಗೊತ್ತಾಯಿತು. ನಮ್ಮ ಮೈಸೂರು ಸಂಸ್ಥಾನದಲ್ಲಿ ಎಷ್ಟು ಖಾದಿ ಕೇಂದ್ರಗಳಿವೆಯೋ ಅವಕ್ಕೆಲ್ಲಾ ಸಹಾಯವಾಗಿ ಜನರಿಗೆ ಅನುಕೂಲವಾಗಬೇಕು. ಸಣ್ಣ ಮನೆ ಕೈಗಾರಿಕೆ, ಗ್ರಾಮ ಕೈಗಾರಿಕೆ ಇವಕ್ಕೆಲ್ಲಾ ಉತ್ತೇಜನ ದೊರಕಿ ಹೆಂಗಸರು, ಮುದುಕರು ಎಲ್ಲರಿಗೂ ಉದ್ಯೋಗ ದೊರಕಿ ನಿರುದ್ಯೋಗ ಪ್ರಶ್ನೆ ಖಾದಿ ಉತ್ತೇಜನದಿಂದ ಹೋಗಬೇಕು. ಮನೆಯಲ್ಲಿರುವ ಹೆಣ್ಣು ಮಕ್ಕಳು ನೂಲನ್ನು ತೆಗೆದು ನಾಲ್ಕು ಕಾಸು ಸಂಪಾದನೆ ಮಾಡಲು ಸೌಲಭ್ಯವಿರಬೇಕು. ಇದಕ್ಕೆಲ್ಲಾ ನಮ್ಮ ದೇಶದಲ್ಲಿ ಖಾದಿಯ ಕೈಗಾರಿಕೆ ಮುಖ್ಯಾಧಾರವಾಗಿದೆ. ಮಹಾತ್ಮ ಗಾಂಧಿಯವರ ಕಾಲದಿಂದ ಇದಕ್ಕೆ ಉತ್ತೇಜನ ದೊರೆಯುತ್ತಿದೆ. ಪಂಚಭೂತಗಳು ಹೇಗೆ ನಮ್ಮ ದೇಹಪೋಷಣೆಗೆ ಮುಖ್ಯವೋ ಹಾಗೆ ಅನ್ನ, ಬಟ್ಟೆ, ವಸತಿ, ವಿದ್ಯೆ, ಆರೋಗ್ಯ ಇವು ನಮ್ಮ ದೇಶದ ಉದ್ಧಾರಕ್ಕೆ ಮುಖ್ಯ ಎಂದು ಅವಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದಾರೆ. ಮಾನ್ಯ ಮಂತ್ರಿಗಳಿಗೂ ಇದರ ಅನುಭವವಿದೆ. ಅಂಥಾದ್ದರಲ್ಲಿ ಖಾದಿಗೆ ಈ ದಿವಸ ಸಾಕಷ್ಟು ಉತ್ತೇಜನವಿಲ್ಲ, ಖಾದಿ ಕೈಗಾರಿಕೆ ಮುಚ್ಚುವ ಪ್ರಸಂಗ ಬಂದಿದೆ. ಅದಕ್ಕೆ ಸಾಕಾದಷ್ಟು ಪ್ರೋತ್ಸಾಹ ಆವಶ್ಯಕ. ಕೇಂದ್ರ ಸಬ್ಸಿಡಿ ಕೊಡುವುದಲ್ಲದೆ ಹತ್ತು ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಡುತ್ತದೆಂದು ಹೇಳಿದರು. ಖಾದಿಗೆ ಉತ್ತೇಜನ ಕೊಡುವಾಗ ಶ್ರೀಮಾರ್ಕ ಮಾದಯ್ಯನವರು ಹೇಳಿದಂತೆ ಬದನವಾಳದ ಖಾದಿಗೆ ಮಾತ್ರವಲ್ಲದೆ ನಮ್ಮ ಸಂಸ್ಥಾನದಲ್ಲಿರುವ ಅಜ್ಜಂಪುರ, ಐಮಂಗಲ ಮುಂತಾದ ಇತರ ಖಾದಿ ಕೇಂದ್ರಗಳಿಗೂ, ಮನೆಯಲ್ಲಿ ಹೆಂಗಸರು ಗೃಹ ಕೈಗಾರಿಕೆಯಂತೆ ಇಟ್ಟುಕೊಂಡು ನೂಲು ತೆಗೆದು ಎಂಟಾಣೆ ಕೂಲಿ ಸಂಪಾದನೆ ಮಾಡುವುದಕ್ಕೂ, ಹಾಗೆ ಮಾಡಿ ನಿರುದ್ಯೋಗ ನಿವಾರಣೆ ಮಾಡಿಕೊಳ್ಳುವುದಕ್ಕೂ ಪ್ರೋತ್ಸಾಹ ಆವಶ್ಯಕ. ಹಾಗೆ ಮಾಡುವುದರಿಂದ ನಿರುದ್ಯೋಗ ಪ್ರಶ್ನೆಯೂ ಪರಿಹಾರವಾಗಿ ಮರ್ಯಾದೆಯಿಂದ ಮನೆಯಲ್ಲಿ ಕೆಲಸಮಾಡುವ ಹೆಣ್ಣುಮಕ್ಕಳಿಗೂ ಸಹಾಯವಾಗುತ್ತದೆ. ಹಿರಿಯೂರು ತಾಲ್ಲೂಕಿನಲ್ಲಿ ಚರಕ ಕೆಲಸ ನಿಂತಿದೆಯೆಂದು ಹೇಳುತ್ತಿದ್ದಾರೆ. ಅದರಿಂದ 10-15 ಸಾವಿರ ಸಂಸಾರಗಳು ಅಲ್ಲಿ ಜೀವನ ಮಾಡುತ್ತಿದ್ದುವು. ಮೈಸೂರು ಸರ್ಕಾರದ ಗ್ರಾಂಟನ್ನು ಈ ದಿವಸ ನಿಲ್ಲಿಸಿದ್ದಾರೆಂದು ಹೇಳುತ್ತಾರೆ. ಇಡೀ ಸಂಸ್ಥಾನದಲ್ಲಿ ಖಾದಿಗೆ ಉತ್ತೇಜನ ಕೊಡಬೇಕು. ಹ್ಯಾಂಡ್‌ಲೂಂ ಕಮಿಟಿಯೆಂದು ಮಾಡಿ ಕೇಂದ್ರದಿಂದ ಹಣ ಸಹಾಯ ಕೇಳಿದ್ದಾರೆ. ಇತರ ಕೈಗಾರಿಕೆಗಳಿಗೆ ಬೇಕಾದಷ್ಟು ಉತ್ತೇಜನ ನೀಡುವಾಗ ಖಾದಿಗೇಕೆ ಪ್ರೋತ್ಸಾಹ ನೀಡಬಾರದು? ಈ ದಿವಸ ಖಾದಿ ಹಾಕುವವರು ಹಿಂದೇನು ಹಾಕುತ್ತಿದ್ದರು? ಈಗ ಒಳ್ಳೆಯ ನಮೂನೆ ಸೀರೆ ಸಿಕ್ಕುವುದಿಲ್ಲ, ಉಡುವವರಿಗೆ ಆಕರ್ಷಣೆ ಮಾಡುವ ಶಕ್ತಿ ಖಾದಿ ಕೈಗಾರಿಕೆಗೆ ಬಂದಿಲ್ಲ. ಇದಕ್ಕೆ ಮಂತ್ರಿಗಳು ಸಾಕಷ್ಟು ಗಮನ ಕೊಡದಿರುವುದೇ ಮುಖ್ಯಕಾರಣ. ಕೈಮಗ್ಗದಲ್ಲಿ ಹೊಸಹೊಸ ತರಹ ನೆಯ್ಗೆಗೆ ಅವಕಾಶ ಕಲ್ಪಿಸಿರುವ ಹಾಗೆ ಖಾದಿಯಲ್ಲೂ ಅವಕಾಶಮಾಡಿ ಆಕರ್ಷಣೀಯವಾದ ಬಟ್ಟೆ ತಯಾರಿಸಿದರೆ ಬೇಕಾದಷ್ಟು ಖಾದಿ ಬಟ್ಟೆ ಖರ್ಚಾಗುತ್ತದೆ. ಆ ರೀತಿ ಮಾಡಬೇಕು. ಇವಕ್ಕಾಗಿ ಎಷ್ಟು ಹಣ ಆವಶ್ಯಕವೋ ಅಷ್ಟನ್ನು ಕೊಡಬೇಕು. ಯಾವ ಮುಖಾಂತರವೇ ಆಗಲಿ ಸಹಾಯ ದೊರೆಯಬೇಕು, ಈ ಕೈಗಾರಿಕೆಯಲ್ಲಿ ನಿರತರಾಗಿರುವವರಿಗೆ ಹೊಟ್ಟೆ ತುಂಬುವಷ್ಟು ಸಂಪಾದಿಸಲು ಅವಕಾಶವಾಗಬೇಕು. ಯಾವ ಕೇಂದ್ರವನ್ನೂ ಮುಚ್ಚುವ ಯೋಚನೆ ಮಾಡಬಾರದು. ಹೆಂಗಸರು, ಮಕ್ಕಳು ಎಲ್ಲರೂ ಖಾದಿ ಕೈಗಾರಿಕೆಯಲ್ಲಿ ನಿರತರಾಗಲು ಅವಕಾಶಮಾಡಿ ಇದಕ್ಕೆ ಸಾಕಾದಷ್ಟು ಹಣ, ರಕ್ಷಣೆ ನೀಡಬೇಕು. ಕೈಮಗ್ಗದಲ್ಲಿ ತಯಾರಾಗುವಂತೆ ನಮೂನೆಯಾದ ಸೀರೆ ಮತ್ತು ಬಟ್ಟೆ ಖಾದಿಯಲ್ಲೂ ಮಾಡಲು ವ್ಯವಸ್ಥೆಮಾಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಪೂರೈಸುತ್ತೇನೆ.

Sri H. SIDDAVEERAPPA.—If I make a statement regarding Badanval, perhaps Hon'ble Members may not find it desirable to offer any further remarks. If you permit me, I shall speak.

Mr. SPEAKER.—Yes.

*ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಬದನವಾಳದ ಖಾದಿ ಕೇಂದ್ರದ ಕಾರ್ಯ ವಿಸ್ತರಣೆ ಪ್ರಕೃತ ಸಾಲಿನಲ್ಲಿ ಯಾವ ರೀತಿ ಹೆಚ್ಚಾಗಿದೆ, ಹಣದ ವ್ಯವಸ್ಥೆ ಹೇಗೆ ಆಗಬೇಕು ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಿಗೂ ನನಗೂ ಆ

(ಶ್ರೀ ಎಚ್. ಸಿದ್ದವೀರಪ್ಪ)

ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದ ಹಾಗೆ ಖಾದಿ ಕೆಲಸ ನಿಲ್ಲಿಸಬೇಕೆಂದು ಯಾರು ಆರ್ಡರು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಹಣದ ಅಭಾವದಿಂದ ಏನಾದರೂ ಡೈರೆಕ್ಟರು ತಿಳಿಸಿದ್ದಾರೆಯೆ ಎಂಬುದನ್ನು ವಿಚಾರ ಮಾಡಬೇಕು. ಆದರೆ ಒಂದನ್ನು ಮಾತ್ರ ಈ ಸಮಯದಲ್ಲಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಖಾದಿಗೆ ಯಾವ ಪ್ರೋತ್ಸಾಹವನ್ನು ಕೊಡುತ್ತಾರೋ ಆ ಸಹಾಯವನ್ನು ಪಡೆಯಲು ಕಾರಣಾಂತರದಿಂದ ಇದುವರೆಗೂ ನಮಗೆ ಸಾಧ್ಯವಾಗಿರಲಿಲ್ಲ. ಹಣದ ಅಭಾವದಿಂದ ಆ ಖಾದಿ ಕೇಂದ್ರದ ಕೆಲಸ ನಿಂತುಹೋಗಿದೆ ಎಂದು ಹೇಳುತ್ತಿರುವುದು ಬಹಳ ಶೋಚನೀಯವಾದ ಮಾತಾಗಿದೆ. ಅಲ್ಲಿ ಕೆಲಸವನ್ನು ಮುಂದುವರಿಸಲು ಈಗ ಸಾಕಷ್ಟು ಹಣವಿದೆ. ಇದರ ಜೊತೆಗೆ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಬೇರೆ ಹೇರಳವಾಗಿ ಹಣವನ್ನೊದಗಿಸಲಾಗಿದೆ. ಎಲ್ಲ ಸೌಕರ್ಯಗಳೂ ಇವೆ. ಆದರೆ ನಮ್ಮಲ್ಲಿ ಒಂದು ಸರಿಯಾದ ಸೆಟ್‌ಅಪ್ ಇಲ್ಲ. ಅಷ್ಟೇವಿನಾ ಹಣಕ್ಕೆ ಅಭಾವವೇನೂ ಇಲ್ಲ. ಬದನವಾಳದಲ್ಲಿ ಕೆಲಸ ನಿಲ್ಲಿಸಬೇಕಾದಂಥ ಪ್ರಮೇಯವೆಂದೂ ಬರಲಾರದು. ಅದಕ್ಕೆ ಬೇಕಾಗತಕ್ಕ ಹಣವನ್ನು ಸರ್ಕಾರದಲ್ಲಿ ಡಿಪಾಜಿಟ್ ಇಡಲಾಗಿದೆ. ಆದರೆ ಈಗಿನ ಪ್ರಶ್ನೆಯದಲ್ಲ. ಡಿಸ್ಟ್ರೆಸ್ ಏರಿಯಾದಲ್ಲಿ ಜನರಿಗೆ ರಿಲೀಫ್‌ಕಾಂಗಾರಿಗಳನ್ನೊದಗಿಸಲು ಕೊರತೆಯಾಗಿದ್ದ ಕಾರಣ ಈ ಸಂಬಂಧದಲ್ಲಿ ಆ ಕೊರತೆಯನ್ನು ಸಾಧ್ಯವಾದಮಟ್ಟಿಗೂ ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಈ ಏರ್ಪಾಡನ್ನು ಮಾಡಿದ್ದೆವು. ಆದರೆ ಈ ಪ್ರಕೃತ ಸಂದರ್ಭದಲ್ಲಿ ಎಷ್ಟು ಹಣ ಬೇಕಾದರೂ ಒದಗಿಸಬೇಕೆಂಬುದೇ ನಮ್ಮಗಳ ಆಸೆ. ಆ ರೀತಿ ಹಣದ ಅಭಾವ ಇದೆ ಎಂದು ಕಂಡುಬಂದರೆ ಒಂದು ಲಕ್ಷ ರೂಪಾಯಿಗಳವರೆಗೂ ಸಹಾಯ ನೀಡಲು ಸರಿಯಾದ ಏರ್ಪಾಡುಗಳನ್ನು ಮಾಡಬೇಕೆಂಬ ಇರಾದೆಯುಳ್ಳವರಾಗಿದ್ದೇವೆ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟರೆ ಸಾಕೆಂದು ಕಾಣುತ್ತದೆ. ಆದರೆ ತಾವು ಕೇಳುತ್ತಿರುವ ಮೂರು ಲಕ್ಷ ರೂಪಾಯಿಗಳ ಸಾಲದ ಮಂಜೂರಾತಿಗೂ ಕೂಡ ಸಾಕಷ್ಟು ಪ್ರಯತ್ನಮಾಡೋಣ. ಹಾಗೆ ಹಣದ ತೊಂದರೆಯಿಂದ ಅಲ್ಲಿ ಕೆಲಸ ನಿಲ್ಲಿಸಲು ಅವಕಾಶಕೊಡುವುದಿಲ್ಲವೆಂಬ ಭರವಸೆಯನ್ನು ಮಾತ್ರ ನಾನೀಗ ತಮಗೆ ಕೊಡಬಲ್ಲೆ. ಈ ಭರವಸೆಯ ಮೇಲಾದರೂ ತಾವು ಹೇಳತಕ್ಕ ತಮ್ಮ ಹೇಳಿಕೆಗಳನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಒದಗಿಸಿರುವ 50 ಸಾವಿರ ರೂಪಾಯಿಗಳು ರಾಮೆಟೀರಿಯಲ್ಸ್ ಕೊಳ್ಳಲು ಸಾಕಾಗುವುದಿಲ್ಲ. ಬದನವಾಳದಲ್ಲಿ ಇಲ್ಲಿಯವರೆಗೆ ಅಂಥಾ ಲುಕ್ಸಾನೇನೂ ಆಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಾನೂ ಸಹ ಆ ವಿಚಾರ ಸ್ವಲ್ಪಮಟ್ಟಿಗೆ ತಿಳಿದಿದ್ದೇನೆ. ಸ್ವಲ್ಪ ಲಾಭ ಬಂದಿದೆ. ನಷ್ಟದ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಇದೊಂದು human life problem ಎನ್ನುವ ದೃಷ್ಟಿಯಿಂದ ಇದನ್ನು ಪರಿಶೀಲನೆಮಾಡಬೇಕಾಗಿದೆ.

Sri V. M. MASCARENHAS (St. John's Hill).—Mr. Speaker, the story of the Mysore Silk Filatures is interesting. Started before the Second World War as a public limited company, this company had fared very well for a few years of its existence, and fair dividends were declared. Instead of consolidating their position it is unfortunate that this company went a little mad in its ventures. And to-day we see them coming to the Government with a begging bowl. If only this company had been very careful in the early stages I am of the opinion that this situation would not have arisen. Over and above, I am constrained to remark that the Government when giving them loans have not been very vigilant to see that those loans were properly used, with the result we are taking over a concern with a deficit of Rs. 18 lakhs. What hopes the Government of Mysore have got to rehabilitate this concern, when their own concern in Kanakapura is faring no better, is hard for me to understand. We may only look at this problem from the standpoint of employment to a large number of people. With the development of silk industry in Kollegal which is coming into Mysore, I only hope that the Mysore Government and specially the department of Sericulture, and the Director of Industries will put their heads together and see that this industry will turn the corner and become more profitable to the State.

*Sri T. MARIAPPA (Mysore City North).—Sir, I would like to offer a few remarks on Demand No. 41. As my Hon'ble friend Sri Mascarenhas happened to remark the Mysore Silk Filatures was in a flourishing condition during the War. In fact it had an absolute monopoly in the manufacture of parachute silk and the income was very substantial in those days. If the Managers of the Silk Filature Factory were prudent they could have built up a substantial reserve for the rainy days. They did not build up the reserve fund that were required to rehabilitate the Silk Filatures in case the demand of parachute silk failed. Therefore after the cessation of hostilities the Silk Filatures fell on evil days and as early as 1940 itself they came to Government for financial accommodation. On 29th October 1940 the Government lent Rs. 79,000 and on 17th March 1943 they

lent Rs. 9,60,000. Things did not improve and therefore they came to Government for further accommodation. On 2nd July 1949 they took another loan of Rs. 2 lakhs and on 23rd September 1949 additional two lakhs. Sir, Sri P. Subbarama Chetty, who was my colleague in the last Ministry was a man who was greatly interested in the development of silk industry in this country. He went into the whole question of rehabilitating the industry and pursuaded the Government to advance loans so that it could be rehabilitated. But, nevertheless, the condition of silk industry was in a hopelessly perilous condition in those days. One factor which was responsible for the non-stabilisation of this industry was, we had fluctuations in the market. If you examine the market rates of silk for the last ten years, you may be able to see very wide fluctuations of the imported silk and consequent depression of the local silk filature. Even Kankanhalli filature was not able to make much headway in this direction. It is now time that the Government of Mysore examines the whole field of production of silk filature. The filature now produced is not even of D grade. It requires a lot of improvement. If the idea of Government is merely to take over some of the sections of the Mysore Silk Filature with a view to have their loans repaid, the real purpose for which they are taking will not be served. Their idea ought to be to take those concerns with a view to rehabilitate them, modernise the filature and see that we also make some advance in the production of silk of international standard. It is true that it takes a long period for the production of high grade silk. Therefore we have to take initial steps from now onwards if we have to make some headway in this field. The south of Mysore State is peculiarly suited for the development of sericulture and silk industry. In the south almost on 55,000 acres mulberry is grown. It is therefore necessary that the defunct basins at Kanakapura and Chamarajanagar be revived and the existing basins improve. It is only then will be able to make some headway.

Sir, some of our friends expressed whether it would be a profitable concern. I can assure the House I have some experience in this field and provided we have necessary experts for three or four years it would be possible to make the whole venture a paying proposition. My Hon'ble friend Sri V. M. Mascarenhas doubted whether it is merely to find employment for a few people. It is not so; it is not only for finding employment for the people of the area but also to earn from a name for Mysore in the production of silk. Mysore State had almost monopoly in the production of silk. Mysore silk has a r putation to maintain and that bright shining is exclusive to Mysore silk. I think Mysore State produces about 16 lakhs pounds of silk and we do not want the State to lose that monopoly. After independence even other States are making headway in this field. After the Central Silk Board was formed States like Kashmir, West Bengal and some parts of Orissa are already in the field. Before other States come into the field and snatch the opportunity it is time for the Mysore State to think of rehabilitation of this industry. With the taking over of these concerns except one at Sidlaghatta, Mysore holds monopoly in the manufacture of silk. There are some small private concerns; but that apart Mysore certainly holds monopoly.

Added to this, I would like to impress upon the Government the need for rehabilitating the Spun Silk Mills at Channapatna. They have a branch of silk filature factory. Mysore Government also holds shares in this Mill. I had an occasion to visit that factory recently. All is not well with that concern. It is time the Government contemplate taking over that concern so that it may be rehabilitated. Very recently the Public Accounts Committee had an occasion to go into the affairs of this company. They have also suggested that the Government should look into the affairs of the company so that it can be rehabilitated ano placed on sound working conditions.

Sir, one word and I closeI stated earlier that with the taking over of

(SRI T. MARIAPPA)

these concerns it is not enough if you satisfy that we have our moneys worth. They must be prepared to sink more money to modernise the filatures.

Sir, another friend happened to remark that the Central Silk Board is prepared to give money. I have also got some information in that behalf and if my information is correct they are prepared to advance to the extent necessary so that this industry could be rehabilitated completely and placed on sound footing.

Sir, one word of caution I would like to sound in this behalf. In taking over the liabilities, I want my friend to go through very carefully. Because they were not able to work this filature it became necessary for them even to borrow from private investors. The Managing Director who was in charge of this concern had to almost toil single-handed to get money so that the filature could run.

4. P. M.

I have seen him carrying silk to Bangalore so that he can get money immediately to pay for labour. I have also seen that labour had to wait for weeks to get their wages. Therefore, under great stress and strain the filatures at T.-Narsipur were kept going. Therefore, it is time that the Government of Mysore takes all the steps necessary. With all the resources at their disposal, and with the necessary aid that the Government can get from the Central Silk Boards, it is possible to modernise these factories. They can get some experts from Japan for 3 or 5 years so that Mysore can hold its own in the field of sericulture for many years to come.

With these few words, I want the Government of Mysore to take all necessary steps as early as possible so that the money we have sunk should not go into waste.

Mr. SPEAKER.—There is another important Demand. Shall we close this at this stage? The Hon'ble Minister in charge will make his reply now.

***Dr. R. NAGAN GOWDA** (Minister for Industries and Excise).—There are just a few words regarding this Badanaval Centre that I wanted to say in addition to what my friend the Hon'ble the Minister for Finance has said.

One of the Hon'ble Members was stating that spinners were not paid according to the counts. I have made enquiries and I am told that they are paid according to counts. If finer counts are made, they are paid higher wages.

At no time there was any doubt in our minds as to the importance of the Spinning Centre at Badanaval. Now public enthusiasm there has been so great that arrangements were made to carry it on and the amount that we had budgeted for the whole year has been spent before the end of August or the beginning of September. Since then, we have made funds available and as was stated by the Hon'ble the Minister for Finance, we will keep it going by providing all the funds needed by the Centre, Sir.

ಶ್ರೀ ಬಿ. ಎಂ. ಶೀನಪ್ಪ (ಕಬ್ಬನ್‌ಪೇಟೆ).—A point of information, Sir, Court of Enquiry for Sericulture Industry ಎಂದು 1952 ನೆ ಇಸವಿಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದರು. ಅವರ ವರದಿಯು ಏನಾಯಿತು, ಅದನ್ನು ಈ ಸಭೆಯ ಗಮನಕ್ಕೆ ಯಾಕೆ ತರಲಿಲ್ಲ ಎಂಬ ವಿವರಣೆಯನ್ನು ಕೊಡಬೇಕು.

***Sri H. SIDDAVEERAPPA** (Minister for Home and Finance.) Sir, the Hon'ble Member Sri B. M. Seenappa asked, what happened to his report. I know he was a member of that Committee. It has given a very useful report and I have read that report and we bear in mind the suggestions made therein when the question relating to the silk industry comes up for examination.

I am indeed thankful to the Hon'ble Members who welcomed the idea of the Government taking over the Mysore Filatures. As my Hon'ble friend Sri Mariappa stated and as also expressed by Sri Mascarenhas, the history of the Mysore Silk Filatures is a sad reading I do not want to go into the reasons for it. Suffice it to say that the expectations with which this company was floated were not fulfilled. Whatever may be the reason, here I am not standing to blame anybody. The only

purpose with which I referred to this aspect was just to say how urgent and important it is for the Government to take over these concerns and start on Gtovernmental lines. While so doing, is was not with a view of sympathy for this company share-holders we had to do but as a compelling duty towards the large number of families depending upon sericulture in various sectors, starting with .mulberry cultivators, reelers, cocoon rearers and thousands of charka reelers and various people. Unless we modernise this industry, there is no hope for us. There is no hope unless the Government are prepared to develop it in all its sectors. Sri Mariappa was perfectly correct when he stated that the Government should not hesitate in taking over this factory. It would have taken years for this factory to repay the entire loan outstanding from the year 1947.

Therefore one purpose is served namely, we can write off the debts due to Government from a very long time, as both interest and principal have been accruing. Apart from that, what was worrying me all these years was that, inspite of my very best efforts, it was not found possible to make this concern a profitable concern, and it was not possible for the Government to take the concern as a going concern under some agreement. For the share amount which they have invested to the tune of 9 lakhs, we find 10 lakhs of Government capital also locked up by way of share amount. We have agreed to leave one factory namely, the one at Sidlaghatta, to their control. Otherwise it would have amounted to a very big figure. Any way, by way of some compensation for the share amount, they have also gladly agreed. We have left it at that.

Sri L. SIDDAPPA.—So, the other factories become the . property of Government?

Sri H. SIDDAVEERAPPA.—We have got factories like this with a capacity of 936 basins—T-Narasipur, 200, Mysore 200 and Kuderu 48, Chamarajanagar 68, Santhemarahalli 100, Mamballi 200, Sidlaghatta 120. Out of 936 we leave a factory with a basin capacity of 120 at Sidlaghatta and take the rest.

A MEMBER.—What about the liabilities?

Sri H. SIDDAVEERAPPA.—Liabilities are more than the assets.

Therefore, Sir, as I was just mentioning, our responsibility does not cease as soon as we take over the factory. I might say that responsibility has increased. The purpose is this today, as the machinery stands, it is out-dated and out-moded. It serves little purpose. Other countries have advanced tremendously in the technical know-how and also in modernised machinery. We have to spend yet more money if we want to improve it. I am glad to say that I have already secured an advance promise from the Central Silk Board that they are prepared to spend any amount that is found necessary for renovating and modernising and equipping these factories with up-to-date machinery. Some of it may have to be scrapped. We are got the talent here. Our reeling machinery must be modernised. We are trying to fabricate and we have successfully fabricated much to the astonishment of the Japanese experts who come here. I just now said that the Central Government will place the necessary funds at our disposal. But the industry cannot depend upon doles. We must always take money by way of loans. I am quite positive that we have sufficient funds. What was wanted was that we must take these things. Apart from these factories, we have another important sericultural area and factory coming under the new State, that is Kollegal. Putting all these together, Mysore will have the virtual monopoly of about 85 to 90 per cent of Indian sericulture located only in Mysore. That will be one of the monopolies. Therefore, I feel that apart from modernising machinery, we must also improve our charkas. We must have domestic basins. We have got schemes for all of them. The Central Silk Board has been at it. We have to start from mulberry—how to improve the quality of mulberry, how to maintain foreign race and Mysore race.

(SRI H. SIDDAVEERAPPA.)

Quality also should be improved. All these things are being worked out though the results may not be spectacular. Now the Channapatna Research Station is also coming. After the States Reorganisation takes place, all the integrated parts will have to be co-ordinated so that the sericultural industry in the State is placed on a firm and sure footing.

My Hon'ble friend Sir Mariappa also incidentally referred to the Channapatna Spun Silk Mills. I feel there is much force in what he says. If you take the waste silk that is produced in this country, we find that today this factory consumes about lbs. 38,000, if I am correct. But we produce 1.50 lakhs lbs. of waste silk in our State. After the advent of Kollegal, it may be a little more. Unfortunately, this factory also has not been working, as the balance sheet discloses in a happy manner. The results of the working of this factory also reflects prosperity to the people. We cannot afford to keep it in isolation and be satisfied when we have taken the Mysore Filatures also. If they cannot work and if at any time, the Government feel that leaving this factory as it is may hamper their schemes to develop this industry, perhaps Government may also consider in the same way in which they have now thought of Mysore Filatures. If the Directors of the Company or the shareholders feel that they can well entrust this to the Government as has been done in the case of Mysore Filatures, nobody will be happier than I. I do not think Government will come in the way.

A MEMBER.—A private merchant was making some negotiations to purchase it.

Sri H. SIDDAVEERAPPA.—There were some private negotiations which I feel every one should not welcome, for the very simple reason that no factory can depend upon the sympathies or doles that any private individual may think of giving to the factory. I should not have bothered about this but for the fact that this is also irretrievably linked up with the prosperity of our agriculturists because it is an agricultral industry. Therefore I feel that private negotiations will work adversely to the interests of our agriculturists and is not less than 10 lakhs are depending upon this industry and no Government can view such private negotiations with equanimity. Therefore, I feel that we must examine it on its own merits. I personally feel this scheme is not the complete picture, not full. The question of bringing the Channapatna Spun Silk Mill also under this requires further examination. At the moment we are interested in improving the working conditions of the Mysore Filatures. I would like to tell my friend Sri Srinivasa Iyengar not to think of the rights of the labourers as soon as Government takes it over. These labourers must put their heart and soul into the concern and make the concern profitable. On behalf of the Government I assure the labourers that they must show good results, better results and then think of their own prosperity or otherwise. I think I have made the position quite clear. I hope Hon'ble Members will agree in granting me this amount.

Mr. SPEAKER.—The question is:

"That a further sum not exceeding Rs. 400 be granted to the Government, to defray the charges which will come in course of payment during the period ending 31st day of October 1956, in respect of 'Industries and Supplies'."

The motion was adopted.

DEMAND NO. 30—FAMINE RELIEF.

94 FAMINE.

Mr. SPEAKER.—Motion moved:

"That a further sum not exceeding Rs. 8,50,000 be granted to the Government to defray the charges which will come in course of payment during the period ending 31st day of October 1956, in respect of 'Famine'."

I would like to bring to the notice of the House that we have to close at

5'0 clock. Members expect a satisfactory reply from Government I suppose and I think there is no necessity to have a long discussion on this subject because Government are already aware of the situation. Only one or two members can speak.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಇಷ್ಟುವೇಳೆಗೆ ಎಷ್ಟು ಲಕ್ಷ ಪಲ್ಲ ದವಸ ಮೈಸೂರು ಜನತೆಯು ಕೈಲಿ ಹತ್ತು ಲಕ್ಷ ಪ್ರಜೆಗಳ ಕೈಲಿ ಇರುತ್ತಿತ್ತು ಎಂಬುದು ಈ ಸಭೆಗೆ ಗೊತ್ತಾಗಿಲ್ಲ. ಎಷ್ಟೋ ಪ್ರಮಾಣದ ಜೋಳ ಬರುತ್ತಿತ್ತು. ಈ ದಿವಸ ಅವರು ಭಿಕಾರಿಗಳಾಗಿದ್ದಾರೆ. ಬೆಳೆದವರಿಂದ ಕೂಲಿಗಳ ಮನೆಗಳಿಗೆ ಧಾನ್ಯ ಕೂಲಿ ರೂಪವಾಗಿ ಹೋಗುತ್ತಿತ್ತು. ಈ ದಿವಸ ಅವರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಮಳೆ ಆ ಪ್ರಾಂತದಲ್ಲಿ ಬರಲಿಲ್ಲ, ದನಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ಮೇವಿಲ್ಲ. ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ರೂಪಾಯಿಗೆ ನಾಲ್ಕೈದು ಸೇರಿನಂತೆ ಅಲ್ಲಿ ಅಕ್ಕಿ ಮಾರಾಟ ಮಾಡಿ ಎಂದು ಕೇಳಿದಾಗ ಕುಬೇರನ ಕಣಜ ಸಿಕ್ಕಿದಾಗ ಹಾಗೆ ಮಾಡಬಹುದೆಂದು ಹೇಳಿದರು. ಆದರೆ ಜವಾಬ್ದಾರಿ ಹೊತ್ತಿರುವ ಸರ್ಕಾರ ಯಾವ ರೀತಿ ಪರಿಸ್ಥಿತಿಯನ್ನು ಎದುರಿಸಲು ಪ್ಲಾನ್ ಮಾಡಿದೆಯೆಂಬುದನ್ನು ಹೇಳಲಿಲ್ಲ. ಇದುವರೆಗೆ ಕೆಲಸಮಾಡಿ 6 ಲಕ್ಷ ರೂಪಾಯಿಗಳಲ್ಲಿ 5 ಲಕ್ಷ ರೂಪಾಯಿಗಳನ್ನು ಮುಗಿಸಿದ್ದಾರೆ. ಈ ದಿವಸ ಜನಗಳಿಗೆ ಕೆಲಸ ಮಾಡುವುದಕ್ಕೆ ಶಕ್ತಿಯಿಲ್ಲ, ಕೊಳ್ಳುವುದಕ್ಕೆ ಹಣವಿಲ್ಲ, ಏನು ಮಾಡುತ್ತೀರಿ ಎಂದು ಕೇಳಿದರೆ ಸರಿಯಾದ ಉತ್ತರ ದೊರೆಯಲಿಲ್ಲ. ಈಗ ಕೊಟ್ಟಿರುವ ಹಣದ ಜೊತೆಗೆ ಕೆರೆ ಕೆಲಸ, ರಸ್ತೆ ಕೆಲಸ, ಕಟ್ಟೆ ಕೆಲಸ, ರಿಲೀಫ್ ಕಾಂಗಾರಿ ಮುಂತಾದುವಕ್ಕೆ ಮೈಸೂರು ಜಿಲ್ಲೆಗೆ ಇನ್ನೂ 10 ಲಕ್ಷ ರೂಪಾಯಿಗಳನ್ನು ಕೊಡಬೇಕು, ತಾಲ್ಲೂಕು ಒಂದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕು. ಈಗಿನ ಪರಿಸ್ಥಿತಿ ಇನ್ನೂ ಕೆಲವು ದಿವಸ ಮುಂದುವರಿದರೆ ಜನರ ಕೈಲಿ ರಾಗಿ, ಜೋಳ ಇರುವುದಿಲ್ಲ; ಅವರು ಸಾಯುತ್ತಾರೆ. ಸರ್ಕಾರದವರು ಉದಾರ ಮನಸ್ಸಿನಿಂದ ಈ ಜಿಲ್ಲೆಗೆ 10 ಲಕ್ಷ ರೂಪಾಯಿಗಳನ್ನು ಕೊಡದಿದ್ದರೆ ಜನ ಸಾಯುವುದೂ ಅಲ್ಲದೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಇದನ್ನು ಗಮನಿಸಿ ಖಂಡಿತ ಸಾಕಾದಷ್ಟು ಹಣ ಒದಗಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಪ್ರಕೃತಿಯ ಒಂದು ಕೋಪಕ್ಕೊಳಗಾಗಿ ಇಡೀ ಇಂಡಿಯಾ ದೇಶದಲ್ಲೇ ಒಂದೊಂದು ಕಡೆ ಒಂದೊಂದು ರೀತಿಯ ನಷ್ಟ ಸಂಭವಿಸಿದೆ. ಒಂದು ಕಡೆ ಹೆಚ್ಚು ಪ್ರವಾಹ ಬಂದು ನಷ್ಟವಾಗಿರುವುದನ್ನು ನೋಡುತ್ತಿದ್ದೇವೆ. ಇಲ್ಲಿ ನಮ್ಮ ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯಿಲ್ಲದೆ ಅಭಾವ ಪರಿಸ್ಥಿತಿಯುಂಟಾಗಿರುವುದನ್ನು ಒಂದು ಕಡೆ ನೋಡುತ್ತಿದ್ದೇವೆ. ಈ ಎರಡು ವಿಧವಾದ ತೊಂದರೆಗೊಳಗಾಗಿರುವ ಕಡೆಗಳಿಗೆ ಸರ್ಕಾರ ಸಾಕಷ್ಟು ಪರಿಹಾರ ನೀಡುವ ಸ್ಥಿತಿಯಲ್ಲಿಲ್ಲದಿದ್ದರೂ ಕೂಡ ಕಷ್ಟಕ್ಕೊಳಗಾಗಿರುವ ಜನಗಳಿಗೆ ಸಾಧ್ಯವಾದಮಟ್ಟಿಗೆ ಕೈಲಾದಷ್ಟು ಸಹಾಯ ಮಾಡಿದೆ, ಕೆಲಸಕಾರ್ಯ ಒದಗಿಸುತ್ತಿದೆ, ದಿನಸಿ, ದವಸ ಧಾನ್ಯ ಇರುವ ಕಡೆಯಿಂದ ತಂದು ಹಂಚುತ್ತಿದೆ. ಇದಕ್ಕಾಗಿ ನಾನು ಮೈಸೂರು ಜಿಲ್ಲೆ ಅಭಾವ ಪ್ರದೇಶದಲ್ಲಿರುವ ಜನರ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಬೇಕಾಗಿದೆ. ಇದರ ಜೊತೆಗೆ ಸರ್ಕಾರದವರೇನೊಂದು ಆಶ್ವಾಸನೆ ಜನರಿಗೆ ಕೊಟ್ಟಿದ್ದರೋ ಅದರಂತೆ ನಡೆದುಕೊಳ್ಳುತ್ತಿದ್ದರೂ ಸಹ ನಮ್ಮ ದುರದೃಷ್ಟದಿಂದ ಪರಿಸ್ಥಿತಿ ಇನ್ನೂ ಉತ್ತಮವಾಗಿಲ್ಲ. ಇದುವರೆಗೆ ಸುಮಾರು 27 ಇಂಚು ಮಳೆಯಾಗುತ್ತಿದ್ದ ನಮ್ಮ ಜಿಲ್ಲೆಯಲ್ಲಿ ಸಾಕಷ್ಟಾಗದೆ ರಾಗಿ ಬಿತ್ತನೆ ಒಣಗಿ ಹೋಗಿ ದನಗಳಿಗೆ ಕೂಡ ಮೇವಿಲ್ಲದಂತಾಗಿದೆ. ನೆರೆ ಜಿಲ್ಲೆಯಾದ ಮಂಡ್ಯದಿಂದ ಹುಲ್ಲನ್ನು ಖರೀದಿಗೆ ತೆಗೆದುಕೊಂಡು ಅಭಾವ ಪ್ರದೇಶಗಳಿಗೆ ಉದಾರವಾಗಿ ಸರಬರಾಯಿ ಮಾಡಿದ್ದಾರೆ. ಇದಕ್ಕಾಗಿ ಜನರ ಪರವಾಗಿ ವಂದಿಸುತ್ತೇನೆ. ಪರಿಸ್ಥಿತಿ ಇನ್ನೂ ಬಹಳವಾಗಿ ಕೆಡುತ್ತಿರುವುದರಿಂದ ಉತ್ತಮಗೊಳ್ಳುವವರೆಗೆ ಹೆಚ್ಚು ಪರಿಹಾರ ಕಾರ್ಯಗಳನ್ನು ಕೈಕೊಂಡು ಇನ್ನೂ ಹೆಚ್ಚಾಗಿ ಸಹಾಯ ಮಾಡಬೇಕು. ಲಕ್ಷಾಂತರ ರೂಪಾಯಿಗಳ ಸಂಪಾದನೆ ಮಾಡುವ ರೇಷ್ಮೆ ಕೈಗಾರಿಕೆ ನಡೆಯದೆ ಬಹಳ ತೊಂದರೆಯಾಗಿದೆ. ಜೋಳದ ಫಸಲೂ ಸಹ ಕೆಟ್ಟಿರುವುದರಿಂದ ಶ್ರೀ ಮಾದಯ್ಯನವರು ಹೇಳಿದಂತೆ ಖಾದಿ ಕೇಂದ್ರ, ರಿಲೀಫ್ ಸೆಂಟರ್ ಈಗ ತೆರೆದಿರುವುದಲ್ಲದೆ ಇನ್ನೂ ಹೆಚ್ಚಾಗಿ ತೆರೆದು ಜನರಿಗೆ ಕಸುಬು ಒದಗುವ ಹಾಗೆ ಮಾಡಬೇಕು ಮತ್ತು ರೆವೆನ್ಯೂ ಇಲಾಖೆಯಲ್ಲಿ ರಿಲೀಫ್ ಕಾಂಗಾರಿ ಒಂದು ಇಲಾಖೆಗೆ ವಹಿಸಿ ಕೆಲಸ ಮಾಡಿಸುತ್ತಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಪ್ರತ್ಯೇಕವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಲು ಅನೇಕ ಯೋಜನೆಗಳಿವೆ. ಚಿಕ್ಕಹೊಳೆ ಪ್ರಾಜೆಕ್ಟ್ ಮಂಜೂರುಮಾಡಿ ಕೆಲಸ ಬೇಗ ಮುಗಿಸಬೇಕು, ಕೆಲವು ಕೆರೆಗಳ ಸಂಬಂಧವಾಗಿ ಮುಚ್ಚಳಿಕೆ ಬರೆದುಕೊಟ್ಟು ರೈತರು ಒಪ್ಪಿಗೆ ನೀಡಿದ್ದಾರೆ. ಆದರೆ ಸರ್ಕಾರ ಮುಂದಿನ ಕೆಲಸ ಕೈಗೊಂಡಿಲ್ಲ. ದೊಡ್ಡ ದೊಡ್ಡ ಕೆರೆ ಕಾಂಗಾರಿ ತೆಗೆದುಕೊಂಡರೆ ಉಪಯೋಗಿಸುವ ಹೆಚ್ಚಿಗೆ ಹಣ ಕೂಡ ರೈತರಿಗೆ ಉಪಯೋಗವಾಗುವುದಲ್ಲದೆ ಕೂಲಿಗಾರರಿಗೆ ಕೂಲಿ ಸಹ ಸಿಕ್ಕುತ್ತದೆ. ಈ ದೃಷ್ಟಿಯಿಂದ ಬರೀ ರೆವೆನ್ಯೂ ಇಲಾಖೆಯಿಂದ ರಿಲೀಫ್ ಕೆಲಸ ಮಾಡುವುದಕ್ಕೆ ಬದಲಾಗಿ ಎಲ್ಲಾ ಇಲಾಖೆಗಳೂ ಈ ವರ್ಷ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣದ ಜೊತೆಗೆ ಹೆಚ್ಚಿನ ಹಣ ಕೊಟ್ಟು ಪರಿಸ್ಥಿತಿ ಉತ್ತಮವಾಗುವವರೆಗೆ ಕೆಲಸಕಾರ್ಯ ಕೈಗೊಳ್ಳುವಂತೆ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಬಹಳವಾಗಿದೆ ; 6 ತಾಲ್ಲೂಕುಗಳಲ್ಲಿ ಬಹಳ ಕಷ್ಟವಿದೆ. ಇದಕ್ಕಾಗಿ ಮೊದಲು ಸರ್ಕಾರದವರು ಒಂದು ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಅದರಿಂದೇನೂ ಅಷ್ಟು ಸಹಾಯವಾಗಲಿಲ್ಲ. ಆಮೇಲೆ ಸರ್ಕಾರದಲ್ಲಿ ನಾನೂ ಮತ್ತು ಇತರರು ಕೆಲವರೂ ಮನವಿ ಮಾಡಿದಮೇಲೆ ರಾತ್ರಿ 11 ಗಂಟೆಯ ಸಮಯದಲ್ಲಿ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರಿಗೆ ಪರಿಸ್ಥಿತಿ ಹೇಗೆ ಇದೆಯೆಂಬುದನ್ನು ತಿಳಿಸಿದ ಮೇಲೆ 10 ಲಕ್ಷ ರೂಪಾಯಿಗಳನ್ನು ಕೊಟ್ಟರು. ಈಗ ಆ ಹಣ ಮುಗಿಯುತ್ತಾ ಬಂದಿದೆ. 10 ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಪರಿಸ್ಥಿತಿ ಹೇಗಿತ್ತೋ ಅದು ಈಗ ಅದರ ಮೂರರಷ್ಟು ಹದಗೆಟ್ಟಿದೆ ; ಈಗ ಎಷ್ಟು ಕೊಟ್ಟರೂ ಸಾಲದು. ಶ್ರೀ ಮಾದಯ್ಯನವರು ಒಂದು ಲಕ್ಷ ರೂಪಾಯಿ ಕೊಟ್ಟರೆ ಸಾಕೆಂದು ಹೇಳಿದರು. ಅದು ಸಾಲದು, ತಾಲ್ಲೂಕಿಗೆ 3 ಲಕ್ಷ ರೂಪಾಯಿಗಳಂತಾದರೂ ಕೊಡಬೇಕು. ಏಕೆಂದರೆ ಯಾರಿಗೂ ಕೆಲಸ ಮಾಡಲು ಇನ್ಯಾವ ಆಧಾರವೂ ಇಲ್ಲ. ಜೋಳ,

(ಶ್ರೀ ಶಿವನಂಜೇಗೌಡ.)

ಕಾರುರಾಗಿ, ಹೈನುಫಸಲು ಎಲ್ಲಾ ಹೋಯಿತು. ಕೆಲವರು ಬಿತ್ತಿದರು, ಕೆಲವರು ಬಿತ್ತನೆಯನ್ನೇ ಮಾಡಲಿಲ್ಲ. ಎಲ್ಲಾ ಗೊಬ್ಬರದ ಗುಂಡಿಯು ಹಾಗಾಗಿದೆ. ಬೇಕಾದರೆ ಬಂದು ಅಜಮಾಯಿಷಿ ಮಾಡಬಹುದು. ಸುಮಾರು 2 ತಿಂಗಳೊಳಗೆ ಕೊಟ್ಟ ಹಣವೆಲ್ಲಾ ಮುಗಿದುಹೋಗಿದೆ. ವರ್ಷಗಟ್ಟಲೆ ಕೆಲಸ ನಡೆಯಬೇಕಾಗಿದೆ. ಇನ್ನೂ ಹೇಳುವುದಾದರೆ ಮನೆ ಮನೆಗೂ ಫ್ಯಾಮಿಲಿ ರಿಲೀಫ್ ಎಂದು ಹೊತ್ತುಕೊಂಡು ಹೋಗಿ ಕೊಡಬೇಕಾಗಿದೆ. ದಿಟ್ಟತನದಿಂದ ಸರ್ಕಾರದವರು ಆದಷ್ಟು ಜಾಗ್ರತೆ ಈಗ ಜನರಿಗೆ ಒದಗಿರುವ ಕಷ್ಟವನ್ನು ಪರಿಹಾರ ಮಾಡುವುದಾಗಿ ವಾಗ್ದಾನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

4-30 P.M.

*ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸರ್ಕಾರಕ್ಕೂ ಮತ್ತು ಮಾನ್ಯ ಸಭಿಕರಿಗೂ ಈ ವಿಷಯದಲ್ಲಿ ಚೆನ್ನಾಗಿ ಮನವರಿಕೆಯಾಗಿದೆ. ಆದಾಗ್ಯೂ ನಾನು ಈ ವಿಷಯದಲ್ಲಿ ಎರಡು ಮಾತನ್ನು ಹೇಳಬೇಕಾಗಿದೆ. ಫ್ಯಾಮಿಲಿ ರಿಲೀಫ್‌ಗಾಗಿ 8½ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಮನವಿಯನ್ನಿಟ್ಟಿದ್ದಾರೆ. ಆದರೆ ಸರ್ಕಾರಿ ಆಜ್ಞೆ ಪ್ರಕಾರ ಸ್ಟೇಟ್ ಕಂಟಿಂಜೆನ್ಸಿ ಫಂಡಿನಿಂದ 10ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಪ್ರೆಸ್ ಕಮ್ಯೂನಿಕೇಷನ್ ಮುಖೇನ ತಿಳಿಸಿದ್ದೂ ಈಗ 8½ ಲಕ್ಷರೂಪಾಯಿಗಳಿಗೆ ಅದು ಕುಂಠಿತವಾಗಿದೆ. ಇದರ ದೆಸೆಯಿಂದ 1½ ಲಕ್ಷ ರೂಪಾಯಿಗಳು ಕಡಮೆಯಾಗಿದೆ. ಅದು ಯಾವ ಉದ್ಯಮಗಳಿಗೆ ಸೇರಿದೆಯೋ ಗೊತ್ತಿಲ್ಲ. ಮೊನ್ನೆತಾನೆ ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿ ಏನು ಕೆಲಸ ಮಾಡಿದೆಯೆಂದು ತನಿಖೆ ಮಾಡಿದಾಗ ಸುಮಾರು 9 ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಕೆಲಸವಾಗಿದೆ, ಕೊಟ್ಟಿರುವ ಹಣ ಪೂರ್ತಿಯಾಗಿ ಖರ್ಚಾಗುವ ಸಂದರ್ಭವಿದೆ ಎಂದು ಗೊತ್ತಾಯಿತು. ಆದರೆ ಪರಿಸ್ಥಿತಿ ಹೇಗಿದೆಯೆಂಬುದನ್ನು ಗಮನಿಸಬೇಕು. ಅಭಾವ ಪರಿಸ್ಥಿತಿ ಮೈಸೂರು ಜಿಲ್ಲೆಯಲ್ಲಿನ 5-6 ತಾಲ್ಲೂಕುಗಳಲ್ಲಿ ಕಡಮೆಯಾಗಿದೆಯೆ ಅಥವಾ ಇನ್ನೂ ಇದೆಯೆ ಎಂಬುದನ್ನು ಸರ್ಕಾರ ಕೂಡ ಈ ದಿವಸ ಪರಿಶೀಲಿಸಬೇಕು. ಆ ಜಿಲ್ಲೆಯ ಪರಿಸ್ಥಿತಿ ಅಷ್ಟು ಹದಗೆಟ್ಟಿರುವ ವೇಳೆಯಲ್ಲಿ ಸರ್ಕಾರದವರು ನೀಡಿದ ಸಹಾಯಕ್ಕಾಗಿ ನಾವೆಲ್ಲರೂ ಅವರಿಗೆ ಆಭಾರಿಯಾಗಿದ್ದೇವೆ. ಆದರೆ ಇಲ್ಲಿಯತನಕ ಆ ಭೀಕರ ಪರಿಸ್ಥಿತಿಗಳು ಸುಧಾರಿಸುವಂಥ ಚಿನ್ಹೆಗಳೇ ಕಂಡುಬರುತ್ತಿಲ್ಲ. ಇತ್ತೀಚೆಗೆ ಜನರನ್ನು ವಿಚಾರಮಾಡಿದ್ದರಲ್ಲಿ ಆ ಪ್ರಾಂತ್ಯದಲ್ಲಿ ಮಳೆಯೇ ಬಿದ್ದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಮೈಸೂರಿನ ಕೆಲವು ಭಾಗಗಳಲ್ಲೇನೋ ಪನ್ನೀರುದಾನಿಯಲ್ಲಿ ಪನ್ನೀರೆರಚುವಂತೆ ಮಳೆ ಬಿದ್ದಿದೆಯೆಂದು ಹೇಳುತ್ತಿದ್ದಾರೆ. ಹಿಂದಿನ ಸಾಲಿನಲ್ಲಿ ಆ ಪ್ರಾಂತ್ಯದಲ್ಲಿ ಜೋಳದ ಬೆಳೆ ಸಂಪೂರ್ಣವಾಗಿ ಆಗಲೇ ಇಲ್ಲ. ಅದರ ಜೊತೆಗೆ ಈ ವರ್ಷ ಸಹ ರಾಗಿ ಮತ್ತು ಜೋಳ ಈ ಎರಡು ಬೆಳೆಗಳೂ ಸಂಪೂರ್ಣವಾಗಿ ಹೋಗಿಬಿಟ್ಟಿವೆ. ಬೆಳೆಯೆನ್ನುವ ಮಾತೇ ಇಲ್ಲ. ಹೀಗಿದೆ ಎನ್ನುವುದನ್ನು ನಾವು ಸರ್ಕಾರದವರ ಗಮನಕ್ಕೆ ತಂದರೆ ಅವರು ಬಾಯಿನಲ್ಲೇನೋ ಬಹಳ ಹೇಳಿಬಿಡುತ್ತಾರೆ. ಮಾನ್ಯ ಮಂತ್ರಿಗಳು ಈ ಹಿಂದೆ ಆ ಪ್ರದೇಶಗಳ ಪರಿಸ್ಥಿತಿ ಸುಧಾರಿಸುವವರೆಗೂ ನಾವು ಅಲ್ಲಿ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ಕೈಕೊಳ್ಳುತ್ತೇವೆಂಬುದಾಗಿ ತಿಳಿಸಿದ್ದರು. ಆ ವೇಳೆಯಲ್ಲಿ ಅವರು ನಮ್ಮ ಪ್ರಾಂತ್ಯದ ಬಗ್ಗೆ ಖರ್ಚು ಮಾಡತಕ್ಕ ಮೊಬಲಗನ್ನು 10 ಲಕ್ಷ ರೂಪಾಯಿಗಳೆಂದು ನಿಗದಿಮಾಡಬಾರದೆಂದೂ ಮಂತ್ರಿಗಳಿಗೆ ಮನಸ್ಸಿದ್ದು ಅಲ್ಲಿ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದರೆ ಇದರಿಂದ ತೊಂದರೆ ಬರಬಹುದೆಂದೂ, ಅದಕ್ಕಾಗಿ ಹೀಗೆ ಖರ್ಚು ಮಾಡತಕ್ಕ ಮೊಬಲಗನ್ನು ನಿರ್ಧಾರ ಮಾಡತಕ್ಕದ್ದು ಸೂಕ್ತವಲ್ಲವೆಂದೂ ಹೇಳಿದ್ದರು; ಅಂಥ ಪರಿಸ್ಥಿತಿಗಳು ಬಂದರೂ ಬರಬಹುದೆಂದು ಹೇಳಿದ್ದರು. ಆದರೆ ಈ ದಿವಸ ಅಲ್ಲಿ ನಿಖರವಾಗಿ ಇಂತಿಂಥ ಕಾಮಗಾರಿಗಳನ್ನೇ ಕೈಗೊಳ್ಳುತ್ತೇವೆಂದು ಯಾವುದನ್ನೂ ತಿಳಿಸಿಲ್ಲ. ಈಗ ತ್ವರಿತವಾಗಿ ಮೈಸೂರು ಜಿಲ್ಲೆಯಲ್ಲಿ, ಮೈಸೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಇತ್ಯಾದಿ ಪ್ರದೇಶಗಳಲ್ಲಿ ಹೆಚ್ಚಿನ ರಿಲೀಫ್ ಕಾಂಗಾರಿಗಳನ್ನು ಕೈಕೊಳ್ಳಬೇಕಾಗಿದೆ. ಈಗ ಅಲ್ಲಿ ಅನೇಕ ಹೊಸಹೊಸ ಕೆಲಸಗಳನ್ನು ಕೈ ಗೊಳ್ಳಬೇಕಾಗಿದೆ. ಅವುಗಳನ್ನೆಲ್ಲಾ ಪೂರೈಸಬೇಕಾದರೆ ಸುಮಾರು 10 ಲಕ್ಷ ರೂಪಾಯಿಗಳಿಗೂ ಜಾಸ್ತಿ ಬೇಕಾಗುತ್ತದೆ. ಈ ದೃಷ್ಟಿಯಿಂದ ಜನತಾ ಸರ್ಕಾರ ಜನರ ಬೇಡಿಕೆಗಳಿಗೆ ಸರಿಯಾಗಿ ಮನ್ನಣೆಕೊಟ್ಟು ಸೋಷಿಯಲ್ ಪ್ರಾಬ್ಲಂ ಯಶಶ್ವಿಯಾಗಿ ನಡೆಸಬೇಕು. ಜನರ ಅಭಾವ ಪರಿಸ್ಥಿತಿಯನ್ನು ನೀಗಲು ಹಣಕಾಸಿನ ಮಂತ್ರಿಗಳು ತಮ್ಮ ಕೈಯನ್ನು ಬಿಗಿಹಿಡಿಯಬಾರದು. ಈ ಹಿಂದೆ ಯಾವ ರೀತಿಯಾಗಿ ಕೋಲಾರ-ತುಮಕೂರು-ಚಿತ್ರದುರ್ಗ ಜಿಲ್ಲೆಗಳಲ್ಲಿಕ್ಷಾಮ ಪರಿಸ್ಥಿತಿ ಒದಗಿದ್ದುದನ್ನು ಯಾವ ರೀತಿ ದಿಟ್ಟತನದಿಂದ ಎದರಿಸಿದರೋ ಅದೇ ರೀತಿಯಾಗಿ ಇಲ್ಲಿಯೂ ಈ ಪರಿಸ್ಥಿತಿಯನ್ನು ಎದುರಿಸಲು ಸಹಾಯ ನೀಡತಕ್ಕ ಬಗ್ಗೆ ಆ ಪರಿಸ್ಥಿತಿಯ ಭೀಕರಸ್ವರೂಪ ಹತೋಟಿಗೆ ಬರುವವರೆಗಾದರೂ ಮಾನ್ಯ ಹಣಕಾಸಿನ ಸಚಿವರು ತಮ್ಮ ಕೈಯನ್ನು ಬಿಗಿಹಿಡಿಯಬಾರದೆಂದು ಪ್ರಾರ್ಥಿಕೊಳ್ಳುತ್ತೇನೆ. ಆ ರೀತಿ ಸರ್ಕಾರದವರು ನಿರ್ವಂಚನೆಯ ಭಾವನೆಯಿಂದ ಕೆಲಸ ಮಾಡುತ್ತಾರೆಂದು ನಾನು ನಂಬಿದ್ದೇನೆ. ಹೀಗೆ ಯಾವಯಾವ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿಯುಂಟಾಗಿದೆಯೋ ಅಲ್ಲಿ ಈ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ಪ್ರಾರಂಭಿಸಲು ಆ ಕಮಿಟಿಗಳಿಗೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಉಂಟಾಗಿರತಕ್ಕ ಪರಿಸ್ಥಿತಿ ಏನು ಮತ್ತು ಸರ್ಕಾರದವರು ಆ ಬಗ್ಗೆ ಒದಗಿಸಿರತಕ್ಕ ಸಹಾಯವೇನು ಎನ್ನುವುದರ ಬಗ್ಗೆ ಈಗಾಗಲೇ ಹಲವು ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಆದ್ದರಿಂದ ಈ ವಿಷಯವಾಗಿ ನಾನು ಅಷ್ಟೇನೂ ಹೆಚ್ಚಾಗಿ ಮಾತನಾಡಬೇಕಾಗಿಲ್ಲ. ಮೈಸೂರು ಜಿಲ್ಲೆಯ ಜನರ ಕಷ್ಟನಿವಾರಣೆಗಾಗಿ ಸರ್ಕಾರದವರು ನೀಡಿರತಕ್ಕ ಸಹಾಯಕ್ಕಾಗಿ ನಾನು ಅವರನು ವಂದಿಸುತ್ತೇನೆ. ಸರ್ಕಾರದವರು ಆ ಪ್ರದೇಶಕ್ಕೆ ನೀಡುತ್ತೇವೆಂದು ಹೇಳುತ್ತಿರುವ ಸಹಾಯ ಕೇವಲ ಹಂಗಾಮಿಯ ಸ್ವರೂಪದ್ದು; ತಾತ್ಕಾಲಿಕವಾದಂಥ ಪರಿಹಾರವಾಗಿದೆ. ಆದರೆ ನಾನು ಒಂದು ಖಾಯಂ ಪರಿಹಾರ ನಿಧಿಯನ್ನೇ ಒದಗಿಸಬೇಕೆಂದು ಒತ್ತಾಯ ಮಾಡ ಇಚ್ಛಿಸುತ್ತೇನೆ. ಆ ಜಿಲ್ಲೆಯಲ್ಲಿ ಇದುವರೆಗಾಗಲೇ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳ ಬಾಬಿನಲ್ಲಿ 8 ಲಕ್ಷದ 50 ಸಾವಿರ ರೂಪಾಯಿಗಳು ಖರ್ಚಾಗಿವೆ. ಇನ್ನು ಮುಂದೆ ಅಲ್ಲಿ ಕೂಲಿಗೆ ಬರತಕ್ಕ ಜನರಿಗೆ ಕೂಲಿಕೊಡಲು ದುಡ್ಡಿರುವುದಿಲ್ಲ. ಎಲ್ಲಿಯವರೆಗೆ ಇಂಥ ಒಂದು ಭೀಕರ ಪರಿಸ್ಥಿತಿ ಅಲ್ಲಿ ಮುಂದುವರಿಯುತ್ತದೋ ಅಲ್ಲಿಯವರೆಗೂ ಸರ್ಕಾರ ಸಾಕಷ್ಟು ಧನ ಸಹಾಯವನ್ನು ನೀಡಲೇಬೇಕಾಗಿದೆ. ಖಾಯಂ

ಕ್ಷಾಮ ನಿವಾರಣಾ ಏರ್ಪಾಡನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಮೈಸೂರು ಜಿಲ್ಲೆಯ ಜನರಿಗೆ ಹೀಗೆ ಭಿಕ್ಷೆ ಬೇಡಬೇಕೆಂಬ ಇರಾದೆ ಯಾವತ್ತಿಗೂ ಇಲ್ಲ. ಎಂಥಾ ಪರಿಸ್ಥಿತಿ ಬಂದಾಗ್ಯೂ ನಾವು ದುಡಿಯುತ್ತಲೇ ಇದ್ದೇವೆ. ತಾವು ಸಾಲವಾಗಿ ಕೊಟ್ಟ ಹಣವನ್ನು ತೀರಿಸಿರುತ್ತೇವೆ ಆದರೆ ತಾವು ಖಾಯಂ ಪರಿಹಾರ ಕ್ರಮವನ್ನು ಕೈಗೊಂಡರೆ ಜನರಿಗೂ ಉಪಕಾರ; ದೇಶದಲ್ಲಿ ಆಹಾರ ಪರಿಸ್ಥಿತಿಯೂ ಉತ್ತಮಗೊಳ್ಳಲು ತುಂಬಾ ಅನುಕೂಲವಾಗುತ್ತದೆ. ಅದಕ್ಕಾಗಿ ತಾವು ಈ ಬಗ್ಗೆ ಒಂದು ಖಾಯಂ ಯೋಜನೆಯನ್ನು ಹಾಕಿಕೊಳ್ಳುವುದು ತೀರಾ ಅಗತ್ಯ. ಅನೇಕ ಕೆರೆಗಳಲ್ಲಿ ಹೂಳು ತುಂಬಿ ಮುಚ್ಚಿ ಹೋಗಿದೆ. ಅಂಥಾ ಕೆರೆಗಳಲ್ಲಿ ಹೂಳು ತೆಗೆಸುವ ಕೆಲಸ ನಡೆಸಬೇಕಾಗಿದೆ. ಕೆರೆಗಳ ಜೀರ್ಣೋದ್ಧಾರ ಕಾರ್ಯ ಬೇರೆ ನಡೆಯುವುದು ಬಹಳವಾಗಿದೆ. ಈ ಬಾಬಿನಲ್ಲಿ ಈಗ್ಗಾಗಲೇ ಅನೇಕ ಕಾಂಗಾರಿಗಳ ಅಂದಾಜುಗಳು ಕ್ರಮವಾಗಿ ತಯಾರಿಸಲ್ಪಟ್ಟು ಸ್ಕ್ರೂಟಿನಿಯಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಥವ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಮಂಜೂರಾತಿ ಬಗ್ಗೆ ನಿಂತಿರುತ್ತವೆ, ಈ ಕೆಲಸಗಳನ್ನೆಲ್ಲಾ ಕಾರ್ಯಗತ ಮಾಡಬೇಕಾದದ್ದು ಅಗತ್ಯ. ಇದರಿಂದ ದೇಶಕ್ಕೆ ಬಹಳ ಉಪಕಾರವಿದೆ. ಆದರೆ ಈಗಾಗಲೇ ಶ್ರೀ ಬಿ. ರಾಚಯ್ಯನವರು ಹೇಳಿದಂಥ ಚಿಕ್ಕ ಹೊಳೆ ಪ್ರಾಜೆಕ್ಟ್ ರಿಜರ್ವಾಯರಿನ ಕೆಲಸ ಪ್ರಾರಂಭವಾಗಬೇಕಾಗಿದ್ದರೆ ಇನ್ನೂ ಒಂದು ವರ್ಷ ಕಾಲ ಹಿಡಿಯುತ್ತದೆ. ಅಲ್ಲಿ ಆ ಇಂಜಿನಿಯರಿಂಗ್ ಷೆಡ್, ರಸ್ತೆ ಇತ್ಯಾದಿ ಕೆಲಸಗಳೆಲ್ಲಾ ಮುಗಿಯಬೇಕಾಗಿದ್ದರೆ ಕಾಲ ವಿಳಂಬ ಆಗೇ ಆಗುತ್ತದೆ. ಆದಕಾರಣ ಅಲ್ಲಿ ಜನರಿಗೆ ಜೀವನಕ್ಕೆ ತೊಂದರೆಯಿರುವುದರಿಂದ ತ್ವರಿತವಾಗಿ ಮಟ್ಟಿ ಕಾಂಗಾರಿ ಛಾನಲ್ ಕೆಲಸ ಇತ್ಯಾದಿ ಬಾಬುಗಳನ್ನು ಕೈಗೊಳ್ಳುವಂತೆ ಸರ್ಕಾರ ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಬೇಕು ಆ ಪ್ರಾಂತ್ಯದಲ್ಲಿ ಕೆಲವು ಕಡೆ ಖುಷ್ಕಿ ಜಮೀನುಗಳಲ್ಲಿ ನೀರಿನ ಸೌಕರ್ಯವಿರತಕ್ಕವರಿಗೆ-ಕಪಿಲೆ ಹಾಕಲು ಸಾಧ್ಯವಾಗುತ್ತಿಲ್ಲ. ಅಂಥ ಪ್ರದೇಶಗಳಿಗೆ ತಾವು ಸ್ಪೆಷಲ್ ಅಂಟೆನ್ಷನ್ ಕೊಟ್ಟು ಬೇಗ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕು. ಇಷ್ಟು ಅನುಕೂಲಗಳನ್ನು ಆದಷ್ಟು ಬೇಗ ಆ ಜನರಿಗೆ ನೀಡಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.- ನರಸೀಪುರ).—ಸ್ವಾಮಿ, ಈ ಬಗ್ಗೆ ನಾನು ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಮೈಸೂರು ಜಿಲ್ಲೆಯ ಎಲ್ಲ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ಈಗ ಸರ್ಕಾರದವರು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹೇಳಿರತಕ್ಕ 8-5 ಲಕ್ಷ ರೂಪಾಯಿಗಳ ಅವಕಾಶ ನಾಳೆ ನವೆಂಬರ್ 1 ನೆಯ ತಾರೀಖಿಗೆ ಆಖೈರಾಗುವುದೆಂದು ನನ್ನ ಮನಸ್ಸಿಗೆ ತೋರುತ್ತಿದೆ. ಅನಂತರ ಹೊಸ ಬಡ್ಜೆಟ್ ಪಾಸಾಗಬೇಕು. ಈಗ ಫ್ಯಾಮಿನ್ ಬಾಬಿನಲ್ಲಿ ಮೈಸೂರು ಜಿಲ್ಲೆಗೆ ಹೇಳಿರತಕ್ಕ 30 ಸಾವಿರ ರೂಪಾಯಿಗಳು ಏತಕ್ಕೂ ಸಾಲುವುದಿಲ್ಲ. ನವೆಂಬರ್ ತಿಂಗಳಿಂದ ಮುಂದಿನ ಜೂನ್ ಆಖೈರುವರೆಗೆ ಯಾವ ಬೆಳೆಗಳೂ ಬರುವಂಥ ನಿರೀಕ್ಷಣೆಯಿಲ್ಲ. ಈಗಲೇ ಜಾನುವಾರುಗಳಿಗೆ ಹುಲ್ಲು-ನೀರಿಗೆ ತುಂಬಾ ತೊಂದರೆಯಾಗಿದೆ. ಇನ್ನು ಜನರ ಪರಿಸ್ಥಿತಿ ಏನಾಗಿದೆಯೆಂಬುದನ್ನು ಹೇಳಬೇಕಾದ್ದೇ ಇಲ್ಲ. ನವೆಂಬರ್ ನಂತರ ತರತಕ್ಕ ಬಡ್ಜೆಟ್ಟಿನಲ್ಲಿ ಹೊಸ ವರ್ಷದ ಬಡ್ಜೆಟ್ ಆಗುವ ತನಕ ಕನಿಷ್ಟ ಪಕ್ಷ 30 ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕು.

ಇನ್ನೊಂದು ವಿಷಯ. ಕ್ಷಾಮಕ್ಕೆ ಒಳಗಾಗಿರತಕ್ಕ ಪ್ರದೇಶದಲ್ಲಿ ಯಾಕೆ ಕ್ಷಾಮ ಬಂದಿದೆ ಎಂದರೆ ಬಹುಭಾಗ ಮಳೆಯ ಆಧಾರದ ಮೇಲೆ ಬೆಳೆಯಾಗತಕ್ಕ ಪ್ರದೇಶವಾಗಿದೆ. ಆದುದರಿಂದ ಕೇವಲ ಮಳೆಯ ಮೇಲೆ ಆಧಾರಮಾಡಿಕೊಳ್ಳದೆ ಎಲ್ಲೆಲ್ಲಿ ಸಾಧ್ಯವೋ ಆ ಜಾಗದಲ್ಲಿ ಖಾಯಂಆಗಿ ಕೆರೆಕಟ್ಟುವುದರ ಮುಖಾಂತರ ಅದನ್ನು ಹೋಗಲಾಡಿಸಿಕೊಳ್ಳಬಹುದು. ಚಾಮರಾಜನಗರ, ಟಿ.-ನರಸೀಪುರ, ಯಳಂದೂರು ಮೊದಲಾದ ತಾಲ್ಲೂಕುಗಳಲ್ಲಿ ಇಂಥ ಕಾರ್ಯಗಳನ್ನು ತೆಗೆದುಕೊಳ್ಳಬೇಕು. ಬಿಳಗುಂದ ಬಳಿ ಒಂದು ಕೆರೆ ಕಟ್ಟಲು ಅಂದಾಜು ತಯಾರಾಗಿದೆ. ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡುವುದೇನೆಂದರೆ, ಮರಾಮತ್ತು ಇಲಾಖೆಯಿಂದ ಈ ಅಂದಾಜು ಯಾವ ಹಂತದಲ್ಲಿಯೇ ಇರಲಿ ಕೂಡಲೆ ತರಿಸಿಕೊಂಡು, ಅದನ್ನು ಮಂಜೂರು ಮಾಡಿ ಕೆಲಸ ಮಾಡಿಸಬೇಕು. ಹಾಗೆ ಮಾಡಿದರೆ ಬಹಳ ಉಪಕಾರಮಾಡಿದಹಾಗಾಗುತ್ತದೆ ಮತ್ತು ಅವರ ಕರ್ತವ್ಯ ನೆರವೇರಿಸಿದಹಾಗಾಗುತ್ತದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಮೈಸೂರು ಜಿಲ್ಲೆಯಿಂದ ಹತ್ತು ಜನರು ಮಾತನಾಡಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಿಂದ ಒಬ್ಬರು ಮಾತನಾಡಬೇಕು ಎಂದರೆ ನಮ್ಮ ಗೋಳು ಕೇಳುವವರು ಯಾರು ? ಮೈಸೂರು ದೇಶದಲ್ಲಿ ಮಳೆ ಇಲ್ಲವೆಂದು ದೇಶಾದ್ಯಂತ ಸಾರುತ್ತಿದ್ದಾರೆ. ಮೈಸೂರು ದೇಶದಲ್ಲಿ ಯಾವ ವಿಚಾರ ತೆಗೆದುಕೊಂಡರೂ ಕೂಡ ನಮ್ಮ ಚಿಕ್ಕಮಗಳೂರು ಜಿಲ್ಲೆ ಯಾವಾಗಲೂ ಕೂಡ ಬಡತನದ ಜಿಲ್ಲೆ ಎಂದು ಹೇಳುತ್ತಿದ್ದೇವೆ. ಆ ವಿಷಯ ಸರ್ಕಾರದ ರಿಕಾರ್ಡಿನಲ್ಲಿದೆ. ಇವೊತ್ತಿನವರೆಗೂ ಚಿಕ್ಕಮಗಳೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ, ಕೆಲವು ಹೋಬಳಿಗಳಲ್ಲಿ ಆರಂಗುಲ ಮಳೆಯಾಗಿದೆ. ಇವೊತ್ತು ಕೆಲವು ಕಡೆ ಮಳೆಬಂದಿಲ್ಲ. ಕಡೂರು ಹೋಬಳಿ, ಯಗಟಿ ಹೋಬಳಿ, ಶಿಂಗಡಗೆರೆ ಹೋಬಳಿಗಳಲ್ಲಿ ಮಳೆ ಬಂದಿಲ್ಲ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಸಂತೆಯೊಳಗೆ ಮೂರು ಜನ ವ್ಯಾಪಾರಕ್ಕೆ ಹೋಗಿದ್ದರಂತೆ. ಒಬ್ಬನು ಅಕ್ಕಿರಾಶಿ, ಇನ್ನೊಬ್ಬನು ಉಪ್ಪಿನ ರಾಶಿ, ಮತ್ತೊಬ್ಬನು ಕಾಯಿರಾಶಿ ಹಾಕಿಕೊಂಡಿದ್ದರಂತೆ. ಆಗ ಮಳೆ ಬಂದು ಎಲ್ಲ ರಾಶಿಗಳೂ ನೆನೆದುವು. ಉಪ್ಪಿನರಾಶಿ ಕರಗಿಹೋಯಿತು. ಅಕ್ಕಿರಾಶಿ ಮಳೆಯಲ್ಲಿ ನೆನೆದು ಅಳತೆಗೆ ಹೆಚ್ಚಿತು ಮತ್ತು ಕಾಯಿರಾಶಿಯವನಿಗೆ ಏನೂ ತೊಂದರೆಯಾಗಲಿಲ್ಲ. ಈ ಮೂರು ಜನರೂ ತಮಗೆ ನಷ್ಟವಾಯಿತೆಂದು ಅತ್ತರಂತೆ. ಇಲ್ಲಿ ನಡೆಯುತ್ತಿರುವ ಭಾಷಣಗಳನ್ನು ನೋಡಿದರೆ ಹೀಗಾಗಿದೆ ಎಂದು ಹೇಳಬಹುದು. ಮೈಸೂರು ದೇಶದ ಇತಿಹಾಸದಲ್ಲಿ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯಾಗಿ ಒಂದು ಬೆಳೆ ಬಂದು ಇವತ್ತಿಗೆ ಮೂರು ವರ್ಷವಾಗಿದೆ ಒಲೆಮುಂದೆ ಬಡತನ; ಊರುಮುಂದೆ ಹೊಲ ಎಂಬಂತಾಗಿದೆ. ಆದುದರಿಂದ ಮೈಸೂರು ಜಿಲ್ಲೆಗೆ ಹತ್ತು ಲಕ್ಷ—ಇಪ್ಪತ್ತು ಲಕ್ಷ ಕೇಳುತ್ತಿರುವಾಗ ನಮ್ಮ ಜಿಲ್ಲೆಗೆ ಎರಡುಲಕ್ಷ ರೂಪಾಯಿಗಳನ್ನಾದರೂ ಕೊಡಬೇಕೆಂದು ಕೇಳುತ್ತೇನೆ. ಇದರಿಂದ ಕೆರೆಕಟ್ಟೆಗಳನ್ನು ಕಟ್ಟಿಸಬೇಕೆಂದು ಹೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಉಗ್ರವಾದ ಪರಿಸ್ಥಿತಿ ಇದೆ ಎಂದು ಉದಾರವಾಗಿ ಸಹಾಯ ಮಾಡುತ್ತಿದ್ದೀರಿ. ಅದೇರೀತಿಯಾಗಿ ಚಿಕ್ಕಮಗಳೂರು ಜಿಲ್ಲೆಗೂ ಸಹ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಸಹಾಯಮಾಡಲು ಹೆಚ್ಚಿಗೆ ಗ್ರ್ಯಾಂಟ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈ ಸಭೆಯಲ್ಲಿ ಅನೇಕ ಮುಖಂಡರುಗಳು ಅವರವರ ಜಿಲ್ಲೆಗಳಲ್ಲಿ ಏನೇನು ಅಭಾವವಾಗಿದೆ ಎನ್ನುವುದನ್ನು ವಿವರಿಸಿದ್ದಾರೆ. ಬೆಂಗಳೂರು, ದೇಶಕ್ಕೆ ಮುಖ್ಯವಾದ ಪಟ್ಟಣ. ಆದರೆ ಬೆಂಗಳೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ಅನೇಕ ಕೆರೆಗಳಲ್ಲಿ ನೀರುನಿಲ್ಲದೆ ಬಹಳ ನಷ್ಟವಾಗುತ್ತಿದೆ. ಬೆಟ್ಟಗುಡ್ಡಗಳಿಂದ ಕೂಡಿರತಕ್ಕ ಜಿಲ್ಲೆ ಇದು. ಇದರಲ್ಲಿ ನಮ್ಮ ಮಾಗಡಿ ತಾಲ್ಲೂಕಿನಲ್ಲಿರುವ 120 ಮೈನರ್ ಕೆರೆಗಳು ಮತ್ತು 24 ಮೇಜರ್ ಕೆರೆಗಳ ಪೈಕಿ 5 ಕೆರೆಗಳಲ್ಲಿ ಕೂಡ ನೀರುನಿಲ್ಲದೆ ಬಹಳ ತೊಂದರೆಯಾಗಿದೆ. ಆದುದರಿಂದ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸುವಾಗ ಎಲ್ಲ ಜಿಲ್ಲೆಗಳನ್ನೂ ಗಮನಕ್ಕೆ ತೆಗೆದುಕೊಂಡು ಸರಿಯಾದ ರಿಪೋರ್ಟನ್ನು ಆಯಾ ತಾಲ್ಲೂಕಿನ ಅಮಲ್ದಾರರಿಂದ ತರಿಸಿಕೊಂಡು ಸೂಕ್ತ ಪರಿಹಾರವನ್ನು ಎಲ್ಲ ಜಿಲ್ಲೆಗಳಿಗೆ ಕೊಡಬೇಕೆಂದು ಹೇಳುತ್ತೇನೆ. ಕ್ಷಾಮನಿವಾರಣೆಗಾಗಿ, ಎಲ್ಲ ಜನಗಳ ಪುರೋಭಿವೃದ್ಧಿಗೋಸ್ಕರ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬೆಂಗಳೂರು ಜಿಲ್ಲೆಗೂ ಸಹ ಹೆಚ್ಚಿನ ಮಟ್ಟದಲ್ಲಿ ಸಹಾಯ ಮಾಡಬೇಕು. ಮಾಗಡಿ ತಾಲ್ಲೂಕು ಬಹಳ ಹಿಂದುಳಿದಿರತಕ್ಕ ತಾಲ್ಲೂಕಾದ್ದರಿಂದ ಅಲ್ಲಿಗೆ ಹೆಚ್ಚಿಗೆ ಸಹಾಯ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಈ ಕ್ಷಾಮನಿವಾರಣೆಗೋಸ್ಕರವಾಗಿ ಕೊಡತಕ್ಕ ಗ್ರ್ಯಾಂಟ್ ಬರೀ ಮೈಸೂರು ಜಿಲ್ಲೆಗೆ ಏನು ಖರ್ಚಾಗಿದೆ, ಅದಕ್ಕೆ ಮಂಜೂರಾತಿ ಪಡೆಯುವುದಕ್ಕೆ ಕೇಳುತ್ತಿದ್ದಾರೆಯೇ, ಅಥವಾ, ಮುಂದೆ ನವೆಂಬರ್ ಒಂದನೇ ತಾರೀಖಿನವರೆಗೆ ಖರ್ಚುಮಾಡತಕ್ಕ ಗ್ರ್ಯಾಂಟಿಗೋಸ್ಕರ ಕೇಳುತ್ತಿದ್ದಾರೆಯೇ ಎಂದು ನನ್ನ ಮನಸ್ಸಿಗೆ ಸ್ಪಷ್ಟವಾಗಿಲ್ಲ. ನವಂಬರ್ ಒಂದನೇ ತಾರೀಖಿನವರೆಗೆ ಖರ್ಚಾಗತಕ್ಕದ್ದು ಎಂದು ಈಗ ಡಿಮ್ಯಾಂಡ್ ನಂಬರ್ 30ರಲ್ಲಿ ಹೇಳಿರುವ ಹಾಗಿದೆ. ಚೀಫ್ ಇಂಜಿನಿಯರ್ ಆಫೀಸಿನಲ್ಲೂ, ಸರ್ಕಾರದಲ್ಲೂ ಇವೊತ್ತು ಬೇಕಾದಷ್ಟು ಕೆರೆ ಮತ್ತು ನಾಲಾ ಕೆಲಸಗಳು ಪೆಂಡಿಂಗ್‌ನಲ್ಲಿವೆ. ಮಂಜೂರಾಗಿರುವುದು, ಮಂಜೂರಾಗುವುವು ಬೇಕಾದಷ್ಟಿವೆ. ಮೊನ್ನೆತಾನೆ ಕ್ಷಾಮಪರಿಹಾರಕ್ಕೆ ಸಂಬಂಧಿಸಿದ ಮಂತ್ರಿಗಳು ಬಂದಮೇಲೆ ಕ್ಷಾಮಬಂದಿದೆ. ಅವರು ತುಮಕೂರು ಜಿಲ್ಲೆಗೆ ಬಂದಿದ್ದು ಅಲ್ಲಿ ಎಷ್ಟರಮಟ್ಟಿಗೆ ಪರಿಸ್ಥಿತಿ ಇದೆ ಎಂದು ನೋಡಿಕೊಂಡು ಬಂದರು. ತುಮಕೂರು ಜಿಲ್ಲೆಯಲ್ಲಿ ಎರಡಾಣೆ, ಮೂರಾಣೆ, ನಾಲ್ಕಾಣೆ ಬೆಳೆ ಆಗದೆ ಇರುವ ಪ್ರದೇಶಗಳು ಅನೇಕವಿವೆ. ಎಷ್ಟೋ ಕಡೆಗಳಲ್ಲಿ ಮಳೆ ಬಂದಿಲ್ಲ, ಬೆಳೆ ಸರಿಯಾಗಿ ಆಗುವುದಿಲ್ಲವೆಂದು ಅವರಿಗೂ ಸಹ ಗೊತ್ತಿದೆ. ಆದುದರಿಂದ ತುಮಕೂರು ಜಿಲ್ಲೆಯ ವಿಷಯವನ್ನು ಪರಿಶೀಲನೆಮಾಡಿ ನವಂಬರ್ ಒಂದನೆ ತಾರೀಖಿನೊಳಗೆ ಎಷ್ಟು ಕೆರೆಗಳನ್ನು ಮಂಜೂರ್ಮಾಡಬಹುದೊ, ಎಷ್ಟು ನಾಲಾಗಳನ್ನು ಮಂಜೂರ್ಮಾಡಬಹುದೊ ಅವನ್ನೆಲ್ಲ ಮಂಜೂರ್ಮಾಡಿ, ಈಗ ಪೆಂಡಿಂಗ್‌ನಲ್ಲಿರತಕ್ಕ ಅಂದಾಜುಗಳನ್ನೆಲ್ಲ ಜರೂರಾಗಿ ತರಿಸಿಕೊಂಡು, ಹಿಂದುಮುಂದು ಓಡಾಡಿಸದೆ, ಮಂಜೂರ್ಮಾಡಿ ಕೆಲಸ ಮಾಡಿಸಿದರೆ ಅನುಕೂಲವಾಗುತ್ತದೆಂದು ಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಕ್ಷಾಮ, ಕ್ಷಾಮ, ಎಂದು ವಿಪರೀತವಾದ ಕೂಗು ಕೆಲವು ಸ್ನೇಹಿತರಿಂದ ಈ ಸಭೆಯಲ್ಲಿ ಕೇಳಿ ಬರುತ್ತಿದೆ. ನಾನು ಮೈಸೂರಿಗೆ ಬಸ್ಸುಗಳಲ್ಲಿ ಹೋಗಿ ಮೈಸೂರಿನ ಕೆಲವು ತಾಲ್ಲೂಕುಗಳನ್ನೂ, ಕೆಲವು ಪ್ರದೇಶಗಳನ್ನೂ ನೋಡಿದ್ದೇನೆ. ಉತ್ಕಟವಾದ ಕ್ಷಾಮ ಪರಿಸ್ಥಿತಿ ನಮ್ಮ ದೇಶದಲ್ಲಿ ಒದಗಿದೆ ಎಂಬ ಅಂಶವನ್ನು ನಾನು ಒಪ್ಪುವುದಿಲ್ಲ. ಉತ್ಕಟವಾದ ಕ್ಷಾಮ ಮೈಸೂರು ಜಿಲ್ಲೆಗೆ ಒದಗಿ ಬಂದಿದೆ ಎಂಬ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅನಾವೃಷ್ಟಿ ಪರಿಸ್ಥಿತಿ ನಮ್ಮ ದೇಶದಲ್ಲಿ ಒದಗಿದೆಯೇ ಹೊರತು, drought conditions ಒದಗಿದೆಯೇ ಹೊರತು ನಿಜವಾದ ಕ್ಷಾಮ ಪರಿಸ್ಥಿತಿಯೊದಗಿದೆ ಎಂದು ನಾನು ಒಪ್ಪುವುದಿಲ್ಲ. ನಿಜವಾದ ಕ್ಷಾಮ ಒದಗಿದ್ದರೆ, ಅವರು ಎರಡು ಸೇರು ಅಕ್ಕಿ ಕೊಡುತ್ತೇವೆ ಎಂದರೂ ಕೂಡ ಎರಡು ಸೇರು ಬೇಡ, ನಾಲ್ಕು ಸೇರಿನಂತೆ ಒದಗಿಸಬೇಕು ಎಂದು ಕೇಳುತ್ತಾರೆಯೇ? ಕೆರೆಗಳ ರಿಪೇರಿಯನ್ನು ಮತ್ತು ರಸ್ತೆ ಕಾಮಗಾರಿಗಳನ್ನು ಕ್ಷಾಮ ಪರಿಸ್ಥಿತಿಯಲ್ಲಿ ಯಾವ ಕಂಡಿಷನ್ಸ್‌ಗಳ ಮೇಲೆ ಮಾಡಬೇಕೆಂದಿದೆಯೋ, ಆ ಕಂಡಿಷನ್ಸ್‌ಗಳನ್ನು ಹಾಕಿದರೆ ಅನೇಕ ಜನರು ಕೆಲಸಕ್ಕೆ ಬರುವುದಿಲ್ಲ; ನಿಜವಾಗಿ ಹೊಟ್ಟೆಗೆ ಇಲ್ಲದಿರುವ ಪರಿಸ್ಥಿತಿ ಇದ್ದರೆ ಕೆಲಸ ಸಿಕ್ಕಿದರೆ ಸಾಕು, ಅಕ್ಕಿ ಕೊಟ್ಟರೆ ಸಾಕು ಎಂದು ಇರುತ್ತಾರೆ. ಮೈಸೂರಿಗೆ ಒಂದು ದುಸ್ಥಿತಿ ಒದಗಿದಾಗ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳ ಬಾರ್ಡರ್ ಹಳ್ಳಿಗಳಲ್ಲಿ ಸಂಪೂರ್ಣವಾಗಿ ಮಳೆ ಬರಲಿಲ್ಲ. ಆ ಸಂದರ್ಭದಲ್ಲಿ ಅಲ್ಲಿ ಒಂದು ಬಹಿರಂಗಸಭೆ ನಡೆದು ನಮ್ಮ ಕಾಂಗ್ರೆಸ್ ಅಧ್ಯಕ್ಷರು ಮತ್ತು ಜನರಲ್ ಸೆಕ್ರೆಟರಿಗಳು ಬಂದಿದ್ದರು. ಆವಾಗ ಸ್ವಲ್ಪ ಮಳೆ ಬಂತು. ಪುನಃ ಹದಿನೈದು ದಿವಸಗಳ ನಂತರ ಮತ್ತೊಂದು ಸಭೆಯನ್ನು ಏರ್ಪಾಡು ಮಾಡಿದ್ದಾಗ ಮತ್ತೆ ಮಳೆ ಬಂತು. ನಾನು ಮೈಸೂರಿನ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳುತ್ತಿಲ್ಲ. ಕಷ್ಟಗಳಿವೆ. ಮಳೆ ಬಂದಿಲ್ಲ, ಪೈರು ಇಟ್ಟಿಲ್ಲ, ದನಕರುಗಳಿಗೆ ಹುಲ್ಲು ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವೊತ್ತಿನ ದಿವಸ ವಾಸ್ತವಾಂಶವನ್ನು ತೆಗೆದುಕೊಂಡರೆ, ಮೈಸೂರು ಜಿಲ್ಲೆಯಲ್ಲಿ ಹುಲ್ಲು ಬಣವೆಗಳಿವೆ; ಅನೇಕರ ಮನೆಯಲ್ಲಿ ಧಾನ್ಯದ ದಾಸ್ತಾನಿದೆ ಎಂದು ಕೇಳಿದ್ದೇನೆ. ಆದುದರಿಂದ ಈ ದಿವಸ ಅಲ್ಲಿ ಕ್ಷಾಮವಿದೆ ಎಂದು ಸುಮ್ಮನೆ ಅದನ್ನು ಒಂದು ಪೆಡಂಭೂತವಾಗಿ ಮಾಡುವುದಕ್ಕಾಗುವುದಿಲ್ಲ.

(*Interruptions*)

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಇವರು ಎಲ್ಲೆಲ್ಲಿ ನೋಡಿದ್ದಾರೆಂಬುದನ್ನು ತಿಳಿಸಬೇಕು. ಒಂದು ಹುಲ್ಲು ಬಣವೆಯನ್ನು ಅವರು ತೋರಿಸಿದರೂ ಸಹ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮೈಸೂರು ಜಿಲ್ಲೆಯ ಪರಿಸ್ಥಿತಿಯನ್ನು ನಾನಾಗಲೇ ಹೇಳಿದ್ದೇನೆ. ಅಲ್ಲಿಯ ಸ್ಥಿತಿ ಉತ್ತಮವಾಗಿದೆ ಎಂದು ಹೇಳಲಿಲ್ಲ. ಅಲ್ಲಿಯ ಪರಿಸ್ಥಿತಿ ಹೇಗೆ ಕೆಟ್ಟಿದೆಯೋ ಹಾಗೆಯೇ ಹಾಸನ ಜಿಲ್ಲೆಯೂ ಇದೆ. ಹಾಸನ ಜಿಲ್ಲೆಯಲ್ಲಿ ಮುಂಗಾರು ಮಳೆ ಮೂರು ನಾಲ್ಕು ತಿಂಗಳಿಂದಲೂ ಬರಲಿಲ್ಲ. ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಹಿಂಗಾರು ಮಳೆ ಒಂದು, ಒಂದೂವರೆ ತಿಂಗಳಿನಿಂದ ಬಂದಿದೆ. ಮೈದಾನ ಪ್ರದೇಶಗಳಲ್ಲಿ ಈಗ ಸ್ವಲ್ಪ ಮಳೆಯಾಗಿದೆ. ಯಾವ ಕೆರೆಗಳಿಗೂ ಕೂಡ ನೀರು ಬಂದಿಲ್ಲ, ಗಿಡ್ಡರಾಗಿ ಮತ್ತು ದೊಡ್ಡರಾಗಿ ಈ ಎರಡ

ರಲ್ಲೂ ಪೈರು ಬಂದಿಲ್ಲ. ಶ್ರೀಮಾನ್ ಚಂದ್ರಶೇಖರಯ್ಯನವರು ಕಡೂರು ತಾಲ್ಲೂಕಿನ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳಿದರು. ನಮ್ಮ ಕಡೆಯೂ ಕೆಲವು ತಾಲ್ಲೂಕುಗಳಲ್ಲಿ ಅನಾವೃಷ್ಟಿ ದೆಶೆಯಿಂದ ಪರಿಸ್ಥಿತಿ ಚೆನ್ನಾಗಿಲ್ಲ. ಸಾಮಾನ್ಯವಾಗಿ ಬೆಂದ ಮನೆಯಲ್ಲಿ ಹಿರಿದವನೇ ಜಾಣ ಎಂಬ ಗಾದೆಗನುಸಾರವಾಗಿ ಕ್ಷಾಮನಿಧಿ ಎಂದು ಮಾಡಿ ಕಾಂಗಾರಿ ಕೆಲಸ ಮಾಡುವಾಗ ಸಿಕ್ಕಾಪಟ್ಟೆ ಹಣ ಖರ್ಚಾಗುತ್ತಿದೆ, ವ್ಯವಸ್ಥಿತವಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ದೇಶದ ಹಿತದೃಷ್ಟಿಯಿಂದ ಅವಸರದಲ್ಲಿ ಕೆಲಸಮಾಡುವಾಗ ಯಾವ ಕಾಂಗಾರಿ ನಡೆದರೂ ವ್ಯವಸ್ಥಿತವಾಗಿಯೂ ಮತ್ತು ಸರಿಯಾದ ರೀತಿಯಲ್ಲೂ ವ್ಯಯವಾಗುತ್ತಿದೆಯೆ ಎಂದು ನೋಡಿಕೊಂಡು ಹಣ ಪೋಲಾಗದಂತೆ ಎಚ್ಚರಿಕೆಯಿಂದ ಇರಬೇಕು. ಒಟ್ಟಿನಲ್ಲಿ ಗದ್ದಲ ಮಾಡಿದರೆ ಮಾಡಿದವರಿಗೆ ಮಾತ್ರ ಹಣ ದೊರೆಯಬೇಕೆಂದು ಹೇಳುವುದು ಸರಿಯಲ್ಲ. ಕೂಲಂಕಷವಾಗಿ ಎಲ್ಲೆಲ್ಲಿ ಯಯವಯಾವ ಪರಿಸ್ಥಿತಿಯಿದೆಯೆಂಬುದನ್ನು ಅರಿತು ಸಂಸ್ಥಾನದ ಎಲ್ಲಾ ಕಡೆಯೂ ಕ್ಷಾಮದ ಪರಿಸ್ಥಿತಿಯಿರುವುದರಿಂದ ಎಲ್ಲಾ ಕಡೆಗೂ ಈ ನಿಧಿಯನ್ನು ಒದಗಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಕಾಲ ಬಹಳ ಕೊಂಚವಿದೆ. ಆದರೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಮುಖ್ಯ ವಿಚಾರ ಮಾತ್ರ ಪ್ರಸ್ತಾಪ ಮಾಡುತ್ತೇನೆ. ದೇಶದಲ್ಲಿ ಯಾವ ಮೂಲೆಯಲ್ಲೇ ಆಗಲಿ ಸಮರ್ಪಕವಾಗಿ ಮಳೆ ಬೆಳೆ ಆಗದೆ ಕಷ್ಟ ಪರಿಸ್ಥಿತಿ ಬಂದಾಗ ಅದನ್ನು ಪರಿಹಾರ ಮಾಡಲು ಆವಶ್ಯಕವಾದ ಏರ್ಪಾಡು ಮಾಡುವುದು ಸರ್ಕಾರದ ಪ್ರಥಮ ಜವಾಬ್ದಾರಿಯಾಗಿದೆ. ಮೈಸೂರು ಜಿಲ್ಲೆಯಾಗಲಿ ಅಥವಾ ಹಾಸನ ಜಿಲ್ಲೆಯಾಗಲಿ ಅದು ಅಷ್ಟು ಪ್ರಾಮುಖ್ಯವಲ್ಲ. ಎಲ್ಲಿ ಮಳೆ ಸಾಕಾದಷ್ಟಾಗದೆ ಅದೂ ಸಕಾಲದಲ್ಲಾಗದೆ ಕ್ಷಾಮ ಪ್ರಾಪ್ತವಾಗಿದೆಯೆಂಬುದು ಮುಖ್ಯವಾದ ವಿಷಯ. ಮಳೆ ಸಾಕಷ್ಟು ಸಕಾಲದಲ್ಲಿ ಆಗಬೇಕಾದದ್ದೂ ಅತ್ಯಾವಶ್ಯಕ. ಈಗ 3-4 ಉದಾಹರಣೆ ಕೊಡುತ್ತೇನೆ. ಅರಸೀಕೆರೆಯಲ್ಲಿ ಹೋದ ವರ್ಷ ಇದೇ ಕಾಲದಲ್ಲಿ 13·52 ಇಂಚು ಮಳೆಯಾಗಿತ್ತು, ಈಗ $3\frac{1}{2}$ ಇಂಚು ಆಗಿದೆ. ಅಲ್ಲಿ ಸ್ವಲ್ಪ ಹೆಚ್ಚು ಕಡಮೆ $10\frac{1}{4}$ ಇಂಚು ಮಳೆ ಸಕಾಲದಲ್ಲಿ ಆಗಿಲ್ಲವೆಂದಮೇಲೆ ಅಲ್ಲಿ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಹದಗೆಟ್ಟಿದೆಯೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದೇ ರೀತಿ ಮೈಸೂರು ಜಿಲ್ಲೆ ಟಿ. ನರಸೀಪುರದಲ್ಲಿ ಹೋದ ವರ್ಷ ಎಷ್ಟಾಗಿತ್ತು, ಈ ವರ್ಷ ಎಷ್ಟಾಗಿದೆ ಎಂದು ಹೋಲಿಕೆ ಮಾಡಿದರೆ $8\frac{3}{4}$ ಇಂಚು ಕಡಮೆಯಾಗಿದೆ ; ಈ ವರ್ಷ ನಂಜನಗೂಡಿನಲ್ಲಿ $7\frac{1}{2}$ ಇಂಚು ಕಡಿಮೆಯಾಗಿದೆ, ಮೈಸೂರಿನಲ್ಲಿ 11 ಇಂಚು ಕಡಮೆಯಾಗಿದೆ. ತುಮಕೂರಿನಲ್ಲಿ $7\frac{1}{2}$ ಇಂಚು ಕಡಿಮೆಯಾಗಿದೆ. ಹೀಗೆ ಯಾವ ಯಾವ ತಾಲ್ಲೂಕುಗಳಲ್ಲಿ ವಿಶೇಷ ಅಭಾವವಿದೆಯೋ ಅಲ್ಲಿಗೆ ಹೆಚ್ಚು ಗಮನ ಕೊಡಬೇಕು. ಅಕಸ್ಮಾತ್ ಒಂದೆರಡು ಇಂಚು ಹೆಚ್ಚುಕಡಮೆಯಾದರೆ ಅದೇನೂ ಅಂಥ ಪ್ರಮಾದವಲ್ಲ. ಮಳೆ ಕಡಮೆಯಾಗುವುದರ ಜೊತೆಗೆ ಸಕಾಲದಲ್ಲಿ ಮಳೆಯಾಗಿಲ್ಲದಿರುವುದು ಮುಂತಾದ್ದನ್ನೆಲ್ಲಾ ಗಮನಿಸಿ ಸರ್ಕಾರದವರು ಯಾವ ರೀತಿ ಸುಧಾರಣೆ ಆಗಬೇಕೆಂಬುದನ್ನು ದೃಷ್ಟಿಯಲ್ಲಿಟ್ಟು ಯಾವ ಪ್ರಮಾಣದಲ್ಲಾಗಬೇಕೆಂಬುದನ್ನು ದೃಷ್ಟಿಯಲ್ಲಿಟ್ಟು ಯಾವಯಾವ ತರಹ ರಿಯಾಯಿತಿ ಕೊಡಬೇಕೆಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಆದ್ದರಿಂದ A to Z ಎಲ್ಲಾ ಕಡೆಗೂ ಒಂದೇ ಮಂತ್ರ ಹೇಳುವುದಕ್ಕಾಗುವುದಿಲ್ಲ.

ಈ ಸಂದರ್ಭದಲ್ಲಿ ಹಣದ ವಿಚಾರ ಪ್ರಸ್ತಾಪ ಮಾಡಿ ನಿರ್ದಿಷ್ಟವಾಗಿ ಒದಗಿಸಬೇಕೆಂದು ಹೇಳಿದರು. ಅದು ಸರಿಯೇ ಎಂದು ಪ್ರಶ್ನೆ ಹಾಕುತ್ತೇನೆ. ಕಷ್ಟ ಪರಿಸ್ಥಿತಿ ಒಂದುವೇಳೆ 2 ತಿಂಗಳಲ್ಲಿ ಸುಧಾರಣೆ ಆಗಬಹುದು, 6 ತಿಂಗಳಲ್ಲಿ ಆಗಬಹುದು. ಇಷ್ಟೇ ಇರಬೇಕೆಂದು ಕಟ್ಟುನಿಟ್ಟಾಗಿ ಹಣ ಮುಡುಪಾಗಿಡುವುದು ರೀತಿ ನೀತಿಯಲ್ಲ. ಒಟ್ಟಿನಲ್ಲಿ ಮೈಸೂರಾಗಲಿ, ಹಾಸನವಾಗಲಿ, ತುಮಕೂರಾಗಲಿ ಅಥವಾ ತಿಪಟೂರಾಗಲಿ ವಿಶೇಷ ಪರಿಸ್ಥಿತಿಯುಂಟಾಗಿ ಜನರಿಗೆ ಕಷ್ಟವೆಲ್ಲೆಲ್ಲಿ ಪ್ರಾಪ್ತವಾಗುತ್ತದೆಯೋ ಅಲ್ಲಲ್ಲಿ ಯಾವರೀತಿ ಯಾವ ಪ್ರಮಾಣದಲ್ಲಿ ಹೇಗೆ ಸುಧಾರಣೆ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ತೆಗೆದುಕೊಂಡು ಆಗತ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ಹಿಂತೆಗೆಯುವುದಿಲ್ಲ ಎಂದು ಮಾತ್ರ ಖಚಿತವಾಗಿ ಭರವಸೆ ಕೊಡುತ್ತೇನೆ.

ಈಗ ಮೈಸೂರು ಜಿಲ್ಲೆಗೆ $8\frac{1}{2}$ ಲಕ್ಷ ರೂಪಾಯಿಗಳು ಬೇಕೆಂದು ಕೇಳಿರುವುದು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ ಹಾಗೆ ಎಲ್ಲಾ ಜಾಗ್ರತೆ ಖರ್ಚಾಗುತ್ತದೆಯೆಂದು ಕೇಳಿದ್ದೇವೆ. 10 ಲಕ್ಷಕೊಡದೆ $1\frac{1}{2}$ ಲಕ್ಷ ಉಳಿಸಿದ್ದಾರೆಂದು ಹೇಳಿದರು. ಆ ಪ್ರಶ್ನೆಗೆ ಅವಕಾಶವಿಲ್ಲ. ಮೈಸೂರು ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮ ಡಿಸ್ಟ್ರಸ್ ರಿಲೀಫ್ ಕಮಿಟಿಯಲ್ಲಿ ವಿವರವಾಗಿ ತಿಳಿಸಲಾಗಿದೆ. ಮುಖ್ಯವಾಗಿ ರಸ್ತೆಗಳನ್ನು ಮಾಡಿಸುವುದು, ಗೋಕಟ್ಟೆ ಕಟ್ಟಿಸುವುದು, ಇರಿಗೇಷನ್ ವರ್ಕ್ಸ್, ಮೈನರ್ ಕೆರೆ ರಿಪೇರಿ ಮಾಡಿಸುವುದು, ಹುಲ್ಲನ್ನೊದಗಿಸುವುದು, ತಕಾವಿಸಾಲ ಕೊಡುವುದು, ರಾಗಿ, ಜೋಳ ಹಂಚಿಕೆ, ಗೊಬ್ಬರಕ್ಕೆ ಸಾಲ ಕೊಡತಕ್ಕದು, ಮಿಲ್ಕ್ ಬಾರ್, ಗ್ರೂಯಲ್ ಸೆಂಟರ್ ತೆರೆಯುವುದು, ಅಕ್ಕಿಯನ್ನು ಕೂಲಿ ಕೆಲಸ ಮಾಡುವವರಿಗೆ 3 ಸೇರಿನಂತೆ ಕೊಟ್ಟು ಹೆಚ್ಚುವರಿಯಾದ ನಷ್ಟವನ್ನು ಸಬ್ಸಿಡೈಸ್ ಮಾಡುವುದು ಮುಂತಾದ ಕೆಲಸಗಳನ್ನು ನಾನಾ ಕ್ಷೇತ್ರಗಳಲ್ಲಿ ವಿಶೇಷ ರೀತಿಯಲ್ಲಿ ಕೈಕೊಂಡಿದೆ. ಈಗ ರಸ್ತೆ, ಗೋಕಟ್ಟೆ, ಇರಿಗೇಷನ್ ವರ್ಕ್ಸ್ ಮುಂತಾದ ಕೆಲಸಗಳಿಗೆ 6 ಲಕ್ಷ ರೂಪಾಯಿಗಳು ಖರ್ಚಾಗಿವೆ, ತಕಾವಿ ಸಾಲಕ್ಕೆ ಸುಮಾರು ಒಂದು ಲಕ್ಷ 20 ಸಾವಿರ ರೂಪಾಯಿಗಳು ಖರ್ಚಾಗಿವೆ; 10 ಲಕ್ಷ ಖರ್ಚಿನ ಜೊತೆಗೆ ಶ್ರೀಮಾನ್ ಹುಮಂತಯ್ಯನವರು ವಾಗ್ದಾನ ಮಾಡಿದ 10 ಲಕ್ಷದ ಜೊತೆಗೆ ಹಿಂದೆ ಒಂದು ಲಕ್ಷ 25 ಸಾವಿರ ರೂಪಾಯಿಗಳನು ಒದಗಿಸಿದ್ದೆವು. ಅದರಲ್ಲಿ ಅನೇಕ ಭಾಗ ಖರ್ಚಾಗಿದೆ. ಆದ್ದರಿಂದ ಯಾರಿಗೂ ಕೂಡ ಸರ್ಕಾರ ಉಗ್ರಪರಿಸ್ಥಿತಿ ಯಾವ ತಾಲ್ಲೂಕಿನಲ್ಲಿದೆಯೆಂಬುದನ್ನು ಗಮನಿಸುವುದಿಲ್ಲ ಎಂಬ ಅನುಮಾನ ಇರಬೇಕಾಗಿಲ್ಲ. ಮೊನ್ನೆ ತುಮಕೂರು ಜಿಲ್ಲೆಗೆ ಹೋದಾಗ ತಿಪಟೂರು ಮತ್ತು ಇನ್ನೂ ಕೆಲವುಕಡೆ ಸ್ವಲ್ಪ ಅಭಾವವಿರುವುದು ಕಂಡಿತು. ಆಗ ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಮೈಸೂರಿನಲ್ಲಿ ತೆಗೆದುಕೊಂಡ ಹಾಗೆ ಕೆಲಸಕಾರ್ಯ ಕೈಗೊಳ್ಳಬೇಕೆಂದು ಸೂಚನೆ ಕೊಟ್ಟೆ. ಜಿಲ್ಲಾಬೋರ್ಡ್, ಪಂಚಾಯಿತಿ, ಎನ್. ಇ. ಎಸ್. ಬ್ಲಾಕ್ಸ್, ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸಗಳನ್ನು ಕೈಕೊಂಡು ಕೆಲಸ ಒದಗಿಸಬೇಕು, 50 ಸಾವಿರ ರೂಪಾಯಿಗಳವರಗೂ ಆವಶ್ಯಕತೆ ನೋಡಿ ಕೊಡಬಹುದು ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಹಾಗೆಯೇ ಅರಸೀಕರೆಯಲ್ಲೂ ಕನಿಷ್ಠ ಪರಿಸ್ಥಿತಿಯಿರುವುದರಿಂದ ತುಮಕೂರಿನಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆಯೋ ಅದರ ಪ್ರಕಾರ ಕೆಲಸಕಾರ್ಯ ಕೈಕೊಳ್ಳಿ, 25 ಸಾವಿರ ರೂಪಾಯಿ ಒದಗಿಸಿ ಎಂದು ಹಾಸನದ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಯಾವಯಾವ ತರಹ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಕಾಲವಿಲ್ಲದಿರುವುದರಿಂದ ಈಗ ವಿವರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಯಾವ ತಾಲ್ಲೂಕಿನಲ್ಲಿ ಕಷ್ಟ ಪ್ರಾಪ್ತವಾಗಿದೆಯೋ ಅಲ್ಲಿ ಸೂಕ್ತ ಕಾರ್ಯಕ್ರಮವನ್ನು ಸೂಕ್ತ ಪ್ರಮಾಣದಲ್ಲಿ ಕೈಕೊಂಡು ಕಷ್ಟ ನಿವಾರಣೆ ಮಾಡಲು ಸರ್ಕಾರ ಹಿಂದೆಗೆಯುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಒಂದುವೇಳೆ ಆ ರೀತಿ ಕಷ್ಟಗಳು ಬಂದರೆ ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ, ಜನರ ಯೋಗಕ್ಷೇಮ ಮತ್ತು ಅವರ ಪ್ರಾಣರಕ್ಷಣೆ ಮಾಡಬೇಕಾದದ್ದು ಅತಿಮುಖ್ಯವಾದದ್ದು. ತಾವುಗಳೆಲ್ಲರೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಈ ವಿಚಾರದಲ್ಲಿ ಸರ್ಕಾರದವರು ಆದಷ್ಟು ಸಹಾನುಭೂತಿ ತೋರಿಸಲು ಸಿದ್ಧವಾಗಿದ್ದಾರೆಂಬುದನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಇಷ್ಟು ಭರವಸೆಯಮೇಲೆ ತಾವು ಇದಕ್ಕೆ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a further sum not exceeding Rs. 8,50,000 be granted to the Government to defray the charges which will come in course of payment during the period ending 31st day of October 1956 in respect of 'Famine'."

The motion was adopted.

Demand No. 41. Industrial Development.

72. Capital outlay on Industrial Development.

Mr. SPEAKER.—The question is:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Capital Outlay on Industrial Development'."

The motion was adopted.

Bussiness of the House.

Mr. SPEAKER.—Before adjournment, I want to announce that there is a little change in the programme of business for tomorrow. The first item after question hour would be consideration of the Khadi and Village Industries Bill as reported by the Select Committee and consideration of the reports of the Public Accounts Committee and Finance Enquiry Committee.

Now, the House will adjourn and meet tomorrow at 12 NOON.

The House adjourned at Five Minutes past Five of the Clock to meet again at Twelve of the Clock on Friday the 28th September 1956.

WD 1110—GPB—550—3-12-56

V-31 N56
N57- 14 part-4
(B) H729

MYSORE LEGISLATIVE ASSEMBLY

FORTIETH DAY.

Friday, the 28th September 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

New State of Mysore (Reallocation of Personnel, and Assets and Liabilities)

Q.—663. Sri H. C. LINGA REDDY Malur).—

Will the Government be pleased to state:—

(*a*) the steps taken for reallocation of (i) personnel, (ii) assets and (iii) liabilities in connection with the formation of the State of New Mysore under the Scheme of States Reorganisation;

(*b*) the progress so far made in this behalf?

A.—Sri Kadidal MANJAPPA (Chief Minister).—

(*a*) and (*b*)

1. Action for the allocation of the posts and personnel of the All-India Services has been taken. As regards the other Services, information received is not complete.

2. *Re*: re-allocation of assets and liabilities, adequate provision exists in the States Reorganisation Act.

Sri H. C. LINGA REDDY.—You have been pleased to say that action has been taken for the allocation of posts and personnel of the All-India Services. May I know whether option was given to the officers to make selection?

*Sri Kadidal MANJAPPA.—It is not the question of giving any option; whoever is allotted to Mysore State will have to be shown some place.

Sri H. C. LINGA REDDY.—How many posts of the I.A.S. in the senior cadre have been assigned to the New Mysore State?

Sri Kadidal MANJAPPA.—All told the strength of the I.A.S. is 90, and I.P.S. is 47.

Sri H. C. LINGA REDDY.—In the matter of selection of the personnel, has it come to the notice of Government that the services in the present existing State of Mysore are very much dissatisfied?

Sri Kadidal MANJAPPA—No.

Sri H. C. LINGA REDDY.—With regard to the other services, you have mentioned, "information is not yet received". Will it be possible for you to receive the information by the time of the formation of the New State?

Sri Kadidal MANJAPPA.—Yes, we have received the information with regard to the Gazetted Officers, and that is under scrutiny. With regard to the Non-Gazetted Officers, the full information is not available.

Sri H. C. LINGA REDDY.—With regard to the reallocation of assets and liabilities, you have stated that provision exists in the States Reorganisation Act. No doubt there is provision, but have the provisions been worked out and details of assets and liabilities determined?

Sri Kadidal MANJAPPA.—I would like to invite the attention of the Hon'ble Member to Part VII, page 37 of the States Reorganisation Act where general principles have been enumerated. The assets and liabilities will have to be ascertained in accordance with the principles contained therein

Sri H. C. LINGA REDDY.—My question is: whether in accordance with those principles the assets and liabilities have been so far fixed and determined ?

Sri Kadidal MANJAPPA.—So far as the land and goods are concerned, they come with the area and then with regard to assets mentioned in the proviso to section 76 of the States Reorganisation Act, they will have to be ascertained—I mean decision has to take place later.

Sri H. C. LINGA REDDY.—May I know what would become of the Revenue Commissioner and the establishment thereof when the New Mysore comes into being ?

Sri Kadidal MANJAPPA.—The posts of the Revenue Commissioner and Local Self-Government Commissioner will stand abolished after 1st November 1956.

Sri G. SIVAPPA.—May I know how the cadre of the Gazetted Officers is going to be fixed after the formation of the new State ?

Sri Kadidal MANJAPPA.—All the officers will be included in the joint cadre, *i.e.*, the common cadre. The seniority will be fixed according to the principles enunciated by the Government of India.

Sri G. SIVAPPA.—What are the factors that will be taken into consideration in fixing the cadre of the Gazetted Officers ?

Sri Kadidal MANJAPPA.—In the case of I.A.S. Officers, the rank is already determined with reference to the All-India I.A.S. List. But in the case of other officers, the seniority will be determined on certain principles enunciated by the Government of India, *i.e.*, the total length of service in a particular grade and the equation will be brought about in the same grade. That means the Superintending Engineer's grade is to be equivalent to Executive Engineer's grade in Mysore State.

Sri G. SIVAPPA.—Is it not a fact that in the State of Hyderabad very young people have been made as Superintending Engineers and the Executive Engineers who will come and sit in our offices ?

Sri Kadidal MANJAPPA.—That cannot be helped.

Sri Mulka GOVINDA REDDY.—May I know the names of persons selected for each of the Secretary's posts in the Secretariat and posts of Commissioners and Heads of Departments ?

Mr. SPEAKER.—The Government have issued a communique wherein they have published the names.

Sri Kadidal MANJAPPA.—That list is subject to further alterations in the light of any new circumstances.

	Sriyuths—
Chief Secretary ...	P. V. R. Rao, I.C.S.
Secretary to Government, Finance Department.	K. R. Naik.
Secretary to Government, Planning and Development Departments.	N. Puttarangaswamy.
Secretary to Government, Revenue Department.	K. Seshagiri Rao.
Secretary for Home, Forest and Agriculture Departments.	R. J. Rebello.
Secretary to Government, Education Department.	R. J. Rego.
Secretary to Government, Commerce and Industries Department.	B. M. Krishnan.
Secretary, L.S.G. and Public Health Departments.	S. A. L. Razvi.
Secretary to Government, Public Works Department.	D. K. Srinivasachar.

As I have submitted already, the above list is subject to further modification and the approval by the Government of India in the case of key posts.

		Sriyuths—
Divisional Commissioners	...	N. Madhava Rao, N. S. Hirannayya, K. P. Ramanathaiya and K. Thippe-rudriah.
Commissioner of Sales Tax	...	G. N. Nagaraja Rao.
Inspector-General of Police	...	P. K. Monnappa.
Chief Conservator of Forests	...	M. A. Muthanna.
Director of Printing and Stationery	...	D. S. Gurubasavappa.
Special Officer, Efficiency Audit	...	M. K. Appajappa.
Director of Medical Services	...	Dr. B. Venkatasubba Rao.
Director of Public Health	...	Dr. P. Somasundaram.
Chief Engineers	...	Ananthachar, Ramaswamy Iyengar and T. S. Murthy.
Director of Public Instruction	...	C. Narasimha Moorthy.
Director of Agriculture	...	M. Mallaraj Urs.
State Statistician	...	A. Ananthapadmanabha Rau.
Superintendent of Government Gardens		Dr. M. H. Mari Gowda.
Director of Animal Husbandry	...	Dr. K. S. Shetty.
Director of Sericulture	...	T. K. Krishnamurthy.
Director of Industries and Commerce		K. Narayanaswamy.
Director of Rural Industrialisation	...	B. Beerappa.
Commissioner of Labour	...	M. Malleshaiya.
Director and Vice-Chairman, Iron and Steel Works, Bhadravathi.		T. Shamanna.
Registrar of Co-operative Societies	...	K. R. Marudeva Gowda.
Commissioner for Transport	...	H. Henjerappa.
Principal Information Officer	...	B. N. Sri Sathyan.
Chief Electrical Engineer	...	J. L. D'Sa.
Director of Geology	...	T. P. Krishnachar.
Director of Archæology	...	Dr. M. Seshadri.
Secretary, Mysore Government Insurance Department	...	M. Vasudeva Rao.
Controller of State Accounts	...	H. Ramaraj Urs.

Sri Mulka GOVINDA REDDY.—May I know the basis adopted for selecting these officers ?

Sri Kadidal MANJAPPA.—Seniority and according to the provisions of the Recruitment Rules.

Sri Mulka GOVINDA REDDY.—Has it come to the notice of the Government that criticism has been levelled that some Mysore Officers have been shown preference ?

Sri Kadidal MANJAPPA.—We have taken into account the names of all officers that will come within the combined cadre.

ಶ್ರೀ ಎಸ್. ಸಿದ್ದಪ್ಪ.—ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದ ಶಿಫಾರ್ಸು ಅಂಗೀಕಾರವಾಗಿ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಪೂರ್ಣವಾಗಿ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ನಮ್ಮ ವಿಶಾಲ ಮೈಸೂರಿಗೆ ಸೇರುವ ಮದರಾಸು, ಹೈದರಾಬಾದು ಮತ್ತು ಬೊಂಬಾಯಿ ಪ್ರಾಂತಗಳಿಂದ ಬರುವ ಅಧಿಕಾರಿಗಳ ವೇತನ ಮತ್ತು ನಮ್ಮ ಅಧಿಕಾರಿಗಳ ವೇತನ ಇವುಗಳನ್ನು ಪರಿಶೀಲನೆಮಾಡಿ ಒಂದು ಅಂತ್ಯ ತೀರ್ಮಾನ ಕೈಕೊಳ್ಳಲಾಯಿತೆ ?

ಅಧ್ಯಕ್ಷರು.—ಅದಕ್ಕೆ ಇನ್ನೊಂದು ಪ್ರಶ್ನೆಯಿದೆ.

Zonal Divisions

Q.—704. Sri M. LINGANNA (Nanjangud).—

Will the Government be pleased to state :—

The additional expenditure the Government is put to by creating Zonal Divisions where the Zones are created after the new State is formed ?

*Sri Kadidal MANJAPPA (Chief Minister).—

Four Commissioners' Divisions (not Zonal Divisions) are proposed to be formed and the expenditure in respect of each Zone is expected to be about Rs. 1 lakh.

Sri M. LINGANNA.—What are the benefits to the Government and the public by such Commissioners' Divisions ?

Sri Kadidal MANJAPPA.—Sir, the area is comparatively big and people may find it difficult to come to the capital city to get relief. Therefore, it is better to give them justice and relief at a place which is a central place as far as possible.

Sri M. LINGANNA.—Is it not a fact that some of the District Headquarters are far removed from the Divisional Headquarters and thus defeat the very purpose for which they are created ?

*Sri Kadidal MANJAPPA.—I have already stated that it is only a temporary arrangement. These temporary arrangements had been resorted to on account of some administrative difficulties. Hon'ble Member is aware that laws in Hyderabad, Bombay and Mysore differ. There is slight difference in the administrative set up also. Therefore, as an interim measure, the Divisional Headquarters are decided to be located in the respective areas, *i. e.*, for Bombay area there is a Division, for Hyderabad there is a Division and for Mysore there are two Divisions.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಮೈಸೂರನ್ನು ಡಿವಿಜನ್‌ಗಳಾಗಿ ವಿಂಗಡಿಸಿದ್ದೀರಿ. ಅದನ್ನು ಸರಿಯಾದ ರೀತಿಯಲ್ಲಿ ದೂರದಲ್ಲಿರುವ ಪ್ರದೇಶಗಳಿಗೆ ಅನುಕೂಲವಾಗುವ ಹಾಗೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರಿಗೂ ಸರಿಯಾಗಿರುವಂತೆ ದೂರ ಒಂದೇ ಸಮನಾಗಿರುವಂತೆ ಮಾಡಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಡಿವಿಜನಲ್ ಹೆಡ್‌ಕ್ವಾರ್ಟರ್ ಮಾಡುವಾಗ ಅನೇಕ ವಿಷಯಗಳನ್ನು ಗಮನಿಸಬೇಕು. ಮೊದಲನೆಯದು ದೂರ ಎಷ್ಟಿದೆಯೆಂಬುದ, ಎರಡನೆಯದು ಸ್ಥಳದಲ್ಲಿರತಕ್ಕ ಸೌಕರ್ಯಗಳು, ಆಮೇಲೆ ಆಡಳಿತದ ಸೌಕರ್ಯಗಳು ಇವನ್ನೆಲ್ಲಾ ಗಮನಿಸಿ ಡಿವಿಜನಲ್ ಹೆಡ್‌ಕ್ವಾರ್ಟರ್ ನಿರ್ಧರಿಸಬೇಕು. ಈಗ ನಿರ್ಧರಿಸುವುದು ತಾತ್ಕಾಲಿಕ. ಇವುಗಳ ವಿಚಾರದಲ್ಲಿ ಹೊಸ ಸಂಸ್ಥಾನ ಪ್ರಾರಂಭವಾದ ಮೇಲೆ ಹೊಸ ಸರ್ಕಾರ ತೀರ್ಮಾನ ಕೈಕೊಳ್ಳಬೇಕು.

Sri S. GOPALA GOWDA.—May I know the four Commissioners' Divisions that they have proposed to sponsor ?

Sri Kadidal MANJAPPA.—Mysore Bangalore, Belgaum, and Gulberga.

Sri S. GOPALA GOWDA.—Have Government received any representation from the representatives of Shimoga District demanding that one of the four Divisions should be located at Shimoga ?

Sri Kadidal MANJAPPA.—Yes ; there were plenty of representations.

ಶ್ರೀ ಎಸ್. ಗೋಪಾಲ ಗೌಡ.—ಈ ಡಿವಿಜನ್‌ಗಳನ್ನು ತಾತ್ಕಾಲಿಕವಾಗಿ ಮಾತ್ರ ಆರಂಭ ಮಾಡಿದ್ದೇವೆ ಅದರಲ್ಲಿ ಬದಲಾವಣೆಯಾಗುತ್ತದೆ ಎಂದು ಹೇಳಿದಿರಿ. ಈಗ ತಾತ್ಕಾಲಿಕವಾಗಿ ಎಷ್ಟು ಕಾಲದವರೆಗೆ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೊಸ ಪ್ರಾಂತ ಪ್ರಾರಂಭವಾದನಂತರ ಕೆಲವು ಕಾಲದವರೆಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧವಾದ ಕಾನೂನು ಒಂದೊಂದು ವಿಧವಾದ ಆಡಳಿತ ವ್ಯವಸ್ಥೆ ಇರುತ್ತದೆ. ಆದ್ದರಿಂದ ಒಂದೊಂದು ವಿಧವಾದ ಆಡಳಿತ ವ್ಯವಸ್ಥೆಯಿರುವ ಕಡೆ ಒಂದೊಂದು ಡಿವಿಜನ್ ತಾತ್ಕಾಲಿಕವಾಗಿ ಏರ್ಪಾಡು ಮಾಡಿದೆ.

ಶ್ರೀ ಜಿ. ಶಿವಪ್ಪ.—ತಾತ್ಕಾಲಿಕವಾಗಿ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆಯೇನಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಾರಣ ಹೇಳಿದೆ. ಬೊಂಬಾಯಿ ಪ್ರಾಂತದ ಪ್ರದೇಶದಲ್ಲಿರತಕ್ಕ ಕಾನೂನು ಮೈಸೂರಿನಲ್ಲಿಲ್ಲ. ಮೈಸೂರು ಸಂಸ್ಥಾನದಲ್ಲಿರುವ ಕಾನೂನು ಹೈದರಾಬಾದು, ಮದರಾಸುಗಳಲ್ಲಿಲ್ಲ. ಆದ್ದರಿಂದ ಯಾವ ಪ್ರದೇಶದಲ್ಲಿ ಯಾವ ಕಾನೂನಿದೆಯೋ ಯಾವ ಆಡಳಿತವಿದೆಯೋ, ಅದನ್ನೇ ಸ್ವಲ್ಪ ಕಾಲ ಮುಂದುವರಿಸಿಕೊಂಡು ಹೋಗಬೇಕಾದದ್ದು ಅಗತ್ಯ. ಇಡೀ ಸಂಸ್ಥಾನಕ್ಕೆ ಅನ್ವಯಿಸುವಂತೆ ಒಂದೇ ವಿಧವಾದ ಆಡಳಿತ ವ್ಯವಸ್ಥೆ ಒಂದೇ ವಿಧವಾದ ಕಾನೂನುಗಳು ಜಾರಿಗೆ ಬರುವವರೆಗೆ ತಾತ್ಕಾಲಿಕವಾಗಿ ಡಿವಿಜನಲ್ ಹೆಡ್‌ಕ್ವಾರ್ಟರುಗಳನ್ನು ಆಯಾ ಪ್ರದೇಶಕ್ಕೆ ಒಂದೊಂದರಂತೆ ನಿಗದಿ ಮಾಡುವುದು ಸೂಕ್ತವೆಂದು ಕಂಡುಬಂದುದರಿಂದ ಈ ರೀತಿ ತೀರ್ಮಾನ ಕೈಕೊಂಡಿದೆ.

ಶ್ರೀ ಎಸ್. ಪರಮೇಶ್ವರಪ್ಪ.—ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಇವುಗಳನ್ನು ಸೇರಿಸಿ ಒಂದು ಡಿವಿಜನಲ್ ಹೆಡ್‌ಕ್ವಾರ್ಟರ್ ಮಾಡಿದರೆ ನೆಟ್ಟಗಿರುತ್ತದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ನೆಟ್ಟಗಿರುತ್ತದೆಂದು ಹೇಳಿದರು.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಮಧ್ಯ ಪ್ರದೇಶವಾಗಿಯೂ ಪಾಳೆಯಗಾರರಿದ್ದ ಜಾಗವಾಗಿಯೂ ಇರುವುದರಿಂದ ಅಲ್ಲೊಂದು ಡಿವಿಜನಲ್ ಹೆಡ್ ಕ್ವಾರ್ಟರನ್ನು ತೆರೆಯಲು ಯೋಚಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಪಾಳೆಯಗಾರರ ಆಡಳಿತವನ್ನು ಪುನಃ ಸ್ಥಾಪನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಳೆಯ ಮೈಸೂರನ್ನು 2 ಡಿವಿಜನ್ ಮಾಡಿ ಹೊಸದಾಗಿಬರುವ ಕರ್ಣಾಟಕ ಪ್ರದೇಶವನ್ನು 2 ಡಿವಿಜನ್ ಮಾಡಿರುವುದೇಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವಿಲ್ಲಿ ಕೇವಲ ತಾತ್ಕಾಲಿಕವೆಂದು ಹೇಳಿದ್ದೀರಿ. ಆದ್ದರಿಂದ ನಾನು ಕೇಳುತ್ತಿರುವ ರೀತಿ ಮಾಡಿದ್ದರೆ ಆಗ ನಿಮ್ಮ ರಾಜ್ಯವೇನೂ ಬದಲಾವಣೆಯಾಗುತ್ತಿರಲಿಲ್ಲ ವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾರ್ವಜನಿಕರುಗಳಿಗೆ ಹೆಚ್ಚಿನ ಉಪಯೋಗವಾಗತಕ್ಕ ರೀತಿಯಲ್ಲಿ ನಾವೀಗ ತೀರ್ಮಾನ ಮಾಡಿದ್ದೇವೆ.

ಶ್ರೀ ಟಿ. ಶಾಂತಪ್ಪ.—ತಾವು ಈ ಚಿಕ್ಕಮಗಳೂರು ಜಿಲ್ಲೆಯನ್ನೇ ಒಂದು ಪ್ರತ್ಯೇಕ ಡಿವಿಜನ್ನಾಗಿ ಏಕೆ ಮಾಡ ಬಾರದಾಗಿತ್ತು. ?

ಶ್ರೀ ಕಡಿದಾಳ್ ಮಂಜಪ್ಪ.—ಹೊಸ ಸರ್ಕಾರ ಬಂದ ಮೇಲೆ ತಾವು ಅವರ ಮುಂದೆ ತಮ್ಮ ಮನೋಭಿಪ್ರಾಯವನ್ನಿಡಬಹುದು.

Sri Mulka GOVINDA REDDY.—May I know the powers and functions of these Zonal Commissioners ?

Sri Kadidal MANJAPPA.—It is a big statement. I believe it is laid on the Table. In a nutshell I can say that they will exercise the powers of the Commissioner for Local Self-Government and Revenue Commissioner.

Sri Mulka GOVINDA REDDY.—Is it not desirable that we should have a separate Commissioner for Local Self-Government in view of the democratic set up that we have ?

Sri Kadidal MANJAPPA.—We cannot increase expenditure merely on that account. When we have Divisions and Divisional Commissioners, there is no point in retaining the posts of L.S.G. Commissioner and Revenue Commissioner.

ಶ್ರೀ ಬಿ. ಹುಚ್ಚೇಗೌಡ.—ತಾವು ಖರ್ಚನ್ನು ಕಡಮೆ ಮಾಡಲು ಹೀಗೆ ಮಾಡಿದ್ದೇವೆಂದು ತಿಳಿಸಿದಿರಿ. ಈ ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಬಾಬುಗಳಿಗೇಕೆ ಒಂದು ಪ್ರತ್ಯೇಕ ಇಲಾಖೆಯಿಟ್ಟಿದ್ದೀರಿ ? ಇವುಗಳನ್ನು ಇದರಲ್ಲೇ ಏಕೆ ಸೇರಿಸಬಾರದಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಅಭಿಲಾಷೆಯೂ ಅದೇ ಆಗಿತ್ತು. ಆದರೆ ಹೈದರಾಬಾದಿನಲ್ಲೂ ಈಗ ಒಂದು ಪ್ರತ್ಯೇಕ ಎಕ್ಸೈಜ್ ಇಲಾಖೆಯಿದೆ. ಅದೇ ರೀತಿ ನಮ್ಮ ಮೈಸೂರಿನಲ್ಲೂ ಒಂದಿದೆ. ಆದಕಾರಣ ಇದು ಹಣದ ವಹಿವಾಟಕ್ಕೆ ಸಂಬಂಧ ಪಟ್ಟಿದ್ದರಿಂದ ಇದನ್ನೊಂದು ಪ್ರತ್ಯೇಕ ಇಲಾಖೆಯನ್ನಾಗಿಡುವುದೇ ಸೂಕ್ತವೆಂದು ಭಾವಿಸಿ ಹೀಗೆ ಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಬೋರ್ಡ್ ಆಫ್ ರೆವಿನ್ಯೂ ಇತ್ತಲ್ಲಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಅದಕ್ಕೆ ಸಂಬಂಧ ಪಡುವುದಿಲ್ಲ.

New State of Mysore (Officers coming in from other parts)

Q.—700. Sri Mulka GOVINDA REDDY (Chitaldrug).—

Will the Government be pleased to state :—

(*a*) the number of gazetted and non-gazetted officers who are coming into the New Mysore State from (i) Bombay Karnataka, (ii) Hyderabad Karnataka, (iii) Madras Karnataka anp (iv) Coorg ;

(*b*) the scales of pay and dearness allowance paid to each of the categories of service in each of the said areas ;

(*c*) whether the scales of pay and allowance of Mysore will be brought on par with those obtaining in Bombay ;

(*d*) whether any representations have been received from Mysore Officers ;

(*e*) the cost involved for total emoluments for services in New Mysore ?

**A.*—Sri Kadidal MANJAPPA (Chief Minister).—

(*a*) Complete information is not yet received.

(*b*) The scales of pay and dearness allowance paid to each of the categories of service in the States of Bombay, Hyderabad and Madras are indicated in Annexure III-C of the Report of Pay Structure Committee, 1956, *vide* page 136 to 148 and 150 of the Report.

(*c*) This is a matter to be considered after the new State comes into being ;

(*d*) Yes ; the non-gazetted officers have made representations.

(*e*) If Bombay scales of pay and allowances are extended, the extra cost for the existing State will be of the order of Rs. 5 crores.

Sri Mulka GOVINDA REDDY.—In answer to (*a*) you have stated that complete information is not yet received. Has not the Secretary, States Re-organisation Department collected this information ?

Sri Kadidal MANJAPPA.—He has collected but not complete information, as the information has to be given by the respective Governments.

Sri Mulka GOVINDA REDDY.—Has it come to the notice of the Government that the other Governments are advancing two or three months salaries to those that are coming into Mysore State?

Sri Kadidal MANJAPPA.—I do not know exactly. We have taken some decision with regard to that point in the Inter-State Ministers' Conference.

Sri Mulka GOVINDA REDDY.—What steps the Government have taken to provide accommodation for those that are coming in?

Sri Kadidal MANJAPPA.—A Press Communique has been issued in this behalf. We have got some houses here The intention is to run a hostel for officers.

Sri A. G. RAMACHANDRA RAO.—Further, in Rajaji Nagar under the Labour Housing Corporation we have a large number of houses and temporarily they can be made use of. We are writing to the Government of India for permission to make use of them if necessary.

Sri Mulka GOVINDA REDDY.—Has it at least now come to the notice of the Government that the disparity in the salaries of those of Mysore and those of Bombay and Hyderabad, is too wide?

Sri Kadidal MANJAPPA.—There is a certain amount of disparity.

Sri Mulka GOVINDA REDDY.—Has it come to the notice of the Government that the Mysore officials are the lowest paid?

Sri Kadidal MANJAPPA.—I have stated it publicly.

Sri Mulka GOVINDA REDDY.—When you have stated so, what action and what steps have you taken to rectify them?

Sri Kadidal MANJAPPA.—Now the Government is considering giving our officers some kind of interim relief and later on after the new State is formed we will have to take steps to evolve common scales of pay applicable to the entire new State.

Sri Mulka GOVINDA REDDY.—May I know what kind of relief the Government want to give?

Sri Kadidal MANJAPPA.—It is under consideration.

Sri Mulka GOVINDA REDDY.—Especially in view of the rise in prices, have the Government decided to give some immediate relief?

Sri Kadidal MANJAPPA.—That is our intention. The matter is under active consideration.

Sri Mulka GOVINDA REDDY.—To question (e) you have stated that Rs. 5 crores will be required to give Bombay scales. What will be the total amount that will be required to raise the scales of pay to the level of the Central Government employees?

Sri Kadidal MANJAPPA.—I want notice.

The Hon'ble Member wanted information regarding the advance of pay. The matter was discussed and it was agreed that two months advance pay subject to a ceiling of Rs. 1,500 may be paid and the same may be recovered in instalments.

Sri Mulka GOVINDA REDDY.—Who is advancing that money? Is it the Mysore Government or the existing Hyderabad and Bombay Governments?

Mr. SPEAKER.—If they want to recover the amount I think this Government has to advance.

Sri Kadidal MANJAPPA.—This is a matter of adjustment.

ಶ್ರೀ ಆರ್. ಅನಂತರಾಮನ್.—ಮೈಸೂರಿಗೆ ಹೊರಗಡೆಯಿಂದ ಬರತಕ್ಕ I. A. S. ಅಧಿಕಾರಿಗಳೆಷ್ಟೆಂಬುದನ್ನು ತಿಳಿಸುತ್ತೀರಾ?

Mr. SPEAKER.—He has already replied to it.

Sri R. ANANTARAMAN.—Is it not a fact that many of the I. A. S. Officers have not been included in the list?

Sri Kadidal MANJAPPA.—All those persons who could be legitimately allotted to this State have been included in the list.

Sri S. SRINIVASA IYENGAR.—Will the Government be pleased to state whether the relief to N.G.O.'s would be given within 1st November 1956?

Sri Kadidal MANJAPPA.—That is our intention.

Sri S. SRINIVASA IYENGAR.—Will that relief have retrospective effect?

Sri Kadidal MANJAPPA.—I have submitted that the matter is under active consideration of the Government.

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ಇಲ್ಲಿಗೆ ಬರತಕ್ಕ ನಾನ್ ಗೆಜೆಟೆಡ್ ಅಧಿಕಾರಿಗಳ ಸಂಬಳದ ಸ್ಕೇಲು ಏನಿದೆ, ನಮ್ಮ ಸಂಸ್ಥಾನದಲ್ಲಿರುವವರ ಸ್ಕೇಲು ಏನಿದೆ ಎಂದು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಿ. ಎಂ. ಮ್ಯಾಸ್ಕರೆನ್ಹಾಸ್ ಸಮಿತಿಯ ವರದಿಯಲ್ಲಿ ವಿವರಗಳು ಗೊತ್ತಾಗುತ್ತವೆ.

12-30 P.M.

Inter-State Committee Meetings

Q.—716. Sri B. NARAYANASWAMY (Mysore City South).—

Will the Government be pleased to state :—

(*a*) the number of times the Inter-State Committee meetings were held to discuss and decide the issues relating to reorganisation of enlarged Mysore State ;

(*b*) the decisions arrived at ;

(*c*) whether they will place a report on the Table of the House in the matter of problems discussed and decisions so far taken?

A.—Sri Kadidal MANJAPPA (Chief Minister).—

(*a*) Five meetings of the Inter-State Committee of Ministers were held on the following dates:—

(i) 21st and 22nd May 1956 ;

(ii) 15th June 1956 ;

(iii) 13th and 14th July 1956 ;

(iv) 29th and 30th August 1956 ;

(v) 17th and 18th September 1956

(*b*) Some of important matters in which decisions have been taken are—

(i) the formation of 4 Commissioners' Divisions ;.

(ii) strength of All-India Services cadre ; and

(iii) the principles for adaptations of laws and the division of assets and liabilities ;

(iv) selection of Officers to key posts and also against posts of Secretaries and Heads of Departments, etc.

(*c*) Copies of Press Communiques issued from time to time are placed on the Table and the proceedings cannot be placed on the Table as they are confidential records.

Sri B. NARAYANASWAMY.—Is the Government aware of the comments made by one organisation by name Pumpa Sahitya Samithi of Bellary ?

*Sri Kadidal MANJAPPA.—I have read some such report in the '*Deccan Herald*' of yesterday.

Sri B. NARAYANASWAMY.—Is there any truth in the comment that has been made by that Samithi, Sir ?

Sri Kadidal MANJAPPA.—There is absolutely no truth.

Sri B. NARAYANASWAMY.—Whether the Inter-State Committee have taken into consideration all the relevant facts to arrive at this conclusion for the selection of these key posts ?

Sri Kadidal MANJAPPA.—Yes, they have taken into account all the factors.

Sri B. NARAYANASWAMY.—May I know the strength of the All-India Service cadre that has been fixed ?

Sri Kadidal MANJAPPA.—I have already submitted that the strength is 90.

Sri B. NARAYANASWAMY.—May I know the main principle that you have followed for adaptation of laws and division of assets and liabilties ?

Mr. SPEAKER.—They ave statedh in reply to Question 1.

Q.—784. Sri S. SRINIVASA IYENGAR (T.-Narasipur).—

Will the Government be pleased to state :—

(*a*) how many meetings of the Inter-State Committee (formed in connection with the States Reorganisation) were held from the date of its nomination to date ;

(*b*) what are the subjects discussed; and

(*c*) the resolutions passed ?

A.—Sri Kadidal MANJAPPA (Chief Minister).—

	No. of meetings
(*a*) (i) Inter-State Officers' Meetings	2
(ii) Inter-State Ministers' Meetings	5

(*b*) Some of the important matters in which decisions have been taken are :—

(i) the formation of 4 Commissioners' Divisions ;

(ii) Strength of the All-India Services cadre ;

(iii) the principles of adaptation of laws and the division of assets and liabilities ;

(iv) selection of key officers to posts and also against posts of Secretaries to Government and Heads of Departments.

(*c*) Copies of Press Communiques issued from time to time are placed on the Table. Placed in Legislature Librery No. 24. L. A. 1956.

Sri S. SRINIVASA IYENGAR.—I see from the Press Notification that decentralisation of powers to the Heads of Departments was also one of the subjects to discuss. May I know whether that Committee has made certain resolution in that connection ?

*Sri Kadidal MANJAPPA.—They have opined that decentralisation has to be effected.

Sri S. SRINIVASA IYENGAR.—I that notice in that press communique, a new pay structure for the new State was also one of the subjects. May I know whether decisions have been reached in respect of the pay structure in view of the fact that the new State will come into being on the 1st of November ?

Sri Kadidal MANJAPPA.—It was thought fit that the matter should be left to the new Government that would function after 1st November 1956.

Sri S. SRINIVASA IYENGAR.—What were the reasons that prompted the Committee to leave that question open when they knew the disparity in the scales of salary ?

Sri Kadidal MANJAPPA.—It is a very big and complicated problem. The Inter-State Ministers' Committee felt that it was beyond their competence to determine the common scales of pay before the new State was formed.

Sri S. SRINIVASA IYENGAR.—Was it not one of the points of reference to the Inter-State Committee to draw up a new scales of pay structure ?

Sri Kadidal MANJAPPA.—All the problems connected with States Reorganisation come within the purview of the Committee. But there are certain matters which can be dealt with effectively only after the new State comes into existence.

Sri S. SRINIVASA IYENGAR.—In the Press Communique, I notice that the other subjects that were discussed were reconstitution of the I. A. S. and I. P.S. May I know what the Government meant by reconstituting the cadre ?

Sri Kadidal MANJAPPA.—Fixing the ranks of the officers to be allotted to this new State from Mysore, Hyderabad, Bombay and Madras and then drawing up a new cadre.

Sri S. SRINIVASA IYENGAR.—Are the Government aware that different procedures have been adopted by the Government of India in respect of different States while allocating the services ?

Sri Kadidal MANJAPPA.—The question is not clear. I presume that the Hon'ble Member has in his mind the procedure they adopted in fixing the strength of the officers. If that is so, it is true that in the case of Part B States, the allotment was fixed on a different basis.

Sri S. SRINIVASA IYENGAR.—What steps would the Government take to redress that grievance ?

Sri Kadidal MANJAPPA.—We have addressed a letter to the Government of India.

Sri S. SRINIVASA IYENGAR.—What will be the position of the Deputy Commissioners in the light of the appointment of the Divisional Officers ?

Sri Kadidal MANJAPPA.—They will continue as Deputy Commissioners. They will exercise their own power and the Commissioners would exercise the

powers of the Revenue Commissioner and the L. S. G. Commissioner.

Sri S. SRINIVASA IYENGAR.—I notice in the communique that the size of the Second Five-Year Plan for the new State was also one of the subjects discussed. May I know the decision arrived at by that Committee ?

Sri Kadidal MANJAPPA.—We are collecting figures from different States. We are actually at the job. We are collecting Budget figures from all the States and also the figures relating to the Second Five-Year Plan.

Sri S. SRINIVASA IYENGAR.—Will there not be dislocation of works included in the Plans ?

Sri Kadidal MANJAPPA.—There will not be any dislocation.

Sri S. SRINIVASA IYENGAR.—Will the Government be pleased to state whether the Government would be running the officers' mess and hostels by themselves ?

Sri Kadidal MANJAPPA.—They have not completed the details. It is merely a matter which could be dealt with by officers themselves.

ಶ್ರೀ ಎಸ್. ಸಿದ್ದಪ್ಪ.—ಸಮಿತಿಯು ಐದು ಸಲ ಸೇರಿ ತೀರ್ಮಾನಗಳನ್ನು ತೆಗೆದುಕೊಂಡಿರುವುದರಲ್ಲಿ ವಿಶಾಲ ಮೈಸೂರಿಗೆ ಎಷ್ಟು ಜನ ಮಂತ್ರಿಗಳೆನ್ನುವುದನ್ನೂ ನಿರ್ಧರಿಸಿದ್ದೀರಾ ?

ಅಧ್ಯಕ್ಷರು.—ಅದನ್ನು ಮಾನ್ಯ ಸದಸ್ಯರು ನಿರ್ಧರಿಸಬೇಕು.

ಶ್ರೀ ಕೆ. ಪ್ರಭಾಕರ್.—ಇದರಲ್ಲಿ (b) ಭಾಗದ (iv)ನೇ ಐಟಂನಲ್ಲಿ key post ಮತ್ತು Secretaries to Government and Heads of Departments ಎಂದು ಹೇಳಿದ್ದೀರಿ. ಈ key posts ಯಾವುವು, total strength ಎಷ್ಟಿದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಕಡಿದಾಳ್ ಮಂಜಪ್ಪ.—Key post ಎಂದರೆ the post of the Inspector of General of Police, Chief Secretary, Financial Secretary and the Development Commissioner.

ಶ್ರೀ ಕೆ. ಪ್ರಭಾಕರ್.—Total number of posts ಎಷ್ಟೆಂಬುದು ಗೊತ್ತಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾಲ್ಕು ಸ್ಥಾನಗಳು key posts ಎಂದು ಪರಿಗಣಿಸಲ್ಪಟ್ಟಿವೆ.

ಶ್ರೀ ಕೆ. ಪ್ರಭಾಕರ್.—ಸೆಲೆಕ್ಷನ್ ಎಂದು ಮಾಡಿಕೊಂಡಮೇಲೆ, ಆ further appointmentನ್ನೂ direct appointment ಎಂದು ಪರಿಗಣಿಸಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—Direct appointment ಎಂದು ಪರಿಗಣಿಸುವುದಕ್ಕಾಗುವುದಿಲ್ಲ. I.A.S. ಮತ್ತು I.C.S. ಆಫೀಸರುಗಳು ಹೊರಗಿನಿಂದ ಬರುತ್ತಾರೆ. ಅವರನ್ನೂ ತೆಗೆದುಕೊಳ್ಳಬೇಕಾಗುತ್ತದೆ.

Prime Minister's visit to Jog (expenses incurred)

Q.—774. Sri S. GOPALA GOWDA (Sagar-Hosanagar).—Will the Government be pleased to state :—

(*a*) the total expenses incurred by the Government through its various departments when Sri Nehru, the Prime Minister of India, visited Jog in the month of April 1956.

(*b*) how long he stayed in Mysore State; what was the purpose of his visit; and the engagements that he had during his stay ?

A.—Sri Kadidal MANJAPPA (Chief Minister).—

(*a*) Rs. 4,141-14-0.

(*b*) He stayed from 10-45 P.M. on 9th April 1956 till 5-30 A.M. on 11th April 1956. The Prime Minister visited Mahatma Gandhi Hydro-Electric Works, Jog, and addressed the public at Honnali, Shimoga and Harihar.

ಶ್ರೀ ಎಸ್. ಗೋಪಾಲಗೌಡ.—ರೂ. 4,141-14-0 ಯಾವ ಬಾಬಿನಲ್ಲಿ ಖರ್ಚಾಗಿದೆ ?

*ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ವಿವರಗಳಿವೆ. ಪಬ್ಲಿಕ್ ಮೀಟಿಂಗುಗಳನ್ನು ನಡೆಸತಕ್ಕ ಬಗ್ಗೆ, ಆಮೇಲೆ Jog installations, traffic control ಮತ್ತು ಇನ್ನೂ ಚಿಲ್ಲರೆ ಕೆಲವು ಬಾಬುಗಳಿಗಾಗಿ ಖರ್ಚಾಗಿದೆ. ಜೋಗ್ ಒಂದರಲ್ಲೇ ಇಷ್ಟು ಮೊಬಲಗೂ ಖರ್ಚಾಗಲಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಒಟ್ಟು ಖರ್ಚಾದ ಮೊಬಲಗು ಇಷ್ಟು.

ಶ್ರೀ ಎಸ್. ಗೋಪಾಲಗೌಡ.—ನಾನು ಸರ್ಕಾರದವರನ್ನು ಕೇಳಿರುವುದು ಶ್ರೀಮಾನ್ ನೆಹರೂ ಅವರು ಏಪ್ರಿಲ್ ಮಾಹೆಯಲ್ಲಿ ನಮ್ಮ ಸಂಸ್ಥಾನಕ್ಕೆ ಬಂದಿದ್ದಾಗ ಸಂಸ್ಥಾನ ಸರ್ಕಾರಕ್ಕೆ ನಾನಾ ಇಲಾಖೆಗಳ ಮುಖಾಂತರ ಖರ್ಚಾದ ಒಟ್ಟು ಮೊಬಲಗೆಷ್ಟು ಎಂದು ; ಅದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೂ. 4,141-14-0

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ನನಗೆ ಗೊತ್ತಿರುವಹಾಗೆ ಹರಿಹರದಿಂದ ಶಿವಮೊಗ್ಗದವರೆಗೆ, ಶಿವಮೊಗ್ಗ ಟೌನಿನಲ್ಲಿ ಮತ್ತು ಶಿವಮೊಗ್ಗದಿಂದ ಜೋಗ್‌ವರೆಗೆ, 'ಜೋಗ್'ನಿಂದ ಬೊಂಬಾಯಿ ಬೌಂಡರಿವರೆಗೆ ಸೇರಿಕೊಂಡು, ಇಷ್ಟು ಸ್ಥಳಗಳಲ್ಲಿಯೂ ಸಹಸ್ರಾರು ಜನರು P.W.D. ಇಲಾಖೆಯಿಂದ ಆಗ ಕೆಲಸ ಮಾಡುತ್ತಿದ್ದರು. ಕೆಲವು ಕಡೆ ಸಿಮೆಂಟ್

(ಶ್ರೀ ಎಸ್. ಗೋಪಾಲಗೌಡ.)

ಕೆಲಸ ಕೂಡ ಆ ದಿವಸವೇ ಆದದ್ದೂ, ಕೆಲವುಕಡೆ ಬರೀ ರಸ್ತೆ ರಿಪೇರಿ ಆದದ್ದೂ ಉಂಟು. ಆದುದರಿಂದ Public Works Department ಮುಖಾಂತರ ಸರ್ಕಾರಕ್ಕೆ ಆ ಸಮಯದಲ್ಲಿ ಎಷ್ಟು ಖರ್ಚಾಯಿತೆನ್ನುವುದನ್ನೂ ಸರ್ಕಾರದವರು ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—Public Works ಇಲಾಖೆಯವರು ಪ್ರತಿವರ್ಷ ಅಥವಾ ಅವಶ್ಯಕವಾಗಿ ಮಾಡಬೇಕಾದ ಕೆಲಸ ಕಾರ್ಯಗಳನ್ನು ಮಾಡಿದರೆ ಅದು ಪ್ರೈಮ್ ಮಿನಿಸ್ಟರ್‌ಗೋಸ್ಕರ ಮಾಡಿದ ಹಾಗಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ನಾರ್ಮಲ್ಲಾಗಿ ನಡೆಯುವ ಕೆಲಸಕ್ಕಿಂತ ಹೆಚ್ಚಾಗಿ ಈ ವಿಶೇಷ ಸಂದರ್ಭಕ್ಕೆ ಏನೂ ಇಲಾಖೆಯಿಂದ ಖರ್ಚಾಗಿಲ್ಲವೆಂಬುದು ಸರ್ಕಾರದ ಅಭಿಪ್ರಾಯವೇ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ರಸ್ತೆ ರಿಪೇರಿ ಮಾಡಿದರೆ ಅಥವಾ ಇನ್ನೇನಾದರೂ ರಿಪೇರಿ ಮಾಡಿದರೆ ಅದನ್ನು ಪ್ರಧಾನ ಮಂತ್ರಿಗಳಿಗಾಗಿ ಮಾಡಿದರು, ಅದಕ್ಕಾಗಿ ಹಣ ಖರ್ಚು ಮಾಡಿದರು ಎಂದು ಮಾನ್ಯ ಸದಸ್ಯರು ಭಾವಿಸಿಕೊಳ್ಳಬಾರದು. ಇದು ಬಹಳ ಚಿಕ್ಕ ಮೊಬಲಗು. ಭಾರತದ ಮಹಾ ಪ್ರಧಾನಿ ಬಂದರೆ ನಾಲ್ಕು ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಿರುವುದೇನೂ ದೊಡ್ಡದಲ್ಲ.

ಶ್ರೀ ಎಸ್. ಗೋಪಾಲಗೌಡ.—ಪಬ್ಲಿಕ್ ಮೀಟಿಂಗ್ ಎಲೆಕ್ಟ್ರಿಕ್ ಇನ್‌ಸ್ಟಲೇಷನ್, ಸ್ಯಾನಿಟರಿ ಅರೇಂಜ್‌ಮೆಂಟ್ ಮುಂತಾದುವಕ್ಕೆ ಸರ್ಕಾರ ತೋರಿಸಿರುವ ಖರ್ಚು ಬಹಳ ಸಣ್ಣದು. ಆದರೆ ನನಗೆ ಗೊತ್ತಿರುವ ಹಾಗೆ ಪ್ರಧಾನಿಗಳಿದ್ದ 24 ಅಥವಾ 32 ಗಂಟೆಗಳ ಕಾಲದಲ್ಲಿ ಸುಮಾರು ಕನಿಷ್ಠ 40 ಸಾವಿರ ರೂಪಾಯಿಗಳಿಗೆ ಕಡಮೆಯಿಲ್ಲದೆ ಖರ್ಚಾಗಿದೆಯೆಂಬುದು ನನ್ನ ಅಂದಾಜು.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಇಂಜನಿಯರಲ್ಲ.

ಶ್ರೀ ಎಸ್. ಗೋಪಾಲಗೌಡ.—ಪ್ರಧಾನಿಗಳು ಬರುವುದಕ್ಕೆ ಹಿಂದಿನ ದಿನ ರಿಪೇರಿ ನಡೆಯುವ ಸ್ಥಳಕ್ಕೆ ಹೋಗಿದ್ದೆ, ರಾತ್ರಿ ಹಗಲು ಕೆಲಸ ಮಾಡುತ್ತಿದ್ದರು, ಸಹಸ್ರಾರು ಜನರು ಕೆಲಸದಲ್ಲಿ ತೊಡಗಿದ್ದರು. ಅವರು ಬಿಟ್ಟಿ ಕೆಲಸ ಮಾಡಿದರೆಂದು ನಂಬಲು ಸಾಧ್ಯವಿಲ್ಲ. ಆದ್ದರಿಂದ ಕಂಟ್ರಾಕ್ಟರ್ ಮುಂದೆ ಬಂದು ಸ್ವಂತ ಖರ್ಚಿನಿಂದ ಕಾರ್ಯ ನೆರವೇರಿಸಿದರೆ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆ ಒದಗಿಸಿದ್ದ ಸಿಬ್ಬಂದಿಯಿಂದಲೇ ಇಷ್ಟು ಕೆಲಸವೂ ಆಯಿತೆ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಆ ದಾರಿಯಲ್ಲಿ ಹೋಗುವಾಗ ಬಹುಶಃ ಸಾರ್ವಜನಿಕರು ಅಲ್ಲಲ್ಲಿ ಚಪ್ಪರ, ತಳಿರುತೋರಣಗಳಿಂದ ಶೃಂಗಾರ ಮಾಡುವುದು ವಗೈರೆ ಮಾಡುತ್ತಿದ್ದರೆಂದು ಕಾಣುತ್ತದೆ. ಅವರು ಅದೆಲ್ಲಾ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸವೆಂದು ತಿಳಿದುಕೊಂಡಿರಬಹುದು. ಪ್ರಧಾನಿ ಬಂದಾಗ ರಸ್ತೆ ಸರಿಯಾದ ಸ್ಥಿತಿಯಲ್ಲಿ ಒಂದು ವೇಳೆ ಇರದಿದ್ದರೆ ಅದನ್ನು ರಿಪೇರಿ ಮಾಡಲು ಪ್ರಯತ್ನಪಟ್ಟಿರುವುದು ಒಂದು ದೊಡ್ಡ ಅಪರಾಧವಾಗುವುದಿಲ್ಲ. ಅದನ್ನು ಯಾವಾಗಲೋ ಮಾಡಬೇಕಾಗಿತ್ತು. ಆನ್ಯುಯಲ್ ರಿಪೇರ್ಸ್ ಮಾಡಬೇಕಾದ್ದನ್ನು ಆ ಸಮಯದಲ್ಲಿ ಮಾಡಿರಬಹುದು.

Mr. SPEAKER.—They have not sanctioned any extra grants.

ಶ್ರೀ ಕಡಿದಾಳ್ ಮಂಜಪ್ಪ.—ಎಕ್ಸ್‌ಟ್ರಾ ಗ್ರಾಂಟ್ ಒಂದು ವೇಳೆ ಇರಬಹುದು, ಇದ್ದರೆ ಏನು ಮಹಾ ಅಪರಾಧ.

Sri S. GOPALA GOWDA.—What I want to know is, on this special occasion what the total amount spent by the various departments of the Mysore State was.

Sri B. NARAYANASWAMY.—Sir, my friend Sri Gopala Gowda should understand that we have got many important questions and he should not go on arguing.

ಶ್ರೀ ಎಸ್. ಗೋಪಾಲಗೌಡ.—ಖರ್ಚಾಗಿರುವ ಎಲ್ಲಾ ಹಣದ ಲೆಕ್ಕ ಕೊಟ್ಟಿಲ್ಲವೆಂಬುದು ಗೊತ್ತಾಗುತ್ತದೆ. ಆದ್ದರಿಂದ ಕೇಳುವುದು.

ಶ್ರೀ ಕಡಿದಾಳ್ ಮಂಜಪ್ಪ.—ಪ್ರಧಾನಿಯವರ ಭೇಟಿ ಸಮಯದಲ್ಲಿ ಕೆಲವು ನಾದುರಸ್ತಾಗಿರುವ ರಸ್ತೆ ರಿಪೇರಿ ಮಾಡಿರಬಹುದು. ಅದರ ಖರ್ಚನ್ನು ಇದರಲ್ಲಿ ಸಮೂದು ಮಾಡಿಲ್ಲ. ಅದು ಸ್ವಾಭಾವಿಕವಾಗಿ ಪ್ರತಿ ವರ್ಷ ಆಗುವ ಖರ್ಚು. ಅದನ್ನು ಇದರಲ್ಲಿ ಸೇರಿಸಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಖರ್ಚಿನಲ್ಲಿ ಜೋಗಿನಲ್ಲಿ ಏರ್ಪಡಿಸಿದ್ದ ಔತಣ ಕೂಟದ ಖರ್ಚು ಮತ್ತು ಬೇರೆ ಖರ್ಚುಗಳು ಸೇರಿವೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಸೇರಿದೆ.

ಶ್ರೀ ಎಸ್. ಗೋಪಾಲಗೌಡ.—ಜೋಗಿನಲ್ಲಿ ಔತಣ ಕೂಟವನ್ನು ಮುಂಬಯಿ ಸರ್ಕಾರ ಏರ್ಪಡಿಸಿತ್ತೆ ಅಥವಾ ಮೈಸೂರು ಸರ್ಕಾರ ಏರ್ಪಡಿಸಿತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ನೋಟೀಸ್ ಬೇಕು. ಪ್ರಧಾನಿಗಳಿಗೆ ಖಾಸಗಿ ಅಸೋಸಿಯೇಷನ್‌ನವರು ಔತಣಕೂಟ, ಉಪಹಾರ ಮೊದಲಾದುವಕ್ಕೆ ಏರ್ಪಡಿಸಿದ್ದರೆಂದು ನನಗೆ ಗೊತ್ತಾಗಿದೆ. ನಾನು ಅಲ್ಲಿಗೆ ಹೋಗಿರಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಆ ಸಂದರ್ಭದಲ್ಲಿ ಮೈಸೂರಿನ ಎಲ್ಲಾ ಮಂತ್ರಿಗಳೂ ಮತ್ತು ಮುಖ್ಯಾಧಿಕಾರಿಗಳೂ ಹೋಗಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹೋಗಿರಲಿಲ್ಲವೆಂದು ಅರಿಕೆ ಮಾಡಿಕೊಂಡೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ರಸ್ತೆಗಳಲ್ಲಿ ಟಾರಿನ ಡಬ್ಬ, ಕಲ್ಲು, ಜಲ್ಲಿ ಮೊದಲಾದುವನ್ನು ಆರು ತಿಂಗಳಿಂದ ರಿಪೇರಿಗಾಗಿ ಶೇಖರಿಸಿ ಕೆಲಸ ಪ್ರಾರಂಭ ಮಾಡಿರಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನೆನಪು ಮಾಡಿದ್ದಕ್ಕಾಗಿ ವಂದನೆ. ಕೆಲವು ರಸ್ತೆ ಅಸ್ಫಾಲ್ಟ್ ಮಾಡಬೇಕೆಂದು ಪ್ರೋಗ್ರಾಂನಲ್ಲಿ ಸೇರಿಸಿತ್ತು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ರಸ್ತೆಗಳಲ್ಲಿ ಜಲ್ಲಿ ವಗೈರೆ ಇದ್ದುದರಿಂದ ಪ್ರಯಾಣಕ್ಕೆ ತೊಂದರೆಯಾಗುತ್ತಿರಲಿಲ್ಲವೆ?

Sri Kadidal MANJAPPA.—I am prepared to admit very boldly that there is nothing wrong in repairing roads which were in bad condition.

Industrial Centre in Hassan Town (Establishment)

Q.—685. Sri H. K. SIDDAIYA (Belur —Scheduled Castes).—

Will the Government be pleased to state :—

(*a*) the action taken by them to establish an industrial centre in Hassan town for which representations have been made for the past one year ;

(*b*) when this will be implemented?

A.—Dr. R. NAGAN GOWDA (Minister for Industries and Excise).—

(*a*) The possibilities of starting certain village industries in the area is under investigation.

(*b*) This will be taken up as soon as the Statutory State Khadi and Village Industries Board is constituted.

ಶ್ರೀ ಎಚ್. ಕೆ. ಸಿದ್ದಯ್ಯ.—ಗ್ರಾಮಾಂತರ ಕೈಗಾರಿಕೆಗಳನ್ನು ಸರ್ಕಾರದವರು ಪ್ರಾರಂಭಿಸಬೇಕೆಂದು ಏರ್ಪಾಡು ಮಾಡಿದ್ದೀರಿ. ಸಂಸ್ಥಾನಾದ್ಯಂತ ಇದನ್ನು ಪ್ರಾರಂಭಿಸುವುದರಿಂದ ಏನು ಉದ್ದೇಶ ಸಾರ್ಥಕವಾಗುತ್ತದೆ, ಸ್ವಾಮಿ ?

*ಡಾ|| ಆರ್. ನಾಗನಗೌಡ.—ಜನರಿಗೆ ಕೆಲಸ ಸಿಕ್ಕಿದ ಹಾಗಾಗುತ್ತದೆ, ನಮಗೆ ಬೇಕಾದ ಸಾಮಾನೆಲ್ಲಾ ತಯಾರಾದ ಹಾಗಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಸಾಮಾನು ತಯಾರಿಸಲು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಒಂದು ಕೈಗಾರಿಕಾ ಕೇಂದ್ರ ಸ್ಥಾಪನೆ ಮಾಡುವುದು ಒಳ್ಳೆಯದಲ್ಲವೇ ?

ಡಾ|| ಆರ್. ನಾಗನಗೌಡ.—ಈ ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ಖಾದಿ ಕೈಗಾರಿಕೆ ಮುಂತಾದ ಗ್ರಾಮ ಕೈಗಾರಿಕೆಗಳನ್ನು ಷುರು ಮಾಡಬೇಕೆಂದಿದ್ದೇವೆ, ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದಲ್ಲಿ ಹಾಸನದಲ್ಲಿ ಯಾವ ಕೈಗಾರಿಕೆ ಷುರು ಮಾಡಬಹುದೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಸನ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿನಲ್ಲಿ ಚರ್ಮ ಹದ ಮಾಡುವುದು, ಚರ್ಮದಿಂದ ಸಾಮಾನು ತಯಾರುಮಾಡುವುದು, ಮೂಳೆಯನ್ನು ಪುಡಿ ಮಾಡಿ ಗೊಬ್ಬರ ಮಾಡುವುದು ಮುಂತಾದವಕ್ಕೆ ಒಂದು ವರ್ಷದಿಂದ ಒಂದು ಕೇಂದ್ರ ತೆರೆಯಬೇಕೆಂದು ನಾನು ಸರ್ಕಾರದವರನ್ನು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಡಾ|| ಆರ್. ನಾಗನಗೌಡ.—ಮಾನ್ಯ ಸದಸ್ಯರು ಆ ವಿಷಯದಲ್ಲಿ ಒಂದು ಪತ್ರ ಬರೆದಿದ್ದಾರೆ. ಅಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಹಕಾರ ಸಂಘ ಆದಮೇಲೆ ಮಾಡಬೇಕು ಎಂದು ಯೋಚಿಸಲಾಗಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಅದರಿಂದ ಅನೇಕ ಜನ ನಿರುದ್ಯೋಗಿಗಳಿಗೆ ಸಹಾಯವನ್ನು ಕಲ್ಪಿಸಿದ ಹಾಗಾಗುವುದಿಲ್ಲವೆ ?

ಡಾ|| ಆರ್. ನಾಗನಗೌಡ.—ನಮ್ಮ ಉದ್ದೇಶವೂ ಅದೇ. ಅದಕ್ಕೇ ಏರ್ಪಾಡು ಮಾಡಬೇಕೆಂದಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಆ ಕೇಂದ್ರವನ್ನು ಯಾವಾಗ ತೆಗೆಯುತ್ತೀರಿ ?

ಡಾ|| ಆರ್. ನಾಗನಗೌಡ.—ದ್ವಿತೀಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದಲ್ಲಿ ಏರ್ಪಾಡು ಮಾಡಬೇಕು. ಖಾದಿ ಬೋರ್ಡ್ ಸ್ಥಾಪನೆಯಾದ ತರುವಾಯ ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ.

Neera in K.G.F. and Bangarpet. (Supply)

Q.—726. Sri P. M. SWAMIDURAI (Kolar Gold Fields-Scheduled Castes).—

Will the Government be pleased to state :—

(*a*) whether they intend to introduce supply of neera in K.G.F. and Bangarpet ;

(*b*) if so, whether they have taken any decision in that direction ;

(*c*) when they propose to implement it ?

A.—Dr. R. NAGAN GOWDA (Minister for Industries and Excise).—

(*a*) This will be introduced in K. G. F. and Gauribidanur. The introduction of neera in Bangarpet will be examined.

(*b*) Does not arise in view of reply to (*a*).

(*c*) As early as possible.

Sri P. M. SWAMIDURAI.—What are the reasons that prompted the Government to introduce the neera in K.G.F.?

*Dr. R. NAGAN GOWDA.—The introduction of neera and palm gur scheme was according to the suggestion of the Government of India. Large number of tappers had been thrown out of work and we had to find some industry or some work for them. With that view, we started the palm gur centre. We wanted to start palm gur and neera centres in ten parts of the State.

Sri P. M. SWAMIDURAI.—Is it not a fact that it is the failure of the working of prohibition in K.G.F. that prompted Government to undertake this scheme ?

Dr. R. NAGAN GOWDA.—We have never admitted that it is a failure. Hon'ble Member knows that prohibition is a great boon to the great majority of the Backward Classes and Scheduled Classes all over India.

Sri H. C. LINGA REDDY.—Has any representation been received in this behalf ?

Dr. R. NAGAN GOWDA.—No representation has been received but these two centres have been suggested by the Director of Rural Industries.

Sri H. C. LINGA REDDY.—Are you taking any steps to prevent Neera being converted into Tody ?

Dr. R. NAGAN GOWDA.—We propose to take steps to see that Neera is used as Neera. The Government of India and Khadi Board have given special instruction regarding steps to be taken to see that Neera is not misused.

Leather Industry at Doddasiddavvanahalli.

Q.—829. Sri T. HANUMIAH (Hiriyur—Scheduled Castes).—

Will the Government be pleased to state :—

(*a*) whether the leather tanning industry and the manufacture of leather articles at Doddasiddavvanahalli in Chitaldrug Taluk have come to a standstill ;

(*b*) whether articles prepared out of leather worth lakhs of rupees are not being imported into our State from outside ;

(*c*) what they propose to do in this behalf ?

A.—Dr. R. NAGAN GOWDA (Minister for Industries and Excise).—

(*a*) No Leather Tanning Centre is run by Government at Doddasiddavvanahalli at present. Only Leather Stitching Centre is being run at Doddasiddavvanahalli by the Department. It is not at a standstill.

(*b*) May be.

(*c*) The import of leather finished articles can be reduced in case sufficient private industrialists take up the industry by taking financial aid either under State Aid to Industries Act and Rural Industrialisation Scheme or the facilities provided by the All-India Khadi and Village Industries Board and Small Scale Industries Board.

ಶ್ರೀ ಟಿ. ಹನುಮಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ತಿಳಿಸಿದ್ದೀರಿ. ಕಾರಣವೇನು?

*ಡಾ. ಆರ್. ನಾಗನಗೌಡ.—ಆ ರೀತಿ ಹೇಳಿಲ್ಲವಲ್ಲ.

ಶ್ರೀ ಟಿ. ಹನುಮಯ್ಯ.—ಈ ಹಿಂದೆ ಅಲ್ಲಿ ಚರ್ಮ ಹದ ಮಾಡತಕ್ಕ ಕೆಲಸವೂ ನಡೆಯುತ್ತಿತ್ತೆಂಬುದು ಸರ್ಕಾರದವರಿಗೆ ಗೊತ್ತಿದೆಯೇ?

Dr. R. NAGAN GOWDA.—Only a leather stitching centre is run.

ಶ್ರೀ ಟಿ. ಹನುಮಯ್ಯ.—ಮೊದಲು ಏಕೆ ನಡೆಯುತ್ತಿತ್ತು, ಈಗೇಕೆ ನಿಂತುಹೋಗಿದೆ ಎಂಬುದು ಸರ್ಕಾರದವರಿಗೆ, ಗೊತ್ತಿದೆಯೇ?

Dr. R. NAGAN GOWDA.—This centre was taken over by the Government of India from the District Board and we have been continuing the work.

ಶ್ರೀ ಟಿ. ಹನುಮಯ್ಯ.—ಮೊದಲು ಆ ಜಿಲ್ಲಾ ಬೋರ್ಡಿನವರೇನೇ ಈ ಲೆದರ್ ಸ್ಟಿಚ್ಚಿಂಗ್ ಮತ್ತು ಟ್ಯಾನಿಂಗ್ ಕೈಗಾರಿಕೆಯನ್ನು ಕೈಗೊಂಡಿದ್ದರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಟಿ. ಹನುಮಯ್ಯ.—ಅಲ್ಲಿನ 10-15 ಸುತ್ತಮುತ್ತಲಿನ ಹಳ್ಳಿಗರಿಗೆ ಈ ಒಂದು ಸೆಂಟರಿನಿಂದ ಕೆಲಸ ದೊರೆಯುತ್ತಿತ್ತು. ಆದ್ದರಿಂದ ಇದನ್ನು ಪುನಃ ತೆರೆಯಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಪ್ರಶ್ನೆ ಹಾಕಿರತಕ್ಕ ಮಾನ್ಯ ಸದಸ್ಯರು ಹೇಳಿದ್ದ ಪ್ರಕಾರವೇ ಇದರ ಕಾರ್ಯಕ್ರಮವನ್ನು ಸರಿಪಡಿಸಲು ಮತ್ತು ಇದನ್ನು ಇಂಪ್ರೂವ್ ಮಾಡಲು ಸುವ್ಯವಸ್ಥೆಯಿಂದ ಅಲ್ಲಿ ಕೆಲಸ ನಡೆಯುವಂತೆ ಮಾಡಲು, ಪ್ರಯತ್ನಗಳನ್ನು ನಡೆಸುತ್ತಿದ್ದೇವೆ.

Regulated Market, Chintamani.

Q.—807. Sri M. C. ANJANEYA REDDY (Chintamani).—

Will the Government be pleased to state:—

(*a*) the basis on which the Regulated Market was granted to Chintamani ;

(*b*) whether they have ascertained the opinion of the people of this town and taluk ;

(*c*) whether they are aware that also a shandy is held here once a week ;

(*d*) whether they are aware that the raiyats are put to much inconvenience and loss as tax is being collected by this market also in addition to the tax that is being collected by the municipality for the goods brought by them to this shandy ;

(*e*) whether they intend to abolish this market in view of the above reason and since the business is being transacted in this town only on the shandy day and since the establishment of the market here is not desirable ?

A.—Sri H. M. CHANNABASAPPA (Minister for Revenue and Agriculture).—

(*a*) A regulated market was started at Chintamani for the benefit of Agriculturists round about as it is an important trade centre for oilseeds, pulses, chillies, tamarind, potatoes, onions, jaggery, etc.

(*b*) Yes.

(*c*) Yes. Shandy is held once a week whereas business in the Regulated Market is carried on every day during season.

(*d*) No. The market fees levied by the Regulated Market Committee is negligible when compared to the taxes levied by the Municipality.

(*e*) No.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ತಾವು (ಎ)ಗೆ ಒದಗಿಸಿರುವ ಉತ್ತರದಲ್ಲಿ "ವ್ಯವಸಾಯಗಾರರ ಸೌಕರ್ಯಕ್ಕಾಗಿ" ಎಂದು ತಿಳಿಸಲಾಗಿದೆ. ಈ ರೆಗ್ಯುಲೇಟೆಡ್ ಮಾರ್ಕೆಟ್ ಎನ್ನುವುದು ಇಲ್ಲದೆ ಇದ್ದಾಗ ರೈತರುಗಳಿಗೆ ಇದ್ದ ಅಸೌಕರ್ಯಗಳೇನೆಂಬುದನ್ನು ಸ್ವಲ್ಪ ತಿಳಿಸುತ್ತೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಕಾದಷ್ಟಿದ್ದವು.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಅವುಗಳೇನೆಂಬುದನ್ನು ಸ್ವಲ್ಪ ದಯವಿಟ್ಟು ವಿವರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಮಾರುಕಟ್ಟೆಗೆ ತರತಕ್ಕ ಸಾಮಾನುಗಳ ಮಾರಾಟದ ಬಗ್ಗೆ ಆ ವರ್ತಕರಿಗೆ ಮತ್ತು ಏಜೆಂಟರುಗಳಿಗೆ ಎಷ್ಟು ದುಡ್ಡು ಕೊಡಬೇಕೆಂಬುದನ್ನು ಮೊದಲು ನಿಖರಗೊಳಿಸಿರಲಿಲ್ಲ. ವ್ಯಾಪಾರ ರೆಗ್ಯುಲರೈಸ್ ಆಗಿರಲಿಲ್ಲ. ನಿಖರವಾದ ತೂಕ ಮತ್ತು ಅಳತೆ ಸಾಧನಗಳನ್ನು ಉಪಯೋಗಿಸುತ್ತಿರಲಿಲ್ಲ. ಇತ್ಯಾದಿ ನಾನಾ ತೊಂದರೆಗಳನ್ನು ಪರಿಹಾರ ಮಾಡಲು ಈ ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಏರ್ಪಾಡು ಮಾಡಲಾಯಿತು.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಈ ತೂಕದ ಬಟ್ಟುಗಳನ್ನು ಮತ್ತು ಅಳತೆ ಸಾಧನಗಳನ್ನು ತನಿಖೆ ಮಾಡಲು ಈ ಮೊದಲೇ ಕೆಲವು ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಿರಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿತ್ತು. ಆದರೆ ಈಗ ಒಂದು ನಿಖರವಾದ ವ್ಯವಸ್ಥೆಯ ಮೇಲೆ ಈ ಕೆಲಸಗಳನ್ನೆಲ್ಲಾ ನಡೆಸಲು ಈ ವ್ಯವಸ್ಥೆ ಅವಶ್ಯಕವೆಂದು ಭಾವಿಸಲಾಗಿದೆ.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ತಾವು (ಸಿ) ಗೆ ಒದಗಿಸಿರುವ ಉತ್ತರ ನಿಜಾಂಶಕ್ಕೆ ಬಹಳ ದೂರವೆಂದರೆ ಒಪ್ಪುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಭಿಪ್ರಾಯ ಶುದ್ಧ ತಪ್ಪು. ಅಲ್ಲಿ ಪ್ರತಿ ದಿನವೂ ಎಷ್ಟೆಷ್ಟು ವ್ಯಾಪಾರ ಆಗುತ್ತಿದೆ ಎನ್ನುವ ತಃಖ್ತೆಯನ್ನು ಟೇಬಲ್ ಮೇಲೆ ಇಡುತ್ತೇನೆ. ತಾವು ನೋಡಿಕೊಳ್ಳಬಹುದು.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಚಿಂತಾಮಣಿ ಟೌನಿನಲ್ಲಿ ಸಂತೆಯದಿನ ಬಿಟ್ಟರೆ ಬೇರೆ ದಿನಗಳಲ್ಲಿ ಅಲ್ಲಿ ಹುಣಿಸೆಹಣ್ಣು-ಮೆಣಸಿನಕಾಯಿ ವ್ಯಾಪಾರ ನಡೆಯುವುದಿಲ್ಲವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಟೌನಿನಲ್ಲಿ ಪ್ರತಿದಿನವೂ ಹುಣಿಸೆಹಣ್ಣು ಮತ್ತು ಮೆಣಸಿನಕಾಯಿ ವ್ಯಾಪಾರ ನಡೆಯುತ್ತಿದೆ. ನನ್ನಲ್ಲಿ ಆ ಬಗ್ಗೆ ವಿವರವಾದ ತಃಖ್ತೆಯೇ ಇದೆ, ಅದನ್ನು ಮಾನ್ಯ ಸದಸ್ಯರು ಬೇಕಾಗಿದ್ದರೆ ನೋಡಿಕೊಳ್ಳಬಹುದು ; ಈ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಅಲ್ಲಿ ಸಂತೆ ದಿವಸ ಮತ್ತು ಇತರ ದಿನಗಳಲ್ಲಿ ಪ್ರತಿದಿನವೂ ಎಷ್ಟು ವ್ಯಾಪಾರ ಆಗುತ್ತಿದೆ ಎನ್ನುವ ತಪಶೀಲು ತಮ್ಮಲ್ಲಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಂಕಿ ಅಂಶಗಳು ಈಗ ನನ್ನಲ್ಲಿಲ್ಲ.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಈಗ ಈ ಸಿಬ್ಬಂದಿಗಾಗಿ ಎಷ್ಟು ಹಣ ಖರ್ಚಾಗುತ್ತಿದೆ ! ಇದನ್ನು ತಪ್ಪಿಸುವುದರಿಂದ ಹೆಚ್ಚು ಅನುಕೂಲವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೇನೂ ಹೆಚ್ಚಿಗೆ ಖರ್ಚಾಗುವುದಿಲ್ಲ. ಹಾಗೊಂದುವೇಳೆ ಸಿಬ್ಬಂದಿಯಿಲ್ಲದೆ ಅಲ್ಲೇನಾದರೂ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸುತ್ತೇವೆ. ಆದರೆ ಈ ವಿಷಯ ಆ ಮಾರ್ಕೆಟಿಂಗ್ ಸಮಿತಿಯವರಿಗೆ ಬಿಟ್ಟಿರತಕ್ಕದ್ದಾಗಿದೆ

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಈಗ ಈ ಮಾರ್ಕೆಟ್ಟನ್ನು ಊರಿಂದಾಚೆ ಮಾಡಬೇಕೆಂದು ಹೇಳುತ್ತಿರುವುದರಿಂದ ಆ ಮುನಿಸಿಪಾಲಿಟಿಗೆ ಸುಂಕದ ರೂಪದಲ್ಲಿ ಬರತಕ್ಕ 20 ಸಾವಿರ ರೂಪಾಯಿಗಳು ಲುಕ್ಸಾನಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನಿಂದ ನಿಮ್ಮ ಮುನಿಸಿಪಾಲಿಟಿಗೆ ಆದಾಯ ಕಡಮೆ ಆಗುವುದಿಲ್ಲ—ಅದು ಇನ್ನು ಹೆಚ್ಚುತ್ತದೆ.

ಶ್ರೀ ಎಂ. ಸಿ. ಅಂಜನೇಯರೆಡ್ಡಿ.—ಈಗ ನಾನೂ ಸಹ ಆ ಸಮಿತಿಯಲ್ಲಿ ಒಬ್ಬ ಮೆಂಬರಾಗಿದ್ದೇನೆ. ಈಗ ಊರಿನಿಂದಾಚೆ ಒಂದುಕಡೆ 16 ಎಕರೆ ಜಮೀನನ್ನು ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಅಕ್ವಯರ್ ಮಾಡಿಕೊಳ್ಳಲು ಉದ್ದೇಶಪಟ್ಟಿದ್ದಾರೆ. ಹಾಗೆ ಮಾಡಿದರೆ ಈಗ ಆ ಮುನಿಸಿಪಾಲಿಟಿಗೆ ಬರತಕ್ಕ ಈ ಮನೆ ಬಾಡಿಗೆ-ಸುಂಕ ವಗೈರೆ ಸುಮಾರು 20 ಸಾವಿರ ರೂಪಾಯಿಗಳತನಕ ಲುಕ್ಸಾನಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ನಿಮ್ಮ ಮುನಿಸಿಪಾಲಿಟಿಗಿರತಕ್ಕ ಉತ್ಪತ್ತಿಯಲ್ಲಿ ರೂಪಾಯಿಗಳು 13,080. ಮಾನ್ಯ ಸದಸ್ಯರಿಗೇನಾದರೂ ಇದರ ಬಗ್ಗೆ ಅಂಥ ತೊಂದರೆಯಿದ್ದರೆ ತಿಳಿಸಿ, ಅದನ್ನು ಬೇಕಾದರೆ ಪರಿಶೀಲಿಸುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತದೆಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೊಂದರೆಯಾಗುವುದಿಲ್ಲ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ತಮ್ಮ ಕಡೆಯಲ್ಲಿರತಕ್ಕ ಯಾರೋ ಕೆಲವರಿಗೆ ಉದ್ಯೋಗಗಳನ್ನು ಕಲ್ಪಿಸಲು ಈ ರೀತಿ ಮಾಡಿದ್ದೀರಿ ಎಂದರೆ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಭಾವನೆ ಶುದ್ಧ ತಪ್ಪು.

Ayurvedic and Unani College, Mysore. (Students' Strike)

Q.—715. Sri B. NARAYANASWAMY (Mysore City South).—

Will the Government be pleased to state :—

(*a*) whether the students of Ayurvedic and Unani College at Mysore have gone on strike ;

(*b*) if so, what their grievances are and the steps the Government have taken to redress the same ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) *Vide* statement appended.

Grievances	Steps taken
I. PRE-CLINICAL SECTION.	
(*a*) Facilities for more practical teaching in Dravyaguna.	Orders have been issued for the appointment of Sri N. L. Bhattacharya as a part-time lecturer to teach Dravyaguna.
(*b*) Pharmacies with more accommodation and more facilities for practical training.	There is a proposal for starting a Central Pharmacy at Bangalore in the Second Five-Year Plan.
(*c*) Anatomy dissection theatre with accommodation for 200 students and an Anatomical Museum attached to.	Sanction has been accorded by Government for conducting dissections in the Medical College, Mysore, as the present accommodation in the College is not adequate. Plans and Estimates for the construction of the dissection theatre in the compound of the College have been called for from the Principal, Government College of Indian Medicine, Mysore. Two Lecturers for Anatomy have already been posted from Medical College, Mysore.
(*d*) A fully equipped laboratory for teaching Histology and Physiology.	One part-time Lecturer in Physiology has been appointed as per G.O. No. M. 7958-59—I.M. 1-56-12, dated 14th August 1956, and he will attend to the teaching work in Histology and Physiology.
II. CLINICAL.	
(*a*) A fully equipped pathological laboratory.	Sanction has been accorded for the appointment of a Technician for the laboratory to work under the guidance of the Pathology Lecturer who is posted from Sri Krishnarajendra Hospital.

STATEMENT—(*contd.*).

Grievances	Steps taken
(*b*) A Panchakarma Theatre with facilities for Sarvangadhara treatment.	This will be taken up when the bed strength is increased.
(*c*) Two hundred beds for treatment in Indigenous Medicine.	As there is insufficient accommodation and on the advice of technically competent persons, the question of shifting the College from Mysore to Bangalore is under active consideration of Government.
(*d*) Creation of a well-equipped Department of Pharmacology.	Sanction has since been accorded for the appointment of a part-time lecturer in Pharmacology.
(*e*) A surgical ward with 30 beds.	*Vide* reply to (*c*) above.
(*f*) Operation theatres—Major and Minor.	Do
(*g*) Facilities for teaching Hygiene and Public Health.	Sanction has been accorded for the appointment of one part-time lecturer for teaching this subject.
(*h*) Facilities for teaching Forensic Medicine.	Do
(*i*) An Obstetrics and Gynæcological Ward with 70.	*Vide* reply to (*c*) above.
(*j*) A ward with 100 beds for training in Modern Medicine.	Do
III. TEACHING STAFF.	
Experienced, authoritative, top-ranking and highly qualified members in the teaching staff appropriate to subjects of Indigenous medicine and Modern Medicine as recommended by the Central Committees (Chopra and Pandit) as per the Resolutions of Health Ministers' Conference and as adopted by other State Governments. The minimum staff desired for each Department is as follows :— Professor—1. Must be a Specialist. Assistant Professor—1. A Graduate with teaching experience in his subject at least for 5 years. Lecturer—1. Graduate—3 years' experience. Demonstrator—1. A Graduate.	Action has already been taken to fill up the vacancies caused by the deputation of Shri M. Mahadeva Sastri and Shri Srikanta Murthy, and two other part-time Lecturers from the Medical College have been appointed as per G.O. No. M. 7958-59—I.M. 1-56-12, dated 14th August 1956, in place of Dr. C. Dwarakanath and Dr. S. Venkatanarayana Rao until these posts are filled up. Prompt action is being taken on the proposals for appointment of additional staff.

STATEMENT—(*concld*).

Grievances	Steps taken
IV. MISCELLANEOUS.	
(*a*) Well equipped library with latest editions in both ancient and modern systems and a separate reading room.	There is a Library attached to the College. Government have sanctioned in G.O. No. M. 19887-986—I.M. 3-55-21, dated 12th December 1955, purchase of books and journals at a cost of Rs. 2,117. Provision has also been made under the Second Five-Year Plan to equip the Library with up-to-date publications and books required for reference.
(*b*) Playground ...	The Chairman, City Improvement Trust Board, Mysore, has been requested to provide a playground in the vicinity of the College.
(*c*) Hostel for Women Students...	The Head of the Department will take suitable action.
(*d*) Hostel for Men Students ...	Do do
(*e*) A Physical Director for guiding sports.	This question will be considered after the playground is provided to the College of Indian Medicine.
V. REGISTRATION AND RECOGNITION.	
(*a*) Opening of a register for the control of the practice of Indigenous Medicine in the State so that Graduates of this College may enjoy the privileges of a Registered Medical Practitioner and have associations with the institutionally trained and qualified.	The question is under consideration but may have to await the formation of the New State.
(*b*) All-India recognition of the course offered in this College.	The Diplomas of this College have been recognised by the Government of W. Bengal on a reciprocal basis. The Diplomas of this College have also been recognised by the Government of Madras.
(*c*) Accommodation: large class rooms and other sanitary facilities.	*Vide* reply to (*c*) above under II Clinical.

ಶ್ರೀ ಬಿ. ನಾರಾಯಣಸ್ವಾಮಿ.—ಆ ವಿದ್ಯಾರ್ಥಿಗಳ ಮುಷ್ಕರ ಈಗ ನಿಂತುಹೋಗಿದೆಯೋ ಅಥವಾ ಇನ್ನೂ ನಡೆಯುತ್ತಿದೆಯೋ ?

*ಶ್ರೀ ಟಿ. ಚನ್ನಯ್ಯ.—ಆ ಬಗ್ಗೆ ಖಚಿತವಾಗಿ ಯಾವುದೂ ಗೊತ್ತಿಲ್ಲ.

1 P.M.

*ಶ್ರೀ ಬಿ. ನಾರಾಯಣಸ್ವಾಮಿ.—What are their grievances and the steps taken ಎಂದು ಕೇಳಿರುವುದಕ್ಕೆ 'Steps taken' ಎಂದು ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ವಿದ್ಯಾರ್ಥಿಗಳು

ಮುಷ್ಕರ ಹೂಡುವುದಕ್ಕೆ ಮುಂಚೆ ತಾವು ಕೈಕೊಂಡ ಕಾರ್ಯಕ್ರಮಗಳೇ, ಅಥವಾ ಮುಷ್ಕರ ಹೂಡಿದ ನಂತರ ತೆಗೆದುಕೊಂಡ ಕಾರ್ಯಕ್ರಮಗಳೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮುಂಚಿತವಾಗಿ ತೆಗೆದುಕೊಂಡದ್ದು.

ಶ್ರೀ ಬಿ. ನಾರಾಯಣಸ್ವಾಮಿ.—ವಿದ್ಯಾರ್ಥಿಗಳೇನಾದರೂ ಈ ಕಾಲೇಜನ್ನು ಬೆಂಗಳೂರಿಗೆ ಬದಲಾಯಿಸಬೇಕೆಂದು ಕೇಳಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಬೆಂಗಳೂರಿಗೆ ಬದಲಾಯಿಸಬೇಕೆಂದು ಕೇಳಲಿಲ್ಲ. Accommodation ಒದಗಿಸುತ್ತೇವೆಂದು ಹೇಳಿದ್ದೇನೆ.

ಶ್ರೀ ಬಿ. ನಾರಾಯಣಸ್ವಾಮಿ.—ಈಗ ಮುಷ್ಕರ ಹೂಡಿರುವ ವಿದ್ಯಾರ್ಥಿಗಳು ಬೆಂಗಳೂರಿಗೆ ಕಾಲೇಜನ್ನು ವರ್ಗಾಯಿಸಬೇಕೆಂದು ಕೇಳಲಿಲ್ಲವೆಂದು ಹೇಳಿದ್ದೀರಿ. ಮೈಸೂರು ನಗರದೊಳಗೆ ಬೇಕಾದಷ್ಟು ಸ್ಥಳಾವಕಾಶವಿದೆ. ಅನೇಕ ಸರ್ಕಾರಿ ಕಟ್ಟಡಗಳು ಖಾಲಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಮೈಸೂರಿನಲ್ಲಿ ಸಾಕಾದಷ್ಟು ಕಟ್ಟಡಗಳಿಲ್ಲವೆಂದು ಗೊತ್ತಾಗಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಈಗ ಮೈಸೂರು ನಗರದೊಳಗೆ ಆಕಾಶವಾಣಿ ಇದ್ದ ಕಟ್ಟಡ ಖಾಲಿಯಾಗಿದೆಯಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇರಬಹುದು. ಆದರೆ ಆ ಕಟ್ಟಡ ಆಯುರ್ವೇದ ಕಾಲೇಜಿಗೆ ಅನುಕೂಲವಾಗಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಮೈಸೂರು ಸಿಟಿಯಲ್ಲಿರುವ ಪಬ್ಲಿಕ್ ಲೈಬ್ರೆರಿಯನ್ನು ಆಕಾಶವಾಣಿ ಇದ್ದ ಕಟ್ಟಡಕ್ಕೆ ಬದಲಾಯಿಸಿ, ಪಬ್ಲಿಕ್ ಲೈಬ್ರೆರಿ ಇರುವ ಕಟ್ಟಡವನ್ನು ಆಯುರ್ವೇದ ಕಾಲೇಜಿಗೆ ಕೊಡಬೇಕೆಂದು ಸೂಚನೆಗಳು ಬಂದಿತ್ತಲ್ಲವೇ ?

Sri A. G. RAMACHANDRA RAO.—That suggestion has been received.

ಶ್ರೀ ಬಿ. ನಾರಾಯಣಸ್ವಾಮಿ.—ಈಗ ತಾವು ಕೆಲವರು ಅಧ್ಯಾಪಕರನ್ನು ನೇಮಿಸಿದ್ದೀರಿ. ಅವರೆಲ್ಲ ಚಾರ್ಜ್ ತೆಗೆದುಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ತೆಗೆದುಕೊಂಡಿದ್ದಾರೆಂದು ನನಗೆ ಗೊತ್ತಾಗಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಈ ಕಾಲೇಜಿಗೆ ಹೊಸ ಪ್ರಿನ್ಸಿಪಾಲರನ್ನು ನೇಮಕ ಮಾಡಿದ್ದೀರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ.

ಶ್ರೀ ಬಿ. ನಾರಾಯಣಸ್ವಾಮಿ.—ಅವರಿಂದ ತಮಗೇನಾದರೂ ಇದರ ವಿಚಾರವಾಗಿ ವರದಿ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು ಅನಾವಶ್ಯಕ.

ಶ್ರೀ ಬಿ. ನಾರಾಯಣಸ್ವಾಮಿ.—ವಿದ್ಯಾರ್ಥಿಗಳು ಮುಷ್ಕರ ಹೂಡಿರುವ ವಿಚಾರದಲ್ಲಿ ರಿಪೋರ್ಟನ್ನೇನಾದರೂ ತರಿಸಿದ್ದೀರಾ ?

Mr. SPEAKER.—That question has been put several times.

Sri B. NARAYANASWAMY.—I want a definite reply from the Government.

Mr. SPEAKER.—They have said that they have not got it.

ಶ್ರೀ ಬಿ. ನಾರಾಯಣಸ್ವಾಮಿ.—ಹೊಸ ಪ್ರಿನ್ಸಿಪಾಲ್ ಅವರು ಚಾರ್ಜ್ ತೆಗೆದುಕೊಂಡಿದ್ದಾರೆಯೇ ?

Sri A. G. RAMACHANDRA RAO.—The Principal will look after the affairs and adjust the matters.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆಯುರ್ವೇದ ಕಾಲೇಜಿಗೆ ಮೊದಲು ಪ್ರಿನ್ಸಿಪಾಲರಾಗಿದ್ದವರು ಸಂಸ್ಥಾನದ ಹೊರಗಡೆ ಇದ್ದು ಮುಷ್ಕರ ನಡೆಯುವ ಹಾಗೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಟ್ಟಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಾಗದಗಳಿಂದ ಗೊತ್ತಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅವರ ಮೇಲೆ ಏನಾದರೂ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ನಮ್ಮ ಸರ್ಕಾರವನ್ನು ಬಿಟ್ಟು ಹೊರಗಡೆ ಹೋಗಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅವರು ಬೇರೆ ಸರ್ಕಾರದಲ್ಲಿ ನೌಕರರಾಗಿರುವುದರಿಂದ ಆ ಸರ್ಕಾರದ ಮುಖಾಂತರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡುತ್ತಿದ್ದೇವೆ.

Executive Officers, Municipalities.

Q.—808. Sri M. C. ANJANEYA REDDY (Chintamani).—

Will the Government be pleased to state :—

(*a*) whether they have ascertained the opinion of the concerned Municipal Councils or of the Legislature before appointing Executive Officers of Amildars' cadre to the Municipalities ;

(*b*) whether they are aware that the present expenditure on establishment in the Municipalities having increased, all the revenue derived is being spent away on salaries and hence it has become difficult to provide roads, drainage, water, light and other essential amenities for want of funds ;

(*c*) whether it has come to their notice that in several municipalities salaries to the staff are not being paid in time on account of want of funds ;

(*d*) whether they intend to remove the Executive Officers of the Amildars' cadre now appointed and employ Sub-Overseers in their places so that the expenditure of the municipalities could be minimised to a great extent and even facilitate satisfactory execution of the works taken up by the municipalities ?

A.—Sri T. CHANNIAH (Minister for Public Health and Local Self-Government).—

(*a*) No.
(*b*) No.
(*c*) No.
(*d*) No.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅಮಲ್ದಾರ್ ಗ್ರೇಡಿನವರನ್ನು ಮುನಿಸಿಪಾಲಿಟಿಗಳಿಗೆ ಎಕ್ಸಿಕ್ಯೂಟಿವ್ ಆಫೀಸರ್‌ಗಳಾಗಿ ಹಾಕಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈ ಸಭೆಯ ಮತ್ತು ಮೇಲ್ಮನೆಯ ಸದಸ್ಯರುಗಳು ಮುನಿಸಿಪಾಲಿಟಿಗಳಲ್ಲಿ ಕೆಲವು ತೊಂದರೆಗಳಿವೆ ಮತ್ತು ವಸೂಲಿ ಸರಿಯಾಗಿ ಆಗುತ್ತಿಲ್ಲವೆಂದು ಮುಂತಾಗಿ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಮೇಲೆ ಸರ್ಕಾರದವರು ಈ ರೀತಿ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ರೀತಿಯ ದೊಡ್ಡ ಅಧಿಕಾರಿಗಳಿಲ್ಲದೆ ತೊಂದರೆಯಾಗಿದೆ ಎಂದು ಮುನಿಸಿಪಾಲಿಟಿಗಳವರು ಯಾರಾದರೂ ತಮಗೆ ಮನವಿಗಳನ್ನು ಕೊಟ್ಟಿದ್ದರೆ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಾಲಿಟಿಗಳವರು ಸಾಮಾನ್ಯವಾಗಿ ಕೊಡುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅನೇಕ ಮುನಿಸಿಪಾಲಿಟಿಗಳಿಗೆ ಸಂಬಳ ಕೊಡುವುದಕ್ಕೆ ಸಹ ಕಷ್ಟವಾಗಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ "ಇಲ್ಲ" ವೆಂದು ಹೇಳಿದ್ದೀರಿ. ಕೋಲಾರ ಟೌನ್ ಮುನಿಸಿಪಾಲಿಟಿಯಲ್ಲಿ ಒಂದನೇ ತಾರೀಖಿಗೆ ಸಂಬಳಗಳು ಸಂದಾಯವಾಗುತ್ತಿವೆಯೇ ?

ಶ್ರೀ ಟಿ. ಚನ್ನಯ್ಯ.—ಆಗುತ್ತಿವೆ ಎಂದು ನಮಗೆ ಗೊತ್ತಾಗಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮುನಿಸಿಪಾಲಿಟಿಗಳಲ್ಲಿ ಕಾಮಗಾರಿಗಳು ವಗೈರೆ ಕೆಲಸಗಳು ನಡೆಯುತ್ತವೆ. ಅದಕ್ಕೆ ಒಬ್ಬ technical overseer ಇಲ್ಲದೆ ಇರುವುದರಿಂದ ಹೆಲ್ತ್ ಇನ್ಸ್‌ಪೆಕ್ಟರ್ ಈ ಕೆಲಸಗಳನ್ನೆಲ್ಲ ನೋಡಿಕೊಳ್ಳುತ್ತಿದ್ದಾರೆ. ಇದರಿಂದ ಕಾಮಗಾರಿ ಕೆಲಸಗಳು ಸರಿಯಾಗಿ ನಡೆಯದೆ ಬಹಳ ಕಷ್ಟವಾಗಿದೆ. ಆದುದರಿಂದ ಈ ಕೆಲಸಗಳನ್ನೆಲ್ಲ ನೋಡಿಕೊಳ್ಳಲು ಎಕ್ಸಿಕ್ಯೂಟಿವ್ ಆಫೀಸರುಗಳ ಬದಲು Overseers ಗಳನ್ನು ನೇಮಕಮಾಡಿಕೊಳ್ಳುವುದನ್ನು ಯಾಕೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ?

ಶ್ರೀ ಟಿ. ಚನ್ನಯ್ಯ.—Overseers ಏನಿದ್ದರೂ ಸಹ ಸ್ಪೆಷಲ್ ವರ್ಕ್ಸ್ ಮಾಡಿಸುವುದಕ್ಕೂ, technical advice ಮತ್ತು execution ಅವರೇ ಮಾಡಿಸಬೇಕಾದ ಸಂದರ್ಭದಲ್ಲೂ ಬೇಕಾಗುತ್ತಾರೆ. ಅಂಥ ಸಂದರ್ಭಗಳಲ್ಲಿ ಮುನಿಸಿಪಾಲಿಟಿಯವರು ಸರ್ಕಾರಕ್ಕೆ ಬರೆದು ಒಬ್ಬರನ್ನು ನೇಮಕ ಮಾಡಿಕೊಳ್ಳಬಹುದು. ಆದರೆ administration, collection of revenue, ಮತ್ತು ಇತರ ಕೆಲಸಗಳೇನಿವೆ ಅವುಗಳನ್ನೆಲ್ಲ ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಎಕ್ಸಿಕ್ಯೂಟಿವ್ ಆಫೀಸರ್ ಇರಲೇಬೇಕು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮುನಿಸಿಪಾಲಿಟಿಯವರು ಪ್ರತಿ ವರ್ಷವೂ 14-15ಸಾವಿರ ರೂಪಾಯಿಗಳವರೆಗೂ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಅದಕ್ಕೆ ಅಂದಾಜುಮಾಡುವುದು, ಕೆಲಸಗಳ ಸೂಪರ್‌ವಿಷನ್ ಮಾಡುವುದು ಮುಂತಾದುವುಗಳನ್ನು ಈಗ ಯಾರು ಯಾರೋ ನೋಡಿಕೊಳ್ಳುತ್ತಾರೆ. ಆದುದರಿಂದ ಒಬ್ಬ overseer ನೇಮಕ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬೇಕಾದರೆ ಈಗಿರತಕ್ಕ P.W.D. ಅಧಿಕಾರಿಗಳ ಮುಖಾಂತರ ಅಂದಾಜು ವಗೈರೆ ಮಾಡಿಸಿಕೊಳ್ಳಬಹುದು. ಇಲ್ಲದೆ ಹೋದಪಕ್ಷದಲ್ಲಿ ಕೆಲಸವನ್ನು ನಡೆಸಬೇಕಾದರೆ ಒಬ್ಬ ಸಬ್ ಓವರ್ಸಿಯರನ್ನು ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಒಬ್ಬ ಓವರ್ಸಿಯರನ್ನು ನೇಮಕಮಾಡುವುದರಿಂದ ಬಹಳ ಹಣ ಉಳಿತಾಯವಾಗುತ್ತದೆ ಮತ್ತು ಕೆಲಸ ಸರಿಯಾಗಿ ನಡೆಯುತ್ತದೆ. ಆದುದರಿಂದ ಇದಕ್ಕೆ ಯಾಕೆ ಒಪ್ಪಿಕೊಳ್ಳುವುದಿಲ್ಲ ?

ಶ್ರೀ ಟಿ. ಚನ್ನಯ್ಯ.—ಚಿಂತಾಮಣಿ ಮುನಿಸಿಪಾಲಿಟಿಯಲ್ಲಿ ಎಕ್ಸಿಕ್ಯೂಟಿವ್ ಆಫೀಸರ ಜೊತೆಗೆ ಒಬ್ಬ ಸಬ್ ಓವರ್ಸಿಯರ ಅವಶ್ಯಕತೆ ಇದ್ದಪಕ್ಷದಲ್ಲಿ ಸರ್ಕಾರಕ್ಕೆ ಬರೆದರೆ ಅದಕ್ಕೆ ಅನುಮತಿ ಕೊಡುತ್ತಾರೆ.

Feeder Channel from Marihalla to Kanva Reservoir (Construction).

Q.—673. Sri V. VENKATAPPA (Channapatna).—

Will the Government be pleased to state:—

(*a*) whether it is not true that a deputation from Channapatna Taluk waited on the P.W.D. Minister on 9th December 1955;

(*b*) whether it is not a fact that the P.W.D. Minister directed the Executive Engineer, Bangalore Division, to submit a detailed estimate of costs of opening a feeder channel from Marihalla to Kanva Reservoir so as to enable the Government to fix the rate of compensation and water rate payable by Kanva Atchkatdars;

(*c*) whether the estimate has been received; if so, the action taken thereon?

A.—Sri A. G. RAMACHANDRA RAO (Minister for Law and Education).—

(*a*) Yes.
(*b*) Yes.
(*c*) No.

ಶ್ರೀ ವಿ. ವೆಂಕಟಪ್ಪ.—ಈ ಬಗ್ಗೆ ಪರಿಶೀಲನೆ ನಡೆಸಿ ಅಂದಾಜು ತಯಾರ್ಮಾಡಬೇಕೆಂದು ಹೇಳಿ ಹತ್ತು ತಿಂಗಳಾಗಲಲ್ಲವೆ !

ಶ್ರೀ ಎ. ಜಿ. ರಾಮಚಂದ್ರರಾವ್.—ಮಾರಿ ಹಳ್ಳ ಪ್ರಾಜೆಕ್ಟ್ ಅಂದಾಜು ಮಾಡಬೇಕೇ, ಬೇಡವೇ ಎಂದು ಪರಿಶೀಲನೆಮಾಡಿ ಅನಾವಶ್ಯಕವೆಂದು ಬಿಟ್ಟಿದ್ದೇವೆ.

ಶ್ರೀ ಪಿ. ವೆಂಕಟಪ್ಪ.—ಅನಾವಶ್ಯಕವೆಂದು ತೀರ್ಮಾನ ಮಾಡಿದವರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು.

ಶ್ರೀ ಪಿ. ವೆಂಕಟಪ್ಪ.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ, ಅಂದಾಜು ತಯಾರುಮಾಡಿ ಕಳುಹಿಸಿದಮೇಲೆ ಕಾಂಪೆನ್ ಸೇಷನ್ ಎಷ್ಟು ಕೊಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆಂದು ಹೇಳಿದ್ದು ದಿಟ ತಾನೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳಿದ್ದು ದಿಟ.

ಶ್ರೀ ಪಿ. ವೆಂಕಟಪ್ಪ.—ಇದಾಗಬಾರದೆಂದು ಯಾತಕ್ಕೋಸ್ಕರ, ಯಾವಾಗ, ತೀರ್ಮಾನವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಸಂಬಂಧಪಟ್ಟಹಾಗೆ ಮಂಚಿನ ಬೆಲೆ ಪ್ರಾಜೆಕ್ಟ್ ವಿಷಯವನ್ನು ಪರಿಶೀಲನೆ ಮಾಡಿದೆವು. ಮಂಚಿನಬೆಲೆ ಪ್ರಾಜೆಕ್ಟಿನ detailed survey ಮಾಡಿ ಎಂದು ಆರ್ಡರ್ ಕೊಟ್ಟಾಗ ಇದು drop ಆಯಿತು ಎಂದು ಕಾಣುತ್ತದೆ.

ಶ್ರೀ ಪಿ. ವೆಂಕಟಪ್ಪ.—ಮಂಚಿನಬೆಲೆ ಪ್ರಾಜೆಕ್ಟಿಗೂ, ಮಾರಿಹಳ್ಳದಿಂದ ಕಣ್ವ ಪ್ರಾಜೆಕ್ಟಿಗೆ ಕಾಲುವೆ ತೆಗೆಸುವುದಕ್ಕೂ ಏನು ಸಂಬಂಧ, ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇವೆರಡಕ್ಕೂ ಒಂದೇ ನೀರಿನ ಆಶ್ರಯವಿರುವುದರಿಂದ ಯಾವುದಾದರೂ ಒಂದನ್ನು ಮಾಡಬೇಕು.

ಶ್ರೀ ಪಿ. ವೆಂಕಟಪ್ಪ.—ಮಾರಿಹಳ್ಳದಿಂದ ಕಣ್ವಕ್ಕೆ ನೀರು ಸರಬರಾಜು ಮಾಬೇಕೆಂದು ಹೇಳಿದಾಗ ಈ ಮಂಚಿನಬೆಲೆ ಪ್ರಾಜೆಕ್ಟ್ ಇತ್ತೇ ಅಥವಾ ಹೊಸದಾಗಿ ಇದು ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಇದ್ದುದು ಗೊತ್ತಿಲ್ಲ. ಈ ವಿಷಯ ಬಂದಾಗ ಅದನ್ನು ಪರಿಶೀಲನೆಮಾಡಿ ಆ ಪ್ರಾಜೆಕ್ಟನ್ನು ಮಾಡುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದೇವೆ.

ಶ್ರೀ ಪಿ. ವೆಂಕಟಪ್ಪ.—ಮಂಚಿನಬೆಲೆ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ಹಿಂದೆಯೇ ಆಗಿದ್ದರೂ ಅದಕ್ಕೆ ತೊಂದರೆಯಾಗುವುದಿಲ್ಲವೆಂದು ತಾನೆ ಮಾರಿಹಳ್ಳದಿಂದ ಕಣ್ವಕ್ಕೆ ನೀರನ್ನೊದಗಿಸಬೇಕೆಂದು ಅಂದಾಜು ತಯಾರಿಸಲು ಹೇಳಿದ್ದು ?

Sri A. G. RAMACHANDRA RAO.—I want notice.

Road from Krishnarajsagar to Sagar Katte *via* Kallur (Construction).

Q.—689. Sri SIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that the formation of a road from the Circuit House, Krishnarajsagar to Sagara Katte *via* Chikkanahalli, Kalluru, Naganahalli, Kalluru was asked for ;

(*b*) if so, the action taken by them in this behalf ;

(*c*) whether they will give an assurance to take up this road work as early as possible ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) An estimate amounting to Rs. 1,06,000 for forming a macadam road to connect the interior villages of Chikkanahally, Anaddur, Naganahally and Kallur with Yelwal-Sagarkatte Road on one side and with the Circuit House Road, K. R. Sagar, on the other side has been got up.

(*c*) This will be considered.

ಶ್ರೀ ಶಿವನಂಜೇಗೌಡ.—ಈ ರಸ್ತೆಗೆ ಸುಮಾರು ಒಂದು ಲಕ್ಷ ಚಿಲ್ಲರೆಯಾಗುತ್ತದೆಂದು ಹೇಳಿದ್ದೀರಿ. ಇದು ಎಷ್ಟು ವರ್ಷಗಳಿಂದ ನಡೆಯುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಸಮಾಚಾರ ಈಗ ನನ್ನ ಬಳಿ ಇಲ್ಲ.

ಶ್ರೀ ಶಿವನಂಜೇಗೌಡ.—ಇದನ್ನು ಜಾಗ್ರತೆಯಾಗಿಯೇ ಮಾಡಿಸಿಕೊಡುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಶಿವನಂಜೇಗೌಡ.—ಈಗ ಡಿಸ್ಟ್ರೆಸ್ ರಿಲೀಫ್ ಕೆಲಸದಲ್ಲಿ ಸುಮಾರು 4 ಮೈಲಿ ರಸ್ತೆಯಾಗಿದೆ. ಅದನ್ನು ಇಲ್ಲಿ ಕೊಟ್ಟಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಆ ವಿಷಯದಲ್ಲಿ ಪ್ರಶ್ನೆ ಕೇಳದೆ ಇದ್ದುದರಿಂದ ಕೊಟ್ಟಿಲ್ಲ.

ಶ್ರೀ ಶಿವನಂಜೇಗೌಡ.—ಈ ರಸ್ತೆಯನ್ನು ತಕ್ಷಣ ಮಾಡಿಸಿಕೊಡುವುದಕ್ಕೆ ಒಪ್ಪಿ ಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಗಮನಕ್ಕೆ ತೆಗೆದುಕೊಂದು ಮುಂದಿನ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Central Assistance for grant of relief to No. N.G.Os

Sri S. SRINIVASA IYENGAR.—The other day the Hon'ble the Minister for Law and Education has stated on the floor of this House that he has addressed a letter the Central Government seeking their help for giving some interim relief to the non-gazetted officers of the State. May I know whether he has received any reply from the Central Government ?

Sri A. G. RAMACHANDRA RAO.—Not yet, Sir.

Sri S. SRINIVASA IYENGAR.—Will they atleast remind the Central Government in view of the urgency of the matter ?

Sri A. G. RAMACHANDRA RAO.—Recently when I was in Delhi, I had a talk with the Central Government. I will speek to them once again.

Sri S. SRINIVASA IYENGAR.—The Government have stated in answer to clause (*b*) of question No. 829 page 4 of the list—as"may be". I believe, Sir, the question of opinion cannot be an answer to the question. "May be" signifies an opinion. Can the opinion be an answer to a question, Sir ? I request the Hon'ble Speaker to direct the Government to give specific answers to questions.

Sri A. G. RAMACHANDRA RAO.—I will take note of the suggestion, Sir.

QUESTION FOR ANSWERS ON THE DAY.

(but not taken up)

Coffee Board Class III Employees.

Q.—678 Sri D. VENKATESH. (Gandhinagar).—

Will the Government be pleased to state:—

(*a*) whether there was any industrial dispute conciliated upon by the Chief Conciliator in Mysore with regard to demand placed by Class III employees of the Coffee Board, Mysore State ;

(*b*) when the conciliation ended ;

(*c*) whether it is a fact that the report of the Conciliation Officer although sent by the Labour Department was not received by the Secretariat ;

(*d*) whether the party approached the Government repeatedly for an Order of Reference of their dispute to a tribunal ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) 2nd May 1956.

(*c*) The report stated to have been sent was not received in the Secretariat.

(*d*) No

Business of the House

Sri Mulka GOVINDA REDDY (Chitaldrug).—Sir, very important Bills are pending before this House, especially the Second Amendment Bill regarding the Tenancy Law and the University Bill. Nearly more than a year ago the Tenancy Second (Amendment) Bill was introduced and for the last two sessions it is not being discussed. We are very much interested to see that that bill is gone through. We would like to know when that Bill is going to be taken up as also the University Bill which has been referred to the Select Committee. The Select Committee has not yet submitted its report to the House. Further, we would like to know the future programme of this House, whether the session is going to be continued, if not, when it is going to be held. We are anxious to see that before the new State comes into existence, all the unfinished business should be finished.

Sri A. G. RAMACHANDRA RAO. (Minister for Law and Education).—Sir, with regard to the Select Committee report on the Mysore University Bill, 1955, we have sent the report for printing; as soon as it is received from the press, we will place it on the Table of the House. The Government is anxious to push through the Bills with the co-operation of the House. Regarding the Tenancy Bill, because the financial matter was pending before the House, it could not be pursued Sir, It will also be pursued.

Sr J. MOHAMED IMAM (Jagalur).—The members of this House are anxious to know whether we are going to meet at Mysore or at Bangalore. Because we are also persons with numerous engagements, and we have to adjust our

programme according to the programme of the House. I am surprised to note that the Government is taking so much time to take a decision with regard to the holding of a session.

Sri H. SIDDAVEERAPPA (Minister for Home and Finance).—The Hon'ble the Leader of the Opposition is already home-sick. We have been here for the last one week.

Mr. SPEAKER.—Next item on the agenda will be taken up.

MYSORE KHADI AND VILLAGE INDUSTRIES BIll, 1956.

Motion to Consider.

Dr. R. NAGAN GOWDA (Minister for Industries and Excise).—

Sir, I move:

> "That the Mysore Khadi and Village Industries Bill, 1956 as reported by the Select Committee, be taken into consideration."

The printed copies of the report are before the members. I, without making any speech, move this for consideration.

Mr. SPEAKER.—Motion moved:

> "That the Mysore Khadi and Village Industries Bill, 1956, as reported by the Select Committee, be taken into consideration."

Sri J. MOHAMED IMAM (Jaglur).—Sir, I expected that changes that would be made could be acceptable to those who opposed this Bill. On the other hand, I find that they have made matters worse and confirmed my suspicion that this is a piece of legislation intended not to benefit the country or to uplift it or improve the material wealth of the State but to strengthen their own organisation. Sir, last time I expressed my apprehension that the measure is to the benefit of only those who are in power intended to strengthen and stabilise their party. I also stated that the Chairman and members of this Board may come from one party and this is more or less an organisational move rather than an administrative one. Now, the Select Committee have made one change which I think, is against the Constitution and which must receive the serious consideration of this House. That is the clause of disqualification which lays down that no member of the Board or the Chairman can be appointed unless he wears khadi. I should not be misunderstood that I am against khadi or wearing khadi. But, I feel that khadi movement at present is out of date. It is purely organisational. It should be taken over by a private organisation and should not be the concern of the Government. At the most, Government may subsidise the scheme and give some grant. I object to make this a part of Government machinery. Tomorrow it may be said that those who do not wear khadi cannot become Government servants. This is highly objectionable and highly discriminatory My friend Sri Pattabhiraman, to whom I have great respect was also in the Select Committee, and they ought not to have added this disqualification. On these grounds I very strongly oppose this Bill. Even now I appeal to the Minister not to introduce such a discriminatory measure. We all love khadi. Let Government encourage the industry; we have no objection for their doing it. But, why should they havs this as a statutory measure?

Sir, I know that for the last few years Government have been spending good deal of money and Government of India is now trying to introduce the Ambar Charka under the Second Five-Year Plan. I think they have set apart some crores for this scheme. But I am very much doubtful whether this Ambar Charka Scheme would bring any material benefit to the country and relieve unemployment. On the other hand I am certain that all the money that is to be spent on this scheme by way of subsidy, etc., would all be a waste. I am taking a realistic and a practical view. Supposing this amount of 40 or 50 crores which is proposed to be spent on this Ambar Charka Scheme is diverted to start small mills throughout the country; a number of them can be started at aost of Rs. 8 to 10 lakhs for each mill. We can provide employment

(SRI J. MOHAMED IMAM.)

for a number of persons and the yarn manufactured there would help the powerloom industry; to that extent, the problem of unemployment would be solved. Now the idea is to pay this 40 to 50 crores by way of subsidy to those who want to reel yarn in Ambar Charka. I do not know what it is like.

Sri A. G. RAMACHANDRA RAO (Minister for Law and Education).—Sir, the Hon'ble Member is putting forward all imaginary things and without knowing what it is exactly.

Sri J. MOHAMED IMAM.—Let the Minister exhibit the Charka.

Sri A. G. RAMACHANDRA RAO.—If the Hon'ble Member wants it, I have no objection to do it.

Sri J. MOHAMED IMAM.—I think it is a crude wooden frame with eight spindles or so. Instead of that, why not we have small mills with 2,000 spindles each? On the other hand, I am sure that people will work only as long as they get subsidy and when once it ceases, the scheme will be nowhere, and all the money spent would be a waste. Sir, my own humble opinion is that the present day economy requires that we must change our policy. When we have to compete with other countries and solve unemployment problem, we must adopt the policy of making use of only Indian made goods. I have seen western countries like Italy and France. If you go to France, you will find that only French goods and cars are used. They do not use any goods manufactured outside their country. Whereas here in India we find foreign goods being dumped in. So, we must encourage swadeshi movement. We must make use of only Indian made goods. If a certain article is manufactured in India, all of us must make use of it. It is only by adopting this policy that we can build up industries in India and improve our economic position. I know, khadi was very popular at one time; it was a political move. Now, we must buy Indian made cloth. As it is, 99 per cent of the people make use of Indian made cloth. So, it need not necessarily be khadi.

Sri K. PRABHAKAR (Nelamangala—Scheduled Castes).—To help mill owners!

Sri J. MOHAMED IMAM.—Then, let Government legislate and scrap all the mills and say that all must wear khadi and khadi only.

Sri K. PATTABHIRAMAN (Kolar).—A day will come.

Sri J. MOHAMED IMAM.—That will never come. I am confident, on the other hand, that in course of time my view will be adopted; it is a practical, a sane view, a view which will bring better economic benefits. With these remarks, I oppose the report of the Select Committee.

Sri P. R. RAMAIYA (Basavangudi).—I wholeheartedly support this Bill. The object of this Bill is to see that khadi which is a village industry is made self-sufficient and also is made more progressive.

1-30 P.M.

All these years khadi had been promoted by non-official efforts and in Mysore due to the encouragement given by the Government khadi centres were opened in some areas and they worked with some success. But, Sir, now a comprehensive Bill has been introduced with a view to resuscitating this very important village industry. Next to food, cloth is a great necessity and the principle behind khadi is that village industry should be revived with great vigour and the villagers should be made to lead a life of plenty and happiness.

Sir, Mahatma Gandhi who originated this movement attached a great sentiment to this and it has become now a practical matter for the Government to take up and establish this industry on firm foundations. There was a time when this country had to depend upon imported foreign cloth. In those old days nearly 60 to 70 crores worth of cloth was being imported into this country. But, we are in a happy position today. We are producing through our mills enough cloth and also something to export. But Sir, a rationalisation has to be brought about in the matter of this cloth industry; some cloth has to be produced by mills and some to be produced by handlooms

which consume mill yarn There should also be some handlooms which use hand spun yarn. Unless we take extraordinary steps to promote this industry, this will not survive against the competition of the mill industry. Therefore, we have to establish a Khadi Board and pay ample wages to the villagers who depend upon this industry. One very important point which we have to bear in mind with regard to village industry is that the producers themselves should be consumers also. Unless that principle is introduced in the matter of khadi and also in the matter of other village industries, this village industry will have no legs to stand upon. Therefore this clause, namely, that those who are members of this Board should wear Khadi is a very salutary measure and it is necessary also. I do not know why the sponsors of this amendment have used very doubtful words "does not wear khadi" which is a negative aspect. If they had stated "wearer of khadi," it would have had a more positive effect. According to this, one can be a member even if he does not wear khadi always. Though it is not possible for me to introduce any amendment at this stage, I wish it would be understood as 'one who is a habitual wearer of khadi.' Then only this khadi industry will be able to stand on its own legs and it will be able to take its place in the national economy of India.

With regard to the working of this Bill, we require those members of the Board to be enthusiastic and also to have faith in khadi. All these years some Boards have been constituted and all sorts of people have been appointed there. But; Sir, it is time that only people who have faith in khadi and who themselves wear khadi, should be on the Board. Sir, I wish this Bill had been introduced a year ago so that we may have had the benefit of subvention of the Government of India. In other States like, Bombay, Madhya Pradesh and Uttar Pradesh, very great progress has been achieved with regard to khadi industry and the one very healthy feature is that the wages given to the people who are engaged in this spinning industry and weaving industry have been standardised. That is a very healthy feature. Mahatma Gandhi while he was alive introduced this system of increasing wages. Sir, now we are speaking of minimum wages in every industry. I think it is high time we introduce some minimum wages with regard to khadi industry also. Unless you guarantee that minimum wage, people cannot be induced to take to this industry. I do not find any clause anywhere in this Bill with regard to guaranteeing of the basic minimum wages. Though it has not found a place in this Bill, I wish that principle is kept in view when this Bill is put into execution.

Sir, village industry, as we understand it, is meant for running it in the villages only. As a man living in Bangalore City, I find there is much scope for introducing this industry in many middle class families. These middle class families will gladly taken to this industry if it is named as 'Home Industry'. Even in Bangalore City there are many people who work on the Charkha and now the Ambar Charkha is going to be introduced and quite a number of people are going to work on these. I wish this Bill be made more comprehensive so as to include cities of Bangalore and Mysore. It is very necessary in order to improve the economic condition, of the middle classes who have fallen on evil days in recent years. Therefore, I request the Government to consider this suggestion of mine that Home Industry also be included in this Bill. One very important point which I wish to stress in this House is, it has been the practice or habit of most of us to think of these village industries and khadi industry but when it comes to putting them into action, we have been very sparing. Therefore, I would urge that the members of this House and also the members of the great organisation would take much more interest in these village industries, as consumers. Unless they consume these village products and products produced by the village industries, they cannot thrive. It has been a very difficult thing to market these village products. Unless we start a machinery

(Sri P. R. Ramaiya)

to make these village products consumed much more than at present, it would I think reduce itself merely to lip sympathy. We have to take lessons from England and other countries where they are so patriotic as to think of using only the products produced in their own countries. On this occasion I wish to remind this House of an incident which has been reported in some papers that the Queen of England once went to an office where she saw some typewriters and enquired from which country those typewriters had come. When she was told they were got from some other country, she stated it was not a matter of compliment for England to use machines produced in other countries. Such kind of patriotism is very necessary, though it may be called sentimental, to promote this industry.

Sir, we know, if we study the history, how cloth industry was killed in India by the East India Company and how it was boycotted in England. The cloth produced in India was boycotted in England. We know what steps we have to take and how much love we have to bestow upon our own industry. Therefore there is no use of saying that it is a matter of sentiment and all that. Life is not mere logic or mere machine; life is 90 per cent sentiment. Therefore we want that sentiment to be used in this khadi industry. And I hope that the efforts made now by the Government will accelerate the production of khadi in the State and also its consumption.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸಿಪುರ).—ಸ್ವಾಮಿ, ಈಗ ನಮ್ಮ ನಾಯಕರು 5 ನೆ ವಿಧಿಯ (ಎ) ಭಾಗದಲ್ಲಿರುವ ಅನರ್ಹತೆ ವಿಚಾರ ದಲ್ಲಿ ನಮೂದಾಗಿರತಕ್ಕ ವಿಷಯದಲ್ಲಿ ಆಕ್ಷೇಪಣೆಯು ನ್ನೆತ್ತಿದರು. ಕೆಲವು ಮಾನ್ಯ ಸದಸ್ಯರು ಇದರಲ್ಲಿ ನಂಬಿಕೆ ಇಲ್ಲದಿರುವವರನ್ನು ಯಾಕೆ ಚುನಾಯಿಸಬೇಕು; ಅದ ಕ್ಕಾಗಿ ಇದನ್ನು ಸೇರಿಸಿದ್ದಾರೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳ ಬೇಕೆಂದಿದ್ದೇನೆ. ಈ ಶಾಸನ ಬರೀ ಖಾದಿ ಕೈಗಾರಿಕೆಗೆ ಮಾತ್ರ ಅನ್ವಯಿಸುವುದಿಲ್ಲ. ಖಾದಿ ಕೈಗಾರಿಕೆ ಮತ್ತು ಗ್ರಾಮ ಕೈಗಾರಿಕೆಗಳು ಎಂದು ಅದರಲ್ಲಿ ನಮೂ ದಾಗಿದೆ.

ಗ್ರಾಮಕೈಗಾರಿಕೆಗಳಲ್ಲಿ ಪಟ್ಟಿಯಲ್ಲಿ ಕೊಟ್ಟಿರು ವಂತೆ 15 ತರಹ ಇದೆ. ಆ ಹದಿನೈದು ಗ್ರಾಮಕೈ ಗಾರಿಕೆಗಳಲ್ಲಿ ನಿಷ್ಣಾತರಾಗಿರುವವರು ಖಾದಿ ಹಾಕಿ ಕೊಂಡಿದ್ದರೆ ಮಾತ್ರ ಚುನಾಯಿಸುತ್ತೇವೆ ಇಲ್ಲದಿದ್ದರೆ ಇಲ್ಲವೆನ್ನುವ ವಾದವನ್ನು ಇಟ್ಟುಕೊಂಡರೆ ಬಹಳ ಅಕ್ರಮ, ಅನ್ಯಾಯ, ಎಂದು ಹೇಳಬಹುದು. ಇದನ್ನು ಕೇವಲ ಖಾದಿ ಕೈಗಾರಿಕೆಗೆ ಮಾತ್ರ ಮಾಡಿಕೊಂಡರೆ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಖಾದಿ ಮತ್ತು ಗ್ರಾಮಕೈಗಾರಿಕೆಗಳಿಗೆ ಸಂಬಂಧಪಟ್ಟ ಮಸೂದೆ ಎಂದು ಇದರಲ್ಲಿರುವುದರಿಂದ ಇತರ ಗ್ರಾಮಕೈಗಾರಿಕೆ ಗಳಿಗೂ ಮತ್ತು ಖಾದಿಗೂ ಸಂಬಂಧವಿಲ್ಲ. ಎಂಬ ಅರ್ಥ ಬರುತ್ತದೆ. ಸದಸ್ಯರನ್ನು ಇದರ ಬೋರ್ಡಿಗೆ ಚುನಾವಣೆ ಮಾಡತಕ್ಕ ಕಾಲದಲ್ಲಿ ಎಲ್ಲೂ ಇಲ್ಲದೆ ಇರುವ ವಿಧಿಯನ್ನು ಹಾಕಿರುವುದು ಅಷ್ಟು ಸಮರ್ಪಕ ವಾಗಿ ಕಾಣುವುದಿಲ್ಲ. 'Who does not wear khadi' ಎಂದು ಹೇಳುತ್ತಾರೆ. ಸರ್ಕಾರದವರು ನಾಮಕರಣ ಮಾಡುವ ಕಾಲದಲ್ಲಿ ಇದನ್ನು ಬೇಕಾದರೆ ಅನ್ವಯಿಸಬಹುದು. ಆದರೆ ಮುಖ್ಯವಾಗಿ ಚುನಾವಣೆ ಗಳು ನಡೆಯಬೇಕಾದಾಗ ಇಂಥ ನಿಯಮಗಳನ್ನು ಹಾಕುವುದು ಅಷ್ಟು ಒಳ್ಳೆಯದಲ್ಲವೆಂದು ಹೇಳುತ್ತೇನೆ. ಇದರ ಉದ್ದೇಶ ಒಳ್ಳೆಯದಿರಬಹುದು. ಆದರೂ ಸಹ ಕಾನೂನು ಮುಖಾಂತರ ಬಲವತ್ತರವಾಗಿ ಇದನ್ನು ಜಾರಿಗೆ ತರತಕ್ಕ ಪದ್ಧತಿ ಅಷ್ಟು ಸಾಧುವಾದದ್ದಲ್ಲ ವೆನ್ನುವ ದೃಷ್ಟಿಯಿಂದ ಹೇಳುತ್ತೇನೆ.

ಎರಡನೆಯದಾಗಿ ಒಂದು ವಿಷಯವನ್ನು ನಾನು ನೋಡಿವೆ. ಏನೆಂದರೆ ನಾಲ್ಕನೆಯ ವಿಧಿಯಲ್ಲಿ ಸದ ಸ್ಯರ ಸಂಖ್ಯೆಯನ್ನು ಗೊತ್ತುಮಾಡಿರಲಿಲ್ಲ. ಮೊದಲು ಈ ಮಸೂದೆ ಚರ್ಚೆಗೆ ಬಂದಾಗ ಈ ವಿಷಯದಲ್ಲಿ ಆಕ್ಷೇಪಣೆ ಮಾಡಿದುದನ್ನು ಗಮನದಲ್ಲಿಟ್ಟುಕೊಂಡು ಸೆಲೆಕ್ಟ್ ಕಮಿಟಿಯವರು ಹತ್ತು ಜನರಿಗೆ ಮೀರದಂತೆ ಇರಬೇಕೆಂದು ಮಾಡಿದ್ದಾರೆ. ಪ್ರಜಾಪ್ರಭುತ್ವ ತತ್ವಕ್ಕೆ ಅನಗುಣವಾಗಿ ಚುನಾವಣಾಪದ್ಧತಿ ಇರಬೇಕೆಂದ ಒತ್ತಾಯ ಮಾಡಿದ್ದೆವು. ಆದರೆ ಅವರು ಚುನಾ ವಣಾಪದ್ಧತಿಯ ವಿಷಯವನ್ನೇ ವಿಮರ್ಶೆಮಾಡಿಲ್ಲ. ಖಾದಿಕೈಗಾರಿಕೆಗೆ ಒಂದಕ್ಕೆ ಮಾತ್ರ, ಈ ತತ್ವವನ್ನು ಪ್ರತಿಪಾದಿಸುವವರನ್ನು ಅಂದರೆ ಖಾದಿಯನ್ನು ಉಪ ಯೋಗಿಸುವವರನ್ನು ಚುನಾಯಿಸುಕೊಳ್ಳಿ ಅಥವ ನಾಮ ಕರಣ ಮಾಡಿಕೊಳ್ಳಿ. ಸಂಸ್ಥಾನಾದ್ಯಂತ ಅನೇಕ ಗ್ರಾಮಕೈಗಾರಿಕೆಗಳಿವೆ. ಅವುಗಳನ್ನು ಹೆಚ್ಚುವರಿ ಮಾಡುವುದು ಮತ್ತು ಅವುಗಳ ಆಡಳಿತವನ್ನು ನೋಡಿ ಕೊಳ್ಳುವುದು, ಈ ಕೆಲಸಗಳನ್ನು ಅನೇಕ ಸಹಕಾರ ಸಂಸ್ಥೆಗಳು ಮಾಡುತ್ತಿವೆ. ಆದುದರಿಂದ ಗ್ರಾಮಕೈ ಗಾರಿಕೆಗಳನ್ನು ಸಹಕಾರ ಸಂಸ್ಥೆಗಳ ಮೂಲಕ ಅಭಿ ವೃದ್ಧಿಪಡಿಸುವುದಕ್ಕೆ ದಾರಿಯಿದೆ. ಸಹಕಾರ ಇಲಾಖೆ ಯ ಮುಖಾಂತರ ಬೇಕಾದಷ್ಟು ಕೆಲಸವನ್ನು ಮಾಡ ಬಹುದು. ಈಗ ಗ್ರಾಮಾಂತರಗಳಲ್ಲಿರುವ ಸಹಕಾರ ಸಂಸ್ಥೆಗಳ ಮುಖೇನ ಈ ಕೈಗಾರಿಕೆಗಳಿಗೆ ಅನ್ವಯವಾಗುವಂತೆ ಸಹಕಾರ ಇಲಾಖೆಗಳಿಗೂ, ಸಹಕಾರ ಇಲಾಖೆಯಿಂದ ಸಹಕಾರ ಸಂಸ್ಥೆಗಳಿಗೂ ಒಂದು ಓಟಿನ ಹಕ್ಕಿದೆ. ಆದುದರಿಂದ ಅವರ ಆಡಳಿತ ವ್ಯವಸ್ಥೆ ಮತ್ತು ಅವರ ಹಣಕಾಸಿನ ವ್ಯವಸ್ಥೆ ಇವೆರ ಡನ್ನು ಹೊರತು ಉಳಿದುದರಲ್ಲಿ ನಮಗೆ ಬಾಧ್ಯತೆ ಇದೆ; ಸಂಸ್ಥಾನಾದ್ಯಂತ ಗ್ರಾಮಕೈಗಾಕೆಗಳನ್ನು ಅಭಿವೃದ್ಧಿ ಮಾಡತಕ್ಕ ಬಾಧ್ಯತೆ ನಮಗೆ ಇದೆ ಎಂದು ಮಾಡಬೇ ಕಾಗುತ್ತದೆ. ಇದರಲ್ಲಿ ನಿಮಗೆ ಇಷ್ಟಬಂದವರನ್ನು ಚುನಾವಣೆಮಾಡಿ, ಅವರ ಅಭಿಪ್ರಾಯಗಳನು ಗ್ರಾಮಾಂತರಗಳಲ್ಲಿರುವ ಕೈಗಾರಿಕೆಗಳ ಮೇಲೆ ಹೊರಿ ಸುವ ಬದಲು ಕೈಗಾರಿಕಾ ಸಂಸ್ಥೆಗಳ ಪ್ರತಿನಿದಿಗಳನ್ನು ಚುನಾಯಿಸಿಕೊಂಡು ಅವರೂ ಸಹ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗುವ ಹಾಗೆ ಶಾಸನವನ್ನು ಮಾಡ ಬೇಕು. ಅದಕ್ಕಿಂತಲೂ ಮುಖ್ಯವಾದುದು ಒಂದು ವಿಷಯವಿದೆ. ಈ ಶಾಸನ ಸಭೆಯಿಂದ ಎರಡು ಸ್ಥಾನ

ಗಳಿಗೋ, ಮೂರು ಸ್ಥಾನಗಳಿಗೋ, ಅಥವ ಮೂರನೆ ಒಂದು ಭಾಗದಷ್ಟು ಸ್ಥಾನಗಳಿಗೋ ಚುನಾವಣೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಇಟ್ಟುಕೊಳ್ಳೋಣ. ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಇವನ್ನು ಮಂಜೂರುಮಾಡುವುದು ಶಾಸನಸಭೆ. ಅದಕ್ಕೆ ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿಗಿಂತ ಚುನಾಯಿಸುವ ಪದ್ಧತಿಯನ್ನು ಜಾರಿಗೆ ತರಬೇಕು. ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಯಾವುದೋ ಒಂದು ಭಾಗವನ್ನು ನಿರ್ದಿಷ್ಟವಾಗಿ ಗೊತ್ತುಮಾಡಿ, ಆ ಸ್ಥಾನಗಳಿಗೆ ಶಾಸನ ಸಭೆಯಿಂದ ಚುನಾವಣಾಕ್ರಮದಿಂದ ತೆಗೆದುಕೊಳ್ಳುತ್ತೇವೆಂದರೆ ಸಮಾಧಾನವಾಗುತ್ತದೆ. ವಿರೋಧ ಪಕ್ಷದವರು ಚುನಾವಣೆಯಲ್ಲಿ ಎಂದಿಗೂ ಬರುವುದಿಲ್ಲ; ಕಾಂಗ್ರೆಸ್ ಪಕ್ಷದವರೇ ಬರುತ್ತಾರೆ. ಇದು ಉತ್ತಮವಾದ ಪದ್ಧತಿ. ಇದರಿಂದ ಈ ಸಂಸ್ಥೆಗಳಮೇಲೆ ಸ್ವಲ್ಪ ಹತೋಟಿಇಟ್ಟುಕೊಳ್ಳುವುದಕ್ಕೆ, ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿರುವಂತೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇಂಥ ಸಂಸ್ಥೆಗಳ ವಾರ್ಷಿಕವರದಿ (annual reports) ಯನ್ನು ಶಾಸನಸಭೆಯ ಮುಂದೆ ಇಡುತ್ತೇವೆಂದು ಹೇಳಿದ್ದಾರೆ. 'It will be laid on the table of the House, ಎಂದು ಹೇಳಿದ್ದಾರೆ. ಅದಕ್ಕೆ ಒಂದು ವಿಧಿ ಇದೆ. ಆ ವರದಿಯನ್ನು ಚರ್ಚೆಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಒಂದು ದಿವಸ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಒಂದುವೇಳೆ ಆ ವರದಿಯನ್ನು ಚರ್ಚೆ ಮಾಡಲು ಅವಕಾಶ ಕೊಡದೆ ಹೋದರೆ, ಅಷ್ಟು ಆವಶ್ಯಕವೆಂದು ಕಂಡು ಬರದೆ ಹೋದರೆ, ಆಡಳಿತದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ನಾನು ಈಗಾಗಲೇ ಒಂದು ನಿರ್ಣಯವನ್ನು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇನೆ. Housing Board ನೇಮಕ ಮಾಡಿದ ಕಾಲದಲ್ಲಿ, ಮಾನ್ಯ ನ್ಯಾಯಾಂಗ ಸಚಿವರು, ಹೌಸಿಂಗ್‌ಬೋರ್ಡಿನ ಆಡಳಿತ ವರದಿಯನ್ನು ಪ್ರತಿವರ್ಷವೂ ಶಾಸನಸಭೆಯ ಮುಂದೆ ತರುತ್ತೇವೆಂದು ಅಪ್ಪಣೆ ಕೊಡಿಸಿದ್ದರು. ಈಗ ನಮಗೆಲ್ಲ ಪ್ರತಿಗಳನ್ನು ಕೊಟ್ಟಿದ್ದಾರೆ. ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶವೇ ಸಿಕ್ಕಲಿಲ್ಲ. ಈ ಹೌಸಿಂಗ್ ಬೋರ್ಡಿನಲ್ಲಿ ನಡೆಯುವ ನಡವಳಿಕೆಗಳಲ್ಲಿ ಹಣಕಾಸಿನ ವ್ಯವಸ್ಥೆಗೆ ಸರ್ಕಾರದ ಗ್ಯಾರಂಟಿ ಇದೆ. ಅದರ ಆಡಳಿತದ ಖರ್ಚಿಗೆ ಹಣವನ್ನು ಸರ್ಕಾರದವರು ಕೊಡುತ್ತಾರೆ. ಅದೇ ರೀತಿ Khadi and Village Industries Boardಗೂ ಸರ್ಕಾರದವರು ಎಂಟು ಲಕ್ಷ, ಹತ್ತು ಲಕ್ಷ ರೂಪಾಯಿಗಳವರೆಗೂ ಗ್ರ್ಯಾಂಟ್ ಕೊಡಬೇಕಾಗುತ್ತದೆ. ಆದುದರಿಂದ ಯಾವಾಗ ನಾವು ಸರ್ಕಾರದ ಹಣಕಾಸಿನಿಂದ ಇಷ್ಟು ಭಾರಿ ಮೊಬಲಗನ್ನು ಒದಗಿಸುತ್ತೇವೆಯೋ, ಆಗ ಆ ಸಂಸ್ಥೆಯ ಕಾರ್ಯ, ಆಡಳಿತ ವಿಚಾರದಲ್ಲಿ ಚರ್ಚೆ ಮಾಡತಕ್ಕ ಹಾಗೂ ಆವಶ್ಯಕ ತಿದ್ದುಪಡಿ ಮಾಡತಕ್ಕ ಅಧಿಕಾರ ಈ ಶಾಸನಸಭೆಗೆ ಇರಬೇಕು. ಆ ದೃಷ್ಟಿಯಿಂದ ನಾನು ಇದನ್ನು ವಿಮರ್ಶೆ ಮಾಡುತ್ತಿದ್ದೇನೆ.

ಮತ್ತೊಂದು ವಿಚಾರ, ಈಗ ಆರನೆಯ ವಿಧಿಯಲ್ಲಿ ಮೊದಲನೇ ಪ್ಯಾರದಲ್ಲಿ '(a) refuses to act' ಎಂದು ಬರೆದಿದ್ದಾರೆ. ಇದರ ಅರ್ಥವೇನು ? ಯಾರು refuse ಮಾಡುತ್ತಾರೆ. ನಾಮಕಾರಣ ಮಾಡಿದಂಥ ಬೋರ್ಡಿನಲ್ಲಿ, ನಾಮಕಾರಣಮಾಡಿದ Chiarman ರವರು 'refuses to act' ಎಂದರೆ ಅರ್ಥವೇನೆಂಬುದು ನನಗೆ ಗೊತ್ತಾಗಲಿಲ್ಲ. ಅದರ ವಿವರಣೆ ತಿಳಿದುಕೊಳ್ಳಬೇಕೆಂದು ಅಭಿಲಾಷೆಯಿದೆ. Chairman ಅವರು refuses to act ಎಂದರೂ ಆದರಲ್ಲಿ ಸ್ವಲ್ಪ ಅರ್ಥವಾಗುತ್ತದೆ. Chairman or member ಎಂದು ಹೇಳಿದ್ದೀರಿ. ಮೆಂಬರು ಏನು refuse ಮಾಡುತ್ತಾರೆಂಬುದು ಗೊತ್ತಾಗಲಿಲ್ಲ. ಆದುದರಿಂದ 'refuses to act' ಎನ್ನುವುದಕ್ಕೆ ಖಚಿತವಾದ ಅಭಿಪ್ರಾಯವೇನಿಟ್ಟುಕೊಂಡಿದ್ದರು ಸರ್ಕಾರದವರು, ಸೆಲೆಕ್ಟ್ ಕಮಿಟಿಯಲ್ಲಿ ಅದನ್ನು ಚರ್ಚೆಮಾಡುವಾಗ ಯಾವ ಮನೋಭಾವವಿತ್ತು ಎನ್ನುವುದನ್ನು ತಿಳಿದು ಕೊಳ್ಳಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಕೇಳುತ್ತಿದ್ದೇನೆ. ಇದರಲ್ಲಿ 3ನೇ ಸಬ್ ಸೆಕ್ಷನ್ ಇದೆ. ಅದರಲ್ಲಿ ಮೇಲೆ ನಮೂದು ಮಾಡಿರುವ ಯಾವುದಾದರೂ ಒಂದು ಅನರ್ಹತೆಗೆ ಯಾರಾದರೂ ಒಬ್ಬ ಸದಸ್ಯರು ಒಳಪಟ್ಟಿದ್ದರೆ ಅಂಥವರು ಶಾಶ್ವತವಾಗಿ ಪುನಃ ಸದಸ್ಯರಾಗುವುದಕ್ಕೆ ಹಕ್ಕಿಲ್ಲವೆಂದು ಇದೆ. ಕ್ರಿಮಿನಲ್‌ಗಳಿಗೆ ಸಹ ಆ ತರಹ ವಿಧಿ ಇಲ್ಲ. ಯಾವ ಶಾಸನದಲ್ಲಿಯೇ ಆಗಲಿ ಒಂದು ಅವಧಿಯನ್ನು ಗೊತ್ತುಮಾಡುತ್ತಾರೆ. ಮೂರು ವರ್ಷಗಳ ಕಾಲ ಐದು ವರ್ಷಗಳಕಾಲ ಎಂದು ಒಂದು ಅವಧಿಯನ್ನು ಗೊತ್ತುಮಾಡುತ್ತಾರೆ. Eligibility ineligibility ಎನ್ನುವ ವಿಚಾರದಲ್ಲಿ ಈ ತರಹ ಪದ್ಧತಿಯನ್ನು ಯಾತಕ್ಕೋಸ್ಕರ ಇಟ್ಟುಕೊಂಡಿದ್ದಾರೆಂಬುದು ಗೊತ್ತಾಗಲಿಲ್ಲ.

12ನೇ ವಿಧಿಯಲ್ಲಿ ಒಂದು ವಿಷಯ ನನಗೆ ಗೊತ್ತಾಗಲಿಲ್ಲ. ಮಾನ್ಯ ನ್ಯಾಯಾಂಗ ಮಂತ್ರಿಗಳು ಇದನ್ನು ನಮಗೆ ತಿಳಿಯಪಡಿಸಬೇಕೆಂದು ಕೇಳುತ್ತೇನೆ. ಇದರಲ್ಲಿ 'Power to make contracts' ಎಂದಿದೆ. ಅದರಲ್ಲಿ sub-section (b)(i) ಯಲ್ಲಿ ಏನು ಹೇಳುತ್ತಾರೆಂದರೆ: ಹತ್ತು ಸಾವಿರ ರೂಪಾಯಿಗಳಿಗೆ ಮೀರದಂತೆ ಯಾವುದಾದರೂ ಒಂದು ಅಂದಾಜು ಇದ್ದರೆ, ಅಂಥ ಅಂದಾಜು ಒಂದು ಲಕ್ಷಕ್ಕೆ ಒಳಪಟ್ಟಿದ್ದರೆ ಅದನ್ನು ಬೋರ್ಡಿನವರ ತೀರ್ಮಾನವಿಲ್ಲದೆ ಚೇರ್‌ಮನ್ ಅವರು ಕಾಂಟ್ರಾಕ್ಟ್ ಮಾಡಿಕೊಳ್ಳಕೂಡದು, ಒಪ್ಪಿಕೊಳ್ಳಬಾರದು ಎಂದಿದೆ. ಹತ್ತು ಸಾವಿರಕ್ಕೆ ಮೀರಿದ ಅಂದಾಜುಗಳು (ಎ) ಸಬ್-ಸೆಕ್ಷನ್ನಿಗೆ ಒಳಪಟ್ಟ ಅಂದಾಜುಗಳು ಬೋರ್ಡಿನವರ ಅನುಮತಿ ಇಲ್ಲದೆ ಚೇರ್‌ಮನ್‌ಅವರು ಒಪ್ಪಿಕೊಳ್ಳಕೂಡದೆಂದಿದೆ. ಹತ್ತು ಸಾವಿರ ರೂಪಾಯಿಗಳಿಗೆ ಒಳಪಟ್ಟಿರತಕ್ಕ ಅಂದಾಜುಗಳನ್ನು ಯಾರು ಒಪ್ಪಿಕೊಳ್ಳಬೇಕು ಎಂದು ಕೇಳುತ್ತೇನೆ. ಅದನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ. ಅರ್ಥವೇನೋ ಆಗುತ್ತದೆ. ಆದರೆ ವಿವರವಾಗಿ ಕೊಡಬೇಕು ಎಂದು ಹೇಳುತ್ತಿದ್ದೇನೆ.

ಒಂದು ವಿಚಾರವಾಗಿ ಬಹಳ ಸಂತೋಷವಾಗಿದೆ. ಶ್ರೀ ನಾಗಪ್ಪಶೆಟ್ಟರಿಗೂ ಶ್ರೀ ಗೋಪಾಲ ಗೌಡರಿಗೂ ಬಹಳ ಚೆನ್ನಾಗಿ ಚರ್ಚೆಯಾಯಿತು. To manufacture tools and implements ಎಂದು ಮೊದಲು ತಂದಿದ್ದ ಮಸೂದೆಯಲ್ಲಿತ್ತು. ಅದರ ಮೇಲೆ ಬೇಕಾದಷ್ಟು ಚರ್ಚೆಯಾಯಿತು. ಅದಕ್ಕೆ To arrange for the manufacture of tools and implements ಎಂದು ತಿದ್ದುಪಡಿಯನ್ನು ಮಾಡಿದ್ದಾರೆ. ಇದನ್ನು ಬಹಳ ಚೆನ್ನಾಗಿ ಜ್ಞಾಪಕವಿಟ್ಟುಕೊಂಡಿದ್ದರೆಂದು ಅರ್ಥವಾಗುತ್ತದೆ.

ನಾನು ಮೊದಲೇ ತಿಳಿಯಪಡಿಸಿದ್ದೇನೆ. 26ನೇ ವಿಧಿಯಲ್ಲಿ 'Annual Report' ಎಂದಿದೆ. ಶಾಸನಸಭೆಯ ಮುಂದೆ ಈ ವರದಿಯನ್ನಿಡಬೇಕು ಎನ್ನುವುದರಲ್ಲಿ ಸಲ್ಪ ಬದಲಾವಣೆ ಮಾಡಬೇಕು. ಶಾಸನ ಸಭೆಯವರು ಯಾವುದಾದರೂ ಒಂದು ತಿದ್ದುಪಡಿಯನ್ನು ನಮೂದು ಮಾಡಿದರೆ, ಆ ತಿದ್ದುಪಡಿಯನ್ನು ಸರ್ಕಾರದವರು ಕೂಡಲೇ ಜಾರಿಗೆ ತರತಕ್ಕದ್ದು ಎಂಬ ಖಚಿತವಾದ ಕಾನೂನಿದ್ದರೆ ಈ ಸಂಘದ ಆಡಳಿತವನ್ನು ಹೆಚ್ಚು ಹತೋಟಿಯಿಂದ ನೋಡಿಕೊಳ್ಳಬಹುದು ಎಂದು ನನ್ನ ಅಭಿಪ್ರಾಯ.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ (ಹೊಸಕೋಟೆ-ಆನೇಕಲ್).—ಸ್ವಾಮಿ, ಖಾದಿ ಮತ್ತು ಗೃಹಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ ಅದನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರವಾಗಿ ಒಂದು ಸ್ಟ್ಯಾಚ್ಯುಟರಿ ಬೋರ್ಡನ್ನು ಸ್ಥಾಪನೆಮಾಡಬೇಕು ಎಂಬುದಾಗಿ ಈ ಸಭೆಯ ಮುಂದೆ ತಂದಿದ್ದು ಮತ್ತು ಸೆಲೆಕ್ಟ್ ಕಮಿಟಿಯವರ ಪರಿಶೀಲನೆಗೆ ಹೋಗಿ ಬಂದಿರತಕ್ಕ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಸಂಬಂಧಪಟ್ಟ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ ಮತ್ತು ಸಮರ್ಥಿಸುತ್ತೇನೆ. ಸೆಲೆಕ್ಟ್ ಕಮಿಟಿಯವರ ವರದಿಯಿಂದ ಬೋರ್ಡಿಗೆ ಹತ್ತು ಜನಗಳಿಗಿಂತಲೂ ಹೆಚ್ಚಿಲ್ಲದೆ ಇರತಕ್ಕ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಈ ಸಮಿತಿಯ ಅಧ್ಯಕ್ಷರ ನೇಮಕ ಸರ್ಕಾರದಿಂದಲೇ ಆಗಬೇಕು. ಸೆಕ್ರೆಟರಿಯವರನ್ನು ನೇಮಕ ಮಾಡುವಾಗ ಅವರು ಸರ್ಕಾರಿ ಅಧಿಕಾರಿಗಳಾಗಿರಬೇಕೆಂಬ ನಿಯಮ ಬೇಕಾಗಿಲ್ಲ, ಉಪಾಧ್ಯಕ್ಷರ ಅವಶ್ಯಕತೆ ಇಲ್ಲ. ಇಂಥ ಬೋರ್ಡ್ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಬರೀ ಖಾದಿಯನ್ನು ಪುನರುಜ್ಜೀವನಗೊಳಿಸತಕ್ಕದ್ದಲ್ಲ. ಅದರಲ್ಲಿ ಖಾದಿ ಎನ್ನುವುದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ. ಖಾದಿ ಎಂದರೆ ಕೈಯಿಂದ ನೂತು, ನೇಯ್ದಿರತಕ್ಕ ಹತ್ತಿಯಿಂದ ಮಾಡಿದ ಬಟ್ಟೆ, ರೇಷ್ಮೆಯಿಂದ ಮಾಡಿದ ಬಟ್ಟೆ, ಉಣ್ಣೆಯಿಂಧ ಮಾಡಿದ ಬಟ್ಟೆ ಈ ಮೂರಕ್ಕೂ ಅನ್ವಯವಾಗುತ್ತದೆಂದು ಹೇಳಿದ್ದಾರೆ. ಉಣ್ಣೆಯಿಂದಾಗತಕ್ಕ ಬಟ್ಟೆಗಳಿಗೆ ಅನ್ವಯಿಸಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಕೇಂದ್ರ ಸರ್ಕಾರದವರು ಉಣ್ಣೆ ಕಂಬಳಿ ಕೈಗಾರಿಕೆಗೆ ಒದಗಿಸಿದ ಹಣ ವರ್ಷ ವರ್ಷವೂ ಎರಡೂವರೆ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಲ್ಯಾಪ್ಸ್ ಆಯಿತು. ಈಗ ಈ ಬೋರ್ಡಿನ ರಚನೆಯಿಂದ ಹಣ ಲ್ಯಾಪ್ಸ್ ಆಗುವುದು ತಪ್ಪಿ ಯಾವ ಉದ್ದೇಶದಿಂದ ಈ ಹಣವನ್ನು ಒದಗಿಸುತ್ತಿದ್ದಾರೆಯೋ ಅದು ಗ್ರಾಮಾಂತರ ನಿವಾಸಿಗಳಿಗೆ ಬಹಳ ಚೆನ್ನಾಗಿ ದೊರೆಯುತ್ತದೆ. ನಿಧಾನವಾದರೂ ಚಿಂತೆ ಇಲ್ಲ; ಈಗಲಾದರೂ ಇದನ್ನು ತಂದಿರುವುದು ನಮಗೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಇಂಥ ಬೋರ್ಡಿನ ರಚನೆಯನ್ನು ಮಾನ್ಯ ಸದಸ್ಯರಾದ ಇಮಾಂಅವರು ವಿರೋಧಿಸಿದ್ದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಇದರಲ್ಲಿ ವಿರೋಧಿಸತಕ್ಕ ಅಂಶ ಹೆಚ್ಚಾಗಿ ಕಂಡು ಬರುವುದಿಲ್ಲ. ಈ ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಬೇಕಾದರೆ ಅವುಗಳಿಗೆ ಬೇಕಾದ ಸಾಮಗ್ರಿ ತಯಾರಿಸುವ ಏರ್ಪಾಡು ಕೂಡ ಮಾಡಬೇಕು, ಸಮಗ್ರ ಉಪಕರಣ ಒದಗಿಸುವುದರ ಜೊತೆಗೆ ತಯಾರಾದ ಸಾಮಾನುಗಳಿಗೆ ಮಾರ್ಕೆಟ್ ಕೂಡ ಒದಗಿಸಬೇಕು ಎಂದು ಹೇಳಿರುವುದು ಬಹಳ ಸಂತೋಷಕರ. ಬೋರ್ಡಿನ ಸದಸ್ಯರು ಏಕೀಭವಿಸಿ ಸೌಹಾರ್ದದಿಂದ ಕೆಲಸ ಮಾಡಬೇಕೆಂಬ ಸದುದ್ದೇಶದಿಂದ, ಅವರುಗಳು ಅನರ್ಹತೆಗಳಿಂದ ಕೂಡಿದವರಾಗಬಾರದು, ಕೆಲಸ ಮಾಡದಿರುವ ಮೆಂಬರ್ ಅಥವಾ ಸದಸ್ಯರಿದ್ದರೆ ತೆಗೆದುಹಾಕಬೇಕು ಎಂದು ನಿಯಮಮಾಡಿದ್ದಾರೆ. ಸರ್ಕಾರದವರು ತೆಗೆದುಹಾಕಬೇಕಾದರೆ ಸಮರ್ಪಕವಾದ ಕಾರಣವಿರಬೇಕು. ತೆಗೆಯುವಾಗ ಮುಂಚೆ ಸಸ್ಪೆಂಡ್ ಮಾಡಿ ಕೆಲಸ ನಡೆಸಬಹುದು. ಬೋರ್ಡಿಗೆ ಹೆಚ್ಚಿಗೆ ಅವಕಾಶ ಕಲ್ಪಿಸಬಹುದು ಎಂದು ಹೇಳಿದ್ದಾರೆ. ಸುಮಾರು 15 ಗ್ರಾಮ ಕೈಗಾರಿಕೆಗಳಿವೆ. ಅವುಗಳನ್ನು ಅವಶ್ಯಕವಾದ ಕಡೆ ಸ್ಥಾಪಿಸಿ ಸೂಕ್ತ ಸಹಾಯ ಒದಗಿಸಬೇಕು.

2 P.M.

ಖಾದಿಯನ್ನು ಧರಿಸುವವರೇ ಈ ಸಮಿತಿಯಲ್ಲಿ ಕೆಲಸ ಮಾಡಬೇಕೆಂಬ ಕಡ್ಡಾಯವೇಕೆ ಎಂದು ಶ್ರೀ ಇಮಾಂಅವರು ಪ್ರಶ್ನೆ ಮಾಡಿದರು. ಅದು ಗ್ರಾಮ ಕೈಗಾರಿಕೆ ಗೃಹ ಕೈಗಾರಿಕೆಯಾದ ಖಾದಿ ಕೈಗಾರಿಕೆಯನ್ನು ಸ್ಥಾಪಿಸಿ ಅದಕ್ಕೆ ಉತ್ತೇಜನ ಕೊಡಬೇಕು ಎಂಬ ಉದ್ದೇಶವಿರುವುದರಿಂದ ಖಾದಿಯನ್ನೇ ಉಪಯೋಗಿಸಬೇಕೆಂದು ಹೇಳಿದರು. ಅದನ್ನು ಧರಿಸುವುದರಿಂದ ಮನಸ್ಸಿನ ಮೇಲೆ ಸತ್ಪರಿಣಾಮವಾಗಬಹುದೆಂಬ ಭಾವನೆಯಿದೆ. ಈ ಬೋರ್ಡಿನ ರಚನೆ ನಿಧಾನವಾಗಬಾರದು, ಆದಷ್ಟು ಶೀಘ್ರವಾಗಿ ಆಗಿ ಅದರಿಂದ ಗ್ರಾಮಾಂತರ ನಿವಾಸಿಗಳಿಗೆ ಸೌಕರ್ಯವಾಗಬೇಕು ಎಂಬ ಉದ್ದೇಶವಿದೆ. ಆದ್ದರಿಂದ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ.

ಶ್ರೀ ಆರ್. ಅನಂತರಾಮಯ್ (ಚಾಮರಾಜಪೇಟೆ).—ಅಧ್ಯಕ್ಷರೆ, ಈ ಸೆಲೆಕ್ಟ್ ಸಮಿತಿಯ ವರದಿಯನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಎದುರು ಪಕ್ಷದ ನಾಯಕರಾದ ಶ್ರೀ ಇಮಾಂ ಅವರು 5ನೆಯ ಕ್ಲಾಜಿನಲ್ಲಿರುವ 'Disqualification for appointment on the Board' ಎಂಬ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಿದರು. 5ನೆಯ ಕ್ಲಾಜಿನ ಪ್ರಕಾರ ಖಾದಿಯನ್ನು ಧರಿಸದಿದ್ದರೆ ಬೋರ್ಡಿನ ಸದಸ್ಯನಾಗಲು ಅರ್ಹತೆಯಿರುವುದಿಲ್ಲ, ಖಾದಿ ಹಾಕಿರುವವರಿಗೆ ಮಾತ್ರ ಅವಕಾಶವಿದೆ, ಇನ್ಯಾರಿಗೂ ಅವಕಾಶವಿಲ್ಲ ಎಂದು ಹೇಳಿದರು. ಆದರೆ ಅದು ಅಷ್ಟು ಸರಿಯಲ್ಲ. ಏಕೆಂದರೆ 10ನೆಯ ಕ್ಲಾಜಿನ ಪ್ರಕಾರ ಆಸಕ್ತಿಯಿರುವ ಯಾರನ್ನು ಬೇಕಾದರೂ ಸರ್ಕಾರ ನೇಮಕ ಮಾಡಬಹುದು. ಬೋರ್ಡಿಗೆ ಗ್ರಾಮಕೈಗಾರಿಕೆ, ಖಾದಿ ಮುಂತಾದುವುಗಳಲ್ಲಿ ನಂಬಿಕೆಯಿಲ್ಲದಿರುವವರನ್ನು ಹಾಕಿದರೇನು ಪ್ರಯೋಜನ? ಹಾಗೆ ಮಾಡಿದರೆ ಯೋಜನೆಯೇನಿದೆಯೋ ಅದರ ಫಲ ದೊರೆಯದೆ ಹೋಗುತ್ತದೆ. ಖಾದಿಯ ಮೇಲೆ ಪ್ರೀತಿಯಿರುವವರು ಯಾವಾಗಲೂ ಅದನ್ನು ಉಪಯೋಗಿಸುತ್ತಾರೆ. ಅಂಥವರಿಗೆ ಅವಕಾಶವಿದ್ದೇ ಇದೆ. ಪ್ರಜಾ ಸೋಷಿಲಿಸ್ಟ್ ಪಕ್ಷದ ಕೃಪಾಲನಿಯವರೂ ಸಹ ಖಾದಿ ಹಾಕುತ್ತಾರೆ. ಅವರ ಪಕ್ಷದವರೂ ಖಾದಿಯನ್ನೇ ಹಾಕಬೇಕೆಂದು ನಿಯಮವಿರುವುದಾಗಿ ತಿಳಿದು ಬಂದಿದೆ. ಎದುರು ಪಕ್ಷದ ನಾಯಕರು ಹೇಳುವುದನ್ನು ನೋಡಿದರೆ ಅವರು ಪಿ. ಎಸ್. ಪಿ. ಮುಖಂಡರೋ ಅಥವಾ ಸ್ವತಂತ್ರರೋ ಎಂದು ಅನುಮಾನ ಬರುತ್ತದೆ. ಆದ್ದರಿಂದ ಖಾದಿ ಹಾಕಿರುವವರೇ ಸದಸ್ಯರಾಗಬೇಕೆಂದು ಹೇಳಿರುವುದು ಒಳ್ಳೆಯದು. ಆಮೇಲೆ ಬೊಂಬಾಯಿನ ಆಕ್ಟನ್ನು ನೋಡಿದರೆ ಅದರಲ್ಲೂ ಹೀಗೆಯೇ ಇದೆ, ಯಾರು ಖಾದಿಹಾಕುತ್ತಾರೋ ಅವರಿಗೆ ಅವಕಾಶ ಕೊಡಬೇಕೆಂದಿದೆ ಬೊಂಬಾಯಿನಲ್ಲಿ ರಕ್ಷಣೆ ಕೊಟ್ಟಿರುವ ಹಾಗೆ ಇಲ್ಲೂ ಕೊಟ್ಟಿದ್ದಾರೆ. ಆದ್ದರಿಂದ ಈ ಕ್ಲಾಜಿನಿಂದ ಇತರ ಪಕ್ಷಗಳವರಿಗೆ ಅವಕಾಶವಿಲ್ಲವೆಂದು ಹೇಳುವುದು ಸರಿಯಲ್ಲ. ಶ್ರೀ ಇಮಾಂ ಅವರು ಖಾದಿ ವಿಚಾರದಲ್ಲಿ ಒಂದು ದೊಡ್ಡ ಭಾಷಣಮಾಡಿದರು. ಈಗ ಪಾಕೀಸ್ತಾನದಲ್ಲಿ ಮಿಲ್‌ಬಟ್ಟೆ ಸಾಲದೆ ಅಲ್ಲೂ ಖಾದಿ ಹಾಕಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಲಾಹೋರಿನಲ್ಲಿ ಕೇಂದ್ರ ಪ್ರಾರಂಭಿಸಿ ಖಾದಿ ತಯಾರು ಮಾಡುತ್ತಿದ್ದಾರೆ. ಏಕೆಂದರೆ ಅದರಿಂದ ಜನರಿಗೆ ಉದ್ಯೋಗ ಕಲ್ಪಿಸಬಹುದು, ಮಿಲ್‌ಮೇಲೆ ಅಷ್ಟು

ಒತ್ತಾಯ ಇರುವುದಿಲ್ಲ. ಈಗಲೇ ಮಿಲ್‌ಬಟ್ಟೆ ಬೆಲೆ ಹೆಚ್ಚಾಗಿದೆ, ಎಲ್ಲರೂ ಅದನ್ನೇ ಹಾಕಿದರೆ ಇನ್ನೂ ಹೆಚ್ಚುತ್ತದೆ. ಮಾನ್ಯಮಿತ್ರರು ಹೇಳಿದಹಾಗೆ, ನಾವು ಬೇಕಾದಷ್ಟು ಬಟ್ಟೆ ತಯಾರುಮಾಡುತ್ತೇವೆ ಮತ್ತು ಕೋಟ್ಯಾಂತರ ರೂಪಾಯಿಗಳಷ್ಟು ಹೊರಗೆ ವ್ಯಾಪಾರ ಮಾಡುತ್ತಿದ್ದೇವೆ, ರಪ್ತುಮಾಡುತ್ತಿದ್ದೇವೆ. ಖಾದಿ ಬಹಳ ಮುಖ್ಯವಾದುದು; ಕೈಗಾರಿಕೆಗಳಿಗೂ ಅನುಕೂಲವಾಗುವುದಲ್ಲದೆ ಅದರಿಂದ ಅನೇಕರಿಗೆ ಕೆಲಸವೂ ಸಿಕ್ಕುತ್ತದೆ. ಅದಿಲ್ಲದಿದ್ದರೆ ಎಲ್ಲರೂ ಪಟ್ಟಣಗಳಿಗೆ ಬಂದು ಶ್ರಮಜೀವನದಿಂದ ಮತ್ತು ಮಿಲ್ಲುಗಳಲ್ಲಿ ಕೆಲಸ ಮಾಡಿ ಸಂಪಾದನೆ ಮಾಡಬೇಕಾಗುತ್ತದೆ. ಬರೀ ಹಳ್ಳಿಗಳಲ್ಲಿ ಮಿಲ್ಲುಗಳನ್ನು ಸ್ಥಾಪಿಸುವುದಕ್ಕಾಗುವುದಿಲ್ಲ. ಹಳ್ಳಿಯವರಿಗೂ ಬಡವರಿಗೂ ಅನುಕೂಲ ಮಾಡಲು ಗ್ರಾಮಕೈಗಾರಿಕೆ ಏರ್ಪಟ್ಟಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಮಿಲ್‌ಇದ್ದರೆ ಹಳ್ಳಿಯವರೆಲ್ಲಾ ಅಲ್ಲಿಗೇ ಬರಬೇಕಾಗುತ್ತದೆ. ಆದ್ದರಿಂದ ಹಳ್ಳಿಗಳಲ್ಲೂ ಜನರಿಗೆ ಅನುಕೂಲವಾಗಬೇಕು, ಶ್ರಮಜೀವಿಗಳಿಗೆ ಸಹಾಯವಾಗಬೇಕು ಎಂದು ತಂದಿರುವ ಈ ಮಸೂದೆಯನ್ನು ವಿರೋಧಿಸುವುದು ಸೂಕ್ತವಲ್ಲ. ಆದ್ದರಿಂದ ಖಾದಿಯನ್ನು ಪ್ರತಿಯೊಬ್ಬರೂ ಹಾಕಬೇಕು; ಒಂದು ಪಕ್ಷದವರು ಮಾತ್ರ ಹಾಕಬೇಕು, ಇತರರು ಹಾಕಬಾರದು ಎಂದಿಲ್ಲ. ಶ್ರೀ ಪಟ್ಟಾಭಿರಾಮನ್ ಅವರು ಕಾಂಗ್ರೆಸ್‌ಪಕ್ಷಕ್ಕೆ ಸೇರದಿದ್ದರೂ ಖಾದಿಹಾಕುತ್ತಾರೆ, ಶ್ರೀ ಗೋಪಾಲಗೌಡರು, ಶ್ರೀ ಹುಚ್ಚೇಗೌಡರು ಸಹ ಹಾಕುತ್ತಾರೆ. ಆದ್ದರಿಂದ ಸೆಲೆಕ್ಟ್‌ಸಮಿತಿ ವರದಿಯನ್ನು ಎಲ್ಲರೂ ಅನುಮೋದಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಶ್ರೀ ಇಮಾಂಸಾಹೇಬರು ಹೇಳಿದ ವಾದ ಬಹಳ ವಿಚಿತ್ರವಾಗಿ ಕಾಣುತ್ತದೆ. ಕಾರಣವೇನೆಂದರೆ ಖಾದಿ ಹಾಕಿಕೊಳ್ಳುವವರು ಕಾಂಗ್ರೆಸ್ಸಿಗೆ ಸೇರಿದವರು ಎಂದು ಅರ್ಥಮಾಡಿಕೊಂಡರು. ಅದು ಹಾಗಲ್ಲ. ಅನೇಕರು ನಾಲ್ಕಾಣೆ ಕೊಟ್ಟು ಕಾಂಗ್ರೆಸ್ ಮೆಂಬರಾಗದಿದ್ದರೂ ಕಾಂಗ್ರೆಸ್ಸಿನವರಿಗಿಂತ ಹೆಚ್ಚು ಶ್ರದ್ಧೆಯಿಂದ ಖಾದಿ ಧರಿಸುವವರಿದ್ದಾರೆ. ಆದ್ದರಿಂದ ಕಾಂಗ್ರೆಸ್ಸಿನವರಲ್ಲದೆ ಬೇರೆ ಯಾವರು ಬೋರ್ಡಿನ ಸದಸ್ಯರಾಗುವುದಿಲ್ಲವೆಂದು ಹೇಳುವ ವಾದ ಸರಿಯಲ್ಲ. ಅಲ್ಲದೆ ಇಂಡಿಯಾದೇಶದಾದ್ಯಂತ ಇಂಡಿಯಾದಲ್ಲೇ ಆದ ಪದಾರ್ಥಗಳನ್ನೇ ಉಪಯೋಗಿಸಬೇಕು ಎಂದು ಅವರು ಹೇಳುತ್ತಾರೆ. ಆದ್ದರಿಂದ ನಮ್ಮಲ್ಲೇ ತಯಾರಾಗುವ ಬಟ್ಟೆಯನ್ನು ಉತ್ತಮರೀತಿಯಲ್ಲಿ ತಯಾರಿಸಿ ಅದನ್ನೇ ನಾವು ಹಾಕಿಕೊಳ್ಳುವುದು ಉತ್ತಮವಲ್ಲವೇ? ಅವರು ಯಾವ ಉದ್ದೇಶದಿಂದ ನಮ್ಮ ದೇಶದಲ್ಲೇ ತಯಾರಾದ ಬಟ್ಟೆಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತಾರೋ ಅದಕ್ಕಿಂತ ಉತ್ತಮವಾದ ಉದ್ದೇಶ ಅದನ್ನು ಇನ್ನೂ ಸಫಲಗೊಳಿಸುವ ಉದ್ದೇಶ ಖಾದಿಯ ಬಟ್ಟೆಗೆ ಉತ್ತೇಜನ ಕೊಡುವುದರಲ್ಲಿ ಅಡಕವಾಗಿದೆ. ಬಹಳ ಹಿಂದೆಯೇ ಮಹಾತ್ಮಾ ಗಾಂಧಿಯವರು ಮತ್ತು ದೇಶದ ಅನೇಕ ನಾಯಕರು ಇದನ್ನು ವಿಶದಪಡಿಸಿದ್ದಾರೆ; ಇದನ್ನು ಈಗ ಮರೆತಿದ್ದಾರೆ. ಇನ್ಯಾವ ವಿಧವಾದ ಕೈಗಾರಿಕೆ ನಡೆಸಿದರೂ ದೇಶದಲ್ಲಿ ಹಣ ಜನರಿಗೆ ಇದರಿಂದ ವಿನಿಯೋಗವಾಗುವ ರೀತಿಯಲ್ಲಿ ಆಗುವುದಿಲ್ಲ; ಎಷ್ಟೇ ಪ್ರಯತ್ನಪಟ್ಟರೂ ಏನೇ ಮಾಡಿದರೂ ಬೆಂಗಳೂರು ಪಟ್ಟಣ ಒಂದಕ್ಕೇ ನೀರನ್ನೆಲ್ಲಾ ಚೆಲ್ಲುವುದಕ್ಕಾಗುವುದಿಲ್ಲ, ಮಳೆ ಬಂದರೆ ಬೆಂಗಳೂರು ಪಟ್ಟಣಕ್ಕೆಲ್ಲಾ ಸ್ವಲ್ಪ ಹೊತ್ತಿನಲ್ಲಿ ಬೇಕಾದಷ್ಟು ನೀರು ಸುರಿಸಬಹುದು. ಹಾಗೆ ದೇಶದಲ್ಲಿ ಎಲ್ಲರಿಗೂ ಹಣ ಹಂಚಬೇಕಾದರೆ ಖಾದಿಯಿಂದಲೇ ಆಗಬೇಕು. ನಮ್ಮ ದೇಶದ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ಅರಿತು ಪೂರ್ಣವಾಗಿ ತಿಳಿದುಕೊಂಡು ದೇಶದ ಜನರಿಗೆ ತಮ್ಮ ಹಣ ಎಲ್ಲರಿಗೂ ಹಂಚಿಕೆಯಾಗಬೇಕಾದರೆ ಖಾದಿ ಒಂದರಿಂದಲೇ ಆಗಬೇಕು, ಇದಕ್ಕೆ ಖಾದಿಯಲ್ಲಿ ಪೂರ್ಣವಾದ ನಂಬಿಕೆ ಇರುವವರೇ ಇರಬೇಕು ಎಂದು ಈ ವಿಚಾರವನ್ನು ಬಹಳ ಚೆನ್ನಾಗಿ ಪರಿಶೀಲಿಸಿದ ಗ್ರಿಗ್ ಎಂಬುವರು ಹೇಳಿದ್ದಾರೆ. ಬೇರೆ ಯಾವ ಕೈಗಾರಿಕೆಯಿಂದಲೂ ಎಲ್ಲರಿಗೂ ಹಣದ ಹಂಚಿಕೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಖಾದಿ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಬೇಕಾದದ್ದು ಅತ್ಯಾವಶ್ಯಕ. ಈ ದಿವಸ ಕೆಲವರು ಖಾದಿಬಟ್ಟೆ ಹಾಕಿಕೊಂಡು ಬಂದರೆ ಮಿಲ್ ಬಟ್ಟೆ ಇದ್ದ ಹಾಗೆಯೇ ನಯವಾಗಿರುವುದರಿಂದ ಅದು ಖಾದಿಯೇ ಅಲ್ಲವೇ ಎಂದು ಅನುಮಾನ ಸಹ ಬರುವಂತೆ ಉತ್ತಮವಾದ ರೀತಿಯಲ್ಲಿ ಖಾದಿಬಟ್ಟೆ ತಯಾರಿಸುತ್ತಿದ್ದಾರೆ. ಇಂಥ ಖಾದಿ ಕೈಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಡೆಸಿ ಅಭಿವೃದ್ಧಿಗೆ ತರಲಿಲ್ಲವಲ್ಲಾ. ಇದರ ನಿಜವಾದ ಉದ್ದೇಶವೇನೆಂಬುದು ನಮ್ಮ ಸರ್ಕಾರಕ್ಕೆ ಇದುವರೆಗೆ ತಿಳಿಯಲಿಲ್ಲವಲ್ಲಾ ಎಂದಿರುವಾಗ, ಈಗಲಾದರೂ ಅದನ್ನು ಅರಿತುಕೊಂಡು ಸ್ವಲ್ಪ ಮಟ್ಟಿಗೆ ಖಾದಿ ಕೈಗಾರಿಕೆ ಪ್ರೋತ್ಸಾಹಿಸಿ ದೇಶೋದ್ಧಾರದ ಕಡೆ ಗಮನ ಕೊಡುತ್ತಿದ್ದಾರಲ್ಲಾ ಎಂದು ಸಮಾಧಾನ ಪಡುವುದಕ್ಕೆ ಬದಲಾಗಿ ನಮ್ಮ ಮಿತ್ರರು ಟೀಕೆ ಮಾಡುತ್ತಿರುವುದು ಬಹಳ ವಿಚಿತ್ರವಾಗಿ ಕಾಣುತ್ತಿದೆ.

ಖಾದಿಬಟ್ಟೆ ತಯಾರಿಸುವುದಕ್ಕಾಗಿ ಏರ್ಪಡುವ ಬೋರ್ಡಿನಲ್ಲಿ ಖಾದಿ ಹಾಕಿಕೊಳ್ಳುವವರೇ ಇರಬೇಕೆಂದು ಹೇಳಿದರೆ ಒಪ್ಪಬಹುದು. ಇದರಲ್ಲಿ 10-15 ಸಣ್ಣ ಕೈಗಾರಿಕೆಗಳಿವೆ. ಬೋರ್ಡಿಗೆ ಅವೆಲ್ಲಾ ಸೇರಿರುವುದರಿಂದ ಹೇಗೆ ಸರಿಹೋಗುತ್ತವೆ ಎಂದು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಪ್ರಶ್ನೆಮಾಡಿದರು. ಇದರ ಮೂಲ ತತ್ತ್ವವನ್ನು ಅರಿತುಕೊಳ್ಳದಿದ್ದರೆ ಆಗುವುದೇ ಹಾಗೆ. ಇದರಲ್ಲಿ ಅಡಕವಾಗಿರುವುದು ಎಲ್ಲಾ ಚರ್ಮ ಹದಮಾಡತಕ್ಕ ಮನೆ ಕೈಗಾರಿಕೆ, ಎಣ್ಣೆ ತಯಾರಿಸತಕ್ಕ ಮನೆ ಕೈಗಾರಿಕೆ, ಬೆಂಕಿಕಡ್ಡಿಯನ್ನು ತಯಾರಿಸುವ ಮನೆ ಕೈಗಾರಿಕೆ ಮುಂತಾದ ಮನೆ ಕೈಗಾರಿಕೆಗಳು ಮಾತ್ರ. ಇತರ ವಿಷಯವೇ ಇಲ್ಲ. ಇದರಲ್ಲಿ ಯಾರು ಬೇಕಾದರೂ ಇರಬಹುದು. ಆದರೆ ಅವರಿಗೆ ಹಳ್ಳಿಯಲ್ಲಿ ತಯಾರುಮಾಡುವ ಪದಾರ್ಥಗಳು ಮತ್ತು ವಿಧಾನ ಮನವರಿಕೆಯಾಗಿರಬೇಕು. ಅಂಥ ಮನುಷ್ಯರಿರಬೇಕು. ಹಾಗಿಲ್ಲದಿದ್ದರೆ ಯಾವ ಕೆಲಸವೂ ಸುಸೂತ್ರವಾಗಿ ಏನೇ ಕಾನೂನು ಮಾಡಿದರೂಕೂಡ ನಡೆಯಲಾರದು. ಅಸ್ಪೃಶ್ಯತೆ ನಿವಾರಣೆಗೆ ಕಾನೂನು ಮಾಡಿದರೂ ಅದರಲ್ಲಿ ನಂಬಿಕೆ ಬರುವವರೆಗೆ ಏನುಮಾಡಿದರೂ ಆ ಕೆಲಸ ಸುಸೂತ್ರವಾಗಿ ನೆರವೇರುವುದಿಲ್ಲ ಎಂದು ಅನೇಕವೇಳೆ ಹೇಳಿದ್ದೇವೆ. ಆಗ ಅದೆಲ್ಲವೂ ಬರಿಕಾಗದದ ಮೇಲೆ ಇರುತ್ತದೆ. ದೇಶದಲ್ಲಿ ಯಾವ ಒಂದು ಅಭಿವೃದ್ಧಿಯ ಕೆಲಸವನ್ನು ಮಾಡಬೇಕಾಗಿರುತ್ತದೊ ಅಂಥಾದ್ದನ್ನು ಮಾಡುವುದಕ್ಕೆ ಆಗುವುದಿಲ್ಲ. ಒಂದು ಕಾರ್ಯದಲ್ಲಿ ಯಾರಿಗೆ ನಂಬಿಕೆಯಿಲ್ಲವೋ ಅಂಥ ಜನರಿಗೆ ಆ ಕಾರ್ಯವನ್ನು ವಹಿಸಿದರೆ ಆ ಕಾರ್ಯವೇ ಹಾಳಾಗಿ ಹೋಗುತ್ತದೆ. ಆದ್ದರಿಂದ ಇದರಲ್ಲಿ ಯಾವ ಪಕ್ಷೀಯವಾದ ಭಾವನೆಯೂ ಇಲ್ಲ. ಈ ಕೆಲಸದಲ್ಲಿ ಯಾರಿಗೆ ಒಂದು ಹೆಚ್ಚಿನ ಅನುಭವ, ಉತ್ತೇಜನ ಇರುತ್ತದೋ ಅಂಥ ಜನರಿದ್ದರೆ ಈ ಕಾರ್ಯ ಯಶಸ್ವಿಯಾಗಿ ಜರಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ಸೇರಿಸಿದ್ದಾರೆ. ಈ ದಿವಸ ಕಾಂಗ್ರೆಸ್ ಪಕ್ಷದಲ್ಲಿಲ್ಲದೆ ಇರತಕ್ಕಂಥ ಅನೇಕ ಜನರು ಖಾದಿ ಧಾರಿಗಳಾಗಿದ್ದಾರೆ. ದೇಶದಲ್ಲಿ ಎಲ್ಲರೂ ಖಾದಿ ಹಾಕಬೇಕೆಂಬ ತತ್ವವನ್ನು ವಿರೋಧ ಪಕ್ಷದವರೂ ಕೂಡ ಒಪ್ಪಿ

(ಶ್ರೀ ವಿ. ವೆಂಕಟಪ್ಪ)

ಕೊಂಡಿದ್ದಾರೆ. ಹಾಗಿರುವಾಗ ಕೇವಲ ಈ ಶಾಸನ ಸಭೆಗಳಲ್ಲಿರತಕ್ಕವರೇ ಅದರಲ್ಲಿ ಸದಸ್ಯರಾಗಿರಬೇಕೆಂದು ಹೇಳುವುದು ಅಷ್ಟು ಸರಿಯಾದುದಲ್ಲ. ದೇಶದಲ್ಲಿ ಶಾಸನ ಸಭಾಸದಸ್ಯರಲ್ಲದಂಥ ಅನೇಕ ಜನ ಖಾದಿ ಪ್ರೇಮಿಗಳಿದ್ದಾರೆ. ಈ ಕೈಗಾರಿಕೆಯಲ್ಲಿ ನಿಷ್ಠೆಯುಳ್ಳಂಥ ಜನರೂ ಎಷ್ಟೋ ಇದ್ದಾರೆ. ಆ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಆ ದೃಷ್ಟಿಯಿಂದ ಹೀಗೆ ಮಾಡಿದ್ದಾರೆ. ಈ ಕಾರಣಗಳಿಂದ ಈ ಬದಲಾವಣೆಗಳನ್ನು ಮಾಡಿರತಕ್ಕದ್ದು ಬಹಳ ಉತ್ತಮವಾಯಿತು. ಇದಕ್ಕೆ ನಾನು ಸಂಪೂರ್ಣ ಬೆಂಬಲ ನೀಡುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಈಗ ತಂದಿರತಕ್ಕಂಥ ತಿದ್ದುಪಡಿಯಾದ ಬಿಲ್ಲನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಖಾದಿ ಎಂಬುದನ್ನು ಒಂದು ಬಹಳ ಪವಿತ್ರವಾದಂಥ ವಸ್ತುವೆಂಬ ದಾಗಿ ಜನರು ತಿಳಿದುಕೊಂಡಿದ್ದಾರೆ. ಆದರೆ ನನಗೆ ಅಷ್ಟು ಜನರು ಮನವೊಪ್ಪುವ ರೀತಿಯಲ್ಲಿ ಮಾತನಾಡಲು ಶಕ್ತಿಯಿಲ್ಲ. ಆದಾಗ್ಯೂ ನಮ್ಮ ಬಾಯಲ್ಲಿ ಅಂಥ ಮಾತಗಳನ್ನು ಈ ಹೊತ್ತು ಆಡಿಸುತ್ತಿರುವುದೆಲ್ಲಾ ಈ ಖಾದಿ ಪ್ರಭಾವ ಅಂತಲೇ ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಎಂಥ ನಾಸ್ತಿಕನ ಬಾಯಲ್ಲೂ ಕೂಡ ಈ ಖಾದಿ ಒಂದು ರೀತಿಯಲ್ಲಿ ಬಹಳ ಪವಿತ್ರವಾದ ವಸ್ತು ಅನ್ನುವುದನ್ನು ಆಡಿಸುತ್ತಿರುವುದೂ ಆ ಖಾದಿಯ ಮಹತ್ವವೇ ಹೊರತು ಬೇರೆ ಏನೂ ಅಲ್ಲ ಈ ಖಾದಿಯಿಂದಲೇ ಆ ಸ್ವಾತಂತ್ರ್ಯ ಚಳವಳಿಗೆ ಒಂದು ಮಹತ್ವಸ್ಥಾನ ದೊರೆಯಿತು. ಆದಕಾರಣ ಈ ಬೋರ್ಡಿನಲ್ಲಿ ಖಾದಿ ಧರಿಸತಕ್ಕಂಥ ಜನರೇ ಇರಬೇಕೆಂದು ಹೇಳಿರುವುದರಲ್ಲಿ ತಪ್ಪೇನೂ ಇಲ್ಲ. ಈಗಾಗಲೇ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ ಎಷ್ಟೋ ಕಡೆ ಪ್ರತಿಯೊಬ್ಬ ಪೋಲೀಸಿನವರೂ ಮತ್ತು ಇತರ ಸರ್ಕಾರಿ ಅಧಿಕಾರಿಗಳೂ ಈ ಖಾದಿಯನ್ನು ಹಾಕಲೇ ಬೇಕೆಂಬುದಾಗಿ ಕಡ್ಡಾಯ ಮಾಡಿದ್ದಾರೆ. ಆದರೆ ಅದೇಕೋ ನಮ್ಮ ಮೈಸೂರಿನಲ್ಲಿ ಇನ್ನೂ ಆ ರೀತಿ ಕಡ್ಡಾಯ ಮಾಡಿಲ್ಲ. ಈ ದಿವಸ ಈ ಬಿಲ್ಲು ಬಂದು ನಮಗೇನೂ ಈ ಖಾದಿ ಹಾಕುವುದನ್ನು ಹೇಳಿಕೊಡಲಿಲ್ಲ. ನಾವು ಬಹಳ ಹಿಂದೆಯೇ ಈ ಖಾದಿ ಉಪಯೋಗವನ್ನು ಕಂಡು ಹಿಡಿದಿದ್ದೇವು. ಈ ಖಾದಿಯ ಬಗ್ಗೆ ಒಂದು ಹಾಡೇ ಇದೆ.

ಈ ಖಾದಿ ಜನರ ಜೀವನೋಪಾಯದ ಹಾದಿ. ಈ ದಿವಸ ಈ ಖಾದಿ ಅನೇಕ ಸಂಸಾರಗಳ ಜೀವನಾಧಾರಕ್ಕೆ ಮಾರ್ಗ ಕಲ್ಪಿಸಿದೆ. ನೂಲುವುದು ಒಂದು ದೊಡ್ಡ ವೃತ್ತಿ. ಇದೊಂದು ಕೈಕಸಬು. ಈ ರಾಟೆ ಸರಿಯಾಗಿ ತಿರುಗುತ್ತಿದ್ದರೆ ಜನರ ಜೀವನ ಧಾರಾಳವಾಗಿ ನಡೆಯುತ್ತಿರುತ್ತದೆ. ಈ ಕೆಲಸವನ್ನು ಮಾಡುತ್ತಲೇ ಭಗವಂತನ ನಾಮ ಸ್ಮರಣೆಯನ್ನು ಮಾಡತ್ತಿರಬಹುದು. ಅಂಥ ಒಂದು ಅವಕಾಶ ಇದರಲ್ಲಿದೆಯೆಂದೇ ಈ ಕೈಗಾರಿಕೆಯನ್ನು ಒಂದು ಪವಿತ್ರವಾದ್ದೆಂದು ಮಾಡಿದ್ದಾರೆ. ಯಾರು ಈ ದಿವಸ ಈ ಬಿಲ್ಲನ್ನು ವಿರೋಧಿಸುತ್ತಿದ್ದಾರೋ ಅವರೂ ಖಾದಿ ಧರಿಸಲಿ. ಆಗ ಅವರ ಮನಸ್ಸಿಗೂ ಈ ಸದ್ಭಾವನೆಗಳು ಬರುತ್ತವೆ. ಈ ಖಾದಿಯನ್ನು ಧರಿಸುವುದರಿಂದ ಯಾರಿಗೂ ಅಪಾಯವಿಲ್ಲ. ದೇಶದಲ್ಲಿರತಕ್ಕ ನಿರುದ್ಯೋಗ ಪ್ರಶ್ನೆಯನ್ನು ಎದುರಿಸಲು ಇಂಥ ಒಂದು ಬೋರ್ಡು ಇರತಕ್ಕದ್ದು ಅವಶ್ಯಕ. ಈ ಬೋರ್ಡಿನಲ್ಲಿ ಕೆಲಸ ಮಾಡಲು ಹೆಣ್ಣು ಮಕ್ಕಳಿಗೂ ಸಹ ಅವಕಾಶ ಕಲ್ಪಿಸಿದ್ದಾರೆಂಬ ಸುದ್ದಿ ಕೇಳಿ ಬಹಳ ಸಂತೋಷವಾಯಿತು. ಹಾಗೆ ಮಾಡಿರತಕ್ಕದ್ದು ಒಳ್ಳೆಯದು. ಒಂದು ಸಂಸಾರದಲ್ಲಿ ನಾಲ್ಕು ಜನ ಮಕ್ಕಳಿದ್ದರೆ ಅವರನ್ನು ಸಾಕತಕ್ಕ ಹೊಣೆಗಾರಿಕೆ ತಂದೆಗಿಂತಲೂ ತಾಯಿಯ ಮೇಲೆ ಹೆಚ್ಚಾಗಿರುತ್ತದೆ. ಅಂಥ ಕಷ್ಟದಲ್ಲಿರತಕ್ಕ ಹೆಣ್ಣುಮಕ್ಕಳಿಗೆ ಇದು ಜೀವನವನ್ನು ನಡೆಸಲು ಆಧಾರವಾಗಿದೆ. ಈ ಖಾದಿ ಎಂಥ ವಸ್ತುವೆಂಬುದು ನಿಮಗೆ ಅರ್ಥವಾಗಬೇಕಾದರೆ ನೀವೂ ಖಾದಿ ಧಾರಿಗಳಾಗಿ ; ಆಗ ನಿಮಗೆ ಗೊತ್ತಾಗುತ್ತದೆ. ಈ ಬೋರ್ಡಿಗೆ ಎಲ್ಲರನ್ನೂ ಹಾಕಬೇಕೆಂದು ಕೇಳುವುದರಲ್ಲಿ ತಪ್ಪೇನಿಲ್ಲ. ಆದರೆ ಜನರಿಗೆಲ್ಲಾ ಬಹು ಮುಖ್ಯವಾಗಿ ಬೇಕಾಗಿರುವುದೇನು ? ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ. ಹೀಗೆ ಅನ್ನ, ವಸ್ತ್ರ, ವಸತಿ, ವಿದ್ಯೆ ಮತ್ತು ಆರೋಗ್ಯ ಇವು ಐದು ಯಾರಿಗೆ ಬೇಡ ? ದೇಶದಲ್ಲಿರತಕ್ಕವರೆಲ್ಲರಿಗೂ ಬೇಕೇಬೇಕು. ಅಂದಮೇಲೆ ಈ ಖಾದಿ ಎಲ್ಲರಿಗೂ ಬೇಕಾದ್ದೆಂದೇ ಆಯಿತು. ಆದುದರಿಂದ ನಾನು ಈ ಬಿಲ್ಲನ್ನು ಸಮರ್ಥಿಸುತ್ತೇನೆ ಮತ್ತು ಸ್ವಾಗತಿಸುತ್ತೇನೆ.

Sri V. M. MASCARENHAS (St. John's Hill).—Sir, probably my friend Sri Mohamed Imam has forgotten the khadi economics. If khadi is to be developed in this country, the main idea behind it is that unemployed persons, men and women, in this vast country who have so many hours hanging on their hands may make use of these hours in an useful manner and help economic development of this country. We have seen, and, every member of this House has often stated that, during six months in a year, the poor villager has no occupation, Well, if that person is to be redeemed and his household, the only possibility would be by developing khadi and introducing khadi over the whole country so that every household may at the end of the month have a few more rupees in their hands and thus solve unemployment in this country. Sri Imam stated that in other countries they are encouraging their own goods and have become self-sufficient, and that this country is not following the same way. I would bring to his attention that from the day of independence, if you only look into the Indian Trade Journal which gives you figures of customs and imports, you will be surprised to note that practically 80 per cent of the goods that were being imported from abroad before 1947, are now being manufactured within the country and even in the case of the few that are still coming in, there is a very serious attempt being made by the Government at the Centre to see that within the next few years, we should be self-sufficient in these also So he need not have any misgivings. We may be sure that India, even in the

field of machinery, will soon be self-sufficient and we may be producing our own motor cars, our own aeroplanes in the not distant future.

My own feeling in so far as this Bill goes, is, that this Board, though I would welcome it, assumes a very heavy responsibilty. The development of khadi alone would have given a heavy strain on their shoulder. Over and above you put 15 village industries in their hands. Well, I certainly shall not deal with the Chairman of this Board whoever he may be because when he accepts that position and at the end of one year's working this Legislature will be watching with keen eyes as to the progress shown in these various directions, I am afraid unless he be a strong man, the result would be far from satisfactory. My only fear is in that direction, specially when lakhs and lakhs of rupees are now coming from the Centre and equally from the State. Well, to handle vast sums of money with care and diligence and with great vision, really wants men who are not only true lovers of the country but who have integrity and honesty to a great degree.

Sri Srinivasa Iyengar raised a point in clause 12 that when sums exceeding Rs. 10,000 are to be spent by the Chairman the sanction of the Board is needed. It naturally implies that sums up to Rs. 10,000 the Chairman is authorised to spend. But I would wish to add one clause so as to see that the Chairman who spends sums not exceeding Rs. 10,000, reports to the Board at its next meeting of such contracts or transactions. I do not know why the Select Committee overlooked this.

It would be a very healthy addition if one more paragraph is added to the effect that the expenditures or contracts made by the Chairman up to sum of Rs. 10,000 be reported at the next meeting of the Board. Sri Srinivasa Iyengar also raised a point whether the Legislature has any kind of control over this body. Of coure the Legislature is a sovereign body. When it has control over the whole State and its finances, that fear may not be well founded. But he has raised a very pertinent point because very often most of the expenditure though strictly coming within the purview of this House, for want of time or for not being placed before this House, goes unheeded. I would suggest that in future whenever powers of this kind are conferred, every report at the end of the year, should be placed and discussion allowed on it for at least one or two days. Lakhs of rupees are being spent by our Boards in various fields. In the future set up, corporations are the fashion of the day and if these corporations are allowed to spend crores of rupees without the Legislature having any kind of control over them, I would say that day would not be a happy one. So something must be done by this body to have a very healthy check over the expenditure incurred by this Board.

2-30 P.M.

The duties of the Accounts Officer, unfortunately, are not clearly defined in this Bill. So, considering that large sums of money are going to be spent by this Board, the Government should introduce a provision while making the rules to see that every month an audited statement or a monthly profit and loss account or the trading account is regularly furnished by the Board to Government for its inspection. With these few words, Sir, I heartily welcome the Bill with its amendments.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಿ ಕೆಲವು ತಿದ್ದುಪಡಿಗಳನ್ನು ಹೊಂದಿಬಂದಿದೆ. ಮೊದಲನೆಯದು 'ಖಾದಿ' ಎನ್ನುವ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಇನ್ನೊಂದು 'Village Industry' ಎನ್ನುವ ಬಗ್ಗೆ ತಿದ್ದಿ ಬರೆದಿದ್ದಾರೆ. ವೈಸ್-ಛೇರ್ಮನ್ ಅವರು ಅಗತ್ಯವಿಲ್ಲವೆಂದು ಹೇಳಿದ್ದಾರೆ. ಇನ್ನು ಬೋರ್ಡ್ ಎಷ್ಟು ಜನರಿಂದ ಕೂಡಿರಬೇಕೆಂಬುದಕ್ಕೆ 10 ಜನ ಎಂದು ಸಂಖ್ಯೆಯನ್ನು ಗೊತ್ತುಮಾಡಿದ್ದಾರೆ. ಇನ್ನೊಂದು, ಸದಸ್ಯರಿಗೆ ಕೆಲವು ಅನರ್ಹತೆಗಳನ್ನು ಗೊತ್ತುಮಾಡಿದ್ದಾರೆ. ಬೋರ್ಡಿನ ರಚನೆಗೆ ಸಂಬಂಧಪಟ್ಟಂತೆ ಕೆಲವು ಕ್ಲಾಜುಗಳನ್ನು ತಿದ್ದಿ ಬರೆದಿದ್ದಾರೆ. ಒಂದು ಮುಖ್ಯವಾದ ಬದಲಾವಣೆಯೆಂದರೆ ಸೆಕ್ರೆಟೆರಿಯವರು ಅಧಿಕಾರಿಗಳಾಗಿರಬೇಕಾದ್ದಿಲ್ಲ ಮತ್ತು ಬೋರ್ಡಿನ consultation ತೆಗೆದುಕೊಂಡು ಅವರನ್ನು ನೇಮಕ ಮಾಡಬಹುದೆಂದು ಮಾಡಿದ್ದಾರೆ. ಸಾಲಗಳನ್ನೂ ಗ್ರಾಂಟುಗಳನ್ನೂ ಮತ್ತು ಸಬ್‌ವೆನ್ಷನ್‌ಗಳನ್ನೂ ಕೊಡುವ ಒಂದು ಅಧಿಕಾರವೂ ಕೂಡ ಈ ಬೋರ್ಡಿಗೆ ಇರಬೇಕೆಂದು ಒಂದು ಹೊಸ ಕ್ಲಾಜನ್ನು ಸೇರಿಸಿದ್ದಾರೆ.

(ಶ್ರೀ ಎಸ್. ಗೋಪಾಲಗೌಡ.)

ಅನರ್ಹತೆಯ ಬಗ್ಗೆ ಶ್ರೀಮಾರ್ಕ ಇಮಾಂಅವರು ದೊಡ್ಡ ಚರ್ಚೆಯನ್ನೇ ಆರಂಭ ಮಾಡಿದರು. ಈಗಾಗಲೇ ಖಾದಿಯನ್ನು ಹಾಕಿದವರೇ ಸದಸ್ಯರಾಗಿರಲಿ ಎನ್ನುವ ವಾದ ಸರಿ ಎನ್ನುವುದನ್ನೂ ಅನೇಕ ಸದಸ್ಯರು ಸಮರ್ಥಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಖಾದಿ ಹಾಕದೆ ಇದ್ದವರಿಗೆ ಖಾದಿಯಲ್ಲಿ ನಂಬಿಕೆ ಇಲ್ಲದೆ ಇರುವುದರಿಂದ ಅಂಥ ಒಂದು ಉದ್ಯಮವನ್ನು ರೂಪಿಸುವುದಕ್ಕೆ ಅಥವಾ ನಡೆಸಿಕೊಂಡು ಹೋಗುವುದಕ್ಕೆ ಅಂಥವರು ಅರ್ಹರಾಗುತ್ತಾರೆಯೋ ಎಂಬುದು ಪ್ರಶ್ನೆ. ಇದು ಒಂದು ಮುಖ್ಯವಾದ ಅಂಶ. ನಾನು ಅರ್ಥಮಾಡಿಕೊಂಡಿರುವ ಹಾಗೆ, ಶ್ರೀಮಾರ್ಕ ಇಮಾಂಅವರು ಹೇಳಿದ್ದು ಉಡುಪನ್ನು (dress) ಕೂಡ, ಅಧ್ಯಕ್ಷರ ಉಡುಪನ್ನು ಕೂಡ ನಿಗದಿ ಮಾಡಬೇಕಾಗಿದೆ ಮತ್ತು ನಿಗದಿಯಾದ ಉಡುಪಿನಲ್ಲಿ ಬರದೆಹೋದರೆ ಅದೂ ಒಂದು ಅನರ್ಹತೆಯಾಗುತ್ತದೆ ಎನ್ನುವ ವಿಷಯ. ನಾವು ಬರೀ ನಂಬಿಕೆ (sentiment)ಯ ದೃಷ್ಟಿಯಿಂದ ನೋಡುತ್ತಿದ್ದೇವೆ. ಈಗ ಹಾಗೆ ನೋಡುವುದಕ್ಕೆ ಹೋದರೆ ಇಂಡಿಯಾ ದೇಶದ ಸರ್ಕಾರಿ ನೌಕರರು ಯಾರಿದ್ದಾರೆಯೋ ಅವರಿಗೆ ಕಾಂಗ್ರೆಸ್ ಸರ್ಕಾರಗಳು ಅವರ ಮುಂದೆ ಇಟ್ಟಿರುವ ಅಥವಾ ನಡೆಸಿಕೊಂಡು ಹೋಗಬೇಕೆಂದು ಪ್ರಯತ್ನಪಡುತ್ತಿರುವ ಅನೇಕ ಯೋಜನೆಗಳಲ್ಲಿ ನಂಬಿಕೆ ಇಲ್ಲ. ಅವರಲ್ಲಿ ದೊಡ್ಡ ದೊಡ್ಡವರು ಕೂಡ ವಿರೋಧಮಾಡಿದ್ದಾರೆ, ನಂಬಿಕೆ ಇರಬೇಕು ಎಂದು ಹೇಳಿದ್ದಾರೆ. That is a major problem before the country ಎಂದು ನಾನು ಹೇಳುತ್ತೇನೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಖಾದಿಯನ್ನು ಕಾಂಗ್ರೆಸ್‌ನವರು ಮಾತ್ರ ಹಾಕುತ್ತಿಲ್ಲ; ಮುಂಬೈನಲ್ಲಿ ಪೋಲೀಸಿನವರು ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಹೇಳಿದರು. ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಕೆಲವರು ಕಳ್ಳಭಟ್ಟಿ ತಯಾರು ಮಾಡುವವರೂ ಸಹ ಖಾದಿಯನ್ನು ಹಾಕುತ್ತಾರೆ. (ನಗು). ಇವೊತ್ತು 'ಖಾದಿ' ವಿಚಾರವಾಗಿ ಚರ್ಚಿಸುತ್ತಿರುವುದೂ, ಬೋರ್ಡನ್ನು ರಚನೆಮಾಡುವುದೂ, ಖಾದಿ ಒಂದು ಉದ್ಯೋಗ, ಒಂದು ಗ್ರಾಮಕೈಗಾರಿಕೆ, ಒಂದು ಗೃಹ ಕೈಗಾರಿಕೆ, ಅದನ್ನು ನಡೆಸಿಕೊಂಡು ಹೋಗಬೇಕು ಮತ್ತು ಇತರ ಗ್ರಾಮ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ಬೋರ್ಡನ್ನ ರಚನೆ ಮಾಡುವುದು ಸೂಕ್ತವಾದದ್ದು ಎನ್ನುವ ಅಂಶವನ್ನು ನಾವು ವಿಚಾರಮಾಡಿ ಅದಕ್ಕೆ ಒಂದು ರೂಪವನ್ನು ಕೊಟ್ಟು ಬೋರ್ಡ್ ರಚನೆ ಮಾಡಬೇಕಾಗಿದೆ. ಇದು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯವಾಗುತ್ತದೆ. ಆದರೆ ಕಾಂಗ್ರೆಸ್ ಮೊದಲಿನಿಂದಲೂ ಖಾದಿಯನ್ನು ತನ್ನ ಅಧಿಕೃತ ವೇಷಭೂಷಣವನ್ನಾಗಿ ಮಾಡಿಕೊಂಡು ಬಂದದ್ದರಿಂದ ಅದು ರಾಜಕೀಯ ಸಮಸ್ಯೆಯಾಗಿ ನಮ್ಮ ದೇಶದಲ್ಲಿ ಬಂದು ನಿಂತಿದೆ. ಖಾದಿಯನ್ನು ಹಾಕಿದವರೆಲ್ಲರೂ ಕಾಂಗ್ರೆಸ್ಸಿನವರು ಎಂದು ಆಪಾದನೆ ಮಾಡುವುದಕ್ಕೆ ಹೇಳುತ್ತಿಲ್ಲ. ಅಧಿಕಾರ ಬಂದಮೇಲೆ ಆಪಾದನೆಯಾಗುವುದಕ್ಕೆ ಕಾರಣವಾಯಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ಖಾದಿಯನ್ನು ಹಾಕಿದವರೆಲ್ಲ ಸಾಮಾನ್ಯವಾಗಿ ಅಧಿಕಾರದಲ್ಲಿರತಕ್ಕ ವರ್ಗಕ್ಕೆ ಸೇರಿದವರು ಎಂದಾಗಿದೆ. ಖಾದಿಹಾಕುವುದು ಒಂದು identification ಆದ ಹಾಗಾಗಿದೆ. ಕೆಲವರಿಗೆ ಖಾದಿ ಹಾಕಿದವರನ್ನು ನೋಡಿ ಭಯವೂ ಆಗುತ್ತದೆ. ಮತ್ತೆ ಕೆಲವರಿಗೆ ಸಿಟ್ಟು ಬರುತ್ತದೆ. ಸಿಟ್ಟು ಬರಲು ಕಾರಣವೇನೆಂದರೆ ಕೆಲವರು ಖಾದಿ ಹಾಕಿದವರು ತಪ್ಪು ಮಾಡಿರುತ್ತಾರೆ. ಕೆಲವರು ಬ್ಲಾಕ್‌ಮಾರ್ಕೆಟ್ ವ್ಯಾಪಾರ ಮಾಡುತ್ತಿದ್ದರು, ಮತ್ತೆ ಕೆಲವರು ಇನ್ನೂ ಏನೇನೋ ಮಾಡುತ್ತಿದ್ದರು. ಸರ್ಕಾರದ ಪಕ್ಷವೆಂದು ಇವೆಲ್ಲ ನಡೆಯುತ್ತವೆ. ಆದುದರಿಂದ ಜನರು ಸಾಮಾನ್ಯವಾಗಿ ಆ ಉಡುಪನ್ನು ಅನುಕರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಎಷ್ಟೋಜನ ಕಾಂಗ್ರೆಸ್‌ನವರು ಬಾರ್ ನಡೆಸುತ್ತಿದ್ದಾರೆ. It does not fit in; ಇವೆರಡೂ ಸರಿಹೊಂದುವುದಿಲ್ಲ. ಇವೆರಡೂ ಹೊಂದಿಕೊಂಡು ಹೋಗುವುದಕ್ಕೆ ಬಹಳ ಕಷ್ಟವಿದೆ. ನಾನು ಪರ್ಮಿಟ್ ವಗೈರೆ ಅನುಕೂಲಗಳನ್ನು ಹೊಂದಲು ಖಾದಿ ಹಾಕುತ್ತಿದ್ದೇನೆಂದು ಎಷ್ಟೋಸಲ ಜನ ಆಡಿಕೊಂಡದ್ದನ್ನು ಕೇಳಿದ್ದೇನೆ. ಬಸ್ಸಿನಲ್ಲಿ ಪ್ರಯಾಣಮಾಡುವಾಗ ಜನರು ನನ್ನ ಕಡೆ ಬೆರಳು ತೋರಿಸಿಕೊಂಡು 'ಧಾಂಡಿಗ ಹೋಗುತ್ತಿದ್ದಾನೆ; ಇವನು ಅಠಾರಕಚೇರಿಯಿಂದ ಬಂದ; ಯಾವುದೋ ಪರ್ಮಿಟ್ಟಿಗೆ ಹೊಂಚು ಹಾಕಿಕೊಂಡು ಬೆಂಗಳೂರಿನಲ್ಲಿದ್ದಾನೆ' ಮುಂತಾದ ಏನೇನೋ ಆರೋಪಗಳನ್ನು ಮಾಡುತ್ತಾರೆ. ಈ ರೀತಿಯ ಆರೋಪಗಳನ್ನು ಎಷ್ಟೋಸಲ ನನ್ನ ಕಿವಿಗೆ ಬೀಳುವ ಹಾಗೆ ಹೇಳಿದ್ದೂ ಉಂಟು. (ನಗು). ಆದುದರಿಂದ ಈ ಉಡುಪಿಗೆ ಗೌರವವೂ ಇದೆ, ಈ ವೇಷವನ್ನು ಕಂಡರೆ ಭಯವೂ ಇದೆ, ಆ ಬಟ್ಟೆಯನ್ನು ಹಾಕುವವರ ಬಗ್ಗೆ ಸಿಟ್ಟೂ ಬರುತ್ತದೆ ಮತ್ತು ಕುತ್ಸಿತ ಟೀಕೆಗಳಿಗೂ ಅವಕಾಶವಿದೆ. ಇದು ಬಹಳ ಗಹನವಾದ ವಿಷಯ ಮತ್ತು ಬೇರೆ ಸಮಯದಲ್ಲಿ ಚರ್ಚಿಸಬೇಕಾದ ವಿಷಯ. ಶ್ರೀಮಾರ್ಕ ಇಮಾಂ ಸಾಹೇಬರು ಇದು ಅಷ್ಟು ಸೂಕ್ತವಾಗಲಾರದೋ ಏನೋ ಎಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಅದು ಸರ್ಕಾರದವರಿಗೆ ಬಿಟ್ಟಿರುವ ವಿಷಯ.

ಇನ್ನೂ ಹತ್ತುಸಾವಿರ ರೂಪಾಯಿಗಳವರೆಗೆ ಖರ್ಚು ಮಾಡುವುದರ ಬಗ್ಗೆ ಸಹ ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. 'Subject to approval, by the Board' ಎಂಬ ಪದಗಳನ್ನು ಸೇರಿಸಿದರೆ ಅಥವಾ 'Subject to ratification by the Board' ಎನ್ನುವುದನ್ನು ಸೇರಿಸಿದರೆ ಬೋರ್ಡಿನ ಚೇರ್ಮನ್ ಅವರು ಮಾಡಿದ್ದು ratify ಆಗುತ್ತದೆ ಎಂಬ ಅಭಿಪ್ರಾಯವಾಗುತ್ತದೆ. ಈ ಪದಗಳನ್ನು ಸೇರಿಸುವುದರಿಂದ ಹೆಚ್ಚಿನ ಹತೋಟಿ ಇದ್ದ ಹಾಗಾಗುತ್ತದೆ ಇನ್ನೊಂದು ವಿಷಯವನ್ನು ಸಹ ಪರಿಶೀಲನೆ ಮಾಡಬೇಕು. ಬೋರ್ಡಿನಲ್ಲಿ ಕೆಲವು ಸ್ಥಾನಗಳನ್ನು ಶಾಸನ ಸಭೆಗಳಿಗಾಗಿ ಮೀಸಲಿಟ್ಟರೆ ಬಹುಶಃ ಬೋರ್ಡನ್ನು ರಚನೆ ಮಾಡಿದುದಕ್ಕೆ ಸರಿಹೊಂದಬಹುದು ಎಂದು ನನ್ನ ಅಭಿಪ್ರಾಯವಾಗಿದೆ. ನೀವು ಈ ಬೋರ್ಡಿಗೆ ಸಾಲವಗೈರೆ ಕೊಡುವುದಕ್ಕೆಂದು, ಒಂದು ಹೊಸ ಕ್ಲಾಜನ್ನು ಸೇರಿಸಿದ್ದೀರಿ. ಇದು ಎಷ್ಟರಮಟ್ಟಿಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆನ್ನುವುದನ್ನು ನಾವು ಕಾದು ನೋಡಬೇಕಾಗಿದೆ. ಈಗಾಗಲೇ ಕೈಗಾರಿಕೆಗಳಿಗೆ ಸಂಬಂಧಪಟ್ಟಹಾಗೆ Industries Board ಇದೆ; ಸಣ್ಣಸಣ್ಣ ಕೈಗಾರಿಕೆಗಳಿಗೆ ಸಾಲಕೊಡುವ ಸಂಸ್ಥೆಗಳಿವೆ. ಇವುಗಳ ಜೊತೆಗೆ ಇದೂ ಒಂದು ಭಾರಿ ಸಂಸ್ಥೆ. ಇದಕ್ಕೆ ದುಡ್ಡು ಬರುತ್ತದೆ. ಬದನವಾಳದ ಖಾದಿ ಕೇಂದ್ರಕ್ಕೆ ಮೂರುನಾಲ್ಕು ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಎಲ್ಲ ಸೇರಿದರೆ ಸುಮಾರು 25-30 ಲಕ್ಷ ರೂಪಾಯಿಗಳವರೆಗೂ ಹೋಗಬಹುದು. ಈ ಬೋರ್ಡಿನವರು ಸಾಲ ಕೊಡಬಾರದೆನ್ನುವ ಅಭಿಪ್ರಾಯ ನನಗಿಲ್ಲ. ಆದರೆ ಇಷ್ಟು ಸಂಸ್ಥೆಗಳ ಮುಖಾಂತರ ಯಾರುಯಾರಿಗೆ ಸಾಲವನ್ನು ಕೊಡುತ್ತಾರೆ. ಒಂದೊಂದಕ್ಕೂ ಹೊಂದಿಕೆಯಾಗುತ್ತದೆಯೋ

ಎನ್ನುವುದನ್ನು ನಾವು ಸ್ವಲ್ಪ ವಿಚಾರಮಾಡಿ ತೀರ್ಮಾನಕ್ಕೆ ಬರುವುದು ಒಳಿತು ಎಂದು ಕಾಣುತ್ತದೆ. ಮತ್ತೆ ಸೆಕ್ರೆಟರಿ ಸರ್ಕಾರಿ ನೌಕರರಾಗಿರಬೇಕಾದದ್ದು ಅವಶ್ಯಕವಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಈ ಅಭಿಪ್ರಾಯ ಸರಿಯೇ ಅಥವ ತಪ್ಪೇ ಎಂದು ನಾನು ಯೋಚನೆ ಮಾಡುತ್ತಿದ್ದೇನೆ. 'Need not necessarily be an officer of the Government' ಎಂದಿದೆ. ಅವರ ಕೈತಪ್ಪಿ ಹೋದರೆ ಬೋರ್ಡ್ ಏನಾಗುತ್ತದೆಯೋ ಎಂಬ ಭೀತಿ ಒಂದು ಕಡೆ ಇದ್ದರೆ, ಅವರ ಕೈಗೆ ಹೋದರೆ ಏನಾಗುತ್ತದೆಯೋ ಎಂಬ ಭಯ ಮತ್ತೊಂದು ಕಡೆ ಇದೆ. ಆದುದರಿಂದ ತಾವು ಈ ಬಗ್ಗೆಯೂ ಸಹ ಸ್ವಲ್ಪ ಹೆಚ್ಚು ಗಮನ ಕೊಡಬೇಕು. ನೀವು ಈ ಮಸೂದೆಯನ್ನು ಪಾಸ್ ಮಾಡಿಸಲೇಬೇಕೆಂದು ಹೊರಟಿರುವುದರಿಂದ ನಾವು "No" ಎಂದು ಎಷ್ಟು ಹೇಳಿದರೂ ಸಹ ಈ ಮಸೂದೆಯು ಪಾಸಾಗುತ್ತದೆ. ಆದುದರಿಂದ ಇಲ್ಲಿ ನಾವು ಏನೇನು ಅಭಿಪ್ರಾಯಗಳನ್ನು ಸೂಚಿಸಿದ್ದೇವೆಯೋ ಅವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಈ ಬೋರ್ಡ್ ಕೆಲಸಮಾಡುತ್ತದೆಂದು ನಾನು ಹಾರೈಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು.—ಷೆಡ್ಯೂಲಿನ ಐದನೇ ಐಟಂನಲ್ಲಿ 'Cottage Leather Industry' ಎಂದಿದೆ. ಇದರಲ್ಲಿ Leather Tanning Industry ಸೇರಿದೆಯೇ ಎಂಬುದನ್ನು ಹೇಳಬೇಕು.

ಅಧ್ಯಕ್ಷರು.—ಸೇರಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಖಾದಿ ಬೋರ್ಡ್ ರಚನೆ ಮಾಡುವ ವಿಚಾರದಲ್ಲಿ ನಮ್ಮ ಎದುರು ಪಕ್ಷದ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ಶ್ರೀಮಾನ್ ಇಮಾಂ ಸಾಹೇಬರಿಗೆ ಸೋಷಿಯಲಿಸ್ಟ್ ಪಕ್ಷ, ಪ್ರಜಾ ಸೋಷಿಯಲಿಸ್ಟ್ ಪಕ್ಷ, ಈ ಪಕ್ಷಗಳ ನಿಲುವಾದರೂ ಏನೆಂಬುದು ಗೊತ್ತಿದೆಯೇ ಎನ್ನುವುದು ಅರ್ಥವಾಗುತ್ತಿಲ್ಲ. ಯಾಕೆಂದರೆ ಇವರು ಖಾದಿಯ ವಿಚಾರವಾಗಿ ಬಹಳ ದೊಡ್ಡ ಚರ್ಚೆಯನ್ನೇ ಮಾಡಿ ಖಾದಿ ಹಾಕಿರುವವರೆಲ್ಲರೂ ಕಳ್ಳರು ಎಂದು ಮಾತನಾಡಿದರು. ಇವರು ಹೇಳುವುದು ಹೇಗಿದೆ ಎಂದರೆ 'ಕೋತಿ ಮೊಸರನ್ನು ತಿಂದು ಮೇಕೆ ಬಾಯಿಗೆ ಒರೆಸಿತು' ಎಂದ ಹಾಗಿದೆ. ಸಾಮಾನ್ಯವಾಗಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಯಾರು ಎಂಬುದು ಗೊತ್ತಿದೆ. ಅದರ ತತ್ವಗಳನ್ನು ಅನುಸರಿಸುವವರೂ ಮತ್ತು ಅದಕ್ಕೆ ಇರುವ ಬೆಂಬಲ ಸಹ ಗೊತ್ತಿದೆ. ಇವರು ಟೀಕೆ ಮಾಡುವ ಅರ್ಥ ಸಹ ಗೊತ್ತಿದೆ. ಇವರು ಟೀಕೆ ಮಾಡುವುದು ಸಾಮಾನ್ಯವಾದ ಪದ್ಧತಿಯಾಗಿದೆ. ಖಾದಿಯನ್ನು ಹಾಕುವವರಲ್ಲಿ ಯಾರೋ ಒಬ್ಬ ಕಳ್ಳ, ಸುಳ್ಳ, ಇರಬಹುದು. ಎಲ್ಲರೂ ಸತ್ಯವಂತರೇ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಮೈಸೂರು ದೇಶಕ್ಕೆ ಮಾತ್ರವಲ್ಲ ಇಡೀ ಇಂಡಿಯಾ ದೇಶಕ್ಕೇ ಮಹಾತ್ಮ ಗಾಂಧಿಯವರು ಮಾರ್ಗದರ್ಶಕರಾಗಿ ಸ್ವರಾಜ್ಯ ಸಂಪಾದನೆಗೆ ಖಾದಿಯ ಅಭಿವೃದ್ಧಿಯೂ ಒಂದು ಮಾರ್ಗವೆಂದು ಅದಕ್ಕೆ ಪ್ರೋತ್ಸಾಹಿಸಿದರು. ಇದರಿಂದ ಅನೇಕ ಸಂಸಾರಗಳಿಗೆ ಸಹಾಯವಾಯಿತು. ಆಗ ಕಾಂಗ್ರೆಸ್ಸಿಗೆ ಸೇರುವವರೆಲ್ಲರೂ ಖಾದಿಯನ್ನು ಹಾಕಲೇಬೇಕೆಂಬ ಒಂದು ನಿರ್ಬಂಧವನ್ನು ಸಹ ಹಾಕಿದರು. ಸಾಮಾನ್ಯವಾಗಿ, ಇಡೀ ಇಂಡಿಯಾ ದೇಶದಲ್ಲಿ ಎಷ್ಟು ಕೋಟಿ ರೂಪಾಯಿಗಳ ಖಾದಿ ಉತ್ಪತ್ತಿಯಾಗುತ್ತಿದೆ, ಎಷ್ಟು ಸಂಸಾರಗಳು ಖಾದಿಯಿಂದ ಜೀವನ ಮಾಡುತ್ತಿವೆ ಎಂಬುದನ್ನು ನಾವು ನೋಡಬೇಕು. ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯೊಳಗೆ ಅಜ್ಜಂಪುರ ಖಾದಿ ಕೇಂದ್ರವಿದೆ. ಸುಮಾರು ಹತ್ತು ಸಾವಿರ ಜನ ಅದರಿಂದ ಜೀವನ ಮಾಡುತ್ತಿದ್ದಾರೆ. ಈಗ ಅದು ಜಿಲ್ಲಾಬೋರ್ಡಿನಲ್ಲಿರತಕ್ಕ ಒಂದು ಖಾದಿ ಕೇಂದ್ರವಾಗಿದೆ. ಜಿಲ್ಲಾಬೋರ್ಡಿನಲ್ಲಿ ಹಣವಿಲ್ಲದೆ ಈ ಖಾದಿ ಕೇಂದ್ರದ ಕೆಲಸವು ನಿಂತಿದೆ. ಇದರಿಂದ ಒಂದು ಸಾವಿರ ಬಡ ಸಂಸಾರಗಳಿಗೆ ಅನಾನುಕೂಲವಾಗಿದೆ. ಯಾಕೆಂದರೆ ಯಾವಾಗಲೂ ಪರದೇಶದ ಬಟ್ಟೆಯ ಮೇಲೆ ವ್ಯಾಮೋಹ ಬಂದು ಒಳ್ಳೆಯ ಮಿಲ್ ಬಟ್ಟೆ ಉಟ್ಟುಕೊಂಡಿರುವ ಜನ ಖಾದಿಯನ್ನು ಮುಟ್ಟದೆ ಇರುವ ಜನ, ಇಂಥವರಿಗೆ ಖಾದಿಯ ಬೆಲೆ ಏನು ಗೊತ್ತಾಗುತ್ತದೆ?

ಶ್ರೀ ಗೋಪಾಲಗೌಡರು ಕೆಲವು ವಿಚಾರಗಳನ್ನು ಹೇಳಿದರು. ಮೊದಲು ಕಾಂಗ್ರೆಸ್, ಆಮೇಲೆ ಪಿ.ಎಸ್.ಪಿ ಅನಂತರ ಕಮ್ಯೂನಿಸ್ಟ್ ಹೀಗೆ ವರ್ಷಕ್ಕೊಂದೊಂದು ಪಕ್ಷಕ್ಕೆ ಸೇರುತ್ತಾ ಸ್ಥಿರಬುದ್ಧಿಯಿಲ್ಲದಿದ್ದರೆ ಖಾದಿಯ ಬೆಲೆ ಹೇಗೆ ಗೊತ್ತಾಗುತ್ತದೆ? ಒಂದು ವಾದ ಮಾಡಬೇಕಾದರೆ ಅಥವಾ ಟೀಕೆ ಮಾಡಬೇಕಾದರೆ ಸ್ವಲ್ಪ ಅರ್ಥಗರ್ಭಿತವಾಗಿ ಲೋಪದೋಷಗಳಿದ್ದರೆ ತಿದ್ದಿಕೊಂಡು ಮಾಡುವುದು ಉಚಿತ. ಸಾಮಾನ್ಯವಾಗಿ ಮೈಸೂರು ದೇಶದಲ್ಲೇ ಅಲ್ಲ, ಇಂಡಿಯಾ ದೇಶದಲ್ಲೆಲ್ಲಾ ಖಾದಿಯನ್ನು ಉಪಯೋಗಿಸುವ ಜನ ದೇಶಕ್ಕಾಗಿ ಎಷ್ಟೋ ಕಷ್ಟಪಟ್ಟಿದ್ದಾರೆ. ಖಾದಿ ಧರಿಸದಿದ್ದರೂ ಕಷ್ಟಪಟ್ಟಿರಬಹುದು. ಶ್ರೀ ಇಮಾಂ ಅವರು ಮತ್ತು ಶ್ರೀ ಸಿದ್ದಪ್ಪನವರು ಈ ದಿವಸ ಖಾದಿ ಹಾಕಿಲ್ಲ. ಶ್ರೀ ಮಾದಪ್ಪನವರು ಖಾದಿ ಬಟ್ಟೆ ಹಾಕಿದ್ದಾರೆ. ಖಾದಿ ಹಾಕಿದ ಮೇಲೆ, ಬಡಜನರು ನೂತು ಶ್ರಮಪಟ್ಟು ತಯಾರಿಸಿದ ಖಾದಿ ಧರಿಸಿದ ಮೇಲೆ, ಅದನ್ನು ಟೀಕೆ ಮಾಡುವುದಕ್ಕೆ ಹೇಗೆ ಬುದ್ಧಿ ಬರುತ್ತದೆ! ಬೋರ್ಡ್ ರಚನೆ ಮಾಡುವ ವಿಚಾರದಲ್ಲಿ ಸ್ವಲ್ಪ ಲೋಪದೋಷವಿರಬಹುದು. ಶ್ರೀ ಸಿದ್ದಪ್ಪನವರು ಮಂತ್ರಿಗಳಾಗಿದ್ದರು, ಶ್ರೀ ಇಮಾಂ ಅವರೂ ಸಹ ಮಂತ್ರಿಗಳಾಗಿದ್ದರು. ಶ್ರೀ ಇಮಾಂ ಅವರು ಟೀಕೆ ಮಾಡಿದ್ದು ನೋಡಿ ಬಹಳ ಆಶ್ಚರ್ಯವಾಗುತ್ತಿದೆ; ಅವರು ಶ್ರೀಮಂತರೆಂದು ಕಾಣುತ್ತದೆ. ಪ್ರಜಾ ಸೋಷಿಯಲಿಸ್ಟ್ ಪಕ್ಷ ಸೇರಿ ದೇಶಕ್ಕೆಲ್ಲಾ ಸಮನಾಗಿ ಹಂಚಿಕೆ ಮಾಡುತ್ತೇವೆಂದು ಹೇಳಿಕೊಂಡು ಶ್ರೀಮಂತರಾಗಿ ಎರಡು ಅಂತಸ್ತು ಮನೆ ಕಟ್ಟಿ ಬಡಜನರ ಉದ್ಯೋಗವಾದ ಖಾದಿ ಕೈಗಾರಿಕೆ ವಿಷಯದಲ್ಲಿ ಟೀಕೆಮಾಡುವವರು ನಮ್ಮ ದೇಶದಲ್ಲಿದ್ದಾರೆ ಎಂದು ಸಂಕಟವಾಗುತ್ತಿದೆ. ಖಾದಿ ಮಹತ್ವವನ್ನು ಮೈಸೂರು ದೇಶದಲ್ಲೂ, ಇಂಡಿಯಾ ದೇಶದಲ್ಲೂ ಮಹಾತ್ಮ ಗಾಂಧಿ ಮತ್ತು ಅನೇಕರು ಅನೇಕ ಸಾರಿ ಹೇಳಿದ್ದಾರೆ. ಖಾದಿಯಿಂದ ಅನೇಕ ಬಡಜನರು ಜೀವನ ಮಾಡುತ್ತಾರೆ. ಈ ದಿವಸ ಖಾದಿ ಬೋರ್ಡ್ ರಚನೆ ಮಾಡಿದರೆ ಲಕ್ಷಾಂತರ ಮಂದಿಗೆ ದೇಶದಲ್ಲಿ ಜೀವನ ಮಾಡಲು ಸರ್ಕಾರ ಅನುಕೂಲ ಮಾಡಿದಹಾಗಾಗುತ್ತದೆ. ನಾವು ಕೊಡುವ ಸಹಾಯವಲ್ಲದೆ ಇಂಡಿಯಾ ಸರ್ಕಾರದವರು ಕೋಟ್ಯಾಂತರ ರೂಪಾಯಿ ಕೊಟ್ಟಿದ್ದಾರೆ. ಶ್ರೀಮಂತರಿಗೆ ಬೆಂಬಲ ಕೊಟ್ಟಿರುವ ಸೋಷಿಯಲಿಸ್ಟ್ ಪಕ್ಷ ಚುನಾವಣೆ ಸಮೀಪಿಸುತ್ತಿದೆಯೆಂದು ಟೀಕೆ ಮಾಡಬಹುದು, ಹಾಗೆ ಮಾಡದಿದ್ದರೆ ಅವರಿಗೆ ಓಟು ಬರುವುದಿಲ್ಲ. ಟೀಕೆ ಮಾಡಿ ಕಾಂಗ್ರೆಸ್ ಸರ್ಕಾರವನ್ನು ಅಲ್ಲಗಳೆದರೆ 4 ಓಟು ಜಾಸ್ತಿ ಬರಬಹುದೆಂದು ಏನಾದರೂ ಹೇಳಬಹುದೇ ವಿನಾ ಇನ್ನೇನೂ ಇಲ್ಲ. ಖಾದಿ ದೂಷಣೆ ಮಾಡುವುದು ಸರಿಯಲ್ಲ, ಅದು ಪವಿತ್ರವಾದುದು. ಇಂಡಿಯಾ ದೇಶದ ಎಲ್ಲಾ ಬಡ

(ಶ್ರೀ ವೈ. ಎಂ. ಚಂದ್ರಶೇಖರಯ್ಯ)

ಕುಟುಂಬಗಳವರಿಗೂ ಅನುಕೂಲವಾಗುವ ಖಾದಿ ಕೈಗಾರಿಕೆಗೆ ಬೆಂಬಲ ಕೊಡಬೇಕಾದದ್ದು ಅತ್ಯಗತ್ಯ. ಇಡೀ ಭಾರತದಲ್ಲಿ ಖಾದಿ ಬಟ್ಟೆ ತಯಾರಿಕೆ ಹೆಚ್ಚಲು ಖಾದಿ ಬಟ್ಟೆ ಹೆಚ್ಚಾಗಿ ಹಾಕಬೇಕು. ಒಬ್ಬ ರೈತ ಸ್ವಂತವಾಗಿ ಬತ್ತ ಬೆಳೆದರೆ ತನ್ನ ಗದ್ದೆಯಲ್ಲಿ ಬೆಳೆದದ್ದು ಎಂದು ಬಹಳ ಸಂತೋಷಪಡುತ್ತಾನೆ. ಅದೇ ರೀತಿ ಖಾದಿ ಬಟ್ಟೆ ತಯಾರಿಸಿ ಹಾಕಿಕೊಂಡರೆ ಸಂತೋಷವಾಗುತ್ತದೆ, ಮಹಾತ್ಮ ಗಾಂಧಿಯವರ ನೆನಪು ಬರುತ್ತದೆ. ಆದ್ದರಿಂದ ಖಾದಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಹಿಂದೆ ಈ ಮಸೂದೆಯನ್ನು ಮಂಡಿಸಿದಾಗ ನಾನು ಕೆಲವು ವಿಚಾರ ಹೇಳಿದ್ದೆ. ಈಗ ಸೆಲೆಕ್ಟ್ ಕಮಿಟಿಗೆ ಈ ಮಸೂದೆ ಹೋಗಿ ಬಂದ ಮೇಲೂ ಸಹ ಹಿಂದೆ ಈ ವಿಚಾರದಲ್ಲಿ ಏನು ಹೇಳಿದ್ದೆನೋ ಅದನ್ನೇ ಹೇಳಬೇಕಾಗಿದೆ : ಯಾವ ವಿಧವಾದ ವಿವರಣೆಯನ್ನು ಸಹ ಕೊಟ್ಟಿಲ್ಲ. ಮೊದಲನೆಯದಾಗಿ ಈ ಮಸೂದೆ ತಂದಿರುವ ಉದ್ದೇಶ ಖಾದಿಗೆ ಪ್ರೋತ್ಸಾಹ ಕೊಡಬೇಕೆಂಬುದು. ಪ್ರೋತ್ಸಾಹ ಕೊಡಬೇಕಾದ್ದು ಸರಿಯೇ ಆದರೆ ಯಾವ ದೃಷ್ಟಿಯಿಂದ ? ಖಾದಿಗೆ ಇರುವ ಪವಿತ್ರತೆಯ ದೃಷ್ಟಿಯಿಂದಲೇ ? ಆರ್ಥಿಕ ದೃಷ್ಟಿಯಿಂದಲೇ ? ಇದನ್ನು ಪರಿಶೀಲಿಸಬೇಕು. ಹಿಂದೆ ಖಾದಿಯ ವಿಚಾರದಲ್ಲಿ ನಾವು ಯಾವ ಭಾವನೆಯನ್ನಾದರೂ ತಾಳಿರಬಹುದು. ಈ ದಿವಸ ಕಾನೂನು ಮೂಲಕ ವ್ಯವಹಾರ ಮಾಡುವಾಗ ಮುಖ್ಯವಾಗಿ ಆರ್ಥಿಕ ವಿಚಾರವಾಗಿ ಮಾತನಾಡಬೇಕಾದದ್ದು ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಅನೇಕರು ಅನೇಕ ವಿಧವಾಗಿ ವಾದ ಮಾಡಿದ್ದಾರೆ. ಶ್ರೀ ಚಂದ್ರಶೇಖರಯ್ಯನವರು ಖಾದಿ ಹಾಕುವವರು ಬಡವರೆಂದು ಹೇಳಿದರು. ಆ ದೃಷ್ಟಿಯಿಂದ ಹೇಳುತ್ತಿಲ್ಲ. ಖಾದಿ ಹಾಕುವುದು ಬಿಡುವುದು ಇಚ್ಛಾನುಸಾರ ನಡೆಯತಕ್ಕದ್ದು, ಪವಿತ್ರತೆಗೆ ಗಮನ ಕೊಡಬೇಕಾದರೆ ಅದಕ್ಕಾಗುವಷ್ಟು ಹಣ ತರಬೇಕು. ದೇಶದಲ್ಲಿರುವ ಎಲ್ಲರೂ ಖಾದಿ ಧರಿಸಬೇಕೆಂದು ಮಾಡಿದರೆ ಅದಕ್ಕೆ ಆಕ್ಷೇಪಣೆಯಿಲ್ಲ, ಒಪ್ಪುತ್ತೇನೆ. ಆದರೆ ಖಾದಿಯೆಂಬುದು ಬರೀ ಲಾಂಛನ ; ಆ ಹೆಸರಿನಲ್ಲಿ ಬೇಕಾದವರಿಗೆ ಸರ್ಕಾರದ ಬೊಕ್ಕಸದಿಂದ ಸಹಾಯ ಮಾಡುವುದಾದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈಗ ಖಾದಿ ಹಾಕುವವನಿಗೆ ಮಾತ್ರ ಹಣ ಗಳಿಸಲು ಅವಕಾಶ ಕೊಟ್ಟು, ನೀತಿವಂತನಾಗಿ ದೇಶ ಸೇವೆ ಮಾಡಿ ದೇಶಕ್ಕಾಗಿ ಕಷ್ಟಪಟ್ಟಿರುವವರನ್ನು ಅಲಕ್ಷ್ಯ ಮಾಡಿದರೆ ಖಂಡಿತ ವಿರೋಧಿಸುತ್ತೇನೆ. ಶ್ರೀ ವೆಂಕಟಪ್ಪನವರು ಹೇಳಿದ ಹಾಗೆ, ಖಾದಿ ಕಾಂಗ್ರೆಸ್ಸಿನವರಿಗೇ ಅಲ್ಲದೆ ಬಾಕಿಯವರಿಗೂ ಸೇರಿದೆ. ಆ ತರಹ ಭಾವನೆಯಿದ್ದರೆ ಒಪ್ಪಬಹುದಾಗಿತ್ತು. ನಾನು ಹಿಂದೆ ಕಾಂಗ್ರೆಸ್ಸಿಗೆ ಸೇರದಿದ್ದರೂ ಖಾದಿ ಹಾಕುತ್ತಿದ್ದೆ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನಕ್ಕೆ ಬೊಂಬಾಯಿ ಮತ್ತು ಮದರಾಸು ಮುಂತಾದ ಕಡೆಗೆ ಹೋಗುತ್ತಿದ್ದೆ, ನಾಲ್ಕಾಣೆ ಕೊಟ್ಟು All India Congress ಸದಸ್ಯನೂ ಆಗಿದ್ದೆನೆಂದು ಕಾಣುತ್ತದೆ. ಈಚೆಗೆ ರಾಜಕೀಯದಲ್ಲಿ ಹೆಚ್ಚಾಗಿ ಭಾಗವಹಿಸಿದ ಮೇಲೆ ಖಾದಿಯ ವಿಚಾರದಲ್ಲಿ ನನಗೆ ಜುಗುಪ್ಸೆಯುಂಟಾಗಿರುವುದೂ ನಿಜ. ಪುನಃ ಖಾದಿಯ ಕಡೆಗೆ ವಾಲುವ ಹಾಗೆ ಆಗುತ್ತಿದೆ. ಆದರೆ ಖಾದಿಗೆ ಸರಿಯಾದ ಮಾನ್ಯತೆ ದೊರೆಯಬೇಕು. ಸನ್ಯಾಸಿಯ ಹಾಗೆ ಲಾಂಛನಕ್ಕಾಗಿ ಖಾದಿ ಬಟ್ಟೆ ಹಾಕಿ ದೇಶಸೇವೆಗೆ ಖಾದಿಯೇ ಲಾಂಛನವೆಂದು ಹೇಳುತ್ತಾರೆ. ರಾವಣ ಸನ್ಯಾಸಿಯ ಹಾಗೆ ಖಾದಿ ಧರಿಸಿರುವವರು ಹೊಂದಿರುವ ದುರ್ಭಾವನೆಗಳನ್ನು ಶ್ರೀ ಗೋಪಾಲಗೌಡರು ಬಹಳವಾಗಿ ವಿವರಿಸಿದ್ದಾರೆ. ಒಂದೊಂದು ವೇಳೆ ಆ ಭಾವನೆ ಬಂದು ಹಿಂದೆ ಮುಂದೆ ನೋಡಬೇಕಾಗುತ್ತದೆ. ಈ ಮಸೂದೆಯನ್ನು ಯಾವ ಉದ್ದೇಶದಿಂದ ತಂದರೆಂಬುದು ಮುಖ್ಯವಾದದ್ದು. ಖಾದಿ ಹಾಕುವವರಿಗೆ ಈ ಕಮಿಟಿಯಲ್ಲಿ ಸದಸ್ಯ ಸ್ಥಾನ ಕೊಡಬೇಕೆಂದು ಹೇಳುತ್ತಾರೆ. ಇದರಿಂದ ಕಾಂಗ್ರೆಸ್ಸಿನವರಿಗೆ ಅವಕಾಶ ಜಾಸ್ತಿ, ಬೋರ್ಡಿಗೆ ಅಧಿಕಾರ ಸಾಲದು, ಸ್ವತಂತ್ರವಾಗಿ ಬೋರ್ಡು ತನ್ನ ಇಚ್ಛಾನುಸಾರ ನಡೆಯುವ ಹಾಗಿಲ್ಲ, ತಪ್ಪು ಮಾಡಿದರೆ ಸರ್ಕಾರ ಅಂಥವರನ್ನು ತೆಗೆದು ಹಾಕಲು ಅದಕ್ಕೆ ಅಧಿಕಾರವಿದೆ. ಹೀಗೆ ಬೋರ್ಡಿಗೆ ಸ್ವಾತಂತ್ರ್ಯವಿಲ್ಲದಿರುವಾಗ ಹೇಗೆ ಒಪ್ಪುವುದು ? ಇದರಿಂದ ನಿಜವಾಗಿಯೂ ಈ ಮಸೂದೆ ಹಿಂದೆ ಒಂದು ಉದ್ದೇಶವಿದೆಯೆಂದು ಭಾಸವಾಗುತ್ತದೆ. ಈಗ ಹೊರಗಡೆ ಖಾದಿ ಕೆಲವರು ಹಾಕುತ್ತಿದ್ದರೂ ಅವರ ಮನೆಯೊಳಗಿರುವ ಸೀರೆ, ಬಟ್ಟೆ, ಕೋಟು, ಪೇಟ ಇವೆಲ್ಲಾ ಖಾದಿಯ ಬಟ್ಟೆಗಳಲ್ಲ. ಯಾರಾದರೂ ಅದು ಸರಿಯಲ್ಲವೆಂದು ಎದೆ ಮುಟ್ಟಿಕೊಂಡು ಹೇಳಲಿ, ನೋಡೋಣ. ಮೀಟಿಂಗಿಗೆ ಬರುವಾಗ ಮಾತ್ರ ಖಾದಿ ಹಾಕಿದರೆ ಸಾಕೆ? ನಿಜವಾದ ಖಾದಿ ಭಕ್ತ ಯಾವಾಗಲೂ ಖಾದಿಯನ್ನೇ ಹಾಕಬೇಕು. ಹಿಂದೆ ಮಹಾತ್ಮ ಗಾಂಧಿಯವರೂ ಸಹ ಇದನ್ನೇ ಹೇಳಿದ್ದರು. ಸಮಿತಿಯ ರಚನೆ ಕೂಡ ಸರಿಯಾಗಿ ಕಾಣುತ್ತಿಲ್ಲ. "Ceases to reside in the State of Mysore" ಅಂದರೆ ಅರ್ಥವೇನು? ನಾಲ್ಕು ದಿವಸ ಊರಿನಲ್ಲಿರಲಿಲ್ಲವೆಂದು ಹೇಳಿದರೆ ಅದರ ಅರ್ಥವೇನು ? ಈಗ ಇದರಲ್ಲಿ ಮೇಕೆ ಯಾರು

3 P.M.

ಕೋತಿ ಯಾರು ಎಂಬುದನ್ನು ತಾವೇ ತೀರ್ಮಾನ ಮಾಡಬೇಕಾಗಿದೆ. ಈಗ ಕಾಂಗ್ರೆಸ್ ಸರ್ಕಾರ ಮಿಲ್ ಬಟ್ಟೆಗಳ ಮೇಲೆ ಸುಂಕ ಹಾಕಿದೆ. ಏತಕ್ಕೆ ಹಾಗೆ ಸುಂಕ ವಿಧಿಸಿದ್ದಾರೆಂದರೆ ಆ ಮಿಲ್ ಮಾಲೀಕರುಗಳಿಗೆ ಒಂದು ಪ್ರೋತ್ಸಾಹ ಕೊಡಬೇಕೆಂದು ಅವರೂ-ಇವರೂ ಸೇರಿ ಮಾತನಾಡಿಕೊಂಡು ಹೀಗೆ ಮಾಡಿದ್ದಾರೆ. ಯಾರೋ ಒಬ್ಬರು ಹೀಗೆಯೇ ಮಾತನಾಡುತ್ತ ಈ ಸುಂಕವನ್ನು ಆ ಅಹಮದಾಬಾದ್ ಮಿಲ್ಲಿನವರ ಮೇಲೆ ಹಾಕಿದ್ದಾರೆಂದು ಹೇಳಿದರು. ಆದರೆ ಈ ದಿವಸ ಆ ಸುಂಕವನ್ನು ತೆರುತ್ತಿರುವವರು ಯಾರು ? ಆ ಸಾಮಾನುಗಳನ್ನು ಬಳಸುತ್ತಿರುವ ಜನರು ತೆರುತ್ತಿದ್ದಾರೆ. ಹಾಗೆಯೇ ಈ ಸಂದರ್ಭದಲ್ಲೂ ಕೂಡ ಬಡವರ ಉಪಯೋಗಕ್ಕೆಂದು ತಮ್ಮ ಅನುಕೂಲಕ್ಕಾಗಿ ಇಂಥ ಉದ್ಯಮಗಳಿಗೆ ಸರ್ಕಾರದಿಂದ ಸಬ್‌ಸಿಡಿ ಕೊಡುವುದರಲ್ಲಿ ಬಡವನಿಗೆ ಆಗತಕ್ಕ ಪ್ರಯೋಜನವೇನು? ದಿವಸಕ್ಕೆ 3 ರೂಪಾಯಿಗಳ ಕೂಲಿ ಸಂಪಾದನೆ ಮಾಡತಕ್ಕ ಮನುಷ್ಯನಿಗೆ ದಿನಕ್ಕೆ 3 ಆಣೆ ಕೊಟ್ಟರೆ ಇದೊಂದು ಅವನಿಗೆ ದೊಡ್ಡ ಉಪಕಾರವೇ ? ಅಷ್ಟು ಕಡಮೆ ಕೂಲಿ ತೆಗೆದುಕೊಂಡು ಆತ ಹೇಗೆ ಜೀವನ ಮಾಡಬೇಕು ? 3 ರೂಪಾಯಿಗಳನ್ನು ಕೊಟ್ಟರೂ ಆತನಿಗೆ ಜೀವನ ಆಗುವುದಿಲ್ಲ. ಆ ಕೆಲಸಗಾರರು ಸಬ್‌ಸ್ಕ್ರಿಪ್ಷನ್ ವಗೈರೆ ಬೇರೆ ಕೊಡಬೇಕಾಗಿದೆ. ಉದ್ಯಮಗಳಿಗೆ ಸರ್ಕಾರದಿಂದ ಸಬ್‌ಸಿಡಿ ಕೊಟ್ಟರೆ ಏನು ಆ ಬಡವರಿಗೆ ಆಗತಕ್ಕ ಪ್ರಯೋಜನ ? ಇದು ಅರ್ಥವಿಲ್ಲದ ಹೇಳಿಕೆ. ಹಾಗೆ ನಿಮಗೆ ಖಾತ್ರಿ ಇದ್ದರೆ ದೇಶದಲ್ಲಿರತಕ್ಕವರೆಲ್ಲರೂ ಈ ಖಾದಿಯನ್ನೇ ಹಾಕುವ ಹಾಗೆ ಮಾಡಿ. ಮಿಲ್ಲುಗಳಲ್ಲಿ ತಯಾರಾಗುವ ಬಟ್ಟೆಯನ್ನೆಲ್ಲಾ ಹೊರಗಡೆಗೆ ಕಳುಹಿಸಿ. ಹಾಗೇಕೆ

ಮಾಡಬೇಕು ? ಹೀಗೆ ತಮ್ಮ ಹಿತಕ್ಕಾಗಿ ಇವೆಲ್ಲವನ್ನೂ ಮಾಡಿಕೊಂಡು ಸಾಮಾನ್ಯ ಮನುಷ್ಯನಿಗೆ ಅನ್ಯಾಯ ಮಾಡುವುದು ಸರಿಯಲ್ಲ. ನಾನು ಆ ದಿವಸ ಏನೇನು ವಿಷಯಗಳನ್ನು ವಿಮರ್ಶೆ ಮಾಡಬೇಕೆಂದು ಕೇಳಿದ್ದೆನೋ ಅವುಗಳಿಗೆ ಒಂದಕ್ಕೂ ಉತ್ತರವಿಲ್ಲ. ಈ ಮೇನೇಜ್‌ಮೆಂಟ್ ಒಂದನ್ನು ಮಾತ್ರ ಬದಲಾವಣೆ ಮಾಡಿದ್ದಾರೆ. ತಾವು ಇಲ್ಲಿ ಆ ಛೇರ್ಮನ್ನರ ಅಧಿಕಾರವೇನೆಂಬುದರ ಬಗ್ಗೆ ಹೇಳುತ್ತಾ ಅವರಿಗೆ 10 ಸಾವಿರ ರೂಪಾಯಿಗಳ ವರೆಗೂ ಖರ್ಚು ಮಾಡುವ ಅಧಿಕಾರವಿದೆ ಎಂದು ತಿಳಿಸಲಾಗಿದೆ. ಹೀಗೆ ಅವರು ಮಾಡತಕ್ಕ ಖರ್ಚು ವೆಚ್ಚಗಳ ಮೇಲೆ ಈ ಶಾಸನ ಸಭೆಯವರ ಅಧಿಕಾರವಿರುವುದಿಲ್ಲ. ಮೇಲಾಗಿ ಆ ಬೋರ್ಡಿನಲ್ಲಿ ಶಾಸನ ಸದಸ್ಯರೂ ಸಹ ಇರುವಂತಿಲ್ಲ. ಪ್ರಜಾತಂತ್ರದ ಚುನಾವಣೆ ಮೂಲಕ ಆ ಬೋರ್ಡಿನ ಸದಸ್ಯರನ್ನು ಆರಿಸಿದ್ದರೆ ನಾನು ಅದಕ್ಕೆ ಒಪ್ಪುತ್ತಿದ್ದೆನು. ಖಾದಿಗೆ ಪ್ರೋತ್ಸಾಹ ಕೊಡಬೇಕೆಂಬುದೇನೋ ಸರಿ. ಆದರೆ ಇಂಥಾ ಒಂದು ವ್ಯವಸ್ಥೆ ಕೇವಲ ತಮ್ಮ ಒಂದು ಆಡಳಿತ ವಿಸ್ತರಣೆಗೆ, ತಮ್ಮ ಪಕ್ಷದವರ ಅಥವಾ ಹಿಂಬಾಲಕರನ್ನು ಪ್ರೋತ್ಸಾಹಿಸಿ ಅವರ ಆರ್ಥಿಕಾಭಿವೃದ್ಧಿಗಾಗಿ ಮಾಡುತ್ತಿರುವುದನ್ನು ನಾವು ಖಂಡಿತ ಒಪ್ಪಲಾರೆವು.

ಇನ್ನು ಈ ಕೈಗಾರಿಕೆಗಳ ವಿಚಾರ ಹೇಳುವುದಾದರೆ, ಈ ಗೃಹಕೈಗಾರಿಕೆಗಳಲ್ಲಿ ಸ್ವಲ್ಪ ಆದಾಯ ತರತಕ್ಕಂಥ ಕೈಗಾರಿಕೆಗಳನ್ನು ಇದರಲ್ಲಿ ಸೇರಿಸಿ ಎಂದು ಕೇಳಿದ್ದೆವು. ಆದರೆ ಈ ಕಾಟೇಜ್ ಇಂಡಸ್ಟ್ರಿ ಎಂಬ ಕೈಗಾರಿಕೆಗಳಲ್ಲಿ ಬ್ಯಾಂಬೂ, ಎಣ್ಣೆಯ ಗಾಣ ಇತ್ಯಾದಿಗಳಿಂದ ಅಷ್ಟು ಅನುಕೂಲವಿಲ್ಲ. ಉಪಕರಣಗಳನ್ನು ತಯಾರು ಮಾಡುವ ಕೈಗಾರಿಕೆಯನ್ನು ಕೈಗೊಳ್ಳಬೇಕು. ಅಂಥ ಕೈಗಾರಿಕೆಗಳನ್ನು ಇದರಲ್ಲಿ ಸೇರಿಸಿದ್ದರೆ ಉತ್ತಮವಾಗಿತ್ತು. ಕೇವಲ ದಿನ ಒಂದಕ್ಕೆ ಒಂದಾಣೆ ಎರಡಾಣೆ ಕೂಲಿಗಳಿಸುವಂಥ ಕೈಗಾರಿಕೆಗಳು ಎಂದೂ ಉದ್ಧಾರವಾಗುವುದಿಲ್ಲ. ಕೇವಲ ಇವು ಪ್ರಸಾರಣೆಗೆ ಮಾತ್ರ ಅನುಕೂಲವಾಗಿರುತ್ತವಷ್ಟೆ. ಇಂಥ ಕೈಗಾರಿಕೆಗಳಿಂದ ಸಾಮಾನ್ಯ ಮನುಷ್ಯರ ಜೀವನದ ಮಟ್ಟ ಏರಲಾರದು; ಅವರ ಜೀವನವೂ ಉತ್ತಮಗೊಳ್ಳುವುದಿಲ್ಲ; ದೇಶದಲ್ಲಿ ಉತ್ಪಾದನಾ ಶಕ್ತಿಯೂ ಬೆಳೆಯುವುದಿಲ್ಲ. ಇಂಥ ಸ್ಪೂನ್‌ಫೀಡಿಂಗಿನಿಂದ ಏನೂ ಪ್ರಯೋಜನವಾಗುವುದಿಲ್ಲ. ಇದು ಕೇವಲ ತಾವು ಹೇಳುತ್ತಿರುವಂಥಾ ಒಂದು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಗುತ್ತದೆಯೇ ಹೊರತು ಸೋಷಿಯಲ್ ಇಂಪ್ರೂವ್‌ಮೆಂಟಾಗುವುದಿಲ್ಲ. ಆದ್ದರಿಂದ ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ.

The House rose for Lunch at Six Minutes past Three of the Clock and reassembled at Thirty-five Minutes past Three of the Clock.

[MR. SPEAKER, in the Chair.]

Sri B. NARAYANASWAMY (Mysore City South).—Mr. Speaker, Sir, it is unfortunate that the members of the P.S.P. have not done service to the khadi and the khadi movement. Sir, to speak ill of khadi or khadi movement, in my opinion, is unpatriotic. Today khadi has been a national movement and it is not the concern of one particular organisation. It is a concern of the entire public of India. As such the Hon'ble Leader of the Opposition has offered certain disparaging remarks about khadi and khadi movement.

Sri J. MOHAMED IMAM.—Not about khadi, but abont the Khadi Board.

Sri B. NARAYANASWAMY.—It is unfortunate that the Opposition has failed in its duty to have not given that amount of co-operation that was very necessary during the discussion of this Bill. I thought that this Bill would be passed unanimously without the least opposition. Sri Imam has taken out one sub-clause and has given room for so much of discussion where there was no room for any discussion at all. After the report that has come out of the Select Committee, the Bill has been improved a great deal. As a matter of fact the Select Committee has given a good deal of definitions to the original Bill.

As regards the constitution of the Board and finances of the Board, they have definitely stated the number of the members of the Board and also the period they are going to serve. My humble submission to this House is that this Bill has come out of the Select Committee fully examined and they have filled in all the lacuna that were found in the original Bill. Now they have added some new clauses to the Bill which have given a correct shape to the Bill. As such whatever remarks that have been offered by the opposition do not carry any sense or meaning.

Sir, so far as the place of khadi is concerned, it is an accepted fact that it has no political or any other colour. It is a movement that is to be encouraged and given fillip by all the citizens of the country. To-day if the conditions of the poor man, about to whom the Opposition speaks so much with solicitude, has to be improved and if unemployment is to be solved, it is definitely through this khadi and khadi movement alone.

(SRI B. NARAYANASWAMY)

Sir, my friend Sir. Gopala Gowda, who is also a wearer of khadi, began to speak with bad taste about khadi and those who wear khadi. I wish he had not said certain things which, I do not use any harsh words, I could only say that a man of culture would not have used such words. I know, Sir, that a true devotee of khadi is the only person who could really serve the country at this juncture. As a matter of fact, khadi is the badge of service and it is only an astute khadi wearer who could proclaim before this world that they are going to serve the people. They criticise the khadi wearer because they belong to a different political organisation. It is very strange that the Leader of the Opposition and the Deputy Leader of the Opposition who are members of the P.S.P. Party, whom a great leader like Acharya Kripalani, who is a pucca Gandhite, who is a great devotee of Gandhi, is leading them are betraying him today. They are not following the tenets that have been put before them by Acharya Kripalani. Even Ashok Mehta and Dr. Manohar Lohia, all these gentlemen are today habitual wearers of khadi. They are exploiting the fair name of Acharya Kripalani Ashok Mehta and Dr. Manohar Lohia. Whatever remarks that have been offered by the Opposition members so far, have not been the remarks on the merits of this Bill, but just to discredit the political organisation—the ruling party, before the public. People who have heard their speeches would certainly not approve of their speeches. I hope the speeches made by my friend Sri Y. M. Chandrasekhariah and Smt. Bellary Siddamma would create a good deal of impression on the minds of the Leader of the Opposition and the Deputy Leader and I am sure, from tomorrow they will convert to khadi and I hope that they will revise their opinion about khadi and the wearers of khadi.

Sir, so far as the merits of the Bill are concerned, I have already said that the Bill has been definitely improved after it has emerged from the Select Committee and I congratulate the members of the Select Committee for having brought forth a very comprehensive Bill; and as such, Sir, this Bill has to become an enactment. What I request the Government is, there is no use in simply putting it in Statute Book, but they should give effect to this enactment as speedily as possible, so that the objects of this Bill or the enactment should be translated into action.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯಅಧ್ಯಕ್ಷರೇ, ಖಾದಿ ಮತ್ತು ಗ್ರಾಮಕೈಗಾರಿಕೆಗಳ ಮಸೂದೆಯ ಮೇಲೆ ಶ್ರೀಮಾರ್ಕ್ ಇಮಾಂ ಅವರು ಮತ್ತು ಇನ್ನೂ ಕೆಲವರು ಮಾತನಾಡಿರುವುದನ್ನು ನೋಡಿ ನನಗೂ ಒಂದೆರಡು ಮಾತುಗಳನ್ನಾಡಬೇಕೆಂಬ ಮನಸ್ಸುಬಂತು. ಅವರು 'Ambar charaka is a crude wooden frame of four spindles' ಎಂದುಹೇಳಿದರು. ಅದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಭಾರತದಲ್ಲಿ ಹತ್ತಿಯನ್ನು ಬೆಳೆದವರು ನಾವು. ಹತ್ತಿಯಿಂದ ನೂಲನ್ನುತೆಗೆದು ಬಟ್ಟೆಯನ್ನು ತಯಾರ್ಮಾಡಿ ಪ್ರಪಂಚಕ್ಕೆ ತೋರಿಸಿದವರು ಭಾರತೀಯರು ಹಿಂದೂಸ್ತಾನದಿಂದ ಪ್ರತಿಯೊಂದು ಕೈಗಾರಿಕೆಯನ್ನೂ ಬ್ರಿಟಿಷರು ತಮ್ಮ ದೇಶಕ್ಕೆ ತೆಗೆದುಕೊಂಡು ಹೋದುದಲ್ಲದೆ, ಹತ್ತಿಕೈಗಾರಿಕೆಗಳಲ್ಲಿ ನಿಪುಣರಾದವರ ಕೈಗಳನ್ನೂ ಸಹ ಕತ್ತರಿಸಿದರೆಂದು ನಾವು ಚರಿತ್ರೆಗಳಲ್ಲಿ ಓದಿದ್ದೇವೆ. ಹಿಂದೆ ನಮ್ಮ ದೇಶದಲ್ಲಿ ಹತ್ತಿಕೈಗಾರಿಕೆಯಲ್ಲಿ ಬಹಳ ನಿಪುಣರಾದವರು ಇದ್ದರು. ಶ್ರೀಮಾರ್ಕ್ ಇಮಾಂ ಅವರೇನೋ 'Ambar charaka is a crude frame of four spindles' ಎಂದುಹೇಳಿದರು. ಹಿಂದೂಸ್ತಾನದಲ್ಲಿಯೇ ಅಲ್ಲ, ಪ್ರಪಂಚದ ಇತರ ರಾಷ್ಟ್ರಗಳಲ್ಲಿಯೂ ಕೂಡ ಈ ಅಂಬರ್ ಚರಕವನ್ನು ಅನುಕರಣೆ ಮಾಡುತ್ತಾರೆ ಮತ್ತು ಈ ಕೈಗಾರಿಕೆಯನ್ನು ತೆಗೆದುಕೊಳ್ಳುವುದರಲ್ಲಿ ಅನುಮಾನವಿಲ್ಲವೆಂದು ನಾನು ಹೇಳುತ್ತೇನೆ. ಇದು ಖಾದಿ ಕೈಗಾರಿಕೆಯನ್ನು revolutionise ಮಾಡುವುದು. ಒಂದು ಬಟ್ಟೆ ಮಿಲ್ಲನ್ನು ತೆಗೆದುಕೊಂಡರೆ ನಾಲ್ಕು ಸಾವಿರ ಜನಗಳಿಗೆ ಇದರಿಂದ ಕೆಲಸವನ್ನೊದಗಿಸಬಹುದು. ನಾಲ್ಕು ಸಾವಿರ ಜನಗಳಿಗೆ ಕೆಲಸವನ್ನು ಕೊಡುವುದಕ್ಕೋಸ್ಕರ 50 ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಒಂದು ಮಿಲ್ಲನ್ನು ಮಾಡಬೇಕಾಗುತ್ತದೆ. ಅದಕ್ಕೆ ಬದಲು ಅದೇ 50 ಲಕ್ಷ ರೂಪಾಯಿಗಳ ಬಂಡವಾಳದಲ್ಲಿ 20 ಸಾವಿರ ಜನಗಳಿಗೆ ಅವರವರ ಮನೆಯಲ್ಲಿಯೇ ಉದ್ಯೋಗವನ್ನು ಕೊಡುವುದಕ್ಕೋಸ್ಕರ ಇದರಿಂದ ಅನುಕೂಲವಾಗುತ್ತದೆ. ಆದುದರಿಂದ ಅಂಬರ್ ಚರಕವನ್ನು ಮಿಲ್ ಮಾಲೀಕರುಗಳು, economists ಯಾಕೆ ವಿರೋಧ ಮಾಡುತ್ತಿದ್ದಾರೆಂದರೆ, ಅಂಬರ್ ಚರಕದ ಉಪಯೋಗ ಹೆಚ್ಚಿದಂತೆ ಅವರ ಕೈಗಾರಿಕೆ ನಿಂತುಹೋಗುವುದೆಂಬ ಭಯವಿರುತ್ತದೆ. ಕಾರಣ ಹತ್ತಿಯನ್ನು ಬೆಳೆಯುತಕ್ಕವನು ತಾನು ಬೆಳೆದ ಹತ್ತಿಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡು, ಅಂಬರ್‌ಚರಕದಿಂದ ದಾರವನ್ನು ತೆಗೆದು ಬಟ್ಟೆಯನ್ನು ತಯಾರ್ಮಾಡಿ ತನ್ನ ಮನೆಯವರಿಗೂ, ತನ್ನ ಗ್ರಾಮದಲ್ಲಿರುವ ಜನಗಳಿಗೂ ಮತ್ತು ಬಾಕಿ ಗ್ರಾಮಗಳವರಿಗೂ ಉದ್ಯೋಗವನ್ನು ಒದಗಿಸುವುದರಿಂದ ಅಷ್ಟುಹಣ ಮಿಲ್ ಮಾಲೀಕರುಗಳಿಗೆ ಹೋಗುವುದು ತಪ್ಪಿ ಆಯಾಭಾಗದ ಜನಗಳಿಗೆ ಸಹಾಯವಾಗುತ್ತದೆಂಬ ಉದ್ದೇಶದಿಂದ ಈ ಕೈಗಾ

ರಿಕೆಯನ್ನು ತಂದಿದ್ದಾರೆ. ಕಾಂಗ್ರೆಸ್‌ನಲ್ಲಿರತಕ್ಕ ಜನಗಳಿಗೆ ಬಟ್ಟೆ ಒದಗಿಸುವುದಕ್ಕೆ ಸಬ್ಸಿಡಿಯನ್ನು ಕೊಡಬೇಕೆಂದು ತಪ್ಪು ಅಭಿಪ್ರಾಯವನ್ನು ಶ್ರೀಮಾನ್ ಹುಚ್ಚೇಗೌಡರು ತಿಳಿದುಕೊಂಡಿದ್ದಾರೆ. ಆ ರೀತಿಯಲ್ಲಿ ಬದನವಾಳ, ತಿರುಪೂರು ಮುಂತಾದ ಖಾದಿಕೇಂದ್ರಗಳಿರುವ ಊರುಗಳಲ್ಲಿ ಇಡೀ ಗ್ರಾಮಕ್ಕೆ ಗ್ರಾಮವೇ ಖಾದಿಯನ್ನು ಹಾಕುತ್ತಿದೆ. ಅವರೇ ತಯಾರ್ಮಾಡುತ್ತಾರೆ. ಅಂಥವರಿಗೆ ಹೆಚ್ಚು ಬೆಲೆ ಬೀಳಬಾರದೆಂದು ಸಬ್ಸಿಡಿ ಹಣವನ್ನು ಕೊಡುವುದಕ್ಕೋಸ್ಕರ ಕೇಂದ್ರಸರ್ಕಾರ ಪ್ರಯತ್ನಮಾಡಿದೆ. ಇತರರಿಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಶ್ರೀಮಾನ್ ಕೃಷ್ಣಮಾಚಾರಿಯವರ ಅಭಿಪ್ರಾಯಗಳನ್ನು ತಿಳಿದಿದ್ದೀರಾ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶ್ರೀಮಾನ್ ಕೃಷ್ಣಮಾಚಾರಿಯವರ ಅಭಿಪ್ರಾಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಮೊದಲು ಅವರು ವಿರೋಧ ಮಾಡಿದರು, ಆನಂತರ ಅವರೇ ತಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಇವೊತ್ತು ಹೊರದೇಶಗಳಿಂದ ನಮ್ಮ ದೇಶಕ್ಕೆ ಬಟ್ಟೆ ಬರುತ್ತಿಲ್ಲ. 120 ಕೋಟಿ ರೂಪಾಯಿಗಳಷ್ಟು ಬಟ್ಟೆಯನ್ನು ಹೊರದೇಶಗಳಿಗೆ ಮಾರಾಟ ಮಾಡುತ್ತಿದ್ದೇವೆ. ನಮ್ಮಲ್ಲಿ spindlage ಜಾಸ್ತಿಯಾಗಬೇಕು. ಹಳ್ಳಿಯ ಜನಗಳಿಗೆ ಉದ್ಯೋಗವನ್ನೊದಗಿಸಬೇಕೆಂದು Second Five-year Plan ನಲ್ಲಿ ಆರುಸಾವಿರ ಕೋಟಿ ರೂಪಾಯಿ ಹಣವನ್ನೊದಗಿಸುವುದರಲ್ಲಿ ನೂರುಲಕ್ಷ ಪ್ರಜೆಗಳಿಗೆ ಉದ್ಯೋಗವನ್ನು ಕೊಡುತ್ತೇವೆಂದು ಹೇಳುತ್ತಾರೆ. ಖಾದಿ ಮತ್ತು ಗ್ರಾಮೋದ್ಯೋಗಿಗಳಿಗೆ ಕೊಡುವ 250 ಕೋಟಿ ರೂಪಾಯಿ ಹಣದಲ್ಲಿ, ಗ್ರಾಮಕೈಗಾರಿಕೆಗಳಿಂದ 50 ಲಕ್ಷ ಜನಗಳಿಗೆ ಉದ್ಯೋಗ ಕೊಡುತ್ತೇವೆಂದು ಹೇಳುತ್ತಾರೆ. ಅದೇ 57.50 ಕೋಟಿ ರೂಪಾಯಿಗಳ ಸಹಾಯದಿಂದ 50 ಲಕ್ಷ ಜನರಿಗೆ ಉದ್ಯೋಗ ಕೊಡುತ್ತೇವೆಂದು ಹೇಳುತ್ತಾರೆ. ಇದರಲ್ಲಿ ಯಾವುದು preferable ಎಂಬುದನ್ನು ನೋಡಬೇಕು. ಇಲ್ಲದೆ ಇದ್ದರೆ 250 ಕೋಟಿ ರೂಪಾಯಿಗಳನ್ನು ಗ್ರಾಮಕೈಗಾರಿಕೆಗಳಿಗೆ ಒದಗಿಸುವುದಕ್ಕೆ ಕಾರಣವಿಲ್ಲ. ನಾವುಗಳು ಪ್ರತಿಯೊಂದನ್ನು ನೋಡಿದರೂ ಕೂಡ ಗ್ರಾಮ ಸ್ವಾವಲಂಬನೆ ಬಹಳ ಮುಖ್ಯವಾದದ್ದು, ಒಂದು ಗ್ರಾಮದಲ್ಲಿ ಬಟ್ಟೆ ಕೊಳ್ಳುವುದಕ್ಕೆ ಹತ್ತುಸಾವಿರ ರೂಪಾಯಿ, ಮತ್ತು ಇತರ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಕೊಡುವ ಹಣ ಇವೆಲ್ಲ ಹಳ್ಳಿಯನ್ನು ಬಿಟ್ಟು ಹೊರಗೆಹೋಗಿ ಗ್ರಾಮಸ್ಥರಿಗೆ ಕೈಗಾರಿಕೆಯಿಲ್ಲದೆ ನಿರುದ್ಯೋಗಿಗಳಾಗುತ್ತಿರುವರು ಹಳ್ಳಿಯ ನಿರುದ್ಯೋಗವನ್ನು ನಿವಾರಣೆಮಾಡಲು, ಮಾರ್ಪಾಡಾಗಬೇಕೆಂಬ ಉದ್ದೇಶದಿಂದ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ತಂದಿದ್ದಾರೆ. ಈ ವಿಷಯಗಳೆಲ್ಲ ಸೋಷಿಯಲಿಸ್ಟ್ ಪಾರ್ಟಿಯವರಿಗೂ ಗೊತ್ತಿದೆ. ಅವರ ಮನಸ್ಸಿನಲ್ಲಿಯೂ ಇದೆ. ಕಾರಣಾಂತರಗಳಿಂದ, ಟ್ರೆಜರಿ ಬೆಂಚಿನಲ್ಲಿರುವವರು ಮಾಡಿದುದನ್ನು ಟೀಕೆ ಮಾಡಬೇಕೆಂದು ಹೇಳುತ್ತಾರೆಯೇ ಹೊರತು, ಮತ್ತೇನೂ ಇಲ್ಲ.

ದೇಶದಲ್ಲಿ ನೂಲು ತೆಗೆಯುವವರು ನೇಕಾರರು ಇವರುಗಳೂ ಕೂಡ ಖಾದಿಯನ್ನು ಧರಿಸುತ್ತಾರೆ. ಇತರರೂ ಹಾಕುತ್ತಾರೆ. ಕಾಂಗ್ರೆಸ್ಸಿನವರು ಮಾತ್ರ ಖಾದಿಯನ್ನು ಹಾಕುತ್ತಿಲ್ಲ. ಆದುದರಿಂದ ಕಾಂಗ್ರೆಸ್ಸಿನವರಿಗೆ ಮಾತ್ರ ಮೀಸಲಲ್ಲ. ಖಾದಿಹಾಕುವವರಿಗೆ, ಅದರಲ್ಲಿ ನಂಬಿಕೆ ಇರುವವರಿಗೆ ಮಾತ್ರ ಅವಕಾಶ ಕೊಡಬೇಕೆಂಬ ಉದ್ದೇಶದಿಂದ ಐದನೇಕ್ಲಾಜಿನಲ್ಲಿ ಈ ರೀತಿಯ ನಿಯಮವನ್ನು ಸೇರಿಸಲಾಗಿದೆ. ಒಂದು ವಿಷಯ ಹೇಳುತ್ತೇನೆ. ಶ್ರೀಮಾನ್ ಇಮಾಂ ಅವರನ್ನು ಒಂದು ದೇವಸ್ಥಾನದ ಧರ್ಮದರ್ಶಿಯನ್ನಾಗಿ ಮಾಡಿದರೆ, ಅಲ್ಲಿ ಪಂಚೆಯನ್ನು ಉಟ್ಟುಕೊಂಡಿರುವವರು ಮಾತ್ರ ಬರಬೇಕು ಎಂಬ ನಿಯಮವಿದ್ದರೆ, ಅವರು ಪಂಚೆಯನ್ನುಟ್ಟುಕೊಂಡು ಬರುತ್ತಾರೆಯೇ ಎಂಬುದನ್ನು ಆಲೋಚನೆಮಾಡಬೇಕು. ಆದುದರಿಂದ ಈ ಕೈಗಾರಿಕೆಯಲ್ಲಿ, ಅಥವಾ ಯಾವುದಾದರೂ ಕೈಗಾರಿಕೆಯಲ್ಲಿ ನಂಬಿಕೆ ಇಲ್ಲದೆ ಇರುವವರನ್ನು ಆ ಕೈಗಾರಿಕೆಯಲ್ಲಿ ಹಾಕಿದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ. ಶ್ರೀಮಾನ್ ಇಮಾಂರವರು ಜಿಲ್ಲಾಬೋರ್ಡಿನ ಅಧ್ಯಕ್ಷರಾಗಿದ್ದಾಗ ಐಮಂಗಲ ಖಾದಿ ಕೇಂದ್ರವನ್ನು ಪ್ರಾರಂಭಿಸಿದರು. ಇವರು ಮಾತ್ರ ಖಾದಿ ಹಾಕುತ್ತಿರಲಿಲ್ಲ. ಆದುದರಿಂದಲೇ ಆಗ ಆ ಖಾದಿ ಕೇಂದ್ರವು ಸರಿಯಾಗಿ ನಡೆಯಲಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ನಾನು ಜಿಲ್ಲಾಬೋರ್ಡ್ ಅಧ್ಯಕ್ಷನಾಗಿದ್ದಾಗ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಆಮೇಲೆ ಈ ಖಾದಿ ಧಾರಿಗಳ ಕೈಗೆ ಸಿಕ್ಕಿ ಎಲ್ಲ ಹೋಯಿತು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಜಿಲ್ಲಾಬೋರ್ಡಿನವರು ಸುಮಾರು 50 ಸಾವಿರ ರೂಪಾಯಿಗಳನ್ನು ಇದಕ್ಕೆ ಕೊಟ್ಟಿದ್ದರು. ಆಗ ವರ್ಷ ಒಂದಕ್ಕೆ 500 ರೂಪಾಯಿ, ಒಂದುಸಾವಿರ ರೂಪಾಯಿ ಹೀಗೆ ಲಾಭ ಬರುತ್ತಿತ್ತು. ಇವೊತ್ತಿನ ದಿವಸ ಅದರ ಬಂಡವಾಳ ಒಂದೂವರೆ ಲಕ್ಷರೂಪಾಯಿಗಳಷ್ಟಾಗಿದೆ. ಇದರಲ್ಲಿ ಅನುಮಾನವಿಲ್ಲ. ನಾನು ಲಾಭ ಮತ್ತು ನಷ್ಟದ ಲೆಕ್ಕವನ್ನು ನೋಡಿದ್ದೇನೆ. ಇದರಲ್ಲಿ ಲಾಭ ಬರುತ್ತಿದೆ. ಇಲ್ಲಿಯವರೆಗೂ ಈ ಉದ್ಯಮದಿಂದ ವರ್ಷಕ್ಕೆ ಒಂದು ಲಕ್ಷರೂಪಾಯಿ ನಷ್ಟು ಖಾದಿ ತಯಾರಾಗುತ್ತಿದೆ. ಈ ಕೇಂದ್ರದಿಂದ ಹಳ್ಳಿಯ ಜನಗಳಿಗೆ ಬಹಳ ಉಪಯೋಗವಾಗಿದೆ. ಹಳ್ಳಿಯವರು ಸರ್ಕಾರಕ್ಕೆ ಕಂದಾಯ ಕೊಡುವುದಕ್ಕೆ ಮತ್ತು ಅವರಿಗೆ ಬೇಕಾದ ಇತರ ಅವಶ್ಯಕತೆಗಳಿಗೆ ಈ ಉದ್ಯಮವನ್ನು ಕೈಗೊಂಡಿರುವುದರಿಂದ ಸಾಕಾದಷ್ಟು ಅನುಕೂಲವಾಗಿದೆ. ಈಗ ಅಂಥ ಖಾದಿ ಕೇಂದ್ರವಾಗಿದೆ ಈ ಐಮಂಗಲದ ಖಾದಿ ಕೇಂದ್ರ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಈ ಕೇಂದ್ರವು ಆಗ ಚೆನ್ನಾಗಿ ಕೆಲಸ ಮಾಡುತ್ತಿತ್ತು; ಈಗ ಯಾಕೆ ಮುಚ್ಚಿದೆ ಎಂದು ಹೇಳುತ್ತಿರಾ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೈಸೂರು ಸಂಸ್ಥಾನದಲ್ಲಿ ಯಾವ ಖಾದಿಕೇಂದ್ರವೂ ಮುಚ್ಚಿಲ್ಲ. ಪ್ರತಿಯೊಂದು ಕೇಂದ್ರವೂ ಖಾದಿಯನ್ನು ಉತ್ಪನ್ನ ಮಾಡುತ್ತದೆ. ಬದನವಾಳ ಖಾದೀ ಕೇಂದ್ರಕ್ಕೆ ಈಗ 50 ಸಾವಿರ ರೂಪಾಯಿ ಕೊಡಬೇಕೆಂದು ಕೇಳಿರುವುದು ಮನೆಗಳಲ್ಲಿ ನೂತಿರುವ ನೂಲನ್ನು ಖರೀದಿ ಮಾಡುವುದಕ್ಕಾಗಿಯೇ ಹೊರತು ಮತ್ತೇನೂ ಅಲ್ಲ. ಈ ಖಾದಿ ಕೇಂದ್ರವು ಮುಚ್ಚಿಲ್ಲ. ಇವೊತ್ತಿನ ದಿವಸ ನೂಲು ನೂತಿರುವುದು ಒಂದುಲಕ್ಷ ರೂಪಾಯಿಗಳ ಬೆಲೆಯಾಗುವಷ್ಟು ಮನೆಗಳಲ್ಲಿದೆ. ಈಗ ಮನೆಗಳಲ್ಲಿರುವ ನೂಲನ್ನು ಕೊಂಡು ಕೊಂಡರೆ ಆ ಜನಗಳಿಗೆ ನೂತಿರುವುದಕ್ಕೆ ಕೂಲಿ ದೊರೆತಂತಾಗುತ್ತದೆ. ಐಮಂಗಲ ಖಾದಿಕೇಂದ್ರವು, ಮಂತ್ರಿಗಳು ಹೇಳಿರುವಂತ ಲಾಭ ಸಂಪಾದಿಸದೆ ಇದ್ದರೂ ಅದಕ್ಕೆ ನಷ್ಟ ಸಂಭವಿಸಿಲ್ಲ.

ಶ್ರೀಮಾನ್ ಇಮಾಂಅವರು ಅಂಬರ್ ಚರಕದ ವಿಷಯವಾಗಿ ಕೆಲವು ಅಭಿಪ್ರಾಯಗಳನ್ನು ಹೊಂದಿದ್ದಾರೆ. ಆದರೆ ನಾನು ತಿಳಿದುಕೊಂಡಿರುವಂತೆ ಒಬ್ಬ ಮನುಷ್ಯನು ಈ ಅಂಬರ್ ಚರಕದಲ್ಲಿ ಒಂದು ದಿವಸಕ್ಕೆ 16 ಲಡಿ ನೂಲನ್ನು ಮನೆಯಲ್ಲಿ ನೂಲುವುದರಿಂದ ಒಂದೂ

(ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ)

ವರೆ ರೂಪಾಯಿಗಳವರೆಗೂ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ನಿದರ್ಶನವಾಗಿಟ್ಟುಕೊಂಡು ಕೇಂದ್ರ ಸರ್ಕಾರದವರು ಅಂಬರ್ ಚರಕವನ್ನು introduce ಮಾಡುತ್ತಿದ್ದಾರೆಯೇ ವಿನಾ ಇಲ್ಲದೆ ಇದ್ದರೆ ಮಾಡುತ್ತಿರಲಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್. (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಸೆಲೆಕ್ಟ್ ಕಮಿಟಿಯವರು ಸಭೆಯ ಮುಂದಿಟ್ಟಿರುವ ಈ ವರದಿಯನ್ನು ಸ್ವಾಗತಿಸುತ್ತ ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಈಗಾಗಲೇ ಈ ಸಭೆಯ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಇಮಾಂ ಸಾಹೇಬರು ಮಾತನಾಡಿದ ಮಾತುಗಳಿಗೆ ತಕ್ಕಂತೆ ಹೆಚ್ಚಿನ ಉತ್ತರವೂ ದೊರೆತಿದೆ. ನಾನು ಒಂದು ವಿಚಾರವನ್ನು ಮಾತ್ರ ಹೇಳಬೇಕಾಗಿದೆ. ಅವರು ಹೇಳಿರುವಂತೆ "who does not wear khadi" ಎಂದು ಈ ಮಸೂದೆಯಲ್ಲಿ ಇದೆ. ಯಾರು ಖಾದಿಯನ್ನು ಹಾಕುವುದಿಲ್ಲವೋ ಅಂಥವರು ಈ ಬೋರ್ಡಿನ ಸದಸ್ಯರಾಗುವುದಕ್ಕೆ ಅರ್ಹರಾಗುವುದಿಲ್ಲವೆಂಬುದೇ ಇದರ ಅರ್ಥ. ಯಾವ ಮನುಷ್ಯನೇ ಆಗಲಿ, ಯಾವ ಕೆಲಸವನ್ನು ಮಾಡಬೇಕಾದರೂ ಆತ್ಮಸಾಕ್ಷಿಯಾಗಿ ಮಾಡಬೇಕು. ಕಾಯಾ, ವಾಚಾ, ಮನಸಾ ಆತನು ಕೆಲಸಮಾಡದೆ ಇದ್ದ ಪಕ್ಷದಲ್ಲಿ, ಆ ಉದ್ಯಮದಲ್ಲಿ ಆತನಿಗೆ ನಂಬಿಕೆ ಇಲ್ಲದೆ ಇದ್ದ ಪಕ್ಷದಲ್ಲಿ ಆ ಉದ್ಯಮವು ಪ್ರಗತಿಹೊಂದುವುದಕ್ಕೆ, ಆತನು ಆಸಕ್ತಿಯಿಂದ ದುಡಿಯುತ್ತಾನೆ. ಎಂಬ ನಂಬಿಕೆ ಬರುವುದಕ್ಕೆ ಸಾಧ್ಯವಿಲ್ಲ, [illegible] ಬೋರ್ಡಿನಲ್ಲಿ ಸದಸ್ಯರಾಗಿರುವವರು ಖಾದಿಯನ್ನು ಹಾಕುವುದರಿಂದ, ಅದರ ಪರಿಣಾಮ ಮನಸ್ಸಿನ ಮೇಲೆ ಆಗುತ್ತದೆನ್ನುವುದು ಇಲ್ಲಿ ಹಾಕಿರುವ ಉಪಕಲಮಿನ ಉದ್ದೇಶವೆಂದು ನಾನು ಭಾವಿಸಿದ್ದೇನೆ. ಒಂದು ವಿಚಾರವನ್ನು ಹೇಳಬೇಕಾದರೆ, ಶ್ರೀಮಾನ್ ಎಲ್. ಸಿದ್ದಪ್ಪನವರು, ಶ್ರೀಮಾನ್ ನಾಗಪ್ಪ ಶೆಟ್ಟರು ಮಾತನಾಡುವಾಗ ಐಮಂಗಲದ ಖಾದಿ ಕೇಂದ್ರ ನಿಂತು ಹೋಗಿರಬೇಕು, ಅದು ಕೆಲಸಮಾಡುತ್ತಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಯಾವ ಕೇಂದ್ರವೇ ಆಗಲಿ ಅದನ್ನು ಪ್ರಾರಂಭಮಾಡಿದವರು ಸರಿಯಾದ ಉದ್ದೇಶದಿಂದ ಪ್ರಾರಂಭ ಮಾಡಿದ್ದರೆ ಅದಕ್ಕೆ ಯಾವ ಆತಂಕವೂ ಬರದಂತೆ ನಡೆದುಕೊಂಡು ಹೋಗುತ್ತದೆ. ಯಾವ ವ್ಯಕ್ತಿ ಆ ಕೇಂದ್ರವನ್ನು ಪ್ರಾರಂಭ ಮಾಡಿದರೋ ಅವರಿಗೆ ಆ ಉದ್ಯಮದಲ್ಲಿ ನಂಬಿಕೆ ಇಲ್ಲದೆಹೋದರೆ ಎಷ್ಟು ಮಟ್ಟಿಗೆ ಅದು ಅಭಿವೃದ್ಧಿಯಾಗುತ್ತದೆಂಬುದನ್ನು ತಾವೆಲ್ಲ ಕೂಲಂಕಷವಾಗಿ, ಮತ್ತು ಸಾವಧಾನವಾಗಿ ಯೋಚನೆ ಮಾಡಬೇಕು ಎಂದು ನನ್ನ ಸಲಹೆ. ಇನ್ನೂ ಮುಂದೆ ಹೋಗಿ ಹೇಳಬೇಕಾದರೆ, ಕಾಂಗ್ರೆಸ್ ಪಕ್ಷ ಮತ್ತು ಖದ್ದರ್ ಬಟ್ಟೆ ಇವೆರಡನ್ನೂ ಹೋಲಿಸಿಕೊಂಡು ಮಾತನಾಡುವುದು ಯಾವ ಪಕ್ಷದವರಿಗೇ ಆಗಲಿ ಸಲ್ಲತಕ್ಕುದಲ್ಲ. ಅವರ ಮುಖಂಡರು ಈ ದಿವಸ ಖಾದಿ

4 P.M.

Page 17—1953-54—Grant No. 38—Receipt from Electricity Schemes—Sub-head (vi)—Loss of stores.—Under this head a sum of Rs. 35,000 was provided. This item relates to loss of stores in the Electricity Department. The actual expenditure has been Rs. 1,30,800 against a provision of Rs. 35,000. The reason as given in this report is that the decision to write off Rs. 95,000 was taken later in the year. In the Electricity Department the Public Accounts Committee and various other Committees have many times stated that stores checking is not proper and the writing off of stores should be avoided. They have built up huge stock of obsolete stores. Why should they have built up such huge stores? The indenting procedure should be so regularised as to see that only such stores as would be required for about two years are indented for. I think the stores of the Electricity Department has nearly one crore worth of materials. The Estimates Committee also is going into this question and their report would be placed before this House and I would not like to dilate in respect of this now.

Sir, next, page 23 : 41-A - Capital Account, Civil Works etc., Revenue Account.

"Public Works Department was given a grant under the head 81 capital account—Civil Works outside the revenue account to the extent of 10 lakhs." They have exceeded that grant by six lakhs of rupees. What is the meaning? Grant is 10 lakhs and the actual expenditure is 16 lakhs. I must observe that the extra amount of six lakhs that is spent must have some proportion to the original grant. They say there was necessity. Perhaps they have some works in Bellary. I am not quite clear about it. The Public Accounts Committee have even said that in the Public Works Department no work should be taken unless the estimate is complete. There have been years where there have been lapses, lapses of the order of one crore. It is really a happy thing to see that there has been excess expenditure. But it is a different matter. Yet, I would insist that the grant should not exceed on any account.

Mr. SPEAKER.—The Hon'ble Member has taken more than 20 minutes.

Sri S. SRINIVASA IYENGAR.—I have been quite brief, Sir. I think the Chair would appreciate my position. I have a big Report to deal with.

Sir, page 24—power supply to towns and villages in 1953-54: The grant for this item was 21,80,000 for the year 1953-54. The expenditure on this item is 25 lakhs. They say, it was on account of some work in Bellary. They should have waited for the coming year. Why should they exceed the grant. If they spend money on works for which there is no provision and place before us a demand for excess grant, I think parliamentary control would be most ineffective. We being in the opposition, have very little voice in impressing on the Government that the procedure they are adopting may not be proper. It may be legal. It is quite legal. But it is not proper.

Sir, I would like to close my observation.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಇಲ್ಲಿ ಒಂದೆರಡು ವಿಚಾರಗಳನ್ನು ಮಾತ್ರ ನಾನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ \ illage electrification ನಂಥಾ ಮುಖ್ಯವಾದ ವಿಚಾರಗಳಿಗೆ ಎಷ್ಟು ಉದಾರವಾಗಿ ಹಣ ಕೊಟ್ಟರೂಕೂಡ ಅದು ಖರ್ಚಾಗುವುದಿಲ್ಲ. ಉದಾಹರಣೆಗೆ ಇಲಾಖೆಯುವರು ತಾವು ಹಾಕುವ ಹಣದಮೇಲೆ ಸೇಕಡ 7½ಯಂತೆ ಬಡ್ಡಿ ಬರಬೇಕೆಂದು

(ಶ್ರೀ ಬಿ. ಹುಚ್ಚೇಗೌಡ)

ನಿರೀಕ್ಷಿಸುತ್ತಾರೆ. ಇದರಲ್ಲಿ ನ್ಯಾಯುವೇನೂ ಇಲ್ಲ. ಈಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ರೀತಿಯಲ್ಲಿ ಸ್ಟೋರ್ ಸಿಕ್ಕಾಪಟ್ಟೆ ಹಾಕಿರುತ್ತಾರೆ. ಯಾವ ಯಾವ ಸಾಮಾನು ಇದೆ ಎಂಬುದಕ್ಕೆ ಸರಿಯಾಗಿ ಲೆಕ್ಕಗಳೇ ಸಿಕ್ಕುವುದಿಲ್ಲ. ಒಂದು ಸೈಜ್ ಅಂದರೆ ¼ ಅಂಗುಲ ಸೈಜ್ ಹಾಕಿದ್ದರೆ ಅದಕ್ಕೆ ಅರ್ಧ ಅಂಗುಲ ವಿರುವುದನ್ನು ಖರ್ಚು ಮಾಡಿರುತ್ತಾರೆ, ಅರ್ಧ ಅಂಗುಲ ಹಾಕಿರುವುದಕ್ಕೆ ಮುಕ್ಕಾಲು ಅಂಗುಲದ್ದನ್ನು ಖರ್ಚು ಮಾಡಿರುತ್ತಾರೆ. ಇದರಲ್ಲಿ ಸ್ಟಾಕ್ ಏಕೆ ಸರಿಯಾಗಿ ಬರುವುದಿಲ್ಲವೆಂದರೆ ಸರಿಯಾಗಿ ಲೆಕ್ಕ ಬರೆಯುವುದಿಲ್ಲ. ಲೆಕ್ಕಗಳನ್ನು ಸರಿಯಾಗಿ ಬರೆಯದೆ ಇದ್ದರೆ ನಮಗೆ ವಿವರಗಳು ಸಿಗುವುದಿಲ್ಲ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುವಾಗ ಎಲ್ಲಿಂದ ಎಷ್ಟು ಸ್ಟಾಕು ಬರುತ್ತದೆ, ಏನು ಖರ್ಚಾಗುತ್ತದೆ, ಇನ್ನೆಷ್ಟು ಉಳಿದಿದೆ ಎಂಬುದನ್ನು ಸರಿಯಾಗಿ ತಿಳಿದುಕೊಂಡಿರಬೇಕು. ಒಂದು ಕೆಲಸಕ್ಕೆ ಎಷ್ಟು ಮಾಲು ತರಿಸಬೇಕು, ಏನೇನು ಮಾಲು ತರಿಸಬೇಕು, ಎಷ್ಟು ಖರ್ಚು ಮಾಡಬೇಕು ಎನ್ನುವುದೇ ಇಲ್ಲ. ಈ ರೀತಿಯಾಗಿ ಸ್ಟಾಕ್ ತರಿಸಿಕೊಂಡು ಕೆಲಸವನ್ನು ಅವಮಾನಿಮಾಡುವುದೇ ಬೇಡ. ಅದರಿಂದ ಬಹಳ ದುಬಾರಿಯಾಗುತ್ತದೆ. ಅದಕ್ಕೆಬದಲಾಗಿ ಎಲ್ಲ ಕೆಲಸಗಳನ್ನೂ ಕಂಟ್ರಾಕ್ಟರುಗಳಿಗೆ ಕೊಡುವುದು ಒಳ್ಳೆಯದು. ಹೀಗೆ ಮಾಡಿದರೆ ಈ ಇಲಾಖೆಯು ಕೆಲಸ ಚೆನ್ನಾಗಿ ನಡೆಯುತ್ತದೆ. ಕಂಟ್ರಾಕ್ಟರುಗಳಿಗೆ ಕೆಲಸವನ್ನು ವಹಿಸಿದರೆ ಬಹಳ ಕಡಮೆ ದರದಲ್ಲಿ ಕೆಲಸವಾಗಿ ಅನುಕೂಲವಾಗುವುದು. ಇಲಾಖೆಯವರ ಮಾಡುವಾಗ ಯಾವ ಯಾವ ಬಾಬುಗಳಿಗೋ ತಗಲತಕ್ಕ ಖರ್ಚನ್ನೆಲ್ಲ ತೆಗೆದುಕೊಂಡು ಬಂದು ಲೆಕ್ಕಹಾಕಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ವ್ಯವಸ್ಥೆ ಇಲ್ಲದೆ ಹೋಗಿದೆ. ಆದುದರಿಂದ ಇದರಲ್ಲಿ ಬಹಳ ದುಬಾರಿಯಾದ ಖರ್ಚುಗಳೇನಿವೆಯೋ, ಯಾವಯಾವುದಕ್ಕೆ extravagant ಆಗಿ ಖರ್ಚಾಗುತ್ತಿದೆಯೋ ಅವನ್ನೆಲ್ಲ ಇಲಾಖೆಯವರು ಪತ್ತೆಮಾಡಿ, ಅವುಗಳನ್ನು ತಪ್ಪಿಸಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ಇಲಾಖೆಯಲ್ಲಿ ವೇಸ್ಟೇಜ್, ಬಹಳ ಜಾಸ್ತಿಯಾಗುತ್ತಿದೆ. ಹಿಂದೆ ಬಹಳ ಸ್ವಲ್ಪ ಖರ್ಚಿನಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದರು. ಈಗ ಅದಕ್ಕೆ ಒಂದಕ್ಕೆ ನಾಲ್ಕರಷ್ಟು ಖರ್ಚಾಗುತ್ತಿರುವುದಕ್ಕೆ ಏನು ಕಾರಣ? Proportionate ಆಗಿ ಸ್ವಲ್ಪ ಜಾಸ್ತಿಯಾಗುತ್ತದೆ. ಆದರೆ ಕೆಲವುಕಡೆ ಒಂದಕ್ಕೆ ನಾಲ್ಕರಷ್ಟು ಖರ್ಚಾಗಿದೆ. ಇದಕ್ಕೆ ಏನು ಮೂಲ ಕಾರಣವೆನ್ನುವುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನಪಟ್ಟಿಲ್ಲ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ.

ಸ್ಟೋರ್ಸ್ ವಿಚಾರದಲ್ಲಿ ವಿದ್ಯುಚ್ಛಕ್ತಿ ಇಲಾಖೆಯೊಂದೇ ಅಲ್ಲ, ಮರಾಮತ್ತು ಇಲಾಖೆ ಮತ್ತು ಇತರ ಇಲಾಖೆಗಳಲ್ಲಿಯೂ ಸಹ ಸರಿಯಾದ ಲೆಕ್ಕಗಳಿಲ್ಲ. ಈ ವಿಚಾರದಲ್ಲಿ ಅನೇಕವೇಳೆ ಅಕೌಂಟೆಂಟರುಗಳಿಲ್ಲವೆಂಬ ವಾದವನ್ನು ತೆಗೆದುಕೊಂಡು ಬಂದರು. ಅಕೌಂಟೆಂಟರುಗಳಿಲ್ಲದೆ ಇರುವುದರಿಂದ ತೊಂದರೆಯಾಗಿದೆ ಎಂದು ಒಂದೇರೀತಿ ಹೇಳುತ್ತಿದ್ದಾರೆ. ಎಷ್ಟು ಸಿಬ್ಬಂದಿಯನ್ನು ಹೆಚ್ಚಿಗೆ ಕೊಟ್ಟರೂ ಸಹ ಇದೇ ರೀತಿಯ complaints ಇವೆ. ಫೈನಾನ್ಷಿಯಲ್ ಸೆಕ್ರೆಟರಿಯವರುಕೂಡ ಅಕೌಂಟೆಂಟರುಗಳನ್ನು ಒದಗಿಸುವುದಕ್ಕೆ ಹೇಳಿದ್ದಾರೆ. ಅಕೌಂಟೆಂಟರುಗಳಿಲ್ಲವೆನ್ನುವ ಕಾರಣದ ಮೇಲೆ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಗುತ್ತಿದೆ ಎಂಬುದನ್ನು ಅವರು ಯೋಚನೆಮಾಡಬೇಕು. ಸರಿಯಾಗಿ ಲೆಕ್ಕಾಚಾರ ಇಡುವುದಕ್ಕೆ ಅಕೌಂಟೆಂಟರುಗಳಿಲ್ಲವೆಂದು ಹೇಳುತ್ತಾರೆ. ಯಾವುದಕ್ಕೂ ಸಿಬ್ಬಂದಿ ಸಾಲದು ಎಂದು ಹೇಳುತ್ತಾರೆ. ಮುಂದೆ ಈ ಸಿಬ್ಬಂದಿಯಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಬೇಕು. ನಾನು ಯಾಕೆ ಈ ವಿಷಯವನ್ನು ಒತ್ತಿ ಹೇಳುತ್ತಿದ್ದೇನೆಂದರೆ, ಈಗ ನಮ್ಮ ನೌಕರ ಮಾನೇರುಗಳ ಸಂಬಳ ಸಾರಿಗೆಗಳು ಬಹಳ ಕಡಮೆ. ಮುಂದೆ ಇತರ ಪ್ರಾಂತಗಳು ನಮ್ಮಲ್ಲಿ ಮಿಳಿತವಾಗುತ್ತವೆ. ಅಲ್ಲಿ ನೌಕರರ ಸಂಬಳ ಸಾರಿಗೆಗಳು ಜಾಸ್ತಿ. ಆ ಗ್ರೇಡಿಗೆ ನಮ್ಮವರ ಗ್ರೇಡನ್ನೂ ಏರಿಸುವುದು ನ್ಯಾಯವಾದದ್ದು ಮತ್ತು ಅತ್ಯಾವಶ್ಯಕವಾದದ್ದು. ಅಲ್ಲಿ ಸಿಬ್ಬಂದಿ ಕಡಮೆ ಇದ್ದರೂಕೂಡ efficiency ಇದೆ ಮತ್ತು ಅವರಿಗೆ ಕೆಲಸ ಜಾಸ್ತಿಯಾಗಿದೆ. ಇಲ್ಲಿಯೂ ಕೂಡ ಅಷ್ಟರ ಮಟ್ಟಿನ ದಕ್ಷತೆ ಬರಬೇಕಾದರೆ ನಮ್ಮವರ ಸಂಬಳದ ಗ್ರೇಡುಗಳನ್ನೂ ಇತರಕಡೆಗಳಲ್ಲಿರುವ ಮಟ್ಟಕ್ಕೆ ಏರಿಸಬೇಕು. ಈಗ ನಮ್ಮಲ್ಲಿ ಸಿಬ್ಬಂದಿ ಜಾಸ್ತಿ ಇದೆ. ಆದರೂಕೂಡ ದಕ್ಷತೆ ಸಾಲದೆನ್ನುವುದನ್ನು ನಾವು ಯೋಚನೆಮಾಡಬೇಕು. ಸರ್ಕಾರದವರು ಈ ವಿಷಯವನ್ನು ಸಹ ಗಮನಿಸಬೇಕು.

12 NOON

ಫಾರೆಸ್ಟ್ ಇಲಾಖೆ ವಿಚಾರ ಅನೇಕಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಖರ್ಚು ಆದಾಯ ಸರಿಯಾಗುವಂತೆ ಮಾಡಿರುವುದಿಲ್ಲ. ಈಗ ಯಾವುದೋ ಸ್ವಭಾವಸಿದ್ಧವಾದ ನ್ಯಾಚುರಲ್ ರಿಸೋರ್ಸಸ್ ಟ್ಯಾಪ್ ಮಾಡಿ 17 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ; ಅದರಿಂದ 3-4 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಉತ್ಪತ್ತಿ ಬರಲಿಲ್ಲ. ಸ್ವಾಭಾವಿಕವಾಗಿ ದೊರೆಯುವುದನ್ನು ತೆಗೆಯಲು 17 ಲಕ್ಷ ಖರ್ಚುಮಾಡಿ 3 ಲಕ್ಷ ಉತ್ಪತ್ತಿ ಸಹ ತೋರಿಸದಿರುವುದು ಶುದ್ಧ ಆಭಾಸ. ಇದೇರೀತಿ ಗಂಧದ ಎಣ್ಣೆ ಉತ್ಪತ್ತಿ ಸಂಬಂಧದಲ್ಲೂ ಸಹ ಲಾಭ ದೊರೆಕಿಲ್ಲ. ಏಕೆಂದರೆ ಇಲಾಖೆಯಲ್ಲಿ ಅನೇಕ ಲೋಪದೋಷಗಳಿವೆ. ಇನ್ನೊಂದು ವಿಚಾರ ಈ ದಿವಸ ಹೇಳಬೇಕಾದರೆ, ಭದ್ರಾವತಿ ಕಾರ್ಖಾನೆಯವರು ಸೌದೆ ಸರಬರಾಯನ್ನು ಕಂಟ್ರಾಕ್ಟರಿಗೆ ವಹಿಸಿದ್ದಾರೆ. ಹಿಂದೆ ಅಡ್ವಾನ್ಸ್ ಕೊಡುತ್ತಿದ್ದರು. ಅದಕ್ಕೆ ಬೋಗಸ್ ಹೆಸರು ಹಾಕಿ ಡ್ರಾ ಮಾಡಿದರು; 30 ವರ್ಷಗಳಿಂದ ಹಣ ತೆಗೆದುಕೊಂಡು ತಿಂದಿದ್ದಾರೆ, ಪತ್ತೆಯಿಲ್ಲ. ಅದಕ್ಕೆ ಈಗ ಒಂದು ಆರ್ಡರುಮಾಡಿರುವುದು ಹೊಸದಾಗಿ ಕಂಟ್ರಾಕ್ಟ್‌ಮಾಡಿಕೊಳ್ಳುವವನು ಪ್ರತಿಯೊಂದು ಟನ್ನಿಗೂ 5 ರೂಪಾಯಿಗಳನ್ನು ಹೆಚ್ಚಾಗಿ ಕೊಡಬೇಕು, ಅದರಿಂದ ಬಾಕಿ ತೀರಿಸಬೇಕು ಎಂದು. ಒಂದು ವರ್ಷದಿಂದ 60 ಸಾವಿರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. 53 ರೂಪಾಯಿಗಳಂತೆ ಇದ್ದ ದರವನ್ನು 93 ರೂಪಾಯಿಗಳಿಗೆ ಏರಿಸಿದ್ದಾರೆ. ಇದರ ನಷ್ಟ ಐರನ್ ವರ್ಕ್ಸ್‌ಗೆ ಕಟ್ಟಿದೆ. ಈ ರೀತಿ ಹೆಸರಿಲ್ಲದಿರುವವನಿಗೆ ಕೊಟ್ಟಿರುವಾಗ ನ್ಯಾಯವಾದ ಬೆಲೆಗಿಂತ ಹೆಚ್ಚು ಕೊಡುವುದಕ್ಕಿಂತ ರೈಟಾಫ್ ಏಕೆ ಮಾಡಬಾರದು? ಇಂಥಾದ್ದು ಸರ್ಕಾರದಲ್ಲಿ ನಡೆಯುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡುತ್ತಿದ್ದೇವೆ. ಎಕ್ಸೆಸ್ಸರಿ ಆಗಿ ಫೆಂಡಿಂಗ್ ಆದ ಮೇಲೆ ತಪ್ಪಾಗಿದ್ದರೆ ತಿದ್ದಿಕೊಳ್ಳೋಣ. ತನಿಖೆಯಾಗುತ್ತಿದೆ. ವರದಿ ಬಂದ ಮೇಲೆ ಏನು ಮಾಡಬೇಕೋ ನೋಡೋಣ.

ಶ್ರೀ ಬಿ. ಹುಚ್ಚೇಗೌಡ.—ನಾನು ಏನು ಎವಿಡೆನ್ಸ್ ಬೇಕಾದರೂ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಇಂಥ ಲೋಪದೋಷಗಳಿಗೆ ಅವಕಾಶಕೊಡದೆ ಮಾರ್ಗ ದರ್ಶಕವಾಗಿರಬೇಕಾದದ್ದು ಅವಶ್ಯಕ. ಫಾರೆಸ್ಟ್ ಇಲಾಖೆಯಲ್ಲಿ ಅಫಾರೆಸ್ಟೇಷನ್‌ಗಾಗಿ ಹಣ ಒದಗಿಸಿದ್ದಾರೆ ಎರಡು ಸಾವಿರ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಮೈದಾನ ಜಿಲ್ಲೆಗಳಲ್ಲಿ ಕಾಡನ್ನು ಬೆಳೆಸುವುದರಿಂದ ಗುಣವಿಲ್ಲ. ಮಲೆನಾಡಿನಲ್ಲಿ ಎಕರೆಗೆ ನೂರು ರೂಪಾಯಿಗಳನ್ನು ಖರ್ಚುಮಾಡಿದರೆ ಹತ್ತು ವರ್ಷಗಳಲ್ಲಿ ಹತ್ತು ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಈ ದಿವಸ ಮೈದಾನದಲ್ಲಿ ಹೆಸರಗೆ ಕಾಡಿದ್ದರೂ ಒಂದು ಗಿಡ ಸಹ ಅಲ್ಲಿ ಇಲ್ಲ. ಇಪ್ಪಾಡಿ ಫಾರೆಸ್ಟಿನಲ್ಲಿ 3 ಸಾವಿರ ಎಕರೆಗೆ 3 ಮರಗಳಿವೆ. ಮೈದಾನದಲ್ಲಿ ಕಾಡನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಅಫಾರೆಸ್ಟೇಷನ್ ಮಾಡುವಾಗ ಒಂದು ಎಕರೆಯಲ್ಲಿ ಗಂಧದಮರ ಬೆಳೆಸಬಹುದು. ಇಲ್ಲದಿದ್ದರೆ ಇನ್ನು ಸ್ವಲ್ಪ ದಿವಸಗಳಲ್ಲಿ ಅದಕ್ಕೆ ಅಭಾವಬರುತ್ತದೆ. ನಮ್ಮ ರೈತರು ಗಂಧದ ಮರವಿದ್ದರೆ ಪೆನಾಲ್ಟಿ ಹಾಕುತ್ತಾರೆಂದು ಆ ಗಿಡಗಳನ್ನು ಕಿತ್ತುಹಾಕುತ್ತಾರೆ ; ಅದನ್ನು ತಪ್ಪಿಸಬೇಕು. ಹಾಗೆ ಮಾಡಿದರೆ ಕೋಟ್ಯಾಂತರ ರೂಪಾಯಿಗಳ ಉತ್ಪತ್ತಿಬರುತ್ತದೆ. ಶೇಕಡ 50 ರಷ್ಟು ಬೆಲೆ ಕೊಡುತ್ತೇವೆಂದು ಹೇಳಿದರೆ ಸರ್ಕಾರಕ್ಕೂ ಸಹಾಯವಾಗುವುದಲ್ಲದೆ ರೈತರಿಗೂ ಅನುಕೂಲವಾಗುತ್ತದೆ. ಈಗ ಗಂಧದ ಮರವನ್ನು ಬುಡ ಸಹಿತ ಕಿತ್ತುಹಾಕುತ್ತಾರೆ. ಅದಕ್ಕೆ ಅವಕಾಶವಿರಬಾರದು. ಫಾರೆಸ್ಟ್ ಇಲಾಖೆಯಲ್ಲಿ ಉಳಿತಾಯ ಮಾಡಿದ್ದರಲ್ಲಿ ಸ್ವಲ್ಪ ಅಫಾರೆಸ್ಟೇಷನ್‌ಗೆ ವಿನಿಯೋಗಿಸಿ ಅದಕ್ಕೆ ಪ್ರೋತ್ಸಾಹ ಕೊಡಬೇಕು. ಮೊನ್ನೆ ತೇಗದಮರ ಹಾಕಿದ್ದಾರೆ, ಅದರಿಂದ ಹತ್ತು ವರ್ಷಗಳಿಗೆ 10 ಸಾವಿರ ರೂಪಾಯಿಗಳ ಉತ್ಪತ್ತಿ ಹೆಚ್ಚುತ್ತದೆ, ಲಕ್ಷಾಂತರ ರೂಪಾಯಿಗಳು ಬರುತ್ತವೆ. ಈಗ ಇಂಥಾದ್ದಕ್ಕೆ ಹಣ ಸರಿಯಾಗಿ ಕೊಡುತ್ತಿಲ್ಲ. ವೀಡ್‌ಔಟ್‌ಮಾಡಲು ಇನ್ನೂರು ರೂಪಾಯಿಗಳನ್ನು ಖರ್ಚುಮಾಡಿದರೆ ಬೇಕಾದಷ್ಟು ಅನುಕೂಲವಾಗುತ್ತದೆ. ಗೊಬ್ಬರದ ಜಮೀನು ಮಲೆನಾಡಿನಲ್ಲಿ ಬೇಕಾದಷ್ಟಿದೆ. ಗಂಧದಮರ ಬೆಳೆಸದಿದ್ದರೆ ಗಂಧದ ಕಾರ್ಖಾನೆ ಮುಚ್ಚಬೇಕಾಗುತ್ತದೆ. ಇಡೀ ಪ್ರಪಂಚದಲ್ಲೇ ಮೈಸೂರು ಗಂಧದ ಮರಗಳನ್ನು ಹೆಚ್ಚಾಗಿ ಬೆಳೆಸಿ ಹೆಸರುವಾಸಿಯಾಗಿದೆ. ಸರ್ಕಾರ ಗಂಧದ ಮರ ಬೆಳೆಸುವುದಲ್ಲದೆ ಅದರ ಜೊತೆಗೆ ರೈತರಿಗೆ ಸಾಕಷ್ಟು ಪ್ರೋತ್ಸಾಹಕೊಡಬೇಕು. ಶೇಕಡ 30 ರಷ್ಟು ಅಥವಾ 50 ರಷ್ಟು ಬೆಲೆ ಹಿಂದಕ್ಕೆ ಕೊಡುತ್ತೇವೆಂದು ಪ್ರಚಾರ ಮಾಡಬೇಕು, ಪ್ರಕಟಿಸಬೇಕು. 1952-53ನೆಯ ಆಯವ್ಯಯವನ್ನು ರೆಗ್ಯುಲರೈಸ್ ಮಾಡುವುದನ್ನು ಇಷ್ಟು ನಿಧಾನಮಾಡಿರುವುದನ್ನು ನೋಡಿದರೆ ಸರ್ಕಾರ ಎಷ್ಟು ಉದಾಸೀನವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಹಿಂದೆಯೇ ಇದನ್ನು ಸರ್ಕಾರದ ಗಮನಕ್ಕೆ ತಂದರೂ ಜಾಗ್ರತೆ ಕ್ರಮ ಕೈಕೊಂಡಿಲ್ಲ. ಇದು ಅಸಂಬದ್ಧ ; ಇದಕ್ಕೆ ಅವಕಾಶ ಕೊಡಬಾರದು.

*ಶ್ರೀ ಎಸ್. ಗೋಪಾಲಗೌಡ (ಸಾಗರ ಹೊಸನಗರ).—ಸ್ವಾಮಿ, ಈಗ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳ ಬಗ್ಗೆ ಶ್ರೀನಿವಾಸಯ್ಯಂಗಾರ್‌ರವರು ಈಗಾಗಲೇ ಉದಾಹರಣೆಗಳನ್ನು ತೋರಿಸಿ ಎಲ್ಲೆಲ್ಲಿ ಏನೇನು ಕಾರಣಕ್ಕಾಗಿ ಹೆಚ್ಚು ಹಣ ಖರ್ಚಾಗಿದೆಯೆನ್ನುವುದರ ಬಗ್ಗೆ ಭಾಷಣ ಮಾಡಿದ್ದಾರೆ. ನಾನು ವಿವರಣೆಗಳನ್ನು ಕೊಡುವುದಕ್ಕೆ ಹೋಗದೆಯೇ ಈ ಕ್ರಮದ ಬಗ್ಗೆ ಒಂದೆರಡು ಮಾತನ್ನು ಮಾತ್ರ ಹೇಳಬೇಕೆಂದಿದ್ದೇನೆ. 1951-52ನೆಯ ಸಾಲಿನಲ್ಲಿ ವರ್ಷೇ ವರ್ಷೇ ಕೊಡತಕ್ಕ ಬಡ್ಜೆಟ್ ಮತ್ತು ಜೊತೆಗೆ ಸರ್ಕಾರದವರು ಸಭೆಯ ಮುಂದೆ ಮಂಡಿಸಿ ಅಂಗೀಕಾರ ಪಡೆದ ಸಪ್ಲಿಮೆಂಟರಿ ಗ್ರಾಂಟುಗಳು ಇವೆಲ್ಲಾ ಆದ ಮೇಲೆ 27,19,900 ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿದ್ದಾರೆ. 1952-53ನೆಯ ಸಾಲಿನಲ್ಲಿ 70,50,300 ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿದ್ದಾರೆ, 1953-54ನೆಯ ಸಾಲಿನಲ್ಲಿ 38,67,900 ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಿದ್ದಾರೆ. ಒಟ್ಟು 1,36,38,100 ರೂಪಾಯಿ ಗ್ರಾಂಟು ಬೇಕಾಗುತ್ತದೆ. ಆ ರೀತಿಯಾಗಿ ಬಡ್ಜೆಟ್ಟನ್ನು ತಯಾರು ಮಾಡತಕ್ಕ ಕಾಲದಲ್ಲಿ ಈ ಐಟಂಗಳಲ್ಲಿ ತೋರಿಸಿರತಕ್ಕ ಹಣವನ್ನು ಸೇರಿಸಲಾಗಲಿಲ್ಲ ಎಂದು ಹೇಳಿ ಈ ರೀತಿಯಾಗಿ ಆ ಬಗ್ಗೆ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ಈ ಸಭೆಯ ಮುಂದೆ ತಂದು ಅವುಗಳಿಗೆ ಮಂಜೂರಾತಿಯನ್ನು ಪಡೆಯುತ್ತಿದ್ದಾರೆ. ಈ ಪದ್ಧತಿಯನ್ನೇನೂ ಸಂಪೂರ್ಣವಾಗಿ ನಿಲ್ಲಿಸಲು ಇವರಿಗೆ ಸಾಧ್ಯವಾಗದಿದ್ದಲ್ಲಿ ಇದನ್ನು ಕಡಿಮೆ ಮಾಡುವುದಕ್ಕಾದರೂ ಇವರು ಪ್ರಯತ್ನವನ್ನು ಏಕೆ ಮಾಡಬಾರದು ? ಆದರೆ ಈಗಾಗಲೇ ನಮ್ಮ ಮುಂದೆ ಮಂಜೂರಾತಿಗಾಗಿ ತಂದಿರ ತಕ್ಕ ಹೆಚ್ಚಿಗೆ ಮೊಬಲಗಿನ ಬಗ್ಗೆ ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಬಾಬುಗಳಿಗೋಸ್ಕರವಾಗಿ ಏತಕ್ಕಾಗಿ ಹೆಚ್ಚು ಯಾವ ಯಾವ ರೀತಿಯಲ್ಲಿ ಖರ್ಚಾಯಿತು ಎನ್ನುವುದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪರಿಶೀಲನೆ ಮಾಡಿ ಈ ಬಗ್ಗೆ ಅವರು ತಮ್ಮ ಒಂದು ಖಚಿತವಾದ ಅಭಿಪ್ರಾಯವನ್ನಾಗಲೇ ಕೊಟ್ಟಿದ್ದಾರೆ. ಅವರು ಈ ಪ್ರತಿಯೊಂದು ಇಲಾಖೆಯವರೂ ತಮಗೆ ಒಂದು ವರ್ಷದ ಆಖೈರಿನ ವರೆಗೆ ಯಾವ ಯಾವ ಐಟಮ್ಮಿಗೆ ಎಷ್ಟೆಷ್ಟು ಮೊಬಲಗು ಬೇಕಾಗುವುದು ಎನ್ನತಕ್ಕ ಒಂದು ಅಂದಾಜನ್ನು ತಯಾರಿಸಿ, ಆ ಅಂದಾಜಿನ ಪ್ರಕಾರವೇ ಅವರು ಆ ಹಣವನ್ನು ಪಡೆಯಬೇಕೆಂದೂ, ಆ ಒಂದು ಮಿತಿಗಿಂತ ಅವರು ಮುಂದೆ ಹೋಗಿ ಖರ್ಚು ಮಾಡಬಾರದೆಂದೂ ತಿಳಿಸಿದ್ದಾರೆ. ನಾನೂ ಕೂಡ ಒಂದೆರಡು ಸಾರಿ ಈ ಸಂಬಂಧವಾಗಿ ಇದೇ ರೀತಿಯಾಗಿ ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೆನು. ಸಾಮಾನ್ಯವಾಗಿ 20 ಕೋಟಿ ರೂಪಾಯಿಗಳ ವ್ಯವಹಾರ ನಡೆಯುವಂಥ ಒಂದು ಆಡಳಿತದಲ್ಲಿ ಏನೋ ಅಲ್ಪಸ್ವಲ್ಪ ಇಂಥಾದಕ್ಕೆ ಒಂದು ಮಾರ್ಜಿನ್ನನ್ನು ಕೊಡಬಹುದು ಏನೋ ಅಂಥ ಅಸಾಧಾರಣವಾದ ಕಾರಣಗಳಿಗಾಗಿ ಗೊತ್ತಾದ ಒಂದು ಪರಿಮಿತಿಗಿಂತ ಹೆಚ್ಚಿಗೆ ಖರ್ಚಾಗತಕ್ಕ ಸಂಭವಗಳೊದಗಿದರೆ ಆ ಬಗ್ಗೆ ಶೇಕಡ 10 ರಂತೆ ನಾವು ಒಂದು ಮಾರ್ಜಿನ್ನನ್ನು ಕೊಡಬಹುದು. ಸರ್ಕಾರದವರು ಯಾವ ಅಂಥ ಒಂದು ಅನಿರ್ದಿಷ್ಟವಾದ ಎಮರ್ಜನ್ಸಿ ಕಾರಣಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬೇಕಾದ ಸಂಭವ ಬಂತು ಎನ್ನುವುದರ ಬಗ್ಗೆ ಸೂಕ್ತ ವಿವರಣೆಗಳನ್ನು ಕೊಟ್ಟಾಗ ನಾವು ಆ ಒಂದು ಗೊತ್ತಾದ ಮಾರ್ಜಿನ್ನಿನೊಳಗೆ ಈ ಅಧಿಕ ವೆಚ್ಚದ ಬಾಬುಗಳಿಗೆ ನಮ್ಮ ಒಪ್ಪಿಗೆಯನ್ನು ನೀಡಬಹುದು. ಆದರೆ ಈ ಸಂದರ್ಭದಲ್ಲಿ ಸರ್ಕಾರದವರು ಮೂರು ವರ್ಷಗಳ ಲೆಕ್ಕವನ್ನು ಒಟ್ಟಿಗೆ ಸೇರಿಸಿ 60 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ಇಷ್ಟು ಹಣ ಗುಬಾರಿಯಾಗಿ ಖರ್ಚಾಗಿದ್ದರೂ ಇದು ಬಹಳ ಕಡಮೆ ಎಂತಲೇ ಹೇಳಬಹುದು. ಪ್ರತಿಯೊಂದು ಇಲಾಖೆವಾರಾಗಿ ಈಗಾಗಲೇ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಬಹಳ ಚೆನ್ನಾಗಿ

(ಶ್ರೀ ಎಸ್. ಗೋಪಾಲಗೌಡ.)

ಹೇಳಿದ್ದಾರೆ. ಸರ್ಕಾರದವರು ಹಾಗೆ ಮೂರು ವರ್ಷಗಳನ್ನೂ ಸೇರಿಸಿ ಒಂದು ಆವರೇಜ್ ಲೆಕ್ಕತೆಗೆದು ಕೊಂಡು ಹೀಗೆ ಉತ್ತರ ಕೊಡತಕ್ಕದ್ದು ಸರಿಯಾದದ್ದಲ್ಲ. ಯಾರೋ ಒಬ್ಬ ಒಂದು ಹೊಳೆಯನ್ನು ದಾಟಲು ಹೋಗಿದ್ದಾಗ ಅಲ್ಲಿಷ್ಟುಉದ್ದ ನೀರಿದೆ, ಇಲ್ಲಿಷ್ಟುದ್ದ ನೀರಿದೆ ಎಂದು ಹೇಳಿ ಎಲ್ಲಾ ಕಡೆಯಲ್ಲಾ ಅಳತೆ ತೆಗೆದು ಕೊಂಡು ಆ ಬಗ್ಗೆ ಒಂದು ಆವರೇಜ್ ಆಳ ಇಷ್ಟಾಗುತ್ತದೆ; ಆದ್ದರಿಂದ ಹೊಳೆಯನ್ನು ದಾಟಿ ಹೋಗಬಹುದು ಎಂದು ಲೆಕ್ಕ ಹಾಕಿಕೊಂಡು ಹೋಗಿ ಹೊಳೆಯಲ್ಲಿ ಮುಳಗಿ ಹೋದನೆಂಬುದಾಗಿ ಕೇಳಿದ್ದ ಒಂದು ಕಥೆ ನನಗೀಗಜ್ಞಾಪಕಕ್ಕೆ ಬರುತ್ತಿದೆ. ಹೀಗೆ ಸರ್ಕಾರದವರು ಈ ಹಣಕಾಸಿನ ಖರ್ಚಿನ ಬಗ್ಗೆ ಆವರೇಜ್ ತೆಗೆದುಕೊಳ್ಳುವುದಕ್ಕೆ ಹೋದರೆ ದೇಶ ಮುಳುಗಿ ಹೋಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಸರ್ಕಾರದವರಿಗೆ ಯಾವ ಒಂದು ಭಯವೂ ಇಲ್ಲ. ಈ ರೀತಿ ಆಡಳಿತ ನಡೆಸಿದರೆ ನಮ್ಮನ್ನು ಗಲ್ಲಿಗೆ ಹಾಕುತ್ತಾರೆ, ನಮಗೆ ಶಿಕ್ಷೆ ಯಾಗುತ್ತದೆ, ನಮ್ಮ ಮನೆ ಮಠಗಳನ್ನು ಹರಾಜು ಮಾಡಿ ದುಬಾರಿಯಾಗಿ ಖರ್ಚು ಮಾಡಿದ ಹಣವನ್ನು ವಾಪಸ್ಸು ತಗೆದುಕೊಳ್ಳುತ್ತಾರೆ, ಎನ್ನುವಂಥ ಭಯವೇ ಇಲ್ಲವಾಗಿದೆ. ದೇಶದಲ್ಲಿ ಯಾವುದಾದರೂ ಅಂಥ ಒಂದು ದಕ್ಷತೆಯ ಸಂಸ್ಥೆಯಿದ್ದು ಹೀಗೆ ಅನಾವಶ್ಯಕ ವೆಚ್ಚದ ಬಗ್ಗೆ ಅವರಿಂದ ಪೂರಾ ಮೊಬಲಗನ್ನು ವಸೂಲ್ಮಾಡಿ ಕೊಳ್ಳುವ ಹಾಗಿದ್ದರೆ. . .

Mr. SPEAKER.—That is only in the case of misappropriation.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ತಾವು ಹೇಳಿದಂತೆ ಮಿಸ್ಅಪ್ರೋಪ್ರಿಯೇಷನ್ ಆಗಿದ್ದರೆ ಅದರಲ್ಲಿ ಇಷ್ಟೇ ಹಣ ಎನ್ನುವ ಲೆಕ್ಕವಾದರೂ ಸಿಕ್ಕುತ್ತದೆ. ಆದರೆ ಈ ಎಲೆಕ್ಟ್ರಿಕ್ ಸ್ಟೋರ್ಸ್, ಇತ್ಯಾದಿ ಕೆಲವು ಬಾಬುಗಳಲ್ಲಿ ಮೊದಲು ಸಾಮಾನುಗಳನ್ನು ಲೆಕ್ಕ ತೆಗೆದುಕೊಳ್ಳುವಾಗ ಬೇಕಾದದ್ದು-ಬೇಡವಾದದ್ದು ಎಲ್ಲ ಸೇರಿಸಿ ಕೊಂಡು ಅನಂತರ ಕೆಲವು ಸಾಮಾನುಗಳು ಹಾಳಾಗಿವೆ ಎಂದು ರೈಟಾಫ್ ಮಾಡುವ ವಿಚಾರ ಹೇಳಿದ್ದಾರೆ. ಒಂದು ಕಡೆ 7 ಲಕ್ಷ ರೂಪಾಯಿಗಳನ್ನು ರೈಟಾಫ್ ಮಾಡಿದ್ದಾರೆ. ಹೀಗೆ ಮೊದಲು ರೈಟಾಫ್ ಮಾಡಿಬಿಟ್ಟು ಅನಂತರ ಹೀಗೆ ಎಕ್ಸೆಸ್ ಗ್ರಾಂಟುಗಳನ್ನು ಕೇಳಿದರೆ ಹೇಗೆ ಕೊಡುವುದು ! ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಈ ವಿಚಾರದಲ್ಲಿ ಈ ಮಾನ್ಯ ಸಭೆಯವರು ಸರ್ಕಾರಕ್ಕೆ ಪದೇ ಪದೇ ಎಚ್ಚರಿಕೆಗಳನ್ನು ಕೊಡುತ್ತಲೇ ಬಂದ್ದಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಕೂಡ ಈ ವಿಚಾರದಲ್ಲಿ ಒತ್ತಿ ಹೇಳಿದ್ದಾರೆ. ಹಾಗೆ ಕಮಿಟಿಯವರು ಬಹುಶಃ ಅಷ್ಟು ಒತ್ತಿ ಹೇಳಿದ್ದರಿಂದಲೋ ಏನೋ ಈಗ ಸರ್ಕಾರದವರು ಈ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಹಾಗೆ ಅವರು ಹೇಳದೆ ಇದ್ದಿದ್ದರೆ ಈ ವರದಿಯನ್ನು ಕೂಡ ಇವರು ನಮ್ಮ ಮುಂದೆ ಹೀಗೆ ಇಡುತ್ತಲೇ ಇರಲಿಲ್ಲವೆಂದು ನಾನು ಭಾವಿಸಿದ್ದೇನೆ. ವಿಚಾರಗಳು ಈ ಮಟ್ಟದಲ್ಲಿರುವಾಗ ಸರ್ಕಾರದವರು ನಮಗೇನು ಒಂದು ಭರವಸೆಯನ್ನು ಕೊಡುತ್ತಾರೆಂದು ನಾನೀಗ ಕೇಳಬೇಕಾಗಿದೆ.

*ಶ್ರೀ ಎಚ್ ಎಂ. ಚನ್ನಬಸಪ್ಪ (ರೆವಿನ್ಯೂ ಮತ್ತು ವ್ಯವಸಾಯ ಇಲಾಖೆಗಳ ಮಂತ್ರಿಗಳು).—ಅಧ್ಯಕ್ಷರೇ 1951-52 ; 1952-53 ಮತ್ತು 1953-54ನೆಯ ಸಾಲುಗಳಲ್ಲಿ ದೇಶಾಭಿವೃದ್ಧಿಗಾಗಿ ಎಷ್ಟು ಹಣವನ್ನು ಖರ್ಚುಮಾಡಲು ಈ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ನೀಡಿತ್ತೋ ಅಷ್ಟಕ್ಕಿಂತಲೂ ಹೆಚ್ಚಾಗಿ ಆಯಾಯ ಸಾಲಿನಲ್ಲಿ ಖರ್ಚಾಗಿರತಕ್ಕ ಹಣಕ್ಕೆ ತಮ್ಮ ಅಂಗೀಕಾರವನ್ನು ಪಡೆಯತಕ್ಕ ಬಗ್ಗೆ ಈಗ ಈ ಎಕ್ಸೆಸ್ ಗ್ರಾಂಟುಗಳನ್ನು ತಮ್ಮ ಮುಂದೆ ಇಟ್ಟಿರುತ್ತೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದಾದರೆ ಆಯಾ ಸಾಲಿನಲ್ಲಿ ಎಷ್ಟು ಖರ್ಚು ಮಾಡಬೇಕೆಂದು ಕ್ಲುಪ್ತಮಾಡಲಾಗಿದ್ದಿತೋ ಅಷ್ಟನ್ನು ಮಾತ್ರವೇ ಮಾಡಬೇಕಾಗಿತ್ತು. ಅದಕ್ಕೆ ಮೇಲ್ಪಟ್ಟು ಹೋಗಬಾರದಾಗಿತ್ತು ಆ ಒಂದು ಪರಿಮಿತಿಯೊಳಗೇ ಹಣವನ್ನು ಖರ್ಚು ಮಾಡಬೇಕಾಗಿತ್ತು ಎಂದು ತಿಳಿಸಿರತಕ್ಕದ್ದೆಲ್ಲಾ ವಾಸ್ತವ್ಯವಾಗಿಯೂ ಒಳ್ಳೆಯದೇ. ಆ ರೀತಿ ಮಾಡತಕ್ಕದ್ದೂ ಒಳ್ಳೆಯದೇ ಸರಿ. ಆದರೆ ಪ್ರಜಾಪ್ರಭುತ್ವಾಡಳಿತದಲ್ಲಿ ಕಾರ್ಯತಃ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಹಣವನ್ನು ಖರ್ಚುಮಾಡಿದರೆ ಏತಕ್ಕೆ ಇಷ್ಟು ಹೆಚ್ಚಿಗೆ ಖರ್ಚು ಮಾಡಿದ್ದೀರಿ ಎನ್ನುತ್ತೀರಿ, ಖರ್ಚುಮಾಡಬಾರದೆಂರೆ ಸಾರ್ವಜನಿಕರಿಗೆ ಉಪಯುಕ್ತ ಕೆಲಸಗಳೊಂದನ್ನೂ ಮಾಡುತ್ತಿಲ್ಲ ಎನ್ನುತ್ತೀರಿ! ಈ ರೀತಿ ಟೀಕೆಗಳಿಗೆ ಯಾವತ್ತೂ ಅವಕಾಶವಿದೆ. ಆದರೆ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರ ಹಿತಸಾಧನೆಗಾಗಿ ನಾವು ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚು ಮಾಡಲೇಬೇಕಾಗಿರುತ್ತದೆ. ಜನರ ಒತ್ತಾಯಕ್ಕಾಗಿ ಅವರು ಕೇಳತಕ್ಕ ಕೆಲಸಗಳ ಬಗ್ಗೆ ಬಡ್ಜೆಟ್ಟಿನಲ್ಲಿ ಹಣ ಒದಗಿಸದೆ ಇದ್ದಾಗೂ ಅವುಗಳನ್ನು ಉದಾಸೀನ ಮಾಡಲು ಸಾಧ್ಯವಾಗುವುದಿಲ್ಲ. ಹಾಗೆ ಹಣ ಮಂಜೂರಾಗದಿರುವಾಗ ಕೈಗೊಂಡ ಕೆಲಸಗಳ ಬಗ್ಗೆ ಆ ಹಣವನ್ನು ಪಾವತಿ ಮಾಡಲು ಎಕ್ಸೆಸ್ ಗ್ರಾಂಟುಗಳನ್ನು ಈ ಸಭೆಯ ಮುಂದೆ ತಂದೇ ತರಬೇಕಾಗುತ್ತದೆ. ಆದರೆ ಅವುಗಳನ್ನು ಸಾಧ್ಯವಾದ ಮಟ್ಟಿಗೂ ಕಡಿಮೆ ಮಾಡಬಹುದೇ ಹೊರತು ಇವುಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವೇ ಇಲ್ಲವೆಂಬ ಅಂಶವನ್ನು ಮಾನ್ಯ ಸದಸ್ಯರು ಅರಿಯಬೇಕೆಂಬುದೇ ನನ್ನ ಕೋರಿಕೆ.

ಶ್ರೀಮಾನ್ ಹುಚ್ಚೇಗೌಡರು ಎಲೆಕ್ಟ್ರಿಸಿಟಿ ವಿಚಾರವಾಗಿ ಮಾತನಾಡುತ್ತ ಸರ್ಕಾರದವರು ಹಳ್ಳಿಗಾಡಿನ ಜನರಿಗೆ ಈ ಬಾಬಿನಲ್ಲಿ ಸಹಕಾರ ನೀಡುತ್ತಿಲ್ಲ, ಅವರಿಗೆ ಸಾಕಷ್ಟು ಪವರನ್ನು ಒದಗಿಸುತ್ತಿಲ್ಲವೆಂದು ಹೇಳಿದರು. ಇರಿಗೇಷನ್ ಬಾಬಿನಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಎಷ್ಟರ ಮಟ್ಟಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿದೆ ಎನ್ನುವುದರ ಬಗ್ಗೆ ನಾನೀಗ ಅವರಿಗೆ ಕೆಲವು ಅಂಶಗಳನ್ನು ಕೊಟ್ಟರೆ ಸಾಕೆಂದು ಕಾಣುತ್ತದೆ.

1946 ನೆಯ ಇಸವಿವರೆಗೆ ಈ ಬಾಬಿನಲ್ಲಿ 11,25,630 ರೂಪಾಯಿಗಳು ಖರ್ಚಾಗಿತ್ತು. 820 I. P. ಸೆಟ್‌ಗಳನ್ನು ಕೊಡಲಾಗಿತ್ತು. 46-47 ರಿಂದೀಚೆಗೆ ಈ ಬಾಬಿನಲ್ಲಿ ಖರ್ಚಾಗಿರತಕ್ಕ ಒಟ್ಟು ಮೊಬಲಗು 47,30,886 ರೂಪಾಯಿಗಳು 1946ರಿಂದ 1956 ನೆಯ ಆಗಸ್ಟ್‌ವರೆಗೆ ಒದಗಿಸಿರತಕ್ಕ ಐ. ಪಿ. ಸೆಟ್‌ಗಳು 7,618. ಹಿಂದೆ ಇದ್ದುದೆಲ್ಲಾ ಕೇವಲ 820 ಐ. ಪಿ. ಸೆಟ್‌ಗಳು ಮಾತ್ರ. ಇಡೀ ಸಂಸ್ಥಾನಕ್ಕೆ ಆಗಿರತಕ್ಕ ಒಟ್ಟು ವೆಚ್ಚದಲ್ಲಿ ತುಮಕೂರು ಜಿಲ್ಲೆಯೊಂದಕ್ಕೇ ಹೆಚ್ಚು ಒದಗಿಸಲಾಗಿದೆ. 7.618 ಐ. ಪಿ. ಸೆಟ್‌ಗಳ ಪೈಕಿ ತುಮಕೂರಿಗೆ 1,344 ಐ. ಪಿ. ಸೆಟ್ಸ್‌ಗಳನ್ನು ಕೊಟ್ಟಿರುತ್ತೇವೆ. 1951-52ರಲ್ಲಿ ನಾವು ಒಟ್ಟು ಖರ್ಚು ಮಾಡಿದ ಮೊಬಲಗು 38 ಲಕ್ಷ 21 ಸಾವಿರ ರೂಪಾಯಿಗಳು. ಈ ಪೈಕಿ ತುಮಕೂರು ಜಿಲ್ಲೆಯೊಂದಕ್ಕೆ 9 ಲಕ್ಷ 91 ಸಾವಿರ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. 1952-53 ರಲ್ಲಿ ಆದ

ಒಟ್ಟು ಖರ್ಚು 65 ಲಕ್ಷ ರೂಪಾಯಿಗಳು; ಈ ಮೊಬಲಗಿನಲ್ಲಿ ತುಮಕೂರಿಗೆ ವಿಶೇಷ ಹಣವನ್ನು ಖರ್ಚು ಮಾಡಲಾಗಿದೆ. 1953-54ರಲ್ಲಿ ಆದ ಒಟ್ಟು ವೆಚ್ಚ 33 ಲಕ್ಷ 44 ಸಾವಿರ ರೂಪಾಯಿಗಳು. ಇದರಲ್ಲಿ 10 ಲಕ್ಷ 30 ಸಾವಿರ ರೂಪಾಯಿಗಳು ತುಮಕೂರು ಜಿಲ್ಲೆಗೆ ಖರ್ಚಾಗಿವೆ. 1954-55ರಲ್ಲಿ ತುಮಕೂರು ಜಿಲ್ಲೆಗೆ 8 ಲಕ್ಷ 81 ಸಾವಿರ ರೂಪಾಯಿಗಳು ಖರ್ಚಾಗಿವೆ. ಹೀಗೆ ಒಟ್ಟು ಸಂಸ್ಥಾನದಲ್ಲಿ ಆಗಿರತಕ್ಕ ವೆಚ್ಚದಲ್ಲಿ ತುಮಕೂರು ಜಿಲ್ಲೆಯೊಂದಕ್ಕೆ ಹೆಚ್ಚು ಹಣ ಖರ್ಚುಮಾಡಲಾಗಿದೆ. ಇಷ್ಟರಮಟ್ಟಿಗೆ ನಾವು ಅವರ ಜಿಲ್ಲೆಗೆ ಹಣವನ್ನು ಖರ್ಚು ಮಾಡಿದ್ದಾಗ್ಯೂ ಶ್ರೀಮಾನ್ ಹುಚ್ಚೇಗೌಡರು ಹೇಳಿದ ಮಾತುಗಳಿಂದ ನನ್ನ ಮನಸ್ಸಿಗೆ ತುಂಬ ನೋವಾಗಿದೆ. ಜಿಲ್ಲೆಯೊಂದಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸತಕ್ಕ ಬಗ್ಗೆ ತುಂಬಾ ಸಹಾಯ ಮಾಡಿದ್ದಾರೆಯೇ ಇಲ್ಲವೇ ಎಂಬುದಕ್ಕೆ ಅವರು ನಾವೀಗ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಸಾಕು. ಹಿಂದೆ ಈ ವಿದ್ಯುಚ್ಛಕ್ತಿ ಬಾಬಿನಲ್ಲಿ ನಮಗೆ ಬೇಕಾಗಿದ್ದಂಥ ಸಾಮಾನುಗಳ ಬೆಲೆ ಬಹಳ ಕಡಮೆ ಯಾಗಿತ್ತು. ಇತ್ತೀಚೆಗೆ ಈ ಸಾಮಾನುಗಳ ಧಾರಣೆ ದಿನ ದಿನಕ್ಕೂ ಏರುತ್ತಿದೆ. ನಾವು ವಿದ್ಯುಚ್ಛಕ್ತಿಯನ್ನು ಒದಗಿಸಲು ನಮಗೆ ಬೇಕಾಗಿರತಕ್ಕ ಸಾಮಾನುಗಳು ನಮ್ಮ ದೇಶದಲ್ಲಿ ತಯಾರಾಗುತ್ತಿಲ್ಲ. ಇವು ನಮಗೆ ಪರದೇಶಗಳಿಂದಲೇ ಬರಬೇಕಾಗಿದೆ. ಇದರ ಜೊತೆಗೆ ಕೂಲಿದರಗಳೂ ಸಹ ವಿಪರೀತ ಜಾಸ್ತಿ ಆಗಿವೆ. ಹೀಗೆ ಯಾವಾಗ ಈ ಸಾಮಾನುಗಳ ಬೆಲೆ ಮತ್ತು ಕೂಲಿದರಗಳು ಜಾಸ್ತಿ ಯಾಗುತ್ತವೋ ಆಗ ವಿದ್ಯುಚ್ಛಕ್ತಿಯ ಸರಬರಾಯಿಯಲ್ಲಿ ದರವನ್ನು ಹೆಚ್ಚಿಸತಕ್ಕದ್ದು ಸ್ವಾಭಾವಿಕವಾಗಿಯೇ ಇದೆ. ಅತ್ತಲಾಗಿ ಕೂಲಿಯವರಿಗೆ ಕೂಲಿಯ ದರಗಳನ್ನು ತಗ್ಗಿಸ ಬಾರದೆಂದು ತಾವುಗಳೇ ಹೇಳುತ್ತಿದ್ದೀರಿ. ಇತ್ತಲಾಗಿ ರೇಟನ್ನು ಇಳಿಸಬೇಕೆಂದರೆ ಹೇಗೆ ಸಾಧ್ಯ?

ಆದುದರಿಂದ ಈ ಖರ್ಚು ವೆಚ್ಚಗಳನ್ನು ಅನಾವಶ್ಯಕವಾಗಿ ನಾವೇನಾದರೂ ಮಾಡುತ್ತಿದ್ದೇವೆಂದು ಮಾನ್ಯಸದಸ್ಯರು ನಮ್ಮ ಗಮನಕ್ಕೆ ತಂದ ಪಕ್ಷದಲ್ಲಿ ತಮಗೆ ಸದಭಿಪ್ರಾಯವನ್ನು ಉಂಟುಮಾಡತಕ್ಕ ಜವಾಬ್ದಾರಿ ನಮ್ಮಲ್ಲಿರಬೇಕಾದದ್ದು ನ್ಯಾಯ. ಈಗ ನಾವು ಹೊಸದಾಗಿ ಒಂದು ಆಜ್ಞೆಯನ್ನು ಹೊರಡಿಸಿ ಒಂದು ಅಶ್ವಶಕ್ತಿಗೆ ಒಂದುಸಾವಿರ ರೂಪಾಯಿಗಳಷ್ಟು ಖರ್ಚು ಮಾಡಬಹುದೆಂದು ಇದ್ದುದನ್ನು 1,250 ರೂಪಾಯಿಗಳವರೆಗೂ ಖರ್ಚು ಮಾಡಬಹುದೆಂದು ಸೂಚಿಸಿದ್ದೇವೆ. ಇದಕ್ಕೆ ಕಾರಣ ನಮಗೆ ಬಲಿಗಿ ಮರದ ಕಂಬಗಳು ಸಾಕಾದಷ್ಟು ಪ್ರಮಾಣದಲ್ಲಿ ದೊರೆಯದೆ ಇರುವುದರಿಂದ ಕಬ್ಬಿಣದ ಕಂಬಗಳನ್ನು ಹಾಕಬೇಕಾದರೆ ಖರ್ಚು ಹೆಚ್ಚಾಗುತ್ತದೆ. ತುಮಕೂರು ಜಿಲ್ಲೆಗೆ ವಿಶೇಷ ರೀತಿಯ ಪ್ರೋತ್ಸಾಹ ಕೊಡಬೇಕೆಂದು ಆಜ್ಞೆಯನ್ನು ಸಹ ಕೊಟ್ಟಿದ್ದೇವೆ. ಎಲ್ಲೆಲ್ಲಿ ಮಳೆ ಬಾರದೆ ಬೆಳೆ ಹೋಗತಕ್ಕ ಸಂಭವವಿದೆಯೋ ಅಲ್ಲಿ ಜನರು ಬೇಸಾಯ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಆಯಾ ಪ್ರಾಂತಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆ.

ಅರಣ್ಯ ಇಲಾಖೆಯ ವಿಷಯದಲ್ಲಿ ಮಾತನಾಡುವಾಗ ಭದ್ರಾವತಿಯಲ್ಲಿ ಒಂದು ಪ್ರಸಂಗ ನಡೆಯಿತೆಂದು ನಮ್ಮ ಅವಗಾಹನೆಗೆ ತಂದರು. ಅದನ್ನು ಕೂಲಂಕಷವಾಗಿ ಪರಶೀಲನೆ ಮಾಡುತ್ತೇವೆ. ಅದು ಪರಿಶೀಲನೆಯಾದ ಮೇಲೆ ಅದರಲ್ಲಿ ತಪ್ಪಿತಸ್ಥರು ಯಾರಾದರೂ ಇದ್ದ ಪಕ್ಷದಲ್ಲಿ ಅವರಿಗೆ ಶಿಕ್ಷೆ ವಿಧಿಸಲ್ಪಡುತ್ತದೆ. ಹಾಗೆ ಶಿಕ್ಷೆಯನ್ನು ವಿಧಿಸುವ ಪೂರ್ವ ಇದರ ಸಂಬಂಧದಲ್ಲಿ ಸಾಕ್ಷ್ಯ, ಸಾಹಿತ್ಯಗಳೇನಾದರೂ ಇದ್ದರೆ, ಅವನ್ನು ಒದಗಿಸಿದರೆ ನಾವು ನಿಮಗೆ ಋಣಿಗಳಾಗಿರುತ್ತೇವೆ.

ಆಮೇಲೆ ಸ್ಟಾಕುಗಳ ವಿಷಯವನ್ನು ಹೇಳಿದರು. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸ್ಟಾಕು ಹೇರಳವಾಗಿದೆ, ಅದನ್ನು ಕಡಮೆ ಮಾಡಬೇಕೆಂದು ಹೇಳಿದರು. ಈ ಸಂಬಂಧದಲ್ಲಿ ತಮ್ಮ ಅವಗಾಹನೆಗೆ ಒಂದು ವಿಷಯವನ್ನು ತರಬೇಕೆಂದಿದ್ದೇವೆ. ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಸಾಮಾನುಗಳು ಬಹುಕಾಲಕ್ಕೆ ಸವೆದು ಹೋಗತಕ್ಕವು,ಬಹಳವಿದೆ. ಅವುಗಳನ್ನು ಇವೊತ್ತಿನ ದಿವಸ ಮಾರಿಬಿಟ್ಟರೆ ನಮಗೆ ಸಮಯಕ್ಕೆ ಬೇಕಾದಾಗ ಸಿಕ್ಕುವುದಿಲ್ಲ. ಅವುಗಳ ಬೆಲೆ ಹೆಚ್ಚಾಗಿದೆ. ಇವೊತ್ತಿನದಿವಸ ಅವು ಕೆಲಸಕ್ಕೆ ಅನುಕೂಲವಾಗಿಲ್ಲ. ಅವು ಯಾವಾಗ ನಮಗೆ ಅನುಕೂಲವಾಗುತ್ತವೆಯೋ ನಮಗೆ ಗೊತ್ತಾಗುವುದಿಲ್ಲ. ಹಳೆಯ ಪದಾರ್ಥಗಳು, ಬಹಳ ವರ್ಷಗಳ ಹಿಂದೆ ಕೊಂಡುಕೊಂಡ ಪದಾರ್ಥಗಳು ಎಷ್ಟೋ ಇವೆ. ಒಂದೊಂದು ಕಡೆಯೂ ಉಪಯೋಗವಾಗತಕ್ಕ, ಪ್ರಯೋಜನವಾಗತಕ್ಕ ಪದಾರ್ಥಗಳು ಸುಮಾರು ಲಕ್ಷಾಂತರ ರೂಪಾಯಿಗಳಷ್ಟಿವೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಮೂರು ವರ್ಷಗಳಾದ ಮೇಲೆ ಈ ಸಾಮಾನುಗಳು ಪ್ರಯೋಜನಕ್ಕೆ ಬರುವುದಿಲ್ಲವೆಂದು ಹೇಳುತ್ತಾರಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ಪದಾರ್ಥಗಳು ವಿಶೇಷವಾಗಿ ಸವೆಯುವುದಿಲ್ಲ. ಅವು ಸವೆದಾಗ ನಮ್ಮಲ್ಲಿ ಸ್ಟಾಕು ಇಟ್ಟು ಕೊಂಡಿದ್ದರೆ ಅನುಕೂಲವಾಗುತ್ತದೆಯೇ ಹೊರತು, ಅವು ಸವೆದು ಹೋದಾಗ ಬೇರೆ ತರಿಸಿ ರಿಪೇರಿಮಾಡುವ ಹೊತ್ತಿಗೆ ಬಹಳ ಕಷ್ಟ ಮತ್ತು ತೊಂದರೆಗಳಾಗುತ್ತವೆ. ಈ ಪದಾರ್ಥಗಳು ನಮಗೆ ಎಲ್ಲ ಕಾಲಗಳಲ್ಲಿಯೂ ಸಿಕ್ಕುವುದಿಲ್ಲ. Cable wire Copper wire ಮುಂತಾದುವನ್ನು ಅವು ಒದಗಿದಾಗ ತೆಗೆದುಕೊಂಡು ಬಂದು ಅವನ್ನು ಸಿದ್ಧವಾಗಿಟ್ಟುಕೊಂಡಿದ್ದರೆ ನೀವುಗಳು ಕೇಳಿದಾಗ ವಿದ್ಯುಚ್ಛಕ್ತಿಯನ್ನು ಸಾಧ್ಯವಾದಷ್ಟು ಬೇಗ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ಸದುದ್ದೇಶದಿಂದ ಸ್ಟಾಕನ್ನು ಹೆಚ್ಚಾಗಿ ತರಿಸಿಕೊಂಡು ಇಟ್ಟುಕೊಂಡಿದ್ದೇವೆ. ಅನಾವಶ್ಯಕವಾಗಿ ಪದಾರ್ಥಗಳನ್ನು ಸ್ಟಾಕಿನಲ್ಲಿಟ್ಟು ಕೊಳ್ಳಬೇಕೆಂಬುದು ಸರ್ಕಾರದವರ ಉದ್ದೇಶವಲ್ಲ. ಇಷ್ಟು ವಿವರಣೆಯನ್ನು ಕೊಟ್ಟಮೇಲೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗಿದೆ ಎಂದು ತಿಳಿದುಕೊಂಡಿದ್ದೇನೆ; ಈ ಡಿಮ್ಯಾಂಡುಗಳಿಗೆ ತಮ್ಮ ಅಂಗೀಕಾರವನ್ನು ಕೊಡಬೇಕೆಂದು ಕೇಳುತ್ತೇನೆ.

*Sri H. SIDDAVEERAPPA.—Sir, I have only to refer to one or two points raised during the course of the discussion. The Official Branch of the Insurance Department will be continued, Regarding the loans and surplus premia. this matter will have to be referred to the Finance Commission. We have brought it to their notice. Regarding the point raised pleading for the creation of superannuation fund, I would like to bring to the notice of the Hon'ble Members that it is done nowhere in any part of India.

Sri S. SRINIVASA IYENGAR.—It is recommended by the Committee.

Sri H. SIDDAVEERAPPA.—But as I have already said, the recommendations of the Committee are under examination. It is Customary to charge it everyyear to the Consolidated Fund.

Regarding the Legislature building referred to in the year 1952-53, it is for Vidhana Soudha, and not for Legislators' Home.

Sri S. SRINIVASA IYENGAR.—I only referred to the words contained in the printed book.

Sri H. SIDDAVEERAPPA.—I will give this clarification. It refers to Vidhana Soudha. I believe the other points raised by Sri Hutche Gowda will be borne in mind. He has been one of our elder members who has brought certain points for our consideration. I will bear in mind what he has said and see what could be done in the matter.

Mr. SPEAKER.—The question is:

"That a further sume not exceeding Rs. 1,60,200 be granted to the Government, to cover the excess expenditure incurred over the voted grants during the year ended 31st day of March 1952, in respect of 'Forest'."

The motion was adopted.

The question is:

"That the sums not exceeding the sums specified in the list of motions for Demands for grants to cover expenditure incurred in excess of voted grants for the years 1951-52, 1952-53 and 1953-54 circulated to the Members be granted to the Government to regularise the excess expenditure incurred over voted grants."

The motion was adopted.

Discussion on Q. No. 650 *re*. Scales of Pay of Special Revenue Inspectors.

Mr. SPEAKER.—Now there is the Half-an-hour discussion raised by Sri G. Puttaswamy on Question No. 650.

As deseird by the Speaker the motions for demands for excess grants adopted by the House are reproduced below:

1951-52.

DEMAND NO. 6.—CHARGES ON ACCOUNT OF MOTOR VEHICLES ACTS.

12. CHARGES ON ACCOUNT OF MOTOR VEHICLES ACTS.

"That a further sum not exceeding Rs. 1,65,600 be granted to the Government to cover the excess expenditure incurred over the voted grants during the year ended 31st day of March 1952, in respect of 'Charges on account of Motor Vehicles Acts'."

DEMAND NO. 8.—IRRIGATION.

18. OTHER REVENUE EXPENDITURE FINANCED FROM ORDINARY REVENUES.

"That a further sum not exceeding Rs. 10,30,600 be granted to the Government to cover the excess expenditure incurred over the voted grants during the year ended 31st day of March 1952, in respect of 'Irrigation'."

DEMAND NO. 12.—GENERAL ADMINISTRATION (STATE LEGISLATURE AND ELECTION CHARGES).

25. GENERAL ADMINISTRATION.

"That a further sum not exceeding Rs. 5,73,800 be granted to the Government to cover the excess expenditure incurred over the voted grants during the year ended 31st day of March 1952, in respect of 'General Administration—(State Legislature and Election Charges'."

DEMAND NO. 13.—GENERAL ADMINISTRATION-(DISTRICT ADMINISTRATION).

25. GENERAL ADMINISTRATION.

"That a further sum not exceeding Rs. 2,37,300 be granted to the Government to cover the excess expenditure incurred over

the voted grants during the year ended 31st day of March 1952, in respect of 'General Administration'."

DEMAND NO. 25.—CO-OPERATION

42. Co-operation.

"That a further sum not exceeding Rs. 50,400 be granted to the Government to cover the excess expenditure incurred over the voted grants during the year ended 31st day of March 1952, in respect of 'Co-operation'."

DEMAND NO. 31—SUPERANNUATION ALLOWANCES AND PENSIONS.

55. Superannuation Allowances and Pensions.

"That a further sum not exceeding Rs. 1,37,500 be granted to the Government to cover the excess expenditure incurred over the voted grants during the year ended 31st day of March 1952, in respect of 'Superannuation Allowances and Pensions'."

DEMAND NO. 38.—WORKING EXPENSES ELECTRICITY SCHEMES.

XLI. Receipts from Electricity Schemes—Working Expenses.

"That a further sum not exceeding Rs. 44,600 be granted to the Government to cover the excess expenditure incurred over the voted grants during the year ended 31st day of March 1952, in respect of 'Working Expenses—Electricity Schemes'."

DEMAND NO. 39.—WORKING EXPENSES—ROAD TRANSPORT SCHEMES.

XLVI. A. Receipts from Road Transport Schemes—Working Expenses.

"That a further sum not exceeding Rs. 3,19,900 be granted to the Government to cover the excess expenditure incurred over the voted grants during the year ended 31st day of March 1952, in respect of 'Working Expenses—Road Transport Schemes'."

1952-53

DEMAND No. 4.—FOREST.

10. Forest.

"That a further sum not exceeding Rs. 41,200 be granted to the Government to cover the excess expenditure incurred over the voted grants during the year ended 31st day of March 1953, in respect of 'Forest'."

DEMAND No. 6—CHARGES ON ACCOUNT OF MOTOR VEHICLES ACTS.

12. Charges on account of Motor Vehicles Acts.

"That a further sum not exceeding Rs. 1,90,100 be granted to the Government to cover the excess expenditure incurred over the voted grants during the year ended 31st day of March 1953, in respect of 'Charges on account of Motor Vehicles Acts'."

DEMAND No. 13.—GENERAL ADMINISTRATION (DISTRICT ADMINISTRATION).

25. General Administraion.

"That a further sum not exceeding Rs. 2,98,700 be granted to the Government to cover the excess expenditure incurred over the voted grants during the year ended 31st day of March 1953, in respect of 'General Administration (District Administration)'."

DEMAND No. 36.—WORKING EXPENSES (FOREST).

X. Forest—3 (1) Wood Preservation Plant.

"That a further sum not exceeding Rs. 31,600 be granted to the Government to cover the

(MR. SPEAKER.)

excess expenditure incurred over the voted grants during the year ended 31st day of March 1953, in respect of 'Working Expenses (Forest)'."

DEMAND No. 41-A.—CAPITAL ACCOUNT OF CIVIL WORKS OUTSIDE THE REVENUE ACCOUNT.

81. CAPITAL ACCOUNT OF CIVIL WORKS OUTSIDE THE REVENUE ACCOUNT.

"That a further sum not exceeding Rs. 3,900 be granted to the Government to cover the excess expenditure incurred over the voted grants during the year ended 31st day of March 1953, in respect of 'Capital Account of Civil Works outside the Revenue Account'."

DEMAND No. 42.—ELECTRICITY SCHEMES.

81.-A. CAPITAL OUTLAY ON ELECTRICITY SCHEMES.

"That a further sum not exceeding Rs. 64,84,800 be granted to the Government to cover the excess expenditure incurred over the voted grants during the year ended 31st day of March 1953, in respect of 'Capital Outlay on Electricity Schemes'."

1953-54

DEMAND No. 4.—FOREST.

10. FOREST.

"That a further sum not exceeding Rs. 10,200 be granted to the Government to cover the excess expenditure incurred over the voted grants during the year ended 31st day of March 1954, in respect of 'Forest'."

DEMAND No. 8.—OTHER REVENUE EXPENDITURE FINANCED FROM ORDINARY REVENUES.

18. OTHER REVENUE EXPENDITURE FINANCED FROM ORDINARY REVENUES.

"That a further sum not exceeding Rs. 4,81,900 be granted to the Government to cover the excess expenditure incurred over the voted grants during the year ended 31st day of March 1954, in respect of Other Revenue Expenditure financed from Ordinary Revenues'.

DEMAND No. 32.—SUPERANNUATION ALLOWANCES AND PENSIONS.

55. SUPERANNUATION ALLOWANCES AND PENSIONS.

"That a further sum not exceeding Rs. 74,000 be granted to the Government to cover the excess expenditure incurred over the voted grants during the year ended 31st day of March 1954, in respect of 'Superannuation Allowances and Pensions'."

DEMAND No. 34.-MISCELLANEOUS

57. MISCELLANEOUS.

"That a further sum not exceeding Rs. 71,000 be granted to the Government to cover the excess expenditure incurred over the voted grants during they eer ended 31st day of March 1954, in respect of 'Miscellaneous'."

DEMAND No. 36.—WORKING EXPENSES (FOREST).

X. FOREST.

"That a further sum not exceeding Rs. 2,000 be granted to the Government to cover the excess expenditure incurred over the voted grants during the year ended 31st day of March 1954, in respect of 'Working Expenses (Forest)'."

DEMAND No. 38.—WORKING EXPENSES (ELECTRICITY SCHEMES).

XLI. RECEIPTS FROM ELECTRICITY SCHEMES.

"That a further sum not exceeding Rs. 3,08,400 be granted to the Government to cover the excess expenditure incurred over the voted grants during the year

ended 31st day of March 1954, in respect of 'Working Expenses (Electricity Schemes)'."

DEMAND NO. 41-A.—CAPITAL ACCOUNT OF CIVIL WORKS OUTSIDE THE REVENUE ACCOUNT.

81. CAPITAL ACCOUNT OF CIVIL WORKS OUTSIDE THE REVENUE ACCOUNT.

"That a further sum not exceeding Rs. 7,01,900 be granted to the Government to cover the excess expenditure incurred over the voted grants during the year ended 31st day of March 1954, in respect of 'Capital Account of Civil Works outside the Revenue Account'."

DEMAND No. 42.—CAPITAL OUTLAY ON ELECTRICITY SCHEMES.

81-A. CAPITAL OUTLAY ON ELECTRICITY SCHEMES.

"That a further sum not exceeding Rs. 22,09,500 be granted to the Government to cover the excess expenditure incurred over the voted grants during the year ended 31st dayof March 1954, in respect of 'Capital Outlay on Electricity Schemes'."

DEMAND NO. 43.—CAPITAL OUTLAY ON ROAD AND WATER TRANSPORT SCHEMES.

82-B. CAPITAL OUTLAY ON ROAD AND WATER TRANSPORT SCHEMES OUTSIDE THE REVENUE ACCOUNT.

"That a further sum not exceeding Rs. 9,000 be granted to the Government to cover the excess expenditure incurred over the voted grants during the year ended 31st day of March 1954, in respect of 'Capital Outlay on Road and Water Transport Schemes'."

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ 650ನೆ ಪ್ರಶ್ನೆಗೆ ಉತ್ತರವಾಗಿ, ಮಾನ್ಯ ರೆವಿನ್ಯೂ ಮಂತ್ರಿಗಳು, ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳ ಕೆಲಸಗಳು ಎಷ್ಟಿವೆ ಎನ್ನುವುದನ್ನು 24ನೇ ತಾರೀಖು ತಿಳಿಸಿದ್ದಾರೆ. ಅದರಲ್ಲಿ ನೋಡಿದರೆ ಸುಮಾರು ಏಳೆಂಟು ತರಹ ಕೆಲಸಗಳನ್ನು ಇವರು ಮಾಡಬೇಕೆಂದು ತಿಳಿಸಿದ್ದಾರೆ. ಈ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಒಂದು ತಾಲ್ಲೂಕನ್ನೇ jurisdiction ಮಾಡಿ, ಆ ತಾಲ್ಲೂಕಿನಲ್ಲಿರತಕ್ಕ ಎಲ್ಲ ಗ್ರಾಮಗಳನ್ನೂ ಅವರು ಸುತ್ತಿ ನಿಮ್ನ ವರ್ಗದವರ ಆರ್ಥಿಕ, ಸಾಮಾಜಿಕ ಮತ್ತು ವಿದ್ಯಾಭ್ಯಾಸ ಇವುಗಳ ಅಭಿವೃದ್ಧಿಗಾಗಿ ದುಡಿಯಬೇಕೆಂದು ಅವರನ್ನು ನೇಮಿಸಿದ್ದಾರೆ. ಇವರು ನಿಮ್ನ ವರ್ಗದವರ ಆರ್ಥಿಕ, ಅಥವ ಸಮಾಜಿಕ ಅಥವ ವಿದ್ಯಾಭ್ಯಾಸ, ಇವುಗಳಲ್ಲಿ ಒಂದೊಂದು ವಿಚಾರದಲ್ಲಿಯೂ ಕೆಲಸ ಮಾಡಬೇಕಾದರೆ ಬಹಳ ಕಷ್ಟಪಟ್ಟು ದುಡಿಯಬೇಕಾಗಿರತಕ್ಕದ್ದು ಸರ್ಕಾರಕ್ಕೆ ಗೊತ್ತಿದೆ. ಅಲ್ಲದೆ ನಿಮ್ನ ತರಗತಿಯವರ ಅಭಿವೃದ್ಧಿಗಾಗಿ, ನಿಮ್ನ ವರ್ಗದವರನ್ನೇ Special Revenue Inspectors for Depressed Classes ಎಂದು ಯಾತಕ್ಕೋಸ್ಕರ ಮಾಡಿದರೆಂಬುದನ್ನು ಸರ್ಕಾರದವರು ಇನ್ನೂ ಗಮನದಲ್ಲಿ ಇಟ್ಟಿಲ್ಲವೆನ್ನುವ ಭಾವನೆಯನ್ನು ಸರ್ಕಾರದವರ ಗಮನಕ್ಕೆ ತಂದು ಅವರು ಈ ಭಾವನೆಯನ್ನು ನೆನೆಸಿಕೊಳ್ಳಬೇಕೆಂದು ಒತ್ತಾಯ ಮಾಡಲು ಈ ಪ್ರಶ್ನೆಯನ್ನು ನಾನು ಮುಖ್ಯವಾಗಿ ಕೇಳಿದ್ದೇನೆ. ಈ ಸಂಬಂಧದಲ್ಲಿ ನಿಮ್ನವರ್ಗದ ಅಧಿಕಾರಿಗಳನ್ನೇ ನಿಮ್ನ ವರ್ಗದವರ ಅಭಿವೃದ್ಧಿ ಕಾರ್ಯಗಳಿಗಾಗಿ ಏಕೆ ನೇಮಿಸಿದರು ಎಂದು ತಿಳಿಸಲಿಚ್ಛಿಸುತ್ತೇನೆ. ಸರ್ಕಾರದವರು ನಿಮ್ನ ವರ್ಗದವರ ಅಭಿವೃದ್ಧಿಗಾಗಿ ಹತ್ತು ಹದಿನೈದು ವರ್ಷಗಳಿಂದಲೂ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಕೂಡ ಅವರ ಅಭಿವೃದ್ಧಿಯು ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಆಗದಿರುವುದನ್ನು ನೋಡಿ, ಅವರ ಕಷ್ಟಗಳನ್ನು ಮನಗಂಡು ಸಾರ್ವಜನಿಕರು ಮತ್ತು ಸಾರ್ವಜನಿಕರ ಮುಂದಾಳುಗಳು ಶಾಸನ ಸಭೆಗಳಲ್ಲಿಯೂ ಮತ್ತು ಇತರ ಕಡೆಗಳಲ್ಲಿಯೂ ಒತ್ತಾಯ ಮಾಡಿದಮೇಲೆ ನಿಮ್ನ ವರ್ಗಕ್ಕೆ ಸೇರಿದ ಕೆಲವು ಸಾಮಾಜಿಕ ಕೆಲಸಗಾರರನ್ನು ನೇಮಕ ಮಾಡತಕ್ಕ ಆಲೋಚನೆ ಸರ್ಕಾರಕ್ಕೆ ಇದ್ದಿತು. ಈ ಸಾಮಾಜಿಕ ಸುಧಾರಕರನ್ನು ಹರಿಜನರ ಅಭಿವೃದ್ಧಿ ಬಗ್ಗೆ ನೇಮಿಸಿದರೆ ಅವರ ಮೇಲ್ವಿಚಾರಣೆಗಾಗಿ ಯಾರಾದರೂ ಒಬ್ಬ ಆಫೀಸರು ಅಥವಾ ಒಂದು ಇಲಾಖೆ ಇರಬೇಕು. ಆದರೆ ಅದು ಸಾಧ್ಯವಿಲ್ಲವೆಂದು ತಿಳಿದು ಬಂದುದರಿಂದ ನಿಮ್ನ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ಸಾಮಾಜಿಕ ಸುಧಾರಿತರು ಎನ್ನುವ ಹೆಸರಿನಲ್ಲಿ ಕರೆಯುವುದಕ್ಕಿಂತ Depressed Class Revenue Inspectors ಎಂಬುದಾಗಿ ಕರೆಯಬೇಕೆಂದು ತೀರ್ಮಾನ ಮಾಡಿ ಅವರನ್ನು ನೇಮಕ ಮಾಡಿದರು ಎಂದು ತಿಳಿಯುತ್ತೇನೆ ಮತ್ತು ರೆಗ್ಯುಲರ್ ರೆವಿನ್ಯೂ ಇನ್ಸ್‌ಪೆಕ್ಟರುಗಳಿಂದ ನಿಮ್ನ ವರ್ಗದವರಿಗೆ ಅನ್ಯಾಯವಾಗುತ್ತದೆ. ಅವರ ಅಭಿವೃದ್ಧಿಗೆ ಕಂಟಕವಾಗುತ್ತದೆ ಮತ್ತು ಜಮೀನು ವಿಲೇವಾರಿಯಲ್ಲಿ ಹೆಚ್ಚು ಅನ್ಯಾಯವಾಗುತ್ತದೆಂದು ಸರ್ಕಾರದವರ ಗಮನಕ್ಕೆ ಬಂದು ಆ ಸಂದರ್ಭದಲ್ಲಿ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಿದರು ಎಂದು ತಿಳಿಯುತ್ತೇನೆ. ಅಲ್ಲದೆ

12-30 P.M.

ನಿಮ್ನ ವರ್ಗದ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ವಹಿಸಿದ್ದ ಕೆಲಸವನ್ನು ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ವಹಿಸಿದರೆ ನಿಮ್ನ ವರ್ಗದವರ ದರಖಾಸ್ತಿನಮೇಲೆ ಜಮೀನು ವಿಲೇವಾರಿ ಮಾಡುವ ಸಂದರ್ಭದಲ್ಲಿ ಅನ್ಯಾಯವಾಗುತ್ತದೆ. ರೆವೆನ್ಯೂ ಇನ್ಸ್‌ಪೆಕ್ಟರು ಸ್ಥಳ ಅಜಮಾಯಿಷಿ ಮಾಡಲು ಬಂದಾಗ ಮಹಜರ್ ಮಾಡಬೇಕಾಗುತ್ತದೆ. ಆಗ ಅಲ್ಲಿನ ಜನರ ಸಹಕಾರವಿಲ್ಲದಿದ್ದರೆ

(ಶ್ರೀ ಜಿ. ಪುಟ್ಟಸ್ವಾಮಿ.)

ಜಮೀನಿನ ವಿಷಯದಲ್ಲಿ ರಿಕಾರ್ಡ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ; ಆ ಸಂದರ್ಭದಲ್ಲಿ ಗ್ರಾಮದಲ್ಲಿರುವ ಯಾರಾದರೂ ಹರಿಜನರ ಅಭಿವೃದ್ಧಿಗೆ ವಿರೋಧವಾಗಿರುವವರು, ಹರಿಜನರಿಗೆ ಜಮೀನು ಮಂಜೂರು ಮಾಡಬೇಡಿ, ಏಕೆಂದರೆ, ಅರ್ಜಿದಾರನನ್ನ ಮನೆಯಲ್ಲೇ ಕೆಲಸಮಾಡಿಕೊಂಡಿದ್ದಾನೆ, ಜಮೀನು ಮಂಜೂರು ಮಾಡಿದರೆ ಮನೆ ಕೆಲಸ ಬಿಟ್ಟುಹೋಗುತ್ತಾನೆ ಎಂದು ಹೇಳಿದರೆ ತನಗೆ ಜಮೀನು ಬೇಕಾಗಿಲ್ಲವೆಂದು ಜಮೀನು ದರಖಾಸ್ತು ಅರ್ಜಿಮೇಲೆ ಬರೆದುಕೊಂಡು ಅರ್ಜಿದಾರರಿಂದ ರುಜು ಮಾಡಿಸಿಕೊಂಡು ಜಮೀನು ದರಖಾಸ್ತು ಅರ್ಜಿಗಳನ್ನು ವಜಾ ಮಾಡಿರುವ ನಿದರ್ಶನಗಳು ಬೇಕಾದಷ್ಟಿವೆ. ಹೀಗಾಗಿ ಹರಿಜನರಿಗೆ ಜಮೀನು ದೊರೆಯದೆ ಹೋಗಿರುವ ನಿದರ್ಶನಗಳಿವೆ. ಹರಿಜನರ ಅಭಿವೃದ್ಧಿಯಾಗಬೇಕೆಂದಿರುವಾಗ ಈ ಕೆಲಸವನ್ನು ಹರಿಜನರಲ್ಲದ ರೆವೆನ್ಯೂ ಇನ್ಸ್‌ಪೆಕ್ಟರಿಗೆ ವಹಿಸಿದರೆ ಅನ್ಯಾಯವಾಗುತ್ತದೆ. ಹರಿಜನರ ಅಭಿವೃದ್ಧಿಯಾಗುವುದಿಲ್ಲ ಎಂದು ಆಗಾಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇವೆ. ನಿಮ್ನ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಕೆಲಸವಿಲ್ಲವೆಂದು ಸರ್ಕಾರ ಹೇಳುವುದನ್ನು ಒಪ್ಪುವುದಿಲ್ಲ, ಸಾಕಾದಷ್ಟು ಕೆಲಸವಿದೆ, ಕೆಲಸ ಇರುವುದರಿಂದಲೇ ನೇಮಕ ಮಾಡಿದ್ದಾರೆ. ಅಲ್ಲದೆ ನಿಮ್ನ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರಿಗೆ 50 ರೂಪಾಯಿಗಳ ನಿರಖು ಸಂಬಳ ಮಾತ್ರವಿದೆ. ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳು ಹೆಚ್ಚಾದ ಗ್ರೇಡನ್ನು ಪಡೆದಿದ್ದಾರೆ. ಡಿಪ್ರೆಸ್ಡ್ ಕ್ಲಾಸ್ ರೆವೆನ್ಯೂ ಇನ್ಸ್‌ಪೆಕ್ಟರು ಎಸ್. ಎಸ್. ಎಲ್. ಸಿ. ಪಾಸುಮಾಡಿ ಕೇವಲ 50 ರೂಪಾಯಿಗಳ ತಲಬಿನಲ್ಲೇ ಕೆಲಸ ಮಾಡಬೇಕಾಗಿದೆ. ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರಲ್ಲಿ ಕೆಲವರು ಎಲ್. ಎಸ್. ಮಾಡಿದ್ದರೂ ಹೆಚ್ಚಿನ ಗ್ರೇಡ್ ಅಂದರೆ ರನ್ನಿಂಗ್ ಸ್ಕೇಲ್ ಕೊಟ್ಟಿದ್ದಾರೆ. ಹೀಗೆ ಎಸ್. ಎಸ್. ಎಲ್. ಸಿ. ಪಾಸು ಮಾಡಿದ್ದರೂ ತಲಬಿನಲ್ಲಿ ತಾರತಮ್ಯವಿರುವುದು ತುಂಬಾ ಅನ್ಯಾಯ. ಇದು ಸರಿಯಲ್ಲ. ಎರಡನೆಯ ದರ್ಜೆ ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ 50—3—80 ರೂಪಾಯಿಗಳ ಸ್ಕೇಲಿದೆ, ಮೊದಲನೆಯ ದರ್ಜೆಯವರಿಗೆ 60—4—100 E.B. 5—150 ರೂಪಾಯಿಗಳ ಗ್ರೇಡಿದೆ. ಹೀಗೆ ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಹೆಚ್ಚಿನ ಗ್ರೇಡ್ ಇರುವಾಗ ನಿಮ್ನ ತರಗತಿಗಳಿಗೆ ಸಂಬಂಧಪಟ್ಟ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ 50 ರೂಪಾಯಿ ಮಾತ್ರ ಕೊಡುವುದು ಸರಿಯಲ್ಲ.

ಇನ್ನೊಂದು ವಿಷಯದ ಕಡೆಗೆ ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ. ನಿಮ್ನ ವರ್ಗದ ಇಲಾಖೆಯವರ ಸಂಬಳಸಾರಿಗೆ ಬಗ್ಗೆ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಖರ್ಚು ಬೀಳುತ್ತಾ ಇತ್ತು. ಹಾಲಿ ನಿಮ್ನ ವರ್ಗದ ಖಾತೆಯಿಂದಲೇ ಈ ಸಂಬಂಧ ಹಣ ಖರ್ಚಾಗುತ್ತಿರುವಾಗ ಈ ಇಲಾಖೆಯಲ್ಲೇ ಹರಿಜನರ ಅಭಿವೃದ್ಧಿಗಾಗಿ ದುಡಿಯುವ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಸಂಬಳ ಕಡಮೆಮಾಡಿರುವುದು ಸರಿಯಲ್ಲವೆಂದು ಹೇಳಬೇಕಾಗಿದೆ. ಹೀಗೆ ಕಡಮೆ ಸಂಬಳ ಕೊಡುವುದರಿಂದ ದಕ್ಷತೆ ಕಡಮೆಯಾಗುತ್ತದೆ. ಅಲ್ಲದೆ ಅವರನ್ನು ನಾನಾ ಕೆಲಸಗಳಿಗೆ ಇಲಾಖೆಯವರು ನೇಮಿಸುತ್ತಿರುವುದರಿಂದ ನಿಮ್ನ ವರ್ಗದ ಕೆಲಸಕ್ಕೆ ಕುಂದುಕ ಬಂದಿದೆಯೆಂದು ಹೇಳಬೇಕಾಗಿದೆ. ನಿಮ್ನ ವರ್ಗದ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ನಿಮ್ನ ವರ್ಗದ ಕೆಲಸಕ್ಕಲ್ಲದೆ ಬೇರೆ ರೆವೆನ್ಯೂ ಕೆಲಸಗಳಿಗೆ ಡೆಪ್ಯೂಟ್ ಮಾಡುವುದು ಸರಿಯಲ್ಲ, ಅವರನ್ನು ನಿಮ್ನ ವರ್ಗದ ಅಭಿವೃದ್ಧಿಗೇ ಉಪಯೋಗಿಸಿಕೊಳ್ಳಬೇಕು. ಇದಕ್ಕೆ ಸರ್ಕಾರದವರು ಗಮನ ಕೊಡಬೇಕು. ಅಲ್ಲದೆ ರೆಗ್ಯುಲರ್ ರೆವಿನ್ಯೂ ಇನ್ಸ್‌ಪೆಕ್ಟರುಗಳಾಗಿರುವ ನಿಮ್ನ ವರ್ಗದ ಅಧಿಕಾರಿಗಳನ್ನು ನಿಮ್ನ ವರ್ಗದ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನಾಗಿ ವರ್ಗಾಯಿಸಲು ಒಂದೇ ವಿಧವಾದ ಸ್ಕೇಲು ಇದ್ದರೆ ಸಾಧ್ಯವಾಗುತ್ತದೆ ಮತ್ತು ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ತಮ್ಮ ಪ್ರವಾಸಕಾಲದಲ್ಲಿ ತಾಲ್ಲೂಕು ಆಫೀಸುಗಳಿಗೆ ಭೇಟಿ ಕೊಟ್ಟು ನಿಮ್ನ ವರ್ಗದ ರೆವಿನ್ಯೂ ಇನ್ಸ್‌ಪೆಕ್ಟರುಗಳ ಕರ್ತವ್ಯಕ್ಕೆ ಲೋಪ ಬಂದಿದೆಯೆ, ಅವರು ಕೆಲಸಮಾಡಲು ಏನಾದರೂ ತೊಂದರೆಯಿದೆಯೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಕೋರುತ್ತೇನೆ. ಈ ವಿಚಾರವನ್ನು ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈಗಲಾದರೂ ಮಾನ್ಯ ಮಂತ್ರಿಗಳು ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಯಾವ ಸದುದ್ದೇಶದಿಂದ ನಿಮ್ನ ವರ್ಗದ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಿದ್ದಾರೆಯೋ ಆ ಉದ್ದೇಶ ಸಫಲವಾಗುವಂತೆ ಮಾಡಲು ನಿಮ್ನ ವರ್ಗದ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದಲ್ಲದೆ ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗಿರುವಂತೆ ರನಿಂಗ್‌ಸ್ಕೇಲ್ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಶ್ರದ್ಧೆಯಿಂದ ಈ ವಿಚಾರವನ್ನು ವಿಮರ್ಶೆ ಮಾಡಿ ಸರಿಪಡಿಸುತ್ತಾರೆಂದು ನಂಬಿರುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವೆನ್ಯೂ ಮತ್ತು ವ್ಯವಸಾಯ ಮಂತ್ರಿಗಳು).—ಸ್ವಾಮಿ, ಪ್ರಶ್ನೋತ್ತರಗಳ ಕಾಲದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರಿಗೆ ಸರ್ಕಾರದವರು ಕೆಲವು ಉತ್ತರಗಳನ್ನು ಕೊಟ್ಟರು. ಇದರಲ್ಲಿ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ರನಿಂಗ್ ಗ್ರೇಡನ್ನು ನಾವು ತಪ್ಪಿಸಬೇಕೆಂದು ಉದ್ದೇಶವುಳ್ಳವರಾಗಿಲ್ಲ. 40 ರೂಪಾಯಿಗಳನ್ನು ತೆಗೆದುಕೊಳ್ಳುವ ಎರಡನೆಯ ಗ್ರೇಡ್ ಗುಮಾಸ್ತೆಯನ್ನು ಏಕ್‌ದಂ 50 ರೂಪಾಯಿಗಳ ತಲಬಿನಮೇಲೆ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರಾಗಿ ನೇಮಕ ಮಾಡಿದರು. ಈಚೆಗೆ ಕೆಲವು ವರ್ಷಗಳಿಂದ ಕೆಲಸಮಾಡಿಕೊಂಡು ಬರುತ್ತಿದ್ದಾನೆ. 40 ರೂಪಾಯಿಗಳಿಂದ ಪ್ರಾರಂಭವಾಗಿ ರನಿಂಗ್ ಗ್ರೇಡ್ ಇರುವವರು ಗುಮಾಸ್ತರುಗಳಾಗಿದ್ದಾರೆ. ಅವರು 6 ವರ್ಷಗಳು ಕೆಲಸ ಮಾಡಿದಮೇಲೆ 50 ರೂಪಾಯಿಗಳಮೇಲ್ಪಟ್ಟು ಹೋಗುತ್ತಾರೆ. ಈ ರೆವೆನ್ಯೂ ಇನ್ಸ್‌ಪೆಕ್ಟರಿಗೆ 10 ರೂಪಾಯಿಗಳು ಏಕ್‌ದಂ ಹೆಚ್ಚಾಗಿ ಬರುತ್ತದೆ ಎಂಬ ಆಸೆಯಿಂದ ಕೆಲವರು ನಿಮ್ನ ವರ್ಗದ ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರಾಗುತ್ತಾರೆ. ಅವರಿಗೆ ಏಕ್‌ದಂ 10 ರೂಪಾಯಿಗಳನ್ನು ಭಡ್ತಿ ಮಾಡಬೇಕಾಗುತ್ತದೆ. ಆದರೆ ಇವರಿಗೆ ಇದಕ್ಕಿಂತಲೂ ಹೆಚ್ಚಿನ ಭಡ್ತಿಸಿಕ್ಕಬೇಕಾಗಿದ್ದರೆ ಅವರು ಇಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರಾಗಿರತಕ್ಕ ಕೆಲಸವನ್ನು ಬಿಟ್ಟು ಬೇರೆ ಇಲಾಖೆಗೆ ಹೋಗಬೇಕು. ಅಥವಾ ಇವರು ಯಾವ ಯಾವ ಇಲಾಖೆಯಿಂದ ಬಂದಿದ್ದಾರೋ ಆ ಇಲಾಖೆಗಳಿಗೆ ವಾಪಸ್ಸು ಹೋಗಬೇಕು. ಆಗ ಅಲ್ಲ ಅವರಿಗೆ ಇದಕ್ಕಿಂತ ಹೆಚ್ಚಿನ ಗ್ರೇಡು ಸಿಕ್ಕಬಹುದು. ಆದರೆ ಈಗ ಮಾನ್ಯ ಸದಸ್ಯರು ಈ ಸ್ಪೆಷಲ್ ಡ್ಯೂಟಿಯಲ್ಲಿರತಕ್ಕ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಆ ರೆಗ್ಯುಲರ್ ರೆವೆನ್ಯೂ ಇನ್ಸ್‌ಪೆಕ್ಟರುಗಳಿಗಿರುವ ಗ್ರೇಡನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಇವರು ಕೇಳುತ್ತಿರುವ ವಿಷಯವನ್ನು ಕೂಲಂಕಷವಾಗಿ ವಿಮರ್ಶೆಮಾಡಬೇಕಾಗಿದೆ. ಈಗ 89 ತಾಲ್ಲೂಕುಗಳಿಗೆ 89 ಜನ

ರೆವೆನ್ಯೂ ಇನ್ಸ್‌ಪೆಕ್ಟರುಗಳಿದ್ದಾರೆ. 420 ಹೋಬಳಿಗಳಿಗೂ ಒಬ್ಬೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರುಗಳಂತೆ 420+90=510, ಹೀಗೆ ಒಟ್ಟು 510 ಜನರಾಗುತ್ತಾರೆ. ಆದರೆ ಈಗ ಮಾತನಾಡಿದ ಮಾನ್ಯ ಸದಸ್ಯರ ಉದ್ದೇಶವೇನಿಸಯೋ ಅದರ ಪ್ರಕಾರ ಹರಿಜನರ ಏಳಿಗೆಗೆ ಯಾವ ತೊಡಕುಗಳೂ ಇರಬಾರದೆಂಬುದೇ ಸರ್ಕಾರದವರ ಉದ್ದೇಶವೂ ಕೂಡ ಆಗಿದೆ. ಇದೇ ಇದರಲ್ಲಿರತಕ್ಕ ಮೂಲಭೂತ ಪ್ರಶ್ನೆ. ರೆಗ್ಯುಲರ್ ಇನ್ಸ್‌ಪೆಕ್ಟರುಗಳಿಗೆ ಕೆಲಸ ಜಾಸ್ತಿ, ಅದಕ್ಕಾಗಿಯೇ ಹರಿ ಜನರ ಅಭಿವೃದ್ಧಿ ಕೆಲಸಗಳು ಆಗಬೇಕು—ಅವರ ಆಕಾಂಕ್ಷೆಗಳು ಈಡೇರಬೇಕು ಎನ್ನುವ ಸದುದ್ದೇಶದಿಂದ ಈ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ನೇಮಿಸಲಾಯಿತು. ಆದರೆ ಇದರಲ್ಲಿ ಮುಖ್ಯವಾಗಿ ಆಗಬೇಕಾದ ಕೆಲಸಗಳು ಯಾವ ರೀತಿ ನಡೆಯಬೇಕು ಎನ್ನುವ ಕಡೆಗೆ ನಮ್ಮ-ನಿಮ್ಮ ಗಮನ ಹೋಗಬೇಕಾದ್ದು ಮುಖ್ಯವೇ ಹೊರತು ನಮ್ಮಪರಿದ್ದರೇನೇ ನಮ್ಮ ಅಭಿವೃದ್ಧಿ, ಇಲ್ಲದಿದ್ದರೆ ಇಲ್ಲ ಎನ್ನುವ ಅಭಿಪ್ರಾಯವನ್ನು ನಾನು ಒಪ್ಪಲಾರೆ.

Sri G. PUTTASWAMY.—The wearer knows where the shoe pinches, Sir.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಭಾವಿಸುವುದು ಕೇವಲ ಮನುಷ್ಯ ಸ್ವಭಾವ. ಹರಿಜನ-ಹರಜನ ಎಲ್ಲರೂ ಒಂದೇ. ಉದಾಹರಣೆಗೆ ಹೇಳುವುದಾದರೆ, ಈಗ ಸವರ್ಣಹಿಂದುಗಳಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಜಮೀನಿಗಾಗಿ ಯಾರಾದರೂ ಅರ್ಜಿಕೊಟ್ಟರೆ ಅದೇ ಜನಾಂಗದವರು ಹೋಗಿ ಅವರಿಗೆ ಲಂಚರುಷವತ್ತುಗಳನ್ನು ಕೊಟ್ಟು ಅವರಿಗೆ ಜಮೀನಾಗದಂತೆ ನಿಲ್ಲಿಸಿಬಿಡುತ್ತಾರೆ. ಹರಿಜನರಲ್ಲೂ ಹೀಗೇ ಆಗಬಹುದು. ಇದು ಮಾನವರ ಸ್ವಭಾವ. ಲಂಚರುಷವತ್ತುಗಳಿಗೆ ತಲೆಬಾಗತಕ್ಕವರು ಯಾವ ಜಾತಿಯವರಾದರೇನು ಎಲ್ಲರೂ ಒಂದೇ. ಇದಕ್ಕೆ ಬದಲಾಗಿ ಇನ್ನೇನಾದರೂ ತೊಂದರೆಗಳಿಂದ ಅವರ ಕೆಲಸ ಸಮರ್ಕವಾಗಿ ನಡೆಯದಿದ್ದರೆ ಅಂಥಾದ್ದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವಾಗಲೂ ಸಿದ್ಧವಾಗಿದೆ.

ಇನ್ನು ಅವರಿಗೆ ಈ ರೆಗ್ಯುಲರ್ ರೆವಿನ್ಯೂ ಇನ್ಸ್‌ಪೆಕ್ಟರುಗಳ ಗ್ರೇಡನ್ನು ಕೊಡಬೇಕೆಂಬ ವಿಚಾರದಲ್ಲಿ ಅವರಿಗೆ ಈ ಗ್ರೇಡನ್ನು ಕೊಡಬೇಕೇ ಬಿಡಬೇಕೇ ಎನ್ನುವ ವಿಷಯವನ್ನು ನಾವೂ-ಅವರೂ ಆ ಪಾಲಿಸಿ ಕಮಿಟಿಯಲ್ಲಿ ಕುಳಿತುಕೊಂಡು ವಿಮರ್ಶೆಮಾಡೋಣ. ಅದರಿಂದ ಮುಂದೆ ಆಡಳಿತದಲ್ಲಿ ಏನಾದರೂ ತೊಂದರೆಗಳು ಬರುತ್ತವೆಯೇ ಹೇಗೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿನೋಡೋಣ ಎಂದು ತಿಳಿಸಲಿಚ್ಛಿಸುತ್ತೇನೆ. ಹೀಗೆ ಮಾಡಲು ಸರ್ಕಾರಕ್ಕೆ ಯಾವ ಅಭ್ಯಂತರವೂ ಇಲ್ಲ. ಅವರ ಕುಂದು ಕೊರತೆಗಳೂ ನೀಗಬೇಕು, ಸರ್ಕಾರದ ಕೆಲಸಕಾರ್ಯಗಳೂ ಸರಾಗವಾಗಿ ನಡೆಯಬೇಕು ಎನ್ನುವುದೇ ನಮ್ಮ ಉದ್ದೇಶ. ನೌಕರರು ನ್ಯಾಯವಾಗಿ ಕೆಲಸಮಾಡಿಕೊಂಡು ಹೋಗಬೇಕು. ಅಂಥವರಿಗೆ ಸಮರ್ಪಕವಾದ ಸಂಭಾವನೆ ಸಲ್ಲಬೇಕೆಂಬುದರ ಬಗ್ಗೆ ಸರ್ಕಾರದವರಿಗೂ ಸಹಾನುಭೂತಿಯಿದೆ, ಈ ವಿಷಯವನ್ನು ನಾನು ಆ ಪಾಲಿಸಿ ಸಮಿತಿಯ ಮುಂದಿಡುತ್ತೇನೆ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳೂ ಆ ಸಮಿತಿಯ ಸದಸ್ಯರೂ ಚರ್ಚೆಮಾಡಿ ಸೂಕ್ತವಾದ ನಿರ್ಧಾರಕ್ಕೆ ಬರಲು ಅವಕಾಶವಿದೆ ಎನ್ನುವ ಭರವಸೆಯನ್ನು ಕೊಟ್ಟರೆ ಮಾನ್ಯ ಸದಸ್ಯರ ಮನಸ್ಸಿಗೆ ತೃಪ್ತಿಯಾಗಬಹುದೆಂದು ಕಾಣುತ್ತದೆ.

ಇದರಲ್ಲಿ ಇನ್ನೂ ಒಂದು ವಿಷಯವಿದೆ: ಒಂದು ತಾಲ್ಲೂಕಿನಲ್ಲಿ ಒಬ್ಬ ಹರಿಜನ ರೆವಿನ್ಯೂ ಇನ್ಸ್‌ಪೆಕ್ಟರ್ ಇದ್ದರೆ ಅಲ್ಲಿ ಇತರ ಕೋಮಿನ ರೆವಿನ್ಯೂ ಇನ್ಸ್‌ಪೆಕ್ಟರುಗಳು 4 ಜನರಿರುತ್ತಾರೆ. ಒಂದೇ ಸರ್ವೆ ನಂಬರಿನಲ್ಲಿರುವ ಜಮೀನಿಗೆ ಹರಿಜನರೂ ಮತ್ತು ಸವರ್ಣೀಗಳೂ ಅರ್ಜಿಹಾಕುತ್ತಾರೆ. ಆಗ ಈ ಹರಿಜನರ ದರಖಾಸ್ತು ಅರ್ಜಿಯನ್ನು ಹರಿಜನ ರೆವಿನ್ಯೂ ಇನ್ಸ್‌ಪೆಕ್ಟರೇ ಮಾಡಬೇಕೆಂದರೆ ಈತ ಒಬ್ಬನಿರುವುದರಿಂದ ಕೆಲಸ ನಿಧಾನವಾಗಬಹುದು. ಇತರರು ನಾಲ್ಕುಜನ ರೆವಿನ್ಯೂ ಇನ್ಸ್‌ಪೆಕ್ಟರುಗಳಿರುವುದರಿಂದ ಸವರ್ಣೀಯರ ಅರ್ಜಿಗಳು ಬೇಗ ಬಿಲ್ಡ್ ಅಪ್ ಆಗಿ ಬಿಡುತ್ತವೆ. ಈ ಹರಿಜನರು ಕೊಟ್ಟ ಅರ್ಜಿಗಳನ್ನು ಬಿಲ್ಡ್ ಅಪ್‌ಮಾಡಿ ಮುಂದಕ್ಕೆ ರವಾನೆಮಾಡುವುದರೊಳಗಾಗಿ ಅಷ್ಟು ಹೊತ್ತಿಗಾಗಲೇ ಆ ಜಮೀನೆಲ್ಲಾ ಸವರ್ಣೀಯರಿಗೇ ಮಂಜೂರಾಗಿ ಹೋಗಿರುತ್ತದೆ. ಹೀಗೆ ಹರಿಜನರ ಕೆಲಸಕ್ಕಾಗಿಯೇ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರು ಇರಬೇಕೆಂದರೆ ಅದರಿಂದ ಕೆಲಸಗಳು ನಿಧಾನವಾಗಲು ಅವಕಾಶವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಇಂಡೆಕ್ಸ್ ದಾಖಲೆಗಳನ್ನು ತೆಗೆದುಕೊಂಡೇ ಮಾಡಬೇಕು. ಆ ರೀತಿ ಮಾಡಲು ಸಾಧ್ಯವೇ ಇಲ್ಲ. ಈ ರೆಕಾರ್ಡ್ ಆಗಿದೆಯೇ-ಇಲ್ಲವೇ, ಇದಕ್ಕೆ ಹರಿಜನರ ಅರ್ಜಿ ಏನಾದರೂ ಬಂದಿದೆಯೇ ಬಂದಿಲ್ಲವೇ ಎನ್ನುವುದೆಲ್ಲಾ ಅಲ್ಲಿ ಸಿಕ್ಕಿಹೋಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ತೊಂದರೆಯಾಗುತ್ತದೆ ಎಂಬುದಾಗಿ ನನಗೆ ಅಧಿಕಾರಿಗಳಿಂದ ವರದಿಬಂದಿದೆ. ಅದು ಸರಿಯಲ್ಲ ಎಂದು ತಾವು ತೋರಿಸಿಕೊಡುವುದಾದರೆ ಅದನ್ನು ಒಪ್ಪಿಕೊಳ್ಳಲು ನನ್ನ ಅಭ್ಯಂತರವೇನೂ ಇಲ್ಲ. ಆದರೆ ಈಗ ಮಾನ್ಯ ಸದಸ್ಯರು ಏನೇನು ತಿಳಿಸಿದ್ದಾರೋ ಆ ಬಗ್ಗೆ ನಾನು ಕೆಲವು ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ಕೊಟ್ಟಾಗ ಪ್ರತಿಯೊಂದನ್ನೂ ಚೆಕ್‌ಮಾಡಿ ನೋಡುತ್ತೇನೆ. ಹರಿಜನರಿಗೆ ಈ ಜಮೀನುಗಳು ಸಮರ್ಪಕವಾದ ರೀತಿಯಲ್ಲಿ ದೊರೆಯುವಂತೆ ಮಾಡಬೇಕೆಂಬುದರಲ್ಲಿ ಸರ್ಕಾರಕ್ಕೆ ವಿಶೇಷವಾದ ಮಮತೆಯಿದೆ ಎಂದು ಹೇಳಿ ನನ್ನ ಮಾತುಗಳನ್ನು ಪೂರೈಸುತ್ತೇನೆ.

Mr. SPEAKER.—Now the House will rise and meet at 8-30 A.M. on Monday the 1st October 1956.

The House adjourned at Fifty Minutes past Twelve of the Clock to meet again at Thirty Minutes past Eight of the Clock on Monday the 1st October 1956.

WD 1145—GPB—550—5-12-56

MYSORE LEGISLATIVE ASSEMBLY

FORTY-SECOND DAY.

Monday, 1st October 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Non-Gazetted Staff (Steps to Increase pay)

Q.—741. Sri D. M. GOVINDARAJU (Nelamangala).—

Will the Government be pleased to state :—

(*a*) the steps taken by them for increasing the pay of the non-gazetted officers working in the State ;

(*b*) the extra amount required for so increasing the pay ;

(*c*) the date from which it has been decided to increase their pay ;

(*d*) whether they do not consider it desirable to remove the disparity in the scales of pay between the Central and State Government officials in the interest of efficiency ?

A.— Sri H. SIDDAVEERAPPA (Minister for Home and Finance).—

(*a*), (*b*) and (*c*).—

The question of giving increase of pay by way of interim relief is under consideration in consultation with the Government of India. Since the scheme has not been finalised, details regarding extra cost and date of effect cannot now be furnished.

(*d*) It is a matter of opinion.

ಶ್ರೀ ಡಿ. ಎಂ. ಗೋವಿಂದರಾಜು.—ನಾನ್-ಗೆಜೆಟೆಡ್ ನೌಕರರುಗಳಿಗೆ ಸಂಬಳಗಳನ್ನು ಹೆಚ್ಚಿಸುವ ವಿಚಾರದಲ್ಲಿ ಮಧ್ಯಕಾಲದ ಪರಿಹಾರ ನೀಡತಕ್ಕ ವಿಚಾರವನ್ನು ಕೇಂದ್ರ ಸರ್ಕಾರದವರೊಡನೆ ಸಮಾಲೋಚನೆ ನಡೆಸಿ ಪರ್ಯಾಲೋಚಿಸುತ್ತಿದ್ದೇವೆಂದು ತಿಳಿಸಿದ್ದೀರಿ. ಈ ವಿಚಾರದಲ್ಲಿ ತಾವು ಇನ್ನೂ ಆಲೋಚನೆಗಳನ್ನು ಮಾಡುತ್ತಲೇ ಇದ್ದೀರಾ ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಡಿ. ಎಂ. ಗೋವಿಂದರಾಜು.—ಈ ಮಧ್ಯಕಾಲದ ಪರಿಹಾರವನ್ನು ನವೆಂಬರ್ ತಿಂಗಳವರೆಗೆ ಮಾತ್ರ ಕೊಡುತ್ತೀರೋ ಅಥವಾ ಇದನ್ನು ಇನ್ನೂ ಮುಂದುವರಿಸುತ್ತೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರಗಳೆಲ್ಲವನ್ನೂ ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗಾದರೆ ತಾವು ಯಾವ ತರಹೆಯ ಮಧ್ಯಕಾಲದ ಪರಿಹಾರ ನೀಡಬೇಕೆಂದು ಆಲೋಚನೆ ಮಾಡುತ್ತಿದ್ದೀರಿ ?

Sri H. SIDDAVEERAPPA.—I cannot disclose it, Sir.

ಶ್ರೀ ಜಿ. ದುಗ್ಗಪ್ಪ.—ತಾವು ಕೊಡಬೇಕೆಂಬ ಈ ಮಧ್ಯಕಾಲದ ರಿಲೀಫ್ ಮುಂದಕ್ಕೂ ಇರುತ್ತದೆಯೋ ಅಥವಾ ಮಧ್ಯಕಾಲದಲ್ಲೇ ನಿಂತುಹೋಗುತ್ತದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಇದೊಂದು ಊಹಾಪೋಹದ ಪ್ರಶ್ನೆ.

Sri R. ANANTARAMAN.—Was this question placed before the Inter-State Ministers'. Conference and consent taken ?

Sri H. SIDDAVEERAPPA.—Generally.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ದಾತಾರ್ ಅವರು ಪಾರ್ಲಿಮೆಂಟಿನ ಮುಂದೆ ಈ ಸಂಬಂಧವಾಗಿ ಮಾತನಾಡುತ್ತ ಇದೆಲ್ಲಾ ಆಯಾ ಸಂಸ್ಥಾನಗಳಿಗೆ ಸಂಬಂಧಪಟ್ಟ ವಿಚಾರ, ಇದರಲ್ಲಿ ನಮ್ಮ ಜವಾಬ್ದಾರಿಯೇನೂ ಇಲ್ಲವೆಂದು ತಿಳಿಸಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ಈಗ ಕೇಂದ್ರದವರೊಡನೆ ನಡೆಸುತ್ತಿರುವ ಪರ್ಯಾಲೋಚನೆ ಯಾವ ಸ್ಥಿತಿಯಲ್ಲಿದೆ ?

Sri H. SIDDAVEERAPPA.—We have made out a very special case in view of the reorganisation and in view of the disparities between various integrating areas.

---

* Asterisk indicates that the remarks or speeches have not been revised by the Member concerned.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸ್ವಾಮಿ, ಹಾಗಾದರೆ ಈಗ ನಮ್ಮ ಸ್ಥಿತಿಯಲ್ಲೇ ಇದ್ದಂಥ ಮಧ್ಯಭಾರತ ಪ್ರದೇಶಕ್ಕೆ ಭಾರತ ಸರ್ಕಾರ ನೀಡಿದ್ದ ಆ ದೇಶಕ್ಕೆ ವಿರೋಧವಾಗಿ ಅವರು ತಮ್ಮ ನೌಕರರುಗಳಿಗೆ ಹೆಚ್ಚಿನ ಸಂಬಳಸಾರಿಗೆಗಳನ್ನೊದಗಿಸಿದ್ದಾರೆಂಬ ವಿಚಾರ ತಮಗೆ ತಿಳಿದಿದೆಯೇ?

Sri H. SIDDAVEERAPPA.—That is well known.

Mr. SPEAKER.—Hon'ble Member should not put questions which are inconvenient for the Ministers to answer. You should also help the Government.

ಶ್ರೀ. ಎಸ್. ಶ್ರೀನಿವಾಸಯ್ಯಂಗಾರ್.—ಆದುದರಿಂದ ಈಗ ಮಧ್ಯಭಾರತವು ಮಧ್ಯಪ್ರದೇಶದಲ್ಲಿ merge ಆಗುವ ಸಂದರ್ಭದಲ್ಲಿ ಮಧ್ಯಭಾರತ ಸರ್ಕಾರದವರು ತಮ್ಮ ಸಿಬ್ಬಂದಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿರುವುದು ಸರ್ಕಾರಂದ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—I have read in the papers like that.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆದುದರಿಂದಲೇ ನಮ್ಮ ಸಂಸ್ಥಾನ merge ಆಗುವುದಕ್ಕೆ ಮುಂಚೆಯೇ ನಮ್ಮ ಸರ್ಕಾರದವರೂ ಸಹ ಈ ವಿಷಯವನ್ನು ವಿಮರ್ಶೆ ಮಾಡುತ್ತಾರೆಯೇ?

Sri A. G. RAMACHANDRA RAO.—We have made use of that information in strengthening our case for giving interim relief

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಮಧ್ಯವರ್ತಿಯಾಗಿ ಸಂಬಳವನ್ನು ಹೆಚ್ಚಿಸಬೇಕೆನ್ನುವುದು ನಾನ್-ಗೆಜೆಟೆಡ್ ಅಧಿಕಾರಿಗಳಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಉಳಿದೆಲ್ಲ ನೌಕರರುಗಳಿಗೂ ಅನ್ವಯಿಸುತ್ತದೆಯೋ?

Sri H. SIDDAVEERAPPA.—That is a matter which is under consideration.

Foreign Scholarships and Study Leave Concessions for Doctors.

Q.—733. Sri G. SIVAPPA (Holalkere).—

Will the Government be pleased to state.—

(*a*) the principle they are adopting while granting study leave for doctors going abroad for higher studies;

(*b*) how many candidates they have selected this year; their names and castes?

A.—Sri T. CHANNIAH (Minister for Public Heath and Local Self Government).—

(*a*) Necessity for foreign trained doctors in the Department, their qualifications and aptitude are the main considerations in selecting candidates for the award of Study Leave Concessions.

(*b*) Three.

Name of the candidate	*Caste*
(1) Sri Y. P. Rudrappa	... Bovi.
(2) Sri T. S Sambasivan	... Mudaliar
(3) Sri S. Chinnapullay	... Thigala

Sri G. SIVAPPA.—May I know whether there is any committee for recommending this study leave?

Sri T. CHANNIAH.—Yes.

Sri G. SIVAPPA.—What is the personnel of the Committee?

Sri T. CHANNIAH.—The Committee consists of the Chief Secretary, P.W. Secretary and the L. S. G. Secretary.

Sri G. SIVAPPA.—May I know, Sir, whether there is any recommendation for M. R. C. P. and F. R. C. S.?

Sri T. CHANNIAH.—Yes, there is a recommendation

Sri G. SIVAPPA.—You have stated that in granting study leave for foreign studies abroad, the qualification and aptitude will be taken into consideration. Are not these principles vague principles, Sir?

Sri T. CHANNIAH.—The Committee makes recommendations on specific proposals with regard to sending candidates abroad for training in the Medical Department and these specific proposals are enumerated in the recommendations in regard to the Medical and Public Health Departments. If you want any specific case, I will be able to tell you.

Sri G. SIVAPPA.—Will you consider merit also as one of the conditions in recommending this study leave concessions?

Sri T. CHANNIAH.—Yes.

Sri G. SIVAPPA.—Is it not a fact that many times you have overlooked merit and necessary qualifications?

Sri T. CHANNIAH.—Merit also is one of the considerations for study abroad.

Sri G. SIVAPPA.—Is it not a fact Sir, that for some communities, proper

representation is not given while recommending study leave concessions?

Sri T. CHANNIAH.—All these aspects will be kept in view while sending candidates for studies abroad.

ಶ್ರೀ ಜಿ. ದುಗ್ಗಪ್ಪ.—ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ, ಅವರ ಶಿಫಾರಸಿನ ಮೇಲೆ ಡಾಕ್ಟರುಗಳನ್ನು ಹೊರದೇಶಗಳಿಗೆ ಕಳುಹಿಸುತ್ತೇವೆಂದು ಹೇಳಿದಿರಿ. ಸಮಿತಿಯವರು ಶಿಫಾರಸು ಮಾಡದೆ ಇರುವವರನ್ನೂ ಹೊರದೇಶಗಳಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದೀರಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಸಮಿತಿಯವರು ಶಿಫಾರಸು ಮಾಡುವುದಕ್ಕೆ ಮುಂಚಿತವಾಗಿ ಇಬ್ಬರನ್ನು ಕಳುಹಿಸಲಾಗಿತ್ತು. ಪುನಃ ಇನ್ನೊಬ್ಬರನ್ನು ಕಳುಹಿಸುವಾಗ ಸಮಿತಿಯವರಿಗೆ ರೆಫರ್‌ಮಾಡಿ ಅವರ ಒಪ್ಪಿಗೆಯನ್ನು ಪಡೆದು ಕಳುಹಿಸಲಾಗಿದೆ.

ಶ್ರೀ ಜಿ. ದುಗ್ಗಪ್ಪ.—ಕಳುಹಿಸಿದ ಮೇಲೆ ಸಮಿತಿಯವರ ಒಪ್ಪಿಗೆಯನ್ನು ಪಡೆಯಲಾಯಿತಲ್ಲವೆ?

Sri T. CHANNIAH—Before he was sent abroad, the committee was consulted about his case.

ಶ್ರೀ ದುಗ್ಗಪ್ಪ.—ಈ ವರ್ಷ ಡಿಪ್ರೆಸ್ಡ್ ಕ್ಲಾಸ್ ಪೈಕಿ ಯಾರಾದರೂ ಉಮೇದುವಾರರು ತಮ್ಮ ಅರ್ಜಿಗಳನ್ನು ಕಳುಹಿಸಿಕೊಟ್ಟಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಈಗ ಮೂರು ಜನರನ್ನು ಕಳುಹಿಸಿರುವುದರಲ್ಲಿ ಶ್ರೀ ವೈ. ಪಿ. ರುದ್ರಪ್ಪ ಎಂಬವರು ಡಿಪ್ರೆಸ್ಡ್ ಕ್ಲಾಸಿನವರು. Study leave concessions ಕೊಟ್ಟು ಕೆಲವರನ್ನು ಕಳುಹಿಸಬೇಕೆಂದು ಶಿಫಾರಸುಗಳು ಬಂದಿವೆ. ಅದರ ಬಗ್ಗೆ ಸರ್ಕಾರದವರು ಇನ್ನೂ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಜಿ. ದುಗ್ಗಪ್ಪ.—ಸ್ಟಡಿ ಲೀವ್‌ಮೇಲೆ ಕಳುಹಿಸಿಕೊಡಬೇಕೆಂದು ಬೇರೆಯವರೂ ಅರ್ಜಿ ಹಾಕಿಕೊಂಡಿದ್ದಾರೆ ಅಲ್ಲವೇ?

ಶ್ರೀ ಟಿ. ಚನ್ನಯ್ಯ.—ಎಲ್ಲ ಷರತ್ತುಗಳೂ ತೃಪ್ತಿಕರವಾಗಿದ್ದರೆ ಅಂಥವರ ಹೆಸರನ್ನು ಪರಿಶೀಲನೆ ಮಾಡುತ್ತೇವೆ.

Sri V. M. MASCARENHAS.—Far how many years have these Doctors been in service—these three Doctors?

Sri T. CHANNIAH.—I think Sri Y. P. Rudrappa has put in about 1½ years; Sri T. S. Sambasivan about 6 years and Sri Chinnapullai about a year or so.

Sri V. M. MASCARENHAS.—For what examinations are they being sent abroad?

Sri T. CHANNIAH.—Sri Y. P Rudrappa is being sent for M.R.C.P.; Sri T. S. Sambasivan for Dentology and Veneriology and Sri Chinnapullai for Physiology.

Sri V. M. MASCARENHAS.—Suppose these doctors do not qualify themselves for the special examinations you are deputing them. What action Government propose to take against them?

Sri T. CHANNIAH.—If they do not qualify for the examinations, they will be called back to their places in the Department.

Sri V. M. MASCARENHAS.—What happens to the money that Government has spent on them?

Sri T. CHANNIAH.—Nothing can be done.

Sri V. M. MASCARENHAS.—Is it wise on your part to send students who may not have chances of appearing for these examinations and passing them?

Sri T. CHANNIAH.—As far as possible Government expect that these gentlemen will qualify themselves in these subjects, within the required time. If any hard case arises, the time limit will be extended in such cases.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿದ್ಯಾರ್ಥಿವೇತನಗಳನ್ನು ಕೊಡುವ ಬಗ್ಗೆ ಶಿಫಾರಸುಮಾಡಲು ಸಮಿತಿಯನ್ನು ರಚನೆ ಮಾಡಿದ್ದು ಯಾವಾಗ?

ಶ್ರೀ ಟಿ. ಚನ್ನಯ್ಯ.—10-5-1956ರಲ್ಲಿ ಸಮಿತಿಯನ್ನು ರಚಿಸಲಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—10-5-1956ರಲ್ಲಿ ಸಮಿತಿಯನ್ನು ರಚನೆಮಾಡಿ ಸಮಿತಿಯವರಿಗೆ ಕೆಲಸವನ್ನು ವಹಿಸಿಕೊಟ್ಟರೂ ಕೂಡ, ಅವರು ತೀರ್ಮಾನವನ್ನು ತೆಗೆಕೊಳ್ಳುವುದಕ್ಕೆ ಮುಂಚೆಯೇ ಮೂರು ಜನರನ್ನು ಕಳುಹಿಸಿಕೊಡುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈ ಸಮಿತಿಯವರು ತೀರ್ಮಾನ ಮಾಡುವುದಕ್ಕೆ ಮುಂಚಿತವಾಗಿ ವೈ. ಪಿ. ರುದ್ರಪ್ಪ ಮತ್ತು ಟಿ. ಎಸ್. ಸಾಂಬಶಿವನ್ ಇವರಿಬ್ಬರನ್ನೂ ಕಳುಹಿಸುವುದಕ್ಕೆ ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿದರು. ಎಸ್. ಚಿನ್ನಪುಳೆ ಎಂಬುವರನ್ನು ಸಮಿತಿಯವರು ತೀರ್ಮಾನಮಾಡಿದಮೇಲೆ ಕಳುಹಿಸಲಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವರ್ಷದ ೫ದನೆಯ ತಿಂಗಳಿನಲ್ಲಿ ಸಮಿತಿಯನ್ನು ರಚನೆಮಾಡಿ, ಈ ಕೆಲಸಮಾಡಬೇಕೆಂದು ವಹಿಸಿದ ಮೇಲೆ ಅವರು ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಈ ಮೂರು ಜನರನ್ನು ಕಳುಹಿಸುವುದಕ್ಕೆ ಕಾರಣವೇನು? ಮತ್ತು ಈ ವಿಚಾರವು ಮಂತ್ರಿಮಂಡಲದ ಮುಂದೆ ಬಂದಿತ್ತೇ?

ಶ್ರೀ ಟಿ. ಚನ್ನಯ್ಯ.—ಸಮಿತಿಯನ್ನು ರಚಿಸುವುದಕ್ಕೆ ಮುಂಚಿತವಾಗಿ ಸರ್ಕಾರದವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು ಮತ್ತು ಎಸ್. ಚಿನ್ನಪುಳ್ಳೆ ಎಂಬುವರನ್ನು ಸಮಿತಿಯವರ ಒಪ್ಪಿಗೆಯನ್ನು ಪಡೆದು ಕಳುಹಿಸಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಕೇಳುತ್ತಿರುವ ಪ್ರಶ್ನೆ ಏನೆಂದರೆ ಅನೇಕರು ವಿದ್ಯಾರ್ಥಿವೇತನಕ್ಕೆ ಅರ್ಜಿಹಾಕಿಕೊಂಡಿದ್ದರು. ಸಮಿತಿಯವರು ತಮ್ಮ ಅಖೈರು ತೀರ್ಮಾನವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಸರ್ಕಾರದವರು ಇವರನ್ನು ಕಳುಹಿಸಿಕೊಡುವುದಕ್ಕೆ ಕಾರಣವೇನೆಂಬ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ಬರಲಿಲ್ಲ. ಕಾರಣವನ್ನು ತಿಳಿಸುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಅವಶ್ಯಕತೆ ಹೆಚ್ಚಾಗಿದ್ದುದರಿಂದ ಕಳುಹಿಸಬೇಕಾಗಿ ಬಂದುದೇ ಕಾರಣ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಮೂರು ತಿಂಗಳಿನಲ್ಲಿ, ಸಮಿತಿಯವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ಕಳುಹಿಸಿದುದರಿಂದ ಎಷ್ಟು ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಯಿತು ?

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆಯನ್ನು ವಿರೋಧಿಸುತ್ತೇನೆ. ಈ ಮಸೂದೆಯನ್ನು ತರಬೇಕಾದ ಆವಶ್ಯಕತೆಯೇನಿದೆ, ಉದ್ದೇಶವೇನು, ಕಾರಣವೇನು ಎಂಬುದನ್ನು ವಿವರವಾಗಿ ಕೊಟ್ಟಿಲ್ಲ. ಉದ್ದೇಶ ಮತ್ತು ಕಾರಣಗಳ ವಿವರವನ್ನಾದರೂ ಕೊಟ್ಟಿದ್ದರೆ ಅದನ್ನಾದರೂ ನೋಡಿಕೊಳ್ಳಬಹುದಾಗಿತ್ತು. ಅದನ್ನು ಕೂಡ ಕೊಟ್ಟಿಲ್ಲ. ಮುಖ್ಯವಾಗಿ ಸಿಟಿ ಅಂಡ್ ಟೌನ್ ಮುನಿಸಿಪಾಲಿಟೀಸ್ (ಅಮೆಂಡ್‌ಮೆಂಟ್) ಬಿಲ್ ಎಂದು ಮಸೂದೆಯ ಹೆಸರಿರುವುದರಿಂದ ಒಂದು ಟೌನಿಗೆ ಅನ್ವಯಿಸಲು ತಂದಿದೆಯೆಂದು ಹೇಳುವುದರಲ್ಲಿ ಯಾವವಿಧವಾದ ನಂಬಿಕೆಯನ್ನಿಡುವುದಕ್ಕೂ ಸಾಧ್ಯವಿಲ್ಲ, ನಮ್ಮ ಮುಖ್ಯಮಂತ್ರಿಗಳು ಇದನ್ನು ಬಳ್ಳಾರಿಗೆ ಮಾತ್ರ ಅನ್ವಯಿಸುತ್ತೇವೆ, ಸ್ಪೇರಿಂಗಾಗಿ ಉಪಯೋಗಿಸುತ್ತೇವೆ. ಇನ್ನೆಲ್ಲಿಗೂ ಅನ್ವಯಿಸುವುದಿಲ್ಲ ಎಂದು ಹೇಳಿದರು. ಹಾಗಿದ್ದರೆ ಸಿಟಿ ಅಂಡ್ ಟೌನ್ ಮುನಿಸಿಪಾಲಿಟೀಸ್ ಆಕ್ಟ್ ಈರೀತಿ ತಿದ್ದುಪಡಿಮಾಡಿ ತರಬೇಕಾಗಿರಲಿಲ್ಲ. ವಿಧಾನ ಪರಿಷತ್ತಿನ ಚುನಾವಣೆ, ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ಸೆನೆಟ್ ಚುನಾವಣೆ ಇವುಗಳಲ್ಲಿ ತಮ್ಮ ಪಕ್ಷಕ್ಕೆ ಬೆಂಬಲ ಸಿಕ್ಕುವಂತೆ ಸರ್ಕಾರ ಏರ್ಪಾಡು ಮಾಡಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಮೂರು ವರ್ಷಗಳಿಂದ ಜಿಲ್ಲಾ ಬೋರ್ಡಿನ ಚುನಾವಣೆ ತಪ್ಪಿಸಿ ಪ್ರಾತಿನಿಧ್ಯವಿಲ್ಲದಂತೆ ಮಾಡಿದ್ದಾರೆ. ರಾಜ್ಯಾಂಗದಲ್ಲಿ ನಮೂದಾಗಿರುವ ಹಕ್ಕನ್ನು ಕುಂಠಿತಮಾಡುವುದಕ್ಕೇನು ಕಾರಣವೆಂಬುದನ್ನು ವಿಶದೀಕರಿಸಲಿ. ಈ ಚುನಾವಣೆ ನಿಲ್ಲಿಸಿ ತಮ್ಮ ಸ್ವಯಂ ಅಧಿಕಾರ ನಡೆಸುತ್ತಾ ಜನತೆಗೆ ಅವಕಾಶ ಕೊಡದೆ ಅಡ್ಡಿಮಾಡಿರುವುದೂ ಅಲ್ಲದೆ ಶಾಸನ ಸಭೆಗಳಿಗೆ ಬರುವ ಪ್ರಾತಿನಿಧ್ಯವನ್ನು ಕೂಡ ಕಳೆದಿರುವಾಗ ಯಾವರೀತಿ ಸರ್ಕಾರಕ್ಕೆ ಈ ಮಸೂದೆಯಲ್ಲಿ ಕೇಳಿರುವ ಅಧಿಕಾರ ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಅವರು ಕೇವಲ ತಮ್ಮ ಪಾರ್ಟಿಯ ಅಧಿಕಾರವನ್ನು ಮುಂದುವರಿಸುವ ದೃಷ್ಟಿಯಿಂದ ಹೀಗೆ ಮಾಡಿದ್ದಾರೆ. ಇದು ಹೊರತು ಈ ಬಿಲ್ಲಿನಲ್ಲಿ ಮತ್ತೆ ಯಾವ ತತ್ವವೂ ಅಡಗಿಲ್ಲ. ಪ್ರತಿಯೊಂದು ಬಾಬಿನಲ್ಲೂ ಸರ್ಕಾರದವರು ಕೈಹಾಕಿ ತಮಗೆ ಅಧಿಕಾರ ಬೇಕೆಂದು ಹೇಳುತ್ತಿದ್ದಾರೆ. ದಿನಕ್ರಮೇಣದಲ್ಲಿ ಪ್ರಜಾಧಿಕಾರಗಳನ್ನೆಲ್ಲಾ ಸರ್ಕಾರ ಕಿತ್ತುಕೊಳ್ಳಲು ಹವಣಿಸುತ್ತಿರುವುದು ಎದ್ದು ಕಾಣುತ್ತಿದೆ. ಈ ರೀತಿಯಾಗಿ ಸರ್ಕಾರದವರು ನಮಗಿರತಕ್ಕ ಈ ಸಭಾಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಚುನಾವಣಾ ಸ್ವಾತಂತ್ರ್ಯ ಇತ್ಯಾದಿಗಳನ್ನೆಲ್ಲಾ ಕಸಿದುಕೊಂಡನಂತರ ದೇಶದಲ್ಲಿರತಕ್ಕ ಜನರ ಗೋಳನ್ನೂ ತೊಂದರೆಗಳನ್ನೂ ನಾವು ಸರ್ಕಾರದವರ ಮುಂದಿಡಲು ಸಾಧ್ಯವಿನ್ನೆಲ್ಲಿದೆ? ಇಂಥ ಬಿಲ್ಲಿಗೆ ನಾವು ಹೇಗೆ ಬೆಂಬಲ ನೀಡುವುದು? ಈಗ ಸರ್ಕಾರದವರು ಆ ಬಳ್ಳಾರಿ ಒಂದರ ವಿಚಾರಮಾತ್ರ ತಿಳಿಸಿದ್ದಾರೆ. ಆದರೆ ಅಂಥ ಮುನಿಸಿಪಾಲಿಟಿಗಳು ಇನ್ನೂ ಅನೇಕವಿರುತ್ತವೆ. ಈ ಮುನಿಸಿಪಾಲಿಟಿಗಳಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಆಡಳಿತ ನಡೆಸುತ್ತಿದ್ದಾರೆ. ಅದಕ್ಕಾಗಿಯೇ ಸರ್ಕಾರದವರು ಹೀಗೆ ತಿದ್ದುಪಡಿ ಮಸೂದೆಗಳನ್ನು ತರುತ್ತಿದ್ದಾರೆ. ಆದರೆ ಈ ಹಿಂದೆ ಸರ್ಕಾರದವರು ಈ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ಎಲ್ಲಾ ಸಿದ್ಧತೆಗಳನ್ನೂ ಮಾಡಿದ್ದರು. ಕಾನೂನುಗಳನ್ನೂ ತಯಾರಿಸಿದ್ದರು. ಇನ್ನೇನು ಚುನಾವಣೆಗಳನ್ನು ನಾಳೆ ನಾಡಿದ್ದರಲ್ಲಿ ನಡೆಸುತ್ತಾರೆಂಬ ಸಮಯಕ್ಕೆ ಸರಿಯಾಗಿ ಒಂದು ಆರ್ಡರ್ ಹೊರಡಿಸಿ ಅದನ್ನು ಬದಲಾಯಿಸಿಬಿಡುತ್ತಿದ್ದಾರೆ. ಹೀಗೆ ನಮ್ಮ ಸರ್ಕಾರದವರು ಮಗು ಇನ್ನೂ ಹೊಟ್ಟೆಯಲ್ಲಿದ್ದಾಗಲೇ ಅದಕ್ಕೆ ಮರಣದಂಡನೆಯನ್ನು ವಿಧಿಸುತ್ತಿದ್ದಾರೆ. ಆಡಳಿತ ನಡೆಸುತ್ತಿರುವ ಸರ್ಕಾರದ ದಕ್ಷತೆ ಹೀಗಿದೆ! ಎಲೆಕ್ಷನ್ ಆಗುವುದಕ್ಕೆ ಮೊದಲೇ ತಿದ್ದುಪಡಿಗಳು ಬರುತ್ತಿವೆ. ಇಂಥ ಅಕ್ರಮನಡವಳಿಕೆಗಳನ್ನು ಏಕೆ ನಡೆಸುತ್ತಾರೆಂಬ ಬಗ್ಗೆ ಅವರೇನೂ ಕಾರಣಗಳನ್ನೇ ಕೊಟ್ಟಿಲ್ಲ. ಈ ಮಸೂದೆಗೆ ಆ ಉದ್ದೇಶ ಮತ್ತು ಕಾರಣದ ಟಿಪ್ಪಣಿ ಸಹಿತ ಇರುವುದಿಲ್ಲ.

1 P.M.

Mr. SPEAKER.—The Hon'ble Minister will give a cogent reply.

ಶ್ರೀ ಬಿ. ಹುಚ್ಚೇಗೌಡ.—ಇಂಥ ಸ್ಥಿತಿಯಿರುವಾಗ ನಮ್ಮಲ್ಲಿ ನೀವು ನಂಬಿಕೆಯಿಡಿ ಎಂಗರೆ ನಾವು ಹೇಗೆ ನಂಬಿಕೆಯಿಡುವುದು? ಈವರಿಗೆ ನಾವು ಅವರನ್ನು ನಂಬಿದ್ದಕ್ಕೆ ಅವರೇನು ನಂಬಿಕೆ ಉಳಿಸಿಕೊಂಡಿದ್ದಾರೆ? ಈ ರೀತಿ ಸೂಪರ್-ಸೀಡ್ ಮಾಡುವುದಕ್ಕೆ ಕಾರಣವೇ ಇಲ್ಲ. ಈ ಹಿಂದೆ ಇದೇ ಕಾಂಗ್ರೆಸ್ ಪಕ್ಷದವರು ನಾಮಕರಣ ಪದ್ಧತಿಯನ್ನು ಪೂರಾ ವಿರೋಧಿಸುತ್ತಿದ್ದರು. ಆದರೆ ಈ ದಿವಸ ತಮ್ಮ ಪಾರ್ಟಿಗಳ ಆಡಳಿತ ಮುಂದುವರಿಯಲಿ ಎನ್ನುವ ಒಂದೇ ಒಂದು ದೃಷ್ಟಿಯಿಂದ ಹೀಗೆ ನಾಮಕರಣ ಮಾಡತಕ್ಕ ಪದ್ಧತಿಗೆ ಬೆಂಬಲ ನೀಡುತ್ತಿದ್ದಾರೆ. ಆ ಒಂದು ಉದ್ದೇಶದಿಂದ ಈಗ ಇವರು ಇಷ್ಟೆಲ್ಲಾ ಕೆಲಸಮಾಡಿದ್ದಾರೆ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಎಸ್. ಆರ್. ಸಿ. ಸಂಬಂಧವಾಗಿ ಅಲ್ಲಿ ಸ್ವಲ್ಪ ಗಲಾಟೆ ನಡೆಯಿತು ಎಂಬುದಾಗಿ ತಿಳಿಸಿದರು. ಇದಕ್ಕಿಂತಲೂ ಅತಿಶಯವಾಗಿ ಆ ಎಸ್. ಆರ್. ಸಿ. ಸಂಬಂಧದಲ್ಲಿ ಎಷ್ಟೋ ಕಡೆ ಗಲಭೆಗಳಾಗಿರುತ್ತವೆ. ಹಾಗೆ ಗಲಭೆಗಳಾಗಿದ್ದರೂ ಕೇಂದ್ರ ಸರ್ಕಾರದವರೇನಾದರೂ ಎಲ್ಲಿಯಾದರೂ ಹೀಗೆ ನಿಲ್ಲಿಸಿದ್ದಾರೇನು? ಎಲ್ಲ ಚುನಾವಣೆಗಳೂ ನಡೆಯಬಹುದು; ಆದರೆ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಗೇ ಎಲ್ಲಿಯೂ ಇಲ್ಲದ ತೊಂದರೆಗಳು ಉಂಟಾಗಿದೆಯೇನು? ಸರ್ಕಾರದವರು ತಾಳಿರುವ ಧೋರಣೆಯಿಂದ ಈ ದಿವಸ ಈ ಸ್ಥಳೀಯ ಸಂಸ್ಥೆಗಳ ಆಡಳಿತ ನಿಂತು ಹೋಗಿರುವುದಲ್ಲದೆ ಈ ಸಂಸ್ಥೆಗಳಿಂದ ಶಾಸನಸಭೆಗಳಿಗೆ ಸದಸ್ಯರು ಚುನಾವಣೆಯಾಗಿ ಬರಲು ಅವಕಾಶವಿಲ್ಲದಂತಾಗಿದೆ. ಇಂಥ ತಕರಾರಿರತಕ್ಕ ಮಸೂದೆಗಳನ್ನು ಈ ಸಭೆಯ ಮುಂದೆ ಮಂಡಿಸಲು ಅಧ್ಯಕ್ಷರಾಗಿರತಕ್ಕ ತಾವು ಅವಕಾಶಕೊಡಬಾರದಾಗಿತ್ತು; ಈ ನೀತಿ ರಾಜ್ಯಾಂಗಕ್ಕೆ ಪೂರಾ ವಿರುದ್ಧವಾಗಿದೆ. ಅಧ್ಯಕ್ಷರಾದ ತಾವು ಸರ್ಕಾರದವರಿಗೆ ಇಂಥ ವಿಷಯಗಳ ಬಗ್ಗೆ ತಿಳಿವಳಿಕೆಯನ್ನು ನೀಡಬೇಕಾಗಿತ್ತು. ಇವರು ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಿದ್ದ ಪಕ್ಷದಲ್ಲಿ ನಮಗೆ ನ್ಯಾಯವಾಗಿ ಇನ್ನಷ್ಟು ಸ್ಥಾನಗಳು ಈ ಶಾಸನ ಸಭೆಯಲ್ಲಿ ಲಭಿಸುತ್ತಿದ್ದವು. ಈಗ ಆ ಚುನಾವಣೆಗಳು ನಿಲ್ಲಿಸಲ್ಪಟ್ಟಿರುವುದರಿಂದ ಆ ಸ್ಥಾನಗಳೆಲ್ಲ ಕಾಂಗ್ರೆಸ್ಸಿನವರಿಗೆ ಹೋಗುವಂತಾಗಿದೆ. ಯಾವ ಯಾವ ಕ್ಷೇತ್ರದಲ್ಲಿ ಈ ಕಾಂಗ್ರೆಸ್ಸೇತರ ಸದಸ್ಯರು ಬರಲು ಅವಕಾಶ ಹೆಚ್ಚಾಗಿದೆಯೋ ಅಂಥ ಕಡೆಗಳಲ್ಲಿ ತಮ್ಮ ಪಕ್ಷಕ್ಕೆ ಅನುಕೂಲವಿರುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ಚುನಾವಣೆಗಳನ್ನು ಹೀಗೆ ಮುಂದುವರಿಸುತ್ತಿದ್ದಾರೆ. ಆದಕಾರಣ ನಾವು ಈ ತಿದ್ದುಪಡಿ ಮಸೂದೆಗೆ ಖಂಡಿತ ಬೆಂಬಲ ನೀಡು

ವುಕ್ಕಾಗುವುದಿಲ್ಲವೆಂದು ಹೇಳಿ ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಎಸ್. ಪರಮೇಶ್ವರಪ್ಪ (ಶಿರಗುಪ್ಪ).—ಸ್ವಾಮಿ ಈಗ-ತಾನೆ ಮಾತನಾಡಿದ ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಅನುಕೂಲಪಡಿಸಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ಸರ್ಕಾರದವರು ತಂದಿದ್ದಾರೆಂಬುದಾಗಿ ಹೇಳಿದರು. ಆದರೆ ನಾನು ಬಳ್ಳಾರಿ ಪ್ರದೇಶದಿಂದ ಬಂದಿರತಕ್ಕ ಸದಸ್ಯ ನನಗೆ ಅಲ್ಲಿಯ ವಿದ್ಯಮಾನಗಳೆಲ್ಲಾ ಚೆನ್ನಾಗಿ ತಿಳಿದಿರುತ್ತವೆ. ಬಳ್ಳಾರಿ ಮುನಿಸಿಪಾಲಿಟಿಯಲ್ಲಿ ಈ ದಿವಸ ಕಾಂಗ್ರೆಸ್ ಸದಸ್ಯರೊಬ್ಬರೂ ಇಲ್ಲ. ರೂಲಿಂಗ್ ಪಾರ್ಟಿಯವರುಯಾರೂ ಇಲ್ಲ. ಅವರೆಲ್ಲರೂ ನಾನ್-ಕಾಂಗ್ರೆಸ್ ಸದಸ್ಯರೇ ಇದ್ದಾರೆ. ಆದರೆ ಏನೋ ಒಂದು ಅನಿವಾರ್ಯದಿಂದ ಅಲ್ಲಿಯ ಚುನಾವಣೆಯನ್ನು ಒಂದು ವರ್ಷಕಾಲ ಮುಂದಕ್ಕೆ ಹಾಕಿರುತ್ತಾರೆ ಈ ಬಗ್ಗೆ ಆ ಮಾನ್ಯ ಸದಸ್ಯರಿಗೇನಾದರೂ ಇನ್ನೂ ಅನುಮಾನವಿದ್ದ ಪಕ್ಷದಲ್ಲಿ ಅವರು ಆ ಪ್ರದೇಶದಲ್ಲಿ ಹೋಗಿ ಪ್ರವಾಸ ಮಾಡಿ ನಿಜಾಂಶವನ್ನು ತಿಳಿದುಕೊಳ್ಳಬಹುದು. ಹಾಗೆ ಮಾಡಿದರೆ ಒಳ್ಳೆಯದು. ನಾವೇನೆ ಅಲ್ಲಿ ಇಂಥ ಅನಿವಾರ್ಯವಿರುತ್ತದೆ ಎಂದು ಕೇಳಿಕೊಂಡಿದ್ದರ ಮೇರೆ ಸರ್ಕಾರದವರು ಒಂದು ವರ್ಷಕಾಲ ಆ ಚುನಾವಣೆಗಳನ್ನು ಮುಂದುವರಿಸಲು ಒಪ್ಪಿಕೊಂಡು ಈಗ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ಬಗ್ಗೆ ಮಾನ್ಯಸದಸ್ಯರುಗಳುಯಾರೂ ಬೇರೆ ಭಾವಿಸಬಾರದೆಂದು ಹೇಳಿ ಈ ತಿದ್ದುಪಡಿ ಮಸೂದೆಗೆ ಎಲ್ಲರೂ ಬೆಂಬಲ ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ರಕ್ಷಣೆ ಮತ್ತು ಸ್ಥಳೀಯ ಪ್ರಜಾಧಿಕಾರ ಸಂಸ್ಥೆಯ ಮಂತ್ರಿಗಳು)—ಮಾನ್ಯ ಸಭಾಪತಿಗಳೇ: ವಿರೋಧಪಕ್ಷದಲ್ಲಿರತಕ್ಕ ನನ್ನ ಕೆಲವು ಮಾನ್ಯಮಿತ್ರರು ಈ ಮೈಸೂರು ಸಿಟಿ ಮತ್ತು ಟೌನ್ ಮುನಿಸಿಪಾಲಿಟೀಸ್ ಅಮೆಂಡ್‌ಮೆಂಟ್ ಬಿಲ್ಲನ್ನು ತಂದಿದ್ದು ಸರಿಯಾದದ್ದಲ್ಲ, ಇದು ಅನಾವಶ್ಯಕವಾಗಿ ತಂದಿರತಕ್ಕಂಥಾ ತಿದ್ದುಪಡಿ ಮಸೂದೆಯಾಗಿದೆ ಎಂಬುದಾಗಿ ಹೇಳಿ ಇದನ್ನು ವಿರೋಧಿಸಿದ್ದಾರೆ. ಆದರೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಈ ಸ್ಪೆಷಲ್ ಆಫೀಸರುಗಳ ಕಾಲಾವಧಿಯನ್ನು ಒಂದು ವರ್ಷದವರೆಗೆ ಹೆಚ್ಚುಮಾಡಿ ಕೊಡಬೇಕೆಂದು ಒಂದು ತಿದ್ದುಪಡಿಯನ್ನು ತಂದು ಅದಕ್ಕೆ ಈ ಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದುಕೊಂಡಿದ್ದು ನಿಜ. ಆಗ ನಾನು ಅದಕ್ಕೆ ಕಾರಣಗಳೇನೆಂಬುದನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸಿದ್ದೆನು. ಆದರೆ ಈಗ ತಂದಿರುವಂಥ ತಿದ್ದುಪಡಿಯನ್ನು ಯಾವ ಮುನಿಸಿಪಾಲಿಟಿಗೂ ಅನ್ವಯಿಸಬೇಕೆಂಬ ಉದ್ದೇಶ ಸರ್ಕಾರಕ್ಕಿರುವುದಿಲ್ಲ. ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಿಷ್ಕಾರಣವಾಗಿ ಮುಂದುವರಿಸಬೇಕೆಂಬ ಇಚ್ಛೆ ಸರ್ಕಾರದವರಿಗೆ ಲೇಶಾಂಶವೂ ಇಲ್ಲ. ಈ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಕುಂಠಿತಗೊಳಿಸಬೇಕೆಂದಾಗಲೀ ಅಥವಾ ಇವುಗಳಿಗೆ ಮತ್ತೆ ಯಾವ ರೀತಿಯಲ್ಲಾಗಲಿ ಧಕ್ಕೆಯನುಂಟುಮಾಡಬೇಂಬ ಉದ್ದೇಶದಿಂದ ಸರ್ಕಾರದವರು ಈ ತಿದ್ದುಪಡಿಯನ್ನು ತಂದಿಲ್ಲ. ಈ ಹಿಂದೆ ಒಂದಾವರ್ತಿ ಬಳ್ಳಾರಿ ಮುನಿಸಿಪಾಲಿಟಿಯ ಬಗ್ಗೆ ಅನಿವಾರ್ಯಕಾರಣಗಳಿಗಾಗಿ ಅಲ್ಲಿಯ ಚುನಾವಣೆಯನ್ನು ಒಂದು ವರ್ಷಕಾಲ ಮುಂದಕ್ಕೆ ಹಾಕುವಂತೆ ಒಂದು ತಿದ್ದುಪಡಿಯನ್ನು ತಂದು ಅದಕ್ಕೆ ತಮ್ಮೆಲ್ಲರ ಒಪ್ಪಿಗೆಯನ್ನೂ ಪಡೆಯಲಾಗಿದ್ದಿತು. ಆದರೆ ಈಗ ಆ ಒಂದು ವರ್ಷದ ಅವಧಿಯನ್ನು ಇನ್ನೊಂದು ವರ್ಷ ಹೆಚ್ಚಿಸಬೇಕೆಂದು ತಿದ್ದುಪಡಿ ತರಲಾಗಿದೆ. ಆದರೆ ಹೀಗೆ ಮಾಡಬಾರದಾಗಿತ್ತು; ನಿಜ. ಆದರೆ ಅವಕಾಶ ಆ ರೀತಿ ಇಲ್ಲ. ಆಷ್ಟಕ್ಕಾಗಿಯೇ ಈಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರೂ, ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರೂ ಮತ್ತು ಶ್ರೀ ಕೆ. ಪಟ್ಟಾಭಿರಾಮನ್‌ರವರೂ ಸರ್ಕಾರದವರು ಈರೀತಿ ಮಾಡಿರುವುದು ಸರಿಯಾದದ್ದಲ್ಲ ಸರ್ಕಾರದವರ ನೀತಿ ಸರಿಯಾಗಿಲ್ಲ ಎಂಬುದಾಗಿ ಹೇಳಿ ಈ ತಿದ್ದುಪಡಿ ಮಸೂದೆಯನ್ನು ಖಂಡಿಸಿದ್ದಾರೆ. ಹೀಗೆ ಕಾಲವನ್ನು ಇನ್ನೊಂದು ವರ್ಷಕ್ಕೆ ಹೆಚ್ಚಿಸಲು ಇರತಕ್ಕ ಕಾರಣಗಳನ್ನು ತಿಳಿಸಬೇಕೆಂದು ಸಹ ಕೇಳಿದ್ದಾರೆ. ಈ ಬಗ್ಗೆ ನಾನೀಗ ಸಭೆಗೆ ತಿಳಿಸಬೇಕಾದ್ದಿಷ್ಟೆ—ಈ ತಿದ್ದುಪಡಿ ಮಸೂದೆಯಲ್ಲಿ ಸರ್ಕಾರದವರಿಗೆ ಅಂಥ ಯಾವ ಒಂದು ಸ್ಪೆಷಲ್ ಇಂಟ್ರೆಸ್ಟು ಇರುವುದಿಲ್ಲ. ಇನ್ನು ಈ ಸಂಸ್ಥೆಗಳ ಆಡಳಿತ ವಿಚಾರವನ್ನೆಲ್ಲಾ ಈ ಮಸೂದೆಯಲ್ಲೇ ಅಡಕಗೊಳಿಸಲಾಗಿದೆ. ವಿಧಿ-ನಿಯಮಾವಳಿಗಳಿಗನುಸಾರವಾಗಿ ಅಧಿಕಾರಿಗಳು ಆಡಳಿತ ನಡೆಸುತ್ತಾರೆ. ಅವರು ಆಕ್ಟಿಗೆ ವಿರೋಧವಾಗಿ ಏನನ್ನು ಮಾಡುವುದಿಲ್ಲ. ಆಕ್ಟಿನಲ್ಲಿ ಅಡಕ ಮಾಡಿರತಕ್ಕ ನಿಯಮದಂತೆ ಆಡಳಿತ ನಡೆಸುತ್ತಿದ್ದಾರೆ.

ಸರ್ಕಾರದವರು ಆ ಆಕ್ಟ್‌ನಲ್ಲಿರುವುದನ್ನು ಅವರ ಮೇಲೆ ಮಿತಿಮೀರಿ ಹೊರಿಸಿ, ಅವರಮೇಲೆ ಅಧಿಕಾರವನ್ನು ಚಲಾಯಿಸಬೇಕೆಂದು ಇದುವರೆಗೂ ಹೋಗಿಲ್ಲ. ಏನೆಂದರೆ ಸರ್ಕಾರಕ್ಕೆ ಸಂಬಂಧಪಟ್ಟ ಮತ್ತು ಕಾನೂನಿನಲ್ಲಿ ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳಿದ್ದರೆ, ಅವರ ಆಡಳಿತಕ್ಕೆ, ಅಧಿಕಾರಕ್ಕೆ ಸೇರಿದ್ದ ಪಕ್ಷದಲ್ಲಿ ಅಂಥ ಸಂದರ್ಭಗಳಲ್ಲಿ ಮತ್ತು ಮುನಿಸಿಪಾಲಿಟಿಗಳ ಹಣಕಾಸಿನ ಸಂಬಂಧದಲ್ಲಿ ಮಾತ್ರ ಈ ರೀತಿ ಮಾಡಬಹುದಾಗಿತ್ತು; ಈ ರೀತಿ ಮಾಡುವುದು ಒಳ್ಳೆಯದು ಎಂದು ಅವರಿಗೆ ತಿಳಿವಳಿಕೆ ಕೊಡುತ್ತೇವೆಯೇ ಹೊರತು ಅವರ ಹಕ್ಕುಬಾಧ್ಯತೆಗಳಿಗೆ ಲೋಪ ಬರುವಂತೆ ಆಡಳಿತದ ವಿಷಯದಲ್ಲಿ ಅನಾವಶ್ಯಕವಾಗಿ ಪ್ರವೇಶಮಾಡಿ ತೊಂದರೆಯನ್ನುಂಟು ಮಾಡಬೇಕೆಂಬ ಇಚ್ಛೆ ಸರ್ಕಾರದವರಿಗೆ ಲೇಶಾಂಶವೂ ಇಲ್ಲವೆಂದು ನಾನು ಈ ಸಭೆಯ ಮುಂದೆ ಹೇಳುತ್ತೇನೆ. ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರೂ ಮತ್ತು ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿ ಮತ್ತಿತರರೂ ಒಂದು ಅಭಿಪ್ರಾಯವನ್ನು ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ಏನೆಂದರೆ ಹಕ್ಕುಬಾಧ್ಯತೆಗಳಿಗೆ ಕುಂದಕ ತರುವುದು, ಈ ತಿದ್ದುಪಡಿಗಳನ್ನು ತಂದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವುದು ಸರಿಯಾದದ್ದಲ್ಲ ಎಂದು. ಅಂಥ ಸನ್ನಿವೇಶ ಒದಗಿಲ್ಲವೆಂದು ಹೇಳುತ್ತೇನೆ. ಆದರೆ ಈ ತಿದ್ದುಪಡಿಯನ್ನು ಒಂದು ಅವಶ್ಯಕತೆ ಇಟ್ಟುಕೊಂಡು ತಂದಿದ್ದೇವೆ. ಅವಶ್ಯಕತೆ ಇಲ್ಲದಿದ್ದರೆ ತರುವುದಕ್ಕೆ ಕಾರಣವೇ ಇಲ್ಲ. ಈಗ ಶ್ರೀಮಾನ್ ಕೆ. ಪಟ್ಟಾಭಿರಾಮನ್ ಅವರು ಇಂದು ಅಂಥ ಅವಶ್ಯಕತೆ ಒದಗಿದೆಯೇ, ಏನು ಉದ್ದೇಶದಿಂದ ಇದನ್ನು ತಂದಿದ್ದೀರಿ, ಎರಡು ವರ್ಷವೆಂದು ಏಕೆ ಮಾಡಬೇಕಾಗಿತ್ತು ಎಂದು ಕೇಳಿದರು. ಇಧಕ್ಕೆ ಕಾರಣವೇನೆಂದರೆ ಈ ಒಂದುವರ್ಷದೊಳಗೆ ಸಾರ್ವತ್ರಿಕ ಚುನಾವಣೆಗಳು ಎಲ್ಲ ಮುನಿಸಿಪಾಲಿಟಿಗಳಲ್ಲಿಯೂ ನಡೆದುವು. ಬಳ್ಳಾರಿಯಲ್ಲಿ ಮಾತ್ರ ನಡೆಯಲಿಲ್ಲ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸಹ ಚುನಾವಣೆಗಳು ನಡೆಯುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಟ್ಟಿರುವಾಗ ಬಳ್ಳಾರಿಯಲ್ಲಿ ಮಾತ್ರ ಯಾಕೆ ಚುನಾವಣೆಗಳನ್ನು ನಡೆಸಲಿಲ್ಲವೆಂದು ತಾವು ಕೇಳಬಹುದು ನಿಜ. ಆದರೆ ಹೊಸಪೇಟೆಯಲ್ಲಿ ನಡೆದಿರುವಾಗ ಬಳ್ಳಾರಿಯಲ್ಲಿ ನಿಲ್ಲಿಸಲು ಕಾರಣವೇನು ? ಏನೋ ವಿಶೇಷ ನಡೆದಿರುವುದರಿಂದ ನಿಲ್ಲಿಸಿದ್ದಾರೆಂದು

(ಶ್ರೀ ಟಿ. ಚನ್ನಯ್ಯ.)

ತಾವುಗಳು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಯಾವಾಗಲೂ ಬಹುಜನಗಳ ಒಪ್ಪಿಗೆಯಂತೆ, ಬಹುಜನಗಳು law of the country ಇದೇ ರೀತಿ ಇರಬೇಕು ಎಂದು ಇಷ್ಟಪಟ್ಟರೆ ಅದನ್ನೂ 'ಲಾ' ಮಾಡುತ್ತಾರೆ ಅದರ ಪ್ರಕಾರ ಎಲ್ಲರೂ ನಡೆದುಕೊಂಡು ಹೋಗಬೇಕು. ಹಿಂದೆ ಎಷ್ಟೋ ವರ್ಷಗಳ ಕೆಳಗೆ ಬ್ರಿಟಿಷರ ಕಾಲದಲ್ಲಿ ಮಾಡಿದ ಆಕ್ಟ್‌ಗಳಿವೆ. ಅವೆಲ್ಲ ಅದೇರೀತಿಯಲ್ಲಿ ನಡೆದುಕೊಂಡು ಬರುತ್ತಿವೆ. ಅನೇಕ ಸಂದರ್ಭಗಳಲ್ಲಿ ಕಾಲಕ್ಕೆ ತಕ್ಕಂತೆ ಎಲ್ಲ ಜನರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಕಾನೂನನ್ನು ಸಹ ಜಾರಿಗೆ ತಂದು ನಡೆಸಿಕೊಂಡು ಹೋಗಬೇಕು. ಮತ್ತು ಸ್ವಲ್ಪ ಹಿಂದು ಮುಂದು ನೋಡಿಕೊಂಡು ಅವರಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯಲ್ಲಿ ನಡೆಸುವುದಕ್ಕೆ ಹೋದರೆ ತೊಂದರೆಯಾಗುತ್ತವೆ. ಬಳ್ಳಾರಿ ಟೌನ್‌ನಲ್ಲಿ ಏಕೆ ನಾವು ಬಲವಂತ ಮಾಡಲಿಲ್ಲವೆಂದರೆ, ಪ್ರಾಂತಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಮಸೂದೆ ಪಾರ್ಲಿಮೆಂಟ್‌ನಲ್ಲಿ ಇತ್ತೀಚೆಗೆ ಅಂದರೆ ಒಂದು ತಿಂಗಳ ಹಿಂದೆ ಪಾಸಾಯಿತು. ಅಲ್ಲಿಯವರೆಗೂ ಆಂಧ್ರರಿಗೂ ಮತ್ತು ಕನ್ನಡಿಗರಿಗೂ ಮಧ್ಯೆ ವಿಶೇಷ ಪರಿಸ್ಥಿತಿ ಇತ್ತು. ಅವರಿಬ್ಬರಲ್ಲಿ ಒಮ್ಮತವಿಲ್ಲದೆ, ನಾವೇ ಬೇರೆ, ಅವರೇ ಬೇರೆ ಎಂಬ ಅಭಿಪ್ರಾಯವಿತ್ತು. ಸರ್ಕಾರದವರ ಅಭಿಮತವಾದರೂ ಆಂಧ್ರರೂ ಮತ್ತು ಕನ್ನಡಿಗರೂ ಒಮ್ಮತವಾದ ರೀತಿಯಲ್ಲಿ, ಸಹಾನುಭೂತಿಯಿಂದ, ಒಬ್ಬರಿಗೊಬ್ಬರು ಅನುಸರಿಸಿಕೊಂಡು ಹೋಗಬೇಕು ಶಾಂತಿಯುತವಾದ ವಾತಾವರಣದಲ್ಲಿ ಕೆಲಸ ಮಾಡಬೇಕು, ಶಾಂತವಾತಾವರಣವಿಲ್ಲದೆ ಒಬ್ಬರಿಗೊಬ್ಬರಿಗೆ ವೈಮನಸ್ಯವಿದ್ದರೆ ಅನಾಹುತವಾಗುತ್ತದೆ, ಅಂಥಾದ್ದು ಆಗಬಾರದು ಎಂದಿತ್ತು. ಆದರೆ ಅಂಥ ಅವಕಾಶ ಉಂಟಾಗುವುದೇ ಎಂದು ನೋಡುತ್ತಿದ್ದೆವು. ಮೊನ್ನೆ ಪಾರ್ಲಿಮೆಂಟಿನಲ್ಲಿ ಪ್ರಾಂತಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಮಸೂದೆಯು ಪಾಸಾಗುವವರೆಗೂ ಅವರಲ್ಲಿ ಸ್ವಲ್ಪ ಸ್ವಲ್ಪ ವೈಮನಸ್ಯವಿತ್ತು. ಈಗ ಸ್ವಲ್ಪ ಸಮಾಧಾನಕ್ಕೆ ಬಂದಿದೆ. ನವಂಬರ್ ಒಂದನೆ ತಾರೀಖಿನಿಂದ ನಾವೆಲ್ಲ ಮೈಸೂರು ದೇಶದಲ್ಲಿಯೇ ಇರಬೇಕಾಗಿ ಬಂದಿದೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಇಷ್ಟವಿಲ್ಲದಿರುವ ಹುಡುಗಿಯನ್ನು ಒಬ್ಬನಿಗೆ ಕೊಟ್ಟು ಮದುವೆ ಮಾಡಿದನಂತರ ಏನಾದರೂ ಆಗಲಿ ನಾವು ಸರಿಮಾಡಿಕೊಂಡು ಹೋಗಬೇಕು ಎನ್ನುವಂತೆ ಇವರ ಸ್ಥಿತಿ ಇದೆ. ಹಾಗೆ ಬಳ್ಳಾರಿಯವರು ಒಂದು ಸಮಾಧಾನಕ್ಕೆ ಬರುತ್ತಿದ್ದಾರೆ. ನವಂಬರ್ ಒಂದನೆ ತಾರೀಖು ಸನ್ನಿಹಿತವಾಗುತ್ತಿದೆ. ಜಾಗ್ರತೆಯಾಗಿ ಎಲ್ಲ ಪ್ರದೇಶಗಳೂ ಮೈಸೂರಿನಲ್ಲಿ ಸೇರುತ್ತವೆ. ಅಂಥ ಒಳ್ಳೆಯ ವಾತಾವರಣದಲ್ಲಿ ಮತ್ತು ಕನ್ನಡಿಗರೂ ಆಂಧ್ರರೂ ಏಕವಾಗಿ ಹೋಗತಕ್ಕ ಸನ್ನಿವೇಶದಲ್ಲಿ ಚುನಾವಣೆಗಳನ್ನು ನಡೆಸುವುದು ನ್ಯಾಯ, ಮತ್ತು ಅಂಥ ವಾತಾವರಣದಲ್ಲಿ ನಡೆಸಬೇಕೆಂಬುದೇ ಸರ್ಕಾರದವರ ಉದ್ದೇಶ. ಇದೇ ಉದ್ದೇಶದಿಂದಲೇ ನಾವು ಚುನಾವಣೆಗಳನ್ನು ಮುಂದೆ ಹಾಕಿರುವುದು. ಕಾನೂನು ಇದೆ; 'ಲಾ' ಇದೆ. ನಮ್ಮ ಅಧಿಕಾರವನ್ನು ಚಲಾಯಿಸಬಹುದು. ಆದರೆ ಕಾನೂನು ಯಾವಾಗಲೂ ಕೂಡ ಜನಗಳಿಗೆ ಉಪಯೋಗವಾಗುವಂತಿದ್ದರೆ ಒಳ್ಳೆಯದು. ಅದಿಲ್ಲದೆ ತೊಂದರೆಯಾಗತಕ್ಕುದನ್ನೂ ಮಾಡಬೇಕೆಂದರೆ ಯಾವ ನ್ಯಾಯ. ಆದುದರಿಂದ ಬಹುಜನಗಳಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಮೂಲಭೂತ ಹಕ್ಕುಗಳನ್ನು ಕಾಪಾಡಿಕೊಂಡು ಬರತಕ್ಕ ರೀತಿಯಲ್ಲಿ ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶ. ಎಲ್ಲ ಮುನಿಸಿಪಾಲಿಟಿಗಳಿಗೂ ಈ ಅಧಿಕಾರವನ್ನು ಅನ್ವಯಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಎಲ್ಲ ಕಡೆಗಳಲ್ಲಿಯೂ ಚುನಾವಣೆಗಳು ನಡೆದು ಬಳ್ಳಾರಿಯಲ್ಲಿ ಮಾತ್ರ ನಡೆದಿಲ್ಲ. ಬಳ್ಳಾರಿಗೆ ಮಾತ್ರ ಅನ್ವಯವಾಗುವಂತೆ ಏಕೆ ತಿದ್ದುಪಡಿಯನ್ನು ತರಲಿಲ್ಲವೆಂದು ಕೇಳಬಹುದು. ಒರಿಜಿನಲ್ ಆಕ್ಟ್‌ಗೆ ತಿದ್ದುಪಡಿಯನ್ನು ತಂದಿರುವುದರಿಂದ, ಜನರಲ್ ಆಗಿ ತಂದಿದ್ದೇವೆಯೇ ಹೊರತು ಪ್ರತ್ಯೇಕವಾಗಿ ಬಳ್ಳಾರಿಗೆ ತರಲಿಲ್ಲ. ಒಂದೊಂದು ಸ್ಥಳಕ್ಕೂ ಪ್ರತ್ಯೇಕವಾಗಿ ತರುವುದಕ್ಕೆ ಸಾಧ್ಯವಿಲ್ಲ.

ಸ್ವಾಮಿ, ನನಗೆ ಕಾಲಾವಕಾಶವಿಲ್ಲ. ಮೇಲ್ಮನೆಯಲ್ಲಿ ಕೂಡ ನನಗೆ ಕೆಲಸವಿದೆ. ಇದರಲ್ಲಿ ಅಂಥ ವಿವಾದಾಸ್ಪದವಾದ ಅಂಶ ಇಲ್ಲವೆಂದು ಭರವಸೆ ಕೊಡುತ್ತೇನೆ. ಇದನ್ನು ಬಳ್ಳಾರಿ ಮುನಿಸಿಪಾಲಿಟಿಗೆ ಅನ್ವಯಿಸಲಾಗುತ್ತದೆ. ಬೇರೆ ಕಡೆಗಳಿಗೆ ಅನ್ವಯಿಸುವುದಿಲ್ಲ. ಒಳ್ಳೆಯ ವಾತಾವರಣದಲ್ಲಿ ಚುನಾವಣೆಗಳನ್ನು ನಡೆಸಬೇಕೆಂದಿದ್ದೇವೆ. ನಾವು ಒಂದು ವರ್ಷ ಕೇಳಿದ್ದರೂ ಕೂಡ, ಅಷ್ಟು ಕಾಲ ನಿಧಾನಮಾಡುವುದಿಲ್ಲ. ಜಾಗ್ರತೆಯಾಗಿ ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸಿವಿಲ್ ಜಡ್ಜ್‌ಗಳ ವಿಷಯ ಕೇಳುತ್ತೇನೆ. ಇದು consequential amendment ಆಗಿರುವುದರಿಂದ ಇದನ್ನು ಮೊದಲೇ ತರಬೇಕಾಗಿತ್ತು. ಕಳೆದ ಅಸೆಂಬ್ಲಿ ಅಧಿವೇಶನದಲ್ಲಿ ಇದನ್ನು ತರಬಹುದಾಗಿತ್ತು. ಆವಾಗಲೂ ತರಲಿಲ್ಲ. ಒಂದನೆ ಜೂನ್ 1956ರಿಂದ separation of judiciary ಬಂತು. ಇದಕ್ಕೆ ಮೊದಲೇ ಈ ತಿದ್ದುಪಡಿಗಳನ್ನು ತರುವುದಕ್ಕೆ ಆಗುತ್ತಿತ್ತು.

ಶ್ರೀ ಕೆ. ಪಟ್ಟಾಭಿರಾಮನ್.—ಮಾನ್ಯ ಸಭಾಪತಿಗಳೇ, ಈ ಮಸೂದೆ ನಮ್ಮ ಮುಂದೆ ಮೈಸೂರಿನಲ್ಲಿ ನಡೆದ ಅಧಿವೇಶನದಲ್ಲಿ ಬಂದಾಗ ನಾವುಗಳು ಕೆಲವರು ಈ ರೀತಿಯಾಗಿ ಬರೀ ಸಿವಿಲ್ ಜಡ್ಜ್ ಎಂದು ಮಾಡುವುದರಿಂದ 850 ರೂಪಾಯಿ ಸಂಬಳ ಜಾಸ್ತಿಯಾಗುತ್ತದೆ, ಇದು ಒಂದು ಕೇಡರ್ ಆಗುತ್ತದೆ, ಇಷ್ಟು ಮಾತ್ರ ಮಾಡಿದರೆ ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬೇರೆ ಮಾಡಬೇಕು (separation of judiciary) ಎಂದು ಏನು ಹೇಳುತ್ತೀರೋ ಅದು ಪೂರ್ಣವಾಗುವುದಿಲ್ಲವೆಂದು ಹೇಳಿದೆವು. ಕಾನೂನು ದೃಷ್ಟಿಯಿಂದ ಅದಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಒಂದು ವಿಶಿಷ್ಟ ತಿದ್ದುಪಡಿ ತರಬೇಕೆಂದು ಸಭೆಯಲ್ಲಿ ಅಭಿಪ್ರಾಯಪಟ್ಟಾಗ ಆಗ ಹಾಜರಿದ್ದ, ಈಗ ಇಲ್ಲಿ ಹಾಜರಿಲ್ಲದೆ ಇರತಕ್ಕ, ನ್ಯಾಯಾಂಗ ಸಚಿವರು ಮಾತನಾಡಿ ಅದು ಅವಶ್ಯಕವಿಲ್ಲವೆಂದು ಹೇಳಿದರು. ನಾನು ಹೇಳುವುದಿಷ್ಟೇ.

ಶ್ರೀ ಟಿ. ಚನ್ನಯ್ಯ.—ಏಪ್ರಿಲ್ ತಿಂಗಳಿನಲ್ಲಿ ಅಧಿವೇಶನ ನಡೆಯಿತು. ಆಗ ಈ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೂಡ ಇನ್ನೂ ಮೊದಲೇ ತರಬೇಕಾದದ್ದು ವಾಸ್ತವ. Insolvency and various other Acts, ಇವುಗಳ ಸಂಬಂಧದಲ್ಲಿ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದ ಮುಂದಿನ ಕ್ರಮವನ್ನು ನಡೆಸುತ್ತೇವೆ ಈಗ ಮಾನ್ಯ ಸಭೆಯವರು ಈ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is :

"That the Mysore City and Town Municipalities (Amendment) Bill, 1956, as passed by the Legislative Council, be taken into consideration."

The motion was adopted.

Mr. SPEAKER.—Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 1, Tittle and Preamble. The question is :

"That Clause 1, the Tittle and the Preamble stand part of the Bill."

The motion was adopted.

Clause 1, the Tittle and the Preamble were added to the Bill.

Motion to pass.

Sri T. CHANNIAH.—Sir, I move :

"That the Mysore City and Town Municipalities (Amendment) Bill, 1956, as passed by the Legislative Council be passed."

Mr. SPEAKER.—The question is :

"That the Mysore City and Town Municipalities (Amendment) Bill, 1956, as passed by the Legislative Council be passed."

The motion was adopted.

Petition on Kolar Gold Mining Undertakings (Acquisition) Bill, 1956.

Mr. SPEAKER.—There is a petition received in regard to the K.G.F. Nationalisation Bill. That is also one of the considerations to postpone the discussion on that Bill. The Secretary will report to the House.

SECRETARY.—Sir, as required by Rule 95 of the Rules of Procedure and Conduct of Business in the Legislative Assembly, I beg leave to report to the Assembly that I have received a petition to the Mysore Legislative Assembly in respect of the Kolar Gold Mining Undertakings (Acquitition) Bill, 1956, signed by nine persons.

Mr. SPEAKER.—It will be referred to the Committee on petitions.

Discussion on Q. No. 710.

Re. *shifting of the Ayurvedic College from Mysore to Bangalore.*

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, 710 ನೆಯ ನಂಬರಿನ ಪ್ರಶ್ನೆಗೆ ಉತ್ತರ ಕೊಡುವಾಗ ಸರ್ಕಾರದವರು ಸಮರ್ಪಕವಾದ ಉತ್ತರವನ್ನು ಕೊಡದೆಹೋದದ್ದರಿಂದ ಈ ಚರ್ಚೆಯನ್ನು ನಾನು ಆರಂಭ ಮಾಡಬೇಕೆಂದಿದ್ದೇನೆ. ನೇರವಾಗಿ "ಆಯುರ್ವೇದ ಕಾಲೇಜನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸುವ ವಿಚಾರವಾಗಿ ಒಂದು ವರದಿಯನ್ನು ಒಪ್ಪಿಸುವುದಕ್ಕಾಗಿ ಒಂದು ಸಮಿತಿಯನ್ನೇನಾದರೂ ರಚಿಸಲಾಗಿದೆಯೆ ?" ಎಂದು ಪ್ರಶ್ನೆ ಕೇಳಿದ್ದಕ್ಕೆ ಮಂತ್ರಿಗಳು "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಈ ಸಭೆಗೆ ಗೊತ್ತಿರುವ ಹಾಗೆ ಕಳೆದ ಮಾರ್ಚಿ ಅಧಿವೇಶನದಲ್ಲಿ ಮಾನ್ಯ ಜನಾರೋಗ್ಯ ರಕ್ಷಣೆ ಮಂತ್ರಿಗಳು ಮೈಸೂರಿನಿಂದ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅನಂತರ ಮೈಸೂರಿನ ಕೆಲವು ಪ್ರಮುಖರು ಮತ್ತು ಈ ಸಭೆಯ ಸದಸ್ಯರು ಅದನ್ನು ವಿರೋಧಿಸಿದ್ದರ ಮೇಲೆ ಕೊನೆಯಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು ನನಗೆ ನೆನಪಿರುವ ಹಾಗೆ ಇದೇ ಸಭೆಯಲ್ಲಿ, ಹಾಗಾದರೆ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯ ತೀರ್ಮಾನದಂತೆ ನಾನು ನಡೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ ಎಂದು ಹೇಳಿ ಆ ಮಾತಿನ ಪ್ರಕಾರ ಒಬ್ಬರನ್ನು ನೇಮಕ ಮಾಡಿ ಅವರು ವರದಿಯನ್ನು ಸಹ ಸರ್ಕಾರಕ್ಕೆ ಕೊಟ್ಟಿದ್ದಾರೆ. ವರದಿಯಲ್ಲಿ ನಮಗೆ ತಿಳಿದಿರುವ ಹಾಗೆ ಈ ಕಾಲೇಜನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸುವುದು ಅನಿವಾರ್ಯ, ವರ್ಗಾಯಿಸಲೇ ಬೇಕಾಗುತ್ತದೆ, ಇನೆವಿಟೆಬಲ್ ಎಂದು ಕೂಡ ಸೂಚಿಸಿದ್ದಾರೆಂದು ಕೇಳಿದ್ದೇನೆ. ಈ ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ಈ ಕಾಲೇಜನ್ನು ವರ್ಗಮಾಡುವ ವಿಷಯದಲ್ಲಿ ಕೆಲವರು ಕುತೂಹಲವುಳ್ಳವರಾಗಿರುವುದರಿಂದ ಮತ್ತು ಬೆಂಗಳೂರಿನಲ್ಲಿರುವ ಸೌಕರ್ಯಗಳು ಮೈಸೂರಿನಲ್ಲಿ ಇಲ್ಲದಿರುವುದರಿಂದ ಮೈಸೂರಿನಲ್ಲಿ ಯಾವ ಅಭಿವೃದ್ಧಿ ಕಾರ್ಯವನ್ನೂ ಕೈಕೊಂಡಿಲ್ಲ. ಸರ್ಕಾರದವರು ಇನ್ನೊಂದು ಪ್ರಶ್ನೆಗೆ ಕೆಲವು ಉತ್ತರಗಳನ್ನು ಕೊಟ್ಟಿದ್ದಾರೆ. ಅದನ್ನು ನೋಡಿದರೆ ಅಷ್ಟು ಪರಿಹಾಸ್ಯಕರವಾದ ಉತ್ತರವನ್ನು ಇನ್ಯಾವ ಸರ್ಕಾರವೂ ಕೊಡುವುದಕ್ಕೆ ಸಾಧ್ಯವಿಲ್ಲ.

ಆ ಉತ್ತರ ಈ ರೀತಿಯಿದೆ:—

"Plans and estimates for the construction of the dissection section of the

(ಶ್ರೀ ಎಸ್. ಗೋಪಾಲಗೌಡ)

combined college have been called for from the Principal of the Government College of Indian Medicine."

"As there is insufficient accommodation and on the advice of technically competent persons, the question of shifting the College from Mysore to Bangalore is under the active consideration of the Gevernment of Mysore."

ಇದರಲ್ಲಿ ಯಾವುದನ್ನು ನಂಬಬೇಕೋ ನಮಗಂತೂ ಗೊತ್ತಾಗುತ್ತಿಲ್ಲ! ಮತ್ತು ಪಂಚವಾರ್ಷಿಕ ಯೋಜನೆಯಲ್ಲಿ ಹೊಸದಾಗಿ ಒಂದು ಸೆಂಟ್ರಲ್ ಫಾರ್ಮಸಿಯನ್ನು ಬೆಂಗಳೂರಿನಲ್ಲಿ ತೆರೆಯಬೇಕೆಂದು ಹೇಳುತ್ತಾರೆ. ಈಗ ಕಾಲೇಜಿಗೆ ಕೆಲವು ಪಾರ್ಟ್‌ಟೈಂ ಲೆಕ್ಚರರುಗಳನ್ನು ಕೊಟ್ಟಿದ್ದಾರೆ. ಇದನ್ನು ನೋಡಿದರೆ ಹೀಗೆ ಕಾಣುತ್ತದೆ. ಈ ಸರ್ಕಾರ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದಕ್ಕೆ ಸಿದ್ಧವಾಗಿದ್ದರೂ ಅಥವಾ ಇಷ್ಟಪಟ್ಟರೂ ಕೂಡ ಯಾರೋ ಕೆಲವರು ಅದಕ್ಕೆ ಪ್ರಬಲವಾಗಿ ವಿರೋಧವನ್ನು ಎಲ್ಲೋ ಸೂಚಿಸುತ್ತಿದ್ದಾರೆ, ಅವರ ವಿರೋಧವನ್ನು ಎದುರಿಸಿ ಈ ಕಾಲೇಜನ್ನು ವರ್ಗಾಯಿಸುವಂಥ ಒಂದು ಶಕ್ತಿ ಈ ಸರ್ಕಾರಕ್ಕೆ ಇಲ್ಲದೆ ಈ ರೀತಿ ನಾಟಕವನ್ನು ಆಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ.

ಕಳೆದ 20ನೆಯ ತಾರೀಖಿನಿಂದ ಸುಮಾರು 350 ವಿದ್ಯಾರ್ಥಿಗಳಿರುವ ಈ ಕಾಲೇಜಿನವರು ಮೈಸೂರಿನಲ್ಲಿ ಮುಷ್ಕರ ಹೂಡಿದ್ದಾರೆ. ಕಾರಣವೇನೆಂದರೆ ಈ ಕಾಲೇಜಿನಲ್ಲಿ ಸಾಕಷ್ಟು ಲೆಕ್ಚರರುಗಳಿಲ್ಲ, ಸಾಕಷ್ಟು ಸ್ಥಳವಿಲ್ಲ, ಲ್ಯಾಬೋರೇಟರಿಯಿಲ್ಲ, ಫಾರ್ಮಸಿಯಿಲ್ಲ, ಹೀಗಿರುವಾಗ ವಿದ್ಯಾರ್ಥಿಗಳು ಹೋಗಿ ಏನು ಕಲಿಯಬೇಕು ? ಇದು ಟೆಕ್ನಿಕಲ್ ಕಾಲೇಜು ಕೂಡ ಆಗಿದೆ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳು ಈ ಅನಾನುಕೂಲವನ್ನು ಸಹಿಸಲಾರದೆ ಹೊರಗೆ ಬಂದರು ; ಹೊರಗಡೆಯಿಂದ ಕೂಡ ಕೆಲವು ಜನ ವಿದ್ಯಾರ್ಥಿಗಳು ಬಂದಿದ್ದಾರೆ. ಏಕೆಂದರೆ ಇಂಡಿಯಾ ದೇಶದಲ್ಲೇ ಇದು ದೊಡ್ಡ ಕಾಲೇಜು, 1901ರಲ್ಲೋ ಏನೋ ಸ್ಥಾಪನೆಯಾಗಿದೆ. ಅಲ್ಲಿಂದ ಇಲ್ಲಿಯವರೆಗೂ ಸರಿಯಾದ ಅಕಾಮಡೇಷನ್ ಇಲ್ಲ, ಆಗಾಗ್ಗೆ ಪ್ರಾಸ್ಪೆಕ್ಟಸ್ ಪ್ರಿಂಟ್ ಮಾಡುವುದರಿಂದ ವಿದ್ಯಾರ್ಥಿಗಳು ಹೊರಗಿನಿಂದ ಬರುತ್ತಾರೆ. ಮದರಾಸ್ ಸರ್ಕಾರದವರು ಕೆಲವು ಷರತ್ತುಗಳಿಗನುಗುಣವಾಗಿ ರೆಕಗ್ನಿಷನ್ ಕೊಡುತ್ತೇವೆಂದು ಹೇಳುತ್ತಾರೆ. ಈ ಕಾಲೇಜಿನ ಅರ್ಹತೆಗೆ ಆಲ್ ಇಂಡಿಯಾ ರೆಕಗ್ನಿಷನ್ ಇಲ್ಲ. ಸ್ಥಳೀಯ ಸಂಸ್ಥೆ ಅಧಿಕಾರಿಗಳೇ ಇದಕ್ಕೆ ಹೆಡ್. ಇದು ಯೂನಿವರ್ಸಿಟಿಯ ಒಂದು ಭಾಗವಾಗಿಲ್ಲ. ಯೂನಿವರ್ಸಿಟಿಯವರು ರೆಕಗ್ನೈಜ್ ಮಾಡಿಲ್ಲ, ಮಾತೆತ್ತಿದರೆ ಮೆಡಿಕಲ್ ಕಾಲೇಜಿಗೆ ಪಾಠಕ್ಕೆ, ಲ್ಯಾಬೋರೇಟರಿಗೆ ಹೋಗಬೇಕೆಂದು ಹೇಳುತ್ತಾರೆ. ಕಾಲೇಜಿನವರು ತಮಗೆ ತೊಂದರೆ, ಆಯುರ್ವೇದ ಕಾಲೇಜಿನವರು ಬರಬೇಕಾಗಿಲ್ಲ ಎಂದು ಹೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಮುಷ್ಕರ ನಡೆದಿದೆ. ಮುಷ್ಕರ ಈಗ ನಡೆಯುತ್ತಿದೆಯೆ ಎಂದು ಕೇಳಿದರೆ ಮಾನ್ಯ ಮಂತ್ರಿಗಳು ಗೊತ್ತಿಲ್ಲ ಎಂದು ಹೇಳಿದರು. ಇಷ್ಟರಮಟ್ಟಿಗೆ ಒಂದು ತಾತ್ಸಾರವಾದ ವರ್ತನೆ ಈ ಕಾಲೇಜಿನ ವಿಷಯದಲ್ಲಿ ಸರ್ಕಾರಕ್ಕಿದೆ. ನಾನೂ ಕೂಡ ಮೈಸೂರಿಗೆ ಹೋಗಿ ನೋಡಿದ್ದೇನೆ. ಕಳೆದ ಸಲವೇ ಮುಖ್ಯಮಂತ್ರಿಗಳನ್ನು ಕಂಡು ವಿಷಯ ತಿಳಿಸಿ ಪರಿಸ್ಥಿತಿ ಉತ್ತಮವಾಗದ್ದರಿಂದ ವಿದ್ಯಾರ್ಥಿಗಳು ಹೀಗೆ ಮುಷ್ಕರ ಮಾಡಿದ್ದಾರೆ. ಅಲ್ಲಿ ವಾಸ್ತವವಾಗಿ ಯಾವ ಸೌಲತ್ತೂ ಇಲ್ಲ. ಈ ಕಾಲೇಜನ್ನು ಬೆಂಗಳೂರಿಗೆ ವರ್ಗ ಮಾಡಬೇಕೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ. ಈ ವಿಷಯ ಸರ್ಕಾರದ ಮುಂದಿದೆ. ಕಾಲೇಜನ್ನು ಸರಿಪಡಿಸಿ, ಅಭಿವೃದ್ಧಿ ಮಾಡಿ, ರೆಕಗ್ನೈಜ್ ಮಾಡಿಸಿ, ರಿಜಿಸ್ಟ್ರೇಷನ್ ಮಾಡಿಸಿ, ಖಾಯಂ ಲೆಕ್ಚರರುಗಳನ್ನು ನೇಮಿಸಿ ಎಂದು ಕಳೆದ ಆರು ವರ್ಷಗಳಿಂದ ವಿದ್ಯಾರ್ಥಿಗಳು ಕೇಳಿಕೊಳ್ಳುತ್ತಿದ್ದರೂ ಏನೂ ಮಾಡಿರುವುದಿಲ್ಲ. ಅಕೆಡಮಿಕ್ ಇಯರ್ ಪ್ರಾರಂಭವಾಗಿದೆ. ಈ ವರ್ಷ ಬದಲಾಯಿಸುವುದಕ್ಕಾಗದಿದ್ದರೆ ಯಾವುದಾದರೂ ಒಂದು ಕಟ್ಟಡದಲ್ಲಿ ಸ್ಥಳಾವಕಾಶ ಮಾಡಿ ಕೆಲವು ಲೆಕ್ಚರರುಗಳನ್ನು ನೇಮಿಸಿ ಕಾಲೇಜು ನಡೆಸಬೇಕೆಂದು ಹೇಳಿದರೆ ಅದರ ಬಗ್ಗೆ ನಿಗಾ ಕೊಟ್ಟಿಲ್ಲ. ಮುಷ್ಕರ ಈಗ ಮುಂದುವರಿಯುತ್ತಿದೆ, 350 ವಿದ್ಯಾರ್ಥಿಗಳ ಒಂದು ವರ್ಷದ ಭವಿಷ್ಯ ಹಾಳಾಗುತ್ತದೆ. ಈಗಿರುವ ಪರಿಸ್ಥಿತಿಯಲ್ಲಿ ಏನು ಕಲಿಯುವುದಕ್ಕೂ ಅಲ್ಲಿ ವ್ಯವಸ್ಥೆಯಿಲ್ಲ. ಸರ್ಕಾರದವರು ಈಗ ಕೇಳಿದ ಪ್ರಶ್ನೆಗೆ ಯೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಮೈಸೂರಿನಲ್ಲಿ ಕೆಲವರು ಬೆಂಗಳೂರಿಗೆ ಬದಲಾಯಿಸುವುದಕ್ಕೆ ವಿರೋಧ ಮಾಡುತ್ತಾರೆ. ಸರ್ಕಾರ ಧೈರ್ಯವಾಗಿ ಹೆಜ್ಜೆ ಇಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಹೊಸದಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರುವ ಆಸ್ಪತ್ರೆಯಿದೆ, ಅದರಲ್ಲಿ 150 ಬೆಡ್‌ಗಳಿವೆ. ಆದ್ದರಿಂದ ಕಾಲೇಜನ್ನು ಇಲ್ಲಿಗೆ ಬದಲಾಯಿಸುವುದು ಸುಲಭ. ಮೈಸೂರಿನಲ್ಲಿ ಕಾಲೇಜಿದೆಯೆಂದು ಅಲ್ಲೇ ಒಂದು ಆಯುರ್ವೇದ ಆಸ್ಪತ್ರೆ ಕಟ್ಟುವುದು ಸಾಧ್ಯವಿಲ್ಲದ ಮಾತು.

1-30 P.M.

ಆದುದರಿಂದ ಈ ವಿಷಯದಲ್ಲಿ ಇದರ ವಾಸ್ತವಾಂಶಗಳೇನೆಂಬುದನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಈ ಬಗ್ಗೆ ಧೈರ್ಯ ತೆಗೆದುಕೊಂಡು ತಮ್ಮ ಹೆಜ್ಜೆಯನ್ನು ಮುಂದಿಡದಿದ್ದ ಪಕ್ಷಕ್ಕೆ ಸರ್ಕಾರ ಈ ವಿಚಾರದಲ್ಲಿ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಸರ್ಕಾರದವರು ಈ ಹಿಂದೆ ಕೊಟ್ಟಿರತಕ್ಕಂಥ ತಮ್ಮ ವಚನವನ್ನು ಈಗ ಉಳಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಸರ್ಕಾರದವರು ಬಹಳ ಬೇಗ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾದದ್ದು ಅತ್ಯಗತ್ಯ. ಈಗಾಗಲೇ ಈ ಕಾಲೇಜನ್ನು ಬದಲಾಯಿಸತಕ್ಕ ಉದ್ದೇಶದಿಂದಲೇ ಆ ಕಾಲೇಜ್ ಆವರಣದಲ್ಲಿ ಕೆಲವು ಹಂಗಾಮಿ ಷೆಡ್‌ಗಳನ್ನು ಸಹ ಹಾಕಲಾಗಿದೆ. ಅಷ್ಟೆಲ್ಲಾ ಆಗಿದ್ದರೂ ಆ ಕಾಲೇಜನ್ನು ಇಲ್ಲಿಗೆ ವರ್ಗಾಯಿಸತಕ್ಕ ಬಗ್ಗೆ ಇನ್ನೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಿರುವಂತೆ ಕಂಡುಬರುತ್ತಿಲ್ಲ. ಆದರೆ ಇದರಿಂದ ನಮಗೇನಾಗಬೇಕು ? ಈ ನಿಷ್ಠುರವನ್ನು ನಮ್ಮ ತಲೆಯ ಮೇಲೆ ಏಕೆ ಹಾಕಿಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಈಗ ಈ ವಿಚಾರವನ್ನು ಡಿಲೇ ಬಿಟ್ಟಿರುವಂತೆ ಕಂಡುಬರುತ್ತಿದೆ. ಅಲ್ಲಿರತಕ್ಕಂಥ ಯಾರೋ ಒಬ್ಬ ಆಫೀಸರು ಇಲ್ಲಿಯ ಸರ್ಕಾರಕ್ಕೆ "ನೀವೇನೂ ಅಷ್ಟು ಗಾಬರಿಯಾಗಬೇಕಾದ ಪ್ರಮೇಯಗಳಿಲ್ಲ. ಇಲ್ಲಿಯ ಆಡಳಿತವೆಲ್ಲ ಸರಿಯಾಗಿ ವ್ಯವಸ್ಥಿತವಾಗಿ ನಡೆಯುತ್ತಿದೆ. ನಾವೆಲ್ಲ ಸರಿಯಾಗಿ ನೋಡಿಕೊಳ್ಳುತ್ತಿದ್ದೇವೆ" ಎಂದು ವರದಿ ಕಳುಹಿಸಿಬಿಡುತ್ತಾರೆ. ಅಂತೂ ಹೀಗೆ ಗೂಢವಾಗಿ ಏನೋ ವಿಚಾರಗಳು ನಡೆಯುತ್ತಿವೆಯೆಂದು ಜನರು ಆಡಿ

ಕೊಳ್ಳುತ್ತಿದ್ದಾರೆ. ಈ ದಿವಸ ಸುಮಾರು 350 ಜನ ವಿದ್ಯಾರ್ಥಿಗಳು ಮುಷ್ಕರವನ್ನು ಮುಂದುವರಿಸುತ್ತಿದ್ದಾರೆ. ಈ ಚಿಂತಾಜನಕವಾದ ಪರಿಸ್ಥಿತಿಯನ್ನುಂಟುಮಾಡಲು ಸರ್ಕಾರದವರೇ ಕಾರಣರು. ಕೂಡಲೆ ಸರ್ಕಾರದವರು ಈ ಬಗ್ಗೆ ವಿಚಾರಣೆಯನ್ನು ಕೈಗೊಂಡು, ಮೊದಲು ಆ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರ ನೀಡುವ ಏರ್ಪಾಡುಗಳನ್ನು ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಕೆಲವು ಮಾನ್ಯ ಸದಸ್ಯರು ಮೈಸೂರಿನಲ್ಲಿರತಕ್ಕ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವ ವಿಚಾರದಲ್ಲಿ ಪ್ರಶ್ನೆಗಳನ್ನು ಸಭೆಯಲ್ಲಿ ಹಾಕಿದ್ದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ಸಮಿತಿಯನ್ನಾಗಲೀ ಅಥವಾ ಒಬ್ಬ ತಜ್ಞರನ್ನಾಗಲಿ ನೇಮಕ ಮಾಡಿ ಅವರ ಅಭಿಪ್ರಾಯವನ್ನು ಪಡೆದು ಅನಂತರ ಸರ್ಕಾರದವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಾಗಿ ಆ ದಿವಸ ಒಂದು ಭರವಸೆಯನ್ನು ಕೊಟ್ಟಿದ್ದುದು ನಿಜ. ಹೀಗೆ ಸರ್ಕಾರದವರು ಒಂದು ಭರವಸೆಯನ್ನು ನೀಡುವುದಕ್ಕೆ ಪೂರ್ವಭಾವಿಯಾಗಿ ಮೈಸೂರಿನಲ್ಲಿರತಕ್ಕ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆ ಅಥವಾ ಅದು ಅಲ್ಲಿಯೇ ಇರಬೇಕೆ ಎಂಬ ವಿಚಾರ ಚರ್ಚೆಗೆ ಬಂದಿತ್ತು. ಆಗ ಸರ್ಕಾರದವರು ಆ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದರು. ಆ ರೀತಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಸೂಚಿಸಿದಾಗ ಈ ಮಾನ್ಯ ಸಭೆಗೆ ಮೈಸೂರು ಸಿಟಿಯಿಂದ ಬಂದಿರತಕ್ಕ ಮಾನ್ಯ ಸದಸ್ಯರು ಆ ರೀತಿ ಆ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದು ಸೂಕ್ತವಾದದ್ದಲ್ಲ ಎಂದು ವಾದ ಮಾಡಿದರು. ಯಾವಾಗ ಅವರು ಹಾಗೆ ಅಭಿಪ್ರಾಯವನ್ನು ಸೂಚಿಸಿದರೋ ಆಗ ಸರ್ಕಾರದವರು ಈ ಬಗ್ಗೆ ಒಂದು ಸಮಿತಿಯನ್ನು ರಚಿಸಿಯೋ ಅಥವಾ ಒಬ್ಬ ಎಕ್ಸ್‌ಪರ್ಟ್‌ನ ಅಭಿಪ್ರಾಯವನ್ನಾಗಲಿ ತಿಳಿದೋ ಮುಂದಿನ ಕಾರ್ಯ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು. ಮೈಸೂರಿನಲ್ಲಿ ಈಗ ಆ ಆಯುರ್ವೇದ ಕಾಲೇಜಿಗೆ ಬೇಕಾದ ಸೌಕರ್ಯಗಳಿಲ್ಲ. ಸ್ಥಳ ಸಂಕೋಚ ಮತ್ತು ಸಾಕಷ್ಟು ಉಪಕರಣಗಳೂ, ಬೆಡ್ಸ್‌ಗಳೂ ಇರುವುದಿಲ್ಲ. ಈ ಕಾರಣಗಳಿಂದ ಅದನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಉದ್ದೇಶಿಸಲಾಗಿತ್ತು. ಇಷ್ಟು ಹೊರತು ಮತ್ತೆ ಯಾವ ಉದ್ದೇಶದಿಂದಲೂ ಅದನ್ನು ವರ್ಗಾಯಿಸಬೇಕೆಂದು ಇಷ್ಟಪಟ್ಟಿರಲಿಲ್ಲ. ಆದರೆ ಅಷ್ಟರೊಳಗೇ ಅಲ್ಲಿ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡಿರುತ್ತಾರೆ. ಆದರೆ ಆ ವಿದ್ಯಾರ್ಥಿಗಳು ಆ ರೀತಿ ಸ್ಟ್ರೈಕ್ ಮಾಡಲು ಅವಕಾಶವಿಲ್ಲದಂತೆ ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡಲು ಸೂಕ್ತ ಏರ್ಪಾಡುಗಳನ್ನು ಮಾಡಿದ್ದೇವೆ.

ಸರ್ಕಾರದವರು ಈ ಸಂದರ್ಭದಲ್ಲಿ ಏನು ಮಾಡುತ್ತಾರೆನ್ನುವ ಕುತೂಹಲ ಕೆಲವು ಮಾನ್ಯ ಸದಸ್ಯರಿಗಿದೆ. ಮಾನ್ಯ ಸದಸ್ಯರು ಕೆಲವರು ಹೇಳಿದಂತೆ, ಈ ಸಭೆಯಲ್ಲಿ ಅನೇಕ ಸಲ ಇದೇ ವಿಷಯದ ಮೇಲೆ ಪ್ರಶ್ನೆಗಳನ್ನು ತಂದುದನ್ನು ಗಮನದಲ್ಲಿಟ್ಟುಕೊಂಡು ನಾನೂ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರೂ ಮೈಸೂರಿಗೆ ಹೋಗಿ ಅಲ್ಲಿ ಸ್ಥಳಾವಕಾಶ ಹೇಗಿದೆ ಎಂದು ನೋಡಿಕೊಂಡು ಬಂದೆವು. ಅದರ ಮೇಲೆ ಮೈಸೂರಿನಲ್ಲಿ ಆಯುರ್ವೇದಿಕ್ ಕಾಲೇಜನ್ನು ನಡೆಸುವುದು ಅಷ್ಟು ನ್ಯಾಯವಲ್ಲವೆಂದು ಖಚಿತವಾಗಿ ತಿಳಿದುಕೊಂಡು ಬಂದಿದ್ದೇವೆ. ಹಿಂದೆ ಈ ಕಾಲೇಜು ಹೊಸದಾಗಿ ಸ್ಥಾಪನೆಯಾದಾಗ ಒಬ್ಬರು ದಾನಿಗಳು ಹದಿನೈದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಮೈಸೂರಿನಲ್ಲಿ ಆಯುರ್ವೇದ ಆಸ್ಪತ್ರೆ ಮತ್ತು ಆಯುರ್ವೇದ ಕಾಲೇಜು ಇರಬೇಕೆಂದು ಅಲ್ಲಿಯ ಮುನಿಸಿಪಲ್ ಕೌನ್ಸಿಲರುಗಳು ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಅದರ ಮೇಲೆ ಇಷ್ಟು ನಿಧಾನವಾಯಿತು. ಸರ್ಕಾರದವರು ಯಾವಾಗ ಈ ವಿಷಯದಲ್ಲಿ ಆಖೈರು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೇಳಿದರು. ಈಗ ತಜ್ಞರ ಅಭಿಪ್ರಾಯವೂ ಕೂಡ ಬಂದಿದೆ. ಶ್ರೀ ಬಿ. ಎಸ್. ಮೂರ್ತಿಯವರು ತಮ್ಮ ಅಭಿಪ್ರಾಯವನ್ನು ಜೂನ್ ತಿಂಗಳಿನಲ್ಲಿ ಕೊಟ್ಟಿದ್ದಾರೆ. ಅವರು ಮೈಸೂರು ಮತ್ತು ಬೆಂಗಳೂರು ಎರಡು ಸ್ಥಳಗಳಲ್ಲಿಯೂ ನೋಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. He is the Principal (retired) of the Ayurvedic College, Madras. ಅವರಿಗೆ ಇಲ್ಲಿಯ ಸನ್ನಿವೇಶಗಳು ಬಹಳ ಚೆನ್ನಾಗಿ ಗೊತ್ತಿದೆ. ಆಯುರ್ವೇದಿಕ್ ಕಾಲೇಜನ್ನು ಮೈಸೂರಿಂದ ಬೆಂಗಳೂರಿಗೆ ಬದಲಾಯಿಸದೆ ಹೋದರೆ ಸಾಕಾದಷ್ಟು ಕ್ಲಿನಿಕಲ್ ಫೆಸಿಲಿಟೀಸ್ ಇಲ್ಲವೆಂದೂ, ಈ ಕಾಲೇಜು ಖಂಡಿತವಾಗಿ ಬೆಂಗಳೂರಿನಲ್ಲಿರಬೇಕೆಂದೂ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಈಗಾಗಲೇ 150 bed strength ಇದೆ ; ಮತ್ತು ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಛತ್ರವನ್ನು ಕೂಡ ಅಕ್ವೈರ್ ಮಾಡಿಕೊಂಡು, ಅಲ್ಲಿ ಆಯುರ್ವೇದ ಕಾಲೇಜನ್ನು ಕಟ್ಟಬೇಕು, ಮತ್ತು ಎಲ್ಲ ಅನುಕೂಲಗಳನ್ನೂ ಮಾಡಿಕೊಡಬೇಕು ಎಂದು ಹಿಂದಿನ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಅದರ ಪ್ರಕಾರವಾಗಿ ನಡೆಸತಕ್ಕದ್ದು ಸೂಕ್ತವೆಂದು ಕೆಲವು ಪ್ರತಿನಿಧಿಗಳು ಕೂಡ ಒತ್ತಾಯ ಮಾಡುತ್ತಿದ್ದಾರೆ. ಮತ್ತು ಶ್ರೀ ಜಿ. ಎಸ್. ಮೂರ್ತಿಯವರು ಸಹ ಅವರ ಖಚಿತವಾದ ಅಭಿಪ್ರಾಯವನ್ನು ಕೊಟ್ಟು ಬೆಂಗಳೂರಿನಲ್ಲಿ ಆಯುರ್ವೇದ ಕಾಲೇಜಿಗೆ ಅವಕಾಶ ಕಲ್ಪಿಸಿಕೊಡಬೇಕು, ಈ ರೀತಿಯಾಗಿ ನಡೆದರೆ ಆ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಬೇರೆ ಪ್ರಾಂತ್ಯಗಳಲ್ಲಿ ಒಂದು recognition ಸಿಕ್ಕುತ್ತದೆ, ಇಲ್ಲದೆ ಹೋದರೆ ಅವರು ಮುಂದೆ ಪ್ರಾಕ್ಟೀಸ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಈಗ ಸರ್ಕಾರದವರು ಆಖೈರು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಶೀಘ್ರದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಸರ್ಕಾರದವರ ಅಭಿಪ್ರಾಯವೂ ಕೂಡ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಇದೆ. ಆದುದರಿಂದ ಈ ವಿಷಯದಲ್ಲಿ ಜಾಗ್ರತೆಯಾಗಿ ತೀರ್ಮಾನವನ್ನು ತೆಗೆದುಕೊಂಡು, ಮಾನ್ಯ ಸದಸ್ಯರ ಅಭಿಲಾಷೆ ಏನಿದೆಯೋ ಅದು ಶೀಘ್ರವಾಗಿ ನೆರವೇರುವಂತೆ ಮಾಡಿಕೊಡುವ ಏರ್ಪಾಡನ್ನು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೀರಿ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್.—ರಿಜಿಸ್ಟ್ರೇಷನ್ ವಿಷಯದಲ್ಲಿ ಏನು ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಇದರ ಬಗ್ಗೆ ಒಂದು ಮಸೂದೆ ಇದೆ. ಅದನ್ನು ಸಭೆಯ ಮುಂದೆ ಮಂಡಿಸಬೇಕಾಗಿದೆ. ಕಾಲಾವಕಾಶವಿಲ್ಲದೆ ಇಟ್ಟಿಲ್ಲ. ಅದನ್ನು ಜಾಗ್ರತೆಯಾಗಿ ತಮ್ಮ ಮುಂದೆ ಇಟ್ಟು ಅದಕ್ಕೂ ಸಹ ತಮ್ಮ ಒಪ್ಪಿಗೆಯನ್ನು ಕೇಳುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರಜ ಮುಗಿಯುವುದರೊಳಗಾಗಿ ತೀರ್ಮಾನ ತೆಗೆದುಕೊಂಡರೆ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ,

Mr. SPEAKER,—The House will now adjourn,

Business of the House.

Sri S. SRINIVASA IYENGAR.—Since we are meeting on the 16th, and there is a period of 15 days intervening, I want to know whether we will be permitted to send some questions, Many things might happen during this interval and we may want to elicit information from Government.

Mr. SPEAKER.—You can put short notice questions.

Sri M. PALANIYAPPAN.—Are we going to take up the other short notice questions on the 16th ?

Mr. SPEAKER.—The remaining portion of the Agenda will be taken up on the 16th and onwards.

Sri K. PRABHAKAR.—We have not received answers to some of the questions and they have not been taken up. Will they be taken up, Sir ?

Mr, SPEAKER.—We have received replies to almost all the questions. They will be taken up from 16th.

The House is adjourned to Tuesday the 16th October 1956 to meet at 12 NOON.

The House adjourned at Forty Minutes past One of the Clock to meet at Twelve of the Clock on Tuesday the 16th October 1956.

WD 1163—GPB—550—6-12-56

MYSORE LEGISLATIVE ASSEMBLY

FORTY-THIRD DAY.

Tuesday, 16th October 1956.

The House met in the Assembly Hall, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Gold Mining Industry (Nationalisation)

Q.—664. SRI H. C. LINGA REDDY (Malur).—

Will the Government be pleased to state :—

(*a*) the steps taken by the State Government to put into execution the unanimous resolution of this Assembly to nationalise the "Gold Mining Industry" of Kolar Gold Fields since the time of the last Session of the State Assembly ;

(*b*) the progress so far made in this behalf?

A.—SRI H. SIDDAVEERAPPA (Minister for Home and Finance).—

(*a*) and (*b*) The Bill to give effect to the mandate of the Legislature is being placed before the Legislature at its current session.

SRI H. C. LINGA REDDY.—In connection with the nationalisation of the Gold Mining Industry, is it true Sir, that a guarantee of about five years has been given by this Government at the instance of the Central Government to the European services as against Indian services in the K.G.F. Mines ?

SRI H. SIDDAVEERAPPA.—Any-how, when the Bill comes up for discussion today, if the Hon'ble Member agrees, he may raise these points and I will give a reply.

SRI H. C. LINGA REDDY.—Apart from the discussion on the Bill, I want to know whether a direction has been sent by the Central Government to the State Government suggesting a guarantee of five years to Europeans discriminating against the Indian services in the mines ?

SRI H. SIDDAVEERAPPA—No. directive has been given.

SRI H. C. LINGA REDDY.—Has a suggestion at least been made by the Central Government to the State Government ?

SRI H. SIDDAVEERAPPA.—It is a matter for the State Government to examine whether it is advantageous to retain the services of Europeons in the interest of working the mines at least in the transition period.

SRI H. C. LINGA REDDY.—The question was this : I wanted to know whether a suggestion had been made by the Central Government to the State Government and whether a guarantee of five years has to be given to the European services in the K. G. F. Mines ?

SRI H. SIDDAVEERAPPA.—So far, Sir, we are not parties to any such guarantee being given.

SRI H. C. LINGA REDDY.—I request the Chair to direct the Hon'ble Minister to answer my point.

MR. SPEAKER.—The point is whether any suggestion has been received by the Mysore Government from the Central Government.

SRI H. SIDDAVEERAPPA.—During the time of the discussion it was generally discussed also whether it would be advantageous in the interests of the mines to retain the services of the Europeans for some time in the transition period. That was only in the formative stages.

Sri H. C. LINGA REDDY.—Has that suggestion been dropped for the present ?

Sri H. SIDDAVEERAPPA.—It is under the consideration of the Government.

Sri H. C. LINGA REDDY.—Is it true Sir, that the Central Government has suggested that John Taylor & Company has to be taken as the Managing Director for the running of the Gold Mines ?

Sri H. SIDDAVEERAPPA.—These are matters on which no decision has been taken and I am not in a position to disclose anything which is purely in s stage of correspondence.

Sri H. C. LINGA REDDY.—I request the Hon'ble Chair to direct the Government to give proper reply to my questions.

Mr. SPEAKER.—The Hon'ble Minister says that these are some of the things that cannot be revealed. The correspondence that passes between the Central Government and the State Government may be confidential.

Sri A. G. RAMACHANDRA RAO.—Sir, we can only disclose points on which a decision has been taken. With regard to the matters in correspondence, it would be premature, and it would not be in public interest also.

Sri H. C. LINGA REDDY.—With regard to the fixation of compensation, what is the basis on which a sum of Rs. 164 lakhs has been fixed ?

Mr. SPEAKER.—That could be raised during the discussion on the Bill. The whole story has been narrated. The question-hour is not meant for that.

Sri H. C. LINGA REDDY.—May I know the reasons for fixing by the State Government the compensation at 89 lakhs in the first instance and their stand in raising it to 164 lakhs, Sir ?

Sri H. SIDDAVEERAPPA.—I have already explained in very great detail the reasons why compensation was fixed at 164 lakhs. I would invite the attention of the Hon'ble Member to the points I submitted for the conideration of this House at the stage of moving the consideration motion; relating to that Bill.

Sri H. C. LINGA REDDY.—Is it true that when the amount of 119 lakhs was fixed by the India Government in consultation with State Government, The share value for a period of ten years was taken into consideration ?

Sri H. SIDDAVEERAPPA.—At no stage was 119 lakhs fixed by the Central Government. That was purely a matter for the Government of Mysore to fix it. If the House so desires, I have no objection to place all these details during the discussion of the Bill.

N.G.Os. (Pay Scales)

Q.—666. Sri G. PUTTASWAMY (Chikmagalur--Mudigere--Scheduled Castes).—

Will the Government be pleased to state :—

(*a*) the existing scales of pay of the non-gazetted officers in the States of Bombay, Madras, Hyderabad and Coorg Parts of whose territories are coming over to the New Mysore State;

(*b*) what will be the position regarding the scales of pay of N.G.O.'s of the existing Mysore State after the formation of Vishala Mysore ;

(*c*) the action taken by them to revise the scales of pay of the N.G.O.'s of present Mysore State to the highest of the scales of pay prevailing in the States referred to in (*a*) above ;

(*d*) the extra cost that would be incurred in case the scales of pay are enhanced to the highest of the aforesaid scales of pay ;

(*e*) the action taken on the report of the Pay Structure Committee constituted by them recently?

A.—Sri H. SIDDAVEERAPPA (Minister for Home and Finance).—

(*a*) Reference is invited to statement appended which shows comparative scales of some of the posts. Complete information is not readily available.

(*b*) and (*c*) This is a matter for decision after 1st November 1956.

(*d*) About Rs. 5 crores.

(*e*) The question of giving interim relief is under consideration.

Comparative statement of the existing grades of certain Non-Gazetted posts in the State with corresponding posts in other States, with revised grades proposed by the Committee.

Designation	Mysore Existing	Mysore Revision Proposed	Madras	Hyderabad	Bombay
Revenue Department.— Revenue Inspectors	60–5–90–6–150	75–5–90–6–150–10–180	80–3–95–5–100	Not available ...	100–8–140 Circle Officer
	50–3–80–4–100	55–3–70–4–110–5–120	45–3–60–2–90	Do ...	46–3–85–4–125–5–130 (Cir. Inspr.)
Land Records.— Supervisors ...	110–8–150	120–6–150–10–220	150–10–200	Technical Grades Selection „	100–8–140–10–170
Surveyors ...	50–3–80–4–100	55–3–70–4–110–5–120	100–5–150	300–12½–375 Supervisory I Grade 140–4½–176–6½–215–8½–300	70–3–85–4–125–5–130
Forest.— Forest Rangers ...	70–5–110–6–170	Grade I 200–10–250 and 80–5–100–8–140–10–200	100–10–150–20–250	...	200–10–250 and 80–5–100–8–140–10–200
Foresters ...	35–2–55–3–85	50–3–80–4–120	50–3–65–2–85	II Gr. 105–3½–140	85–4–105 and 46–3–85
Public Works Dept.— Supervisors ...	116–34/2–150–10–200	150–10–300	100–5–150–10–250	...	80–5–100–8–140–16–220–10–270

(SRI H. SIDDAVEERAPPA.)

STATEMENT—(*contd.*).

Designation	Mysore		Madras	Hyderabad	Bombay
	Existing	Revision Proposed			
Overseers ...	100–10–150	120–10–200	...	...	80–5–100–10–140–10–220–10–270
Draftsman ...	150–10–200 100–10–150 80–5–125 40–2½–50–5–100	150–10–250 120–10–200 (Senior) 70–5–90–6–150 (Junior)	200–10–250 Spl. 150–5–180 Gr. I 120–5–150 Gr. II. 70–2–90–3–120 Gr. III.	...	150–10–200 180–10–270 100–4–120–5–170 110–10–180
Police Department.—					
Inspectors ...	200 175 150	250–10–300 and 150–6–180–10–250	175–10–275	170–8½–255–9–300	400 and 375 (Selection Grade) 250–10–350
Sub-Inspectors ...	70–4–90–5–120–6–150	75–5–90–6–150–10–180	80–3–95–4–115–2–135–3–150	85–3½–120–4–140–4½–149–154	120–5–190–10–210
Constables ...	22–½–32	30–½–40	30–½–40	30–½–39	35–½–40
Medical.—					
Assistant Surgeons	75–5–150–10–200	90–5–100–8–180–10–220.	...	Not available	120–6–180–8–260–10–300
Nurses ...	75–5/2–100 45–5/2–70	90–6–150 50–3–80–4–120	85–5–150 50–3–65–2–75	...	80–5–100 ...
Health Department.—					
Assistant Medical Officer.	100–5–175–10–225	100–5–150–10–250	160–20/2–260		120–6–180–8–260–10–300
Health Inspectors ...	80–4–120 (Senior) 45–3–90 (Junior)	100–5–150 50–3–80–4–120	60–3–90–4–130 40–1–60		92–4–120–EB/–5–160 76–5/2–100.

Agricultural Inspector.	100-8-140-10-200 (Graduates). 55-5-100-10-150 (Non-graduates).	100-5-140-10-220 70-5-90-6-150	100-5-140-10-250		210-10-300 I Grade 80-5-100-8-140-10-200 (Grade II). 100-8-140-10-170 (I Grade) 55-3-85-4-125-5-140 (II Grade).
Veterinary Inspector	100-8-140-10-200	120-6-150-10-250	120-5-200-10-250		80-5-100-8-140-10-200 and 210-10-300 (Selection Grade).
Inspectors. Department of Co-operation.	60-5-90-6-120-10-200.	80-5-100-8-140-10-200.	150-5-200 Sub-Registrar. 90-4-110 5-120 (Senior Inspector) Supervisors— Grade I 150-10-250 Grade II 100-5-150		District Co-operation Officers— Grade I—200-10-300 Grade II—100-8-140-10-150
Electrical.— Operators ...	150-10-200 (Senior). 100-10-150	150-10-250 100-10-200			80-5-100-8-140-10-220-10-270 (Junior Engineer).
Excise Department.— Excise Inspectors ...	175 150 125 100	180-10-250 (Senior). 100-5-150-6-180 (Junior).	I. 200 II. 175 III. 150		220-10-300 150-7-185-8-225 ...
Assistant Inspectors	60 50 40	50-3-80-4-120	I. 100 II. 90 III. 80 VI. 70		... 80-4-120-5-150
Registration.— Registrars ...	170-10-250 I Gr. 60-5-90-6-150 II Grade.	180-10-300 I Gr. 75-5-90-6-150-10-180 II Gr.	160-5-200 I Gr. 100-5-150 II Gr.		Sub-Registrar. 230-10-320 I Gr. 160-10-220 II Gr.

(SRI H. SIDDAVEERAPPA.)

STATEMENT—(*contd.*).

Designation	Mysore		Madras	Hyderabad	Bombay
	Existing	Revision Proposed			
Education.—					
Graduate Teachers ...	130–10–200; 60–5–90–6–150	150–10–250 75–5–90–6–150–10–180 (B.T.'s and Ed. S. to go up to Rs. 200.)	165–5–205–10–245 85–5–125–10–175	Second Grade 130–4–154–6–190	75–5–130–6–160–8–200.
Pandits and Munshis	120–10–200 60–5–100–6–130	150–10–250 75–5–90–6–150–10–180	85–5–125–10–175 65–5–130	...	60–4–120–5–170.
Middle School Teachers.	40–2–50–3–80 (Middle School)	50–3–80–4–120 (S.S.L.C.)	45–3–60–2–90	III Gr. 54–2–56–2½–81–3½–130	65–2½–90 (Selection Grade).
Primary School Teachers.	30–1½–45–2–55 and 25–1–30–1–45	40–2–50–3–80 (Non-S.S.L.C. Trained) 40–1–50–2-60 (Non-S.S.L.C. un-trained)	30–1–50	42–2–54	40–1–50–1½–65 and 35–1–40

Comparative Statement showing Dearness Allowance of various States.

Mysore

NON-GAZETTED	Bangalore	Other places.
	Rs.	Rs.
Rs. 25 and below	20	17
Above Rs. 25 and not exceeding Rs. 80.	23	20
Above Rs. 80 and not exceeding Rs. 100.	27/8	23
Above Rs. 100 and not exceeding Rs. 150.	35	27/8
Above Rs. 150 and not exceeding Rs. 250.	42/8	35
Above Rs. 250 and not exceeding Rs. 300.	45	40

Hyderabad

Up to 43	Rs. 15—7—0 P.M. Rs. 18 for those drawing D. S. Rs. 21 at present.
Above Rs. 43 up to Rs. 86.	Rs. 24
Above Rs. 86 up to Rs. 172.	Rs. 30
Above Rs. 172.	17½ per cent of pay.

Bombay

	Rs.
Upto Rs. 50	35
From Rs. 51 to Rs. 100 Rs.	45
Do 101 do 150 do	50
Do 151 do 200 do	55
Do 201 do 300 do	60
Do 301 do 500 do	70
Do 501 do 750 do	85
Do 751 do 1,000 do	100
Do 1,001 do 1,100	...
The amount by which the pay falls short of Rs 1,100.	
Wholetime un-married Gazetted Officers—	
Up to Rs. 1,000: 10 per cent of the pay subject to minimum of Rs. 40 and maximum of Rs. 75.	
From 1,001 to Rs. 1,075, the amount by which the pay falls short of Rs. 1,075.	

Madras

	Rs.
Pay not exceeding Rs. 20	18
Rs 20 and below Rs. 40 ...	19
On a pay of Rs. 40 ...	21
Above Rs. 40 and below Rs. 60	22
Exceeding Rs. 60 below Rs. 100.	24
Exceeding Rs. 100 but not exceeding Rs. 200	17½% of pay *plus* Rs. 8.
Exceeding Rs. 200 but not exceeding Rs. 300.	17½% of pay *plus* Rs. 6.
Exceeding Rs. 300 but not exceeding Rs. 400.	17½% of pay.
Exceeding Rs. 400 but not exceeding Rs. 500.	70.
Rs. 500— 750 ...	85
Rs. 750—1,000 ...	100
Exceeding Rs. 1,000 but not exceeding 1,100; 6⅔ per cent of the pay or the amount by which the pay falls short of Rs. 1,100 up to 31st March 1954.	
3⅓ per cent of the pay or the amount by which the pay falls short of Rs. 1,100 from 1st April 1954 to 31st March 1955.	

ಶ್ರೀ ಜಿ. ಪುಟ್ಟಸ್ವಾಮಿ.—'ಎ' ಭಾಗದ ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರುವ ಪರಿಶಿಷ್ಟದಲ್ಲಿ 'proposed scale' ಎಂದು ನಮೂದು ಮಾಡಿದ್ದೀರಿ. ಇದನ್ನು ನಿಗದಿ ಮಾಡುವುದರಲ್ಲಿ ಮದರಾಸು, ಬೊಂಬಾಯಿ ಮತ್ತು ಕೇಂದ್ರ ಸ್ಕೇಲುಗಳ ಸರಾಸರಿಯನ್ನು ತೆಗೆದು ಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಸರಾಸರಿ ತೆಗೆದು ಕೊಂಡಿಲ್ಲ. ನಮ್ಮ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡರೆ ಯಾವ ಸ್ಕೇಲುಗಳು ನಮ್ಮ N.G.O.ಗಳಿಗೆ beneficial ಆಗಬಹುದೆಂಬುದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಿದ್ದಾರೆ. ಎಲ್ಲವನ್ನೂ ಯೋಚನೆಮಾಡಿ, ಎಲ್ಲೆಲ್ಲಿ ಎಷ್ಟೆಷ್ಟಿದೆ, ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟು ಕೊಡಬಹುದು ಎಂಬುದನ್ನೆಲ್ಲ ಯೋಚನೆ ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಯೋಚನೆ ಮಾಡಿದ್ದರೆ ಕೇಂದ್ರದ ಸ್ಕೇಲುಗಳಿಗಿಂತ proposed scales ಕಡಮೆಯಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಕಡಮೆಯಾಗುತ್ತವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಕಡಮೆಯಾದ ಮೇಲೆ ಇವರ ಸಂಬಳಗಳನ್ನು ಜಾಸ್ತಿಮಾಡಬೇಕು, ಮತ್ತು ಕೇಂದ್ರದ ಸ್ಕೇಲುಗಳಿಗೆ ಏರಿಸಬೇಕು ಎಂದು ತಾವು ಯೋಚನೆ ಮಾಡಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಯೋಚನೆ ಮಾಡಿದೆವು.

ಅಧ್ಯಕ್ಷರು.—ನೀವೆಲ್ಲ ಹಣವನ್ನೊದಗಿಸುವುದಾದರೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೋದ ಸಲ ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—1 ಆಗಸ್ಟ್ 1956 ರಿಂದ ಇಂಟೆರಿಂ ರಿಲೀಫ್ ಕೊಟ್ಟಿದ್ದೀರಿ. ಪೇ ಕಮಿಟಿಯವರ ವರದಿ ಬಂದದ್ದು ಯಾವಾಗ?

ಶ್ರೀ ಎಚ್. ಸಿದ್ದವೀರಪ್ಪ.—1956ನೆಯ ಇಸವಿ ಜನವರಿ ತಿಂಗಳಿನಲ್ಲಿ ಎಂದು ಜ್ಞಾಪಕ.

ಶ್ರೀ ಜಿ. ಪುಟ್ಟಸ್ವಾಮಿ.—ಜನವರಿ ತಿಂಗಳಿನಿಂದಲೇ ಇಂಟೆರಿಂ ರಿಲೀಫ್ ಕೊಡಲು ಆಲೋಚನೆ ಮಾಡಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲವನ್ನೂ ಆಲೋಚನೆ ಮಾಡಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಮಾನ್ಯ ವಿದ್ಯಾ ಮಂತ್ರಿಗಳು, ಈಗಿರತಕ್ಕ ಸ್ಕೇಲನ್ನು ಬೊಂಬಾಯಿ ಮಟ್ಟದ ಸ್ಕೇಲುಗಳಿಗೆ ಜಾಸ್ತಿ ಮಾಡುವುದಕ್ಕಾಗುವುದಿಲ್ಲವೆಂದು ಮೈಸೂರಿನಲ್ಲಿ ಹೇಳಿರುವುದು ನಿಜವಲ್ಲವೆ?

Sri H. SIDDAVEERAPPA.—It is a matter of opinion. Really Bombay scales are higher ಎಂದು ಅವರು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದಮೇಲೆ ಬೊಂಬಾಯಿ ಸ್ಕೇಲಗಿಂತ ಮದರಾಸ್ ಅಥವಾ ಸೆಂಟ್ರಲ್ ಸ್ಕೇಲುಗಳನ್ನು ಕೊಡುತ್ತೀರಾ?

Sri H. SIDDAVEERAPPA.—This is a question where we have given purely interim relief. After the New State is formed, perhaps this will be one of the ri t decisions they will have to ke in order to see that the service conditions are rationalised and brought into uniformity as far as possible.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಶೇಕಡ ಹತ್ತರಷ್ಟು interim relief ಕೊಟ್ಟಿದ್ದೀರಿ. ನೂರು ರೂಪಾಯಿಗಳಿಗಿಂತ ಕಡಮೆ ಸಂಬಳ ಬರುವ ಬಡನೌಕರರಿಗೆ ಬಹಳ ಕಡಮೆ ಬರುವುದರಿಂದ ಅವರಿಗೆ ಅತೃಪ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಕಡಮೆ ಸಂಬಳ ಬರತಕ್ಕ ಬಡನೌಕರರಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ಅವರ cases ನಲ್ಲಿ ಪರ್ಸೆಂಟೇಜ್ ಬಹಳ ಜಾಸ್ತಿಯಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ನಿಗದಿ ಮಾಡಿರುವ ಪರ್ಸೆಂಟೇಜಿನಿಂದ 50 ರೂಪಾಯಿಗಳ ಸಂಬಳ ಬರುವ II ಡಿವಿಜನ್ ಗುಮಾಸ್ತೆಗೆ ಐದು ರೂಪಾಯಿಗಳು ಮಾತ್ರ ಸಿಕ್ಕಿ 100 ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ಬರುವವರಿಗೆ ಹತ್ತು ರೂಪಾಯಿಗಳು ಸಿಕ್ಕುವುದರಿಂದ ಕೆಲವರಿಗೆ ಅತೃಪ್ತಿಯಾಗುವುದಿಲ್ಲವೆ?

Mr. SPEAKER.—The Hon'ble Member has asked too many but not useful questions.

Harijan colonies in Bangalore North Taluk (Land acquisition cases pending).

Q.—731. Sri R. MUNISWAMIAH (Bangalore North–Scheduled Castes).—

Will the Government be pleased to state.—

(*a*) the number of cases in connection with acquisition of lands for formation of Harijan colonies pending disposal in Bangalore North taluk, Bangalore Sub-Division and Bangalore Deputy Commissioner's offices;

(*b*) for how long each case is pending in each office?

A.—Sri H. M. CHANNABASAPPA (Minister for Revenue and Agriculture).—

(*a*) The number of cases pending are noted below.—

3
5
2

(*b*) *Vide* statements appended.

Acquisition cases of Harijan Colonies pending in Bangalore North Taluk Office.

	Name of village		*Date from which pending*
1.	Attiguppe hamlet of Jodikempapura	...	2nd August 1956
2.	Chokkasandra	...	26th June 1956
3.	Kayamgutta Poornapura	...	21st July 1956

Acquisition cases of Harijan Colonies pending in Sub-Division Officer's Office, Bangalore.

Sl. No.	*Name of village*			*Date from which pending*
1.	Matadahalli	...	...	17th April 1956
2.	Srigandada Kaval	...	...	10th July 1956
3.	Jodi Jeevanahalli	...	...	17th July 1956
4.	Nagarabhavi	...	..	24th January 1956
5.	Nagavara	...	...	13th September 1956

Acquisition cases of Harijan Colonies pending in Deputy Commissioner's Office, Bangalore.

Sl. No.	*Name of village*			*Date from which pending*
1.	Veerasagara	...	...	19th September 1956
2.	Kaval Byrasandra	...	...	17th September 1956

ಶ್ರೀ ಆರ್. ಮುನಿಸ್ವಾಮಯ್ಯ.—ಉತ್ತರದಲ್ಲಿ ಎಷ್ಟು ದಿನಗಳಿಂದ ಉಳಿದಿದೆಯೆಂದು ಕೇಳಿದ್ದಕ್ಕೆ 1956ನೆಯ ಇಸವಿಯಿಂದ ಎಂದು ತೋರಿಸಿದ್ದೀರಿ. ಅದು ಸರಿಯಲ್ಲವೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಆಫೀಸಿನವರು ಒದಗಿಸಿರುವ ಉತ್ತರ ಸರಿಯಲ್ಲವೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಆರ್. ಮುನಿಸ್ವಾಮಯ್ಯ.—1954ರಿಂದ ಉಳಿದಿದೆಯೆಂಬುದನ್ನು ವರದಿ ತರಿಸಿ ಪರಿಶೀಲಿಸುತ್ತೀರಾ? ಆಫೀಸಿನಲ್ಲಿ ಸರಿಯಾದ ಉತ್ತರವನ್ನೊದಗಿಸಿಲ್ಲವೆಂಬ ಅಭಿಪ್ರಾಯವಿದೆ. ತಪ್ಪಾದ ಉತ್ತರ ಒದಗಿಸಿದ್ದರೆ ಸಂಬಂಧಪಟ್ಟವರನ್ನು ಶಿಕ್ಷೆಮಾಡಲು ಸಾಧ್ಯವಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು. ಹಾಗಾಗಿದ್ದರೆ ನೋಡೋಣ.

Kalkatte Halla anicut, Gundlupet Taluk.

Q.—765. Sri SIDDIAH *alias* KUNNIAH (Gundlupet-Heggadadevanakote—Scheduled Castes).—

Will the Government be pleased to state :—

(*a*) at what stage the work of Kalkatte Halla anicut of Gundlupet Taluk stands ;

(*b*) whether an estimate has been prepared in respect of the abovesaid work ; if so, the estimated amount ;

(*c*) when the estimate was prepared ;

(*d*) the number of acres estimated to come under irrigation by undertaking the said work ;

(*e*) whether the estimate is sanctioned ; if so, when ;

(*f*) if the estimate is not sanctioned, the reasons therefor ?

A.—Sri A. G. RAMACHANDRA RAO (Minister for Law and Education):—

(*a*) The project is recommended to be dropped on the ground that it affects the lower tank—Vijayapura Amanikere.

(*b*) Yes. Rs. 1,45,000.

(*c*) During 1954-55.

(*d*) 300 acres.

(*e*) No.

(*f*) *Vide* reply to (*a*) above.

ಶ್ರೀ ಸಿದ್ಧಯ್ಯ.—ಗುಂಡ್ಲುಪೇಟೆ ತಾಲ್ಲೂಕು ಕಲ್ಕಟ್ಟೆಹಳ್ಳ ಅಣೆಕಟ್ಟಿನ ಕಾಮಗಾರಿಗಳು ಯಾವ ಹಂತದಲ್ಲಿವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇಂಜಿನಿಯರಿಂಗ್ ಇಲಾಖೆಯವರು ಇದನ್ನು ಕೈಗೊಳ್ಳುವುದು ಸೂಕ್ತವಲ್ಲವೆಂದು ಬರೆದಿದ್ದಾರೆ. ಅದು ಪರಿಶೀಲನೆಯಲ್ಲಿದೆ.

ಶ್ರೀ ಸಿದ್ಧಯ್ಯ.—ಏಕೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಮಾಡುವ ಪಕ್ಷದಲ್ಲಿ ವಿಜಯಪುರದ ಅಮಾನಿಕೆರೆಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಕೈಕೊಳ್ಳುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ.

Depressed Class People (Land Grants in Pavagada Taluk and three Hoblies of Madhugiri Taluk.

Q.—825. Sri C. T. HANUMANTHAIYA (Pavagada—Scheduled Castes).—

Will the Government be pleased to state:—

(*a*) the number of darkhast applications received requesting for grant of lands to landless depressed class (backward class) people of Pavagada and the three hoblies, *viz.*, Midigesi, Ittakadibbanahalli, Kodigenahalli of Madhugiri taluk from January 1954 to August 1956;

(*b*) the number of persons whose applications were sanctioned and the number of applications in respect of which records are pending final disposal;

(*c*) out of this, the number of applications received requesting for the grant of lands from the reserve date groves;

(*d*) the number of applications received requesting for lands from forest, hullubanni, kharab and excess gomal (hobliwise and villagewise information to be given) ?

A.—Sri H. M. CHANNABASAPPA (Minister for Revenue and Agriculture).—

(*a*) and (*b*)—

Number of applications received	...	427
Number sanctioned	...	130
Number pending	...	89
Number rejected	...	208

(*c*) 36

(*d*) *Vide* statement appended.

MADHUGIRI TALUK.

KASABA HOBLI

	Names of Villages		Forest	Hulbanni Kharab	Excess Gomal
1	Seegalahalli	...	... ...	1	2
2	Maruvekere	...	... ...	...	1
3	Chinakavajra	...	... ...	...	3
4	Kuramkote	...	... ...	...	1
5	Sogehalli	...	... ...	...	2
6	Kambadahalli	...	... ...	...	1
7	Maraballi	...	... ...	...	1
8	Settihalli	...	... ...	...	1
	Total		... ...	1	12

(Column heading over Forest, Hulbanni Kharab, Excess Gomal: *No. of applications*)

DODDERI HOBLI

	Names of Villages		Forest	Hulbanni Kharab	Excess Gomal
1	Appanahalli	...	... ...	1	...
2	Badavanahalli	...	... ...	...	4
	Total		... ...	1	4

*Asterisk indicates that the remarks or speeches have not been revised by the Member concerned.

	Name of Village	No. of applications: Forest	Hulbanni Kharab	Excess Gomal
	MIDIGESI HOBLI			
1	Galihalli	...	...	1
	Total	...	...	1
	ITTIKADIBBANAHALLI HOBLI			
1	Doddadalavatta	...	...	1
2	Chikkadalawatta	...	...	1
3	Thippapura	...	...	1
	Total	...	...	3
	KODIGENAHALLI HOBLI			
1	Suddekunte	...	...	1
2	Polenahalli	...	...	1
3	Singadahalli	...	...	1
4	Maidanahalli	...	...	1
	Total	...	...	4

PAVAGADA TALUK

	Name of Village	Forest	Hulbanni Kharab	Excess Gomal
	KASABA HOBLI			
1	Pavagada	...	5	...
2	Veeralagondi	...	7	...
3	Gummaghatta	...	3	...
4	Chikkanaikanahalli	...	2	...
5	Byadanur	...	1	...
6	Gundlahalli	...	1	...
7	Sunkarlakunte	...	...	1
8	Kodamadagu	...	...	1
9	Naliganahalli	...	1	...
	Total	...	20	2
	NIDAGAL HOBLI			
1	Kottur	...	2	...
2	Kotagudda	...	2	...
3	T. N. Betta	...	2	...
4	Marur	...	1	...
5	Devadabetta	...	1	...
6	Kodigenahalli	...	1	...
7	Bommanagathihalli	...	1	...
8	Nyayadagunte	...	1	...
9	Uddaghatta	...	...	2
10	Sailapura	...	...	1
11	Channakeshavapura	...	...	1
	Total	...	11	4

(SRI H. M. CHANNABASAPPA.)

HOSAKOTE HOBLI

	Name of Village		No. of applications	
		Forest	Hulbanni Kharab	Excess Gomal
1	Hosakote	...	1	...
2	Karikalbande	...	1	1
3	Maridasanahalli	...	1	...
4	Nagalapura	...	3	...
5	Vadanakal	3	...	...
6	Singareddyhalli	...	1	...
7	Dalavaihalli	...	3	...
8	Pothaganahalli	...	1	...
9	Soolanaikanahalli	...	1	...
10	Hanumanabetta	...	1	...
11	Ponnasamudra	...	1	
12	Obalapura	...	...	1
	Total ...	3	14	2

ಶ್ರೀ ಸಿ. ಟಿ. ಹನುಮಂತಯ್ಯ.—ಈಚಲು ವನದಿಂದ ಎಷ್ಟು ಎಕರೆ ಜಮೀನು ರಿಲೀಸ್ ಆಗಿದೆ, ಸ್ವಾಮಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಅರ್ಜಿ ಎಷ್ಟು ಬಂದಿವೆಯೆಂದು ಕೇಳಿದ್ದೀರಿ. ಆ ಸಮಾಚಾರ ನನ್ನ ಮುಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಜಮೀನನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಈಚಲು ವನ ರಿಲೀಸ್ ಮಾಡಬೇಕೆಂಬುದರ ಮೇಲೆ ಅದನ್ನು ಇತ್ಯರ್ಥ ಮಾಡಬೇಕಾಗುತ್ತದೆ. ರಿಲೀಸ್ ಮಾಡಲು ಯಾವುದು ಸಾಧ್ಯವೋ ಅದನ್ನು ಮಾಡಬಹುದು, ಸಾಧ್ಯವಿಲ್ಲದಿರುವುದನ್ನು ರಿಲೀಸ್ ಮಾಡಲಾಗುವುದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಈಚಲು ಮರಗಳು ಅಲ್ಲಿನ ವನಗಳಲ್ಲಿ ಹೆಚ್ಚಾಗಿಲ್ಲ. ಹಾಗಿರುವಾಗ ಅಲ್ಲಿರುವ ಜಮೀನನ್ನೇಕೆ ಬಿಡುಗಡೆ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳುವ ಈಚಲುವನ ಯಾವುದೆಂಬುದು ಅರ್ಥವಾಗುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಈಚಲು ವನಗಳನ್ನು ಎಷ್ಟು ವರ್ಷ ರಿಸರ್ವ್ ಮಾಡಬೇಕೆಂದಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿಯವರೆಗೆ ಆವಶ್ಯಕತೆಯಿದೆಯೋ ಅಲ್ಲಿಯವರೆಗೆ.

ಶ್ರೀ ಡಿ. ಆರ್. ಕರಿಗೌಡ.—ಅದನ್ನು ರಿಸರ್ವ್‌ನಲ್ಲಿಡುವುದು ಹೆಂಡ ಕುಡಿಸುವುದಕ್ಕೆ ಉತ್ತೇಜನಕೊಡಬೇಕೆಂಬ ಉದ್ದೇಶದಿಂದಲೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಯಾವಾಗ ಎಷ್ಟೆಷ್ಟನ್ನು ಈಚಲು ವನದಿಂದ ಬಿಡುಗಡೆ ಮಾಡಬೇಕೆಂಬ ಬಗ್ಗೆ ಸರ್ಕಾರದವರು ತೀರ್ಮಾನ ಕೈಕೊಳ್ಳುತ್ತಾರೆ.

ಶ್ರೀ ಡಿ. ಆರ್. ಕರೀಗೌಡ.—ಈಚಲು ವನಗಳನ್ನು ರಿಸರ್ವ್ ಮಾಡುವುದು, ಮದ್ಯಪಾನಕ್ಕೆ ಉತ್ತೇಜನ ಕೊಡುವುದಕ್ಕಲ್ಲವೆ ? ಮದ್ಯ ಇಳಿಸುವುದಕ್ಕಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರಿಂದ ಇನ್ನೂ ಅನೇಕ ಪ್ರಯೋಜನವಿದೆ.

ಶ್ರೀ ಡಿ. ಆರ್. ಕರಿಗೌಡ.—ಏನು ಪ್ರಯೋಜನವೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಚಲು ಗರಿ ಮುಂತಾದುವುಗಳಿಂದೇನು ಪ್ರಯೋಜನವಾಗುತ್ತದೆಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಡಿ. ಆರ್. ಕರಿಗೌಡ.—ಮದ್ಯಪಾನ ನಿರೋಧವನ್ನು ಇಂಡಿಯಾ ದೇಶದಲ್ಲೆಲ್ಲಾ ಜಾರಿಗೆ ತರಬೇಕು ಎಂದು ಹೇಳುತ್ತಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಉತ್ಕೃಷ್ಟವಾದ ಜಮೀನು ಈಚಲು ವನದಲ್ಲಿರುವುದರಿಂದ ಅದನ್ನು ಬಿಡುಗಡೆ ಮಾಡಿಕೊಟ್ಟರೆ ರೈತರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲು ಉತ್ತೇಜನ ಕೊಟ್ಟಂತಾಗುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದನ್ನು ಬಿಡುಗಡೆ ಮಾಡುವುದು ಒಳ್ಳೆಯದೆಂದು ಕಾಣುತ್ತದೋ ಅದನ್ನು ಮಾಡುತ್ತೇವೆ, ಯಾವುದು ದೇಶದ ಹಿತದೃಷ್ಟಿಯಿಂದ ಇಟ್ಟುಕೊಳ್ಳುವುದು ಆವಶ್ಯಕವೆಂಬ ಅಭಿಪ್ರಾಯವಿದೆಯೋ ಅದನ್ನು ಇಟ್ಟುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಯಾವುದನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಬಿಡುಗಡೆ ಮಾಡಬೇಕು ಎಂದು ಸಲಹೆಕೊಡಲು ಸಮಿತಿಯನ್ನು ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಾಗ್ಗೆ ಜಿಲ್ಲಾಧಿಕಾರಿಗಳು, ಎಕ್ಸೈಜ್ ಕಮಿಷನರು ಮತ್ತು ರೆವೆನ್ಯೂ ಕಮಿಷನರು ಸೇರಿ ವರದಿ ಕೊಡುತ್ತಾರೆ. ಅದರ ಮೇಲೆ ತೀರ್ಮಾನ ಮಾಡಿಕೊಳ್ಳುತ್ತೇವೆ.

Adikarnataka Colony, Kodlapura, Madhugiri Taluk (Grant of sites).

Q.—826. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) whether it is a fact that after the submission of applications by people of 150 families of Kodlapura, Madhugiri taluk, requesting for the grant of house sites, they were granted and notified in the Gazette and subsequently stay order was issued ;

(*b*) whether it is a fact that after the issue of the stay order the pepole of the abovesaid village have again given application requesting them to confirm the grant of the same lands ;

(*c*) the reasons for not confirming and granting the said lands ?

A.—Sri H. M. CHANNABASAPPA (Minister for Revenue and Agriculture).—

ಇಟ್ಟುಕೊಂಡರು. ಮತ್ತು ಸ್ಟರ್ಲಿಂಗ್ ಕಂಪೆನಿಯಿಂದ ರುಪೀ ಕಂಪೆನಿಯಾದಾಗ 30-40 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಮಾಡಿದರು. ಇದನ್ನೆಲ್ಲ ಇವರು ಯಾರ ಅಡ್ಡಿ ಆತಂಕವಿಲ್ಲದೆ ಮಾಡುತ್ತ ಬಂದರು. ಸರ್ಕಾರದವರೂ ಸಹ ಕಣ್ಣು ಮುಚ್ಚಿಕೊಂಡು ಬಂದರು. ಇದನ್ನೆಲ್ಲ ನೋಡಿದರೆ ಈಗ ಕೊಡುವ 164 ಲಕ್ಷ ರೂಪಾಯಿ ಜಾಸ್ತಿಯಾಗುತ್ತದೆ. ರಾಷ್ಟ್ರೀಕರಣ ಮಾಡುವ ಕೆಲಸವನ್ನು 1956ನೆ ಇಸವಿಯವರೆಗೂ ಬಿಟ್ಟುಕೊಂಡು ಬಂದುದರಿಂದ ಅವರಿಗೆ ಬಂದ ದುಡ್ಡು ಐದಾರು ಕೋಟಿ ರೂಪಾಯಿಗಳು. ರಿಲೀಫ್ ಕೊಟ್ಟದ್ದು 20-30 ಲಕ್ಷ ರೂಪಾಯಿಗಳು. ಶೇಕಡ 25ರಷ್ಟು ಹೋದರೂ ನೀವು ಕೊಟ್ಟಿರುವುದು 13 ಲಕ್ಷ. . .

Sri H. SIDDAVEERAPPA.—I believe the gold duty relief was given in 1945 if I remember correctly.

Sri T. MARIAPPA (Mysore City—North).—Relief was given even before the enactment was made, because it was a pressing necessity. My friend forgets all the facts.

ಶ್ರೀ ಬಿ. ಹುಚ್ಚೇಗೌಡ.—ಇವರು ಹಿಂದೆ 1940ನೆ ಇಸವಿಯಲ್ಲಿ ಆವರು ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಭಾಷಣ ಮಾಡಬೇಕಾದರೆ ಏನೇನು ಹೇಳಿದರೆಂಬುದನ್ನು ಶ್ರೀ ಮರಿಯಪ್ಪನವರು ಹೇಳುತ್ತಾರೆಂದು ನಂಬಿದ್ದೇನೆ. ಈ ಪ್ರದೇಶದಿಂದ ಇಷ್ಟೊಂದು ಭಂಗಾರವನ್ನು ಹೊತ್ತುಕೊಂಡು ಹೋಗುತ್ತಾರೆ, ಕೂಡಲೇ ಇದನ್ನು ತಪ್ಪಿಸಬೇಕು ಎಂದರು. ಇವರನ್ನು ಇಂಗ್ಲೆಂಡಿಗೆ ಕರೆಸಿಕೊಂಡರೆ, ದೇಶದಲ್ಲಿ ಐಶ್ವರ್ಯವಂತರು ಯಾರೋ ಅವರ ಬಲೆಗೆ ಬೀಳುವುದೆಂದರೆ, ಅದನ್ನು ನಾವು ಹೇಗೆ ತಡೆದುಕೊಳ್ಳುವುದು ಎಂದು ಹೇಳುತ್ತೇನೆ. ಹಿಂದೆ ಇದ್ದ ಸರ್ಕಾರದವರು ಎಷ್ಟೋ ದೂರಾಲೋಚನೆಮಾಡಿ ಭಂಗಾರಕ್ಕೆ ರೂಪಾಯಿಗೆ ಹನ್ನೆರಡಾಣೆ ತೆರಿಗೆ ಹಾಕಿದ್ದರು. ಅದನ್ನು ಕಾಂಗ್ರೆಸ್ ಸರ್ಕಾರದವರು ಯಾಕೆ ಕಡಮೆ ಮಾಡಿದರು ಎಂದು ಕೇಳುತ್ತೇನೆ. ಅವರು ದೂರಾಲೋಚನೆ ಮಾಡಿದ್ದರೆ ಇವರು ದುರಾಲೋಚನೆ ಮಾಡಿದರು. ಹಿಂದೆ ಬೇಜವಾಬ್ದಾರಿ ಸರ್ಕಾರವೆಂದು ಯಾವ ಸರ್ಕಾರವನ್ನು ಕರೆಯುತ್ತಿದ್ದೆವೋ ಅಂಥ ಸರ್ಕಾರದವರು ಮಾಡಿದುದಕ್ಕಿಂತ ಕನಿಷ್ಟವಾದ ಕೆಲಸವನ್ನು ಇವರು ಯಾಕೆ ಮಾಡಿದರು ಎಂದು ಕೇಳುತ್ತೇನೆ.

ಇನ್ನು ಅಧಿಕಾರಿಗಳ ವಿಚಾರದಲ್ಲಿ ಒಂದು ಮಾತು. ಶ್ರೀ ವ್ಯಾಸ್ಕರೆನ್ಹಾನ್‌ರವರು ಮೊದಲನೆ ಕ್ಲಾಜ್ ಅಷ್ಟು ಮುಖ್ಯವಾದದ್ದಲ್ಲವೆಂದು ಹೇಳಿದರು. ಆದರೆ ನನ್ನ ದೃಷ್ಟಿಯಲ್ಲಿ ಅದು ಬಹಳ ಮುಖ್ಯ. ಇನ್ನು ಮೇಲೆ ಪರಕೀಯರ ಆಡಳಿತದಲ್ಲಿ ಯಾವುದನ್ನೂ ಕೊಡಕೂಡದು ; ನಮ್ಮ ದೇಶದಲ್ಲಿ ದಕ್ಷತೆ ಇದೆ, ಸಾಮರ್ಥ್ಯವಿದೆ ಎಂಬುದನ್ನು ತೋರಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಸ್ವರಾಜ್ಯ ಬರುವುದಕ್ಕೆ ಮುಂಚೆ, ಸ್ವರಾಜ್ಯ ತೆಗೆದುಕೊಂಡರೆ ಆಡಳಿತವನ್ನು ಹೇಗೆ ನಡೆಸುತ್ತೀರೆಂದು ಕೇಳುತ್ತಿದ್ದರು. ನಾವೀಗ ಒಂದು ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಆದುದರಿಂದ ಚಿನ್ನದ ಗಣಿಗಳನ್ನು ಮೊದಲು ಅವರ ಕೈಯಿಂದ ತಪ್ಪಿಸುವುದು ನಮ್ಮ ಕರ್ತವ್ಯ. ಕೆಲವಾರು ಲಕ್ಷ ರೂಪಾಯಿಗಳು ಜಾಸ್ತಿ ಹೋಗಬಹುದು ; ಕೆಲವಾರು ಕಂಡಿಷನ್‌ಗಳ ಮೇಲೆ ನಾವು ಅದನ್ನು ತೆಗೆದುಕೊಳ್ಳಬೇಕಾಗಬಹುದು. ಆದರೆ ನಾವು ಅದನ್ನು ತೆಗೆದುಕೊಂಡನಂತರ ಇತರ ವಿಚಾರಗಳನ್ನು ನೋಡಿಕೊಳ್ಳಬಹುದು. ಅಲ್ಲಿ ಅಧಿಕಾರಿಗಳಿಗೆ ವಿಶೇಷ ಸೌಕರ್ಯಗಳನ್ನು ಕೊಡುತ್ತಿದ್ದಾರೆ. ಈಗ ಅವರು ಬಿಟ್ಟು ಹೋಗುವುದು ತಪ್ಪಬೇಕೆಂದು ಅನೇಕ ಸೌಕರ್ಯಗಳನ್ನು ಬ್ರಿಟಿಷರಿಗೆ ಹೆಚ್ಚಾಗಿ ಕೊಟ್ಟಿದ್ದಾರೆ. ಇವರಿಗೆ ಸಾವಿರಾರು ರೂಪಾಯಿಗಳು ಸಂಬಳವಾಗಿ ಕೊಡುವುದಲ್ಲದೆ, ಆದಾಯ ತೆರಿಗೆಯನ್ನೂ ಸಹ ಕಂಪೆನಿಯವರೇ ಕೊಡುತ್ತಿದ್ದಾರೆ. ಅವರಿಗೆ ಈ ರೀತಿ ವಿಶೇಷ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಅವರೆಲ್ಲ ಬಿಟ್ಟು ಹೋಗುತ್ತೇವೆಂದು ಹೆದರಿಸುತ್ತಾರೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿದರೆ ಅಪ್ರಕೃತವಾಗಲಾರದು. ಈಜಿಪ್ಟ್‌ನಲ್ಲಿ ಸೂಯೆಜ್ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಣ ಮಾಡಿದಾಗ ಅಲ್ಲಿ ಕೆಲಸದಲ್ಲಿದ್ದವರನ್ನೆಲ್ಲ ಕೆಲಸ ಬಿಟ್ಟು ಬನ್ನಿ ಎಂದು ಕಂಪೆನಿಯವರು ಹೇಳಿದ್ದರ ಮೇಲೆ ಅವರೆಲ್ಲ ಕೆಲಸವನ್ನು ಬಿಟ್ಟರು. ಇದರಿಂದ ಕೆಟ್ಟವರು ಅಧಿಕಾರಿಗಳೇ ಹೊರತು ಬೇರೆ ಯಾರೂ ಅಲ್ಲ. ಸೂಯೆಜ್ ಕಾಲುವೆಯಲ್ಲಿ ಕೆಲಸ ಯಥಾಪ್ರಕಾರವಾಗಿ ನಡೆಯುತ್ತಿದೆ. ಅಂತೆಯೇ ನಮ್ಮ ದೇಶೀಯರಲ್ಲಿಯೂ ಕೂಡ ದಕ್ಷತೆ ಇದೆ, ಸಾಮರ್ಥ್ಯವಿದೆ ಎನ್ನುವುದರಲ್ಲಿ ನಮಗೆ ಅಪನಂಬಿಕೆ ಬೇಕಾಗಿಲ್ಲ. ಪರಕೀಯರು ಪೂರ್ತಿಯಾಗಿ ಬಿಟ್ಟು ಹೋದರೂ ಕೂಡ ನಾವು ಅವರನ್ನು ಬೇಡಬೇಕಾಗಿಲ್ಲ. ಒಂದು ವೇಳೆ ಅವರು ಕಂಪೆನಿಗಳ ಪ್ರಭಾವಕ್ಕೊಳಗಾಗಿ ಬಿಟ್ಟು ಹೋದರೆ ನಮಗೆ ನಷ್ಟವೇನೂ ಇಲ್ಲ. ಅವರಿಗೆ ಅಷ್ಟೊಂದು ದುಬಾರಿ ಸಂಬಳ ಸಾರಿಗೆ ಕೊಡತಕ್ಕದ್ದೂ ಮತ್ತು ಇತರ ಸೌಲಭ್ಯ ಸೌಕರ್ಯಗಳೆಲ್ಲವೂ ನಮ್ಮವರಿಗೆ ಉಳಿಯುತ್ತವೆ ಮತ್ತು ನಮ್ಮವರು ಕೂಡ ಅವರ ಸ್ಥಾನಗಳಿಗೆ ಬರುವುದಕ್ಕೆ ಅವಕಾಶ ವಾಗುತ್ತದೆ. ಅವರಿಗಿರುವಷ್ಟು ದಕ್ಷತೆ ನಮ್ಮವರಿಗೂ ಇದೆ ಎಂದು ಹೇಳುತ್ತೇನೆ.

ನೌಕರರ ವಿಚಾರದಲ್ಲಿ, ಮುಂಚಿನಿಂದಲೂ ಯಾವ ಕಂಡಿಷನ್‌ಗಳ ಮೇಲೆ ನೇಮಕವಾಗಿದ್ದಾರೆ, ಪ್ರತಿಯೊಬ್ಬರಿಗೂ ಕೂಡ ಅವರ ಹಕ್ಕುಬಾಧ್ಯತೆ, ಅವರವರ ಅಧಿಕಾರ ಮತ್ತು ಅಧಿಕಾರಕ್ಕೆ ತಕ್ಕ ಕಂಡಿಷನ್‌ಗಳೇನಿವೆಯೋ ಅವನ್ನು ನಡೆಸಿಕೊಂಡು ಹೋಗುತ್ತೇವೆಂಬ ಭರವಸೆಯನ್ನು ಐದನೆಯ ಕ್ಲಾಜಿನಲ್ಲಿ ವ್ಯಕ್ತಪಡಿಸಿದ್ದಾರೆ. ಯಾವ ಹೆಚ್ಚು ಕಡಿಮೆ ಇದ್ದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಈ ಸಭೆಗೆ ಪೂರ್ಣಾಧಿಕಾರವಿದೆ. ಮುಂದೆ ಏನು ಬದಲಾವಣೆ ಬೇಕಾದರೂ ನಾವು ಮಾಡಿಕೊಳ್ಳಬಹುದು. ಸದ್ಯದಲ್ಲಿ ಇದಕ್ಕೆ ಒಮ್ಮತವಾಗಿ ಎಲ್ಲರೂ ಅನುಮತಿ ಕೊಡಬೇಕು. ಇದರಲ್ಲಿ ಇಂಡಿಯಾ ಸರ್ಕಾರದವರು, ಕಂಪೆನಿಗಳವರು ಮತ್ತು ಮೈಸೂರು ಸರ್ಕಾರದವರು ಕೂಡ ಸೇರಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಆದುದರಿಂದ ಇದರಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವುದಕ್ಕೆ ಹೋಗುವುದು ಸೂಕ್ತವಲ್ಲ. ಚಿನ್ನದ ಗಣಿಗಳ ಉದ್ಯಮವನ್ನು ರಾಷ್ಟ್ರೀಕರಣ ಮಾಡಬೇಕೆನ್ನುವ ಒಂದೇ ದೃಷ್ಟಿಯಿಂದ ಇದಕ್ಕೆ ಎಲ್ಲರೂ ಒಮ್ಮತವಾದ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಈ ಮಸೂದೆಯ ವಿಚಾರದಲ್ಲಿ, ಕಾಂಪೆನ್ಸೇಷನ್ ಬಗ್ಗೆ ಮಾತ್ರ ಕೆಲವು ವಿಷಯಗಳನ್ನು ನಾನು ಹೇಳಬೇಕೆಂದಿದ್ದೇನೆ. ಈ Gold Mining Industryಯನ್ನು ನಾವು ರಾಷ್ಟ್ರೀಕರಣ ಮಾಡಿಕೊಳ್ಳತಕ್ಕದ್ದು ಎಂದು ನಿರ್ಧರ ಮಾಡಿದ ಮೇಲೆ ಮೈಸೂರು ಸರ್ಕಾರದವರು ಇದನ್ನು ಯಾವ ಆಧಾರದ ಮೇಲೆ ರಾಷ್ಟ್ರೀಕರಣ ಮಾಡಬೇಕೆಂದು ಮಾಡಿ

(ಶ್ರೀ ಎ. ಭೀಮಪ್ಪನಾಯಕ್.)

ದರು? 1955ನೆ ಇಸವಿಯಲ್ಲಿ ಮೊದಲು ಈ ವಿಷಯ ಬಂತು. ಇದನ್ನು ಸಾರ್ವಜನಿಕರ ಮುಂದೆ ಯಾವಾಗ ಇಟ್ಟರೋ ಆಗಿನಿಂದ ಸಾಧಾರಣವಾಗಿ ಷೇರ ಗಳ ಬೆಲೆ ಕಡಮೆಯಾಗುತ್ತ ಬಂತು. ಆದ್ದರಿಂದ ನಾವು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು ನ್ಯಾಯವಲ್ಲವೆಂದು 1955ನೆ ಇಸವಿ ಜನವರಿ ತಿಂಗಳಿನಲ್ಲಿ ಷೇರುಗಳ ಬೆಲೆ ಏನಿತ್ತೊ ಅದರಂತೆ ನಾವು ಅವರಿಗೆ ಕಾಂಪೆನ್ಸೇಷನ್ ಕೊಡತಕ್ಕದ್ದು ಎಂದು ನಿರ್ಧರ ಮಾಡಿ 87 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧರಮಾಡಿದರು. ಹೀಗೆ ನಿರ್ಧರ ಮಾಡಿದಮೇಲೆ ಈ ವಿಷಯವನ್ನು ಇಂಡಿಯಾ ಸರ್ಕಾರಕ್ಕೂ ಮತ್ತು ಕಂಪೆನಿಗಳವರಿಗೂ ತಿಳಿಸಿದರು. ಆದರೆ ಕಂಪೆನಿಗಳವರು 8 ಕೋಟಿ ರೂಪಾಯಿ, ಹತ್ತು ಕೋಟಿ ರೂಪಾಯಿ ಈ ರೀತಿಯಾಗಿ ಕೇಳುತ್ತ ಬಂದರು. ಇದಾದಮೇಲೆ ಬಹಳ ದಿವಸಗಳು ಚರ್ಚೆ ನಡೆದು ಕೊನೆಗೆ ಕೌಲ್ ಕಮಿಟಿ ಎಂದು ಒಂದು ಸಮಿತಿಯನ್ನು ಮಾಡಿ ಈ ಕಂಪನಿಗಳ ಷೇರುಗಳ ಬೆಲೆಯನ್ನು ನಿರ್ಧರಮಾಡಬೇಕೆಂದು ಇಂಡಿಯಾ ಸರ್ಕಾರದವರು ನೇಮಿಸಿದರು. ಆಮೇಲೆ ಈ ಕಮಿಟಿಯವರು ಬಂದು ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಕಂಪೆನಿಯವರ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ನಿರ್ಧಾರಕ್ಕೆ ಬಂದರು. 1945 ರಿಂದ 1949ರವರೆಗಿನ ಐದು ವರ್ಷಗಳಲ್ಲಿ ಮಾರ್ಕೆಟ್ಟಿನಲ್ಲಿ ಏನು ಷೇರು ಬೆಲೆ ಇತ್ತೋ ಅದರ ಮೇಲೆ ಕಾಂಪೆನ್ಸೇಷನ್ ಕೊಡಬೇಕು ಎಂದು ಕಂಪೆನಿಯವರು ಕೇಳಿದರು. 1956ನೆ ಇಸವಿಯಲ್ಲಿ ರಾಷ್ಟ್ರೀಕರಣ ಮಾಡಿಕೊಳ್ಳುವಾಗ 1945ರಿಂದ 1949ರವರೆಗೆ boom price ಇದ್ದಾಗ, ಅದರಂತೆ ಷೇರುಗಳ ಬೆಲೆ ತಗೆದುಕೊಳ್ಳತಕ್ಕದ್ದು ನ್ಯಾಯವಾದದ್ದಲ್ಲವಾದುದರಿಂದ 1950ರಿಂದ 1954ರ ಅವಧಿಯಲ್ಲಿದ್ದ ಷೇರು ಬೆಲೆಯ ಲೆಕ್ಕ ಹಾಕಬೇಕು ಎಂದು ಈ ಐದು ವರ್ಷಗಳ ಸರಾಸರಿ ತೆಗೆದುಕೊಂಡು ಕೊಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದರು. ಈ ರೀತಿ ಲೆಕ್ಕ ಹಾಕಿದರೆ 102 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಮತ್ತು ಕಂಪೆನಿಯವರು ಹೇಳುವಂತೆ 1945ರಿಂದ 1949ರವರೆಗಿನ ಷೇರು ಬೆಲೆಯನ್ನು ತೆಗೆದುಕೊಂಡರೆ ಆವಾಗ 225 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದುದರಿಂದ ಇವೆರಡೂ ಬೇಡವೆಂದು 10 ವರ್ಷದ ಲೆಕ್ಕವನ್ನು ತೆಗೆದುಕೊಂಡರು. ಆಗ ಸ್ವಲ್ಪ ಹೆಚ್ಚು ಕಡಿಮೆ 164 ಲಕ್ಷ ರೂಪಾಯಿ ಕೊಡಬೇಕ ಎನ್ನುವ ಒಂದು ತೀರ್ಮಾನಕ್ಕೆ ಬಂದರು. ಮತ್ತು ಇದರ ಜೊತೆಗೆ ಕಂಪೆನಿಯವರು ಇನ್ನು ಮುಂದೆ ಅವರಿಗಿರುವ 15 ವರ್ಷಗಳ ಲೀಸನ್ನು ಬಿಟ್ಟು ಕೊಡುವುದಕ್ಕೋಸ್ಕರ 5 ಲಕ್ಷ ರೂಪಾಯಿಗಳ ಕಾಂಪೆನ್ಸೇಷನ್ ಕೊಡಬೇಕೆಂದು ತೀರ್ಮಾನಿಸಿದರು. ಇದರಂತೆ ಒಟ್ಟು 169 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದಾಯಿತು. ಆದರೆ ಈ ಕಂಪೆನಿಗೆ ಸಂಬಂಧಪಟ್ಟ ಆಸ್ತಿ ಪಾಸ್ತಿಗಳು ಇಂಗ್ಲೆಂಡಿನಲ್ಲಿ ಇರುತ್ತದೆ. ಅವಕ್ಕೆ ಸುಮಾರು 50 ಲಕ್ಷ ರೂಪಾಯಿಗಳ ಅಂದಾಜು ಹಾಕಿ ಉಳಿಕೆ 119 ಲಕ್ಷ ರೂಪಾಯಿಗಳನ್ನು ಕಂಪೆನಿಗಳವರಿಗೆ ಕೊಡಬೇಕು ಎಂದು ತೀರ್ಮಾನಕ್ಕೆ ಬಂದರೆಂದು ಕಾಣುತ್ತದೆ. ಆಗ ಇಂಡಿಯಾ ಸರ್ಕಾರದವರು ಕೂಡ ಇದನ್ನು ಒಪ್ಪಿಕೊಂಡರು. ನಮ್ಮ ಸರ್ಕಾರದವರೂ ಸಹ ಅಷ್ಟು ಕೊಟ್ಟರೆ ಕೊಡೋಣ ಎಂದುಕೊಂಡರು. ಇಲ್ಲಿಗೆ ಒಂದು ಘಟ್ಟಕ್ಕೆ ಬಂತು. ಆಮೇಲೆ ಕಂಪೆನಿಯವರು ಅದನ್ನು ವಿರೋಧಿಸಿ ಅಷ್ಟಕ್ಕೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದರ ಪರಿಣಾಮವಾಗಿ, ಇಂಗ್ಲೆಂಡಿನಲ್ಲಿರುವ ಅವರ ಆಸ್ತಿಪಾಸ್ತಿಗಳನ್ನೆಲ್ಲ ಅವರಿಗೇ ಬಿಟ್ಟು ಇಲ್ಲಿರತಕ್ಕ ಆಸ್ತಿಯನ್ನು ಮಾತ್ರ ಲೆಕ್ಕ ಹಾಕಿಕೊಂಡು ಕಂಪೆನಿಯವರಿಗೆ 164 ಲಕ್ಷ ರೂಪಾಯಿಗಳನ್ನು ಕೊಡಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆಂದು ಅವರು ಹೇಳುತ್ತಾರೆ. ಬರೀ ಇಷ್ಟೇನೇ, ನಮಗೆ liabilities 164 ಲಕ್ಷ ರೂಪಾಯಿಗಳು ಮಾತ್ರವೇ ಎಂದು ನೋಡಿದರೆ ಇಷ್ಟೇ ಅಲ್ಲ ಇನ್ನೂ ಇದೆ ಎಂದು ನನ್ನ ಭಾವನೆ. Gratuity, pension, pensionary contribution, ಒಂದು ವೇಳೆ ರಿಟ್ರೆಂಚ್ ಮೆಂಟ್ ಆದರೆ ಅಂಥ ಸಂದರ್ಭದಲ್ಲಿ ಬರತಕ್ಕದ್ದು ಇದನ್ನೆಲ್ಲ ಒಟ್ಟು ಲೆಕ್ಕ ತೆಗೆದುಕೊಂಡರೆ 135 ಲಕ್ಷ ರೂಪಾಯಿ ನಮ್ಮ ಮೇಲೆ liability ಇದೆ ಎಂದು ನನಗೆ ತಿಳಿದುಬಂದಿದೆ. ಹೀಗಾಗಿ ನಾವು ಈಗ ಒಟ್ಟು ಕೊಡತಕ್ಕದ್ದು 164 ಲಕ್ಷ ರೂಪಾಯಿಗಳು ಒಂದು ಬಾಬು, ಇಂಗ್ಲೆಂಡಿನಲ್ಲಿರುವ ಆಸ್ತಿಪಾಸ್ತಿಗಳನ್ನು ಬಿಟ್ಟಿರುವ ಬಾಬ್ತು 50 ಲಕ್ಷ ರೂಪಾಯಿಗಳು, ಆ ಮೇಲೆ ಮೇಲೆ ಹೇಳಿದ 135 ಲಕ್ಷ ರೂಪಾಯಿಗಳು ಇಷ್ಟು ಮೊತ್ತವನ್ನು ನಾವು ಚಿನ್ನದ ಗಣಿಗಳ ಕೆಲಸ ಮಾಡುವುದಕ್ಕೆ ಕೊಡಬೇಕಾದ liabilities. Gratuity, Pensionary contributions, ಮುಂತಾದವುಗಳಿಗೇನಾದರೂ ಒಂದು ಫಂಡನ್ನು ಮಾಡಿದ್ದಾರೆಯೋ ಎಂದರೆ ಈಗಾಗಲೇ ಶ್ರೀಮಾನ್ ಸ್ವಾಮಿ ದೊರೈ ಮೊದಲಾದ ಮಹನೀಯರು ತಿಳಿಸಿದಂತೆ ಆ ರೀತಿಯ ಫಂಡ್ create ಮಾಡಿಲ್ಲ. ಹೋದವರ್ಷ ಮಾತ್ರ ಏನೋ ಸ್ವಲ್ಪ ಮಾಡಿದ್ದಾರೆ. Gratuity fund ಏನೋ ಮಾಡಿದ್ದಾರೆ. ಅದನ್ನು ಸಾಕಷ್ಟು build up ಮಾಡಿಲ್ಲ. ಒಟ್ಟಿನಲ್ಲಿ ನಾವು 40 ಲಕ್ಷ ರೂಪಾಯಿಗಳನ್ನು ಕೊಡಬೇಕು. ಬಾಕಿಯಾದದ್ದು 40 ಲಕ್ಷ ಸೇರಿ 80 ಲಕ್ಷ ರೂಪಾಯಿಗಳು ಮತ್ತು ಇನ್ನೂ ಉಳಿದಿದ್ದು ಎಲ್ಲ ಲೆಕ್ಕ ಹಾಕಿ ಸರ್ಕಾರದ ಲೆಕ್ಕದ ಪ್ರಕಾರ ತಿಳಿದು ಬಂದಿರುವಂತೆ ಒಂದು ಕೋಟಿ 35 ಲಕ್ಷ ರೂಪಾಯಿ ಲಯಬಿಲಿಟಿ ನಮ್ಮ ಮೇಲಿದೆ. ಇದಕ್ಕೆ ಒಂದು ಕೋಟಿ 64 ಲಕ್ಷ ರೂಪಾಯಿ ನಾವು ಕೊಡುವ ಪರಿಹಾರ ಮತ್ತು ಅದಾದ ಮೇಲೆ ಹೆಚ್ಚು ಕಡಮೆ ಒಂದು ಕೋಟಿ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಹಾಕಬೇಕು. ಇದೆಲ್ಲಾ ಸೇರಿದರೆ ಹೆಚ್ಚು ಕಡಮೆ ಈ ದಿವಸ ಈ ಆಸ್ತಿ 4 ಕೋಟಿ ರೂಪಾಯಿಗಳನ್ನು ನಮ್ಮಿಂದ ತೆಗೆದುಕೊಳ್ಳುತ್ತದೆ. ಇದರ ಫೇಸ್ ವ್ಯಾಲ್ಯೂ ತೆಗೆದುಕೊಂಡರೆ ಹೆಚ್ಚುಕಡಿಮೆ ಒಂದು ಕೋಟಿ 64 ಲಕ್ಷವಿದೆ. ಅದರ ಎರಡರಷ್ಟು ಲಯಬಿಲಿಟಿಯಿದೆ. ಫೇಸ್ ವ್ಯಾಲ್ಯೂ ಮೇಲೆ ಲೆಕ್ಕ ಹಾಕಿದರೆ ಅದರ ಎರಡರಷ್ಟು ಈ ದಿವಸ ಹೊತ್ತುಕೊಳ್ಳುತ್ತಿದ್ದೇವೆ. ಆದ್ದರಿಂದ ಆ ಎರಡರಷ್ಟು ಲಯಬಿಲಿಟಿ ನಮ್ಮ ಮೇಲೆ ಬರಬಹುದು. ಈ ದಿವಸ ಶೇಕಡ ಹತ್ತರಷ್ಟು ಡಿವಿಡೆಂಡ್ ಡಿಕ್ಲೇರ್ ಆದರೆ ಮುಂದೆ ಶೇಕಡ ಐದರಷ್ಟು ಬರುತ್ತದೆಂದು ಗೊತ್ತಾಗಿದೆ. ಆದರೆ ಏನೇ ಕಷ್ಟವಾಗಲಿ ಒಟ್ಟಿನಲ್ಲಿ ಒಂದು ರಾಷ್ಟ್ರಕ್ಕೂ ಇನ್ನೊಂದು ರಾಷ್ಟ್ರಕ್ಕೂ ಒಂದು ವಿಧವಾದ ಸದ್ಭಾವನೆ ಮೂಡಿ ಯುನೈಟೆಡ್ ಕಿಂಗ್‌ಡಂನಲ್ಲಿ ನಾವು ಭಾಗಿಗಳಾಗಿ ಕೆಲಸ ಮಾಡುವಾಗ, ಸಂಪತ್ತು, ಉತ್ಸಾಹ, ವಿಶ್ವಾಸ ಬೆಳೆಯುವಾಗ, ಭಾರತದ ಹಿತ ದೃಷ್ಟಿಯಿಂದ, ಅವರ ಮತ್ತು ನಮ್ಮ ಸ್ನೇಹ ಉಳಿಯುವ ಒಂದು ದೃಷ್ಟಿಯಿಂದ ಇದನ್ನು ಎಕ್ಸ್‌ಪ್ರೊಪ್ರಿಯೇಟ್ ಆಗಿ ಅಥವಾ ರಾಜ್ಯಾಂಗದಲ್ಲಿ ಹಕ್ಕಿದೆಯೆಂದು ಲಾ ಮಾಡಿ ಅವರಿಗೆ ಎಷ್ಟು ಕೊಡಲು ಹಕ್ಕಿದೆಯೋ ಅಷ್ಟನ್ನು ಕೊಟ್ಟಿದ್ದೇವೆಂದು ಹೇಳುವುದಕ್ಕಿಂತ ಅವರನ್ನೊಪ್ಪಿಸಿ ಪರಸ್ಪರ ಸಮ್ಮತಿಯಿಂದ ಒಪ್ಪಿಕೊಳ್ಳ

ಬೇಕೆಂಬ ಭಾವನೆಯಿಂದ ಈ ಒಂದು ಪ್ರೊಲಾಂಗ್ಡ್ ನೆಗೋಷಿಯೇಷನ್ಸ್ ಆಗಿ ಕೊನೆಗೆ ಅವರು ಇಷ್ಟು ಹಣ ಕೊಟ್ಟರೆ ನಾವು ಸಂತೋಷವಿಂದ ಒಪ್ಪುತ್ತೇವೆ ಎಂದು ಒಂದು ಭಾವನೆಯಿಂದ ಒಪ್ಪಿಕೊಂಡರು ಎಂದು ಹೇಳಿರುವುದು ಸಂತೋಷದ ವಿಷಯ. ಈ ರೀತಿ ಒಪ್ಪಿಕೊಂಡಿರುವುದೂ ಅಲ್ಲದೆ ಮುಂದೆ ಅವರ ಸಹಾಯ ಅಗತ್ಯವಾದರೆ ಅವರನ್ನಿಟ್ಟುಕೊಳ್ಳಬೇಕೆಂದು ಬರೆದುಕೊಟ್ಟಿಲ್ಲ. ಈದಿವಸ ಒಪ್ಪಿಕೊಂಡಿಲ್ಲ, ಅಗತ್ಯಕಂಡರೆ ಸಹಾಯ ಸಲ್ಲಿಸುತ್ತೇವೆ, ನಮ್ಮ ಜೊತೆಗೆ ಸಹಕಾರ ಮಾಡುತ್ತೇವೆ ಎಂದು ಒಂದು ಮಾತು ಹೇಳಿದ್ದಾರೆಂದು ಹೇಳುತ್ತಾರೆ. ಅದೇನೇ ಇರಲಿ, ಈಗ ಮುಖ್ಯವಾಗಿ 20 ಸಾವಿರ ಕೆಲಸಗಾರರಿದ್ದಾರೆ. ಕೆಲಸ ಮಾಡುತ್ತಿದ್ದಾರೆ. ಈ 20 ಸಾವಿರ ಕೆಲಸಗಾರರೂ ಕೂಡ ಇದು ನಮ್ಮದೇ ಆಗಬೇಕೆಂಬ ಮನೋಭಾವನೆಯುಳ್ಳವರಾಗಿ ಅಲ್ಲಿರುವಾಗ ನಾವು ರಾಷ್ಟ್ರೀಕರಣ ಮಾಡದೆ ಬಿಡುವುದು ನ್ಯಾಯವೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಮತ್ತೆ ಈ 20 ಸಾವಿರ ಕೆಲಸಗಾರರ ಹಿತರಕ್ಷಣೆ ಇದೆಯೆ, ನಾಳೆ ಗ್ರ್ಯಾಚ್ಯುಯಿಟಿಯನ್ನು ಕೊಡುತ್ತಾರೆಯೆ ಎಂಬ ಅನುಮಾನ ಕೂಡ ಇದೆ. ಇಂಥ ಸಂದರ್ಭದಲ್ಲಿ ಮೈಸೂರು ಸರ್ಕಾರದವರು ನಮ್ಮ ಕೆಲಸಗಾರರ ಹಿತದೃಷ್ಟಿಯಿಂದಲಾದರೂ ಕೂಡ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ್ದನ್ನು ಸಲ್ಲಿಸುವುದು ನ್ಯಾಯ ಎಂಬ ದೃಷ್ಟಿಯಿಂದಲಾದರೂ ರಾಷ್ಟ್ರೀಕರಣ ಮಾಡುವುದು ಅಗತ್ಯ. ಈಗ ಒಂದು ಕೋಟಿ 36 ಲಕ್ಷ ಏನು ನಮ್ಮ ಮೇಲೆ ಲಯಬಿಲಿಟಿ ಬರುತ್ತದೆಯೋ ಅದು ಒಂದೇ ದಿವಸ ಬರುವುದಿಲ್ಲ. ಅದು ಹೆಚ್ಚು ಕಡಮೆ 30-40 ವರ್ಷಗಳವರೆಗೆ ಪ್ರತಿ ವರ್ಷ 5 ಲಕ್ಷದಂತೆ ಕೊಡಬೇಕಾಗಿ ಬರಬಹುದು. ಹಾಗೆ ನಾವು ಕೊಡುವ ಸಂದರ್ಭ ಬಂದಾಗ ಜನರಲ್ ರೆವೆನ್ಯೂ ದಿಂದ ಅವರಿಗೆ ಕೊಡಬೇಕೆಂದು ಕೆಲವರು ಏನು ಸಲಹೆ ಮಾಡಿದ್ದಾರೋ ಅದೇ ನನ್ನ ಅಭಿಪ್ರಾಯ ಕೂಡ ಆಗಿದೆ. ಆ ರೀತಿ ಮಾಡುವುದರಿಂದ ಸಂಸ್ಥಾನದ ಮೇಲೆ ಹೆಚ್ಚು ಲಯಬಿಲಿಟಿ ಬಾರದೆ ಅವರೂ ಸಹ ಚೆನ್ನಾಗಿ ಕೆಲಸಮಾಡಿ ಸಂಪಾದನೆ ಮಾಡುವ ಅವಕಾಶ ಸಿಕ್ಕಿ ಸದ್ಭಾವನೆ ಬ ದು ನಮಗೆ ಬರುವುದನ್ನು ನಾವು ಸಂಪಾದನೆ ಮಾಡಬೇಕು ದೇಶಕ್ಕೆ ಹೆಚ್ಚು ಬಂಡವಾಳವನ್ನೊದಗಿಸಬೇಕು ಎಂಬ ಮನೋಭಾವನೆ ಸಹ ಅವರಿಗೆ ಬರುತ್ತದೆ. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ನಾವೂ ಅವರಿಗೆ ದೊರೆಯ ಬೇಕಾದ ಗ್ರ್ಯಾಚ್ಯುಯಿಟಿ, ಪೆನ್ಷನರಿ ಕೌಂಟ್ರಿಬ್ಯೂಷನ್ ವಗೈರೆ ಕೊಡಬೇಕಾಗುತ್ತದೆ. ಇಂಥ ನ್ಯಾಷನಲ್ ವೆಂಚರ್ ಮಾಡಿ ಈ ಸಂದರ್ಭದಲ್ಲಿ ನಾವು ದೇಶದ ದೃಷ್ಟಿ ಯಿಂದಲಾಗಲಿ ಅಥವಾ ಲಾಭ ನಷ್ಟದ ದೃಷ್ಟಿಯಿಂದಲಾಗಲಿ ಅಷ್ಟಾಗಿ ನೋಡಬಾರದು. ಉತ್ತರೋತ್ತರ ನಮ್ಮ ಮೈಸೂರು ದೇಶದ ಪ್ರಕೃತಿ ದೇವಿ ನಮಗೆ ಕರುಣಿಸಿರುವ ಅತ್ಯುತ್ತಮವಾದ ವಸ್ತುವನ್ನು ನಮ್ಮದೇ ಆಗಿ ಮಾಡಿಕೊಳ್ಳುವ ಸಂದರ್ಭವಿದು. ಪ್ರಕೃತಿಯು ಸರ್ಕಾರಕ್ಕೆ ಕೊಟ್ಟಿರುವ ಗಣಿಯು ನಮ್ಮದೇ ಆಗಿ ದೈವೇಚ್ಛೆಯಿಂದ ಶ್ರೀ ಥಾಮಸ್‌ಅವರು ಹೇಳಿದ ಹಾಗೆ ಸರ್ವೆಮಾಡಿದಾಗ ಹೊಸಹೊಸ ಓರ್ ಸಿಕ್ಕಿ ಉದಾರವಾಗಿ ದೇವರು ಒಳ್ಳೆಯದನ್ನು ಮಾಡುವುದಾದರೆ, ಅದರಿಂದ ಇದಕ್ಕಿಂತಲೂ ಅತ್ಯುತ್ತಮವಾದ ಸಂಪಾದನೆಯನ್ನು ಹೆಚ್ಚಾಗಿ ಮಾಡಬಹುದು. ಎಲ್ಲಕ್ಕಿಂತ ಹೆಚ್ಚಾಗಿ ವಿಜ್ಞಾನಸಂಪಾದನೆ ಮಾಡಬಹುದು, ಟೆಕ್ನಿಕಲ್ ಸ್ಕಿಲ್‌ನಮ್ಮವರಲ್ಲಿ ವೃದ್ಧಿಯಾಗಿ ಮೈಸೂರು ದೇಶದ ಇತರ ಭಾಗಗಳಲ್ಲಿ ಸಿಕ್ಕುವ ಈ ಅದುರಿನ ವಿಚಾರವಾಗಿ ತಜ್ಞತೆಪಡೆದು ಕೆಲಸಮಾಡುವುದಕ್ಕೆ ಕೂಡ ಸಾಧ್ಯವಾಗಬಹುದು. ವಿಶ್ವವಿದ್ಯಾನಿಲಯ ಇದನ್ನು ಸಾಧಿಸಿದ ಹಾಗಾಗುತ್ತದೆ ಎಂಬುದು ನನ್ನ ಭಾವನೆ. ಈ ದೃಷ್ಟಿಯಿಂದಲೂ ಕೂಡ ಈ ಕೈಗಾರಿಕೆಯನ್ನು ನಾವು ವಶಕ್ಕೆ ತೆಗೆದುಕೊಳ್ಳುವುದು ಅತಿ ಅಗತ್ಯವಾಗಿದೆ, ಬಹಳ ನ್ಯಾಯವಾದುದು ಎಂಬುದು ನನ್ನ ಭಾವನೆ. ಆದರೆ ಕಾಂಪೆನ್ಸೇಷನ್ ಕೊಟ್ಟರೂ, ಈಗ ನಿರ್ಧರಿಸಿದರೂ ಅನೇಕ ಸಂದರ್ಭಗಳಲ್ಲಿ ಬಹಳ ದಿವಸಗಳಿಂದ ದೂರು ಇರುವುದರಿಂದ ನ್ಯಾಯಸಮ್ಮತವಲ್ಲದಂಥ ಕರಾರು ಮಾಡಿಕೊಂಡಿದ್ದರೆ ಮತ್ತು ನಮ್ಮ ಹಿತಕ್ಕೆಧಕ್ಕೆ ಬರುವ ಯಾವುದಾದರೂ ಲಯಬಿಲಿಟೀಸ್ ಇದ್ದರೆ ಅಂಥವುಗಳಿಗೆ ನಾವು ಜವಾಬ್ದಾರರಾಗದಿರುವುದಕ್ಕೆ ಒಂದು ಕ್ಲಾಜನ್ನು ಸಹ ಹಾಕಿ ಏಳನೆಯ ಕ್ಲಾಜಿನಲ್ಲಿ "Right of Government to disclaim certain agreements" ಎಂದು ಸೂಚಿಸಿರುವುದು ಸೂಕ್ತ, ಬಹಳ ನ್ಯಾಯವಾದುದು. ಆ ಒಪ್ಪಂದ ನಮ್ಮ ಹಿತಕ್ಕೆ ವಿರುದ್ಧವಾಗಿರುವುದಾದರೆ, ನಮಗೆ ಲಯಬಿಟೀಸ್ ಹೆಚ್ಚುವುದಾದರೆ ಆಗ ಪರಿಹಾರ ಪಡೆಯಲುಅವಕಾಶವಿದೆ. ಆದರೆ ಗ್ರಾಚ್ಯುಯಿಟಿ ಮತ್ತು ಪೆನ್ಷನ್ ಕಾಂಟ್ರಿಬ್ಯೂಷನ್ ಕೊಡುವಾಗ ಅದನ್ನು ಉಪಯೋಗಿಸಿಕೊಳ್ಳುವುದಿಲ್ಲ, ಅದಕ್ಕೆ ಇದು ಸಂಬಂಧಪಡುವುದಿಲ್ಲ, ಕೆಲಸಗಾರರಿಗೆ ಬರುವ ಹಿತಕ್ಕೆ ಇದು ಅನ್ವಯಿಸುವುದಿಲ್ಲ. 5ನೆಯ ಕ್ಲಾಜಿನಲ್ಲಿ ಅದರ ಹಿತ ಸಂಪೂರ್ಣವಾಗಿ ರಕ್ಷಣೆಮಾಡಿರುವುದರಿಂದ ಕೆಲಸಗಾರರು ಈ ಸಂದರ್ಭದಲ್ಲಿ ಸಂತೋಷದಿಂದ ನಮ್ಮದೇ ಆದ ಒಂದು ಕಂಪೆನಿಯನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ನಮಗಂತೂ ಅಸಮಾಧಾನವಿದೆ. ಏಕೆಂದರೆ, ಅವರೇನು ಹಣ ಹಾಕಿದ್ದರೋ ಅದರ 27ರಷ್ಟು ಹಣ ಈಗಾಗಲೇತೆಗೆದುಕೊಂಡಿದ್ದಾರೆ. ಈಗ ಹೆಚ್ಚುಕಡಮೆ $1\frac{3}{4}$ ಲಕ್ಷರೂಪಾಯಿ ಫೇಸ್ ವ್ಯಾಲ್ಯೂ ಎಂದು ಲೆಕ್ಕಹಾಕಬಹುದು. ಅದರ 27 ರಷ್ಟು ಅಂದರೆ 50-60 ಕೋಟಿರೂಪಾಯಿಗಳನ್ನು ನಮ್ಮದೇಶದಿಂದ ಸಂಪಾದನೆಮಾಡಿದ್ದಾರೆ. ಅದನ್ನು ದೃಷ್ಟಿಯಲ್ಲಿಟ್ಟರೆ ಅವರಿಗೆ 3ಕಾಸೂಕೊಡಬೇಕಾಗಿರಲಿಲ್ಲ ಒಂದೊಂದು ಸ್ಟೇಜ್‌ನಲ್ಲೂ ಮೈಸೂರು ಸರ್ಕಾರಕ್ಕೆ ಅವರಿಂದಲೇ 45 ಲಕ್ಷ ಬರಬೇಕಾಗಿದೆಯೆಂದು ಕ್ಲೈಮ್ ಹಾಕಿದ್ದಾರೆ. ಆದರೆ ಯಾವಕಾರಣದಿಂದಲೂ ಅದನ್ನು ಬೇರೆ ವೈಯಕ್ತಿಕವಾದ ಕಾರಣ ಎಂದು ಖಂಡಿತ ಹೇಳುವುದಕ್ಕೆ ತಯಾರಿಲ್ಲ. ಇರುವ ಸ್ನೇಹ, ವಿಶ್ವಾಸ, ರಾಷ್ಟ್ರ ರಾಷ್ಟ್ರದ ಒಗ್ಗಟ್ಟು ಇವನ್ನು ಉಳಿಸುವ ದೃಷ್ಟಿಯಿಂದ ಇದಕ್ಕೆ ಒಪ್ಪಬೇಕಾಗಿದೆ. ಮತ್ತು ಎಲ್ಲಕಿಂತ ಹೆಚ್ಚಾಗಿ ರಾಜ್ಯಾಂಗದ ರೀತ್ಯಾ ನೋಡಿದರೆ ರಾಜಪ್ರಮುಖರ ಅಸೆಂಟ್‌ನಿಂದ ಪಾಸ್ ಮಾಡ ವ ಮಸೂದೆಯಾಗಿದ್ದರೆ ನಾವು ನಿಜವಾಗಿ ಇಷ್ಟೊಂದು ಕಾಂಪೆನ್ಸೇಷನ್ ಖಂಡಿತ ಕೊಡಲು ಒಪ್ಪುತ್ತಿರಲಿಲ್ಲ. ಆದರೆ ಇದು ಪ್ರೆಸಿಡೆಂಟರ ಅಸೆಂಟ್ ಇಲ್ಲದೆ ಅಂಗಿಕಾರವಾಗಿ ಜಾರಿಗೆ ಬರುವ ಹಾಗಿಲ್ಲ. ಪ್ರೆಸಿಡೆಂಟರು ಅಸೆಂಟ್ ಕೊಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಕೇಂದ್ರ ಸರ್ಕಾರದವರು ಬೇರೆ ಬೇರೆ ಸ್ಟೇಜ್‌ನಲ್ಲಿ ಬೇರೆಬೇರೆ ರೀತಿಯಾಗಿ ನಮ್ಮ ಸರ್ಕಾರಕ್ಕೆ ಕಾಂಪೆನ್ಸೇಷನ್ ಸೂಚನೆ ಮಾಡಿದ್ದಾರೆಂದು ಕೇಳಿದ್ದೇನೆ. ಒಂದಾನೊಂದುಕಾಲದಲ್ಲಿ 119ಲಕ್ಷರೂಪಾಯಿ ಮಾತ್ರ ಕೊಟ್ಟರೆ ಸಾಕೆಂದು ಭಾರತಸರ್ಕಾರದವರು ತಿಳಿಸಿದರು. ಅದಾದಮೇಲೆ 164 ಲಕ್ಷ ರೂಪಾಯಿ ಕೊಡಬೇಕಾಗುತ್ತದೆಂದು ಒತ್ತಾಯ ಮಾಡಿದರು ಎಂದು ನನಗೆ ತಿಳಿದುಬಂದಿದೆ. ಇಂಡಿಯಾ ಸರ್ಕಾರದವರು ಹೀಗೆ ಮಾಡುವಾಗ ನಮ್ಮ ಹಿತವನ್ನು ದೃಷ್ಟಿಯಲ್ಲಿಟ್ಟು

(ಶ್ರೀ. ಎ. ಭೀಮಪ್ಪನಾಯಕ್.)

ತಿಳಿಸಿದ್ದಾರೆಯೆ ಎಂಬ ಅನುಮಾನ ಸಹ ಒಂದೊಂದು ವೇಳೆ ಬರುತ್ತದೆ. ಅದೇನೇ ಇರಲಿ, ಈ ದಿವಸ ಇದನ್ನು ಇಂಟರ್‌ನ್ಯಾಷನಲ್ ದೃಷ್ಟಿಯಿಂದಲೂ ಕೂಡ ನೋಡಬೇಕಾಗಿ ಬರಬಹುದು. ಅಂತರ ರಾಷ್ಟ್ರೀಯ ದೃಷ್ಟಿಯಿಂದ, ಈ ದಿವಸ ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಣ ಮಾಡುವುದು ತಿಳಿದ ಕೂಡಲೆ ಭಾರಿ ಯುದ್ಧ ನಡೆಯುವ ಸೂಚನೆ ಕಂಡು ಬಂತು. ಆದ್ದರಿಂದ ಇಡೀ ಜಗತ್ತಿನ ಎಲ್ಲ ಭಾಗದ ಜನರೂ ಸೇರಿ ರಾಜಿ ಮಾಡಲು ಪ್ರಯತ್ನ ನಡೆಯುತ್ತಿದೆ. ಅದೇ ದೃಷ್ಟಿಯಿಂದ ಈಗ 119ಲಕ್ಷ ಎಂದಿದ್ದುದನ್ನು 164 ಲಕ್ಷಕ್ಕೇರಿಸಿದರು. ಈ ರೀತಿಮಾಡಿದರೆ ಸರ್ವಸಮ್ಮತವಾಗಿರುತ್ತದೆ ಮತ್ತು ಮುಂದೆ ತಕರಾರಿಗೆ ಅವಕಾಶವಿರುವುದಿಲ್ಲ ಎಂಬ ದೃಷ್ಟಿಯಿಂದ ಜಾಸ್ತಿಮಾಡಿರಬಹುದು. ಮುಂದಿನ ದೇಶದ ಹಿತದೃಷ್ಟಿಯಿಂದ. ಮುಂದೆ ನಮ್ಮಯುವಕರು ಮತ್ತು ಕೆಲಸಗಾರರಿಗೆ ದಕ್ಷತೆ ಹೆಚ್ಚಿ ಅಭ್ಯಾಸ ಮಾಡುವುದಕ್ಕೆ ಅವಕಾಶ ದೊರೆಯುವ ದೃಷ್ಟಿಯಿಂದ—ಹೊರದೇಶದ ತಜ್ಞರೇನಿದ್ದಾರೋ ಅವರು ಈ ಸ್ಥಳಬಿಟ್ಟು ಹೋಗಿ ನಮಗೆ ಸ್ಥಾನ ಕಲ್ಪಿಸುವ ದೃಷ್ಟಿಯಿಂದ ಏನೇ ಆಗಲಿ—ನಾವು ತೆಗೆದುಕೊಳ್ಳಬೇಕು. ಹೊರದೇಶದವರ ವಿಷಯದಲ್ಲಿ 5ವರ್ಷ ಅವರನ್ನಿಟ್ಟುಕೊಳ್ಳಬೇಕೆಂಬ ಸೂಚನೆಯಿದೆಯೆಂದು ಶ್ರೀ ಲಿಂಗಾರೆಡ್ಡಿಯವರು ಈಗ ತಾನೆ ಹೇಳಿದರು. ಹಾಗೇನಾದರೂ ಒಪ್ಪಿದರೆ ಅದಕ್ಕಿಂತ ಕೆಟ್ಟ ಅಪಘಾತ ಇನ್ನೊಂದಿಲ್ಲವೆಂಬುದು ನನ್ನ ಅಭಿಪ್ರಾಯ. ಅಗತ್ಯಕಂಡರೆ, ಸಂದರ್ಭ ಬಂದರೆ, ನಾವು ನಮ್ಮವರನ್ನು ತಯಾರಿಸುವುದಕ್ಕೆ ಅವಕಾಶವಿರಬೇಕು ಅವರ ಉಪಯೋಗ ಎಷ್ಟುಮಟ್ಟಿಗೆ ಬೇಕೋ—ಬೈಂಡಿಗ್ ಇಲ್ಲ—ಅಷ್ಟುಮಟ್ಟಿಗೆ ಅವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅಗತ್ಯ ಕಂಡರೆ ಕೆಲವು ದಿವಸ ಇಟ್ಟುಕೊಳ್ಳಬೇಕು, ಒಂದೇ ದಿವಸದಲ್ಲಿ ಓಡಿಸುವುದು ಧರ್ಮವಲ್ಲ ಎಂದು ಹೇಳುವುದಾದರೆ ಈ 5 ವರ್ಷದ ಬಂಧನವನ್ನು ಮಾತ್ರ ಹೇರಿಕೊಳ್ಳಬೇಡಿ, ಅದು ಸೂಕ್ತವಲ್ಲ, ನ್ಯಾಯವಲ್ಲ. ಈಗಲೂ ಕೂಡ ನಮ್ಮವರದೇ ಕಷ್ಟದ ಕೆಲಸ. ಬ್ರಿಟಿಷರು ಅಥವಾ ಹೊರದೇಶದವರು ಸೂಪರ್‌ವೈಸ್ ಮಾಡಬಹುದು. ನಮ್ಮ ವಿಶ್ವವಿದ್ಯಾನಿಲಯದಲ್ಲಿ ತಯಾರಾದಂಥ ನಮ್ಮ ಯುವಕರೂ ಸಹ ಬಹಳ ಬುದ್ಧಿವಂತರೇ. ಅವರಿಗೂ ಸಹ ಈ ದಿವಸ ಮೇಲ್ವಿಚಾರಣೆಮಾಡಲು ತಕ್ಕಷ್ಟು ಶಕ್ತಿಯಿದೆಎಂಬುದು ನನ್ನ ಭಾವನೆ. ಒಂದು ವೇಳೆ ಸಂದರ್ಭ ಬಂದರೆ ಹೊರಗಿನವರನ್ನು ಕರೆಸಬೇಕಾದರೂ ನಮ್ಮವರಿಗೆ ಶಕ್ತಿಯಿಲ್ಲ, ಹೊರಗಿನವರ ಸಹಾಯವಿಲ್ಲದೆ ನಮಗೆ ಏನು ಮಾಡುವುದಕ್ಕೂ ಶಕ್ತಿಯಿಲ್ಲ ಎಂದು ತಿಳಿಯುವುದಕ್ಕೆ ಅವಕಾಶವಿರಬಾರದು. ಎಷ್ಟೇ ಕಷ್ಟವಾದರೂ ನಮ್ಮವರ ಜವಾಬ್ದಾರಿಯಿಂದ ಎಲ್ಲಕೆಲಸವನ್ನೂ ಮಾಡಬೇಕು. ಕೆಲವರು ಹೇಳಿದಂತೆ 5 ವರ್ಷ ಕಾಲ ಈಗ ಕೆಲಸ ಮಾಡುತ್ತಿರುವ ವಿದೇಶೀ ಕಂಪೆನಿಯವರನ್ನು ಇಟ್ಟುಕೊಳ್ಳಲು ಒಪ್ಪುವುದು ಸೂಕ್ತವಲ್ಲ. ಒಟ್ಟಿನಲ್ಲಿ ಎಲ್ಲಾದೃಷ್ಟಿಯಿಂದಲೂ ವಿಮರ್ಶೆ ಮಾಡಿದರೆ ಈಗ ತಂದಿರುವ ಮಸೂದೆಯನ್ನು ನಾವು ಸರ್ವಾನುಮತದಿಂದ ಒಪ್ಪಿಕೊಳ್ಳುವುದು ಅಗತ್ಯ ಕೊಡುವ ಪರಿಹಾರ ಮತ್ತು ನಮ್ಮ ಮೇಲಿರುವ ಲಯಬಿಲಿಟಿ ನಾವು ಯೋಚನೆಮಾಡುವುದಕ್ಕಿಂತ ಜಾಸ್ತಿಯಾಗಿದ್ದರೂ ಕೂಡ ಅಂತರರಾಷ್ಟ್ರೀಯ ದೃಷ್ಟಿಯಿಂದ ವಿಧಿಯಿಲ್ಲದೆ ಒಪ್ಪ ಬೇಕೆಂದು ಹೇಳಿ ಸರ್ವಾನುಮತದಿಂದ ಅಂಗೀಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The House will now adjourn and meet at 3-30.

The House rose for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair.]

*Sri Mulka GOVINDA REDDY (Chitaldrug).—Mr. Speaker, Sir, I rise to support the Kolar Gold Mining Under-takings (Acquisition) Bill, 1956. I am doubly glad to support this in view of that a resolution tabled by my comrade Sri Gopala Gowda was unanimously passed by this august Assembly in its meeting held in Mysore in October 1955.

Sir, for the nationalisation of Kolar Gold Fields an incessant demand was made by members of the Legislature and the working population in K.G.F. since a long time. In pursuance of these demands the Government has undertaken to bring forward this Bill before us. I am glad that, in spite of protracted and prolonged discussions regarding the nationalisation of K.G.F. and in spite of the hurdles placed before the Government of Mysore by the British capital interest, Government have been able to bring forward this measure for the acceptance of this House.

Sir, in clause 9, they have provided the compensation to be paid to the Companies as Rs. 1.64 crores. Since 1870 these Companies have been exploiting these ores not for the benefit of the workers nor in the interest of the State but in the sole and only interest of making profits. They have made 20 to 22 times the profits out of the total amount invested in these mining companies. In certain years they have declared dividends to the extent of 150 per cent. Apart from what they have derived as dividend, they have secured other gains during the years they placed orders for purchase of machinery and other accessories for working out these mines. The salaries that have

been paid to the Managing Directors who were holding bulk shares in these Companies amount to nearly 10 to 20 per cent of the expenditure incurred in these mines. All told, Sir, they have got back nearly 40 times the investment they made in these Companies. Against the rupee value of the assets or share values of the shares of these Companies, they had invested nearly Rs. 175 lakhs and they have received nearly 80 crores by way of dividend, by way of salaries paid to the Managing Directors and European personnel working in these mines and apart from this they have paid nearly Rs. 8 crores to the United Kingdom by way of income-tax whenever they received huge sums. For the paltry sums of money that they invested in these Companies, it is unfair to claim any compensation for these mines and it is unfair on the part of the Government to concede to their request—in a way it was a demand. They thought that the Government of Mysore may not accede to the request mad by them for the compensation for acquiring these mines. These British capital interests have dubious ways of bringing pressure on the concerned authorities or persons. Through their agents or some other persons concerned, they have been able to influence the Government of India and able to get the lion's share being the compensation for these mines. The Home Minister was pleased to state that they had decided to pay compensation of Rs. 87 lakhs which was for the assets of the mines as valued at that time by the Government of Mysore. Afterwards the quantum was raised to 119 lakhs and now it has been raised to Rs. 164 lakhs. It is really mysterious how the compensation was doubled and how the Government of Mysore has been roped in to pay double the amount of what they had valued these assets. Apart from the compensation of Rs. 164 lakhs they have to incur or bear some other liabilities. The Companies have not provided funds for paying gratuity for the past services rendered by the workers in these mines. It should have been a definite charge on the compensation to be paid to these Companies. For what they have failed to pay towards gratuity fund, the Government of Mysore have not taken up that liability which has not been shown in the compensation that has to be paid to the Companies. If we add those Rs. 40 lakhs it will be nearly Rs. 2 crores 4 lakhs that Companies are going to receive as compensation from the Government of Mysore. The Company had taken moneys more than what the shares were worth in rupees and that amounted to Rs. 40 to Rs. 50 lakhs. The moneys that are held by these Companies in London are not going to form assets of these Companies. So much so, we are losing another Rs. 50 lakhs. In addition to all this, as per the Statement of Objects and Reasons, we have to place nearly 50 lakhs of rupees as working capital for running these mines. Sir, the figure that is required as working capital is a very small amount. As far as I know and as far I have gathered, we require at least 100 lakhs not only as working capital required for running these mines but also for developmental work. So much so, there is so much of financial responsibility and burden on the Government of Mysore that they might find it difficult to run these mines efficiently and they may be driven to the position of cutting down the facilities that have been given to the working population in those mines. I therefore plead that the compensation that is thought to be given to these Companies now is not only excessive but unwarranted and uncalled for. In view of the fact that these Companies have received nearly 40 times the capital that they had invested, they do not deserve any concession by way of compensation.

Sir, there must be some principle underlying for paying compensation when we acquire anything. When you have declared that we want to establish a Socialist Society, when we have declared that we want to narrow down the difference that is existing between the haves and have-nots, what moral right is there to pay those people who have already amassed large amount of money ? I would ask the Government, is it proper, is it moral, is it ethical to pay these British capitalist

(SRI MULKA GOVINDA REDDY.)
interests such huge compensation ? Sir, we know after the repeal of the Gold Duty Act by the Congress Government, Mysore State lost a good deal of income that was being derived from this Gold Duty. Extra funds got by the repeal of the Gold Duty were asked to be utilised for certain purposes as per the agreement.

In page 26 of the Report of the Committee constituted to examine the working of the Agreement of 1949 between the Government and the K.G.F. Mining Companies and allied matters, it is said as follows :—

> "The object of repealing the Gold Duty was to ensure the development and increase the longevity of the mines. It was definitely with this object that it was provided in the Agreement between the Government and the Companies that a certain rate of provision should be made for the purpose of development. But in the opinion of the Committee, this had not been fully complied with. The provision in the Agreement in this respect has been ignored and the necessity for a declaration of a dividend alone would seem to have been kept in view."

This would clearly indicate, Sir, that these Companies were not interested in developing these mines; they were interested in making profits and profits alone. With this frame of mind they have been working these mines and therefore they do not deserve any consideration at the hands of the Government. If however, it is thought that their services are needed for running these mines, I am sure that they will not be interested in running these mines in the interests of the State or the people, but they will be interested in running these mines in getting their salaries. It is unfair to entrust the running of these mines to such a Company if they think of it.

Regarding Section 5, it has already been stated sufficiently that sub-clause (2) and sub-clause (3) need not have been put in this Section. If it is said that the present Companies have shown discrimination with regard to pay and other things between Indian and Non-Indian personnel and if by these the Government have taken power to remove that discrimination that is existing between the Indian and non-Indian, then I will certainly have no objection. But if they is put in here with a view to rationalise and then ultimately retrench the workers, then I am opposed to these sub-clauses.

Sir, but for certain clauses which are obnoxious, I am one with the Government with regard to this Bill.

*SRI H. C. LINGA REDDY (Malur).—Sir, I rise to congratulate the Government on this great achievement of nationalisation of the Kolar Gold Industry, not merely in K.G.F. but even throughout the District. Including the Congressmen, we have urged several times that this industry should be nationalised. Though after a good deal of delay, the Government have thought fit to bring forward this measure, they deserve our hearty congratulations.

This Bill, Sir, marks a great landmark in the history of Mysore State. In fact, it is unique that even the Opposition have seen eye to eye with us and they have been almost sailing with us, and I do not know why they should still sit in the Opposition benches. Sri Hutche Gowda was just now mentioning that this is the second occasion when he is agreeing with the Government and so also the Leader of the Opposition—with regard to the nationalisation of the B.T.C. and with regard to the formation of the States. Again, Sir, when Congress Organisation itself has changed its motto to have a socialistic pattern of society, there is absolutely no necessity for Sri Imam to sit in the Opposition benches. Therefore, I would suggest to him that it is high time he joins the Congress along with his colleagues on the 1st of November 1956.

During the question hour I raised certain points to which the Hon'ble Sri Siddaveerappa, the Minister in-charge, said that these points may be raised now. In the discussion on the Bill, I am glad that many of our friends,

especially those coming from K.G.F., have given expression to those feelings and also apprehensions entertained by the labour in particular has been brought home to the members and also the Minister. Sri Siddaveerappa was kind enough to say that even after placing the Bill before the House, there are certain matters going on in correspondence between the State Government and the Central Government, but I do not know what form finally this Bill would take.

Sri H. SIDDAVEERAPPA.—Correspondence has not been entered into. What is a matter for correspondence is about the participation and continuance of the European personnel and various other things.

Sri. H. C. LINGA REDDY.—You were pleased to answer to a question put "whether it is a fact that the Government of India has suggested to the State Government that the European Officers will be given a guarantee for a period of 5 years," you stated that the "it is under the consideration of the State Government." Is it correct, Sir ?

Sri H. SIDDAVEERAPPA.—Consideration in the sense, the correspondence has not yet been entered into. I will just make a statement about it, because so many Hon'ble Members referring to it. I shall let you know have been the exact position while reply ing to the debate in general.

Sri H.C. LINGA REDDY.—Therefore, Sir, what I would like to submit on this point is, when you have provided here under Section 5 that the same terms of service be continued for all the officers including the employees—Indian and European, I think, if the Government were to make a discrimination between the Indian officers and the officials and the European officers and the officials, it will be frank discrimination and it would be unconstitutional and there will be absolutely no justification for it at all. Therefore I want an assurance on the part of the Government that they are not going to make any such discrimination between the Indian officers and employees and the European officers and employees. Sri Sydney A. Thomas was kind enough to read a telegram received by some important people from Delhi—though he was not in a position to quote the source, that the European officers and employees will be given a guarantee of five years. Therefore, if the Government were to categorically state that it will not be so, we will be really happy. And we urge and request the Government not to agree to any such discriminatory treatment to be meted out to the Indians.

Again, Sir, with regard to other query that was raised by me that there is again some correspondence going on between the State Government and the Central Government with regard to the running of the Industry in future, the Government have not so far categorically denied that there is no such correspondence or there is no such proposal. Therefore the apprehension is entertained by some that the same John Taylor and Company, after the nationalisation, would be in-charge of the running of the industry. As some of my friends already pointed out, that would be a thorough injustice and I would not like to add to the feeling of Sri Mascarenhas because that will be a matter for the Government to think of as to how best the industry has to be run. But what we have to take into consideration under present circumstances is, if the very same people who are today going out, who according to the report of Sri Siddaveerappa's Committee, have done so much injustice and who have exploited our interests to their advantage and are the people who had hitherto had their own interests, to seve if they again come back though the back door and work as managing gents, I am afraid thatit will not be in the interests of the people, the labour and the industry. Therefore, I want a categorical statement, an assurance from the Government on this point also that they are not going to continue the present proprietors to have any interests whatsoever in the future running of the industry.

No doubt you are taking a very bold and important step in the matter of nationalisation of the Gold Mining Industry. I want to know the arrangements you have made for running the

(SRI H. C. LINGA REDDY.)

industry in future. Probably you have a department for it just like the Transport Company or the Department in the Government; but my fear is in a technical matter like this, it is very important that the Govenment thinks ahead of the programme and the work that has to be undertaken rather than leaving it in a nebulous condition like this. No doubt, we will nationalise the industry and all that, but those of us who are in K.G.F. and who are nearer to K.G.F. know that there will be a good bulk of gold extracted in the mines, and there will be a good deal of smuggling. What is the supervisory arrangements that you have already made in this respect? You have merely thought of nationalising the industry and from November 31st it becomes an accomplished fact. If this is date to be implemented immediately, the mines would be vested with the Government. I want to know the arrangements made to run the existing industry. My apprehension is that the Government have not paid sufficient attention to this aspect of the matter.

4 P.M.

At any rate, we have not seen it. We are very anxious to see it and it is said in that area, if about half-a-dozen people were to make up their mind, it is so easy to take away all the gold and no gold will be left to you. Therefore, in spite of nationalising the industry, we will not be profiting in any manner to any extent at all. Therefore, Sir, I request the Government to give us a programme, to give us an idea of the arrangement you will be making with regard to running this industry.

I would like to suggest, as many of our friends suggested, the establishment of a Corporation, autonomous and independent having some experts in it and running the industry. I have definite information and I know personally also that there are very highly trained Indians who can run the industry without any difficulty provided they are made to work.

With regard to the services, Sir, no doubt, you have said that their terms will be continued in the future set up also. But specially in view of the Industrial Disputes Act that has come into operation, there is nothing harmful in adding a proviso that when rationalisation of services takes place, it will not be to the detriment of the labour or the workers. I am sure the Government will never discriminate or do any injustice to the labour. But now, why should we allow them to be provoked by this provision to the effect that the Government reserves the power to alter the conditions of service? Therefore, I would request the Government not to insist upon this clause but to add another proviso to the effect that when rationalisation of services takes place, it will not be to the detriment of the labourers.

With these few words, I support this Bill Sir.

* ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಕೋಲಾರ ಬಂಗಾರದಗಣಿ ಉದ್ಯಮಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುವುದಕ್ಕೆ ತಂದಿರುವ ಈ ಮಸೂದೆಯನ್ನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ನಾನು ಹೇಳಬೇಕೆಂದಿದ್ದೇನೆ. ಈ ಉದ್ಯಮವನ್ನು ಸರ್ಕಾರದವರು ವಶಪಡಿಸಿಕೊಳ್ಳುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆ. ಈ ಉದ್ಯಮದ ಚಾರಿತ್ರಿಕ ಹಿನ್ನೆಲೆಯನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಮಾಡಲು ಇಷ್ಟಪಡುವುದಿಲ್ಲ. ಆದಾಗ್ಯೂ ಕೂಡ ಈ ವಿಷಯದಲ್ಲಿ ನಮ್ಮ ಚಾರಿತ್ರಿಕ ಪ್ರಜ್ಞೆ ಜ್ವಲಿತವಾಗಿರಬೇಕು ಎನ್ನುವುದು ನನ್ನ ಅಭಿಪ್ರಾಯ. ಇನ್ನೊಂದು ಅಭಿಪ್ರಾಯವೇನೆಂದರೆ, ಇದು ರಾಷ್ಟ್ರೀಕರಣವಾಗಲಾರದು. ಯಾಕೆಂದರೆ ಸ್ಟರ್ಲಿಂಗ್ ಕಂಪೆನಿಯಿಂದ ರುಪೀ ಕಂಪೆನಿಗೆ ಇದು ಈಗಾಗಲೇ ಪರಿವರ್ತನೆ ಹೊಂದಿರುವ ಉದ್ಯಮ. ಈಗಿರುವುದು ಜಾನ್ ಟೇಲರ್ ಅಂಡ್ ಕಂಪೆನಿಯವರಿಗೂ ಮತ್ತು ಮೈಸೂರು ಸರ್ಕಾರದವರಿಗೂ ಆಗಿದ್ದಂಥ 1970 ನೆಯ ಇಸವಿಗೆ ಮುಕ್ತಾಯವಾಗುವ ಒಂದು ಕರಾರು ಅಥವಾ ಒಪ್ಪಂದವನ್ನು ಈಗಲೇ ನಾವು ರದ್ದುಗೊಳಿಸಬೇಕಾದ ಸಂದರ್ಭ ಬಂದಿರುವುದರಿಂದ ಆ ಉದ್ಯಮವನ್ನು ಸರ್ಕಾರ ತಾನೇ ನಡೆಸುವುದಕ್ಕೆ ಬಿಡಿಸಿಕೊಳ್ಳುತ್ತದೆ ಎನ್ನುವುದು ಒಂದು ಅಭಿಪ್ರಾಯ. ಖಾಸಗಿ ಉದ್ಯಮವನ್ನು ಸರ್ಕಾರ ವಹಿಸಿಕೊಳ್ಳುವುದಕ್ಕೆ ರಾಷ್ಟ್ರೀಕರಣವೆಂದು ಹೇಳುತ್ತಾರೆ. ಬಂಗಾರದ ಗಣಿಗಳನ್ನು ತೆಗೆದುಕೊಳ್ಳುವುದು ರಾಷ್ಟ್ರೀಕರಣವಾಗಲಾರದೆನ್ನುವ ಅಭಿಪ್ರಾಯವನ್ನು ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಉಳ್ಳವರಾಗಿದ್ದಾರೆ. ಅದೇನೇ ಇರಲಿ ಈ ಮಸೂದೆ. ಹಿಂದೆಯೇ ಪಾಸಾಗಬೇಕಾಗಿತ್ತು. ಆದರೆ ಶ್ರೀ ಮರಿಯಪ್ಪನವರು ಇದನ್ನು ಕೂಲಂಕಷವಾಗಿ ವಿಚಾರ ಮಾಡುವುದಕ್ಕೆ ಸಭೆಗೆ ಅವಕಾಶ ಕೊಡಬೇಕೆಂದು ಹೇಳಿದ್ದರಿಂದ ಬಹುಶಃ ಆದಿನ ಇದು ಅನುಮೋದನೆಯಾಗದೆ ಉಳಿಯಿತೆಂದು ಕಾಣುತ್ತದೆ. ಆದರೆ ಅವರು ಈ ದಿನ ಈ ಚರ್ಚೆಯಲ್ಲಿ ಇನ್ನೂ ಭಾಗವಹಿಸಿಲ್ಲ

ನಾನು ಮಾತನಾಡಿದ ಮೇಲೆ ಅವರು ಭಾಷಣ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನೊಂದು ಮುಖ್ಯವಾದ ವಿಷಯವನ್ನು ಶ್ರೀ ಭೀಮಪ್ಪನಾಯಕರು ಈಗತಾನೇ ಪ್ರಸ್ತಾಪ ಮಾಡಿದರು. 'ಪರಿಹಾರದ್ರವ್ಯ 87·82 ಲಕ್ಷದಿಂದ 119 ಲಕ್ಷಕ್ಕೆ ಹೋಗಿ ಈಗ 164 ಲಕ್ಷಕ್ಕೆ ಬಂದಿದೆ. ಇದು ಹೆಚ್ಚೆನ್ನುವುದೇ ನನ್ನ ಅಭಿಪ್ರಾಯ. ಆದರೂಕೂಡ ಸಂದರ್ಭವನ್ನು ಮತ್ತು ಒತ್ತಡವನ್ನು ಮೀರಲಾರದೆ ನಾವು ಒಪ್ಪಿಕೊಳ್ಳುತ್ತೀವೆ' ಎನ್ನುವ ಅಭಿಪ್ರಾಯವನ್ನು ಹೇಳಿದರು. ನಾನು ಮೊನ್ನೆ ಬೆಂಗಳೂರು ಟ್ರಾನ್ಸ್ ಪೋರ್ಟ್ ಕಂಪೆನಿಯ ರಾಷ್ಟ್ರೀಕರಣ ಮಸೂದೆ ಸಂಬಂಧದಲ್ಲಿ ಮಾತನಾಡುವಾಗ, ಮಾನ್ಯ ಮಂತ್ರಿಗಳು ಮಧ್ಯೆ ಮಾತನಾಡಿ ವೀಳೆಯದೆಲೆ ಅಡಿಕೆ ಕೊಟ್ಟರೆ ಸಾಕು ಎನ್ನುವುದು ನಿಮ್ಮ ಅಭಿಪ್ರಾಯವೇ ಎಂದು ಅವರು ಪ್ರಶ್ನೆಮಾಡಿದಾಗ, ನೀವು ವೀಳೆಯದೆಲೆ ಅಡಿಕೆ ಅವರಿಗೆ ಕೊಡಬೇಕು ಮತ್ತು ಅವರೂಕೂಡ ಸೌಹಾರ್ದ ಮತ್ತು ಸ್ನೇಹ ಮುಂದೆಯೂ ಉಳಿಯುವುದಕ್ಕೆ ನಿಮಗೆ ವೀಳೆಯದೆಲೆ ಅಡಿಕೆ ಕೊಡಬೇಕು, ಆಗ ಅದು ಒಳ್ಳೆಯ ಭ್ರಾತೃತ್ವದಮೇಲೆ ನಡೆಯುತಕ್ಕದ್ದಾಗುತ್ತದೆ ಎಂದು ಹೇಳಿದೆ. ಅದು ಹಾಸ್ಯದ ಮಾತಲ್ಲ. ನಿಜವಾಗಿಯೂ ನಾನು ಅದೇ ಅಭಿಪ್ರಾಯವನ್ನು ಈ ವಿಷಯದಲ್ಲಿ ಉಳ್ಳವನಾಗಿದ್ದೇನೆ. ಕಾರಣ ನಾನೇನೂ ಹೇಳಬೇಕಾದ್ದಿಲ್ಲ, ಚರಿತ್ರೆಯೇ ಹೇಳುತ್ತದೆ. ಬ್ರಿಟಿಷರು ವ್ಯಾಪಾರಕ್ಕಾಗಿ ಈ ದೇಶಕ್ಕೆ ಬಂದವರು, ದೇಶವನ್ನೇ ಗೆದ್ದರು. ಅವರ ಸಾಮ್ರಾಜ್ಯಶಾಹಿ ಪ್ರಪಂಚದಲ್ಲಿ ಸೂರ್ಯನು ಮುಳುಗುತ್ತಲೇ ಇರಲಿಲ್ಲ ಒಂದುಕಾಲದಲ್ಲಿ. ಆ ಕಾಲದಲ್ಲಿ ಇಂಡಿಯಾ ದೇಶವನ್ನು ಈಸ್ಟ್ ಇಂಡಿಯಾ ಕಂಪೆನಿಯವರು ಆಕ್ರಮಿಸಿಕೊಂಡರು. ಕೊನೆಗೆ ನಮ್ಮ ದೇಶವನ್ನು ಆಳತಕ್ಕ ಒಂದು ಶಕ್ತಿಯಾಯಿತು. ಹೀಗೆ ಸಾಮ್ರಾಜ್ಯಶಾಹಿ ಶಕ್ತಿ ಮತ್ತು ಬಂಡವಾಳಶಾಹಿ ಶಕ್ತಿ ಎರಡೂಸೇರಿ ನಮ್ಮ ದೇಶದಲ್ಲಿ ಇವೊತ್ತಿಗೂ ಅವುಗಳ ಪ್ರಭಾವವಿದೆ. ನಮ್ಮ ದೇಶ ಇವುಗಳ ಪ್ರಭಾವದಿಂದ ಮುಕ್ತವಾಗಿಲ್ಲ. ರಾಜಕೀಯದಿಂದ ಈಗ ಸ್ವಾತಂತ್ರ್ಯ ನಮ್ಮ ಕೈಗೆ ಬಂದಿದ್ದರೂಕೂಡ, ಇವೊತ್ತಿಗೂ ಇಂಡಿಯಾ ದೇಶದಿಂದ ವರ್ಷಕ್ಕೆ ಕನಿಷ್ಠ ಪಕ್ಷ 300 ಕೋಟಿ ರೂಪಾಯಿಗಳು ಲಾಭದ ರೂಪದಲ್ಲಿ ಹೊರಗಡೆ ಹೋಗುತ್ತಿದೆ.

ಇಂಡಿಯಾ ಸರ್ಕಾರದವರು ದೇಶದ ಅಭಿವೃದ್ಧಿಗಾಗಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪಾಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿದ್ದಾರೆ. ಅದಕ್ಕೆ ಪರದೇಶದವರ ಬಂಡವಾಳ ಮತ್ತು ಸಹಾಯ ಬೇಕಾಗಿದೆ. ಇಂಥ ಸಂದರ್ಭದಲ್ಲಿ ಮತ್ತು ಅಂತರರಾಷ್ಟ್ರೀಯ ಕಾರಣಗಳಿಗಾಗಿ ಎಲ್ಲರ ಜೊತೆಯಲ್ಲಿಯೂ ಮಿತ್ರತ್ವ, ಭ್ರಾತೃತ್ವ ಮತ್ತು ಶಾಂತಿ ಪಾಲನೆಗಾಗಿ ಸ್ನೇಹ ಸೌಹಾರ್ದಗಳಿರಬೇಕಾದ್ದು ಬಹಳ ಅಪೇಕ್ಷಣೀಯ ಮತ್ತು ಶ್ಲಾಘನೀಯವಾದ ಉದಾತ್ತ ಧ್ಯೇಯವೆಂದು ನಾನುಕೂಡ ತಿಳಿದುಕೊಂಡಿದ್ದೇನೆ.

ಶ್ರೀ ನೆಹರೂಅವರು ಸೂಯಜ್ ಕಾಲುವೆಯನ್ನು ರಾಷ್ಟ್ರೀಕರಣಮಾಡಿದ ನಾಸೆರ್‌ರವರನ್ನು ಹೊಗಳುತ್ತಾರೆ; ಅವರಿಗೆ ಬೆಂಬಲವನ್ನೂ ಸೂಚಿಸುತ್ತಾರೆ. ಅವರೆ ನೆಹರೂಅವರು ತಮ್ಮದೇ ಆಗಿರುವ ದೇಶದಲ್ಲಿ ಆಸ್ತಿಯಲ್ಲಿ ಒಂದು ಸಮಾನತೆಯನ್ನು ತಂದುಕೊಳ್ಳುವ ವಿಷಯ ದಲ್ಲಿ ಮತ್ತು ರಾಷ್ಟ್ರದ ಗೌರವವನ್ನು ಆರ್ಥಿಕ ಕ್ಷೇತ್ರದಲ್ಲಿ ಎತ್ತಿ ಹಿಡಿಯುವ ವಿಷಯದಲ್ಲಿ ರಾಜಕೀಯ ಕ್ಷೇತ್ರದಲ್ಲಿಯೂಕೂಡ ಗೋವ ಮತ್ತಿತರ ಉದಾಹರಣೆಗಳನ್ನು ತೆಗೆದುಕೊಂಡರೆ ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆನ್ನುವುದನ್ನು ನಾವು ಬಹಳ ವಿಷಾದದಿಂದ ಈ ಸಂದರ್ಭದಲ್ಲಿ ಮನಗಾಣಬೇಕಾಗಿದೆ. ಇಲ್ಲಿ ಅವರ ಪ್ರಸ್ತಾಪ ತರುವುದಕ್ಕೆ ಕಾರಣವೇನೆಂದರೆ, ಮೈಸೂರು ಸರ್ಕಾರದವರು, ಇಂಡಿಯಾ ದೇಶದ ಕಾನ್ಸ್ಟಿಟ್ಯೂಷನ್ ಆಧಾರದ ಮೇಲೆ "ಯಾವುದೇ ಒಂದು ಉದ್ಯಮವನ್ನು ಸರ್ಕಾರ ಕೈಗೆ ತೆಗೆದುಕೊಂಡಾಗ ನ್ಯಾಯವಾದ ಪರಿಹಾರವನ್ನು ಕೊಡುತ್ತೇವೆ" ಎಂದು 31ನೆ ಆರ್ಟಿಕಲ್ ಪ್ರಕಾರ ಕಟ್ಟುಬದ್ಧರುವುದರಿಂದ ನಾವು ಕೊಡಲೇಬೇಕಾಗುತ್ತದೆ ಎನ್ನುವ ಒಂದು ಧರ್ಮದಮೇಲೆ ಅವರು ಲೆಕ್ಕಹಾಕಿ 87·82 ಲಕ್ಷ ರೂಪಾಯಿ proper compensation ಆಗುತ್ತದೆಂದು ಕೇಂದ್ರ ಸರ್ಕಾರಕ್ಕೆ ಹೇಳುತ್ತಬಂದರು. ಅದು ಇವೊತ್ತು 164 ಲಕ್ಷವಾಗಿದೆ, ಅಂದರೆ ಒಂದಕ್ಕೆ ಎರಡರಷ್ಟಾಗಿದೆ. ಮತ್ತೆ ಈ Sterling Assets. ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ಹಾಗೆ ಯಾವ ಕಂಪೆನಿಯ ಪುನರುದ್ಧಾರಕ್ಕಾಗಿ ಅಥವಾ ಬೆಳವಣಿಗೆಗಾಗಿ ಆಸ್ತಿಗಳನ್ನು ಮಾಡಿದಲಾಯಿತೋ ಅಂಥ ಆಸ್ತಿಗಳನ್ನು ಕಂಪೆನಿಗಳು Sterling Company ಇಂದ Rupee Company ಗೆ ಬದಲಾಯಿಸಿದ ಮಾತ್ರಕ್ಕೆ ಮತ್ತು ಆ ಆಸ್ತಿ ಇಂಗ್ಲೆಂಡಿನಲ್ಲಿದ್ದ ಮಾತ್ರಕ್ಕೆ ಕೈಬಿಡಬೇಕೆನ್ನುವ ವಾದ ನನಗೆ ಅರ್ಥವಾಗುವುದಿಲ್ಲ. ಇದಕ್ಕೆ ಶ್ರೀ ವ್ಯಾಸ್ಕರೆನ್ಹಾಸ್‌ರವರು ಬಹಳ ಒಳ್ಳೆಯ technical interpretation, legal interpretation ಮಾಡಿದರು. ಬಹುಶಃ ಅವರು argue ಮಾಡುವುದಕ್ಕೆ ಮಾಡಿದರೆಂದು ತಿಳಿದುಕೊಂಡು ನಾನು ಸಮಾಧಾನಪಟ್ಟುಕೊಂಡೆ.

ಇನ್ನು ಶ್ರೀ ಭೀಮಪ್ಪನಾಯಕರು ಹೇಳಿದ ಪ್ರಕಾರ, liabilities ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸಾಮಾನ್ಯವಾಗಿ ಒಂದು ಉದ್ಯಮವನ್ನು ತೆಗೆದುಕೊಳ್ಳುವಾಗ assets and liabilities ಎರಡನ್ನೂ ಲೆಕ್ಕಹಾಕಿ ತೆಗೆದುಕೊಳ್ಳುತ್ತಾರೆ. ಆದರೆ ಮಾನ್ಯ ಮಂತ್ರಿಗಳು assets ಬಹಳ ಜಾಸ್ತಿಯಾಗಿದೆ, ಅದರ ಬಗ್ಗೆ ಅನುಮಾನ ಅಥವಾ ಗಾಬರಿ ಬೇಡವೆಂದು ಹೀಗೆ ಹೇಳಿ ನಮ್ಮನ್ನು ಸಮಾಧಾನಪಡಿಸಿದ್ದಾರೆ. ಇವೊತ್ತು liabilities ವಿಷಯದಲ್ಲಿ ಶ್ರೀ ಭೀಮಪ್ಪನಾಯಕರು ಹೇಳಿದ ಪ್ರಕಾರ ಸುಮಾರು 135 ಲಕ್ಷಕ್ಕೆ ಬರುತ್ತದೆ. ಸುಮಾರು ನಾಲ್ಕೈದು ವರ್ಷಗಳ ಬೋನಸ್ ಕೊಡಬೇಕು. ಗ್ರಾಚುಯಿಟಿಗೆ ಫಂಡ್ ಕ್ರಿಯೇಟ್ ಮಾಡಿರುವುದು ಏನಿದೆಯೋ ಅದನ್ನೂ ಕೊಡಬೇಕಾಗುತ್ತದೆ. ಇನ್ನೂ ಇತರ liabilities ಇವೆ. ಇವನ್ನೆಲ್ಲ ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಉದ್ಯಮವನ್ನು ನಡೆಸಲು ಸರ್ಕಾರದವರು ಕೇಳಿರುವಂತೆ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೂ ಕೂಡ ಇನ್ನೂ ಐವತ್ತು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಈಗಿರುವ ತುರ್ತು ಖರ್ಚಿನಿಂದ ಗೊತ್ತಾಗುತ್ತದೆ. ಹೀಗಿರುವಾಗ ಕಾಂಪೆನ್ಸೇಷನ್‌ಗೆ ಇಷ್ಟು ದೊಡ್ಡ ಮೊತ್ತವನ್ನು ಕೊಡಬೇಕೆಂದು ಮೈಸೂರು ಸರ್ಕಾರದ ಮೇಲೆ ಒತ್ತಡವನ್ನು ತಂದಿರತಕ್ಕ ಕೇಂದ್ರ ಸರ್ಕಾರದ ರಾಷ್ಟ್ರೀಯ ನಿಷ್ಠೆಯಾಗಲಿ ಅಥವಾ ಅವರಿಗಿರತಕ್ಕ ರಾಷ್ಟ್ರದ ಆರ್ಥಿಕ ಪ್ರಗತಿ ಅಥವಾ ಉನ್ನತಿಯನ್ನಾಗಲಿ ನಾನು ಬಹಳ ವಿಷಾದದಿಂದ ಪ್ರಶ್ನಿಸಬೇಕಾಗಿದೆ.

ಅಧ್ಯಕ್ಷರು.—ಅದನ್ನು ಯಾರು ಹೇಳಿದ್ದಾರೆ?

ಶ್ರೀ ಎಸ್. ಗೋಪಾಲಗೌಡ.—87.82 ಲಕ್ಷ ರೂಪಾಯಿಗಳು ಒಟ್ಟು ಕಾಂಪೆನ್ಸೇಷನ್ ಕೊಡಬೇಕೆಂದಿದ್ದೆವು ಎಂಬುದಾಗಿ. ಸರ್ಕಾರದವರು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಶ್ರೀ ಭೀಮಪ್ಪ

(ಶ್ರೀ ಎಸ್. ಗೋಪಾಲಗೌಡ.)

ನಾಯಕರು ತಿಳಿಸಿದ ಅಂಶಗಳನ್ನು ನಾನು ಬಳಸಿಕೊಳ್ಳುತ್ತಿದ್ದೇನೆ. ಆದರೆ ಅದನ್ನು ಪುಷ್ಟೀಕರಿಸುತ್ತೇನೆಂದಲ್ಲ. ಅವರು ಏನು ಹೇಳಿದರೆಂದರೆ-ನಮ್ಮ ರಾಜಪ್ರಮುಖರೇ ರುಜು ಹಾಕಿ, ಇಲ್ಲಿಯೇ ಅದು ಕಾನೂನು ಆಗತಕ್ಕ ಮಸೂದೆಯಾಗಿದ್ದ ಪಕ್ಷದಲ್ಲಿ ನಾವು ನಮಗೆ ಯೋಗ್ಯವೆಂದು ಕಂಡುಬಂದ ಪರಿಹಾರವನ್ನು ಕೊಟ್ಟು ಈ ಮಸೂದೆಯನ್ನು ಕಾನೂನು ಮಾಡಬಹುದಾಗಿತ್ತು, ಆದರೆ ಇದು ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ಪಡೆಯಬೇಕು, ಆದುದರಿಂದ ಇಂಡಿಯಾ ಸರ್ಕಾರದವರ ಸಮ್ಮತಿ ಅಥವಾ ಅನುಮತಿ ಇಲ್ಲದೆ ಈ ಮಸೂದೆಯು ಕಾನೂನಾಗುವುದು ಅಸಂಭವ ಎನ್ನುವ ಕಾರಣಕ್ಕಾಗಿ ಅವರು ಹೇಳಿರುವ ಅಥವಾ ಅವರು ಸೂಚಿಸಿರುವ ಒಂದು ಮಿತಿಗೆ ನಾವು ಒಪ್ಪಿಕೊಳ್ಳಬೇಕಾಯಿತು, ಮತ್ತು ಮೂರು ಜನರೂ ಅಂದರೆ ಇಂಡಿಯಾ ಸರ್ಕಾರದವರು, ಮೈಸೂರು ಸರ್ಕಾರದವರು ಮತ್ತು ಕಂಪೆನಿಗೆ ಸಂಬಂಧಪಟ್ಟ ಜಾರ್ಜ್ ಟೇಲರ್ ಕಂಪೆನಿಯವರು, ಸೇರಿ ಒಮ್ಮತವಾದ ಒಂದು ತೀರ್ಮಾನಕ್ಕೆ ಬರುವುದು ನ್ಯಾಯವಾದೀತು ಎನ್ನುವ ಕಾರಣಕ್ಕಾಗಿ, ಈ ಮೊಬಲಗನ್ನು ಒಪ್ಪಿಕೊಳ್ಳಬೇಕಾಯಿತು ಎಂದು ಅವರು ವಾದ ಮಾಡಿದ್ದಾರೆ. ಆದರೆ ಈ ಹೊತ್ತು ನಾವು ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದೇವೆ. ಈಗಾಗಲೆ ನಮಗೆ ಅಂತರರಾಷ್ಟ್ರೀಯ ಜವಾಬ್ದಾರಿ ಜಾಸ್ತಿಯಾಗಿದೆ; ನಮಗೆ ಸ್ವಾತಂತ್ರ್ಯ ಬಂದ 9—10 ವರ್ಷಗಳಲ್ಲಿ ಅದು ಜಾಸ್ತಿಯಾಗಿ ಅಂತರ ರಾಷ್ಟ್ರಗಳಲ್ಲಿ ಸಮಾನಸ್ಕಂದರೆಂಬ ಭಾವನೆ ಪಡೆಯಬೇಕೆಂದು ಪ್ರಯತ್ನಮಾಡುತ್ತಿದ್ದೇವೆ. ಇದು ಡಾ॥ ಲೋಹಿಯಾರವರು ಹೇಳುವ ಹಾಗೆ, exuberant internationalism ಆಗಿದೆ, ಎಗ್ಸೂಬರೆನ್ಸ್ ಇದೆ and we must become the heroes of the cease fire. ಈ ಭಾವನೆ ಬಹಳ ಜಾಸ್ತಿಯಾಗಿದೆ. ಇಂಥ ಒಂದು ಹೆಜ್ಜೆಯನ್ನು ಸಣ್ಣ ಒಂದು ಸಂಸ್ಥಾನ, ಮೈಸೂರು ಸಂಸ್ಥಾನ ಇಡುವಾಗ ನಾನು ಆಕ್ಷೇಪಿಸುವುದಿಲ್ಲ, ನೆಹ್ರೂ ಅವರು ಮತ್ತು ಅವರ ಸಹೋದ್ಯೋಗಿಗಳು ನಮಗಿಂತ ಹೆಚ್ಚು ದೃಢವಾದ ಹೆಜ್ಜೆಯನ್ನು ಈ ವಿಷಯದಲ್ಲಿ ಇಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಇದು ಸಣ್ಣ ಸರ್ಕಾರ, ಹಿಂದೆ ಹೇಳಿದ ಹಾಗೆ ಈ ಪ್ರಶ್ನೆ ಬರೀ ರಾಷ್ಟ್ರದ ಪ್ರಶ್ನೆಯಲ್ಲ. ಅಂತರರಾಷ್ಟ್ರೀಯ ಪ್ರಶ್ನೆಯಾಗುತ್ತದೆ. ಆದ್ದರಿಂದ ಆ ಒಂದು ದೃಷ್ಟಿಯಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕಾಗುತ್ತದೆ.

Mr. SPEAKER.—May I suggest to the Hon'ble Member and the House that it may be an advice and it is not binding on you. Therefore, you need not throw the blame on them. You can throw the Bill out or bring an amendment for lessening the compensation.

Sri H. SIDDAVEERAPPA.—I thank you, Sir. May I also add that they are not here to defend themselves. What is the good of criticising the Central Government who are not able to answer all the charges made by the Hon'ble Member? He may say the compensation paid is very excessive. No doubt, the Central Government has a right to tender advice because it comes under the concurrent list and also under article 31 it is incumbent to get the assent of the President before the Bill we pass becomes law. Therefore, they have tendered the advice. It is left to us to accept or reject.

Sri B. HUTCHE GOWDA.—Should we not comment on the advice?

Sri H. SIDDAVEERAPPA.—You better comment on me and say that I am wrong in having accepted the advice.

ಶ್ರೀ ಎಸ್. ಗೋಪಾಲಗೌಡ.—ಇದು ಅಜಾಗರೂಕತೆಯಿಂದ ಮಲಗಿರುವಾಗ ಮನೆಗೆ ಯಾರಾದರೂ ಬಂದು ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದರೆ ಆಗ ಎಚ್ಚರವಾದರೆ ನಮಗೂ ಸ್ವಲ್ಪ ಕೊಡಬಾರದೆ ಎಂದು ತೆಗೆದುಕೊಂಡು ಹೋಗುವವರನ್ನು ಕೊಳ್ಳೆಹೊಡೆದು ಲೂಟಿಮಾಡಿಕೊಂಡು ಹೋಗುವವರನ್ನು ಕೇಳುವ ಹಾಗಿದೆ.

Sri H. SIDDAVEERAPPA.—I would like the Hon'ble Member to be more explicit. What does he mean by 'kolle' and 'looty'? I want him to be more explicit and more clear. There is no meaning in talking in an ortatorical tone.

Sri S. GOPALA GOWDA.—What I mean by that is that India has been looted and plundered since so many years – nearly for one full century and this loot and plunder is still continuing and in some cases it has been going on under this so called Republic of India or Self-Government. So, what pains me very much is that. ಆ ರೀತಿ ಅಂಬೆಗಾಲು ಹಾಕಿಕೊಂಡು ಕೇಳುವ ಪರಿಸ್ಥಿತಿ ಈ ದಿವಸ ಏನಿದೆ? ಯಾವುದಾದರೂ ಒಂದು ವಿಷಯದಲ್ಲಿ ಮಸೂದೆ ಮಾಡುವಾಗ ನ್ಯಾಯವಾಗಿರಬೇಕು. ಅಂಥ ಅಡ್ವೈಜ್ ಪಡೆಯಬೇಕು. ಅವರಿಂದ ನಾವು ಅಡ್ವೈಜ್ ಕೇಳಬೇಕಾಗಿಲ್ಲ. ಇಂಥ ವಿಷಯದಲ್ಲಿ ಒಂದು ರಾಷ್ಟ್ರದ ಹಿತದೃಷ್ಟಿಯನ್ನಿಟ್ಟುಕೊಳ್ಳದೆ ಹೋದರೆ ಮತ್ತು ರಾಷ್ಟ್ರದ ಮತ್ತು ಜನದ ಗೌರವವನ್ನು ದೃಷ್ಟಿಯಲ್ಲಿಡದೇ ಹೋದರೆ ಪರಿಣಾಮವೇನೆಂಬುದನ್ನು ಯೋಚನೆಮಾಡಬೇಕು. ಹೊರದೇಶದ ಬಂಡವಾಳ ನಮ್ಮ ದೇಶದಲ್ಲಿರುವುದನ್ನು ಈ ಕ್ರಮದಲ್ಲಿ ನಾವು ತೆಗೆದುಕೊಳ್ಳುವುದಾದರೆ ಎಂದಾದರೂ ಈ ಕಾರ್ಯ ಸಾಧ್ಯವಾಗಬಹುದೆ? ಇದೊಂದು ದೊಡ್ಡ ಪ್ರಶ್ನೆಯಾಗುತ್ತದೆ. ಆದ್ದರಿಂದ ನಾವು ಸ್ವಲ್ಪ ಮಟ್ಟಿಗೆ ಎಲ್ಲೆಯನ್ನು ನೋಡಿಕೊಂಡು ಪರರ ಆಸ್ತಿಯ ಕಡೆ ಶ್ರದ್ಧೆವಹಿಸಬೇಕು.

ಶ್ರೀ ಎ. ಭೀಮಪ್ಪನಾಯಕ್.—ಅವರು ಬಂಡವಾಳ ಲೂಟಿ ಹೊಡೆದಿದ್ದಾರೆ, ಅವರಿಂದ ಹಾಗೆಯೇ ಲೂಟಿಹೊಡೆಯಬೇಕು ಎಂಬುದು ತಮ್ಮ ಅಭಿಪ್ರಾಯವೇ?

ಶ್ರೀ ಎಸ್. ಗೋಪಾಲಗೌಡ.—ಹಾಗಲ್ಲ. ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಶೋಷಣೆ ಮಾಡಿಕೊಂಡು ಬಂದಿರುವ ಸಂಸ್ಥೆ ಯಾವ ರಾಷ್ಟ್ರಕ್ಕೆ ಸೇರಿದೆಯೋ ಆ ರಾಷ್ಟ್ರದೊಡನೆ ಮತ್ತು ಸರ್ಕಾರದೊಡನೆ ನಾವು ಮೈತ್ರಿಯಿಂದ ಇರುವುದಕ್ಕೆ ಬಯಸಿರುವುದರಿಂದ ಮತ್ತು ಅವರೂ ಕೂಡ ನಮ್ಮ ಮೈತ್ರಿಯನ್ನು ಬಯಸಿರುವುದರಿಂದ ಹಾಗೆ ಮಾಡುವುದು ನ್ಯಾಯವಾಗಿದೆ ಎಂದು ಹೇಳಿದಂತಿದೆ. ಷರತ್ತಿನ ಒತ್ತಡ ಮತ್ತು ಕಾನೂನು ಒತ್ತಡ ನೋಡಿ ನಾವು ಮುಂದುವರಿಯುವಾಗ ಹೊರದೇಶ ಆ ರೀತಿ ಮುಂದುವರಿಯುತ್ತಿಲ್ಲ.

Appeas ment has got its own limitations. We cannot be so beggarly or we cannot be so humiliated before another nation in any deal. ಇದರಲ್ಲಿ ಯಾರಿಗೂ ಅನುಮಾನವಿಲ್ಲ. ನಮ್ಮ ದೇಶ ಮುಂದುವರಿಯಬೇಕಾದರೆ ಅಥವಾ ಏಷ್ಯಾ ದೇಶದ ಜನತೆ ಮುಂದುವರಿಯಬೇಕಾದರೆ ಧೈರ್ಯದಿಂದ ಹೆಜ್ಜೆಯಿಡಬೇಕಾಗುತ್ತದೆ. ಇದು ಅತಿ ಮುಖ್ಯವಾದ ವಿಷಯಕ್ಕೆ ಸಂಬಂಧಪಟ್ಟ ಮಸೂದೆ. ಮೈಸೂರು ಕಂಪೆನಿಯನ್ನು ಅಪೀಸ್‌ಮಾಡಿ ಪ್ರಪೋಸ್‌ಮಾಡಿರುವ ಕಾಂಪೆನ್‌ಸೇಷನ್ ತೀರ ಕಡಿಮೆ, ಅವರಿಗೆ ಹೆಚ್ಚಾಗಿ ಕೊಟ್ಟು ಸಂತೋಷಪಡಿಸಬೇಕು ಎಂದು ಡಿವೈಸ್ ಮಾಡಿರುವುದು ರಾಷ್ಟ್ರದ ಹಿತಕ್ಕೆ ಧಕ್ಕೆತರುವ ಸಲಹೆಯೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಅವರಿಗೆ ಲೀಸ್ ಇನ್ನೂ 14 ವರ್ಷವಿದೆಯಲ್ಲಾ ?

ಶ್ರೀ ಎಸ್. ಗೋಪಾಲಗೌಡ.—ಇದೆ, ಅದನ್ನು ಎಕ್ಸ್‌ಟೆಂಡ್‌ಮಾಡಿದರೆ ಕ್ರಿಸ್ತಶಕ ಎರಡುಸಾವಿರ ವರ್ಷಗಳವರೆಗೂ ನಡೆಯಬಹುದು. ಆ ಪ್ರಶ್ನೆ ಈಗಿಲ್ಲ. ಪರಿಹಾರವಾಗಿ ಸೂಚನೆಮಾಡಿರುವ ಮೊತ್ತವನ್ನು ನಾನು ವಿರೋಧಿಸುತ್ತೇನೆ ಮತ್ತು ಸಭೆ ಅದನ್ನು ಪುನಃಪರಿಶೀಲನೆ ಮಾಡಿ ಕಡಮೆ ಮಾಡಬೇಕು ಅಥವಾ ತಮ್ಮ ಲೆಕ್ಕದ ಪ್ರಕಾರ ಏನು ಕೊಡಬೇಕೆಂದಿದೆಯೋ ಅದನ್ನು ಕೊಡಬೇಕು ಎಂಬುದು ಪರಿಹಾರದ ವಿಷಯದಲ್ಲಿ ನನ್ನ ಅಭಿಪ್ರಾಯ.

ಇನ್ನೊಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ತಿಳಿಸಿದ್ದಾರೆ. ಅದು ಮ್ಯಾನೇಜ್‌ಮೆಂಟ್ ಮುಂದುವರಿಸುವ ವಿಷಯಕ್ಕೆ ಸಂಬಂಧಪಟ್ಟಿದೆ. ಟೆಕ್ನಿಕಲ್ ವಿಷಯದಲ್ಲಿ ಜಾನ್ ಟೈಲರ್ ಅಂಡ್ ಕಂಪೆನಿಯವರಿಗೆ ಪರಿಶ್ರಮವಿದೆಯೆಂದು ಹೇಳುವುದು ಬೇರೆ ವಿಷಯ. ಈ ಸಂದರ್ಭದಲ್ಲಿ ಕಾನೂನು ಮಾಡಿ ಹಿಂದಿನ ಬಾಗಿಲಿನಿಂದ ಅವರು ಬಂದು ಮೇಲೆ ಕುಳಿತುಕೊಳ್ಳುತ್ತಾರೆಂದು ಹೇಳಿದರೆ ಅದರಲ್ಲಿ ಅರ್ಥವಿಲ್ಲ. ಅವರನ್ನು ಸಲಹೆಪಡೆಯಲು ಸಂಬಳ ಕೊಟ್ಟು ನಾವು ಇಟ್ಟುಕೊಳ್ಳಬಹುದು. ಅದು ಬೇರೆ ಮಾತು. ಅವರು ಹೋಗಬೇಕೆಂದೇನೂ ಇಲ್ಲ.

We are not undertaking this as a vindictive measure. ಆಗಲೇ 'entered into correspondence' ಎಂದು ಹೇಳಿದರು. ಈ ವಿಷಯದಲ್ಲಿ, we need not enter into any correspondence. ಇಂಥ ಕರೆಸ್ಪಾಂಡೆನ್ಸ್‌ಗೆ ನಾವು ಹೋಗಬೇಕಾದ ಆವಶ್ಯಕತೆಯಿಲ್ಲ. ಏಕೆಂದರೆ ನಾವು ಸಣ್ಣ ಪ್ರಾಂತದವರು. ದೊಡ್ಡವರಿಂದ ಪ್ರೆಷರ್ ಬಂದಾಗ ಸೈನು ಹಾಕಬೇಕಾದ ಸಂದರ್ಭ ಬರಬಹುದು. ಆದ್ದರಿಂದ ಈ ವಿಷಯದಲ್ಲಿ ಅದನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲ. ಏಕೆಂದರೆ ಈಗ ಪರಿಹಾರ ಕೊಟ್ಟು ಕಂಪೆನಿಯ ಆಸ್ತಿಗಳನ್ನು ನಾವು ವಶಪಡಿಸಿಕೊಳ್ಳುತ್ತೇವೆಯೆ ಅಥವಾ ಜಾನ್‌ಟೈಲರ್ ಕಂಪೆನಿ ಮ್ಯಾನೇಜ್‌ಮೆಂಟ್ ನಾವು ತೆಗೆದುಕೊಳ್ಳಲು ಪರಿಹಾರಕೊಡುತ್ತೇವೆಯೇ ಎಂಬ ಪ್ರಶ್ನೆಯಿದೆ.

ಅಸೆಟ್ ತೆಗೆದುಕೊಳ್ಳುವುದು ಮತ್ತು ಲೀಸ್ ಟರ್ಮಿನೇಟ್‌ಮಾಡುವುದು ಎರಡೂ ಸೇರಿದೆಯೆಂದು ಹೇಳಿದರು. ಜಾನ್ ಟೈಲರ್ ಕಂಪನಿಯಿಂದ ಮ್ಯಾನೇಜ್‌ಮೆಂಟ್ ನಾವು ತೆಗೆದುಕೊಳ್ಳುವುದನ್ನೂ ಸೇರಿಸಿ ಕಾಂಪೆನ್‌ಸೇಷನ್ ಕೊಡುತ್ತೇವೆ, ಇದು ಮೂರನೆಯ ವಿಷಯ ಎಂದು ತಾವು ಹೇಳಬಹುದು. ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವುದು ಯಾವತ್ತೂ ಸರಿಯಾದ ಅಭಿಪ್ರಾಯವಲ್ಲ. ಸರ್ಕಾರ ಆ ರೀತಿ ಒಂದು ಒಪ್ಪಂದಕ್ಕೆ ಅಥವಾ ಮಾತುಕತೆಗೆ ಕೈಹಾಕಬಾರದೆಂಬುದೇ ನನ್ನ ಖಚಿತವಾದ ಅಭಿಪ್ರಾಯ.

ಇನ್ನು ಕಾರ್ಮಿಕರ ಹಿತದೃಷ್ಟಿಯಿಂದ ಹೇಳುವುದಾದರೆ ಅಲ್ಲಿ ಈ ದಿವಸ 20 ಸಾವಿರಕ್ಕೂ ಮೇಲ್ಪಟ್ಟು ಕೆಲಸ ನಡೆಸುತ್ತಿರುವಂಥ ಕಾರ್ಮಿಕರ ಸಮೂಹವಿರುತ್ತದೆಂದು ಆ ಕಾರ್ಮಿಕರ ಮುಖಂಡರಾದ ಶ್ರೀ ಕೆ. ಎಸ್. ಅವರು ಈಗತಾನೆ ತಿಳಿಸಿರುತ್ತಾರೆ. ಅವರಿಗೆ ಈ ಮಸೂದೆಯ ಬಗ್ಗೆ ಇರತಕ್ಕಂಥ ಅನುಮಾನಗಳನ್ನು ಮಾನ್ಯ ಒಳಾಡಳಿತ ಮಂತ್ರಿಗಳು ಪರಿಹಾರವಾಗತಕ್ಕ ರೀತಿಯಲ್ಲಿ ತಿದ್ದುಪಡಿಮಾಡುವುದು ಒಳ್ಳೆಯದು. ಅವರೀದಿವಸ ಆ ಕಂಪೆನಿಗಳ ಬೆನ್ನುಮೂಳೆಯಾಗಿದ್ದಾರೆ. ಅವರು ತಮ್ಮ ಪ್ರಾಣವನ್ನು ಸಹ ಹಿಂದುಮುಂದು ನೋಡದೆ ಕೊಡಬೇಕಾದಂಥ ಸನ್ನಿವೇಶಗಳು ಅಲ್ಲಿರುತ್ತವೆ. ಅವರ ಹಿತರಕ್ಷಣೆಯೇ ನಮ್ಮೆಲ್ಲರಿಗೂ ಇಂದಿನ ಮುಖ್ಯ ಗುರಿಯಾಗಿರಬೇಕು. ತಾವು ಈಗ ಈ ಮಸೂದೆಯ ಕ್ಲಾಜ್ 5ರ ಒಳಪ್ರಕರಣದ (2) ಮತ್ತು (3)ರಲ್ಲಿ ಹೇಳಿರತಕ್ಕ ವಿಚಾರದಲ್ಲಿ ಆ ಕಾರ್ಮಿಕರ ಹಿತದೃಷ್ಟಿಯಿಂದ ಇವುಗಳಿಗೆ ಸೂಕ್ತ ವಿನಾಯಿತಿಗಳನ್ನು ಕೊಟ್ಟರೂ ಸರಿ ಇಲ್ಲವೇ ಇವುಗಳ ತೀರ್ಮಾನವನ್ನು ಆ ಇಂಡಸ್ಟ್ರಿಯಲ್ ಪಂಚಾಯಿತಿಗೆ ಬಿಟ್ಟುಕೊಡುವುದು ಒಳ್ಳೆಯದೆಂದು ನಾನು ಒತ್ತಾಯಪಡಿಸುತ್ತೇನೆ.

ಇನ್ನೊಂದು ಸಣ್ಣ ವಿಚಾರವಿದೆ. ಅದೇನೆಂದರೆ ಇಲ್ಲಿಯ ತನಕ ನಮ್ಮ ಜೊತೆಯಲ್ಲಿಯೇ ನಮ್ಮ ಸಹ ಸದಸ್ಯರಾಗಿ ಕೆಲಸ ಮಾಡಿಕೊಂಡು ಬರುತ್ತಿರುವ ಶ್ರೀ ಸ್ವಾಮಿದೊರೈ ಮತ್ತು ಶ್ರೀ ಸಿಡ್ನಿ ಥಾಮಸ್‌ರವರು ಈ ಮಸೂದೆ ಪಾಸಾದ ಬಳಿಕ ಅವರ ಸದಸ್ಯಸ್ಥಾನಕ್ಕೆ ಕೊಂಚ ಧಕ್ಕೆ ಬರುತ್ತದೆ. ಈ ವಿಚಾರದಲ್ಲಿ ಅವರಿಗೆ ಉಂಟಾಗಬಹುದಾದ ಡಿಸ್‌ಕ್ವಾಲಿಫಿಕೇಷನ್ ಅಥವಾ ಆ ಅನರ್ಹತೆಗಳನ್ನು ತೊಡೆದುಹಾಕಲು ಸೂಕ್ತ ತಿದ್ದುಪಡಿಗಳನ್ನು ತಂದು ಅದನ್ನು ಸರಿಪಡಿಸುವುದು ಒಳ್ಳೆಯದು—ಉಚಿತವಾದುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಶ್ರೀ ಹುಚ್ಚೇಗೌಡರವರು ಅವರದೇ ಆದಂಥ ಒಂದು ಶೈಲಿಯಲ್ಲಿ ಮಾತನಾಡುತ್ತ ಅಲ್ಲಿರತಕ್ಕ ಡೈರೆಕ್ಟರುಗಳಲ್ಲಿ ಯಾರೋ ಒಬ್ಬರು ಅದರಲ್ಲೂ ನಮ್ಮವರಾಗಿರತಕ್ಕಂಥವರು ನಮಗೇನೂ ಹೆಚ್ಚಿನ ಸಹಾಯ ಮಾಡಲಿಲ್ಲವೆಂದು ತಿಳಿಸಿದ್ದಾರೆ. ಹಾಗೆ ನಮ್ಮವರಿದ್ದರೂ ನಮಗೆ ಉಪಕಾರಮಾಡಲಿಲ್ಲವೆಂದು ಹೇಳುತ್ತಿರುವ ವಿಚಾರದಲ್ಲಿ ಅದು ನಮ್ಮ ಇಂಡಿಯಾದೇಶದ ಒಂದು ದೌರ್ಭಾಗ್ಯವೆಂದು ಮಾತ್ರ ತಿಳಿಸಿದರೆ ಈ ಸಂದರ್ಭಕ್ಕೆ ಸಾಕು ಎಂದು ತೋರುತ್ತದೆ. "ಉಪ್ಪುತಿಂದ ಮನೆಗೆ ಎರಡು ಬಗೆಯುತ್ತಾರೆ" ಎನ್ನುವ ಗಾದೆ ನಮ್ಮ

(ಶ್ರೀ ಎಸ್. ಗೋಪಾಲಗೌಡ.)

ದೇಶದಲ್ಲೇ ಹುಟ್ಟಿದ್ದು. ಇದಕ್ಕನುಸಾರವಾಗಿ ಅವರು ಭಾರತ ದೇಶದ ಹಾಗೂ ಅವರ ಮೈಸೂರಿನ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಿಲ್ಲ ಎಂಬುದಕ್ಕಿಂತಲೂ ನಾನೇನೂ ಹೆಚ್ಚಾಗಿ ಹೇಳಲು ಇಷ್ಟಪಡುವುದಿಲ್ಲ. ಈ ದಿವಸ ಆ ಚಿನ್ನದ ಗಣಿಗಳ ಆಡಳಿತವರ್ಗದಲ್ಲಿ ಆ ಮ್ಯಾನೇಜಿಂಗ್ ವರ್ಗದವರು 2,000ಕ್ಕೂ ಮೇಲ್ಪಟ್ಟು ಪರದೇಶದ ಜನರಿರುತ್ತಾರೆ. ಇದರಂತೆಯೇ ಇನ್ನು ಎಷ್ಟೋ ನಮ್ಮ ಸ್ವದೇಶಿ ಸಂಸ್ಥೆಗಳಲ್ಲಿ ಇಂಡಿಯಾ ದೇಶದ ಬಂಡವಾಳ—ಪರದೇಶದವರ ಆಡಳಿತವಿದ್ದೇ ಇದೆ. ಈಗಾಗಲೇ ನಮ್ಮ ಸರ್ಕಾರ ಘೋಷಣೆ ಮಾಡಿರತಕ್ಕ ಆ ಸಮಾಜವಾದಿ ತತ್ವಗಳನ್ನು ಆಚರಣೆಗೆ ತರುವುದಾದರೆ ಯಾರು ಈ ಸಂಸ್ಥೆಗಳ ಅಭಿವೃದ್ಧಿಗೂ ಮತ್ತು ದೇಶಾಭಿವೃದ್ಧಿಗೂ ದುಡಿಯುತ್ತಿರುವರೋ ಅಂಥ ಜನರಿಗೆ ನೀವು ಹೆಚ್ಚು ಹೆಚ್ಚು ಸೌಕರ್ಯಗಳನ್ನು ಉಂಟುಮಾಡಿಕೊಡಬೇಕಾಗಿದ್ದು ಅತ್ಯಾವಶ್ಯಕ. ಇದರಿಂದ ಜನಗಳಲ್ಲಿ "ಇದು ನಮ್ಮದು" ಎನ್ನುವ ಭಾವನೆ ಮೂಡುತ್ತದೆ. ಈ ಅಂಶವನ್ನು ಕಾಂಗ್ರೆಸ್ ಪಕ್ಷದವರು ಎಲ್ಲಿಯತನಕ ಗಮನಿಸುವುದಿಲ್ಲವೋ ಅಲ್ಲಿಯವರೆಗೂ ಅವರು ಜನತೆಯ ನಿಷ್ಠೂರಕ್ಕೆ ತಲೆಕೊಡಲು ಸಿದ್ಧರಾಗಿರಬೇಕು. "ಅಕ್ಕಿಯಮೇಲೆ ಆಸೆ—ನೆಂಟರ ಮೇಲೆ ಪ್ರೀತಿ" ಎನ್ನುವಂತೆ ನಡೆಯಲು ಸಾಧ್ಯವಿಲ್ಲ. ಆದರೆ ಈ ದಿವಸ ನಮ್ಮ ಭಾರತದಲ್ಲಿ ಅಕ್ಕಿ ಮುಗಿಯಬಾರದು—ನೆಂಟರು ಬಿಡವಾಗಬಾರದೆಂದು ಹೇಳತಕ್ಕ ಜನ ಜಾಸ್ತಿಯಾಗಿರುತ್ತಾರೆ. ಇಂಥ ಜನರೇ ಈ ದಿವಸ ಆ ಕಾಂಗ್ರೆಸ್ಸಿಗೆ ಒಂದು ಹಿನ್ನೆಲೆಯ ಆಧಾರವಾಗಿ ನಿಂತುಕೊಂಡು ಇಂದು ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ. ಇಂಥ ಸಂಸ್ಥೆಗಳ ವಿಚಾರದಲ್ಲಿ ಈಗಾಗಲೆ ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು ಹೇಳಿರುವಂತೆ ಕಾರ್ಪೋರೇಷನ್‌ಗಳನ್ನು ನೇಮಿಸುವುದು ಬಹಳ ಒಳ್ಳೆಯದು. ಅದರಿಂದ ದುಡಿಯತಕ್ಕ ಜನರಲ್ಲಿ ಇದು ನಮ್ಮದು, ಇದರಿಂದ ನಾವು ಉದ್ಧಾರವಾಗುತ್ತೇವೆಂಬ ಭಾವನೆ ಅವರಿಗೆ ಹುಟ್ಟಲು ಅನುಕೂಲವಾಗಿರುತ್ತದೆ. ಹಾಗೆ ಮಾಡಲೇ ಬೇಕು. ಇಲ್ಲವಾದರೆ ಈ ದಿವಸ ಕೆಲವು ಸಂಸ್ಥೆಗಳು ಸ್ಟೇಟ್ ಕ್ಯಾಪಿಟಲ್ ಮೇಲೆ ಕೆಲಸ ನಡೆಸುತ್ತಿದ್ದಾಗ್ಯೂ ಆ ಕಂಪೆನಿಗಳ ಆಡಳಿತ ವಿಚಾರದಲ್ಲಿ ಈ ಕಾರ್ಮಿಕವರ್ಗವೇ ಬೇರೆ ಮ್ಯಾನೇಜಿಂಗ್ ಪಕ್ಷವೇ ಬೇರೆ ಎನ್ನುವ ಭಾವನೆಗಳು ಬಂದುಹೋಗಿವೆ. ಇಂಥ ಭಾವನೆಗಳುಂಟಾಗಲು ಅವಕಾಶವಿರಬಾರದೆಂದು ಹೇಳುತ್ತೇನೆ. ಈ ಭಾವನೆ ಆದಷ್ಟು ಬೇಗ ಹೋಗಬೇಕು. ಈ ಉದ್ಯಮಗಳಲ್ಲಿ ನಿರತರಾಗಿರತಕ್ಕವರೆಲ್ಲರಿಗೂ ಆ ಉದ್ಯಮದ ಬಗ್ಗೆ ವಿಶಿಷ್ಟ ಮಾಹಿತಿ—ತರಬೇತುಗಳೆಲ್ಲ ದೊರೆಯುವಂಥ ಅವಕಾಶಗಳಿರಬೇಕಾದದ್ದು ಅತಿ ಮುಖ್ಯವಾದದು. ಇಂಥ ಒಂದು ಜಾಗ್ರತಿಯನ್ನುಂಟುಮಾಡಬೇಕು ಆ ಕಾರ್ಮಿಕರಲ್ಲಿ. ಇಂಥ ಒಂದು ಸನ್ನಿವೇಶ ಬೆಳೆದು ಬಂದಹೊರತೂ ಕಾಂಗ್ರೆಸ್ಸಿನವರು ಸಾರಿರುವ ಆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪಿಸುವುದಕ್ಕಾಗುವುದಿಲ್ಲ. ತಾವು ಈಗ ತಂದಿರತಕ್ಕಂಥ ಮಸೂದೆ ಆ ನಿಮ್ಮ ತತ್ವಗಳಿಗೆ ಅನುಗುಣವಾಗಿರುವಂತೆ ಮಾಡಬೇಕಾದದ್ದು ನಿಮ್ಮ ಜವಾಬ್ದಾರಿ. ಹಾಗಿಲ್ಲವಾದರೆ ಅದೊಂದು "ಗತಜಲ ಸೇತು ಬಂಧನ" ಎನ್ನುವ ಸನ್ನಿವೇಶವಾಗಬಹುದು. ಯಾವುದೋ ಒಂದು ಕಾಲದಲ್ಲಿ ಆ ಹೊರರಾಷ್ಟ್ರದವರು ನಮ್ಮ ದೇಶದಲ್ಲಿ ಸುಮಾರು ಒಂದುಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಿ ನಮ್ಮ ದೇಶದಿಂದ ಅಪಾರ ಐಶ್ವರ್ಯವನ್ನು ಹೊಡೆದುಕೊಂಡು ಹೋದರು. ಆ ಉದ್ಯಮವು ಇಂದು ಎಷ್ಟೋ ವರ್ಷಗಳು ಗತಿಸಿದ ನಂತರ ನಮ್ಮ ಕೈಗೆ ಬರುತ್ತಿದೆ. ಆದರೆ ನಮ್ಮಲ್ಲಿ ಒಂದು ಚಪಲದ ಸಂಪ್ರದಾಯವಿದೆ. ಅದೇನೆಂದರೆ: 'ಶವದ ಮೇಲೆ ರೂಪಾಯಿಟ್ಟು ಅದಕ್ಕೆ ತುಪ್ಪ ಹಚ್ಚಿ, ಹೊಸ ಬಟ್ಟೆಯನ್ನು ಹಾಕುತ್ತಿರುವಂತೆ" ಈ ಸಂದರ್ಭದಲ್ಲೂ ಅದೇರೀತಿಯಲ್ಲಿ ಇಷ್ಟೊಂದು ಅಪಾರ ಹಣವನ್ನು ಹಾಕಲೇಬೇಕು, ಇದು ಅನಿವಾರ್ಯ ಎಂದು ಹೇಳಿದ್ದಾರೆ. ಆದರೆ ಈ ದಿವಸ ನನ್ನ ಬಾಯಲ್ಲಿ ಹೇಳಿದ ಹಾಗೆ ತಾವೇನೂ ಮಾಡುವುದಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ ನನ್ನ ಆಸೆಯಿರುವುದು ತಾವು ಈ ವ್ಯಾಪಾರದಲ್ಲಿ ಈ ಒಂದು ಕೋಟಿ ರೂಪಾಯಿಗಳನ್ನಾದರೂ ಉಳಿತಾಯಮಾಡಿ—ಆ ಮೊಬಲಗನ್ನಾದರೂ ಈ ಉದ್ಯಮದ ಏಳಿಗೆಗಾಗಿ ವಿನಿಯೋಗಿಸಿದ್ದರೆ ಆಗ ಆ ಹಣ ನಮ್ಮ ಬಡ ಜನರಿಗೆ ಉಳಿದಂತೆ ಆಗುತ್ತಿತ್ತಲ್ಲ ಎನ್ನುವುದೇ ಆಗಿದೆ. ಆ ರೀತಿ ಈಗಲೂ ಉಳಿಸಿದ್ದರೆ ಒಳ್ಳೆಯದು. ಇದಕ್ಕೆ ತಾವೆಲ್ಲರೂ ಪ್ರಯತ್ನಮಾಡಬೇಕು. ಆ ಹಣವನ್ನೇ ತಾವು ಮತ್ತೆ ಈ ಉದ್ಯಮಕ್ಕೆ ಬಳಸಲು ಸಹಾಯಕವಾಗುತ್ತದೆ.

ಆದರೆ ಕಟ್ಟಕಡೆಗೆ ಈ ಎರಡನೆಯ ರಾಷ್ಟ್ರೀಕರಣ ಮಸೂದೆಯೊಂದನ್ನು ಈ ಸಭೆಯ ಮುಂದೆ ಬರುವಂತೆ ಮಾಡಲು ನಮ್ಮ ಒಳಾಡಳಿತ ಹಾಗೂ ಕೈಗಾರಿಕಾ ಮಂತ್ರಿಗಳು ಪಟ್ಟಂಥ ಶ್ರಮವೇ ಬಹು ಅಭಿನಂದನೀಯವಾದದ್ದು. ಅವರು ಈ ಬಗ್ಗೆ ಬಹಳ ಶ್ರಮ ವಹಿಸಿದ್ದಾರೆ. ಅಷ್ಟೇ ಏಕೆ ಅವರು ಈ ವಿಚಾರದಲ್ಲಿ ಬಹಳ ಷಿವಲ್‌ರಸ್ ಆಗೇ ದುಡಿದಿದ್ದಾರೆ, even to the extent of incurring displeasure at high quarters. ಆದ್ದರಿಂದ ಈ ಸಭೆಯ ಪರವಾಗಿ ನಾವೆಲ್ಲರೂ ಅವರಿಗೆ ಚಿರಋಣಿಗಳಾಗಿರುತ್ತೇವೆಂದು ಹೇಳಿ ನಾನು ಈ ಮಸೂದೆಗೆ ನನ್ನ ಬೆಂಬಲವನ್ನು ನೀಡುತ್ತೇನೆ.

*SRI T. MARIAPPA.—Mr. Speaker Sir, on the last day when I wanted that the House should discuss this Bill in great detail, I had in my mind then that the world outside should know the generosity with which the foreign interests have been treated in India. I had that in mind and even while I stated that more attention should be devoted to the clauses of the Bill, I made it very clear that while we mete out justice to these foreign interests, we must also show to the world that it is not only justice that is done but it should also appear to be justice. That was my main idea in asking for a fuller debate on this Bill.

My Hon'ble friends have examined in detail the various clauses of the Bill. It is not necessary for me to reiterate what has already been done by more than one speaker. I would only draw the attention of this Hon'ble House to the clauses of this Bill in contradiction to the clauses of the Bangalore Transport Services Bill. That is an Indian Company and even on that

occasion the House was very generous. But when compared to those clauses, nevertheless I may say that we are more than just to a foreign investor in India. While we are taking over all the liabilities both shown here and not fully disclosed, in the case of the other Company, Sir, we were very reluctant to take over the payment of income-tax. Of course, the House was pleased to enhance the compensation to that Company so that the Company may not feel the be aggrieved.

Mr. SPEAKER.—This is an example that the crying child gets more !

ವೆಂದು ಹೇಳಿದ್ದನ್ನು ಆ ದಿವಸ ಅವರು ಒಪ್ಪಿದರು. ಅಂಥ ಒಂದು ಸಂದರ್ಭ ಈ ದಿವಸ ಇದೆ. ಅಷ್ಟೇ ಅಲ್ಲ. ಇಂಡಿಯಾ ದೇಶದ ಇಂಡಿಯನ್ ಆಫೀಸರುಗಳಿಗೂ ಮತ್ತು ಯೂರೋಪಿಯನ್ ಆಫೀಸರುಗಳಿಗೂ ಆ ದಿವಸ ಅನೇಕ ವ್ಯತ್ಯಾಸ ಕೂಡ ಮಾಡಿದ್ದಾರೆ. ಈ ಎಲ್ಲಾ ವ್ಯತ್ಯಾಸಗಳನ್ನೂ ಹೋಗಲಾಡಿಸಿ ಕೂಲಿಗಾರರಿಗೆ ಸಾಕಾದಷ್ಟು ಅನುಕೂಲ ದೊರೆಯುವ ಹಾಗೆ ಮಾಡಬೇಕಾದದ್ದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಇಷ್ಟು ಮಾತ್ರ ಅಲ್ಲದೆ ಈ ರೀತಿ ಸಂಬಳದ ಸ್ಕೇಲುಗಳನ್ನು ಜಾಸ್ತಿ ಮಾಡಿದ್ದರಿಂದ ಉತ್ಪತ್ತಿಯ ಖರ್ಚು ಜಾಸ್ತಿಯಾಗುವುದಕ್ಕೆ ಒಂದು ಅವಕಾಶವುಂಟಾಯಿತು. ಅಡ್ಮಿನಿಸ್ಟ್ರೇಷನ್ ಕೂಡ ಟಾಪ್ ಹೆವಿ ಆಗುವುದಕ್ಕೆ ಅವಕಾಶವಾಗಿ ಕಂಪೆನಿಯ ಖರ್ಚುವೆಚ್ಚ ಜಾಸ್ತಿಯಾಗಿ ಉತ್ಪತ್ತಿ ಖರ್ಚು ಜಾಸ್ತಿಯಾಗುವುದಕ್ಕೆ ಕಾರಣವಾಗಿದೆ.

ನಮ್ಮ ದೇಶದಲ್ಲಿರತಕ್ಕ ಇತರ ದೊಡ್ಡ ದೊಡ್ಡ ಯಾವ ಕಂಪೆನಿಗಳಿಗೇ ಆಗಲಿ ಈ ಚಿನ್ನದಗಣಿ ಕಂಪೆನಿಯಲ್ಲಿ ಕೊಡುತ್ತಿರುವಂಥ ಸಂಬಳ ಸಾರಿಗೆಗಳನ್ನು ಹೋಲಿಸಿ ನೋಡುವುದಾದರೆ ನಿಜವಾಗಿಯೂ ಯಾವ ಉದ್ಯಮದಲ್ಲೂ ಇಂಥ ಪೇ ಸ್ಕೇಲುಗಳನ್ನು ಇಟ್ಟುಕೊಂಡಿದ್ದ ಹಾಗೆ ಕಂಡುಬರುವುದಿಲ್ಲ. ಆ ಕಾರಣದಿಂದಲೇ ಇದನ್ನು ಸರಿಪಡಿಸಲು ಸರ್ಕಾರದವರು ತಮ್ಮ ಕಡೆಗೆ ಸಾಕಷ್ಟು ಅಧಿಕಾರವನ್ನಿಟ್ಟುಕೊಂಡಿರಬೇಕಾದದ್ದು ಆವಶ್ಯಕ ಎಂದು ಹಾಗೆಹೇಳಿದ್ದಾರೆ. ಆದರೆ ಆ ಕೂಲಿಗಾರರ ವಿಚಾರದಲ್ಲಿ ಶ್ರೀ ಸ್ವಾಮಿದೊರೈಅವರೂ, ಶ್ರೀ ಕೆ. ಎಸ್. ವಾಸನ್‌ರವರೂ ಬಹಳವಾಗಿ ಹೇಳಿದ್ದಾರೆ. ಆದರೆ ಆ ಕೂಲಿಗಾರರ ಹಿತರಕ್ಷಣೆಮಾಡಬೇಕೆಂಬ ವಿಚಾರದಲ್ಲಿ ಅವರಿಗಿಂತ ಹೆಚ್ಚಿನ ಒಂದು ಕನಿಕರ ನಮ್ಮಲ್ಲಿಲ್ಲವೆಂದು ಹೇಳುವುದಾದರೆ ಅವರಷ್ಟೇ ಕನಿಕರ ಅವರ ವಿಚಾರದಲ್ಲಿ ನಮ್ಮೆಲ್ಲರಿಗೂ ಸಹ ಇರುತ್ತೆಂದು ನಾನು ಅವರಿಗೆ ಭರವಸೆಕೊಡಬಲ್ಲೆನು. ಆದಕಾರಣ ಅವರು ಈ ಕ್ಲಾಜಿನಲ್ಲಿ ಸೇರಿಸಿರುವುದನ್ನು ತೆಗೆದುಹಾಕಿಬಿಡಿ ಎಂದು ಒತ್ತಾಯಪಡಿಸುವುದಕ್ಕೆ ಬದಲಾಗಿ ಅವರು ಸರ್ಕಾರದವರು ಈ ದಿವಸ ಕೊಡತಕ್ಕ ಭರವಸೆಯಲ್ಲಿ ನಂಬಿಕೆಯನ್ನಿಟ್ಟು ಅವರು ತಮ್ಮ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿ ಇತ್ತ ಕಡೆ ಸರ್ಕಾರದವರಾದರೂ ಆ ತಿದ್ದುಪಡಿಯನ್ನು ಒಪ್ಪಿಕೊಳ್ಳಬಾರದೆಂದು ಹೇಳಿ ಅವರನ್ನೂ ಪ್ರಾರ್ಥಿಸಿಕೊಳ್ಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಕೋಲಾರದ ಚಿನ್ನದ ಗಣಿಗಳ ಉದ್ಯಮವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುವ ಸಂಬಂಧದಲ್ಲಿ ಸರ್ಕಾರದವರು ಮಂಡಿಸಿರತಕ್ಕ ಗಣಿಗಳ ರಾಷ್ಟ್ರೀಕರಣ ಮಸೂದೆಗೆ ಶ್ರೀಮಾನ್ ಡಿ. ವೆಂಕಟೇಶ್‌ರವರು ಸೂಚಿಸಿರತಕ್ಕ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಶ್ರೀ ವೆಂಕಟೇಶ್‌ರವರು ತಮ್ಮ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸತಕ್ಕ ಸಮಯದಲ್ಲಿ ಸರ್ಕಾರದವರು ಅವರು ತಂದಿರತಕ್ಕ ತಿದ್ದುಪಡಿಯನ್ನು ಯಾವ ಕಾರಣಗಳಿಗೋಸ್ಕರವಾಗಿ ಅದನ್ನು ಒಪ್ಪಿಕೊಳ್ಳಬೇಕು ಎನ್ನುವುದನ್ನು ಚೆನ್ನಾಗಿ ವಿವರಿಸಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಆ ಚಿನ್ನದಗಣಿ ನೌಕರರಿಗೆ ಸಂಬಂಧಪಟ್ಟಿರುವ ಮತ್ತು ಇಲ್ಲಿ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಕೆ. ಎಸ್. ವಾಸನ್‌ರವರೂ ಮತ್ತು ಶ್ರೀ ಸ್ವಾಮಿದೊರೈಅವರೂ ಕೂಡ ಆ ತಿದ್ದುಪಡಿಯನ್ನು ಸಮರ್ಥಿಸಿ ಮಾತನಾಡಿರುತ್ತಾರೆ. ಇದರ ಜೊತೆಗೆ ಆ ಚಿನ್ನದ ಗಣಿ ಕಾರ್ಮಿಕ ಮುಖಂಡರುಗಳೆಲ್ಲರೂ ಒಟ್ಟಾಗಿ ಸೇರಿ ಸರ್ಕಾರಕ್ಕೊಂದು ಮನವಿಯನ್ನೂ ಸಲ್ಲಿಸಿರುತ್ತಾರೆ. ಆ ಮನವಿಯಲ್ಲಿ ಪ್ರಾಮುಖ್ಯವಾದಂಥ ಎಲ್ಲ ವಿಚಾರಗಳನ್ನೂ ಆ ಮುಖಂಡರುಗಳು ಪ್ರಸ್ತಾಪಿಸಿದ್ದಾರೆ. ಅವರೂ ಕೂಡ ಶ್ರೀ ವೆಂಕಟೇಶ್‌ರವರು ತಂದಿರುವಂಥ ತಿದ್ದುಪಡಿಯ ಮಾದರಿಯಲ್ಲಿ ಮಸೂದೆಯನ್ನು ತಿದ್ದುಪಡಿಮಾಡಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸಿರುತ್ತಾರೆ. ಇದೇ ವಿಚಾರದಲ್ಲಿ ಅದೇ ಕೋಲಾರಜಿಲ್ಲೆಯ ಇನ್ನೊಬ್ಬ ಪ್ರಮುಖ ವ್ಯಕ್ತಿಗಳಾದಂಥ ಶ್ರೀಮಾನ್ ಕೆ. ಪಟ್ಟಾಭಿರಾಮನ್‌ರವರೂ ಸಹ ಈ ತಿದ್ದುಪಡಿಯನ್ನು ಸರ್ಕಾರದವರು ಅನುಮೋದಿಸದಿದ್ದರೆ ಅವರಿಂದ ಅಲ್ಲಿಯ ಕೆಲಸಕ್ಕೆ ಎಷ್ಟರಮಟ್ಟಿಗೆ ಹಾನಿಯಾಗುತ್ತದೆಯೆನ್ನುವುದನ್ನು ತಿಳಿಸಿರುತ್ತಾರೆ. ಈ ತಿದ್ದುಪಡಿಗೆ ನನ್ನ ಗೆಳೆಯರಾದ ಶ್ರೀ ಮುಲ್ಕಾರವರೂ ಕೂಡ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಇನ್ನು ಶ್ರೀ ಹುಚ್ಚಮಾಸ್ತಿಗೌಡರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತ ಈ ಕ್ಲಾಜು ಬಹಳ ಅವಶ್ಯಕವೆಂದು ಹೇಳಿ ಅದಕ್ಕೆ ಕಾರಣ ತಿಳಿಸುತ್ತಾ ಇನ್ಷೂರೆನ್ಸ್ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡತಕ್ಕಂಥ ಮಸೂದೆಯಲ್ಲೂ ಕೂಡ ಇಂಥ ಒಂದು ಕ್ಲಾಜಿತ್ತು, ಈ ಮಸೂದೆಯಲ್ಲೂಕೂಡ ಅಂಥ ಒಂದು ಕ್ಲಾಜನ್ನು ಸೇರಿಸಲಾಗಿದೆ, ಆದರೆ ಈ ಚಿನ್ನದ ಗಣಿ ನೌಕರರಿಗೆ ಹೆಚ್ಚಿನ ರೀತಿಯ ಒಂದು ಸಂಬಳದ ಸ್ಕೇಲುಗಳನ್ನು ಇಟ್ಟುಕೊಂಡಿರುವುದರಿಂದ ಸರ್ಕಾರ ಈಗ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಆದರೆ ತಿದ್ದುಪಡಿಯನ್ನು ತಂದಿರತಕ್ಕ ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷದವರಾಗಿದ್ದರೂ ಅವರು ಅವರ ಒಂದು ಪಾರ್ಟಿಯ ಶಿಸ್ತಿಗೆ ಒಳಪಟ್ಟಿದ್ದರೂ ಕೂಡ ಸರ್ಕಾರದವರು ಈ ತಿದ್ದುಪಡಿಯನ್ನು ಅವರು ವಾಪಸು ತೆಗೆದುಕೊಳ್ಳುವಂತೆ ಒತ್ತಾಯ ಮಾಡಿದರೂ ಕಾರ್ಮಿಕರ ಮುಖಂಡನಾಗಿರುವುದರಿಂದ ನಾನು ಅದನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ತಮ್ಮ ಭಾಷಣದ ಕಾಲದಲ್ಲಿ ಹೇಳಿದರು. ಹೌದು. ಅವರು ಹಾಗೆ ಕಾರ್ಮಿಕ ಸಂಘದ ಮುಖಂಡರಾಗಿ ಹೇಳುತ್ತಿರುವಾಗ ಅವರ ವಾದ ಈ ಪಾರ್ಟಿಯಲ್ಲಿ ಒಂದು ನಾಟಕವೆಂದು ಆಗಬಾರದು. ಆದರೆ ಅವರು ಕೇಳುತ್ತಿರುವ ರೀತಿಯಲ್ಲಿ ತಾವು ಈ ಹೊತ್ತು ಈ ಸಭೆಯಲ್ಲಿ ಕೊಡತಕ್ಕಂಥ ಭರವಸೆ ಮತ್ತು ಆಶ್ವಾಸನಗಳಿಗಿಂತಲೂ ಕಾನೂನಿನಲ್ಲಿ ಬರವಣಿಗೆ ಮಾಡಬೇಕೆಂಬುದು ಬಹಳ ಮುಖ್ಯವಾದುದು. ಸರ್ಕಾರದವರು ನಮಗೆ ಈ ಹಿಂದೆ ಇದೇ ಸಭೆಯಲ್ಲಿ ಹೀಗೆ ಭರವಸೆಗಳನ್ನು ನೀಡಿದ್ದು ಅವುಗಳನ್ನು ಕಾರ್ಯರೂಪಕ್ಕೆ ತಂದಾಗ ಆ ರೀತಿ ಮಾಡದೆ ವ್ಯತಿರಿಕ್ತವಾಗಿ ಮಾಡಿರತಕ್ಕಂಥ ನಿದರ್ಶನಗಳೆಷ್ಟೋ ಇವೆ. ಉದಾಹರಣೆಗಾಗಿ ಹೇಳುವುದಾದರೆ ಲೌಡ್‌ಸ್ಪೀಕರ್‌ಗಳ ವಿಚಾರದಲ್ಲೂ ಇಂಥಾದ್ದೇ ಒಂದು ಕ್ಲಾಜಿತ್ತು. ಅದನ್ನು ಬದಲಾಯಿಸಬೇಕೆಂದು ಕೇಳಿದಾಗ ಅಂಥ ತೊಂದರೆಗಳಿಗೇನೂ ಅವಕಾಶಕೊಡುವುದಿಲ್ಲವೆಂಬುದಾಗಿ ಆ ದಿವಸ ಮಾನ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಆ ದಿವಸ ಮಾನ್ಯಮಂತ್ರಿಗಳು ಆ ಮಸೂದೆಯನ್ನು ಪಾಸ್ ಮಾಡಿಸಿಕೊಳ್ಳುವ ಸಂದರ್ಭ ಬಂದಿದ್ದಾಗ ಯಾರೋ ಕೆಲವರು ಎಲ್ಲಿಯೋ ಕೆಲವರಿಗೆ ಸಿಲೋನ್ ಮತ್ತು ಪಾಕೀಸ್ತಾನದ ರೇಡಿಯೋಗಳನ್ನು ಹಾಕಿಕೊಂಡು ಅಕ್ಕಪಕ್ಕದವರಿಗೆ ವಿಶೇಷವಾಗಿ ತೊಂದರೆ ಕೊಡುತ್ತಿದ್ದಾರೆ; ಅಂಥಾ ಪ್ರಸಂಗಗಳನ್ನು ಮೊಟಕುಮಾಡುವುದಕ್ಕಾಗಿ ನಮಗೊಂದು ಅವಕಾಶಬೇಕಾಗಿದೆ ಅದಕ್ಕಾಗಿ ನೀವು ಒಪ್ಪಿಗೆಕೊಡಿ ಎಂದು ಕೇಳಿದ್ದರು. ಆದರೆ ನಮಗೆ ಸರ್ಕಾರದವರು ಆ ದಿವಸ ಕೊಟ್ಟಿದ್ದಂಥ

(ಶ್ರೀ ಎಸ್. ಗೋಪಾಲಗೌಡ.)

ಭರವಸೆಗೆ ವಿರುದ್ಧವಾಗಿ ಈ ದಿವಸ ಆ ಕಾನೂನನ್ನು ಹೇಗೆ ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ ಎನ್ನುವುದು ನಮಗೆ ಚೆನ್ನಾಗಿ ಗೊತ್ತಾಗಿದೆ. ಈ ದಿವಸ ಈ ತಿದ್ದುಪಡಿಯಲ್ಲಿ ಕೇಳಿರತಕ್ಕಂಥ ಕೆಲವು ಹಕ್ಕುಗಳನ್ನು ಆ ಕಾರ್ಮಿಕರೂ ತಮ್ಮ ಶತಮಾನಗಳ ಶ್ರಮದಿಂದ ಗಳಿಸಿಕೊಂಡಂಥಅ ಮೂಲ್ಯವಾದ ಹಕ್ಕುಗಳಾಗಿರುತ್ತವೆ. ಈ ದಿವಸ ಅವರು ಕೇಳುತ್ತಿರುವಂಥ ಹಕ್ಕುಗಳು ಅವರ ತಮ್ಮ ಮೂರು ನೂರು ವರ್ಷಗಳ ಇತಿಹಾಸದಲ್ಲಿ ಅವಲೋಕಿಸಿ ನೋಡುವುದಾದರೆ ಒಂದು ತೀರ ಸಣ್ಣ ಹಕ್ಕಿಗೂ ಕೂಡ ಅವರು ಪ್ರಾಣಗಳನ್ನು ತೆತ್ತಿರುವುದಲ್ಲದೆ ಅದರ ಬಗ್ಗೆ ರಕ್ತವನ್ನೂ ಸಹ ಚೆಲ್ಲಿ ಅದನ್ನು ಸಂಪಾದಿಸಿಕೊಂಡಿರುತ್ತಾರೆಂಬುದು ಮನವರಿಕೆಯಾಗದೆ ಇರದು. ಆದರೆ ಅವರು ಈ ಹಿಂದಿನಿಂದಲೂ ತಮ್ಮ ಹಕ್ಕು ಸಂಪಾದನೆಗಾಗಿ ಎಷ್ಟು ಉಜ್ವಲವಾದಂಥ ಹೋರಾಟಗಳನ್ನು ನಡೆಸಿಕೊಂಡು ಬಂದಿರುತ್ತಾರೋ ಅಷ್ಟೇ ಉಜ್ವಲವಾದ ಹೋರಾಟಗಳನ್ನು ಮಾಡಿ ಈ ಕೆ. ಜಿ. ಎಫ್. ಗಣಿಗಳ ಉದ್ಯಮದಲ್ಲೂ ಆ ಹಕ್ಕುಗಳನ್ನು ಗಳಿಸಿರುವರು. ಆದರೆ ಈ ಹಿಂದೆ ಒಂದಾನೊಂದು ಕಾಲದಲ್ಲಿ ಆ ಗಣಿಗಳ ಮ್ಯಾನೇಜಿಂಗ್ ಅಧಿಕಾರವರ್ಗದವರು ಈ ಕಾರ್ಮಿಕರನ್ನು ಎಚ್ಚರಗೊಳಿಸತಕ್ಕ ಸೋಗಿನಲ್ಲಿ ಈ ಗಣಿಗಳ ಉದ್ಯಮವೇನಾದರೂ ರಾಷ್ಟ್ರೀಕರಣವಾದ ಪಕ್ಷದಲ್ಲಿ ಅನಂತರ ಕಾರ್ಮಿಕವರ್ಗದವರಾದ ನೀವು ಇಂದು ನಾವು ಕೊಡುತ್ತಿರುವಂಥ ವಿಶೇಷ ರೀತಿಯ ಸೌಲಭ್ಯಗಳನ್ನೆಲ್ಲ ಕಳೆದುಕೊಳ್ಳಬೇಕಾಗುತ್ತದೆಂದು ಹೇಳಿದಾಗ ಆ ಕಂಪೆನಿಯವರು 20 ಸಾವಿರ ಕಾರ್ಮಿಕರನ್ನು ಈ ಒಂದುಸೋಗಿನಲ್ಲಿ ಎತ್ತಿ ಕಟ್ಟಿ ಈ ರಾಷ್ಟ್ರೀಕರಣ ಕಾರ್ಯಕ್ಕೆ ಕಲ್ಲು ಹಾಕಲು ಪ್ರಯತ್ನಿಸಿದ್ದರು. ಆದರೆ ಅಂಥ ಸಮಯದಲ್ಲಿಯೂ ಈ ಕಾರ್ಮಿಕವರ್ಗ ಅವರ ಮಾತಿಗೆ ಕಿವಿಗೊಡದೆ ತಮ್ಮ ರಾಷ್ಟ್ರಾಭಿಮಾನ-ರಾಷ್ಟ್ರ್ಯಾಭಿಮಾನಕ್ಕೆ ಮನ್ನಣೆಕೊಟ್ಟು ಈ ರಾಷ್ಟ್ರೀಕರಣಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡಿರುತ್ತಾರೆ. ಅವರು ಹಾಗೆ ವರ್ತಿಸಿದ್ದರಿಂದ ಸರ್ಕಾರದವರಿಗೆ ಈ ಗಣಿಗಳ ಉದ್ಯಮವನ್ನು ಬಹು ಸುಲಭವಾಗಿ ರಾಷ್ಟ್ರೀಕರಣಮಾಡಿಕೊಳ್ಳಲು ಅವಕಾಶವಾಯಿತು ಎನ್ನುವ ಅಂಶವನ್ನು ದಯವಿಟ್ಟು ಯಾರೂ ಮರೆಯಬಾರದು. ಆ ಕಾರ್ಮಿಕರು ಹಾಗೆ ನಿರ್ವಂಚನೆಯಿಂದ ವರ್ತಿಸಿರುವಾಗ ನಾವು ಇಂಥ ಮಸೂದೆಗಳನ್ನು ತಯಾರಿಸುವಾಗ ಅವರ ಹಿತವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಈ ಬಿಲ್ಲನ್ನು ತಯಾರಿಸುವುದು ವಿಹಿತವಾಗಿದೆ. ಆದರೆ ಇಲ್ಲಿ ನಾವು ಪರಿಶೀಲಿಸಬೇಕಾದ ಅಂಶ ಇನ್ನೂ ಒಂದಿದೆ. ಈ ದಿವಸ ಅಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ವರ್ಗದಲ್ಲಿ ಇಂಡಿಯನ್ನರು—ಐರೋಪ್ಯರು ಮತ್ತು ಆಂಗ್ಲೋ ಇಂಡಿಯನ್ನರು ಎಂದು ಮೂರು ವಿಭಾಗಗಳಿರುತ್ತವೆ. ಆದರೆ ಈ ದಿವಸ ಈ ಮೂರು ಪಂಗಡಗಳವರಿಗೂ ಕೊಡಲಾಗುತ್ತಿರುವ ಸಂಬಳ ಸಾರಿಗೆ ಮತ್ತು ಇತರೇ ಸೌಕರ್ಯಗಳವಿಚಾರದಲ್ಲಿ ತುಂಬಾ ತಾರತಮ್ಯವಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅಂತೂ ಈ ದಿವಸ ಅಲ್ಲಿ ಇನ್ನೂ ಈ ಜನಾಂಗಗಳಲ್ಲಿ ಒಂದು ಮೇಲು ಇನ್ನೊಂದು ಕೀಳು ಎನ್ನುವ ಭಾವನೆ ಇದ್ದೇ ಇದೆ. ಆದರೆ ಈ ಭೇದವನ್ನು ಆದಷ್ಟು ಜಾಗ್ರತೆ ತೊಡೆದುಹಾಕಲೇ ಬೇಕು ಇದಕ್ಕಾಗಿ ಸರ್ಕಾರ ಕೆಲವು ಅಧಿಕಾರಗಳನ್ನು ಹೊಂದಿರಬೇಕೆಂಬುದು ಅಗತ್ಯವಾದುದು. ಈ ಡಿಸ್ಕ್ರಿಮಿನೇಷನ್ ಕೂಡಲೇ ಕೊನೆಗಾಣಲೇ ಬೇಕೆಂಬುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಈಗ ಈ ಕ್ಲಾಜ್ (5)ರ ಒಳ ವಿಧಿ (2) ಮತ್ತು (3)ರಲ್ಲಿ ಹೇಳಿರುವ ಅಂಶ ಆ ಕಾರ್ಮಿಕರ ಹಿತವನ್ನು ಮೊಟಕುಮಾಡತಕ್ಕವುಗಳಾಗಿವೆ. ಈ ಗಣಿಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡನಂತರ ಯಾವ ಕಾರ್ಮಿಕನನ್ನಾಗಲಿ ಯಾವುದೋ ಒಂದು ಕಾರಣದಿಂದ ರಿಟ್ರೆಂಚ್ ಮಾಡಬೇಕೆಂಬ ಸನ್ನಿವೇಶ ಉಂಟಾದಾಗ ಅವನಿಗೆ ಶಾಸನಬದ್ಧವಾಗಿ ಬರತಕ್ಕ ಕಾಂಪೆನ್ಸೇಷನ್ ಏನಿರುತ್ತದೋ ಅದಕ್ಕೆ ಪ್ರತಿಯಾಗಿ ಅವನಿಗೆ ಮೂರು ತಿಂಗಳ ಸಂಭಾವನೆಗೆ ಸಮನಾಗುವಷ್ಟು ಪರಿಹಾರ ಮಾತ್ರ ಕೊಡಲಾಗುತ್ತದೆಂದು ತಿಳಿಸಿದೆ. ಆದರೆ ನಿನ್ನೆ ತಾನೆ ಮಾನ್ಯ ಮಂತ್ರಿಗಳು ಮಾತನಾಡುವಾಗ ಯಾರಾದರೊಬ್ಬ ಕಾರ್ಮಿಕ ಅವನು useless ಉಪಯೋಗವಿಲ್ಲ ಎಂದು ಕಂಡುಬಂದಾಗ ಅಂಥ ಸಮಯದಲ್ಲಿ ಅಂಥ ಮನುಷ್ಯನನ್ನು ತೆಗೆದುಹಾಕಲು ನಮಗೆ ಒಂದು ಅಧಿಕಾರಯುತವಾದ ಅವಕಾಶ ಕೊಡಿ ಎಂದು ಕೇಳಿದರು. ಹಾಗೆ ನಾವು ಈ ದಿವಸ ಒಂದುವೇಳೆ ಅವರು ಹೇಳಿರತಕ್ಕದ್ದು ಸ್ವಾಭಾವಿಕವಾಗಿಯೇ ಇದೆಯೆಂದು ಒಪ್ಪಿಗೆಯನ್ನು ಕೊಟ್ಟಬಳಿಕ ನಾಳೆ ಅವರು ಯಾರೋ ಒಬ್ಬ ಕೂಲಿಗಾರ ತಮಗೆ ಬೇಕಾಗದವನೊಬ್ಬ ಇದ್ದಾಗ ಅವನನ್ನು ಕೆಲಸದಿಂದ ತೆಗೆಯಲೇಬೇಕೆಂಬ ನೆಪಕ್ಕಾಗಿ ಅವನು useless ಕೆಲಸಕ್ಕೆ ಬಾರದವನೆಂದು ಈ ಅವಕಾಶವನ್ನು ಆ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶವಿಲ್ಲವೆಂಬುದನ್ನು ನಾವು ಹೇಗೆ ತಿಳಿಯಬೇಕು ? ಇಂಥಾದ್ದಕ್ಕೆಲ್ಲಾ ಅವಕಾಶ ನಾಳೆ ಇದ್ದೇ ಇರುತ್ತದೆಂದು ನಾವು ಈಗ ತಿಳಿದುಕೊಳ್ಳಲೇ ಬೇಕಾಗುತ್ತದೆ. ಹೀಗೆ ಕಾನೂನು ರಚಿಸುವಾಗ ಅದರಲ್ಲಿ ಸಂಶಯಗಳಿಗೆ ಅವಕಾಶವಿತ್ತರೆ ಮುಂದೆ ಅದರಿಂದ ಅನೇಕ ಹಾನಿ ಅನರ್ಥಗಳಾಗುತ್ತವೆ. ಆದರೆ ಸಾರ್ವತ್ರಿಕವಾಗಿ ಇಂಡಿಯಾದೇಶದಲ್ಲಿ ಯಾವ ಯಾವ ಉದ್ಯಮಗಳು ಸರ್ಕಾರದವರ ಆಡಳಿತಕ್ಕೊಳಪಟ್ಟಿರುತ್ತವೆಯೋ ಅಂಥಾ ಉದ್ಯಮಗಳಿಗೆ ಮಾತ್ರ ಈ ನಿಯಮಾವಳಿಗಳನ್ನು ಹಾಕಿದ್ದಾರೆ. ಆದರೆ ಇಂಥ ಅವಕಾಶ ಆ ಖಾಸಗೀ ಉದ್ಯಮಗಳವರಿಗಿಲ್ಲ. ಆದರೆ ಈ ಕೈಗಾರಿಕೋದ್ಯಮಗಳಲ್ಲಿರತಕ್ಕ ಕಾರ್ಮಿಕರು ತಮ್ಮ ಹಕ್ಕು ಬಾಧ್ಯತೆಗಳಬಗ್ಗೆ ವಿವಾದ ಉಂಟಾದಾಗ ಅದನ್ನು ಒಂದು ಟ್ರೈಬ್ಯುನಲ್ ಮುಂದೆ ತೆಗೆದುಕೊಂಡು ಹೋಗಿ ನ್ಯಾಯ ಪಡೆಯಬಹುದೆಂದು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿನಲ್ಲಿ ಹೇಳಲಾಗಿದೆ. ಈ ದಿವಸ ಆ ಕಾನೂನಿನ ಪ್ರಕಾರ ಅವರು ತಮ್ಮ ಅವಾರ್ಡುಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಈಬಗ್ಗೆ ಸರ್ಕಾರದವರ ಮನೋಭಾವವೇನಿದೆ ಯೆಂದರೆ ಇಂಥಾ ಒಂದೊಂದು ಕಾನೂನುಗಳನ್ನು ಮಾಡಿ ಆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿನಲ್ಲಿ ಈ ಕಾರ್ಮಿಕರಿಗೆ ಕೊಟ್ಟಿರತಕ್ಕ ಸೌಕರ್ಯಗಳನ್ನು ಮೊಟಕು ಮಾಡಬೇಕೆಂಬ ಉದ್ದೇಶವಿದ್ದಂತೆ ಕಾಣುತ್ತದೆ. ಆದರೆ ಆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟನ್ನು ಕೇಂದ್ರ ಸರ್ಕಾರದವರು ಅಂಗೀಕಾರಮಾಡಿರುತ್ತಾರೆ. ಅದರ ವಿಧಿಗಳನ್ನೇ ದೇಶಾದ್ಯಂತವೂ ಜಾರಿಯಲ್ಲಿ ತಂದಿರುವಾಗ ನಮ್ಮ ಸರ್ಕಾರ ಅವುಗಳನ್ನು ಜಾರಿಗೆ ತರದೆ ಕೈಬಿಟ್ಟುಕೊಂಡು ಆ ಬಗ್ಗೆ ತಾವೇ ಒಂದು ತಮ್ಮದೇ ಆದ ಕಾನೂನನ್ನು ಮಾಡಲು ಹೊರಟಿದ್ದಾರೆ. ಈ ಪಾಲಿಸಿ ತೀರಾ ತಿರೋಗಾಮಿಯಾದದ್ದು. ಪ್ರಗತಿಗಾಮಿಸ್ವರೂಪದ್ದಾಗಿಲ್ಲ. ..

ಶ್ರೀ ಎಚ್. ಸಿದ್ಧವೀರಪ್ಪ.—ಇದು ಪ್ರಗತಿಗಾಮಿ ಸ್ವರೂಪದ್ದು.

2 P.M.

ಶ್ರೀ ಎಸ್. ಗೋಪಾಲಗೌಡ.—ಖಂಡಿತ ಅಲ್ಲ. ಅದಕ್ಕೆ ಕಾರಣ ಇಷ್ಟೇ. ನಾನು ಮೊದಲೇ ಹೇಳಿದ ಹಾಗೆ ಆ ಕಾರ್ಮಿಕರು ಹೋರಾಟಮಾಡಿ ತಮ್ಮ ಹಕ್ಕುಗಳನ್ನು ಸ್ಥಿರಪಡಿಸಿಕೊಂಡಿದ್ದಾರೆ. ಅಷ್ಟೇ ಶಿವಾಯಿ ಈ ದಿವಸ ಈ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿನಲ್ಲಿ ಹೇಳಿರುವ ಸೌಕರ್ಯಗಳನ್ನು ಅವರಿಗೆ ಯಾರೂ ಸುಮ್ಮನೆ ಒಂದು ಕನಿಕರದಿಂದ ಕೊಟ್ಟಿಲ್ಲ ಎಂಬ ಅಂಶವನ್ನು ಯಾರೂ ಮರೆಯಬಾರದು. ಆದ್ದರಿಂದ ಕರುಣೆ ಬೇರೆ ವಿಷಯ. ಕರುಣೆ ಇರಬಹುದು. ಅನೇಕವೇಳೆ ನ್ಯಾಯಾಧೀಶರಿಗೆ ಕರುಣೆ ಬರಬಹುದು. ಆದರೆ ಅವರು ಕರುಣೆಯಿಂದ ಎಲ್ಲರನ್ನೂ ಬಿಟ್ಟುಬಿಡುವುದಕ್ಕಾಗುವುದಿಲ್ಲ. ದೇಶದ ಕಾನೂನು ಪುಸ್ತಕದಲ್ಲಿ ಯಾವರೀತಿ ಬರೆಯಲ್ಪಟ್ಟಿದೆ, ಯಾವಯಾವ ವಿಧಿಗಳಮೇಲೆ ಆರೋಪಣೆ ಮಾಡಿರುತ್ತಾರೆ, ಅದಕ್ಕನುಸಾರವಾಗಿ ಅವರು ತೀರ್ಮಾನ ಕೊಡಬೇಕಾಗುತ್ತದೆ. ಆದ್ದರಿಂದ ಕರುಣೆ ಪ್ರಶ್ನೆ ಇಲ್ಲಿ ಏಳುವುದೇ ಇಲ್ಲ. ಆದ್ದರಿಂದ ಈ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟಿನಬಗ್ಗೆ:

(3) "Notwithstanding anything contained in the Industrial Disputes Act, 1947 (Central Act XIV of 1947) or any other law for the time being in force, the transfer of service of any officer or other employee of any of the Companies the Government shall not entitle such officer or other employee to any compensation under that Act or other Law, and no such claim shall be entertained by any court, tribunal or other authority."

ಇದು ಏನು ಸ್ವಾಮಿ ? ಇಷ್ಟು ಹೇರಳವಾದ ಅಧಿಕಾರ ಎಂದರೆ ಸರ್ಕಾರದವರಿಗೆ ಯಾರೂ ಈಗಿನಕಾಲದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ. ಹಿಂದೆ ಏನಾದರೂ, ದೇಶದಲ್ಲಿ ಕಾರ್ಮಿಕರ ಚಳವಳಿಯೇ ಇಲ್ಲದೇ ಇದ್ದಾಗ, ಅವರಿಗೆ ತಮ್ಮ ವರ್ಗದ ಹಿತದಬಗ್ಗೆ ಯಾವ ಜಾಗೃತಿಯೂ ಇಲ್ಲದೆ ಇದ್ದಾಗ ಈ ಕೆಲಸಗಳನ್ನು ಮಾಡಬಹುದಾಗಿತ್ತೇ ಹೊರತು, ಇಂಥ ಕಾನೂನುಗಳನ್ನು ಪಾಸ್‌ಮಾಡುವುದಕ್ಕೆ ಅವಕಾಶ ಕೊಡಬಹುದಾಗಿತ್ತೇ ಹೊರತು ಇವತ್ತು ಅದು ಸಾಧ್ಯವಿಲ್ಲ. ಮತ್ತು ಇನ್ನೊಂದು ಕಾರಣವನ್ನು ಶ್ರೀ ವೆಂಕಟೇಶ್‌ರವರೇ ಹೇಳಿದರು. ಅದೂ ತಮ್ಮ ಪಕ್ಷದ ಹಿತದೃಷ್ಟಿಯಿಂದಲೂ ಹೇಳಿದರು. ತಮ್ಮ ಪಕ್ಷ ಕಾರ್ಮಿಕರ ಪಕ್ಷ ಎಂದು ನಾವೆಲ್ಲ ಅಂದುಕೊಳ್ಳುವ ರೀತಿಯಲ್ಲಿ ಹೇಳಿದರು. ಸರ್ಕಾರದವರು ಪಾರ್ಟಿ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಿ ಎಂದು ಹೇಳಿದರು. ಅದು ನ್ಯಾಯ, ಅವರು ಹೇಳುವುದು. ಪಾರ್ಟಿ ಹಿತವೂ ಬೇಕಲ್ಲ !

ಆದ್ದರಿಂದ ಇನ್ನು ಮೊದಲನೆ ವಿಧಿಯಲ್ಲೂ ಕೂಡ ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು ಹೇಳಿದಹಾಗೆ ಮೊದಲನೆ ಮತ್ತು ಎರಡನೇಭಾಗದಲ್ಲಿ, ಸ್ವಲ್ಪ ಮೊಟಕುಮಾಡಿ ಎರಡನೇ ಮತ್ತು ಮೂರನೇ ಕ್ಲಾಸನ್ನು ಸೇರಿಸಿಕೊಂಡಿರುವುದರಿಂದ ಕಾರ್ಮಿಕರ ಹಿತ ಬಹಳವಾಗಿ ಸರ್ಕಾರದ ದಯೆ ಮತ್ತು ದಾಕ್ಷಿಣ್ಯಕ್ಕೆ ಒಳಪಡುತ್ತದೆ. ಮತ್ತು ಮಂತ್ರಿಗಳು ಇಲ್ಲಿ ಕೊಟ್ಟಂಥಾ ಆಶ್ವಾಸನೆಯ ಮೇಲೆ ಬಹುವಾಗಿ ನಿಂತುಬಿಡುತ್ತದೆ. ಎಂದಮೇಲೆ ಅವರನ್ನು ನಾವು ಅಪಾಯಕ್ಕೆ ತಳ್ಳುತ್ತಾಯಿದ್ದೇವೆ. ಈ ಸಭೆ ಸರ್ಕಾರದ ಕೈಗೆ ಅಧಿಕಾರವನ್ನು ಕೊಡುವಾಗ, ಭಂಗಾರದ ಗಣಿಯನ್ನು ಸರ್ಕಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಹೆಚ್ಚಿನ ಒಂದು ಅಧಿಕಾರವನ್ನು ಸರ್ಕಾರದ ಕೈಗೆ ಕೊಟ್ಟು ಅವರ ಹಿತಗಳನ್ನು ಬಹಳವಾಗಿ ಸರ್ಕಾರದ ದಯಾದಾಕ್ಷಿಣ್ಯಗಳಿಗೆ ಬಿಡುತ್ತೇವೆ. ಅದು ತಪ್ಪು. ಆದ್ದರಿಂದ ಈ ತಿದ್ದುಪಡಿಯಲ್ಲಿ 3ನೇ ಒಳಕ್ಲಾಸನ್ನು ಸೇರಿಸಿದ್ದಾರೆ. ಅದನ್ನು ಸರ್ಕಾರದವರು ಒಪ್ಪಿಕೊಂಡರೆ ಸ್ವಲ್ಪಮಟ್ಟಿಗೆ ನಾವು ಕಾರ್ಮಿಕರಿಗೆ ರಕ್ಷಣೆಯನ್ನು ಕೊಟ್ಟಂತಾಗುತ್ತದೆ. ಆದುದರಿಂದ ಸರ್ಕಾರದವರು ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಬಹಳ ಕಳಕಳಿಯಿಂದ ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಮುಖ್ಯವಾಗಿ ಈ ಮಸೂದೆಯ ಪ್ರಕಾರ ಇರತಕ್ಕಂಥ ಒಂದು ಒಪ್ಪಂದವನ್ನು ನಾವು ಇಲ್ಲಿಗೆ ಮುಕ್ತಾಯಮಾಡಿ ಬೇರೆಯವರ ಮ್ಯಾನೇಜ್‌ಮೆಂಟನ್ನು ಸರ್ಕಾರದವರು ತೆಗೆದುಕೊಳ್ಳತಕ್ಕದ್ದು ಒಂದು. ಇನ್ನೊಂದು ಕಾರ್ಮಿಕರನ್ನು ರಕ್ಷಣೆಮಾಡುವುದು ಮತ್ತು ಅವರಿಗೆ ಯಾವ ತಾರತಮ್ಯವೂ ಇಲ್ಲದಂತೆ ಅವರನ್ನು ನಡೆಸಿಕೊಂಡುಹೋಗುವುದಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ನಾವು ಪ್ರಯತ್ನಮಾಡುತ್ತಿದ್ದೇವೆ. ಇನ್ನು ಮೂರನೆಯದು ಸಾಮಾನ್ಯವಾಗಿ ಕಾರ್ಮಿಕರ ಹಿತವನ್ನು ಬಿಟ್ಟರೆ ರಾಜ್ಯದ ಹಿತ. ರಾಜ್ಯಕ್ಕೆ ಹೆಚ್ಚಿನ ರೆವಿನ್ಯೂ ಬರಬೇಕು. ಮತ್ತು ಗಣಿ ಉದ್ಯಮ ನಿರಂತರವಾಗಿ ನಡೆದುಕೊಂಡು ಹೋಗಬೇಕು. ಸುವ್ಯವಸ್ಥಿತವಾಗಿ ನಡೆಯಬೇಕು. ಈ ಕಾರಣದಿಂದಲೇ ಈ ಮಸೂದೆಯನ್ನು ತಂದಿದೆ. ಇದು ಪ್ರಾಮುಖ್ಯವಾದ ಒಂದು ಅಂಶ. ಕಾರ್ಮಿಕರ ಹಿತರಕ್ಷಣೆ ಮಾಡತಕ್ಕ ಈ 5ನೇ ವಿಧಿ ಏನಿದೆ ಇದನ್ನು ಸೂಕ್ತ ತಿದ್ದುಪಡಿಮಾಡಿ ಸರ್ಕಾರದವರು ಒಪ್ಪಿಕೊಳ್ಳಬೇಕು. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಲ್ಲಿ ಸರ್ಕಾರದವರಿಗೆ ಯಾವ ಬಾಧಕವೂ ಇಲ್ಲ ಎಂದು ಹೇಳಿ ಶ್ರೀಮಾನ್ ವೆಂಕಟೇಶ್‌ಅವರು ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳುವುದಿಲ್ಲ ಎನ್ನುವ ಭರವಸೆಯ ಮೇಲೆ ನಾನು ಈ ತಿದ್ದುಪಡಿಗೆ ನನ್ನ ಸಮರ್ಥನೆಯನ್ನು ಕೊಡುತ್ತೇನೆ.

Mr. SPEAKER.—Now the Minister will reply.

*Sri H. SIDDAVEERAPPA (Minister for Home and Finance).—Sir, I have heard with very great attention to the various arguments advanced by the Hon'ble Members in support of this amendment as well as the argument of my friend Sri Huchmasthy Gowda as to why it should not be supported. I am extremely surprised to find that there is so much of, if I may say so, unjustified suspicion about the motive of this Government in regard to the provisions of this clause. I for one fail to understand as to the reasons that prompted my friends to look at the Government with this eye of suspicion, which is absolutely unfounded. Well, my friend

(SRI H. SIDDAVEERAPPA.)

stated that similar provisions are made in other nationalised Bills like the Life Insurance Corporation Act and also the Air Corporation. I am not going to justify these clauses merely on the ground that these provisions are found there. Far from it. But there are very good convincing and cogent reasons as to why these clauses have been put in here and if I may say so, deliberately. If one sees the history of the working of these mines and as mentioned by Sri Gopala Gowda himself, huge disparities exist in the pay scales between section and section and various other things and in some cases not only discriminatory but pure nepotism, if I may use the word, in one or two cases. While taking all these facts into consideration, no Government can allow injustice to continue; no Government can allow things to continue in the same manner—although we inherit some of those liabilities and other things—provided we feel there are certain things which, ought to be rectified, why should you suspect that the Government is going to use this as a weapon or an engine of oppression. So far as the common man is concerned, *viz.*, the poor labourer that toils there, I can assure you, I am more sympathetic than any one of you. I am not making mere pretension when I say that. If you see the provisions of the report that is contained at pages 41 and 42, you can see how in spite of various protests and emphatic protests made by this Government the Companies went on swelling the cost of production with the result that what stood on 1949 by way of salary, wages, etc., were totally different. It was unrealistic and the cost of production enormously swelled up with the result that it was found impossible to manage with things unless and until a certain rationalisation was set in. I can give you one instance. In the case of covenanted staff which you know, may be counted in small number, the expenditure in 1949 was Rs. 25·83 lakhs; whereas for the same staff the cost in 1953 was Rs. 25·09 lakhs. In the case of monthly rated staff in 1949 the cost was Rs. 16·88 lakhs and the same swelled up to Rs. 29·00 lakhs 1953. In the case of labour it was Rs. 155·62 lakhs in 1949 and Rs. 185·79 in 1953. There are certain other commitments also which have been made in spite of my protests. My friend Sri Vasan was rather uncharitable in his anxiety to condemn my friend Sri D. Venkatesh. He forgot as to how I helped him in order to get that temporary relief. There the points were like this: For the first time the Companies wanted to swell and take the consent of the Mysore Government in order to give benefit of this termination gratuity. In the case of two Companies when they swelled the other expenditure, not only they did not consult us in spite of our protests but they did it also. But here for reasons best known to themselves, I know the brain that was working behind, they wanted my consent. I could not have been so foolish as to give my consent in the case of an isolated act at a time when our relationship was far from being happy and when I was thinking of nationalising these mines and at that time had I only written a letter to them not to do it, they could not have got this benefit. Do not forget that. It is now very easy to say that Government wants to bring in politics or putting some sort of impediments. It is not true. I said, 'It is up to you to take any decision you like. Whereas in the case of various other commitments you never consulted us, but in this particular case you want to consult us.' That is the stand I took and rightly so. It does not lie within the mouth of my friend that the Government stood in the way of their getting any benefit.

Now I can give you an assurance that whatever may be the reasons or the circumstances under which it was done, it is a matter that will have to be carefully examined by Government. And I have made it very clear that the terms of service will not be in any way disadvantageous, other things being equal, because for the simple reason that there is change in the management. Please mark the words "other things being equal". Take the clause as it is. What is it we have done? In sub-clause (1) I have guaranteed the services of

the officers or other employees of any Companies (excepting any person holding office as a director, managing agent, adviser, solicitor, consultant or auditor)" because they do not come under that category. Whereas in the case of others, we say "as from the vesting date any officer or other employee, as the case may be, of the Government" they may be, treated as servants of Government "and shall hold office therein by the same tenure, at the same remuneration and upon the same terms and conditions and with the same rights and privileges as to pension and gratuity and other matters as he would have held the same on the vesting date if this Act had not been passed, . . ."

What is there here to say that what has been given to you will be taken away. I would like to submit whatever may be the reasons under which you might have agreed for certain conditions or reservations being put in here, and then it is no doubt true by interpretation it can be said that, as soon as the Companies are nationalised, in the case of these two other Companies, they lose the benefit of the termination gratuity. That is a fear which I would request you to dispel from your mind.

Whatever may be the causes under which you agreed to it, there are other reasons apart from legal. The case of Nandydoorg has been mentioned here in the petition that has been given to the Hon'ble Speaker. There is a statutory provision guaranteeing termination gratuity. The case of others is not there. Let us examine and see if there is any difference between Nandydoorg and others and we shall try to rationalise. It shall not be our endeavour to deprive them of the benefits if morally they have accrued to them.

Regarding the other points and more particularly to the phrase which had been very much opposed, namely, "...shall continue to do so unless and until his employment under the Government is terminated or until his remuneration, terms or conditions are duly altered by the Government.", I am not mincing words. I have deliberately used from. There may be a case where it may be necessary to terminate the services of A, B, C or D in the interests of the Company and in the interest of smooth working of the Company. Therefore, the only measuring rod would be whether his continuance in the service of the Company is in the interest of the Company or not. You may say that Government will be clothed or armed with enormous powers or that they may use it in a very arbitrary manner or otherwise. But no Government will work it in that manner. Hedged in by various other clauses and various other considerations if Government takes a stand, they have to justify it. They cannot act arbitrarily, capriciously or in any manner which may be questioned in any way. Therefore, that saving clause is absolutely necessary and essential. Take for instance the case of an individual who may be, on account of some discriminatory treatment, drawing a salary of Rs. 1,000 which he does not justify by reason of the work turned out by him, or that he is not entitled to it for any other reason, is there anything wrong for the Government to say, "You do not deserve more than Rs. 500; accept Rs. 500 or quit service". What is wrong in it? It is for the management to decide. There are various historical and other reasons, peculiar circumstances and peculiar conditions under which services are there in the K.G.F. Company, and this provision is absolutely necessary in order to make the administration smooth. my friends who are sitting opposite to me, they must be the first to agree with me on a clause of this nature which is absolutely essential. I do not know for what reason they opposed it. It is subject to various conditions. Supposing in a particular case, some fixation of some pay is necessary. You know how these things are managed. They will not do it by a stroke of pen. It will be subjected to examination, scrutiny and careful and thorough study and whatever is necessary, we will have to do. What happens, if you take away that clause? The whole thing, lock stock and barrel will be lugged in. They may say, have recourse to labour laws. It is a process of delay and if

(SRI H. SIDDAVEERAPPA.)

you want to take a quick decision, it will not be possible under the labour laws. Government will have to take quick decisions in order to improve the working at the earliest stage. This clause has therefore been put in with a view to empower the Government to use it in a rather discreet manner, in a proper way and only when an operation is absolutely necessary, and not capriciously or in any arbitrary manner.

Take sub-clause (2): it has been asked, why sub-clause (2) should remain. I have already adduced the reasons as to why that provision is necessary when I made my reply to the general debate yesterday. What happens, if the clause is there? As I have already said, we will not have any power to set right matters, when they go wrong. I want to make it again clear. This may not perhaps in the actual working apply to the general bulk of what we call labourers, those who actually toil there on the field. But in some cases it may be necessary. Let not undue panic be created in the minds of people, that it is there like the sword of Democles hanging with some ulterior object or purpose. Far from it. Apart from not trying to be discriminatory, I have been careful to see that there is no discrimination between Indian and European officers about the terms of service. There is no question of coercing anybody. Likewise Government also should not be coerced into any course of action and should not be pinned down to any particular position. This question will have to be examined from that aspect and your doubts will be cleared when you read the explanation.—

> "*Explanation.*—The compensation payable to an officer or other employee under this sub-section shall be in addition to and shall not affect any pension, gratuity, provident fund money or any other benefit to which the officer or other employee may be entitled under his contract of service."

That explanation will give you all the satisfaction that you want, provided it is read in its proper context.

Regarding sub-clause 3, the whole purpose of this clause is this. The Company wants to sever its connection as soon as we nationalise it. Under the provisions of the Industrial Disputes Act, 1947, certain rights are given to the employers in the case of termination, for whatever may be the reason, some action lies against the employer. But here, the termination of services will not be due to any act of the present employer. It is due to the act of the Government. When such is the position, there is no justification whatsoever to hold the former employer responsible for the termination of services due to an act of the State. I therefore feel that the clause is necessary in order to give that sense of protection to the original employer and it is absolutely essential.

While discussing this clause, I never expected that so much material would be put in, which may create an impression in the mind of the public that the Government have certain motives, veiled motives in putting in this clause. Particularly, when all the labour leaders and our friend Sri Pattabhiraman took part and said that it has been put in with some purpose, it is likely to create an impression in the minds of the labour and I feel that there is something to scare them, It is far from truth. I may tell them: "Be generous to the Government and do not try to pick holes where there is none."

SRI K. PATTABHIRAMAN.—Government is changeable from 1st November.

SRI H. SIDDAVEERAPPA.—But Government is a continuing process. It is nothing uncommon for lawyers to try to find out what is the intention of the Legislature by looking into the proceedings of the day.

In order to safeguard the interests of the Company, for its better and efficient management, this clause has been put in. I request the labourers to dispel from their mind any kind of doubt that may be haunting them due to some anticipation of what may come or may not come. Particularly, I request my friends to tell them that

there is no substance for their apprehension.

I do not think that this is a clause which can be used for party or political purposes. Let us not doubt it.

Sri K. PATTABHIRAMAN.—That charge against me does not stand.

Sri H. SIDDAVEERAPPA.—Against no individual, more particularly, let me make it clear, not against Sri Pattabhiraman.

This is a clause which contains some wholesale provision and Government may utilise these powers only in case of need and not otherwise. That also, if you make it clear, I see no reason why any ody should look askance at it. I am sure that my friend Sri Venkatesh will be satisfied with this explanation and has understood that there is no difference between myself and him, so far as certain cardinal principles are concerned.

With this assurance, I once again, request him to be good enough to withdraw his amendment.

Sri D. VENKATESH.—I am in a helpless position. I seek the permission of the Assembly to withdraw my amendment.

(When leave for withdrawal was asked, there were certain dissenting voices.)

Mr. SPEAKER.—Since there are dissenting voices, I have to put the amendment to vote: The question is:

" (1) In sub-clause (1), the commas and the words, "and shall continue to do so unless and until his employment under the Government is terminated or until his remuneration, terms or conditions are duly altered by the Government" shall be deleted.

(2) Sub-clause (2) and its explanation shall be deleted.

(3) For the existing sub-clause (3), the following sub-clause shall be substituted, namely :—

"(2) Special provision relating to workmen employed in undertakings which are transferred:—

Notwithstanding anything contained in the Industrial Disputes Act, 1947 (Central Act XIV of 1947) or any other law for the time being in force, no workman shall be entitled to compensation under that section by reason merely of the fact that there has been a change of employers in any case, where the ownership or management of the undertaking in which he is employed is transferred, whether by agreement or by operation of law, from one employer to another;

Provided that:

(a) the service of the workman has not been interrupted by reason of the transfer;

(b) the terms and conditions of service applicable to the workman after such transfer are not in any way less favourable to the workman than those applicable to him immediately before the transfer; and

(c) the employer to whom the ownership or management of the undertaking is so transferred is under the terms of the transfer or otherwise, legally liable to pay to the workman, in the event of his retrenchment, compensation on the basis that his service has been continuous and has not been interrupted by the transfer.

Explanation.—The compensation payable to an officer or other employee under this sub-section shall be in addition to and shall not affect any pension, gratuity, provident fund money or any other benefit to which the officer or other employee may be entitled under his contract of service."

The motion was nagatived.

Mr. SPEAKER.—The question is:

"That Clause 5 stand part of the Bill."

The motion was adopted.

Clause 5 was added to the Bill.

Mr. SPEAKER.—There are no amendments to clauses 6, 7, 8 and 9.

Sri Mulka GOVINDA REDDY.—I will oppose clause 9.

Mr. SPEAKER.—The question is :

"That Clauses 6, 7 and 8 stand part of the Bill."

The motion was adopted.

Clauses 6, 7 and 8 were added the to Bill.

Mr. SPEAKER.—Clause 9.

Sri Mulka GOVINDA REDDY.—I will speak on clauses 9 and 10, Sir.

Mr. SPEAKER.—There is an amendment to clause 10. The Hon'ble Member may confine himself to clause 9 only.

Sri Mulka GOVINDA REDDY.—I oppose this clause 9, Sir. Under clause 9 the compensation for acquiring this undertaking has been provided. Under this clause, B. 164 lakhs is going to be paid for acquiring these undertakings. As I have said yesterday and also on the day on which the Report of the Committee that was appointed by the Government to go into the Agreement entered into between the Companies and the Government, was discussed. These Companies have received back by way of dividends and other processes 40 times the amount that they have invested and it is therefore undesirable to undertake to pay any compensation to these Companies. Further Sir, a loose talk was made out that by paying such huge sum, we can earn the good-will of foreign countries and especially Britain. The Governmentof the U.K. I am sure has not invested any moneys in these Companies. Whatever moneys have

2-30 P.M.

been invested have not been invested by the people at large. Some individual enterprisers have invested their money in these undertakings. Therefore, by acquiring this undertaking., it does not mean that we are crossing the limits of our sovereignty and we are infringing the international right of any country. I therefore feel that the question of international relationship or the good-will of foreign countries do not come into the picture at all and those extraneous arguments that have been put forward by some friends justifying this excess amount of compensation for acquiring this undertaking does not deserve any consideration at our hands. I oppose this section totally.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಿನ್ನೆ ದಿವಸ ಮಾನ್ಯ ಗೃಹ ಮಂತ್ರಿಗಳು ನಿಮಗೆ ಇಷ್ಟವಿಲ್ಲದಿದ್ದರೆ ಇದನ್ನು ವಿರೋಧ ಮಾಡಬಹುದು, ತಿರಸ್ಕಾರಮಾಡಿ ಎಂದು ಹೇಳಿದರು. ಆದರೆ ತಿರಸ್ಕಾರಮಾಡಿದರೆ ರಾಷ್ಟ್ರೀಕರಣ ನಿಂತುಹೋಗುತ್ತದೆಯಲ್ಲಾ ಎಂಬ ಭಯವಿದೆ. ಬೇಕಾದರೆ ಒಪ್ಪಿಕೊಳ್ಳಿ, ಇಲ್ಲದಿದ್ದರೆ ಬಿಟ್ಟು ಬಿಡಿ ಎಂದು ಕಂಡೀಷನ್ ಹಾಕಿದರೂ ಅನೇಕರು ವಿಧಿಯಿಲ್ಲದೆ ಒಪ್ಪಿದರೆಂದು ಇಟ್ಟುಕೊಳ್ಳೋಣ. ಆಮೇಲೆ ಹಿಂದಿನ ಮುಖ್ಯ ಮಂತ್ರಿಗಳು ಒಂದೆರಡು ಸಂಶಯ ನಿವಾರಣೆ ಮಾಡಿದರು. ಅವರೂ ಈ ವ್ಯವಹಾರದಲ್ಲಿ ಅನೇಕಾವರ್ತಿ ನೆಗೋಷಿಯೇಷನ್ಸ್ ಮಾಡಿದ್ದಾರೆ. ಹಾಗೆ ಮಾಡುವಾಗ್ಗೆ 119 ಲಕ್ಷ ರೂಪಾಯಿಗಳಿರಬೇಕೆಂಬ ತೀರ್ಮಾನಕ್ಕೆ ಬಂದರು. ಈಗ 164 ಲಕ್ಷ ಕೊಡಬೇಕು, 45 ಲಕ್ಷ ಜಾಸ್ತಿ ಕೊಡಬೇಕು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಇದು ನಮ್ಮ ದುರದೃಷ್ಟ. ಇಂಡಿಯಾ ಸರ್ಕಾರದಲ್ಲಿ ಹಣಕಾಸಿನ ಸಚಿವರಾಗಿ ಬರತಕ್ಕವರೆಲ್ಲರೂ ಬಂಡವಾಳಗಾರರ ಹಿತದೃಷ್ಟಿಯಿರುವವರು. ಅವರು ಸಾಮಾನ್ಯವಾಗಿ ಬಂಡವಾಳಗಾರರಿಗೆ ಅನುಕೂಲವಾಗುವಂತೆ ಮಾಡುತ್ತಾರೆ. ಹಿಂದಿನ ಹಣಕಾಸಿನ ಸಚಿವರು 119 ಲಕ್ಷಕ್ಕೆ ಒಪ್ಪಿಗೆ ಕೊಟ್ಟಿದ್ದರೂ ಈಗಿನ ಹಣಕಾಸಿನ ಸಚಿವರು ಬಂದ ಕೂಡಲೆ ಅದನ್ನು ಹೆಚ್ಚಿಸಿದರು ಎಂದು ಗೊತ್ತಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಸರ್ಕಾರದವರು ಬರೆದ ಕಾಗದವನ್ನು ಓದಿ ಹೇಳಿದೆ, ಅದನ್ನು ತಾವು ಕೇಳಲಿಲ್ಲವೆಂದು ಕಾಣುತ್ತದೆ. ಕೇಳಿದ್ದರೆ ಗೊತ್ತಾಗುತ್ತಿತ್ತು. ಅದರಲ್ಲಿ ಈ ರೀತಿ ಇದೆ:—

"We leave it to you to decide the quantum of compensation."

ಶ್ರೀ ಬಿ. ಹುಚ್ಚೇಗೌಡ.—ಖಂಡಿತವಾಗಿ ಇಷ್ಟು ಭಾರಿ ಹಣ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಕೊಡುವ ಪರಿಹಾರ ದುಬಾರಿಯೆಂದು ಹಿಂದೆಯೆ ಅದಕ್ಕೆ ಕಾರಣ ಎಲ್ಲವನ್ನೂ ಹೇಳಿದ್ದೇನೆ. ಆದರೆ ಮಾನ್ಯ ಗೃಹ ಮಂತ್ರಿಗಳು ಹೇಳಿದ ಮೇಲೆ ಅನಿವಾರ್ಯವಾಗಿ ಒಪ್ಪಬೇಕಾಯಿತು. ಇಂಡಿಯಾ ಸರ್ಕಾರದವರು ನಮ್ಮ ಅಭಿಪ್ರಾಯ ತಿಳಿದು ನ್ಯಾಯವಾಗಿ ಪರಿಹಾರ ಗೊತ್ತುಮಾಡಬೇಕಾಗಿತ್ತು. ಅನೇಕ ವೇಳೆ ಕೈಗಾರಿಕೆ ಮುಂತಾದ್ದನ್ನು ರಾಷ್ಟ್ರೀಕರಣಮಾಡಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಪರಿಹಾರದ ಮೊತ್ತವನ್ನು ಸಾಧ್ಯವಾದಮಟ್ಟಿಗೆ 119 ಲಕ್ಷ ರೂಪಾಯಿಗಳಿಗೆ ಇಳಿಸಿ ಅದರ ಮೇಲೆ ಒಂದು ಕಾಸನ್ನು ಸಹ ಕೊಡುವುದಕ್ಕೆ ಒಪ್ಪಬಾರದು. ಅನೇಕರು ಅವರ ಮೇಲೆ ಪ್ರಭಾವ ಬೀರುತ್ತಾರೆ. ಅದಕ್ಕೆ ಅವರು ಒಳಗಾಗಿದ್ದಾರೆ. ಪ್ರಭಾವಕ್ಕೊಳಗಾಗದೆ ತೀರ್ಮಾನಕ್ಕೆ ಬರಬೇಕು. ಹಣ ಹೆಚ್ಚು ಮಾಡುವುದಕ್ಕೆ ಪ್ರಭಾವ ಕೆಲಸ ಮಾಡಿದೆ.

Sri H. SIDDAVEERAPPA.—Yesterday I made an elaborate statement on the floor of the House. ಈಗ ಶ್ರೀ ಹುಚ್ಚೇಗೌಡರು ಪ್ರಭಾವಕ್ಕೊಳಗಾಗಿದ್ದಾರೆಂದು ಹೇಳುತ್ತಾರೆ. ಇದೇನು ಮುಸುಗಿನೊಳಗಿನ ಗುದ್ದು?

ಯಾರ ಪ್ರಭಾವಕ್ಕೊಳಗಾಗಿದ್ದಾರೆ ? ಎಲ್ಲಿ, ಏನು ಎಂದು ಹೇಳಿದ್ದರೆ ಚೆನ್ನಾಗಿತ್ತು. ವಿಶದವಾಗಿ ಹೇಳದೆ ಸುಮ್ಮನೆ ಹೀಗೆ ಹೇಳುವುದು ಸರಿಯಲ್ಲ.

Sri J. MOHAMED IMAM (Jagalur).—It is absolutely a matter for presumption. If I can expand it, the Government once made up its mind to pay only 119 lakhs and this was also approved by the Central Government and by the Central Cabinet.

Sri H. SIDDAVEERAPPA.—You are saying it on assumptions. What is the authority to show that the Central Government had agreed to that ?

Sri L. SIDDAPPA (Chennagiri).—The authority is not less than the Ex-Chief Minister.

Sri H. SIDDAVEERAPPA.—I rise to a point of order. I have made it very clear yesterday that there need be no hush hush about it. My friend is an elder; when he makes a statement that there was 'prabhava' let him come out. What is that 'prabhava' ?

ಶ್ರೀ ಬಿ. ಹುಚ್ಚೇಗೌಡ.—ಕೇಂದ್ರ ಸರ್ಕಾರ ಮತ್ತು ಅಲ್ಲಿರುವ ಕೆಲವು ಮಂತ್ರಿಗಳು ವಗೈರೆಯವರು ಪ್ರಭಾವ ಬೀರಿದ್ದಾರೆ.

*Sri V. M. MASCARENHAS (St. John's Hill).—Mr. Speaker, I am rather surprised to hear even after the assurance given by the Hon'ble Minister yesterday and with the long statement that he made that some of the members, specially of the Opposition, still speak so disparagingly about this quantum of compensation. The Hon'ble Minister made it very clear that, though 119 lakhs was the agreed figure in the first stage, for various reasons he enumerated, it was found necessary to agree to the sum of 164 lakhs. Sri Mulka Govinda Reddy always talks of dividends. He says that dividends have been paid 70 times over the Companies' capital. I should like to tell him that dividend has no connection at all with the market value of the Company. For instance, the Government Soap Factory has earned 72 times its capital. Could anybody go to Government and say : you have earned so much and now hand it over free. You would call him insane. The value of a concern should be judged by its productive capacity and by its stock position. Dividends are paid if the profits are high and no dividend is paid if there are no profits. The concern of the Government was to assert the Companies' value judged from the market value. From all standpoints, the figure of 164 lakhs could not only be considered fair but might be considered as being slightly on the low side.

SOME MEMBERS.—No, no.

Sri V. M. MASCARENHAS.—The Hon'ble Minister made it clear to you that to-day the stocks in the yards of the Mining Companies are worth 164 lakhs. If that is the case, what is the full value you pay ? If there is stock in the Company to the extent of 164 lakhs, the compensation now proposed to be paid is not at all excessive. Anybody who knows stock and trade will tell you that. We should congratulate the Government for having given a just, fair and generous treatment to the Companies.

Sri L. SIDDAPPA.—Unduly generous.

Sri V. M. MASCARENHAS.—Not at all because you must realise that a fourteen-year lease has been withdrawn from the Companies, the compensation for which alone could have been 200 lakhs. Over and above that, the entire assets from stock, barrel to the last pin come to the Government. Can we by any means say that the compensation of 164 lakhs for the entire property is on the high side ? I for one do not believe it. I suggest that clause 9 should remain in tact and there should be no change.

Sri K. S. VASAN.—Sir, I rise to oppose clause 9 with the full knowledge that the majority of the members are going to vote for this section. The Government have already agreed to this quantum of compensation, agreed with the Central Government along with the Mining Companies who have given their consent to this quantum of compensation.

I can quite understand the eagerness of this Government to get the President's assent to this Bill. In that eagerness, without offending anybody, I will have to state that they have bartered away the rights of this House. So many times the Mining Companies

(SRI K. S. VASAN.)

have questioned the competence of this Legislature, and competence of this Government to embark on a measure to nationalise the Gold Mines. At all times this House and the Government of the State have replied in a fitting manner that this Legislature and this Government have the competence to legislate and take over the mines. When we have that authority we have also the competence to fix up the terms of compensation also. We need not have discussed this with the Mining Companies or anybody else. Even with regard to the quantum of compensation we need not take any directive from the Central Government. Yesterday the Hon'ble Minister stated that there was no directive and nobody compelled us to pay so much but they have advised and the Government have agreed to do it and that therefore if we wanted to criticise, we should criticise this Government and none else. Sri V. M. Mascarenhas says that this is a very fair compensation and says that anybody who would oppose this would be insane. There was a time when such a thing was considered insane in this country. Now nobody would say that.

SRI V. M. MASCARENHAS.—I did not say like that. What I stated was, merely because a concern has earned profits 65 to 70 times, to say it should be handed over, is insane.

SRI K. S. VASAN.—There is going to come a time when nationalisation of such concerns would be without any compensation. That time cannot be prevented at all by people of your thinking. It may appear to be very insane now; it is sane and moral in the eyes of the country.

It is not only that we pay Rs. 164 lakhs in order to acquire the mines, and I again repeat today what I stated yesterday, that we are giving up many other things, *viz.*, about 50 lakhs which is justifiably due to this industry. We are taking over their liabilities which was explained by the Minister in a very easy manner that it would be spread over to several years and so it would not be very difficult to shoulder. The liabilities are to the tune of Rs. 136 lakhs and there is an item of liability as undisclosed and unspecified liabilities. Even now the Mining Companies would not have told the Government and the Government would not be in a position to know what exactly that liability would be. I would cite one instance. The Management of this industry whether it is a private company or Government is liable to pay compensation under the Workmen's Compensation Act for the occupational disease contracted by the workers. Now it is not possible for anybody to say what that compensation would be, how many of the workers have contracted silicosis, whether it is primary stage or anti-primary stage or secondary. All these things should have been considered; these may run to several lakhs more. Very recently, we had an experience in this regard in respect of the Oorgaum company. So, in order to undertake these mines, Government have not only come forward to pay Rs. 164 lakhs but they have taken all these unspecified liabilites, which run into several lakhs more.

Under these circumstances and as I have in the beginning stated, in order to uphold the prestige of this House and see that this legislature has not only the competence to legislate but also the competence to fix the quantum of compensation, we need not have listened to the advice of anybody, whether it is the Central Government or any other agency. I accused this Government of having sold away the rights of this House in this bargain.

In consideration of these I vehemently oppose this section and oppose payment of compensation.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು ಈ ಪರಿಹಾರ ಮೊಬಲಗನ್ನು ಕೊಡಲು ಸೂಚಿಸಿರತಕ್ಕ ಒಂಬತ್ತನೆಯ ಕ್ಲಾಜನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನೆನ್ನೆಯ ದಿವಸ ಮಾನ್ಯ ಮಂತ್ರಿಗಳು ತಮ್ಮ ಉದ್ದವಾದ ಭಾಷಣದಲ್ಲಿ ಅಥವಾ ದೀರ್ಘವಾದ ತಮ್ಮ ಭಾಷಣದಲ್ಲಿ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದಾರೆ. ಅದರಲ್ಲಿ ಒಂದು ವಿಷಯ, ಏನೆಂದರೆ ಈ ಸಭೆಗೆ ಈ ಮಸೂದೆಯನ್ನು ಪಾಸ್ ಮಾಡುವ ಹಕ್ಕಿಲ್ಲ ಎನ್ನುವ ಅರ್ಥಬರುವ ರೀತಿಯಲ್ಲಿ ಹೇಳುತ್ತಾ ಹೊರಟು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ನೆರವು ಇಲ್ಲದೆ ಹೋಗಿದ್ದರೆ ಈ ಮಸೂದೆ ಇಷ್ಟು ತ್ವರಿತವಾಗಿ ಈ ಮಟ್ಟಕ್ಕೆ

ಬರಲು ಅವಕಾಶವಾಗುತ್ತಿರಲಿಲ್ಲ ಎನ್ನುವ ಹಾಗೆ ಹೇಳಿದರು.

Sri H. SIDDAVEERAPPA.—I rise to a point of order. I want a ruling from the Chair whether what the member is stating would be relevant here. My submission is it is wholly incorrect.

Sri L. SIDDAPPA.—My submission is that the Hon'ble Minister stated that the compensation was fixed on the advice of the Central Government and the officers of the Central Government and that we have to bow down to their directive.

Mr. SPEAKER.—I was not present on the occasion when the Minister stated all those things.

ಶ್ರೀ ಎಸ್. ಗೋಪಾಲಗೌಡ.—ಶ್ರೀ ಕೃಷ್ಣಮಾಚಾರಿಯವರ ಒಂದು active assistance ಇಲ್ಲದೆ ಹೋಗಿದ್ದರೆ ಈ ಮಸೂದೆ ಇಷ್ಟು ಬೇಗ ಈ ಮಟ್ಟಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲವೆಂದು ಹೇಳಿದರು. 'ಅವರು ಈ ರೀತಿಯಾಗಿ ಹೇಳಿರತಕ್ಕದ್ದು ನನ್ನ ಅಭಿಪ್ರಾಯದಲ್ಲ ಈ ಸಭೆಯು ತೀರ್ಮಾನ ಮಾಡುವ ಒಂದು ಪ್ರಿವಿಲೇಜ್ ಕೊಶ್ಚನ್‌ಕೂಡ ಆಗುತ್ತದೆಂದು ಭಾವಿಸಿದ್ದೇನೆ. ಆದರೆ ಇವರು ಈ ರೀತಿಯಾಗಿ ಈ ಸಭೆಯನ್ನು ಒಂದು ಅಪಹಾಸ್ಯಕ್ಕೀಡು ಮಾಡಬಹುದೇ ಎನ್ನುವ ಪ್ರಶ್ನೆ ಆ ಹೇಳಿಕೆಯಿಂದ ಉದ್ಭವವಾಗುತ್ತದೆ, though the subject is on the concurrent list and though the enactment should get the assent of the President.

Mr. SPEAKER.—May I bring to the notice of the House that while discussing this Bill, all those who have helped in this case deserve your praise and commendation, but the names of such persons need not be dragged in just to disparage others, unnecessarily ?

ಶ್ರೀ ಎಸ್. ಗೋಪಾಲಗೌಡ.—ನಾನೇ ಹೊಸದಾಗಿ ಯಾರೊಬ್ಬರ ಹೆಸರನ್ನೂ ಇಲ್ಲಿ ಈಗ ಬಳಸುತ್ತಿಲ್ಲ. The Minister has himself admitted.

Sri H. SIDDAVEERAPPA.—What happened was when an Hon'ble Member made a reference to the present Finance Minister, I had to mention only by way of reply. That is all what happened. One of the members stated that when there was one Finance Minister one figure was arrived at and during the time of the present Finance Minister another figure was arrived at. I had to rebut it and state what I have said.

ಶ್ರೀ ಎಸ್. ಗೋಪಾಲಗೌಡ.—ನಾನು ಮೊಟ್ಟಮೊದಲನೆಯದಾಗಿ ಈ ಸಭೆಯ ಗಮನಕ್ಕೆ ಏನು ತರಬೇಕೆಂದಿದ್ದೇನೆಂದರೆ,—ಈ ಸಭೆಯಲ್ಲಿಲ್ಲದೆ ಇರತಕ್ಕವರಮೇಲೆ ಒಂದು ಆರೋಪಣೆ ಮಾಡಬೇಕೆಂಬ ಉದ್ದೇಶ ನನಗಿಲ್ಲ;—ಈ ಮಸೂದೆಯನ್ನು ಚರ್ಚೆ ಮಾಡುವ ಮತ್ತು ಪಾಸ್‌ಮಾಡುವಂಥ ಹಕ್ಕು ಈ ಸಭೆಗಿದೆ. ಆದರೆ ಇದೇ ಮಸೂದೆಯ ಬಗ್ಗೆ ಪ್ರಸ್ತಾಪಮಾಡಲು ಮಾನ್ಯ ಮಹಮದ್ ಇಮಾಂ ಸಾಹೇಬರವರು ಕೂಡ ದೆಹಲಿಗೆ ಹೋಗಿದ್ದರು. ಈ ದಿವಸ ಶ್ರೀಮಾನ್ ಇಮಾಂರವರು ಸಭೆಯಲ್ಲಿರಲಿ ಅಥವಾ ಇಲ್ಲದಿರಲಿ ಅವರು ದೆಹಲಿಗೆ ಹೋಗಿ ನಡೆಸಿದಂಥ ಸಂಭಾಷಣೆಗಳ ಬಗ್ಗೆ ನಾವು ಇಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಹಾಗೆ ಅವರು ದೆಹಲಿಗೆ ಹೋದಂಥ ವೇಳೆಯಲ್ಲಿ ಅವರು ಈ ವ್ಯವಹಾರಕ್ಕೆ ಸಂಬಂಧಪಟ್ಟಂಥ ಜನರನ್ನು ಬಿಟ್ಟು ಅನವಶ್ಯಕವಾದ ಜನರೊಂದಿಗೆ ಕೆಲವು ಸಲಹೆಗಳನ್ನು ಕೇಳಲು ಹೋಗಬಹುದು. ಅಂಥ ಸಂದರ್ಭಗಳಿದ್ದರೆ ಅವರು ನಮ್ಮ ದೇಶದ ಜನರ ಹಿತರಕ್ಷಣೆಗಾಗಿ ಏನೂ ಅಂಥ ಸಲಹೆಗಳನ್ನು ನೀಡಲಿಲ್ಲವೆಂದು ನಾವು ಇಲ್ಲಿ ಹೇಳುವುದಕ್ಕೆ ನಮಗೆ ಅವಕಾಶವಿದೆ. ಅವರು ಸಭೆಯಲ್ಲಿಲ್ಲವೆಂಬ ನೆಪಕ್ಕಾಗಿಯೇ ಅದನ್ನು ಕೈ ಬಿಡಬೇಕೆಂಬ ನಿರ್ಬಂಧವಿಲ್ಲ. ಹಾಗೊಂದುವೇಳೆ ನಾನೇನಾದರೂ ಅವರ ಬಗ್ಗೆ ಅಲ್ಲದ ಸಲ್ಲದ ಆರೋಪಣೆಗಳನ್ನು ಮಾಡಿದ್ದರೆ ಅವರು ಆ ಬಗ್ಗೆ ನಮ್ಮ ಮೇಲೆ ಕೋರ್ಟುಗಳಲ್ಲಿ ಮೊಕದ್ದಮೆಹೂಡಿ ಪರಿಹಾರ ಪಡೆಯುವುದಕ್ಕೂ ಅವರಿಗೆ ಅವಕಾಶವಿದೆ. ಈ ವಿಚಾರವನ್ನು ನಾನು ನಿನ್ನೆಯದಿವಸವೇ ಹೇಳಬೇಕೆಂದಿದ್ದೆ. ಆದರೆ ಅಧ್ಯಕ್ಷರು ಅವಸರಪಡಿಸಿದ್ದರಿಂದ ನಾನು ಹೆಚ್ಚುಕಾಲ ತೆಗೆದುಕೊಂಡು ಮಾತನಾಡಲು ಅವಕಾಶ ದೊರೆಯಲಿಲ್ಲ. ಈಗಲೂಕೂಡ ನನಗೆ ಅನಿಸುತ್ತದೆ, ಶ್ರೀಮಾನ್ ಮ್ಯಾನ್ಕರನ್‌ಹ್ಯಾಸ್‌ರವರು ಆ ರೀತಿ ವಾದಮಾಡಲು ಅವರೀಗ ಯಾವ ಯುಗದಲ್ಲಿದ್ದಾರೆ ಎನ್ನುವುದೇ ಬಹುಶಃ ಅವರಿಗೆ ಗೊತ್ತಾಗಿರುವುದಿಲ್ಲವೆಂದು ಕಾಣುತ್ತಿದೆ. ಅವರ ಭಾವನೆಯಲ್ಲಿರುವುದು ಯಾವತ್ತೂ ಸಟ್ಟಾವ್ಯಾಪಾರ ಷೇರ್‌ಮಾರ್ಕೆಟ್ ಮತ್ತು ಬುಲಿಯನ್‌ಮಾರ್ಕೆಟ್ ಇತ್ಯಾದಿಗಳೇ; ಇವು ಸೂರ್ಯ ಚಂದ್ರರುಗಳಿರುವತನಕ ಹೀಗೇ ಇದ್ದೇಇರುತ್ತವೆ, ಈ ಆರ್ಥಿಕ ವಿಜ್ಞಾನವನ್ನು ಬಿಟ್ಟು ಜನರು ಬೇರೆ ರೀತಿಯಲ್ಲಿ ಅದನ್ನು ರೂಢಿಸಿಕೊಳ್ಳಲಾರರೆಂತಲೇ ಅವರು ಇನ್ನೂ ಬಹಳ ಬಿಗುಮಾನದಿಂದಲೇ ಯಾವತ್ತೂ ಹೇಳುತ್ತಿದ್ದಾರೆ. ಈಗ ಪರಿಹಾರ ನೀಡಿರತಕ್ಕದ್ದು ಅದಕ್ಕೆ ಹಾಕಿರುವ ಬಂಡವಾಳಕ್ಕಿಂತ 22 ರಷ್ಟು ಹೆಚ್ಚಾಗಿದೆ ಎಂದು ಹೇಳುತ್ತಿರುವಾಗ ಅಷ್ಟು ಮೊಬಲಗನ್ನು ಕೊಡುವುದಕ್ಕೆ ತಯಾರಿದ್ದಾಗ್ಯೂ ಈ ಮೊಬಲಗನ್ನು ನೀವು ಖೋತಾಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ ಎಂಬುದಾಗಿಯೇ ಅವರು ಈಗಲೂ ಸವಾಲು ಹಾಕುತ್ತಿದ್ದಾರೆ. ಈ ಹಿಂದೆ ದೇಶಕ್ಕೆ ಅನ್ಯಾಯ ಮಾಡಿರತಕ್ಕವರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆಂಬ ಬಗ್ಗೆ ನಾವು ಹಿಂದಿನ ಚರಿತ್ರೆಗಳನ್ನು ಹುಡುಕಿಕೊಂಡುಹೋಗಿ ನೋಡಿದರೆ ಅಂಥ ಅನ್ಯಾಯ ನಡೆಸಿದ್ದವರನ್ನು ಹಿಡಿದು ಜೈಲಿಗೆ ಕಳುಹಿಸಿದ್ದಾರೆ. ಅಂಥವರನ್ನು ಗಲ್ಲಿಗೂ ಹಾಕಬಹುದು. ಹಾಗೊಂದು ವೇಳೆ ಆ ತಪ್ಪಿತಸ್ಥ ಸಿಕ್ಕದಿದ್ದರೆ ಆತನ ವಂಶದವರನ್ನೇ ಗಲ್ಲಿಗೆ ಹಾಕುವುದಕ್ಕೂ ಅವಕಾಶವಿದೆ. . .

ಶ್ರೀ ಟಿ. ಮರಿಯಪ್ಪ.—ಇದೇನು ಅಧ್ಯಕ್ಷರೇ, ಈ ಮಾನ್ಯಸದಸ್ಯರು ಆತನ ವಂಶದವರನ್ನು ಬೇಕಾದರೂ ಗಲ್ಲಿಗೆ ಹಾಕಬಹುದೆಂದು ಹೇಳುತ್ತಿದ್ದಾರೆ! ಅವರು ಹೇಳುತ್ತಿರುವ ಪಿಕ್ಚರ್ ಯಾವುದು ? ಇದು ಎಲ್ಲಿಯಾದರೂ ಸಾಧ್ಯವೇ ?

ಶ್ರೀ ಎಲ್. ಸಿದ್ದಪ್ಪ.—ಅಷ್ಟಕ್ಕೇಕೆ ನಿಮಗೆ ಇಷ್ಟು ಆವೇಶ ?

Sri T. MARIAPPA.—This can go no further. He must be justified in making remarks.

ಶ್ರೀ ಎಸ್. ಗೋಪಾಲಗೌಡ.—ನಾನು ಆ ವಿಚಾರಕ್ಕಾಗಿ ಇದನ್ನು ಹೇಳುತ್ತಿಲ್ಲ. ಅವರ ವಾದದಲ್ಲಿ ಈ ಪರಿಹಾರ ಜಸ್ಟಿಫೇರ್‌ಆದದ್ದು ಎಂತಲೇ 31 ನೆಯ ಕ್ಲಾಜನ್ನು ಒತ್ತಿ ಒತ್ತಿ ಅದಕ್ಕೆ ಬೆಂಬಲನೀಡಲು ಹೊರಟಿರುತ್ತಾರೆ. ಈ ಹಿಂದೆ ಎಷ್ಟೋ ಉದ್ಯಮಗಳಲ್ಲಿ ಈ ನೀತಿಯನ್ನು ಸರ್ಕಾರದವರು ಅನ್ವಯಿಸಲಿಲ್ಲ. ಅವರು ಇಲ್ಲಿ ವ್ಯಾಖ್ಯಾನ ಮಾಡುವ ರೀ ಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಹಾಗೆ ಅವರು ಮಾಡತಕ್ಕ ಲಿಮಿಟೆಡ್ ಸರ್ವೀಸಿನ ವ್ಯಾಖ್ಯಾನವನ್ನು ನಾವು ಒಪ್ಪಿಕೊಳ್ಳುವುದಾದರೆ ನಾವು ನಮ್ಮ ಇಂಡಿಯಾದೇಶವನ್ನೇ ಯಾರಿಗಾದರೂ ಅಡವಿಡುವುದಕ್ಕೆ ಹೋಗಬೇಕಾಗುತ್ತದೆ. ಈ ಉದ್ಯಮ ತರೆಎತ್ತಿ ಈಗಾಗಲೇ ಹತ್ತು ತಲೆಮಾರುಗಳು ಕಳೆದುಹೋಗಿವೆ. ಇದಕ್ಕೆ ನಮ್ಮ ಮೈಸೂರು ಸರ್ಕಾರ 87.8 ಲಕ್ಷ ರೂಪಾಯಿಗಳನ್ನು ಕೊಡಬಹುದಾಗಿತ್ತು. ಅಷ್ಟುಮಾತ್ರ ಕೊಡಲು ಸಾಧ್ಯವಿದೆಯೇ ಹೊರತು ಅದಕ್ಕೆಮೇಲೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಆದರೆ ಯಾರೋ ಒಬ್ಬರು ನಾವು ಪರಕೀಯರ ವಿಚಾರದಲ್ಲಿ ಬಹಳ ಜನರಸ್ ಆಗಿರಬೇಕೆಂದು ಹೇಳಿದರಂತೆ. ನಮ್ಮಲ್ಲಿ ಅಷ್ಟು ಅಗಾಧವಾದ ಪರಿಹಾರದ್ರವ್ಯ ನೀಡಲು ಹಣವಿಲ್ಲದಿದ್ದರೆ ಅದಕ್ಕಾಗಿ ಅವರು ನಮಗೆ ಸಾಲಬೇಕಾದರೂ ಕೊಡುತ್ತೇವೆಂದು ಹೇಳಿದರಂತೆ. ಅವರಿಗೆ ನಮ್ಮ ಸರ್ಕಾರದಮೇಲೆ ಎಷ್ಟು ಪ್ರೇಮ ! ಎಷ್ಟು ದಯೆ !

Sri H. SIDDAVEERAPPA.—It is in the larger context and larger sense.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಭಾಷಣದಲ್ಲಿ ತಾವು ಯಾರ ಹೆಸರನ್ನು ಹೇಳಿದ್ದೀರೋ. . . .

Sri H. SIDDAVEERAPPA.—You put the same arguments against me. I am here to reply. Don't go to posterity; you may hang me here if you want.

(*Applause*)

3 P.M.

ಶ್ರೀ ಎಸ್. ಗೋಪಾಲಗೌಡ.—ಕಾನೂನು ಮಾಡುವ ಅವಕಾಶ ಇದೆ ಅಷ್ಟೆ. ಆದ್ದರಿಂದ 87 ಲಕ್ಷಕ್ಕಿಂತ ಹೆಚ್ಚಾಗತಕ್ಕ ಹಣವನ್ನು ಕೇಂದ್ರದವರು ಸಾಲವಾಗಿ ಕೊಡುವುದಕ್ಕೆ ಕೂಡ ಮುಂದೆ ಬಂದು ಈ ಸಮಸ್ಯೆಯ ಪರಿಹಾರಕ್ಕೆ ಸಹಾಯಮಾಡಿದ್ದಾರೆ ಎಂದು ಹೇಳುತ್ತಾರೆ. ಇನ್ನೊಂದು ಕಮೆಂಟ್ ಮಾಡಿದರು, world publicity ಹೆಚ್ಚಾಯಿತು, ಈ ರಾಷ್ಟ್ರೀಕರಣದ ವಿಷಯ ಪರದೇಶಗಳಲ್ಲೆಲ್ಲಾ ಬಹಳವಾಗಿ ಪ್ರಚಾರಕ್ಕೆಬಂತು, World Bank ಕೂಡ ಏನೋ ಒಂದು ರಿಮಾರ್ಕ್ ಮಾಡಿತು ಎಂದು ಹೇಳಿದರು. ಅವರು ಏನು ಹೇಳಿದ್ದಾರೋ ನನಗಂತೂ ಗೊತ್ತಿಲ್ಲ. ಅದನ್ನು ಸಭೆಯ ಮುಂದೆ ತಿಳಿಸುವುದು ಒಳ್ಳೆಯದು.

ಶ್ರೀ ಎಚ್. ಸಿದ್ದವೀರಪ್ಪ.—ಇನ್ನು ಏನೂ ಹೆಚ್ಚಿಗೆ ಹೇಳುವುದಿಲ್ಲ. ಇಷ್ಟುಹೇಳಿ ನಿಮ್ಮ ಹತ್ತಿರ ಅನ್ನಿಸಿಕೊಳ್ಳುವುದೇ ಸಾಕಾಗಿದೆ (ಸಭೆಯಲ್ಲಿ ನಗು !) ಏನೋ ಇದ್ದವಿಷಯ ಹೇಳೋಣ ಎಂದರೆ ಅದನ್ನು ಉಪಯೋಗಿಸಿಕೊಂಡು ಚಾಟಿ ಈ ರೀತಿ ತಿರುಗಿಸುತ್ತೀರಿ ಎಂದು ಗೊತ್ತಾಗಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕಾಂಪೆನ್ಸೇಷನ್ ಕೊಡುವುದರ ಬಗ್ಗೆ "Though it is arguable that the compensation is in excess, it depends upon the angle of outlook" ಎಂದು ಹೇಳಿದರು. ಇದು ಅದನ್ನು ನಾವು ನೋಡುವಂಥ ದೃಷ್ಟಿ ಕೋನದಮೇಲೆ ನಿಂತಿದೆ. ಎಂದರೆ ಅವರ ದೃಷ್ಟಿಕೋನ ಏನೆಂದರೆ, ನಾವು ಪಂಚವಾರ್ಷಿಕ ಯೋಜನೆಗಳನ್ನು ಕೈಕೊಳ್ಳುತ್ತಾ ಇದ್ದೇವೆ. ಮತ್ತು ಇನ್ನೂ ಅನೇಕ ಪರದೇಶದವರ ಮುಖ್ಯವಾಗಿ ಇಂಗ್ಲೆಂಡ್, ಅಮೇರಿಕಾ ದೇಶದವರ ಉದ್ಯಮಗಳು, ಹಣಗಳು ನಮ್ಮ ದೇಶದಲ್ಲಿ ಇವೆ.

Sri A. V. NARASIMHA REDDY (Bangalore South).—On a point of order, Sir. The Hon'ble Member is simply repeating the arguments put forth yesterday by the Hon'ble Minister. He is not speaking on any particular clause. He is meeting the arguments advanced by the Hon'ble Minister.

Mr. SPEAKER.—I have heard him sufficiently. He is meeting the arguments of the Hon'ble Minister. There is no point of order.

*ಶ್ರೀ ಎಸ್. ಗೋಪಾಲಗೌಡ.—ನಿನ್ನೆ ಮಂತ್ರಿಗಳು ಸಮಜಾಯಿಷಿ ಕೊಟ್ಟಾಗ ಶ್ರೀಮಾನ್ ನರಸಿಂಹ ರೆಡ್ಡಿಯವರು ಇರಲಿಲ್ಲ. ಅವರು ಯಾವಾಗಲೋ ಒಂದೊಂದು ಸಾರಿ ಸಭೆಯಲ್ಲಿ ಬಂದು ಹೀಗೆ ಮಾತನಾಡಿಬಿಡುತ್ತಾರೆ (ಸಭೆಯಲ್ಲಿ ನಗು !). ಪರದೇಶದ ಬಂಡವಾಳ ನಮಗೆ ಬೇಕು, ಪರದೇಶದವರನ್ನು ನಾವು ಹೆಚ್ಚು ವಿರೋಧ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯ ಹೇಳಿದರು. ನಾವಾದರೂ ಕೂಡ ಎಲ್ಲ ದೇಶದ ಜೊತೆಯಲ್ಲೂ ಬಹಳ ಮಿತ್ರತ್ವದಿಂದ ಇರಬೇಕೆಂಬ ವಾದವನ್ನು ಒಪ್ಪಿಕೊಳ್ಳುತ್ತೇವೆ. ನಾನೂ ಒಪ್ಪುತ್ತೇನೆ. ಇಂಡಿಯಾ ದೇಶಕ್ಕೆ ಮತ್ತು ಇತರ ಎಲ್ಲಾ ರಾಷ್ಟ್ರಗಳಿಗೂ ಮುಂದುವರಿದ ಇಂಗ್ಲೆಂಡ್, ಅಮೇರಿಕಾ ಮುಂತಾದ ರಾಷ್ಟ್ರಗಳು ಹೆಚ್ಚು ಹೆಚ್ಚು ಹಣವನ್ನೂ ಮತ್ತು ಯಂತ್ರೋಪಕರಣಗಳನ್ನೂ, ಒದಗಿಸುವುದರ ಜೊತೆಗೆ technical know howನ್ನೂ ಒದಗಿಸಿ, ಆರ್ಥಿಕವಾಗಿ ಶೋಷಿಸಲ್ಪಟ್ಟ ಮತ್ತು ಹಿಂದುಳಿದಿರತಕ್ಕ ಎಲ್ಲ ದೇಶಗಳು ಮುಂದೆ ಬರುವುದಕ್ಕೆ ಅವರು ಆದರದ ಸಹಾಯ ಮಾಡಬೇಕು. ಇನ್ನು ಬರುವ ನೂರಾರು ವರ್ಷಗಳಲ್ಲಿ ಅವರು ಈ ಪ್ರದೇಶಗಳನ್ನು ಅಭಿವೃದ್ಧಿ ಮಾಡಿ ಈ ಜನಾಂಗಗಳು ಈ ವಿಷಯದಲ್ಲಿ ಅವರ ಮಟ್ಟಕ್ಕೆ ಮುಂದುವರಿಯುವ ತನಕ ಅವರು ಸಹಾಯ ಮಾಡಲೇಬೇಕಾಗುತ್ತದೆ. ಅದಕ್ಕೆ ದೊಡ್ಡ ದೊಡ್ಡವರು ಅನೇಕ ಸಲಹೆಗಳನ್ನು ಕೊಡುತ್ತಾ ಇದ್ದಾರೆ. ಅದೇನೆಂದರೆ World Government ಬರಬೇಕು, World Bank ಇರಬೇಕು, ಈ ರೀತಿಯೆಲ್ಲಾ ಆಗಬೇಕು. ಇದರಲ್ಲಿ ಯಾವ strings ಇರಬಾರದು.

ತೆಗೆದುಕೊಳ್ಳುವವರಿಗೆ ಕೊಡುವವರಿಂದ humiliate ಆಗಬಾರದು. ಇದೆಲ್ಲಾ ದೊಡ್ಡ ತತ್ವ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು 'ಹೆಚ್ಚು ಹಣ ಕೊಡುತ್ತಾ ಇದ್ದಾರೆ ಯಲ್ಲಾ' ಎನ್ನುವುದಕ್ಕೆ ಎಷ್ಟೋ ಕಾರಣಗಳನ್ನೆಲ್ಲಾ ಕೊಟ್ಟರು. ಆದರೂ ನಾವು ಇವತ್ತು ಮಂತ್ರಿ ವರ್ಯರು ಕೊಟ್ಟಿರತಕ್ಕ ಕಾರಣಗಳಿಂದ ಸಮಾಧಾನ ಪಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. Sri V. M. Mascarenhas was jumping at the very idea of having so much assets are lying at the yard of the mines, but he has forgotten to take the liabilities into account of which the Hon'ble Member Sri Vasan was very kind enough to apprise the House ಆದರೆ ಯಾವಾಗಲೂ ಇಂಥ ಸಂದರ್ಭದಲ್ಲಿ ನಾವು ಸ್ವಲ್ಪ ಸಭೆಯ ಗೌರವವನ್ನು ಕಾಪಾಡಿಕೊಳ್ಳಬೇಕು ಮತ್ತು ದೇಶದ ಪ್ರಜೆಗಳ ಹಿತವನ್ನು ರಕ್ಷಣೆ ಮಾಡ ಬೇಕು. ಇವತ್ತು ನಾವು ಕೊಡತಕ್ಕದ್ದು ಭಾರಿ ಮೊತ್ತ. ಈ ಮೊತ್ತವನ್ನು ಮುಖ್ಯವಾಗಿ ನಾವು ಮೊದಲನೆ ಸಲ ಪರದೇಶದವರ ಆಡಳಿತದಲ್ಲಿದ್ದಂಥಾ ಒಂದು ಕಂಪೆನಿ ಯನ್ನು ಪಡೆದುಕೊಳ್ಳುವುದಕ್ಕೆ ಕೊಡುವುದರಿಂದ ಯಾರೇ ಹೇಳಿರಲಿ, ಯಾರು ಏನೇ ಕಾರಣ ಕೊಟ್ಟಿರಲಿ ಇದು ಒಳ್ಳೆಯ ಪ್ರಾರಂಭವಾಗುವುದಿಲ್ಲ. ಈ ವಿಷಯ ದಲ್ಲಿ 'generosity' ಎನ್ನುವುದು ಬಹಳ ದೊಡ್ಡ ಮಾತು. Nobody should be so generous at the cost of others; particularly the India Government or the Mysore Government cannot be generous at the cost of the poor people and the exchequer of the poor State. ಆದ್ದರಿಂದ ನಾವು ಈ ಮೊತ್ತವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ, ಸ್ವಾಮಿ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).— ನಾನು ಈ ಒಂಭತ್ತನೇ ವಿಧಿಯನ್ನು ಅನುಮೋದಿ ಸುತ್ತಾ ಒಂದೆರಡು ಮಾತನಾಡಬೇಕೆಂದು ಇಷ್ಟ ಪಟ್ಟಿದ್ದೇನೆ ಸ್ವಾಮಿ. ಕಾಂಪೆನ್ಸೇಷನ್ ಕೊಡತಕ್ಕ ವಿಷಯದಲ್ಲಿ ಯಾವ ರೀತಿಯಾಗಿ ಅನುಸರಿಸಿದ್ದೇವೆ ಎನ್ನುವ ರೀತಿಯನ್ನು ವಿವರಿಸುತ್ತಾ ನಿನ್ನೆ ದಿವಸ ಹಿಂದೆ ಇದ್ದ ಚೀಫ್ ಮಿನಿಸ್ಟರ್‌ರವರು ಅನಾವಶ್ಯಕವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಇಂಡಿಯಾ ಸರ್ಕಾರದವರು ಮೊದಲಿನಿಂದಲೂ ನಮ್ಮ ಮಿನಿಸ್ಟರ್‌ರವರಿಗೆ ಹೇಳುತ್ತಲೇ ಇದ್ದಾರೆ. ಅವರು 14 ಕೋಟಿ ರೂಪಾಯಿ ಕೇಳಿದರೆ ನಾವು 87 ಲಕ್ಷಕ್ಕೆ ಶುರು ಮಾಡಿಕೊಂಡಿದ್ದೇವು, ಅದನ್ನು ವ್ಯಾಪಾರ ಮಾಡುತ್ತಾ ಹೋಗಿದ್ದೇವೆ. ಇಂಡಿಯಾ ಸರ್ಕಾರ ದವರು ಒಂದು ಘಟ್ಟದಲ್ಲಿ ನೀವು 119 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಾಗು ತ್ತದೆಯೇ? ನೋಡಿ, ಯೋಚನೆ ಮಾಡಿ, ಅವರ ಹತ್ತಿರ ನೆಗೋಷಿಯೇಟ್ ಮಾಡುವುದಕ್ಕೆ ಅವಕಾಶ ವಿರಲಿ, ಆ ಒಂದು ಬೇಸಿಸ್ ಮೇಲೆ ಹೋಗೋಣ ಎಂದು ಹೇಳಿದ ಹಾಗೆ ನಮಗೆ ತಿಳಿದಿದೆ. ಹೀಗಿರುವಾಗ 119 ಲಕ್ಷ ಅವರು ಒಪ್ಪಿಕೊಳ್ಳದೇ ಇದ್ದಿದ್ದರೆ ನಾವು ಈ ಸಭೆಯಲ್ಲಿ ನ್ಯಾಷನಲೈಸ್ ಮಾಡಬೇಕು ಎಂದು ಹೇಳಿದ ಮೇಲೆ ಏಕೆ ಒಂದೂವರೆ ವರ್ಷ ನ್ಯಾಷನಲೈಸ್ ಮಾಡುವುದಕ್ಕೆ ಶಕ್ತಿ ಇಲ್ಲದೇ ನಿಂತರೋ ನನಗಂತೂ ಗೊತ್ತಾಗಲಿಲ್ಲ. ನಮಗೆ ಈಗ ಗೊತ್ತಾಗುತ್ತದೆ. ಆ ಗಣಿಯವರು ತಮ್ಮ ಆಸ್ತಿಯನ್ನು ಒಂದೊಂದಾಗಿ ಮಾರಿಕೊಳ್ಳುತ್ತಾ ಇದ್ದಾರೆ ಎಂದು ಈಗ ವರ್ತಮಾನ ಬರುತ್ತಾ ಇದೆ. ಅದೂ ಅಲ್ಲದೆ ಗಣಿಯಲ್ಲಿ wrong tract ತೆಗೆದು ಅದನ್ನು ಸರಿಪಡಿಸಿಕೊಳ್ಳುತ್ತ ಇದ್ದಾರೆ ಎಂದು ಹೇಳಿ ಹೀಗೆ ವಿಧವಿಧವಾದ ವಿಚಾರ ಬರುತ್ತಾ ಇರುವಾಗ ಇದನ್ನು ಒಂದೂವರೆ ವರ್ಷದಿಂದ ಏಕೆ ನ್ಯಾಷನಲೈಸ್ ಮಾಡಲಿಲ್ಲವೋ ಗೊತ್ತಿಲ್ಲ. 119 ಲಕ್ಷ ರೂಪಾಯಿಗಳಿಂದ ಇಂಡಿಯಾ ಸರ್ಕಾರ ದವರು Bargain ಮಾಡುತ್ತಾ ಮಾಡುತ್ತಾ 164ಲಕ್ಷ ರೂಪಾಯಿಗಳಿಗೆ ನಿಲ್ಲಿಸಿದ್ದಾರೆ. ನಮ್ಮ ಎಕ್ಸ್‌ಪರ್ಟ್ ಕಮಿಟಿಯವರು ನ್ಯಾಷನಲೈಸ್ ಮಾಡಬೇಡಿ, ನಮಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದರು. ನಾವೆಲ್ಲಾ ನ್ಯಾಷನಲೈಸ್ ಮಾಡುವುದೇ ಅನುಕೂಲ, ನಮಗೆ ಉತ್ಪನ್ನ ಹೆಚ್ಚಾಗಿ ಬರುತ್ತದೆ ಎಂದು ಹೇಳಿದೆವು. ಆದರೆ ಕಮಿಟಿಯವರು ಇದನ್ನು ನ್ಯಾಷನ ಲೈಸ್ ಮಾಡಿದರೆ ಬಹಳ ತೊಂದರೆಯಾಗುತ್ತದೆ, ಇದರಿಂದ ಲೈಯಬಿಲಿಟೀಸ್ ಜಾಸ್ತಿ, ಅವರಿಗೆ ಈಗಿನ ಕಾಲದಲ್ಲಿ ಇಂಡಿಯಾ ಸರ್ಕಾರದವರು ಕಡಮೆ ಕೊಡು ವುದಕ್ಕೆ ಆಗುವುದಿಲ್ಲ, ಏಕೆಂದರೆ ಈಗ ರಾಜ್ಯ ಹೊಸದಾಗಿ ಕಟ್ಟುತ್ತಾ ಇದ್ದೇವೆ, ನಮಗೆ ಫಾರಿನ್ ಕ್ಯಾಪಿಟಲ್ ಬೇಕು, ಫಾರಿನ್‌ನಿಂದ ಅನೇಕ ಯಂತ್ರೋಪಕರಣಗಳು ಬೇಕು, ಈ ಸಾರಿ ಎರಡನೆ ಪಂಚವಾರ್ಷಿಕ ಯೋಜನೆಗೆ 500 ಕೋಟಿ ರೂಪಾಯಿ ಕ್ಯಾಪಿಟಲ್ ಹೊರಗಡೆಯಿಂದ ಬರಬೇಕು, ಹೀಗಿರು ವಾಗ ನಾವು ಒಂದು ಕೋಟಿ ಒಂದೂವರೆ ಕೋಟಿ ರೂಪಾಯಿ ಇಂಥಾದ್ದಕ್ಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಫಾರಿನ್ ಕ್ಯಾಪಿಟಲ್ ಷನ್ (shun) ಮಾಡಿ ಕೊಂಡರೆ ನಮ್ಮ ಇಂಡಿಯಾಕ್ಕೆ ಅಪಘಾತ ಮಾಡಿ ದಂತಾಗುತ್ತದೆ, ಆದ್ದರಿಂದ ಇದನ್ನೆಲ್ಲಾ ಯೋಚನೆ ಮಾಡಿ ಎಂದು ಅವರು ಹೇಳಿರುವುದು ಬಹಳ ಸಹಜ ವಾದದ್ದೇ. ಹಾಗಿರುವಾಗ ಇದನ್ನು ನಾವು ತಪ್ಪಿಸಿ ಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ 2-3 ಕೋಟಿ ರೂಪಾಯಿಗಳಾದರೂ ಇದನ್ನು ವಹಿಸಿಕೊಳ್ಳಲೇ ಬೇಕು. ಹೀಗಿರುವ ಸಂದರ್ಭದಲ್ಲಿ ನಮ್ಮ ಸರ್ಕಾರ ದವರು ಏನು ಮಾಡಬೇಕೋ ಗೊತ್ತಾಗುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರಿಗೆ ನಾನು ಖಂಡಿತ ಹೇಳುತ್ತೇನೆ, ಈ ವಿಷಯದಲ್ಲಿ 1 ಕೋಟಿ 50 ಲಕ್ಷ ರೂಪಾಯಿ ಕಾಂಪೆನ್ಸೇಷನ್ ಕೊಡಬೇಕೆಂದು ಹೇಳು ತ್ತಾರೆ. ಇನ್ನೂ 50 ಲಕ್ಷ ರೂಪಾಯಿಗಳು ಹೋದರೂ ಸಹ ನವೆಂಬರ್ ಒಂದನೇ ತಾರೀಖಿನ ಒಳಗೆ ಈ ಗಣಿಯನ್ನು ನ್ಯಾಷನಲೈಸ್ ಮಾಡಿ ನಮ್ಮ ವಶಕ್ಕೆ ತೆಗೆದುಕೊಳ್ಳುವ ನಿರ್ಧಾರ ಮಾಡ ಬೇಕು. ಶ್ರೀಮಾನ್ ಗೋಪಾಲಗೌಡರು ಯಾರೋ ತಪ್ಪು ಮಾಡಿದ್ದಕ್ಕೆ ಅವರ ವಂಶೀಕರನ್ನು hang ಮಾಡಬೇಕು ಎಂದು ಹೇಳಿದರು. ಇಂಥವರೂ ಇಂಡಿಯಾ ದೇಶದಲ್ಲಿ ಇದ್ದಾರೆ ಎಂದು ಯಾರಿಗಾ ದರೂ ತಿಳಿದರೆ ಇಂಡಿಯಾ ದೇಶಕ್ಕೆ ಹೊರಗಿನಿಂದ ಯಾರಾದರೂ ಯಾತ್ರಿಕರು ಬರುವವರೂ ಕೂಡ ಬರುವುದಿಲ್ಲ (ನಗು!) ಅವರು ಹೇಳುತ್ತಾರೆ ಇಂಡಿಯಾ ದೇಶದಲ್ಲಿ ಎಕ್ಸ್‌ಪ್ರೋಪ್ರಿಯೇಟ್ ಮಾಡುವುದೂ ಅಲ್ಲದೆ ಯಾರಾದರೂ ಬಂದರೆ ಅವರ ಬಟ್ಟೆಗಳನ್ನೂ ಕಿತ್ತುಕೊಳ್ಳುತ್ತಾಯಿದ್ದಾರೆ ಎಂದು. ಇವರು ಸೋಷಿಯಲಿಸ್ಟ್ರೋ, ಕಮ್ಯೂನಿಸ್ಟ್ರೋ ಗೊತ್ತಾಗಲಿಲ್ಲ! ಅವರ ಉದ್ದೇಶದಲ್ಲಿ ಕಂಡವರ ಜೇಬಿಗೆ ಕೈಹಾಕಿದರೆ ಏನೂ ಪರವಾಗಿಲ್ಲ ಎಂದು ತೋರುತ್ತದೆ. ಕಂಡವರ ಜೇಬಿಗೆ ಕೈಹಾಕಿದರೆ ನವನಾಗರೀಕರು ನಾವು, ಇನ್ನೂ ಮುಂದೆ ಇದ್ದೇವೆ ಎಂದು ಅವರು ಭಾವಿಸು ತ್ತಾರೋ ಏನೋ! ಅಂಥಾ ಮಾತುಗಳನ್ನು ಈ ಸಭೆ

(ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.)

ಯಲ್ಲಿ ಬೇಜವಾಬ್ದಾರಿಯುತವಾಗಿ ಮಾತನಾಡುವುದು ಸರಿಯಲ್ಲ. ಆದ್ದರಿಂದ ನಾನು ಹೇಳುತ್ತೇನೆ, ಫಾರಿನ್ ಕ್ಯಾಪಿಟಲ್ ನಾವು ಷನ್ (shun) ಮಾಡಕೂಡದು. ಅದರಿಂದ ದೇಶ ಕಟ್ಟಬೇಕಾಗಿದೆ. ಈ ದೃಷ್ಟಿಯಿಂದಲೂ ಜಾಗ್ರತೆ ನಾವು ಈ ಗಣಿಗಳನ್ನು ಸ್ವಾಧೀನಕ್ಕೆ ತೆಗೆದು ಕೊಂಡು ಅದರ ಉಪಯೋಗವನ್ನು ಜಾಗ್ರತೆ ಪಡೆಯ ಬೇಕೆಂದು ಹೇಳಿ ನಮ್ಮ ಸರ್ಕಾರದವರು ಇಷ್ಟು ಮಟ್ಟಿಗೆ ಮಾಡಿರುವುದನ್ನು ಅಭಿನಂದಿಸಿ ಈ ಕಾಂಪೆನ್ಸೇಷನ್ ಕ್ಲಾಜ್ ವಿಷಯದಲ್ಲಿ ನನ್ನ ಪೂರ್ಣ ಅನುಮೋದನೆಯನ್ನು ಕೊಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಇನ್ನು ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ಎಲ್ಲ ವಿಷಯಗಳನ್ನೂ ಆಗಲೇ ಚರ್ವಿತ ಚರ್ವಣವಾಗಿ ತಿಳಿಸಿದ್ದೇನೆ. ಇಷ್ಟು ಮಾತ್ರ ಹೇಳುತ್ತೇನೆ. ಯಾವ ಪ್ರಭಾವಕ್ಕೂ ನಾವು ಬಿದ್ದಿಲ್ಲ. ಪ್ರಭಾವ ಎನ್ನತಕ್ಕ ಶಬ್ದದ ಅರ್ಥವನ್ನು ನೀವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಪ್ರಭಾವ ಎಂದರೆ ಎರಡು ತರಹ ಇದೆ. ಒಳ್ಳೆಯ ಪ್ರಭಾವವೂ ಇದೆ, ಕೆಟ್ಟ ಪ್ರಭಾವವೂ ಇದೆ. ಕೇಂದ್ರ ಸರ್ಕಾರದವರನ್ನು ಕೇಳಿದ್ದೇ ಪ್ರಭಾವ ಎಂದು ಹೇಳಿದರೆ, ಅದರಲ್ಲಿ ಏನೂ ನಾಚಿಕೆ ಇಲ್ಲ. ಅವರಿಗೆ ಹೇಳಲಿಕ್ಕೆ ಹಕ್ಕು ಇದೆ. ಎಲ್ಲರಿಗೂ ಹೇಳುತ್ತಾರೆ. ಅದನ್ನು ತೆಗೆದುಕೊಳ್ಳುವುದು, ಬಿಡುವುದು ನಮಗೆ ಸೇರಿದ್ದು. ನಿನ್ನೆ ದಿವಸ ಏಕೆ 164 ಲಕ್ಷ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡೆವು ಎಂಬುದನ್ನು ಸಂಪೂರ್ಣವಾಗಿ ಹೇಳಿದ್ದೇನೆ. ಮೈಸೂರು ಸರ್ಕಾರದವರು ಅವರೇ ಸ್ವಯಂ ಪ್ರೇರಿತರಾಗಿ 164 ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಹೋಗಿಲ್ಲ. ಅದಕ್ಕೆ ಅನೇಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು, ಅನೇಕ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದವರು 164 ಲಕ್ಷ ರೂಪಾಯಿಗಳನ್ನು ಕೊಡಬೇಕಾದ್ದು ಧರ್ಮ, ನಾವಿದನ್ನು ಕೊಟ್ಟರೆ ತಪ್ಪಾಗುವುದಿಲ್ಲ ಎಂದು ಹೇಳಿದ್ದನ್ನು, ಅದರ ಸೂಕ್ತಾಸೂಕ್ತತೆಯನ್ನು ನಾವು ಚೆನ್ನಾಗಿ ಅರ್ಥಮಾಡಿ ಇದು ಕೊಡಬೇಕಾದ್ದು ನ್ಯಾಯ, ಅನಿವಾರ್ಯ ಎನ್ನತಕ್ಕದ್ದನ್ನು ಮನನಮಾಡಿಕೊಂಡು ಕೊಟ್ಟಿದ್ದೇವೆಯೇ ಹೊರತು ಬೇರೆ ಪ್ರಭಾವ ಇಲ್ಲ. ಇದನ್ನು ಪ್ರಭಾವ ಎಂದು ಹೇಳುವುದಾದರೆ ನೀವು ಪ್ರಭಾವ ಎಂದು ಹೇಳಬಹುದು.

ಶ್ರೀ ಎಲ್. ಸಿದ್ದಪ್ಪ.—ಸ್ವಯಂಪ್ರೇರಿತರಾಗಿ ಮಾಡಿಲ್ಲವೆಂದರೇನು ? ಬೇರೆಯವರ ಪ್ರಭಾವಕ್ಕೆ ಒಳಗಾಗಿದ್ದೀರೆಂದು ಅರ್ಥವಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಮನುಷ್ಯ ಸರ್ವಜ್ಞನಲ್ಲ. ಅವನಿಗೆ ಒಂದುವೇಳೆ ವಿಷಯ ಗೊತ್ತಿಲ್ಲದೆ ಹೋದರೆ ಬೇರೆಯವರನ್ನು ಕೇಳುವುದರಲ್ಲಿ ತಪ್ಪಿಲ್ಲ. ಆದರೆ ನೀವು ಹೇಳುವಹಾಗೆ ಮಾಡಿದ್ದರೆ, 87 ಲಕ್ಷಕ್ಕೆ ಬಿಲ್ಲನ್ನು ಪಾಸ್‌ಮಾಡಿ ಕಳುಹಿಸಿದ್ದರೆ ಅದನ್ನು ಅಧ್ಯಕ್ಷರು ಒಪ್ಪಿಕೊಳ್ಳುತ್ತಿರಲಿಲ್ಲ. ಇಂಥ ಸಂದರ್ಭಗಳಿಗೋಸ್ಕರವೇ advised ಆಗಿ ಆರ್ಟಿಕಲ್ 31ನ್ನು ಪಾರ್ಲಿಮೆಂಟಿನಲ್ಲಿ ಪಾಸ್ ಮಾಡಬೇಕಾದರೆ ಇಂಥವು ಕಾನೂನಾಗಬೇಕಾದರೆ ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಬೇಕೆಂದು ನಮೂದಿಸಬೇಕಾದರೆ ನಿಮ್ಮಂಥವರನ್ನು ಗಮನದಲ್ಲಿಟ್ಟುಕೊಂಡು ಮಾಡಿದರೆಂದು ಕಾಣುತ್ತದೆ. ಆರ್ಟಿಕಲ್ 31 ಪಾರ್ಲಿಮೆಂಟಿನಲ್ಲಿ ಬಂದಾಗ ಪ್ರೈಮ್‌ಮಿನಿಸ್ಟರ್‌ರವರು ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಅವರು ಇಡೀ ಹಿಂದೂಸ್ಥಾನದ ಪ್ರೈಮ್‌ಮಿನಿಸ್ಟರ್. ಅವರು ಹೇಳಿರುವುದು ಮೂವತ್ತಾರು ಕೋಟಿ ಜನಗಳ ಪರವಾಗಿ ಹೇಳಿರುತ್ತಾರೆ.

There is no room for expropriation. We give this assurance. It is only for this reason that the President retains thepower of giving assent.

Sri L. SIDDAPPA.—We did not want you to expropriate. What we say is, give due compensation. You need not be unduly generous.

ಶ್ರೀ ಎಚ್. ಸಿದ್ದವೀರಪ್ಪ.—We are not unduly generous. 87 ಲಕ್ಷ ರೂಪಾಯಿಗಳನ್ನು ಯಾವ ಸಂದರ್ಭದಲ್ಲಿ ಕೊಡಬೇಕೆಂದಿದ್ದೆವು ಎಂಬುದನ್ನು ನಿಮಗೆ ಹೇಳಲು ನಿಮ್ಮನ್ನು ನಾನು confidenceನಲ್ಲಿ ತೆಗೆದುಕೊಂಡದಕ್ಕೆ my confidence has not been properly used ಎಂದು ಹೇಳಬೇಕಾಗಿದೆ. I have made it very clear.

ಶ್ರೀ ಬಿ. ಹುಚ್ಚೇಗೌಡ.—ನಿನ್ನೆಯ ದಿನ ಇದಲ್ಲದೆ 135 ಲಕ್ಷ ರೂಪಾಯಿಗಳ liability ಇರುವುದನ್ನು ಒಪ್ಪಿಕೊಂಡಿದ್ದೀರಿ.

ಶ್ರೀ ಎಚ್. ಸಿದ್ದವೀರಪ್ಪ.—ನಾವು 87 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದಾಗ ಕಂಪನಿಯವರು 14 ಕೋಟಿ ರೂಪಾಯಿಗಳನ್ನು ಕೇಳಿದರು. 87 ಲಕ್ಷದಿಂದ 164 ಲಕ್ಷ ರೂಪಾಯಿಗಳಿಗೆ ತಂದು ನಿಲ್ಲಿಸಿದ್ದಕ್ಕೆ ಇದೇನೇ ಸರ್ಕಾರಕ್ಕೆ ತಾವು ಹೇಳತಕ್ಕದ್ದು ಎಂದು ಕೇಳುತ್ತೇನೆ. ಯಾತಕ್ಕೋಸ್ಕರ ಇದನ್ನು ಕೇಳುತ್ತೀರೆಂದು ಅರ್ಥವಾಗುತ್ತದೆ. ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವಾಗುವುದಿಲ್ಲ. ಅದಕ್ಕೋಸ್ಕರ ನಿಮ್ಮನ್ನು ನಂಬಿಕೆಯೊಳಗೆ ತೆಗೆದುಕೊಂಡು Leader of Oppositionಅವರನ್ನು ನಂಬಿಕೆಯೊಳಗೆ ತೆಗೆದುಕೊಂಡು ಮಾಡಿದ್ದೇನೆ. ಈ ಸಂಬಂಧದಲ್ಲಿ ದೆಹಲಿಗೆ ಹೋಗಿದ್ದಾಗ ಶ್ರೀ ಪಟ್ಟಾಭಿರಾಮ್ ಮತ್ತು ಶ್ರೀ ಮಹಮ್ಮದ್ ಇಮಾಂರವರನ್ನೂ ಸಹ ನಮ್ಮ ಸಂಗಡ ಕರೆದುಕೊಂಡು ಹೋಗಿದ್ದೆವು.

Sri L. SIDDAPPA.—He has agreed only for 87 lakhs.

Sri H. SIDDAVEERAPPA.—He was a party ; when we initiated the discussion, he and Sri Pattabhi Raman were there. We did not want any hush hush in this matter. In spite of this if you are not convinced, I should say that the confidence is misplaced.

Sri Mulka GOVINDA REDDY.—On a point of order, Sir. The Hon'ble Minister was making certain allegations to the effect that the confidence reposed in us was misplaced. We would like him to elaborate and explain. It will be a breach of privilege if he does not properly explain.

Sri A. BHEEMAPPA NAIK (Molakalmuru).—Making use of that word, if he misused that word, it is another example of misplaced confidence.

Sri J. MOHAMED IMAM.—I may be permitted to clarify my position, Sir.

Sri H. SIDDAVEERAPPA.—I have not yielded, Sir. I yielded only to the point of order.

ನಿನ್ನೆ ನಾನು ಹೇಳಿರುವ ವಿಷಯಗಳನ್ನು ಸಭೆ ಗಮನಿಸಿದರೆ ಯಾತಕ್ಕೋಸ್ಕರ 164 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ.

Sri Mulka GOVINDA REDDY.—Sir. it is a point of order. Rule 146 of the Rules of Procedure says:

> "146 (1) The matter of every speech must be strictly relevant to the matter before the Assembly.
>
> (2) A member while speaking must not—
>
> **(*b*) Make a personal charge against a Member."

The Hon'ble Minister who was speaking was making some personal charge against a Member of this House and therefore there is a breach of privilege.

Sri H. SIDDAVEERAPPA.—I said 'misplaced'.

ಇದರಲ್ಲಿದ್ದುದ್ದು ಇಷ್ಟು. 87 ಲಕ್ಷ ರೂಪಾಯಿಗಳನ್ನು ಯಾವ ಸಂದರ್ಭದಲ್ಲಿ ಕಾಣಿಸಿದ್ದೇವೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ಆಗಲೇ ತಂದಿದ್ದೇನೆ. ಪುನಃ ಅದನ್ನು ಹೇಳಬೇಕಾದದ್ದು ಅಪ್ರಕೃತ. ಶ್ರೀ ಹುಚ್ಚೇಗೌಡರು ಒಂದು ವಿಷಯವನ್ನು ಅಂದರೆ ಯಾವ ಪ್ರಭಾವಕ್ಕೊಳಗಾಗಿದ್ದಾರೆ ಎನ್ನುವುದನ್ನು ಒತ್ತಿ ಒತ್ತಿ ಹೇಳಿದರು. ಬಹುಶಃ ಅವರು elaborate ಮಾಡಿದ್ದರೆ ಚೆನ್ನಾಗಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ ಸರ್ಕಾರದ ಮಟ್ಟಿಗೆ ಹೇಳುವುದಾದರೆ ನಮ್ಮ ಮೇಲೆ ಯಾರಾದರೂ ಪ್ರಭಾವವನ್ನು ಬೀರುವುದಕ್ಕೆ ಹೋಗಿದ್ದರೆ, ಅವರು ಕೇಂದ್ರ ಸರ್ಕಾರದವರೇ ವಿನಾ ಇನ್ನು ಯಾರೂ ನನ್ನ ಗಮನದಲ್ಲಿ, ನನ್ನ ಗಣನೆಯಲ್ಲಿಲ್ಲ, ನಮ್ಮ ತಿಳುವಳಿಕೆಯಲ್ಲಿಲ್ಲ. ನಾವು ಯಾರ ಹತ್ತಿರವೂ ನೇರವಾಗಿ, ಅಥವ ಬೇರೆಯಾಗಿ ಇದರ ವಿಚಾರವಾಗಿ ವ್ಯವಹಾರ ಮಾಡಿಲ್ಲ. ಕೇಂದ್ರ ಸರ್ಕಾರದ ಜೊತೆಗೆ ನಾವು ವ್ಯವಹಾರ ಮಾಡಬೇಕಾದ್ದು ಅತ್ಯಾವಶ್ಯಕ. ಇಲ್ಲದಿದ್ದರೆ ನಾವು ದೊಡ್ಡದಾಗಿ ಬಿಲ್ ಪಾಸ್‌ಮಾಡಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ತರಿಸದೆ ಅಷ್ಟಕ್ಕೇ ಸಂತೋಷಪಟ್ಟುಕೊಳ್ಳುವುದಾಗಿದ್ದರೆ ಸಂತೋಷಪಟ್ಟುಕೊಳ್ಳಬಹುದು.

Mr. SPEAKER.—May I bring it to the notice of the Hon'ble Minister? Why do you bring in the name of the Central Government here? You have taken a decision under that advice.

Sri H. SIDDAVEERAPPA.—Because so many Hon'ble Members made a reference to compensation, I took the House into confidence and disclosed certain facts. There is nothing wrong It is a concurrent subject and I cannot act freely in the matter. I have the authority of the Central Government to state that this figure of compensation has been fixed at their instance and as desired by them. I have accepted their advice. I do not want anybody to think that the Mysore Government volunteered, *suo motu* of their own accord agreed to this figure. I have agreed because I found justice and soundness in the argument advanced by the Central Government. ಈ ವಿಚಾರದಲ್ಲಿ ಇನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. 164 ಲಕ್ಷ ರೂಪಾಯಿಗಳನ್ನು ಕೊಡುವುದು ನ್ಯಾಯವಾಗಿದೆ.

Therefore, I feel Sir, that there is nothing I can add.

Mr. SPEAKER.—The question is:

> "That Clause 9 stand part of the Bill."

The motion was adopted.

Clause 9 was added to the Bill.

Mr. SPEAKER.—The House will adjourn for lunch after finishing this Bill. Next clause. Clause 10.

***Sri S. SRINIVASA IYENGAR** (T. Narsipur).—Sir, I beg to move:

> 'That for words "three months" the words "one year" shall be substituted wherever they occur.'

ಸ್ವಾಮಿ, ಹತ್ತನೆ ವಿಧಿಗೆ ಈ ರೀತಿ ತಿದ್ದುಪಡಿಯನ್ನು ನಾನು ಸೂಚಿಸುತ್ತೇನೆ. For the words "three months", "one year" shall be substituted wherever they occur. ಈ ಹತ್ತನೆ ವಿಧಿಯಲ್ಲಿ ಪರಿಹಾರ ದ್ರವ್ಯ ಯಾವರೀತಿ ಕೊಡಬೇಕೆನ್ನುವುದಕ್ಕೆ ಒಂದು ವಿಧಾನ ಗೊತ್ತುಮಾಡಿದ್ದಾರೆ. ಯಾವ ದಿವಸ ಈ ರಾಷ್ಟ್ರೀಕರಣವನ್ನು ನಾವು ಮಾಡುತ್ತೇವೆಯೋ ಅದಿನ three-fourths of the amount of Rs. 164 lakhs ಎಂದರೆ 123 ಲಕ್ಷ ರೂಪಾಯಿಗಳನ್ನು ನಗದಾಗಿ ಕೊಡಬೇಕು. ಇನ್ನು ಉಳಿಕೆ ಮೊಬಲಗಾದ 41 ಲಕ್ಷ ರೂಪಾಯಿಗಳನ್ನು ಮೂರು ತಿಂಗಳ ಅವಧಿಯೊಳಗೆ ಕೊಡಬೇಕೆಂದು ನಮೂದಿದೆ. ಈ ಮೂರು ತಿಂಗಳ ಅವಧಿಯೊಳಗೆ, ಯಾತಕ್ಕೆ ಈ ಅವಧಿಯನ್ನು ಇಟ್ಟುಕೊಂಡಿದ್ದಾರೆಂದರೆ ಸರ್ಕಾರಕ್ಕೂ ಮತ್ತು ಕಂಪೆನಿಗೂ ಚರ್ಚಾಸ್ಪದವಾದ ವಿಷಯವಿದ್ದರೆ, ಯಾವುದಾದರೂ disputeಇರತಕ್ಕ ವಿಚಾರವನ್ನು arbitratorಗೆ ಕಳುಹಿಸಿಕೊಟ್ಟು, ಅವರಿಂದ ತೀರ್ಮಾನ ಬರುವುದಕ್ಕೆ ಸ್ವಲ್ಪ ಕಾಲಾವಕಾಶಬೇಕಾಗುತ್ತದೆ. ಅದಕ್ಕೋಸ್ಕರ ಮೂರು ತಿಂಗಳು ಎಂದು ಅವಧಿಯನ್ನು ಇಟ್ಟು

(SRI S. SRINIVASA IYENGAR.)

ಕೊಂಡಿದ್ದಾರೆಂದು ಕಾಣುತ್ತದೆ. ಮುಂದೆ ಈ ಮಸೂದೆಯಲ್ಲಿ 12ನೆ ವಿಧಿಯಲ್ಲಿ ಇನ್ನೊಂದು ಅವಕಾಶವಿದೆ. ಕಂಪೆನಿಯ ವಶದಲ್ಲಿರತಕ್ಕ ಎಲ್ಲಾ ಪದಾರ್ಥಗಳ ಒಂದು ಪಟ್ಟಿಯನ್ನು ತಯಾರುಮಾಡಬೇಕು. ಆ ಪಟ್ಟಿಯನ್ನು 30 ದಿವಸಗಳ ಅವಧಿಯೊಳಗೆ ತಯಾರು ಮಾಡಬೇಕು ಎಂದು ನಮೂದಿದೆ. ಇದರಲ್ಲಿ ಸರ್ಕಾರದವರ ಉದ್ದೇಶವೇನೆಂದರೆ ಯಾವೊತ್ತು ಈ ಕಂಪೆನಿಗಳ ಆಡಳಿತ ನಮ್ಮ ವಶಕ್ಕೆ ಬರುತ್ತದೆಯೋ ಆ ತಾರೀಖಿನಿಂದ ಮೂವತ್ತು ದಿವಸಗಳೊಳಗೆ ಮಾಲು ಹಾಜರಿ ತಃಖ್ತೆಯನ್ನು ತಯಾರ್ಮಾಡಬೇಕೆಂದು ಇದೆ. ಹಾಗೊಂದುವೇಳೆ ಮೂವತ್ತು ದಿವಸಗಳಲ್ಲಿ ತಃಖ್ತೆಯನ್ನು ತಯಾರ್ಮಾಡುವುದಕ್ಕಾಗದೆ ಹೋದರೆ ಸರ್ಕಾರದವರು ಆ ಅವಧಿಯನ್ನು ಹೆಚ್ಚುಮಾಡುವುದಕ್ಕೆ ಅವಕಾಶವನ್ನಿಟ್ಟುಕೊಂಡಿದ್ದಾರೆ. ಮಾಲು ಹಾಜರಿ ಪಟ್ಟಿ ಇಲ್ಲದೆ ಏನೇನು ಬರುತ್ತದೆನ್ನುವುದು ಗೊತ್ತಾಗುವುದಿಲ್ಲ. ಯಾವಾಗ ನಾವು ಕಂಪೆನಿಯ ಆಡಳಿತನ್ನು ತೆಗದುಕೊಳ್ಳುತ್ತೇವೆಯೋ ಆ ದಿವಸ 123 ಲಕ್ಷ ರೂಪಾಯಿಗಳನ್ನು ನಗದಾಗಿ ಕೊಡಬೇಕು ಇನ್ನು ಕೇವಲ 41 ಲಕ್ಷ ರೂಪಾಯಿ ಮಾತ್ರ ಉಳಿಯುತ್ತವೆ. ಈ ವಿಧಿಯಲ್ಲಿ ಗೊತ್ತುಮಾಡಿರುವ ಕಾಲಾವಕಾಶ, ನಮಗೆ ಬರಬೇಕಾದ ಹಕ್ಕುಬಾಧ್ಯತೆಗಳನ್ನು ಚರ್ಚೆಮಾಡುವುದಕ್ಕೆ ಬಹಳ ಕಡಮೆ. ಈ ದೃಷ್ಟಿಯಿಂದ ಕಾಲಾವಕಾಶವನ್ನು ಹೆಚ್ಚುಮಾಡಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ. ಬಾಕಿ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡುವಾಗ ನಗದಾಗಿ ಕೊಡುವ ಪದ್ಧತಿ ಇರಲಿಲ್ಲ. ಆಗ ನಗದಾಗಿ ಬೇಕಾದರೂ ಕೊಡಬಹುದು ಅಥವ ಬೇರೆ ರೂಪದಲ್ಲಿ ಬೇಕಾದರೂ ಕೊಡಬಹುದು ಮತ್ತು ಒಂದೇ ಮೊತ್ತದಲ್ಲಿ ಕೊಡಬಹುದು ಅಥವ ಅನೇಕ ಕಂತುಗಳಲ್ಲಿ ಕೊಡಬಹುದು ಎನ್ನುವ ರೀತಿ ನಾವು ಅವಕಾಶವನ್ನು ಕಲ್ಪಿಸಿಕೊಂಡಿದ್ದೇವೆ. ಆದರೆ ಈ ಮಸೂದೆಯಲ್ಲಿ ಆ ಅವಕಾಶವಿಲ್ಲ. ಏಕ್‌ದಂ 123 ಲಕ್ಷ ರೂಪಾಯಿ ಆ ದಿವಸವೇ ನಗದಾಗಿ ಕೊಡಬೇಕೆಂದಿದೆ. ಕೇವಲ 41 ಲಕ್ಷ ರೂಪಾಯಿ ಕೊಡುವುದಕ್ಕೆ ಮಾತ್ರ ಮೂರು ತಿಂಗಳ ಅವಧಿ ತೆಗೆದುಕೊಂಡಿದ್ದಾರೆಂದು ಆ ವಿಧಿಯಲ್ಲಿದೆ. ಹೀಗೆ ಒಂದು ವೇಳೆ ಮೂರು ತಿಂಗಳಾಗಿಬಿಟ್ಟರೆ, ನಮ್ಮ disputes ಯಾವುದಾದರೂ ಬದ್ದರೆ ಅದನ್ನು arbitratorಗೆ ಕಳುಹಿಸಲು ಕಾಲ ಇಲ್ಲದೆಹೋದರೆ ಮೂರು ತಿಂಗಳು ಕಳೆದ ತಕ್ಷಣ ಆ ಹಣವನ್ನು ಕೊಡಬೇಕು. ಆ ಅವಧಿ ಕಳೆದುಹೋದರೆ ಆ ಹಣವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ನಾನು ಸಲಹೆ ಮಾಡುವುದು ಏನೆಂದರೆ ಇದು ಒಂದು ದೊಡ್ಡ ವಹಿವಾಟು ನಡೆಸುತ್ತಿರತಕ್ಕ ಸಂಸ್ಥೆ. ಇದರ ಮಾಲು ಹಾಜರಿ ತಃಖ್ತೆ ಏನಿದೆಯೋ ಅದು ಬಂದಮೇಲೆ ಅದನ್ನು ವಿಮರ್ಶೆಮಾಡಿ ನೋಡಬೇಕಾದರೆ ಬಹಳ ಕಾಲಾವಕಾಶ ಬೇಕು. ಆದ್ದರಿಂದ ಈ ಅವಧಿಯನ್ನು 12 ತಿಂಗಳವರೆಗೂ ತೆಗೆದುಕೊಳ್ಳುವುದರಿಂದ ಏನೂ ಬಾಧಕವಿಲ್ಲವೆನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ. ಈ ತಿದ್ದುಪಡಿಯು ಸರ್ಕಾರದ ಹಿತ ದೃಷ್ಟಿಯಲ್ಲಿ ತಂದಿರುವುದರಿಂದ ಇದನ್ನು ಒಪ್ಪಿಕೊಳುತ್ತಾರೆಂದು ನಂಬಿದ್ದೇನೆ.

MR. SPEAKER.—Amendment moved :

'That in clause 10, for the words "three months" the words "one year" shall be substituted, wherever they occur.'

*SRI J. MOHAMED IMAM.—Sir, I oppose this clause and I have a few observations to make.

Sir, unfortunately in the course of the debate certain remarks have been made by the Hon'ble Minister in charge. I personally know that my friend Sri Siddaveerappa is a capable man. But sometimes, he is very short tempered and does not understand the real situation properly.

MR. SPEAKER.—I request the Hon'ble Leader of the Opposition to speak on the clause.

SRI J. MOHAMED IMAM.—Sir, because he has made personal references to myself and Sri Pattabhiraman and said that we have misused the cofidence that was reposed in us . .

SRI H. SIDDAVEERAPPA.—I have personally nothing against Sri Imam or Sri Pattabhiraman Sir. What I said was that the information I disclosed yesterday was misplaced.

MR. SPEAKER.—I was quite alive to the statements made.

3-30 P.M.

SRI J. MOHAMED IMAM.—Sir, from the beginning, we have been trying to put this nationalisation on a non-party basis. I myself supported the then Chief Minister and said that we will be one with them on this issue. Accordingly, I consented to be a member of that Committee. That Committee drafted a very good Report and submitted it to Government. When a special resolution was brought before this House, the House unanimously supported the question of nationalisation and the House was very eager that the entire mines should be nationalised. Then myself and Sri Pattabhiraman were invited to accompany the delegation to Delhi, at least to show that the demand was a unanimous one and in this matter individual parties were not concerned and it was a unanimous decision. We went there and had meetings with certain Mininisters including the Finance Minister to advise us with regard to the policy of compensation in

such a way as to not discourage the foreign capital. We met John Taylor & Sons and we were there for two or three days. We pressed that the compensation amount should be 87 lakhs but John Taylor & Sons could not agree for less than two crores. But the then Chief Minister Sri K Hanumanthaiya was for only 87 lakhs. Afterwards it was understood that after our return to Bangalore we must pursue the matter, discuss with them and come to an understanding.

Well Sir, since then, I must say with great regret, neither myself nor Sri Pattabhiraman were consulted regarding payment of compensation. Beyond that what happened in Delhi we do not know anything and we are not a party for this 164 lakhs or even 119 lakhs. Whatever has been done, has been done by the Government. My complaint is this. When both of uswere associated with the delegation, when the Government wanted our view and when we assured them that this shall not be a party matter, it was the duty of the Minister to have taken us into his confidence when the payment of this compensation was accepted. They did not think it worthwhile to do so. I do not know whether it was because there was change in the Government or their attitude or for any other reason, we were not consulted and whatever compensation that has been agreed now has been done so arbitrarily by the Government and the Minister is alone responsible. So, I must repudiate that charge; we have not in any way misused the confidence. We wanted to help the Government. Perhaps, if we were taken into his confidence, it would have been more helpful to him; so that charge is baseless.

Secondly, Sir, the compensation is the most important factor in the whole negotiation. There was that Committee. The Government would have done well to consult that Committee, which was constituted and which, perhaps, still exists; it has not yet been abrogated.

Mr. SPEAKER.—Hon'ble Member cannot stretch his argument too far. He is speaking on the previous clause. So far as the charge was concerned, he was entitled to make a reply and that he has done.

Sri J. MOHAMED IMAM.—Now regarding the mode of compensation and how it should be paid. Government want to protect themselves with regard to the liability. It is about that that I am speaking. Are they sure about the liability ? Yesterday, I put a question to the Hon'ble Minister whether they were sure of the commitments of the Government. It may be true that they are going to get gold worth fifty lakhs. It may be that they have got to spend 80 to 90 lakhs. It may be that they have got cash on hand. But, I do not know what the position is till the 1st of November. Till the 1st of November the Company can sell gold and get cash. So, I wanted a proper assessment of these liabilities. My feeling is that we are groping in darkness. It may be 164 lakhs or in course of time it may be 2 crores. I wish the Minister had referred this to the Committee. It consists of experts and accountants. I am sorry that the Government have neither referred this to the Committee for assessing the future valuation or the compensation nor consulted those who accompanied the delegation. On the other hand, they have misused the confidence which we reposed in them. We believed them when they said that it would be done on non-party basis. We trusted. But they have not valued that confidence we reposed in them. About the mode of payment, three-fourths should be paid at once and 25 per cent to be reserved so that in case the Company people mismanaged or misbehaved, they might be penalised. Three-fourths of 164 lakhs comes to 123 lakhs.

Sri T. MARIAPPA.—In the case of B. T. C., Government had to pay 90 per cent.

Sri J. MOHAMED IMAM.—I have got my own idea of compensation. I do not want anybody to feel that they have been expropriated. But the sudden change of policy of Government to enhance the compensation from 119 lakhs to 164 lakhs has created certain amount of apprehension and doubt in

(SRI J. MOHAMED IMAM.)

the minds of the public. It is left to the Government to convince us as to the reasonableness of this compensation.

Mr. SPEAKER.—When once a decision is taken on this by this House, it cannot be discussed again. A decision has been taken already.

Sri J. MOHAMED IMAM.—Therefore some unpleasant situation has been created. We have done our duty and we have expressed our views. Under these grounds I technically oppose this clause.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೂರು ತಿಂಗಳು ಖಂಡಿತ ಸಾಲದೆಂದು ಹೇಳುತ್ತೇನೆ. ಕಂಪೆನಿಯವರು ಮೊದಲಿನಿಂದಲೂ ಕೂಡ ಸ್ವೇಚ್ಛೆಯಾಗಿ ಅಲ್ಲಿ ಸಾಮಾನುಗಳನ್ನು ವಿಲೆ ಮಾಡುತ್ತಿದ್ದಾರೆಂಬ ವದಂತಿಯಿದೆ. ಅವರಮೇಲೆ ನಮಗೇನು ಹಿಡಿತವಿದೆ? ಒಬ್ಬರು ಡೈರೆಕ್ಟರು ಇದ್ದರು, ಈಗ ಸ್ಪೆಷಲ್ ಆಫೀಸರಿದ್ದಾರೆ. ಅವರು ಎಷ್ಟೇ ದಕ್ಷತೆಯಿಂದ ಕೆಲಸಮಾಡಿದರೂ ಅವರಿಗೆ ಅಲ್ಲಿ ಅಕ್ಸೆಸ್ ಇಲ್ಲ, ಮೀಟಿಂಗಿನಲ್ಲಿ ಅವರನ್ನು ಬಹಳ ಕಂಟೆಮ್ಟ್‌ನಿಂದ ನೋಡುತ್ತಾರೆ, ಯಾವ ವಿಷಯವನ್ನೂ ಅವರಿಗೆ ತಿಳಿಸುವುದಿಲ್ಲ, ಲೆಕ್ಕ ಪತ್ರ ನೋಡುವುದಕ್ಕೆ ಅವಕಾಶ ಕೊಡುತ್ತಿಲ್ಲ ಎಂದು ಕೇಳಿದ್ದೇನೆ. 3 ತಿಂಗಳಾದರೆ ತನಿಖೆಮಾಡುವುದಕ್ಕೆ ಸಾಕಷ್ಟು ಅವಕಾಶವಿಲ್ಲ. ಆದ್ದರಿಂದ ಒಂದು ವರ್ಷವಾದರೂ ಬೇಕೇಬೇಕು. ಈ ದಿವಸ ಅಸೆಟ್ಸ್ ಲೆಕ್ಕ ಹಾಕಿದರೆ ನವೆಂಬರ್ ಒಂದರ ದಿನ ಅದು ಇರುತ್ತದೆಯೋ, ಇಲ್ಲವೋ ಎಂಬ ಅನುಮಾನವಿದೆ. ಆದ್ದರಿಂದ ಸಾಕಾದಷ್ಟು ಅವಕಾಶವಿರಬೇಕು. ಸಾರ್ವಜನಿಕರ ಅಭಿಪ್ರಾಯಧಂತೆ ಕಾಂಪೆನ್ಸೇಷನ್ ಹೆಚ್ಚಿಸಲು ಅವಕಾಶವಿಲ್ಲ. ಸಾರ್ವಜನಿಕರು ಹೆಚ್ಚಿಸಲು ವಿರೋಧಮಾಡುತ್ತಾರೆ, ಅದಕ್ಕೇ ಅವರು ಹಿಂದುಳಿದಿದ್ದಾರೆಂದು ಕಾಣುತ್ತದೆ. ಆದ್ದರಿಂದ ದಯವಿಟ್ಟು ಎಲ್ಲರೂ ಈ ತಿದ್ದುಪಡಿಯನ್ನು ಒಪ್ಪಬೇಕೆಂದು ಕೋರುತ್ತೇನೆ.

*Sri Mulka GOVINDA REDDY.—I oppose this Section 10. It reads as follows:

"Three-fourths of the amount of compensation payable to each of the Companies under Section 9 shall be paid to them in cash on the vesting date and the remainder shall be paid to them in cash within three months from the vesting date:

Provided that if within a period of three months from the vesting date any dispute is referred to arbitration under sub-section (2) of Section 8, it shall be lawful for the Government to retain the whole or any part of such remainder as may be necessary to satisfy any claim which may arise in relation to such dispute, and the amount so withheld shall be disposed of in conformity with the decision of the arbitrator."

Sir, some of the members here speaking on this Bill were arguing that we need foreign capital for the prosecution of the Second Five-Year Plan. When they say it, I really fail to understand their sanity or wisdom in making payment in cash of such a huge amount to this concern. They should have made payment in bonds. Even the remainder is to be paid in cash within three months from the vesting date. My friend Sri Srinivasa Iyengar has moved an amendment that the period is too short. Many a time some disputes will have to be referred and decision arrived at and the period that has been fixed is too short a period. The mischief, if any, that has been done or caused to have been done by these Companies will not be unearthed within such a short period. It is but right that the period should not be less than one year as in some other cases where nationalisation of some concerns was undertaken. The period fixed was one year and why this preference has been shown in this particular case, I fail to understand. When we make this allegation we are suspicious that there must be something behind the scene that is going on and that is why the period that has been fixed is too short and one year period is a reasonable period, and the amendment that has been moved by Sri Srinivasa Iyengar deserves to be accepted if there is fair sense and wisdom on the part of Government.

Sri H. SIDDAVEERAPPA.—It is only with fair sense and wisdom Government have put in three months. I cannot help those who begin to suspect where there is nothing to suspect. So far as the position is concerned, we are dealing with a foreign firm. When once you take away their property naturally they are interested to clear away and they have no subsisting interest to stay on: Of course it throws a great deal of burden

on us to work right from the beginning. I have already set up machinery to start with the work so that they may not sleep over. You will see from clause 13 wherein it is stated that after the commencement of this Act, the Government have the power of entry and examination of the mines and as for any other detail. Therefore, there is no doubt a great responsibility on the Government to see that within the stipulated period other elementary things are done. I am sure if people are vigilant they can do it within three months. If they are lazy, even if we give 3 years they will not do it. I hope they will rise to the occasion.

I therefore feel there is no reason to prolong the question any longer especially when this is a matter left for arbitration.

Sri S. SRINIVASA IYENGAR.—One information. Hon'ble Minister referred to clause 13? I would like to know the position and. . . . .

Sri H. SIDDAVEERAPPA.—We have been at it and as a matter of fact we know certain details. We are aware there is much force in some of your observations. Of course the Companies were not communicative enough. That is a thing which I have myself made clear more often than not. With regard to the point raised by Hon'ble the Leader of the Opposition, that we did not take him into confidence at later stages, I should like to state that it was not done purposely. Events moved so quickly that it was not possible to do so. It was not a prolonged discussion that we were accustomed to. That is the reason why we could not consult him at later stages.

Sri S. SRINIVASA IYENGAR.—I press the amendment Sir.

Mr. SPEAKER.—The question is:

'That in Clause 10, for the words " three months," the words " one year " shall be substituted wherever they occur.'

The motion was negatived.

Mr. SPEAKER.—The question is:

" That Clause 10 stand part of the Bill."

The motion was adopted.

Clause 10 was added to the Bill.

Mr. SPEAKER.—Clause 11. There is an amendment to this clause.

Sri H. SIDDAVEERAPPA.—Sir, in this Clause there is a very small amendment. I move.

'That in sub-clauses (1) and (2) for the words "vested in the Government" the words "vested in the State" shall be substituted."

This is only a verbal amendment and may be accepted.

Sri S. SRINIVASA IYENGAR.—Is not concurrence of the Government of India necessary even to change this?

Sri H. SIDDAVEERAPPA.—Yes, I have taken their concurrence.

(*Laughter*)

Mr. SPEAKER.—The question is:

'That in sub-clauses (1) and (2) for the words " vested in the Government " the words " vested in the State " shall be substituted."

The motion was adopted.

Mr. SPEAKER.—The question is:

" That Clause 11, as amended, stand part of the Bill."

The motion was adopted.

Clause 11 as amended was added to the Bill.

Mr. SPEAKER.—Clauses 12 to 16. There are no amendments. The question is:

"That Clauses 12 to 16, both inclusive, stand part of the Bill."

The motion was adopted.

Clauses 11 to 16, both inclusive were added to the Bill.

Mr. SPEAKER.—Preamble. There is an amendment to the Preamble.

Sri H. SIDDAVEERAPPA.—Sir, my amendment is:

'For the words " mining gold " the words "gold mining" shall be substituted.'

Mr. SPEAKER.—The question is :

'That for the words "mining gold" the words "gold mining" shall be substituted.'

The motion was adopted.

Mr. SPEAKER.—Clause 1, Preamble and Title. The question is :

"That Clause 1, the Preamble as amended and the Title, stand part of the Bill."

The motion was adopted.

Clause 1, the Preamble as amended and the Title were added to the Bill.

Motion to pass.

Sri H. SIDDAVEERAPPA.—Sir, I beg to move :

"That the Kolar Gold Mining Undertakings (Acquisition) Bill, 1956, as amended, be passed."

Mr. SPEAKER.—The question is :

"That the Kolar Gold Mining Undertakings (Acquisition) Bill, 1956, as amended, be passed."

The motion was adopted.

Mr. SPEAKER.—Now the House will rise and meet at 4-20 P.M.

The House adjourned at Fifty Minutes past Three of the Clock and reassembled at Twenty Minutes past Four of the Clock.

[MR. SPEAKER in the Chair.]

MYSORE UNIVERSITY BILL, 1956.

Motion to consider

*Sri A. G. RAMACHANDRA RAO (Minister for Law and Education).—Sir, I beg to move :

"That the Mysore University Bill, 1955, as reported by the Joint Select Committee, be taken into consideration."

While moving this motion I wish to bring to the notice of this House that the Joint Select Committee met nine times and had long deliberations almost on every clause of the Bill. They had the benefit of hearing the representatives of the University Teachers' Association and University Affiliated Colleges' Association. They also heard Dr. M. Shivaram with reference to Medical Colleges. Sir, the Report is a unanimous report. The difference of opinion that existed on several matters were ironed out and harmony established and in this respect they have given their whole time and wholehearted endeavour in making the Act as good as possible. I wish to express and convey my personal gratitude to all the Members who have with devotion and zeal completed this great work of reorganising the University. I also express my gratitude to the several important witnesses who have given valuable evidence.

4-30 P.M.

The most important aspect of the question that was before the Committee was to ensure autonomy in academic matters, autonomy in administrative matters and autonomy in financial matters as recommended by the various bodies. That has been ensured in a very large measure—I might be permitted to say, in the fullest measure that is possible. Thus the University will be set on its foot to grow on its own initiative to develop on the lines dictated by the academicians of the University and progress usefully.

Sir, on two points there were keen discussions in more than one meeting. That was regarding the provisions to be made for compulsory Social Service.

The Select Committee has recommended:

"The question of providing for compulsory social service engaged the attention of the Committee for a considerable time. The need for such a provision as well as the difficulties attendant upon, make such social service compulsory, was examined at great length. It was ultimately decided that at the

present there is no need for the establishment of a Social Service Board or for enforcing compulsory and free social service from students of the University."

Accordingly the Chapter V was deleted and consequential changes were made.

In this connection, I may bring to the notice of the House that the members were anxious that this manual labour or social service should form part of educational curricula, but to make it compulsory, they felt, was going beyond the mark. And the other consideration that was before the Committee was, that the Mysore State was getting enlarged into bigger State with areas coming from different areas and as the Hon'ble Members know, and there is also another University *viz.*, the Karnatak University, which may come under the orbit of the new Mysore State. Therefore to make Social Service obligatory in one University and to leave it in the other University and to allow the other University to continue in its own fashion was thought premature and that it required greater attention, and therefore, that issue itself was dropped for the present. I am sure the new State will take that aspect into consideration and also the working of the two Universities and do the needful in the matter.

Sir, regarding Financial autonomy, that had become a very great issue before the University. The University Grants Commission had intimated our University and also the Government that because the present system of University and the control of administration is, in large measure, in the hands of the Government, they were unable to make grants for the University. As a result of this the work is very much handicapped and sooner it is remedied, the better it is. Therefore the Joint Select Committee went deep into the matter and have made it free of financial control from the Government; and they have gone even a step further while considering clause 34. In that clause, a lumpsum grant with a particular yardstick has been accorded to the University; to make any variation, either increasing or decreasing it, even for a valid reason, it was felt that that should be done in consultation with the Syndicate, and that has been conceded. Thus, while ensuring a lumpsum grant, any variation therefrom either for enhancement or for decrease, it shall be done only after due consultation with the Syndicate. This is a very important aspect of the question which was considered at length and has been properly decided by the Committee.

Now I wish to bring to the notice of the Hon'ble Members, the working of the Karnatak University Act because that University also is going to come within the enlarged Mysore State. I wish to refer only to the few important aspects of the two Universities. Regarding the Chancellor and the Visitorial powers, the provisions are almost identical with the Karnatak University Act; while the Governor of Bombay is the Chancellor, then His Highness the Rajpramukh is the Chancellor here, though the State Governments are vested with the visitorial powers. There is no Pro-Chancellor provided for in the Karnatak University Act, but a provision has been made for enabling the appointment of a Pro-Chancellor when and if necessary by the Chancellor. Regarding the powers of the Chancellor, it is almost the same except probably that the powers of the Chancellor in Mysore are greater.

Regarding Vice-Chancellor, Sir, they have an elected Vice-Chancellor in Karnatak University while it will be a nominated Vice-Chancellor in the Mysore University. In this respect we have very carefully followed the advice tendered by Dr. C. R. Reddy in his valuable Report as well as the proposals made by the Indian Universities Grants Commission, and following their advice, we have made the appointment of a Vice-Chancellor a nominated one instead of an elected one.

Regarding Senate, we have suggested that 9 members be elected by the Registered Graduates and 8 representatives from the Legislature. In the Karnatak University, 4 members

(SRI A. G. RAMACHANDRA RAO.)

would be elected by the Legislative Assembly and one member from the Legislative Council. Regarding graduates, there are 18 members from the Registered Graduates and they have also given more or less functional representation to the Karnatak University. In Mysore, the element of academic people is larger than in the Karnatak University. The powers of the two bodies are almost identical.

Now coming to the Syndicate, Sir, the strength of the Syndicate is 15 in both the cases because it is a compact and executive body. Besides the Vice-Chancellor, there is a D.P.I. of Bombay as *Ex-officio* Chairman and there are 8 members elected by the Senate and 5 from the Academic Council. In Mysore, the Vice-Chancellor, the D.P.I., Four principals of Colleges to be nominated by the Chancellor, three to be elected by the Academic Council and four nominated by the Chancellor. The one important principle the Committee has followed is that as far as possible the system of election should be avoided and the system of nomination be resorted to in order to eliminate frictions, canvassing and the introduction of politics in the Councils of the University. That has been the guiding principle on which the whole Act has been envisaged.

Regarding the powers of the Syndicate, they are also more or less the same.

Regarding the representation in the Academic Council, it is more or less of an academic nature in both the places. I do not want to go further into it.

Regarding the finances also, as I have said, Government gives a lumpsum grant and it is almost a fixed grant, the variation being done only after consultation and for a reasonable cause. Thus, the University as anticipated by the Select Committee will have all powers of autonomy to function and now I leave the report for the consideration of this House.

MR. SPEAKER.—Motion moved :

"That the Mysore University Bill, 1956, as reported by the Joint Select Committee, be taken into consideration".

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಈ ವಿಶ್ವವಿದ್ಯಾನಿಲಯದ ಮಸೂದೆ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈಗ ತಾನೆ ಮಾನ್ಯ ಮಂತ್ರಿಗಳು ಕರ್ಣಾಟಕ ಯೂನಿವರ್ಸಿಟಿ ನಮಗೆ ಬರುವುದರಲ್ಲಿದೆ ಎಂದು ಹೇಳಿ ಆ ಕರ್ನಾಟಕ ಯೂನಿವರ್ಸಿಟಿಯಲ್ಲಿ ಯಾವ ರೀತಿ ರಾಜ್ಯಾಂಗ ಇದೆ, ನಮ್ಮ ಯೂನಿವರ್ಸಿಟಿಯಲ್ಲಿ ಯಾವ ರೀತಿ ರಾಜ್ಯಾಂಗ ಇದೆ ಎನ್ನುವುದನ್ನು ಒಂದಕ್ಕೊಂದಕ್ಕೆ ಹೋಲಿಸಿ ಹೇಳಿದರು. ನವೆಂಬರ್ ಒಂದನೇ ತಾರೀಖಿನಿಂದ ಆಚೆಗೆ ಆ ಕರ್ಣಾಟಕ ಯೂನಿವರ್ಸಿಟಿಯೂ ಸಹ ನಮಗೆ ಬರುತ್ತದೆ. ಆದ್ದರಿಂದ ಆ ಕರ್ನಾಟಕ ಯೂನಿವರ್ಸಿಟಿಯ ಅಂತಸ್ತು ಏನಾಗುತ್ತದೆ ಎನ್ನುವ ವಿಷಯ ಹೇಳಬೇಕಾಗಿತ್ತು. ಅದನ್ನು ಹೇಳಲಿಲ್ಲ, ಒಂದನೇ ತಾರೀಖು ಆದಮೇಲೆ ಏನಾಗುತ್ತದೆ? ಹಾಗೆಯೇ ಉಳಿದುಕೊಳ್ಳುತ್ತದೆಯೇ? ಎರಡು ಯೂನಿವರ್ಸಿಟಿ ಆಗುತ್ತದೆಯೇ? ಮೈಸೂರು ಯೂನಿವರ್ಸಿಟಿ ಒಂದು, ಕರ್ನಾಟಕ ಯೂನಿವರ್ಸಿಟಿ ಒಂದು, ಹೀಗೆ ಎರಡೂ ಉಳಿಯುತ್ತವೆಯೇ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡೂ ಉಳಿಯುತ್ತವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅಲ್ಲಿಗೆ ಕರ್ನಾಟಕ ಯೂನಿವರ್ಸಿಟಿ ಕೆಲವು ವಿಚಾರಗಳಲ್ಲಿ ಬಹಳ ಮುಂದುವರಿದಿದೆ ಎಂದು ಗೊತ್ತಾಗುತ್ತದೆ. ಈಗ ಪ್ರೋಛಾನ್ಸಲರ್ ಹುದ್ದೆ ಕರ್ನಾಟಕ ಯೂನಿವರ್ಸಿಟಿ ಯಲ್ಲಿ ಇಲ್ಲ. ಮೈಸೂರು ಯೂನಿವರ್ಸಿಟಿಯಲ್ಲಿ ಏಕೆ ಇರಬೇಕು? ಛಾನ್ಸಲರ್‌ರವರೇ ಈ ಮಸೂದೆ ಪ್ರಕಾರ ಕಾನ್ವೊಕೇಷನ್ನಲ್ಲಿ ಪ್ರಿಸೈಡ್ ಮಾಡುವುದು ಮತ್ತು ಇತರ ಮಸೂದೆಗಳಿಗೆ ಮಂಜೂರಾತಿ ಕೊಡುವುದು—ಹೀಗಿರುವಾಗ ಕರ್ನಾಟಕ ಯೂನಿವರ್ಸಿಟಿಯಲ್ಲಿ ಪ್ರೋಛಾನ್ಸಲರ್ ಹುದ್ದೆ ಇಲ್ಲ ಎಂದಮೇಲೆ ಮೈಸೂರು ಯೂನಿವರ್ಸಿಟಿಯಲ್ಲಿ ಏನು ಅಗತ್ಯ ಇದೆ ಎನ್ನುವುದನ್ನು ಸಮರ್ಥನೆ ಮಾಡಲಿಲ್ಲ. ಪ್ರೋಛಾನ್ಸಲರ್ ಚಲಾಯಿಸತಕ್ಕ ಅಧಿಕಾರ ಸಹ ಡೆಲಿಗೇಟೆಡ್ ಪವರ್ಸ್, ಸ್ಟ್ಯಾಚುಟರಿ ಪವರ್ಸ್ ಅಲ್ಲ. ಛಾನ್ಸಲರ್ ಏನು ಅಧಿಕಾರ ಕೊಡುತ್ತಾರೋ ಅದನ್ನು ಚಲಾಯಿಸುವುದು ಮಾತ್ರ ಪ್ರೋಛಾನ್ಸಲರಿಗೆ ಅಧಿಕಾರ ಇದೆ. ಆದ್ದರಿಂದ ಪ್ರೋಛಾನ್ಸಲರ ಹುದ್ದೆಯ ಅಗತ್ಯದ ವಿಚಾರದಲ್ಲಿ ಸರಿಯಾದ ಸಮರ್ಥನೆ ಕೊಡಬೇಕು.

ಎರಡನೆಯದು, ವೈಸ್ ಛಾನ್ಸಲರ್ ಚುನಾವಣೆ ವಿಚಾರ. ಕರ್ನಾಟಕ ಯೂನಿವರ್ಸಿಟಿಯಲ್ಲಿ ವೈಸ್ ಛಾನ್ಸಲರ್‌ನ್ನು ಚುನಾಯಿಸುತ್ತಾರೆ. ಒಂದೇ ಸಂಸ್ಥಾನದಲ್ಲಿ ಒಂದು ಯೂನಿವರ್ಸಿಟಿಯಲ್ಲಿ ಚುನಾಯಿತರಾದ ವೈಸ್ ಛಾನ್ಸಲರು ಇನ್ನೊಂದು ಯೂನಿವರ್ಸಿಟಿಯಲ್ಲಿ ನಾಮಕರಣ ಮಾಡಿದ ವೈಸ್ ಛಾನ್ಸಲರ್ ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವುದನ್ನು ಸರಿಹೊಂದಿಸಿಕೊಳ್ಳುವುದಕ್ಕೆ ತೋರುವುದಿಲ್ಲ. ಒಂದೇ ಸಂಸ್ಥೆಯಲ್ಲಿ ಎರಡು ತರಹ ಕರ್ತವ್ಯ. ಒಬ್ಬ ವೈಸ್ ಛಾನ್ಸಲರ್ ನಾಮಕರಣ ವಾದಂಥ ವೈಸ್ ಛಾನ್ಸಲರಿಂದ ಕಾರ್ಯನಿರ್ವಹಣೆ, ಮತ್ತೊಂದು ಚುನಾಯಿತರಾದ ವೈಸ್ ಛಾನ್ಸಲರಿಂದ ಕಾರ್ಯನಿರ್ವಹಣೆ ಅದು ಹೇಗೆ ಸರಿತೂಗಿಸಿಕೊಳ್ಳುವುದು? ಹಿಂದೆ ಈ ಸಭೆಯಲ್ಲಿ ಈ ಮಸೂದೆಯನ್ನು ತಂದಾಗ

ಇಲ್ಲೂ ಸಹ ಚುನಾಯಿತರಾದ ವೈಸ್ ಛಾನ್ಸಲರ್‌ಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡಿದ್ದೆವು.

Mr. SPEAKER.—In the Adaptation of Laws, it will undergo changes.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಎಂದರೆ ಮುಂದುವರಿದಿರತಕ್ಕ ಯೂನಿವರ್ಸಿಟಿಯನ್ನು ಹಿಂದಕ್ಕೆ ಎಳೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಇಲ್ಲ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಮತ್ತೆ ಮೈಸೂರು ಯೂನಿವರ್ಸಿಟಿ ಬಿಲ್ಲನ್ನು ಅದಕ್ಕೆ ಅನ್ವಯ ಮಾಡಿದರೆ ಅವರು ಚುನಾಯಿತ ವೈಸ್ ಛಾನ್ಸಲರನ್ನು ಇಟ್ಟುಕೊಂಡಿರತಕ್ಕ ಪ್ರಗತಿಗಾಮಿ ವ್ಯವಸ್ಥೆಯನ್ನು ತಪ್ಪಿಸಿ, ನೀವು ಬೇಡಿ, ನಾಮಕರಣ ಮಾಡುತ್ತೇವೆ ಎಂದು ಹೇಳುತ್ತೀರಾ ? ಆದುದರಿಂದ ಒಂದೇ ಪದ್ಧತಿಯನ್ನು ಇಟ್ಟುಕೊಳ್ಳೋಣ. ಈಗಲೂ ಕಾಲ ಮೀರಿಲ್ಲ. ನಾವೂ ಸಹ ಛಾನ್ಸಲರ್ ಹುದ್ದೆ ವಿಚಾರದಲ್ಲಿ ಚುನಾಯಿತರಾದ ವೈಸ್ ಛಾನ್ಸಲರ್ ಆಗಬೇಕೆಂದಿಟ್ಟುಕೊಳ್ಳೋಣ. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನವರು ಆದಷ್ಟು ಮಟ್ಟಿಗೆ ಚುನಾವಣಾ ಪದ್ಧತಿಯನ್ನು ನೀವು ಜಾರಿಗೆ ತರಬೇಡಿ, ಇದರಿಂದ ಅನೇಕ ಅನಾಹುತಗಳಾಗುತ್ತವೆ, ಹೈಪೋಟಿಗಳಾಗುತ್ತವೆ ಎಂದು ಹೇಳಿದರು. ಈಗ ನಾವು ಶಾಸನ ಸಭೆಯವರೂ ಚುನಾಯಿತರಾದವರು, ನಮಗೆ sovereignty ಇದೆ. ಆದುದರಿಂದ ನವೆಂಬರ್ ಒಂದನೇ ತಾರೀಖಿನಿಂದ ಒಂದೇ ಸಂಸ್ಥಾನದಲ್ಲಿ ಎರಡು ವಿಶ್ವವಿದ್ಯಾನಿಲಯಗಳಿರುವಾಗ ಒಂದರಲ್ಲಿ ಚುನಾಯಿತರಾದ ವೈಸ್ ಛಾನ್ಸಲರ್ ಇರುವುದು, ಇನ್ನೊಂದರಲ್ಲಿ ನಾಮಕರಣವಾದ ವೈಸ್ ಛಾನ್ಸಲರ್ ಇರುವುದು ಅಕ್ರಮ, ಅದು ಅಸಂಭವ. ಆದುದರಿಂದ ಈ ಶಾಸನದಲ್ಲಿ ಸಹ ಆ ರೀತಿಯ ತಿದ್ದುಪಡಿಮಾಡಿ ಸರಿಹೊಂದಿಸಿದರೆ ನಾವೂ ಸಹ ಮುಂದುವರಿದ ಹಾಗಾಗುತ್ತದೆ ಮತ್ತು ಅನೇಕ ವರ್ಷಗಳಿಂದ ಏನು ಒತ್ತಾಯಮಾಡುತ್ತಿದ್ದೆವೋ ಆ ಒಂದು ಉದ್ದೇಶವನ್ನು ಸರ್ಕಾರದವರು ಸಾಧನೆ ಮಾಡಿಕೊಟ್ಟಹಾಗಾಗುತ್ತದೆಂದು ಹೇಳುತ್ತೇನೆ.

ನಮ್ಮಲ್ಲಿ ಇನ್ನೂಸ್ವಲ್ಪ ಹಿಂದೆ ಹಿಂದೆ ಹೋಗುತ್ತಿದ್ದಾರೆ. ವೈಸ್ ಛಾನ್ಸಲರ್ ಆಗಿ ಯಾರನ್ನು ನೇಮಕ ಮಾಡುತ್ತಾರೆಯೋ ಅವರು ಮೂರು ವರ್ಷದ ಅವಧಿ ತನಕ ನಾಮಕರಣ ಮಾಡಲ್ಪಟ್ಟಿರುತ್ತಾರೆ. ಆ ಅವಧಿ ಮುಗಿದ ನಂತರ ಪುನಃ ನೇಮಕ ಮಾಡಿಕೊಳ್ಳುವಾಗ ಮೊದಲು ವೈಸ್ ಛಾನ್ಸಲರ್ ಆಗಿದ್ದವರಿಗೇ ಅವಕಾಶವಿದೆ. ಅವಧಿಮುಗಿದನಂತರ ಪುನಃ eligible ಆಗುತ್ತಾರೆ. They may be nominated as Vice-Chancellor for a period not exceeding three years at a time. ಒಂದು ಸಲ ಮೂರು ವರ್ಷಕ್ಕೆ ಜಾಸ್ತಿ ಇಲ್ಲದೆ ನಾಮಕರಣಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ಇದು ಮೊದಲು ತಂದಿದ್ದ ಮಸೂದೆಯಲ್ಲಿರಲಿಲ್ಲ. ಅದನ್ನು ತಿದ್ದುಪಡಿ ಮಾಡುವುದಕ್ಕೆ ಏನು ಕಾರಣ? ಮೂರು ವರ್ಷದ ಅವಧಿ ತನಕ ವೈಸ್ ಛಾನ್ಸಲರ್ ನಾಮಕರಣ ಮಾಡುವುದಕ್ಕೆ ಅವಕಾಶವಿದೆ. ವೈಸ್ ಛಾನ್ಸಲರ್ ಎಂದು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿದರೆ ಅವರ ಅವಧಿ ಮೂರು ವರ್ಷ. ಅವರ ಅವಧಿ ಮುಗಿದು ಹೋದಮೇಲೆ ಪುನಃ ನಾಮಕರಣ ಮಾಡುವುದಕ್ಕೆ ಆ ಮನುಷ್ಯನಿಗೆ ಅರ್ಹತೆ ಇದೆ. ಮೂರು ವರ್ಷಕ್ಕೆ ಜಾಸ್ತಿ ಇಲ್ಲದೆ ನಾಮಕರಣ ಮಾಡಬಹುದು, ಎಂದು ಈ ತಿದ್ದುಪಡಿಯನ್ನು ಯಾಕೆ ಇಟ್ಟುಕೊಂಡರು, ಬೇರೆ ಯಾರೂ ಸಿಕ್ಕುವುದಿಲ್ಲವೆಂದು ಇಟ್ಟುಕೊಂಡಿರುತ್ತಾರೆಯೇ ? ಇಲ್ಲಿ ಏನೋ ವಿವಾದಾಸ್ಪದವಾದ ವಿಷಯವಿದೆ. ಹಿಂದೆ ಇದ್ದ ಮಾನ್ಯ ವೈಸ್ ಛಾನ್ಸಲರ್ ವಿಚಾರದಲ್ಲಿಯೂ ಹೀಗೆಯೇ ಹೇಳುತ್ತ ಬಂದರು. ಒಂದೊಂದು ವರ್ಷ, ಎರಡೆರಡು ವರ್ಷ ಅವರಿಗೆ extension ಕೊಡುತ್ತಾ ಬಂದರು, ಈಗ ಬೇರೆಯವರು ಬಂದರು. ಆದರೆ ವಿಶ್ವವಿದ್ಯಾನಿಲಯದಲ್ಲಿ ಅಕ್ರಮಗಳಾಗಿಲ್ಲ, ನಷ್ಟವಾಗಿಲ್ಲ, ಅರ್ಹರಾಗಿದ್ದವರನ್ನು ಕಳೆದುಕೊಂಡಿದ್ದೇವೆ, ಈಗಿರುವವರು ಅಷ್ಟು ಅರ್ಹರಲ್ಲವೆಂದು ಯಾರೂ ಹೇಳುವುದಿಲ್ಲ. ಯಾರು ಅರ್ಹರು, ಯಾರು ಅನರ್ಹರು ಎನ್ನುವ ವಿಷಯಕ್ಕೆ ನಾನು ಬರುವುದಿಲ್ಲ. Three years at a time ಎಂದರೆ ಮೂರು ಮೂರು ವರ್ಷದಂತೆ ಹತ್ತು ಸಲವಾದರೂ ಅದೇ ಮನುಷ್ಯನಿಗೇ ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದ ಎಷ್ಟು ವರ್ಷ ಬೇಕಾದರೂ ನೇಮಕ ಮಾಡಿಕೊಳ್ಳಬಹುದು.

Sri A. G. RAMACHANDRA RAO.—Sir, I wish to invite the attention of the Hon'ble Member to the relevant clause in the Bill :

> "9 (2) : The Vice-Chancellor shall be appointed by the Chancellor and shall hold office during the pleasure of the Chancellor.
>
> (3) Subject to the provisions of sub-section (2) the term of office of the Vice-Chancellor shall ordinarily be for a period of three years, but he shall be eligible for re-appointment for a period not exceeding three years at a time."

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—Chancellor's pleasure ಎಂದರೆ ಅವರ ಸಂತೋಷ ಎಷ್ಟು ದಿವಸ ಬರುತ್ತದೆಯೋ ಅಷ್ಟು ದಿವಸಗಳವರೆಗೆ ವೈಸ್ ಛಾನ್ಸಲರ್ ಇರಬಹುದೆಂದು ಒಪ್ಪಿಕೊಂಡರೆ, ಹಾಗೆ ಅವರ ಸಂತೋಷ ಎಂದರೆ ಗಳಿಗೆಗೆ ಒಂದು ಸಲ ಬದಲಾವಣೆ ಮಾಡಬಹುದೆಂದು ಅದಕ್ಕೆ ಕನಿಷ್ಠಪಕ್ಷ ಮೂರುವರ್ಷವೆಂದು ಮಾಡಿದರು. ಆದರೆ ಆ ಅವಧಿ ಮುಗಿದಮೇಲೆ ಯಾಕೆ ಅವಕಾಶ ಕಲ್ಪಿಸಬೇಕು ? ಇದರ ಉದ್ದೇಶವೇನು ಎಂಬುದು ಅರ್ಥವಾಗುವುದಿಲ್ಲ.......

ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ—ಉತ್ತರ).—ಒಂದು ವೇಳೆ ಪ್ರಾವಿಷನ್ ಇಲ್ಲದೆ ಹೋದರೂ ಪುನಃ ಅವರನ್ನೇ ನೇಮಕ ಮಾಡಿದರೆ ಅದರಿಂದ ತೊಂದರೆಯಾಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—Thank you very much Sri Mariappa. ಅದರಿಂದ ಖಂಡಿತವಾಗಿಯೂ ತೊಂದರೆಯಾಗುವುದಿಲ್ಲ. ಅಸಾಧಾರಣವಾದ ವ್ಯಕ್ತಿಯಾಗಿ ವಿಶ್ವವಿದ್ಯಾನಿಲಯದಲ್ಲಿ ಬಹಳ ಚೆನ್ನಾಗಿ ಆಡಳಿತ ನಡೆಸಿದ್ದಾರೆ ಎಂದು ಕಂಡುಬಂದರೆ ಮೂರುವರ್ಷವಾದಮೇಲೆ ಅದೇ ಮನುಷ್ಯನನ್ನೇ ನಾಮಕರಣಮಾಡಬಾರದೆಂದು ಎಲ್ಲಿಯೂ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಹೇಳಿಲ್ಲ; ಅವರಿಗೆ ಯಾವ ಅನರ್ಹತೆಯೂ ಇರುವುದಿಲ್ಲ. ಆದುದರಿಂದ ಈ ತಿದ್ದುಪಡಿ ಯಾಕೆ ಬೇಕು. ಮೊದಲಿನ ಮಸೂದೆಯಲ್ಲಿ ಈ ಭಾಗವಿರಲಿಲ್ಲ. ಈಗ ಹೊಸದಾಗಿ ಸೇರಿಸಿದ್ದಾರೆ. ಇವರಿಗೇನೋ ಅನುಮಾನ ಬಂದಿರಬಹುದು. ಅದನ್ನು ವಿಶದಪಡಿಸಬೇಕೆಂದು ಮಾಡಿದರೆಂದು ಗೊತ್ತಾಗುತ್ತದೆಯಲ್ಲವೆ! ಹೀಗೆ ಮಾಡಲು ಏನಾದರೂ background ಇದೆಯೋ, data ಇದೆಯೋ? ಅವನ್ನು ಹೇಳಬೇಕೆಂದು ಕೇಳುತ್ತೇನೆ.

ಈ ವಿಶ್ವವಿದ್ಯಾನಿಲಯಕ್ಕೆ ಯಾವ ಯಾವ ಸಮಿತಿಗಳಿರಬೇಕು, ಯಾರು ಅಧಿಕಾರ ನಡೆಸುವವರು ಎಂದು ವಿವರಣೆ ಕೊಟ್ಟಿದ್ದಾರೆ. ಸೆನೇಟ್ ಎಂದು ದೊಡ್ಡ ಸಂಸ್ಥೆ ಇರಬೇಕು; ಸಿಂಡಿಕೇಟ್ ಎಂದು ಚಿಕ್ಕದಾದ ಆಡಳಿ ನಡೆಸತಕ್ಕ ಸಂಸ್ಥೆ ಇರಬೇಕು! ವಿದ್ಯಾಭ್ಯಾಸದ ವಿಚಾರದಲ್ಲಿ (curricular) ಅನೇಕ ವಿಷಯಗಳನ್ನು ತೀರ್ಮಾನಮಾಡುವುದಕ್ಕೆ ಅಕಾಡೆಮಿಕ್ ಕೌನ್ಸಿಲ್ ಇರಬೇಕು; ವಿಶ್ವವಿದ್ಯಾನಿಲಯದಲ್ಲಿ ಯಾರನ್ನಾದರೂ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕಾದರೆ Board of Appointments ಇರಬೇಕು—ಹೀಗೆ ಅನೇಕ ಅಂಗಗಳನ್ನು ರಚನೆಮಾಡಿದ್ದಾರೆ. ಹೀಗೆ ರಚನೆಮಾಡುವಾಗ ಸೆನೇಟ್ ಎಂದು ರಚನೆ ಮಾಡಿರತಕ್ಕ ಒಂದು ಭಾಗದ ಮೇಲೆ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಬಹಳ ವರ್ಷಗಳಿಂದ ಅಂದರೆ 1933ನೆ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾನೂನು ಜಾರಿಗೆ ಬಂದಲಾಗಾಯಿತು ಮೈಸೂರು ಯೂನಿವರ್ಸಿಟಿ ಸೆನೇಟಿಗೆ 9 ಜನ ಪ್ರತಿನಿಧಿಗಳನ್ನು ಕಳುಹಿಸತಕ್ಕ ಹಕ್ಕು ಈ ಶಾಸನ ಸಭೆಗಿದೆ. ಈಗ ಈ ಶಾಸನ ಸಭೆಯಲ್ಲಿರತಕ್ಕ 104 ಜನ ಸದಸ್ಯರಲ್ಲಿ 9 ಜನ ಸದಸ್ಯರನ್ನು ಕಳುಹಿಸಿಕೊಡತಕ್ಕ ಅವಕಾಶವಿದೆ. ಈಗ ಹೊಸದಾಗಿ ತಂದಿರತಕ್ಕ ಮಸೂದೆಯಲ್ಲಿ ಪ್ರತಿನಿಧಿಗಳ ಸಂಖ್ಯೆಯನ್ನು 6 ಜನಗಳಿಗೆ ಇಳಿಸಿದ್ದಾರೆ. ಇಷ್ಟರಲ್ಲಿಯೇ ಶಾಸನ ಸಭೆ ದೊಡ್ಡದಾಗುತ್ತದೆ. ನವೆಂಬರ್ ಒಂದನೇ ತಾರೀಖಿನಿಂದ ಈ ಶಾಸನ ಸಭಾ ಸದಸ್ಯರ ಸಂಖ್ಯೆ 208 ಆಗುತ್ತದೆ. 208 ಜನ ಸದಸ್ಯರಾಗತಕ್ಕ ಶಾಸನ ಸಭೆಗೆ ಮೊದಲಿದ್ದ ಹಾಗೆ 9 ಜನರನ್ನು ಕಳುಹಿಸುವ ಹಕ್ಕನ್ನು 6ಕ್ಕೆ ಯಾಕೆ ಇಳಿಸಿದಿರಿ? ಕರ್ಣಾಟಕ ಯೂನಿವರ್ಸಿಟಿಯಲ್ಲಿ ಅಸೆಂಬ್ಲಿಯಿಂದ ನಾಲ್ಕು ಜನರನ್ನು ಕಳುಹಿಸಲು ಅವಕಾಶವಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅಲ್ಲಿಗೆ ನಮ್ಮ ವಿಶ್ವವಿದ್ಯಾನಿಲಯಕ್ಕೆ ಆರು ಜನ ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ನಾಲ್ಕು ಜನ ಅಂತೂ ಒಟ್ಟಿನಲ್ಲಿ ಹತ್ತು ಜನರನ್ನು ಕಳುಹಿಸಿಕೊಡುವ ಹಕ್ಕಿದೆ ಎಂದು ಹೇಳಿದ ಹಾಗಾಯಿತು. ಈ ಮಸೂದೆಗೆ ಇಷ್ಟರಲ್ಲಿಯೇ ಒಂದು ತಿದ್ದುಪಡಿಯನ್ನು ಸರ್ಕಾರದವರೇ ತರಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯಕ್ಕೆ ರಾಜಪ್ರಮುಖರು ಛಾನ್ಸಲರ್ ಆಗಿರುತ್ತಾರೆಂದು ಹೇಳುತ್ತಾರೆ. ನವೆಂಬರ್ ಒಂದನೆ ತಾರೀಖಿನಿಂದ ರಾಜಪ್ರಮುಖರು ಇರುವುದಿಲ್ಲ. ಗವರ್ನರ್ ಎಂದಿರುತ್ತಾರೆ. ಆಗ ಗವರ್ನರ್‌ರವರು ಛಾನ್ಸಲರ್ ಆಗಬೇಕಾಗುತ್ತದೆ. ಇನ್ನು 14 ದಿವಸಗಳು ಕಳೆದರೆ ಈ ಸಂಬಂಧದಲ್ಲಿ ಒಂದು ತಿದ್ದುಪಡಿಯನ್ನು ತರಬೇಕು. ಆಗಲಾದರೂ ಸಹ ಶಾಸನ ಸಭೆಯಿಂದ ಕಳುಹಿಸತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ಆರು ಎಂದಿರುವುದನ್ನು ಇನ್ನೂ ಸ್ವಲ್ಪ ಹೆಚ್ಚುಮಾಡಬೇಕು. ಇದನ್ನು ನನಗೋಸ್ಕರ ಕೇಳುತ್ತಿಲ್ಲ. ಶಾಸನ ಸಭೆಯು ಸಂಸ್ಥಾನದ ಆಡಳಿತವನ್ನೇ ನಡೆಸುತ್ತಿದೆ. ಈ University body ಯಲ್ಲೂ ಅದಕ್ಕೆ ಸಾಕಷ್ಟು ಪ್ರಾತಿನಿಧ್ಯವಿರಲಿ ಎಂದು ಹೇಳುತ್ತಿದ್ದೇನೆ. 25 ಜನರಿದ್ದರೆ ಸಾಕಷ್ಟು ಪ್ರಾತಿನಿಧ್ಯವಿರುತ್ತದೆಂದಲ್ಲ; ಇದ್ದ ಪ್ರಾತಿನಿಧ್ಯವನ್ನು ಯಾಕೆ ಕಡಮೆ ಮಾಡಿದಿರಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. Registered graduates ಪ್ರಾತಿನಿಧ್ಯವನ್ನು ಹೆಚ್ಚುಮಾಡಿದ್ದೀರಿ. ಅದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಅದು ಪ್ರೋತ್ಸಾಹಾರ್ಹವಾದದ್ದು. ಅದನ್ನು ಧರ್ಮವಾಗಿ ಕೊಟ್ಟಿಲ್ಲ. Registered graduates ಸಂಖ್ಯೆ 2,400 ಜನರಿಂದ ಐದಾರು ಸಾವಿರಕ್ಕೆ ಏರಿದೆ, ಆ ದೃಷ್ಟಿಯಿಂದ ಈ ಕ್ಷೇತ್ರ ವಿಸ್ತಾರವಾದದ್ದರಿಂದ ಇವರ ಪ್ರಾತಿನಿಧ್ಯದ ಸಂಖ್ಯೆಯನ್ನು ಹೆಚ್ಚುಮಾಡಿದಿರಿ.

ಈ ವಿಧಿಯಲ್ಲಿ ಇನ್ನೊಂದು ವಿಷಯವಿದೆ. ಸದಸ್ಯರನ್ನು ಮೂರುಭಾಗಮಾಡಿದ್ದಾರೆ; ಮೂರುಗುಂಪಿಗೆ ಸದಸ್ಯರನ್ನು ಸೇರಿಸಿದ್ದಾರೆ. ಮೂರನೆಯ ಗುಂಪಿನಲ್ಲಿ ನಾಮಕರಣ ಮಾಡುವ ಸದಸ್ಯರೆಂದು ತೋರಿಸಿದ್ದಾರೆ. ಛಾನ್ಸಲರ್‌ರವರು 9 ಜನರನ್ನು ನಾಮಕರಣ ಮಾಡುವ ಹಕ್ಕನ್ನಿಟ್ಟುಕೊಂಡಿದ್ದಾರೆ. ಯಾವ ಉದ್ದೇಶದಿಂದ 9 ಜನರನ್ನು ನಾಮಕರಣಮಾಡಬೇಕು! ಮೈಸೂರು ಸಂಸ್ಥಾನದಲ್ಲಿ ಸರ್ಕಾರದಿಂದ ಒಪ್ಪಿಗೆ ಪಡೆದಿರತಕ್ಕ ಹೈಸ್ಕೂಲು ಹೆಡ್ಮಾಸ್ಟರುಗಳ ಪರವಾಗಿ ಇಬ್ಬರನ್ನು ನಾಮಕರಣಮಾಡಬೇಕು; ಉಳಿಕೆ 7 ಜನರನ್ನು ನಾಮಕರಣಮಾಡುವ ಹಕ್ಕು ಛಾನ್ಸಲರಿಗೆ ಇರತಕ್ಕದ್ದು ಎಂದು ನಮೂದಿಸಿದೆ. ನಾನು ಮೇಲೆ ಹೇಳಿದ ಹಾಗೆ ಸೆನೆಟ್‌ನಲ್ಲಿ ಚುನಾಯಿತರಾದ ಸದಸ್ಯರಿಗಿಂತ ನಾಮಕರಣವಾದ ಸದಸ್ಯರು ಹೆಚ್ಚು. ಅಂದರೆ ಹಿಂದೆ ನಮ್ಮ ಸಂಸ್ಥಾನದಲ್ಲಿ Legislative Council ಇದ್ದ ಹಾಗೆ ಈ ಸೆನೆಟ್ ಇದೆ. ಇದಕ್ಕೂ ನನ್ನ ಆಕ್ಷೇಪಣೆ ಇಲ್ಲ, ಬಹುಶಃ ಸೆನೆಟ್ ಸದಸ್ಯರ ಸಂಖ್ಯೆ 60-62 ಆಗುತ್ತದೆ. ಇವರಲ್ಲಿ ಚುನಾಯಿತ ಸದಸ್ಯರ ಸಂಖ್ಯೆ 19 ಮಾತ್ರ. ಇಷ್ಟು ಕಡಮೆ ಚುನಾಯಿತ ಸದಸ್ಯರ ಸಂಖ್ಯೆ ಇರುತ್ತದೆ. ಹೀಗಿರುವಾಗ ನಾಮಕರಣದ ಮೂಲಕವೂ ಪುನಃ ಹೆಚ್ಚು ಸಂಖ್ಯೆಯಲ್ಲಿ ಸದಸ್ಯರನ್ನು ಯಾಕೆ ತೆಗೆದುಕೊಳ್ಳಬೇಕು? ಮೊದಲನೆ ಕ್ಲಾಜಿನಲ್ಲಿ ನಮೂದು ಮಾಡಿರುವಂತೆ College Principals, Professors, ಅನೇಕ ಇಲಾಖೆಗಳ ಮುಖ್ಯಾಧಿಕಾರಿಗಳು ಯಾರು ಯಾರು ವಿದ್ಯಾಭ್ಯಾಸಕ್ರಮಕ್ಕೆ ಸಂಬಂಧಪಟ್ಟಿದ್ದಾರೆಯೋ ಅಂಥವರಿಗೆಲ್ಲ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅದಕ್ಕೂ ಯಾವ ಅಡ್ಡಿಯೂ ಇಲ್ಲ. ಆದರೆ ನಾಮಕರಣಪದ್ಧತಿ ಯಾಕೆ ಇರಬೇಕು ಎಂದು ಕೇಳುತ್ತೇನೆ. ನಾನು ಏನು ಅಭಿಪ್ರಾಯಪಡುತ್ತಿದ್ದೇನೆಂದರೆ, ಮೈಸೂರು ಸಂಸ್ಥಾನದಲ್ಲಿರತಕ್ಕ ಹೈಸ್ಕೂಲು ಹೆಡ್ಮಾಸ್ಟರುಗಳಿಗೆ ಪ್ರಾತಿನಿಧ್ಯ ಕೊಡಬೇಕೆನ್ನುವ ದೃಷ್ಟಿ ಇದೆ. ಅವರಿಗೆ ಪ್ರಾತಿನಿಧ್ಯಕೊಡಿ. ಆದರೆ ಹೈಸ್ಕೂಲು ಹೆಡ್ಮಾಸ್ಟರುಗಳು ತಮ್ಮಲ್ಲಿಯೇ ಯಾಕೆ ಚುನಾಯಿಸಿಕೊಳ್ಳಬಾರದು? ಸರ್ಕಾರದವರು ನಾಮಕರಣಮಾಡಬೇಕಾದ ಪದ್ಧತಿಯನ್ನು ಯಾಕೆ ಇಟ್ಟುಕೊಳ್ಳಬೇಕು ಎಂದು ಕೇಳುತ್ತೇನೆ. ರಿಜಿಸ್ಟರ್ಡ್ ಗ್ರಾಜುಯೇಟುಗಳು ನಾಲ್ಕು ಸಾವಿರ ಜನ ತಮ್ಮಲ್ಲಿ 9 ಜನರನ್ನು ಚುನಾಯಿಸುವಂತೆ, 104 ಜನ ಶಾಸನ ಸಭಾಸದಸ್ಯರು 9 ಜನ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳುವಂತೆ 100-200 ಹೈಸ್ಕೂಲು ಹೆಡ್ಮಾಸ್ಟರುಗಳು ಸಹ ತಮ್ಮಲ್ಲಿಯೇ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳಲು ಯಾಕೆ ಅವಕಾಶಕೊಡಬಾರದು? ಮೇಲ್ಮನೆಗೆ ಈ ಸಭೆಯಿಂದ ಚುನಾವಣೆಗಳು ನಡೆಯುತ್ತಿವೆ. ಸ್ಥಳೀಯ ಸಂಸ್ಥೆಗಳಿಂದ ಸಂಸ್ಥಾನಾದ್ಯಂತ ಚುನಾವಣೆಗಳು ನಡೆಯುತ್ತಿವೆ. ಪದವೀಧರರ ಕ್ಷೇತ್ರದಿಂದ

ಚುನಾವಣೆಗಳು ಸಂಸ್ಥಾನಾದ್ಯಂತ ನಡೆಯುತ್ತಿವೆ. ಹೀಗೆ ಪ್ರತಿಯೊಂದಕ್ಕೂ ಬೇಕಾದಷ್ಟು ಅವಕಾಶವಿರುವಾಗ ಕಾಲ ಕಳೆಯುವುದಕ್ಕೆ ಅವಕಾಶವಾಗುತ್ತದೆ ಎಂಬ ವಾದ ಸರಿಬರುವುದಿಲ್ಲ.

5 P. M.

ಇನ್ನೊಂದು ವಿಷಯವೇನೆಂದರೆ, ಸೆನೆಟಿನ ಸಭೆಗಳನ್ನು ಗೊತ್ತಾದ ಕಾಲದಲ್ಲಿ ಕರೆಯಬೇಕೆಂದು ಶಾಸ್ತ್ರವಿದೆ. ಸದಸ್ಯರೇನಾದರೂ ಆ ಸಭೆಯನ್ನೇರ್ಪಡಿಸಬೇಕೆಂದು ವೈಸ್‌ಛಾನ್ಸಲರಿಗೆ ಮನವಿಮಾಡಿದರೆ ವೈಸ್‌ಛಾನ್ಸಲರು ಏರ್ಪಡಿಸಬೇಕು ಎಂದು ಅವಕಾಶ ಕಲ್ಪಿಸಿದೆ. ಆದರೆ ಒಂದು ಷರತ್ತು ಹಾಕಿದ್ದಾರೆ. ಏನೆಂದರೆ "to discuss matters of urgent importance" ಎಂದಿದೆ. Matters of urgent importance ಎಂಬುದನ್ನು ಹೇಗೆ ಕಂಡುಹಿಡಿಯುವುದು? ವೈಸ್‌ಛಾನ್ಸಲರು not a matter of urgent importance ಎಂದು ಹೇಳಿದರೆ ಕರೆಯುವ ಹಾಗಿಲ್ಲ. ಆದ್ದರಿಂದ ಅವಕಾಶಮಾಡಿದ್ದರೂ ಪ್ರಯೋಜನವಾಗುವುದಿಲ್ಲ. ಗೊತ್ತಾದ ಕಾಲದಲ್ಲಿ ಸಭೆ ಒಂದು ವಿಷಯ ಚರ್ಚೆಮಾಡಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರೆ ಆ ಸಂದರ್ಭದಲ್ಲಿ ವೈಸ್‌ಛಾನ್ಸಲರು ಸಭೆ ಏರ್ಪಡಿಸಬೇಕೆಂದು ಅವಕಾಶವೇನೋ ಇದೆ. ಈಗ ಸ್ಥಳೀಯ ಸಂಸ್ಥೆಗಳಲ್ಲಿ 15 ಜನ ಮುನಿಸಿಪಲ್ ಕೌನ್ಸಿಲರ್ಸ್ ಇರುತ್ತಾರೆ, ⅓ ಭಾಗಕ್ಕೆ ಕಡಮೆಯಿಲ್ಲದೆ ಸದಸ್ಯರು 'ಅರ್ಜಿಕೊಟ್ಟರೆ ಸ್ಪೆಷಲ್ ಮೀಟಿಂಗ್' ಕರೆಯಬೇಕೆಂದಿದೆ. ಅದೇರೀತಿ ಪ್ರತಿಯೊಂದು ಕಡೆಯೂ ಮೀಟಿಂಗ್ ಕರೆಯಲು ಒಂದು ವಿಧಿ ಇರಬೇಕು. ಇಲ್ಲೂ ಇದೆ. ಆದರೆ ಹಾಗೆ ಅವಕಾಶಕೊಡುವಾಗ ಬಗೆಯಿಲ್ಲದಿರುವ ಹಾಗೆ ಮಾಡಬಾರದು ಎಂಬ ದೃಷ್ಟಿಯಿಂದ ಇದನ್ನು ಸಲಹೆ ಮಾಡುತ್ತಿದ್ದೇನೆ.

ಆಮೇಲೆ ಎರಡನೆಯ ವಿಷಯ. ಮೈಸೂರು ಯೂನಿವರ್ಸಿಟಿ ಆಡಳಿತದಲ್ಲಿ ಸಿಂಡಿಕೇಟ್ ಎಂಬ ಬಹಳ ಅಧಿಕಾರಯುತವಾದ ಒಂದು ಸಂಸ್ಥೆ ಏರ್ಪಾಡು ಮಾಡಿದ್ದಾರೆ. ಈ ಸಂಸ್ಥೆ ಮೈಸೂರು ಯೂನಿವರ್ಸಿಟಿ ಆಡಳಿತದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುವ ಸಂಸ್ಥೆಯಾಗಿದೆ. ಇದಕ್ಕೆ ಬಹಳ ಹೆಚ್ಚಿನ ಅಧಿಕಾರವಿದೆ. ಆಗಲೇ ಮಂತ್ರಿಗಳು ಸೆನೇಟ್ ಎಂಬುದು ಬಹಳ ದೊಡ್ಡ ಸಂಸ್ಥೆ, ಒಂದು ಚಿಕ್ಕ ಸಂಸ್ಥೆ ಆಡಳಿತಕ್ಕೆ ಇರಬೇಕು. ಆ ದೃಷ್ಟಿಯಿಂದ ಸದಸ್ಯರ ಸಂಖ್ಯೆ ಮಿತಿ ಮಾಡಿದ್ದೇವೆ ಎಂದು ಹೇಳಿದರು. ಈ ಸಿಂಡಿಕೇಟಿಗೆ ಇಷ್ಟು ಅಧಿಕಾರ ಕೊಡುವಾಗ ನಾಮಕರಣ ಪದ್ಧತಿ ಅಲ್ಲೇಕೆ ಇಟ್ಟುಕೊಂಡಿದ್ದಾರೆ? 19 (f) ನಲ್ಲಿ :

"Four persons nominated by the Chancellor"

ಎಂದಿದೆ. ಯಾವ ವಿಧಿ ತೆಗೆದುಕೊಂಡರೂ ಸಹ ನಾಮಕರಣಕ್ಕೆ ಅವಕಾಶವಿದೆ.

ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. ಅದು ಹಣಕಾಸಿನ ವಿಚಾರ. ಈ ಮಸೂದೆಯ ಪ್ರಕಾರ ಮೈಸೂರು ಯೂನಿವರ್ಸಿಟಿಯಲ್ಲಿ ಸಾಲಯಾನ ಏನು ಖರ್ಚಾಗಬೇಕೆಂಬ ವಿಚಾರದಲ್ಲಿ ವಿಮರ್ಶೆ ಮಾಡುವುದಕ್ಕೆ ಮತ್ತು ಅಂದಾಜು ಮಾಡುವುದಕ್ಕೆ ಒಂದು ಸಮಿತಿಯಿರಬೇಕು ಎಂದಿದೆ. ಆ ಸಮಿತಿಯವರೇನು ಅಂದಾಜು ತಯಾರಿಸುತ್ತಾರೋ ಅದನ್ನು ಸಿಂಡಿಕೇಟ್ ವಿಮರ್ಶೆ ಮಾಡಬೇಕು. ಅದನ್ನು ಆಮೇಲೆ ಸೆನೇಟ್ ಮುಂದೆ ಇಡಬೇಕು. ಸೆನೇಟ್‌ನವರು ಬೇಕಾದರೆ ಅದರ ಮೇಲೆ ನಿರ್ಣಯವಮಾಡಬಹುದು. ಹಾಗೆ ಸಿಂಡಿಕೇಟ್‌ನವರು ಮಂಡಿಸದೇಹೋದರೆ ಯಾವುದನ್ನು ಮಂಡಿಸುವುದಿಲ್ಲವೋ ಅದರಮೇಲೆ ಸೆನೇಟ್ ಯಾವ ತೀರ್ಮಾನ ಕೊಡುವುದಕ್ಕೂ ಅಧಿಕಾರವಿಲ್ಲ. ಸಿಂಡಿಕೇಟ್‌ನವರು ಯಾವ ಅಂದಾಜನ್ನು ಮಂಡಿಸುತ್ತಾರೋ ಆ ಅಂದಾಜಿನಮೇಲೆ ಸೆನೇಟ್ ಬೇಕಾದರೆ ಶಿಫಾರಸು ಮಾಡಬಹುದು, ನಿರ್ಣಯ ಮಾಡಬಹುದು, ಆ ನಿರ್ಣಯವನ್ನು ಸಿಂಡಿಕೇಟ್ ಕಡ್ಡಾಯವಾಗಿ ಪಾಲಿಸಬೇಕು ಎಂದು ವಿಧಿಯಿದೆ. ಈಗ ಆ ಸಮಿತಿ ರಚನೆ ಯಾವರೀತಿ ಮಾಡಿದ್ದಾರೆಂದರೆ ನಿರ್ಣಯ ಮಾಡುವವರು ಸೆನೇಟ್‌ನವರು. ಅವರಿಗೆ ಅಂದಾಜು ಕೊಡುವವರು ಫೈನಾನ್ಸ್ ಕಮಿಟಿಯವರು. ಈ ಆಡಳಿತ ವ್ಯವಸ್ಥೆಯಲ್ಲಿ ಸೆನೇಟಿಗೆ ಅಷ್ಟಾಗಿ ಅಧಿಕಾರವಿರುವುದಿಲ್ಲ, ತನ್ನ ಅಭಿಪ್ರಾಯವೇನಿದೆಯೆಂದು ನಿರ್ಣಯವಮಾಡಿ ಸಮಿತಿಯಮುಂದೆ ಹೇಳುವುದಕ್ಕೆ ಅಧಿಕಾರವಿರುವುದಿಲ್ಲ, ಸಿಂಡಿಕೇಟ್ ಮಂಡಿಸದಿರುವ ವಿಷಯದಲ್ಲಿ ಸೆನೇಟ್ ಮಾತನಾಡುವುದಕ್ಕೆ ಅವಕಾಶವಿಲ್ಲದಿರುವುದರಿಂದ ಫೈನಾನ್ಸ್ ಸಮಿತಿಯಲ್ಲಿ ಒಬ್ಬಿಬ್ಬರಾದರೂ ಸೆನೇಟ್‌ನವರಿದ್ದರೆ ಅವರ ಅಭಿಪ್ರಾಯ ತೆಗೆದುಕೊಂಡು ಸರಿಯಾಗಿ ವಿಮರ್ಶೆಮಾಡುವುದಕ್ಕೆ ಅವಕಾಶವಿರುತ್ತದೆ. ಕೊನೆಯಲ್ಲಿ ಸೆನೇಟಿಗೆ ಬಂದಾಗ ಆಕ್ಷೇಪಣೆ ಮಾಡುವುದಕ್ಕೆ ಬದಲು ಸಮಿತಿ ಸ್ಟೇಜ್‌ನಲ್ಲೇ ಅಭಿಪ್ರಾಯ ಸೂಚಿಸುವುದಕ್ಕೆ ಅವಕಾಶ ವಿರಬೇಕು ಎಂದು ತಿದ್ದುಪಡಿ ಮಾಡಬೇಕು ಎಂಬ ಅಭಿಪ್ರಾಯವಿದೆ.

ಸ್ವಾಮಿ, ಮಾನ್ಯ ಮಂತ್ರಿಗಳು ಅವರು ಭಾಷಣ ಮಾಡುವಾಗ ಯೂನಿವರ್ಸಿಟಿಗೆ ವರ್ಷೇ ವರ್ಷೇ ಕೊಡಬೇಕಾದ ಹಣದ ವಿಚಾರದಲ್ಲಿ ಎರಡು ಮಾತು ಹೇಳಿದರು. ನಾನ್-ಲ್ಯಾಪ್ಸಬಲ್ ಗ್ರಾಂಟ್ ಎಂಬ ಪದ ಉಪಯೋಗಿಸಿದ್ದಾರೆ. ಈಗಿರುವ ಹಾಗೆ ಮೈಸೂರು ಯೂನಿವರ್ಸಿಟಿಗೆ ಸಾಲಯಾನ ಇಷ್ಟು ರೂಪಾಯಿಗಳು ಬೇಕೆಂದು ಅಂದಾಜಿನಲ್ಲಿ ನಮೂದು ಮಾಡುತ್ತಾರೆ. ಯೂನಿವರ್ಸಿಟಿಯಲ್ಲಿ ಒಂದು ವರ್ಷ ಪೂರ್ತಿಯಾಗಿ ಗೊತ್ತುಮಾಡಿದ ಹಣವೆಲ್ಲಾ ಖರ್ಚಾಗದೆ ಉಳಿದರೆ ಯೂನಿವರ್ಸಿಟಿಗೆ ಹೋಗುವುದಿಲ್ಲ, ಸರ್ಕಾರಕ್ಕೆ ವಾಪಸು ಬರುತ್ತದೆ. ಆ ದೃಷ್ಟಿಯಿಂದ ನಾನ್-ಲ್ಯಾಪ್ಸಬಲ್ ಗ್ರಾಂಟ್ ಎಂದು ಕೊಡೋಣ, ಆಗ ಸರ್ಕಾರಕ್ಕೆ ವಾಪಸು ಬರುವುದಿಲ್ಲ, ಕೊಡುವುದನ್ನು ಯೂನಿವರ್ಸಿಟಿ ಫಂಡಿಗೇ ತೆಗೆದುಕೊಳ್ಳಲಿ ಎಂಬ ದೃಷ್ಟಿಯಿಂದ ತಂದಿದ್ದಾರೆ ಎಂಬುದು ನನ್ನ ಭಾವನೆ. ಮತ್ತೊಂದು ವಿಧಿ ಪ್ರಕಾರ ಯೂನಿವರ್ಸಿಟಿ ಫಂಡ್ ಎಂದು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ. ಸರ್ಕಾರದವರು ಏನು ಗ್ರಾಂಟ್ ಕೊಡಬೇಕೆಂದಿದ್ದಾರೋ ವರ್ಷೇ ವರ್ಷೇ ಅದನ್ನು ಕೊಟ್ಟದ್ದೇ ಆದರೆ ಅವರು ಆ ಫಂಡನ್ನು ಇಟ್ಟುಕೊಳ್ಳುತ್ತಾರೆ, ವಾಪಸು ಬರುವ ಅವಕಾಶವಿರುವುದಿಲ್ಲ. ಈಗ ಎರಡು ವಿಧಾನ ಇರುವುದು. ಯೂನಿವರ್ಸಿಟಿ ಆಡಳಿತದಲ್ಲಿ ಏರುಪೇರಾದರೆ ಗ್ರಾಂಟನ್ನು ಬದಲಾಯಿಸುವುದು ಒಂದು. ಸಿಂಡಿಕೇಟ್ ಸಲಹೆ ಪಡೆದು ಏರುಪೇರು ಮಾಡಿಕೊಳ್ಳಬಹುದು. ಹಾಗಿಲ್ಲದಿದ್ದರೆ ಮೈಸೂರು ಸಂಸ್ಥಾನದ ಬೊಕ್ಕಸದಿಂದ ವರ್ಷೇ ವರ್ಷೇ ಒಂದು ಗೊತ್ತಾದ ಮೊತ್ತ ಯೂನಿವರ್ಸಿಟಿಗೆ ಕೊಡಬೇಕು. ಏರುಪೇರು ಮಾಡುವುದು ಬೇಡ ಎಂಬುದು ಎರಡನೆಯ ವಿಧಾನ. ಅದು ಬಿಟ್ಟರೆ ಗ್ರಾಂಟ್ ಇನ್ ಏಡ್ ರೂಲ್ಸ್ ಇದೆ. ಯಾವ ಸಂಸ್ಥೆಯಲ್ಲಿ ವರಮಾನವೇನಿದೆ, ಖರ್ಚೇನಿದೆ ನೋಡಿ ವರಮಾನದಲ್ಲಿ ಖರ್ಚನ್ನು ಕಳೆದು ಉಳಿಯುವುದನ್ನು ಕೊಡುವುದಕ್ಕೆ ಅವಕಾಶವಿದೆ.

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಗ್ರ್ಯಾಂಟ್-ಇನ್-ಏಡ್ ರೂಲ್ಸ್ ಪ್ರಕಾರ ಅನ್ವಯಿಸತಕ್ಕ ವಿದ್ಯಾಮಂದಿರಗಳಿಗೆ ತಮಗೆ ಬರತಕ್ಕ ವರಮಾನದಲ್ಲಿ ವಾರ್ಷಿಕ ವೆಚ್ಚವೇನಾಗುವುದೋ ಅದನ್ನು ಕಳೆದ ಬಳಿಕ ಉಳಿಯುವುದನ್ನು ಈ ಬಾಬಿಗೆ ಖರ್ಚು ಮಾಡುತ್ತಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಈ ವಿಶ್ವವಿದ್ಯಾನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿರತಕ್ಕಂಥ ಅವಕಾಶ ತಪ್ಪಿ ಹೋಗಿ ಈ ಖರ್ಚುವೆಚ್ಚಗಳೇ ವರ್ಷೇವರ್ಷೇ ಬಡಕಾಯಿಸುತ್ತಾ ಹೋಗಲು ದಾರಿಯಾಗುತ್ತದೆ. ದೇಶ ವಿಶಾಲವಾಗುತ್ತಾ ಬಂದ ಹಾಗೆಲ್ಲಾ ವಿಶ್ವವಿದ್ಯಾನಿಲಯಗಳ ಸಂಖ್ಯೆ ಬೆಳೆಯುತ್ತಾ ಹೋಗಬೇಕು. ಅಂಥ ಅವಕಾಶವಿರಬೇಕೆನ್ನುವಾಗ ಸರ್ಕಾರದವರು ದುಡ್ಡಿಲ್ಲ ಎನ್ನುವ ಸಂಕುಚಿತ ಮನೋಭಾವಕ್ಕೆ ಹೋಗಬಾರದು. ಆದುದರಿಂದ ಮೈಸೂರು ಯೂನಿವರ್ಸಿಟಿಗೆ ಇರತಕ್ಕ ವರಮಾನದಲ್ಲಿ ಖರ್ಚುಕಳೆದು ಉಳಿದುದನ್ನು ಕೊಡುತ್ತೇವೆಂದು ಹೇಳುವುದಾದರೆ ನಾವು ಅದಕ್ಕೆ ಒಪ್ಪಬಹುದು.

Mr. SPEAKER.—The House will now rise and meet at 12 o'clock tomorrow.

The House adjourned at Fifteen Minutes Past Five of the Clock to meet again at Twelve of the Clock on Thursday, the 18th October 1956.

WD 1283—GPB—550—1-1-57.

MYSORE LEGISLATIVE ASSEMBLY

FORTY-FIFTH DAY.

Thursday, 18th October 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Hindustan Machine Tools Ltd. and Bharat Electronics Ltd.

(Land acquired in Bangalore North Taluk).

Q.—798. Sri K. V. BYRE GOWDA (Bangalore North).—

Will the Government be pleased to state :—

ಬೇಕೆಂಬುದೇ ನಮ್ಮೆಲ್ಲರ ಆಶಯವಾಗಿತ್ತು. ಇವೊತ್ತು ಕೆಲಸಕಾರ್ಯಗಳು ಹಾಗೆ ನಡೆಯುತ್ತಿಲ್ಲ. ಒತ್ತಾಯಕ್ಕೆ ಬಲಿಬಿದ್ದು ಕೆಲಸಗಳನ್ನು ಸರ್ಕಾರದವರು ಕೈಗೊಳ್ಳುವುದು, ಅದರಲ್ಲಿಯೂ ಕೆಲಸ ಜಾಗ್ರತೆಯಾಗುವುದಕ್ಕೆ ಮತ್ತು ವಿಳಂಬವಾಗುವುದಕ್ಕೆಕೂಡ ಈ ಪ್ರಭಾವ ಮತ್ತು ಪ್ರತಿಪ್ರಭಾವಗಳು ಕಾರಣಗಳಾಗಿರುತ್ತವೆ. ಹೀಗಾಗಿ ಕೆಲವು ಸಂದರ್ಭಗಳಲ್ಲಿ ಮಂಜೂರಾದ ಕೆಲಸಗಳು ಪ್ರತಿಪ್ರಭಾವದಿಂದ ನಿಂತು ಹೋಗುವುದೂ, ಮಂಜೂರಾಗದೆ ಇರತಕ್ಕವು ಮಂಜೂರಾಗುವುದೂ, ಪ್ರಯೋಜನವಾಗಿಲ್ಲದೆ ಇರುವುವೂ ಪ್ರಭಾವದಿಂದ ಮಂಜೂರಾಗಿ ಅವು ಕಾರ್ಯಗತವಾಗುವುದೂ, ಈಚಿನ ಕೆಲಸಕಾರ್ಯಗಳ ವಿಧಾನವಾಗಿದೆ. ಅದು ಬಹಳ ಶೋಚನೀಯವಾದ, ವಿಷಾದಪಡತಕ್ಕ ವಿಷಯ ಮತ್ತು ಇದರಿಂದ ಹಾನಿ ಬಹಳವಾಗುತ್ತದೆಂದು ನಾನು ಮತ್ತೆ ಹೇಳಬೇಕಾದುದಿಲ್ಲ. ಇದನ್ನು ಸರ್ಕಾರ ಯಾಕೆ ಸರಿಪಡಿಸಿಕೊಳ್ಳುತ್ತಿಲ್ಲವೆಂದು ಹೇಳುವುದು ನನಗೆ ಕಷ್ಟವಾಗಿದೆ. ಒಂದು ವೇಳೆ ಹೇಳಿದರೆ ಅದು charge ಎಂದು ಸರ್ಕಾರದವರು ನಮ್ಮ ಮೇಲೆ ಬೀಳಬಹುದು. ಜನತೆಯನ್ನು ಒಲಿಸಿಕೊಳ್ಳುವುದಕ್ಕೆ ಇದೊಂದು ವಿಧಾನವೆಂದು ಸರ್ಕಾರ ಭಾವಿಸಿದೆ. ಅವರಿಗೇನಾದರೂ ಒಂದು ಕೆಲಸಕಾರ್ಯಮಾಡಿಕೊಟ್ಟು, ಮಾಡಿಕೊಡುವುದಕ್ಕಾಗದೆ ಹೋದರೆ ಮಾಡಿಕೊಟ್ಟಹಾಗೆ ವರ್ತಿಸಿ ಅವರನ್ನು ಒಲಿಸಿಕೊಳ್ಳುವ ಹವ್ಯಾಸಕ್ಕೆ ಸರ್ಕಾರ ಬಿದ್ದಹಾಗೆ ಕಾಣುತ್ತಿದೆ. ಇಂಥ irregularities ಎಷ್ಟೋ ಇವೆ. ತಪ್ಪುಗಳನ್ನು ಕ್ಷಮಿಸುವುದೂ ಅಥವಾ ಮುಚ್ಚಿ ಹಾಕುವುದು ; ಇಂಥವು ಕಂಡು ಬರುತ್ತಿವೆ. ಈ ರೀತಿ ದಾಕ್ಷಿಣ್ಯ, ಮುಲಾಜು, ಪ್ರಭಾವ ಈ ಕೆಲವು ಕಾರಣಗಳಿಂದಾಗಿ ಸರ್ಕಾರ ತನ್ನದೇ ಆದ ಒಂದು ಕಾನೂನು, ತನ್ನದೇ ಆದ ನಿಬಂಧನೆಗಳು ಮತ್ತು ತಾನು ಹಾಕಿಕೊಂಡಿರತಕ್ಕ ನೀತಿ ಮತ್ತು ತತ್ವಗಳನ್ನು ಅನುಸರಿಸಿಕೊಂಡುಹೋಗುವುದು ಕೂಡ ಅದೇ ಸರ್ಕಾರಕ್ಕೆ ಅಸಾಧ್ಯವಾಗಿಬಿಡುತ್ತದೆ. ಇಂಥದ್ದಕ್ಕೆ ನಾನು ಹತ್ತಾರು ಉದಾಹರಣೆಗಳನ್ನು ಕೊಡಬಹುದು. ತುಪ್ಪದಹಳ್ಳಿ ಮತ್ತು ಸಂಗೇನಹಳ್ಳಿ ಕೆರೆಗಳು ಒಡೆದುಹೋದುವು. ಒಂದು ಸಮಿತಿಯನ್ನು ಇವುಗಳಬಗ್ಗೆ ವಿಚಾರಿಸಲು ರಚಿಸಿದರು. ಸಮಿತಿಯವರ ವರದಿಯೂ ಬಂತು. ಆ ಬಗ್ಗೆ ಸರ್ಕಾರ ಏನು ಮಾಡಿತು ಎನ್ನುವುದೆಲ್ಲ ತಮಗೆ ಗೊತ್ತಿದೆ. ಇನ್ನೂ ಕೆರೋಡಿ ಸೇತುವೆ ಹೇಗೆ ಬಿದ್ದುಹೋಯಿತು, ಯಾಕೆ ಬಿದ್ದುಹೋಯಿತು, ಮತ್ತು ಇದಕ್ಕೆ wrong of site ಕಾರಣವಲ್ಲವೆ ? ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ವಿಷಯ ಗೊತ್ತಿಲ್ಲ. ಶಿವಸಮುದ್ರದ ಬಳಿ ಒಂದು foot-bridge ಕೊಚ್ಚಿ ಹೋಯಿತೆಂದು ಹೇಳುತ್ತಾರೆ, ಇಂಥವು ಎಷ್ಟು ಆಗುತ್ತಿವೆ ಎಂಬುದು ಗೊತ್ತಿಲ್ಲ. ನಮ್ಮ ಕಡೆ ನನ್ನ ಕ್ಷೇತ್ರದಲ್ಲಿಯೇ ಕೊಚ್ಚಿಹೋಗಿದೆ. ಇದಕ್ಕೆ ಯಾರಮೇಲೆ ಜವಾಬ್ದಾರಿಯನ್ನು ಹೊರಿಸಬೇಕೆಂಬುದು ಗೊತ್ತಾಗುತ್ತಿಲ್ಲ. ಇದರ ಜವಾಬ್ದಾರಿ ಯಾರದು ?

ಶ್ರೀ ಕಡಿದಾಳ್ ಮಂಜಪ್ಪ (ಮುಖ್ಯಮಂತ್ರಿಗಳು).— 'ಮಿಸ್ ಮೇಜರ್' ಎಂದು legal terminology ಯಲ್ಲಿದೆ. (ನಗು)

ಶ್ರೀ ಎಸ್. ಗೋಪಾಲಗೌಡ. - ಇನ್ನು ಸೇತುವೆಗಳು, ಕೆರೆಗಳು ಮತ್ತು ಅಣೆಕಟ್ಟುಗಳು ಇತ್ಯಾದಿಗಳನ್ನು ಕಟ್ಟಿದ್ದಾರೆ. ಕೆಲವುಕಡೆ ಪ್ರಭಾವದಿಂದ ಹೀಗೆ ನಡೆದಿದೆ ಎನ್ನುವುದಕ್ಕೆ ನಾನು ಉದಾಹರಣೆ ಕೊಡುತ್ತೇನೆ. ಕೆಲವು ಕಡೆ ನೀರು ಬಾರದೆ ಇರುವ ಕಡೆ ದುಡ್ಡು ಖರ್ಚುಮಾಡಿ ಕೆರೆ ಕಟ್ಟುವುದಕ್ಕೆ ಹೋಗುವುದು, ಗೋಪಾಲಗೌಡ ಅಥವಾ ಇತರರನ್ನು ತೃಪ್ತಿಪಡಿಸುವುದಕ್ಕೆ, ಮತ್ತು ಅವರೆಲ್ಲ ತಮ್ಮ ಜೊತೆಯಲ್ಲಿರಲಿ ಎಂದು ಕೆಲಸಕಾರ್ಯಗಳನ್ನು ಮಾಡಿಸುವುದು, ಇಂಥ ಹವ್ಯಾಸಗಳಿಗೆ ಬಿದ್ದರೆ ಸರ್ಕಾರ ಯಾವುದಾದರೂ ಕೆಲಸ ಮಾಡುವುದಕ್ಕೆ ಸಾಧ್ಯವೇ? ಒಂದು ಕೆರೆ ಕಟ್ಟಬೇಕಾದರೆ, ಒಂದು ಅಣೆಕಟ್ಟು ಕಟ್ಟಬೇಕಾದರೆ ಅದಕ್ಕೆ ಅಚ್ಚುಕಟ್ಟು ಎಷ್ಟಿದೆ ಎಂದು ನೋಡಿ ಕೆಲಸ ಮಾಡಿಸಬೇಕು. ಸುಮಾರು 50 ಸಾವಿರ ರೂಪಾಯಿ ಖರ್ಚುಮಾಡಿ ಕೆರೆಯನ್ನು ಕಟ್ಟಿಸಬೇಕಾದರೆ ಅದಕ್ಕೆ ತಕ್ಕ ಅಚ್ಚುಕಟ್ಟು ಇರಬೇಡವೇ? ಒಬ್ಬರನ್ನು ತೃಪ್ತಿಪಡಿಸಲು ಕೆರೆ ಕಟ್ಟಿಸಿದರೆ, ಯಾರಾದರೂ ಮೇಜವಾನಿ ಮಾಡಿದರೆ ಅದಕ್ಕೆ ಒಂದು ಕೆಲಸ ಮಾಡಿಸಿದರೆ, ಹೀಗೆಲ್ಲ ಮಾಡಿದರೆ ಅದು ಪ್ರಜಾಪ್ರಭುತ್ವವೆಂದು ಹೇಗೆ ಎನ್ನಿಸಿಕೊಳ್ಳುತ್ತದೆ ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).— ಯಾವುದರ ಬಗ್ಗೆ ಹೇಳುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ತಾವು ಹೀಗೆಯೇ ಕುಣಿಗಲ್ ಕಡೆ ಹೋದರೆ ಸಿಕ್ಕುತ್ತದೆ. ಮಳವಳ್ಳಿ ಕಡೆ ಹೋದರೂ ಸಿಕ್ಕುತ್ತದೆ. ಯಾವಕಡೆ ಬೇಕಾದರೂ ಇಂಥವು ತಮಗೆ ಸಿಕ್ಕುತ್ತವೆ. ಇನ್ನೂ ಹೆಚ್ಚಾಗಿ ಹೊಸದಾಗಿ ಕೆಲಸಗಳು ನಡೆಯುತ್ತಿವೆ. Housing Board ಹೇಗೆ ಕೆಲಸಕಾರ್ಯ ನಡೆಸುತ್ತಿದೆ ಎನ್ನುವುದು ಗೊತ್ತಾಗಿರುತ್ತದೆ. ಅದರ ಅಂದಾಜುಗಳನ್ನು ಪರಿಶೀಲನೆ ಮಾಡಿಲ್ಲ. (ಸಭೆಯಲ್ಲಿ ನಗು). Humorous ಆಗಿ ಇದ್ದರೆ ಕಾಠಿಣ್ಯತೆ ಹೋಗಿ ಬಿಡುತ್ತದೆ. ಆದ್ದರಿಂದ serious ಆಗಿ ಇರಬೇಕು. ಈ ರೀತಿ ಕೆರೆಗಳನ್ನು ಕಟ್ಟುವ ವಿಷಯದಲ್ಲಿ ಕೂಡ ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಅದರ ಕಡೆ ಗಮನವಿಲ್ಲ. ಹಿಂದೆ ಸಮಿತಿಯವರು ವರದಿಗಳನ್ನು ಕೊಟ್ಟಿದ್ದಾರೆ. ಎಷ್ಟೋ ಇಲಾಖೆಗಳವರು ಅವಕ್ಕೆ ಸಮಂಜಸವಾದ ಉತ್ತರವನ್ನು ಕೊಟ್ಟಿಲ್ಲ. ಇದರಿಂದ ಏನು ಕಾಣುತ್ತದೆಂದರೆ, ಸರ್ಕಾರದ ಆಡಳಿತದಲ್ಲಿ ಸೌಹಾರ್ದವಿಲ್ಲ ಎಂದು. ಒಂದುಕಡೆ ಮಂತ್ರಿ ಮಂಡಳವಿದೆ ; ಸಾರ್ವಜನಿಕರಿಗೆ ಅಥವ ಮತದಾರರಿಗೆ ಜವಾಬ್ದಾರಿಯಾಗಿರುವ, ಮಂತ್ರಿ ಮಂಡಳವಿದೆ. ಇನ್ನೊಂದುಕಡೆ ಸರ್ಕಾರದ ಯಂತ್ರ ಒಂದಿದೆ. ಅದಕ್ಕೆ heads of departments ಇದ್ದಾರೆ. ಇವರೆಲ್ಲರೂ ಸಂಪೂರ್ಣ ಜವಾಬ್ದಾರಿಯಿಂದಿರುತ್ತಾರೆ. ಅಲ್ಲಿಂದ ಕೆಳಗಡೆ ಹೋದರೆ ಆಫೀಸುಗಳಲ್ಲಿ ಸಣ್ಣ ಕಾರಕೂನನಿಂದ ಹಿಡಿದು ಮೇಲಿನವರೆಗೆ ಈ ಯಂತ್ರವಿರುತ್ತದೆ. ಇಲ್ಲಿ ಒಂದಕ್ಕೊಂದಕ್ಕೆ ಪರಸ್ಪರ ಸಂಬಂಧ ಮತ್ತು ಸೌಹಾರ್ದ ಕಂಡು ಬರುತ್ತಿಲ್ಲ. ಮಂತ್ರಿಗಳಿಗೆ ಜನತೆಯನ್ನು ಮೆಚ್ಚಿಸಬೇಕು, ಹೆಚ್ಚು ಕೆಲಸಗಳನ್ನು ಮಾಡಬೇಕು ಎಂಬ ಉತ್ಸಾಹ ಇದ್ದ ಹಾಗೆ ಕಂಡುಬರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.— ನೀವು ಮಂತ್ರಿಗಳಾದರೂ ಕೂಡ ಜನಗಳನ್ನು ಮೆಚ್ಚಿಸಬೇಕು ಎನ್ನುವ ಆಶೆ ಇರುತ್ತದೆ. ಅದು ಸ್ವಾಭಾವಿಕ.

ಶ್ರೀ ಎಸ್. ಗೋಪಾಲಗೌಡ.—ಅದು ಸರ್ಕಾರದ ಮೂಲಭೂತವಾದ ಅಭಿಪ್ರಾಯ. ಈಗ ನಮ್ಮ ಮುಂದಿರುವ ವರದಿಯನ್ನು ನೋಡಿದಮೇಲೆ ಸರ್ಕಾರದ ಯಂತ್ರ ಸರಿಯಾಗಿ ನಡೆಯುತ್ತಿಲ್ಲವೋ ಏನೋ ಎಂದು ಕಾಣುತ್ತದೆ. ಇದಕ್ಕೆ adequate staff ಇಲ್ಲ, trained staff ಇಲ್ಲವೆಂದು ಕಾರಣಗಳನ್ನು ಕೊಡುತ್ತಾರೆ. ಇಷ್ಟುಮಾತ್ರವಾಗಿದೆಯೋ ಹೊರತು excess savings ಮಾಡದೆ ಸಕಾಲದಲ್ಲಿ ಅಂದಾಜು

(ಶ್ರೀ ಎಸ್. ಗೋಪಾಲ ಗೌಡ.)

ಗಳನ್ನು ತಯಾರುಮಾಡದೆ, ಆಗಿರುವ ಅಂದಾಜು ಗಳನ್ನು ಕಾರ್ಯಗತಮಾಡದೆ ಇರುವುದು ಇಂಥದಕ್ಕೆಲ್ಲ ಅವರು ಯಾವ ವಿವರಣೆಯನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ. ಕೆಲಸದಲ್ಲಿ ವಿಳಂಬ ಮಾಡುವುದಕ್ಕೆ ಕಾರಣಅವರ ಸೋಮಾರಿತನ, ಏನೋ ಒಂದು ಬಗೆಯ ಅಸಮಾಧಾನವಿದ್ದದ್ದು. ಇಕ್ವಿಪ್‌ಮೆಂಟ್ ಇತ್ಯಾದಿಗಳ ಬಗ್ಗೆ ಅಸಮಾಧಾನದಿಂದ ಇದ್ದದ್ದು, ಇವೆಲ್ಲವೂ ಕಾರ್ಯಗಳು ವಿಳಂಬವಾಗುವುದಕ್ಕೆ ಕಾರಣವಾಗಿರ ಬೇಕು. ಮತ್ತೇನೂ ಕಾರಣವಿಲ್ಲವೆಂದು ಹೇಳಬಹು ದಾಗಿದೆ. ಇವೊತ್ತು ಈ ಸರ್ಕಾರದ ಯಂತ್ರ ತೀರ ಸಡಿಲವಾಗಿ ಬಿಟ್ಟಿದೆಯೋ ಏನೋ ಎಂಬ ಶಂಕೆ ಬರು ತ್ತದೆ. ಸಡಿಲವಾಗಿಲ್ಲ. ಹಳೆಯ ಕಾಲದ ಯಂತ್ರ ವಾದದ್ದರಿಂದ ಒಂದೇಸಲ ಬಹಳವಾಗಿ, ಹೆಚ್ಚಿನ ಕೆಲಸ ವನ್ನು ಹೊತ್ತುಕೊಂಡು ಮುಂದುವರಿಯುವುದಕ್ಕೆ ಸ್ಫೂರ್ತಿ ಬರುವಂಥ ಬದಲಾವಣೆಗಳನ್ನು ಮಾಡ ದಿರುವುದು ಬಹಳ ತಪ್ಪಾಗಿದೆ:

A MEMBER.—Old model is very strong.

ಶ್ರೀ ಎಸ್. ಗೋಪಾಲಗೌಡ.—ಈ old model ಜೊತೆಗೆ ಕೆಲವು ಅವಗುಣಗಳೂಕೂಡ ಬಂದು ಬಿಡು ತ್ತವೆ. ಒಂದು ರೀತಿಯಲ್ಲಿ ಕೆಲಸ ಮಾಡುವುದು ಅಭ್ಯಾಸವಾಗಿ ಬಿಟ್ಟಮೇಲೆ, ಅಭ್ಯಾಸ ಬಲದಮೇಲೆ ಅದೇರೀತಿ ಕೆಲಸಮಾಡಲು ಹೋಗುತ್ತಾರೆ. 'ಚಾಳಿ' ಎಂದು ಹೇಳುವ ಹಾಗೆ, ಇವರು ಒಂದು ಚಾಳಿಗೆ ಬಿದ್ದಿರುತ್ತಾರೆ. ಹೀಗೆ ಚಾಳಿಗೆ ಬಿದ್ದಮೇಲೆ ಅದನ್ನು ತಪ್ಪಿಸುವುದು ಬಹಳ ಕಷ್ಟವಾದ ಕೆಲಸ. ಕೆಲವು ಎತ್ತುಗಳು ಎಲ್ಲಿ ಬಿಟ್ಟರೂ ಸಹ ಅವು ಗದ್ದೆಗಳಿಗೆ ಹೋಗಿ ಪೈರನ್ನು ತಿನ್ನುವುದು ಹೀಗೆ ಒಂದು ಚಾಳಿಗೆ, ಕೆಟ್ಟ ಚಾಳಿಗೆ ಬಿದ್ದಿರುತ್ತವೆ. ಅಂಥ ದನಗಳಿಗೆ ಜನರು ಕೆಟ್ಟ ಚಾಳಿಗೆ ಬಿದ್ದಿವೆ ಎಂದು ಹೇಳುತ್ತಾರೆ. ಏನು ಮಾಡಿದರೂ ಸಹ ಅದು ಬಿಡುವುದಿಲ್ಲ. ಅವು ಗಳಿಂದ ರೈತರಲ್ಲಿ ಜಗಳಗಳೂ ಸಹ ಆಗುವುದಕ್ಕೆ ಅವಕಾಶವಾಗುತ್ತದೆ. ಹೀಗೆ ಈ ಇಲಾಖೆಗಳಲ್ಲಿ ಕೂಡ ಕೆಲವರು ಕೆಟ್ಟ ಚಾಳಿಗೆ ಬಿದ್ದುಬಿಟ್ಟಿದ್ದಾರೆ. ತಮ್ಮಲ್ಲಿರುವ ಇಂಥ ಅವಗುಣಗಳನ್ನು ತೋರಿಸಿ ಕೊಳ್ಳಲು ಅವರಿಗೆ ಇಷ್ಟವಿಲ್ಲದೆ ಹೋದರೂ ಸಹ ಅವು ತಾವಾಗಿಯೇ ತೋರ್ಪಡಿಸಿಕೊಳ್ಳುತ್ತವೆ. ಹೀಗೆ ಅವ ರಲ್ಲಿ ಅವಗುಣಗಳು ಬೆಳೆದುಕೊಂಡು ಬಂದಿರುತ್ತವೆ. ಆದುದರಿಂದ ಸರ್ಕಾರದ ಯಂತ್ರವನ್ನು ಸರಿಪಡಿಸುವ ಕಡೆಗೆ ಇನ್ನಾದರೂಕೂಡ ಸರ್ಕಾರಗಳು ಸ್ವಲ್ಪ ಗಮನ ಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಆಮೇಲೆ ಯಾರು ಎಷ್ಟೇ ಪ್ರಯತ್ನ ಮಾಡಿದರೂ, ಎಷ್ಟೇ ಉತ್ಸಾಹ ತೋರಿಸಿದರೂ ಅದು ಸರಿ ಹೋಗುವುದಿಲ್ಲ. ಮತ್ತು ಒಂದು ಕೆಲಸ ಎಷ್ಟು ಕಾಲದಲ್ಲಿ ಆಗಬೇಕು ಎಂದು ಗೊತ್ತಾದ ಹೊರತು ಅದನ್ನು ಮಾಡಿಯೂ ಪ್ರಯೋಜನವಿಲ್ಲ. ಇಂಥ ಅನೇಕ ಉದಾಹರಣೆ ಗಳನ್ನು ನಾವು ಕೊಡಬಹುದು. ಪ್ರತಿಯೊಂದು ಇಲಾಖೆ ಯಲ್ಲಿಯೂ ಹೀಗೆ ನಡೆಯುತ್ತಿದೆ. ಯಾವುದೇ ಇಲಾಖೆ ಯನ್ನು ತೆಗೆದುಕೊಂಡರೂ ಈ ರೀತಿ ವಿಳಂಬ ಮಾಡು ವುದು, ಹಣಕಾಸಿನ ವಿಷಯದಲ್ಲಿ ಅನಾವಶ್ಯಕವಾಗಿ ಉಳಿತಾಯ ಮಾಡುವುದು ಅಥವಾ ಹೆಚ್ಚುವರಿ (excess) ಯಾಗಿ ಖರ್ಚು ಮಾಡುವುದು ಇಂಥವನ್ನು ನಾವಾಗಲೇ ಗಮನಿಸಿದ್ದೇವೆ.

ನಾನು ಹಿಂದೆ ಹೇಳಿದ ಹಾಗೆ, ಶೇಕಡ ಹತ್ತರವರೆಗೆ ನಾವು ಇದನ್ನು ಪಡೆದುಕೊಳ್ಳಬಹುದು. ಲಕ್ಷಾಂತರ ರೂಪಾಯಿಗಳ, ಕೋಟ್ಯಾಂತರ ರೂಪಾಯಿಗಳ ಬಂಡ ವಾಳ ಹಾಕುವಾಗ ಒಂದು ಮಾರ್ಜಿನ್ ಇಟ್ಟುಕೊಳ್ಳ ಬೇಕು. ಆದರೆ ಮಾರ್ಜಿನ್ ಆಫ್ ಎರರ್ ಮೂಲ ಎಸ್ಟಿಮೇಟ್‌ಗಿಂತ ಜಾಸ್ತಿಯಾದರೆ ಬಹಳ ಕಷ್ಟ. ಇದಕ್ಕಾಗಿ ಸಾಮಾನ್ಯವಾಗಿ ಸರ್ವಿಸ್ ಕಂಡೀಷನ್ನಲ್ಲಿ ನ್ಯೂನತೆಯೇನಿದೆ ಅದನ್ನು ತಿದ್ದುವುದಕ್ಕೆ ಅನೇಕ ಶಿಫಾರಸುಗಳನ್ನು ಮಾಡಿದ್ದಾರೆ. ಅದನ್ನು ಚರ್ಚೆ ಮಾಡಿ ಹೆಚ್ಚಿನ ವಿಷಯಗಳನ್ನು ನಾವು ವಿವರವಾಗಿ ಕಂಡುಕೊಳ್ಳಬಹುದಾಗಿದೆ. ವಿವರವನ್ನು ನಾನು ಶ್ರೀ ಶ್ರೀನಿವಾಸಐಯ್ಯಂಗಾರ್ ಅವರಿಗೆ ಬಿಡುತ್ತೇನೆ. ಏಕೆಂದರೆ ಅವರು ಮಾತನಾಡುವಾಗ ಮ್ಯಾಥಮ್ಯಾ ಟಿಕಲ್ ಪ್ರಿಸಿಷನ್ ಇಂದ ಹೇಳುತ್ತಾರೆ. ಇಷ್ಟಿದೆ, ಇಷ್ಟಿದೆ ಎಂದು ತಿಳಿಸುತ್ತಾರೆ. ವರದಿಯಲ್ಲಿ training of accounts staff ವಿಚಾರದಲ್ಲಿ ನಿಷ್ಠೂರವಾಗಿ ಈ ರೀತಿ ತಿಳಿಸಿದ್ದಾರೆ:—

"They recommend that Government should take a serious view of this matter and arrange for training of the departmental accounts clerks. The State Accounts Department should also arrange to depute trained accounts men to other Departments. In cases where the work requires to be handled by competent hands, the Comptroller and Auditor General may be requested to spare some hands till the position improves on the State side, as the Accountant General has expressed his inability to spare men from his Department. This will be particularly necessary after the formation of the New State, when varied and complicated problems would arise and the assistance from the Accountant General's Office may be necessary for some time."

ಮೈಸೂರು ಸಂಸ್ಥಾನದ ಹಣಕಾಸಿನ ವಿಷಯದಲ್ಲಿ ಕೊರತೆಯಿದೆಯೆಂದು ಕೂಡ ವರದಿಯಲ್ಲಿ ಹೇಳಿದೆ. ಇದನ್ನು ಚರ್ಚೆಮಾಡುವಾಗ ನಾವು ಸಾಮಾನ್ಯವಾಗಿ ಸ್ಥೂಲವಾಗಿ ಚಿಕ್ಕ ವಿಷಯಗಳನ್ನು ಈ ಸಭೆ ಚರ್ಚೆ ಮಾಡಬಹುದೆಂದು ಭಾವಿಸಿದ್ದೇನೆ. ಇಲ್ಲಿ ಮುಖ್ಯ ವಾಗಿ ನಾನು ಮೊದಲೇನು ಪ್ರಸ್ತಾಪಮಾಡಿದೆನೇ ಪ್ರಭಾವ ಇತ್ಯಾದಿ ಅವುಗಳಿಂದಾಗಿ ನಮಗೆ ತೊಡಕ ಹೆಚ್ಚಾಗಿ ಬಂದಿದೆಯೆಂದು ನಾನು ತಿಳಿದುಕೊಂಡಿ ದ್ದೇನೆ. ಈ ಸಮಿತಿಯವರು ಅದನ್ನು ಹೆಚ್ಚಾಗಿ ಪ್ರಸ್ತಾಪ ಮಾಡಿಲ್ಲ. ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಈ ರೀತಿ ಹೇಳಿದೆ:—

"that the moneys shown in the accounts as having been disbursed were legally available for and applicable to the service or purpose to which they have been applied or charged;"

"that the expenditure conforms to the authority which governs it;

"that every reappropriation has been made in accordance with the provisions made in this behalf in the Appropriation Act, or under rules framed by competent authority under the provisions of the said Act."

ಕೊಡಲ್ಪಟ್ಟ ಹಣ ಖರ್ಚಾಯಿತೇ, ಇಲ್ಲವೆ ಅಥವಾ ಅದಕ್ಕಿಂತ ಹೆಚ್ಚಾಗಿ ತೆಗೆದುಕೊಂಡಿದ್ದರೆ ಅಥವಾ ತೆಗೆದುಕೊಂಡಿದ್ದ ಹಣದಲ್ಲಿ ಉಳಿತಾಯಮಾಡಿದರೆ, ಇದನ್ನೆಲ್ಲಾ ನೋಡಿ ವರದಿ ಕೊಡಬೇಕು ಎಂದು ತಿಳಿಸಿದ್ದಾರೆ. ಇಷ್ಟು ಸಮಿತಿಯ ಕರ್ತವ್ಯ. ಇದಾದ ಮೇಲೆ ಮುಂದೆ ಹೀಗೆ ಹೇಳಿದ್ದಾರೆ :—

"Further it shall also be a duty of the Committee on Public Accounts—

to examine such trading, manufacturing and profit and loss accounts and balance sheets as His Highness the Maharaja may have required to be prepared and Audit Officer's Report thereon; and

to consider the report of the Audit Office where His Highness the Maharaja may have required him to conduct an audit of any receipts or to examine the accounts of stores and stock."

ಇಷ್ಟು ಕೆಲಸವನ್ನು ಸಮಿತಿಯವರಿಗೆ ಒಪ್ಪಿಸಿದ್ದರು; ಅದನ್ನು ಮಾಡಿದ್ದಾರೆ. ಆದರೆ ಮೂಲತಃ ಇರತಕ್ಕ ನ್ಯೂನತೆಗಳು ಸಮಿತಿಯವರ ಅಧಿಕಾರಕ್ಕೆ ಹೊರತಾಗಿವೆ ಎನ್ನುವ ಅಭಿಪ್ರಾಯ ಸೂಚಿಸುತ್ತಾರೆ. ಈಗ ಟ್ರೇಡಿಂಗ್‌ನಲ್ಲಿ ಕೈಗಾರಿಕೆಗಳ ಬಗ್ಗೆ ಪರಿಶೀಲನೆ ಮಾಡಿ ಮೆಷೀನ್‌ಟೂಲ್ಸ್, ಸೋಪ್ ಫ್ಯಾಕ್ಟರಿ, ಪೋರ್ಸಿಲೇನ್ ಫ್ಯಾಕ್ಟರಿ, ಸಿಲ್ಕ್ ಫಿಲೇಚರ್ಸ್ ಇತ್ಯಾದಿಗಳನ್ನು ಪರಿಶೀಲಿಸಿ ಅಭಿಪ್ರಾಯಕೊಟ್ಟಿದ್ದಾರೆ. ಹಣದ ವಿಚಾರದಲ್ಲಿ ಲೆಕ್ಕ ಪತ್ರ ಯಾವರೀತಿ ಇಡಬೇಕೆಂದು ಸಲಹೆ ಮಾಡಿದ್ದಾರೆ ಮತ್ತು ಯಾವರೀತಿ ಅಭಿವೃದ್ಧಿ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಮುಖ್ಯವಾಗಿ ಈ ಹೊತ್ತು ಸರ್ಕಾರದವರು ಇನ್ನೂ ಸ್ವಲ್ಪ ಮುಂದೆ ಹೋಗಿ ಯೋಚನೆ ಮಾಡಬೇಕಾಗುತ್ತದೆ. ಈ ದಿನ ಹಣಕಾಸನ್ನು ಹಂಚುವುದು, ಖರ್ಚುಮಾಡುವುದು ಮತ್ತು ನಾವು ಪಡೆಯುವುದು ಇದನ್ನು ಸರಿಯಾಗಿ ಯಾವುದಾದರೂ ತತ್ವದ ಆಧಾರದ ಮೇಲೆ ಪ್ರಾಮಾಣಿಕವಾದ ಒಂದು ಯಂತ್ರವನ್ನಿಟ್ಟುಕೊಂಡು ನಾವು ಮಾಡುತ್ತಿದ್ದೇವೆಯೆ ಎಂಬುದು ಬಹಳ ಮುಖ್ಯವಾದುದು. ಈ ಅಂಶದ ಕಡೆಗೆ ಹಣಕಾಸಿನ ವಿಷಯದಲ್ಲಿ ಸರ್ಕಾರ ಹೆಚ್ಚು ಗಮನ ಕೊಡಬೇಕು. ಆಹಾರ ಇಲಾಖೆಯವರು ಒಂಭತ್ತು ವರ್ಷಗಳಲ್ಲಿ 90 ಕೋಟಿ ರೂಪಾಯಿಗಳ ವ್ಯಾಪಾರ ಮಾಡಿದ್ದಾರೆ. ಎಷ್ಟೋ ಜನ ಆಹಾರ ಇಲಾಖೆಯಲ್ಲಿ ಗುಮಾಸ್ತರಾಗಿದ್ದವರು ಈ ದಿವಸ ಕಂಟ್ರಾಕ್ಟು, ವ್ಯಾಪಾರ ಇತ್ಯಾದಿ ಮಾಡುವುದಕ್ಕೆ ಹೋಗಿದ್ದಾರೆ. ರಾಜಿನಾಮೆ ಕೊಟ್ಟು ಅಥವಾ ಕೆಲಸ ಮುಗಿದು ಅವರನ್ನು ಕೆಲಸದಿಂದ ತೆಗೆದಮೇಲೆ ಹೊರಗೆ ಹೋಗಿದ್ದಾರೆ. ಈ ದಿವಸ ಕಳಿತುಕೊಂಡು ಆ ಖಾತೆ ಲೆಕ್ಕ ಮಾಡಿದ್ದೂ ಮಾಡಿದ್ದೇ. ಸರಿಯಾದ ಲೆಕ್ಕ ಸಿಕ್ಕುತ್ತಿಲ್ಲ. ಜವಾಬ್ದಾರಿ ಯಾರಮೇಲೆ ಹೊರಿಸಬೇಕು? ಬಹಳ ನಷ್ಟವಾಗಿದೆ. ಇದನ್ನು ನೋಡಿದರೆ 'ಗತಜಲ ಸೇತುಬಂಧನ' ಎಂಬ ವಾಕ್ಯ ನೆನಪಿಗೆ ಬರುತ್ತದೆ. ನೀರೆಲ್ಲಾ ಇಳಿದುಹೋದಮೇಲೆ ಸೇತುವೆಕಟ್ಟುವ ಹಾಗೆ ಕಾಣುತ್ತಿದೆ. ಹಣ ತಿಂದು ಹೋದಮೇಲೆ ಕಣ್ಣುಬಿಟ್ಟು ನೋಡುವುದಕ್ಕಿಂತ ಯಾವಾಗಲೂ ವಿಜಿಲೆನ್ಸ್ ಇರಬೇಕು, ವಿಜಿಲೆನ್ಸ್ ಇಟ್ಟು ಕೆಲಸ ಮಾಡಬೇಕು. ಕೆಲವುಕಡೆ ಮೇಲಧಿಕಾರಿಗಳು ಕೆಲಸ ನೋಡಿಕೊಳ್ಳದೆ ಈ ಲೋಪದೋಷಗಳಿಗೆ ಕಾರಣವಾಗಿದೆಯೆಂದು ಹೇಳಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆ ತೆಗೆದುಕೊಂಡರೆ ಅಲ್ಲಿ ಪ್ರಾರಂಭದಿಂದ ಕೆಲಸ ಮಾಡತಕ್ಕವರು ಬೇರೆ ಬೇರೆ ಇರುತ್ತಾರೆ. ಪ್ರಾರಂಭದಲ್ಲಿ ಎಸ್ಟಿಮೇಟ್ ತಯಾರು ಮಾಡುವವರು ಅದರ ಮೇಲೆ ಹಂತ ಹಂತಕ್ಕೆ ಬೇರೆ ಬೇರೆ ಅಧಿಕಾರಿಗಳು ಹೀಗೆಲ್ಲಾ ಇರುತ್ತದೆ. ಆದರೆ ಅದನ್ನು ವಾಸ್ತವವಾಗಿ ನಿರ್ವಾಹಮಾಡದೆ ಇರುವಾಗ ಎಗ್ಜಿಕ್ಯುಟಿವ್ ಇಂಜಿನಿಯರಿಗೆ ಹೆಚ್ಚು ಜವಾಬ್ದಾರಿಯಿದೆ. ಹಾಗೆಯೇ ಆ ಜಗದಲ್ಲಿರುವ ಅಸಿಸ್ಟೆಂಟ್ ಇಂಜಿನಿಯರಿಗೆ ಇನ್ನೂ ಹೆಚ್ಚಿನ ಜವಾಬ್ದಾರಿ ಇರುತ್ತದೆ. ದೊಡ್ಡ ದೊಡ್ಡ ಕೆಲಸ ಮಾಡುವಾಗ ಎಲ್ಲರೂ ಸೇರಿ ಜನತೆಗೆ ಉಪಕಾರವಾಗುವುದನ್ನು ಗುರಿಯಲ್ಲಿಟ್ಟುಕೊಂಡು ಮಿತವ್ಯಯ ದೃಷ್ಟಿಯಿಂದ ಉದ್ದೇಶ ಸಾರ್ಥಕವಾಗುವಂತೆ ದುಡಿಯಬೇಕು. ಈ ದಿವಸ ಹಾಗಿಲ್ಲ. ಕೆಲವು ಕಡೆಗಳಲ್ಲಿ ಕೆಲಸಗಳನ್ನು ಅಸಿಸ್ಟೆಂಟ್ ಇಂಜಿನಿಯರು ಮಾಡಿದರೆ ಎಗ್ಜಿಕ್ಯುಟಿವ್ ಇಂಜಿನಿಯರು ಪ್ರಾರಂಭದಿಂದ ಅದನ್ನು ನೋಡಿಕೊಳ್ಳುತ್ತಾ ಬರುವುದಿಲ್ಲ, ಕೆಲಸವಾದ ಮೇಲೆ 'yes' ಅನ್ನುವುದೂ ಉಂಟು, ಮಧ್ಯದಲ್ಲಿ ಹೋಗಿ ನೋಡುವುದೂ ಉಂಟು. ಹೀಗೆ ಅನುಕೂಲಕ್ಕೆ ತಕ್ಕ ಹಾಗೆ ಮಾಡುತ್ತಾರೆ. ಅದರಿಂದ ಬಹಳ ದೊಡ್ಡ ಲೋಪವೇ ಆಗುತ್ತದೆ. ಮತ್ತು ಇಲಾಖೆಯೊಳಗಡೆ ಪಾಲಿಟಿಕ್ಸ್ ಜಾಸ್ತಿಯಾಗುತ್ತಿದೆ. ಈ ದಿವಸ ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅವರಿಗೆ ಎಮಾಲ್ಯುಮೆಂಟ್ಸ್ ಕೊಡುವ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಕೆಳದರ್ಜೆ ನೌಕರರಿಗೆ ಹೆಚ್ಚು ಸಂಬಳ ಕೊಡಬೇಕು. ಅದರ ಬಗ್ಗೆ ಈ ಸಭೆಯಲ್ಲಿ ಬೇಕಾದಷ್ಟು ಒತ್ತಾಯ ಬಂದಿದೆ. ಅವರಿಗೆ ಜೀವನದ ಭತ್ಯ ಕೊಡಬೇಕು, ಹೆಚ್ಚು ಸೌಲಭ್ಯ ಕೊಡಬೇಕು, ಹೆಚ್ಚು ಕೆಲಸಮಾಡುವುದಕ್ಕೆ ಅವಕಾಶ ಮಾಡಬೇಕು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಜವಾಬ್ದಾರಿಯುಳ್ಳ ಅಧಿಕಾರಿಗಳು ಯಾರಿದ್ದಾರೋ ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿರಬೇಕು. ಈ ದಿವಸ ರಾಜಕೀಯ ಸ್ವಲ್ಪಮಟ್ಟಿಗೆ ಸರ್ಕಾರದ ಯಂತ್ರದಲ್ಲಿ ಕಂಡುಬರುತ್ತಿದೆ, ಕೆಲವು ಸಲ ರಾಜಕೀಯ ಬಹಳ ದೂರದವರೆಗೆ ಹೋಗಿಬಿಟ್ಟಿದೆ ಎಂದು ಹೇಳಬಹುದು. ಮಂತ್ರಿಮಂಡಲ ಈ ಬದಲಾವಣೆಗೆ ಒಳಗಾಗಿರುವ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು. ಈ ದಿವಸ ಇರುವ ಮಂತ್ರಿಗಳು ನಾಳೆ ಇರುವುದಿಲ್ಲ. ಆಡಳಿತ ಯಂತ್ರ ತಾನು ಶಾಶ್ವತವೆಂದು ತಿಳಿದುಕೊಳ್ಳುತ್ತದೆ. ಈ ಶಾಶ್ವತತೆಯ ಭಾವನೆಯಿರುವುದರಿಂದಲೇ ಸರ್ಕಾರ ಅವಸರಮಾಡುವುದನ್ನು ಈ ಯಂತ್ರ ವಿಳಂಬಮಾಡುತ್ತದೆ. ಹೇಗಿದ್ದರೂ ಮಂತ್ರಿಗಳಲ್ಲಿ ಬದಲಾವಣೆಯಾಗುತ್ತದೆಂಬ ನಿರೀಕ್ಷೆಯಿರುತ್ತದೆ. 'ಏನ್ರಿ ಇಲ್ಲಿ ಬಂದು ನಮಗೆ ಹೇಳುತ್ತೀರಲ್ಲಾ, ಡೆಪ್ಯುಟಿಕಮಿಷನರೇ

(ಶ್ರೀ ಎಸ್. ಗೋಪಾಲಗೌಡ)

ಬಳಿ ಹೋಗಿ ಹೇಳುವುದಕ್ಕೆ ಆಗುವುದಿಲ್ಲವೆ' ಎಂದು ಮಂತ್ರಿಗಳೊಬ್ಬರು ಹೇಳುತ್ತಿದ್ದರು. ಇದರ ಅರ್ಥ ವೇನೋ ಗೊತ್ತಾಗಲಿಲ್ಲ. ಹೋಗಿ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳಿಗೆ ಹೇಳಿ ಎಂದು ಹೇಳುವುದು ಅವರ ನಿಸ್ಸಹಾಯಕತೆಯನ್ನು ತೋರಿಸುತ್ತದೆ. ಅದಕ್ಕಾಗಿ ಆ ರೀತಿ ವ್ಯಕ್ತಪಡಿಸಿದರೆಂದು ನಾನು ತಿಳಿದುಕೊಂಡಿದ್ದೇನೆ. ಯಾವ ಸಂದರ್ಭವಾದರೂ ಬೆಂಗಳೂರಿಗೆ ಬಾ ಎಂದು ಹೇಳುತ್ತಾರೆ. ಮನೆ ಕೊಡದಿದ್ದರೆ, ಮುನಿಸಿಪಾಲಿಟಿಯವರು ದೊಡ್ಡಿಮಾಡುತ್ತೇವೆಂದು ಹೇಳಿದರೆ ಮುಖ್ಯಮಂತ್ರಿಗಳೇ ಅದನ್ನು ತೀರ್ಮಾನ ಮಾಡಬೇಕು. ಹಳ್ಳಿಯಲ್ಲಿ ಗ್ರಾಮಪಂಚಾಯಿತಿ ತೀರ್ಮಾನ ಮಾಡಬೇಕಾದ್ದನ್ನು ಐದಾರು ಜನ ಬಂದು ಹೇಳಿದರೆ ಅದನ್ನು ಎಂಟರ್‌ಟೈನ್ ಮಾಡುತ್ತಾರೆ. ಇದು ರಾಜಕೀಯ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತದೆ. ಯಾವುದೋ ಒಂದು ಕೆಲಸ ಜರೂರಾಗಿ ಆಗಬೇಕಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ಕಾಗದ ಮೂರು ನಾಲ್ಕು ಜನರ ಹತ್ತಿರ ಹೋಗಬೇಕಾಗಿರುತ್ತದೆ, ಆಮೇಲೆ ಮಂತ್ರಿಗಳ ಹತ್ತಿರ ಬರಬೇಕಾಗಿರುತ್ತದೆ. ಮಂತ್ರಿಗಳು ಹೇಳಿದರೂ ಆ ಕಾಗದ ಕಳುಹಿಸದಿರುವ ಸಂದರ್ಭಗಳಿರುತ್ತವೆ. ಪ್ರಜಾಪ್ರಭುತ್ವ ಹೀಗೆ ನಡೆಯುತ್ತಿದೆ, ನೋಡಿ. ದೊಡ್ಡ ಸೆಕ್ರೆಟರಿ ಮತ್ತು ಸಣ್ಣ ಸೆಕ್ರೆಟರಿ ಅಥವಾ ಸಂಬಂಧಪಟ್ಟ ಸೆಕ್ರೆಟರಿ ಹೀಗೆ ಐದಾರು ಜನರಿರುತ್ತಾರೆ. ಅಠಾರ ಕಚೇರಿಯಿಂದ ಮೇಲೆ 18 ಕಡೆ ಹೋಗಿ ಬರಬೇಕು. ಮಂತ್ರಿಗಳು ಹೇಳಿದರೂಕೂಡ ಸಂಬಂಧಪಟ್ಟ ಕಾಗದ ಬರುವುದಿಲ್ಲ. ಫೋನುಮಾಡಿ ರಿಮೈಂಡರ್‌ಕೊಟ್ಟು ಏನೇ ಮಾಡಿದರೂ ಬರುವುದಿಲ್ಲ. ಇದು ನಾನು ಅಬ್ಸರ್ವ್ ಮಾಡಿರುವುದು. ಇಲ್ಲಿ ಇದನ್ನೆಲ್ಲಾ ಹೇಳುತ್ತೇನೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಇದನ್ನು ನೋಡಿದರೆ ಮಂತ್ರಿಗಳು ಇಷ್ಟಪಟ್ಟರೂ ಕೂಡ, ನ್ಯಾಯ ದೊರಕಿಸಬೇಕೆಂದು ಒಂದು ವಿಷಯದಲ್ಲಿ ಮನಸ್ಸುಮಾಡಿದರೂ ಕೆಲವು ವೇಳೆ ಅವಕಾಶವಾಗುವುದಿಲ್ಲವೆಂದು ತಿಳಿದುಬರುತ್ತದೆ.

1-30 P.M.

ಕೆಲವು ಸಂದರ್ಭಗಳಲ್ಲಿ ಸ್ಟೇ ಆರ್ಡರುಗಳನ್ನು ಕೊಡಬೇಕಾದಂಥ ಪ್ರಸಂಗಗಳುಂಟಾಗುತ್ತವೆ. ಸ್ಟೇ ಆರ್ಡರನ್ನು ಅತಿ ತ್ವರಿತವಾಗಿಯೇ ಕೊಡಬೇಕಾಗುತ್ತದೆ. ಹೀಗೆ ಇನ್ನೂ ಅತಿ ತ್ವರಿತವಾಗಿ ಆರ್ಡರ್ಸ್ ಮಾಡಬೇಕಾದಂಥ ವಿಷಯಗಳೆಷ್ಟೋ ಇರುತ್ತವೆ. ಅನೇಕ ಸಂದರ್ಭಗಳಲ್ಲಿ ಈ ಮುನಿಸಿಪ್ಯಾಲಿಟಿ ಇತ್ಯಾದಿಗಳ ಚುನಾವಣೆಗಳು ನಡೆದಾಗ ಯಾರೋ ಒಬ್ಬರು ಪ್ರೆಸಿಡೆಂಟರಾಗಿ ಆರಿಸಿ ಬಂದಾಗ ಮತ್ತೊಬ್ಬರು ಆ ಸ್ಥಳಕ್ಕೆ ನ್ಯಾಯವಾಗಿ ನಾನು ಬರಬೇಕಾಗಿತ್ತು, ಆದಾಗ್ಯೂ ಸರ್ಕಾರದವರೊಂದು ಜರೂರು ಸ್ಟೇ ಆರ್ಡರ್ ಮಾಡಬೇಕು, ಎಂದು ಅರ್ಜಿಬಂದರೆ ಸರ್ಕಾರ ಆ ಅಧ್ಯಕ್ಷರ ಅವಧಿ ಪೂರೈಸಿದಾಗ್ಯೂ ಸ್ಟೇ ಆರ್ಡರನ್ನು ಕೊಡದೆ ಮುಂದಿನ ಚುನಾವಣೆಗಳನ್ನು ನಡೆಸುವಕಾಲ ಬಂದಾಗ್ಯೂ ಆ ಅರ್ಜಿ ಮಂತ್ರಿಗಳ ಮುಂದೆ ಬರದಿದ್ದರೇನುಮಾಡಬೇಕು ? ಹೀಗೆ ಸರ್ಕಾರಿ ಕಾರ್ಯಕಲಾಪಗಳು ವಿಳಂಬವಾಗಿ ನಡೆಯುತ್ತಿರುವುದು ಎಲ್ಲರಿಗೂ ಸಾಮಾನ್ಯವಾಗಿ ವೇದ್ಯವಾಗಿರತಕ್ಕ ವಿಚಾರ. ಈ ವಿಚಾರದಲ್ಲಿ ಆ ಸಮಿತಿಯವರು ಈ ಹಣಕಾಸಿನ ಆಡಳಿತ ನಡೆಸುವ ಇಲಾಖೆಗಳು ಅರ್ಜಿಗಳ ವಿಚಾರದಲ್ಲಿ ಹೀಗೆ ವಿಳಂಬ ಮಾಡಬಾರದೆಂದು ಕಡ್ಡಾಯವಾಗಿ ಹೇಳಿದ್ದಾರೆ.

ಇನ್ನು ನಾನು ಈ ಪ್ರಭಾವ ಬೀರತಕ್ಕ ವಿಚಾರವಾಗಿ ಎರಡು ಉದಾಹರಣೆಗಳನ್ನು ಕೊಡಬೇಕೆಂದಿದ್ದೇನೆ. ನಾವು ಈ ಆಸ್ಪತ್ರೆ ಸ್ಕೂಲು ಇತ್ಯಾದಿಗಳನ್ನು ಕೊಡತಕ್ಕ ವಿಚಾರದಲ್ಲಿ ಪ್ರಭಾವಕ್ಕೊಳಗಾಗಬಾರದೆಂದು ಸಾರಿ ಸಾರಿ ಒತ್ತಿ ಹೇಳಿದ್ದೇವೆ. ಅವರಿಗೆ ಒಳಗಡೆ ಏನಾಗುತ್ತೋ ಏನೋ, ಯಾರದೋ ಒಂದು ಮನೆಗೆ ಹತ್ತಿರವಾಗಿ ಒಂದು ಸ್ಕೂಲನ್ನು ಇಲ್ಲವೇ ಒಂದು ಸೇತುವೆಯನ್ನು ಮಂಜೂರು . . .

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಈದಿವಸ ಬೆಳಗ್ಗೆ ನನ್ನ ಬಳಿ ಯಿಂಥಾದ್ದೇ ಒಂದು ವಿಚಾರ ಬಂದಿತ್ತು. ಆಗ ನಾನು ಆ ಸ್ಥಳಪರಿಶೀಲನೆ ಮತ್ತು ಸ್ಥಳವಿದ್ಯಮಾನವನ್ನು ವಿಚಾರಣೆಮಾಡಿ ಮಾಡುವುದಾಗಿ ತಿಳಿಸಿದೆನು. ಪ್ರಾಯಶಃ ಈಗ ಇವರು ಅದೇವಿಚಾರವನ್ನು ಪ್ರಸ್ತಾಪಿಸುತ್ತಿರಬಹುದೇನೋ ?

Sri H. SIDDAVEERAPPA.—We are discussing the accounts of the year 1951.

ಶ್ರೀ ಎಸ್. ಗೋಪಾಲಗೌಡ.—ನಾನು ಏತಕ್ಕಾಗಿ ಈಗ ಈ ಸ್ಕೂಲು ಮತ್ತು ಸೇತುವೆ ವಿಚಾರ ಎತ್ತಿದೆನೆಂದರೆ ಮಾನ್ಯ ಮಂತ್ರಿಗಳು ಹೇಳಿದ ಪ್ರಸಂಗಕ್ಕಾಗಿಯೇ ಎತ್ತಿದ್ದೇನೆ. ಆ ಸಮಿತಿಯವರು ಹೇಳಿರುವ ವಿಚಾರ ಬಹುಶಃ ಇದೇ ಆಧಾರದಿಂದ ಎಂದು ನಾನೀಗ ತಿಳಿಸಬೇಕಾಗಿದೆ. ಇನ್ನು ಆ ತಾಮ್ರದ ತಂತಿ ಪ್ರಕರಣ ಬೇರೆ ಇದೆ. ಆದರೆ ಅದಿನ್ನೂ ಸಬ್-ಜುಡೀಸ್ ಎಂದು ಹೇಳಿ ಅಲ್ಲಿಗೆ ಕೈಬಿಟ್ಟಿದ್ದಾರೆ. ಇನ್ನೂ ಎಲ್ಲಿಯತನಕ ಅವನ್ನು ಹೀಗೆ ಸಬ್-ಜುಡೀಸ್ ಎಂದು ಕೈಬಿಡುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಕೋರ್ಟಿನಲ್ಲಿ ತೀರ್ಮಾನವಾಗುವವರೆಗೆ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿ ವಿಳಂಬವಾದರೋ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಕೋರ್ಟಿನ ಜವಾಬ್ದಾರಿ.

ಶ್ರೀ ಎಸ್. ಗೋಪಾಲಗೌಡ.—ಅದಕ್ಕಾಗಿಯೇ ನಾನು ಪದೇ ಪದೇ ಈ ನಮ್ಮ ಕಂಠ ಶೋಷಣೆಯೆಲ್ಲ "ಗತಜಲಸೇತು ಬಂಧನ" ಎಂದು ಹೇಳುತ್ತಿರುವುದು. ಇನ್ನು ನಮ್ಮ ಆ ಮಾನ್ಯ ವ್ಯವಸಾಯ ಮಂತ್ರಿಗಳಾದ ಡಾ|| ನಾಗನಗೌಡರೀಗ ಸಭೆಯಲ್ಲಿಲ್ಲ. ಈ ಟ್ರ್ಯಾಕ್ಟರ್ ಸರ್ವೀಸುಗಳ ವಿಚಾರ ಚರ್ಚೆಗೆ ಬಂದಾಗಲೆಲ್ಲಾ ಅವರು "ಸೀಕಿದಾವೆ ಸೀಕಿದಾವೆ" ಎಂದು ಹೇಳುತ್ತಿದ್ದರು. ಈ ದಿವಸ ಈ ವರದಿಯಲ್ಲಿ ಹೇಳಿರುವುದನ್ನು ನೋಡಿದರೆ ಅವುಗಳನ್ನು ರಿಪೇರಿ ಮಾಡಲು ಬರುವುದಿಲ್ಲ ಎಂದು ಹೇಳಿದ್ದಾರೆ.

> "In future this organisation should be made fully self-supporting and only a very few tractors should be maintained by the Department. Action should be taken to dispose of major portion of the tractors which are not capable of repairs or which may require heavy repairs and thus avoid recurring expenditure."

ಈ ಟ್ರ್ಯಾಕ್ಟರುಗಳ ವಿಚಾರವಾಗಿ ಆ ಸಮಿತಿಯವರು ತಮ್ಮ ಕೊನೆಯ ವರ್ಡಿಕ್ಟನ್ನು ಹೀಗೆ ಕೊಟ್ಟಿರುತ್ತಾರೆ. ಆ ಟ್ರ್ಯಾಕ್ಟರುಗಳನ್ನು ರಿಪೇರಿಮಾಡುವುದಕ್ಕೂ ಆಗುವುದಿಲ್ಲ—ರಿಪೇರಿಮಾಡಿದರೂ ಅವುಗಳಿಂದ ಪ್ರಯೋಜನ

ವಾಗುವುದಿಲ್ಲ. ಆದುದರಿಂದ ಇನ್ನು ಮುಂದಕ್ಕಾದರೂ ಸರ್ಕಾರಕ್ಕೆ ಇಂಥ ಕಾರುಬಾರುಗಳು ಖಂಡಿತ ಬೇಡವೆಂದು ಹೇಳಿದ್ದಾರೆ. ಹೀಗೆ ಟ್ರಾಕ್ಟರುಗಳಿಂದ ಒಂದು ವಿಧವಾಗಿ ಹಣ ಲುಕ್ಸಾನಾಗುತ್ತಿರುವಾಗ ಇನ್ನು ಆ ಟ್ರಾಕ್ಟರುಗಳನ್ನು ಉಪಯೋಗಿಸಲು ಪಡೆದಿದ್ದವರು ಬೇರೆ ಈ ಬಗ್ಗೆ ಕೊಡಬೇಕಾಗಿದ್ದ ಬಾಕಿಯನ್ನು ಕೂಡ ಸರಿಯಾಗಿ ಪಾವತಿ ಮಾಡಿರುವುದಿಲ್ಲವೆಂದು ತಿಳಿಸಿದ್ದಾರೆ. ಎಷ್ಟು ಬಾಕಿ ಈ ಬಗ್ಗೆ ವಸೂಲಾಗಿದೆ, ಇನ್ನೆಷ್ಟು ಬಾಕಿ ವಸೂಲಾಗಬೇಕಾಗಿದೆ ಎನ್ನುವುದೊಂದೂ ಗೊತ್ತಾಗುತ್ತಿಲ್ಲ. ಅವುಗಳಿಂದ ಬರುತ್ತಿದ್ದ ಉತ್ಪತ್ತಿ ವಿಚಾರದಲ್ಲಿ ಆ ಸಮಿತಿಯವರು ಹೀಗೆ ಹೇಳಿದ್ದಾರೆ.

"Government have incurred heavy capital and revenue losses."

ಹೀಗೆ ಅವುಗಳಿಂದ ಬರಬೇಕಾಗಿದ್ದ ರೆವಿನ್ಯೂ ಕೂಡ ಲುಕ್ಸಾನಾಗಿದೆ ಎಂದೂ ಹೇಳಿದ್ದಾರೆ. ಕಾಪರ್‌ವೈರ್ ವಿಚಾರ ನೋಡಿದರೆ ಹಾಗೆ, ಟ್ರಾಕ್ಟರ್ ವಿಚಾರ ನೋಡಿದರೆ ಹೀಗೆ -

ಇನ್ನು ಕೆಲವು ವಿಚಾರಗಳಬಗ್ಗೆ ಹೇಳುವುದಾದರೆ ಆಹಾರ ಮತ್ತು ವ್ಯವಸಾಯದ ಇಲಾಖೆಗಳ ಬಗ್ಗೆ ಆ ಆಂಟಿಕರಪ್‌ಷನ್ ಇಲಾಖೆಯವರು ಕೆಲವರನ್ನು ಬುಕ್ ಮಾಡಿದ್ದಾರೆ. ಆದರೆ ಆ ಕೇಸುಗಳೆಲ್ಲಾ ಅಲ್ಲೇ 'ಹಷಪ್' ಆಗಿಹೋಗಿವೆ. ಆದರೆ ಈರೀತಿ ಆಗಬಾರದು. ಹೀಗೆ ಆ ಆಂಟಿಕರಪ್‌ಷನ್ ಇಲಾಖೆ ಇದ್ದಾಗ್ಯೂ ತಪ್ಪಿತಸ್ಥರಿಗೆ ಶಿಕ್ಷೆಯಾಗದಿದ್ದರೆ ಆ ಇಲಾಖೆಯಿದ್ದೇನು ಪ್ರಯೋಜನ?

*ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟೋ ಕೇಸುಗಳಲ್ಲಿ ಶಿಕ್ಷೆಮಾಡಲಾಗಿದೆ. ನೀವು ನೋಡದಿದ್ದರೆ ಅದಕ್ಕೆ ನಾವೇನು ಮಾಡೋಣ?

ಶ್ರೀ ಎಸ್. ಗೋಪಾಲಗೌಡ.—ಹೌದು ಹೌದು. ಯಾರೋ ಒಬ್ಬ ಬಡಪಾಯಿ ಸಿಕ್ಕಿದ್ದರೆ, ಕೋತಿ ಮೊಸರನ್ನು ತಿಂದು ಮೇಕೆ ಬಾಯಿಗೆ ಒರೆಸಿದಂತೆ, ಯಾರ ತಪ್ಪಿಗೆ ಯಾರನ್ನೋ ಶಿಕ್ಷೆ ಮಾಡಿರಬಹುದು. ದಿಕ್ಕಿದ್ದವರು ಮಾಡಿದ ತಪ್ಪು ಹೊರಕ್ಕೇ ಬರುವುದಿಲ್ಲ.

ಅಧ್ಯಕ್ಷರು.—ಅಂಥ ನಿದರ್ಶನಗಳಿದ್ದರೆ ಈಗ ನೀವು ತಿಳಿಸಿ.

*ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸ್ನೇಹಿತರೇನೋ ಕೇಳುವುದಕ್ಕೆ ಕಿವಿಗಿಂಪಾಗಿರುವಂತೆ ಹೇಳುತ್ತಿದ್ದಾರೆ. ಆದರೆ ಅವರು ಹೇಳುತ್ತಿರುವುದೆಲ್ಲ ವಾಸ್ತವಾಂಶಕ್ಕೆ ಬಹಳ ದೂರವಾದದ್ದು. ನಮ್ಮ ಮುಂದೆ ಬರತಕ್ಕ ಪ್ರತಿಯೊಂದು ಕೇಸಿಗೂ ನಾವೇ ಕೊನೆಯ ತೀರ್ಮಾನಗಾರರಲ್ಲ. ಅದು P.S.C. ಅವರ ಅಭಿಪ್ರಾಯಕ್ಕೆ ಹೋಗಿ ಅವರೇನು ಹೇಳುತ್ತಾರೋ ಆದಕ್ಕನುಸಾರವಾಗಿ ನಡೆಯಬೇಕಾಗಿದೆ. ನಾವು ಈ ಡೆಮೊಕ್ರಾಟಿಕ್ ಸೆಟಪ್ಪಿನಲ್ಲಿ ಪ್ರತಿಯೊಂದು ಘಟ್ಟದಲ್ಲೂ ಅವರಿಗೆ ಸಮಜಾಯಿಷಿ ಹೇಳಲು ಅವಕಾಶ ಕೊಡಬೇಕು.—ಇದರಲ್ಲಿ ಪ್ರಿಲಿಮಿನರಿ ಎನ್‌ಕ್ವೈರಿ ರೆಗ್ಯುಲರ್ ಎನ್‌ಕ್ವೈರಿ ಆಗಬೇಕಾಗಿರುತ್ತದೆ. ಅನಂತರ ಅದು P.S.C. ಮುಂದೆ ಹೋಗಿ ಅವರ ಅಭಿಪ್ರಾಯ ಪಡೆದು ಆಖ್ಯೆರಿಗೆ ನಮ್ಮ ಮುಂದೆ ಬರಬೇಕಾಗಿರುತ್ತದೆ. ಹೀಗಿರುವಾಗ ಏಕಾಏಕಿ ತೀರ್ಮಾನ ಮಾಡುವುದಕ್ಕೆ ಬಹಳ ಕಷ್ಟವಿದೆ. ಇದೆಲ್ಲಾ ನಿಮಗೆ ಗೊತ್ತಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಂಥ ಕಷ್ಟವಿರತಕ್ಕ ಕಡೆಗಳಲ್ಲೆಲ್ಲಾ ನನ್ನ ಸಹಾನುಭೂತಿ ಇದ್ದೇ ಇದೆ. ಸಮಿತಿಯವರು ಈ ರೆಸ್‌ಪಾನ್‌ಸಿಬಿಲಿಟಿ ಫಿಕ್ಸ್ ಮಾಡುವ ವಿಚಾರದಲ್ಲಿ ಹೀಗೆ ಹೇಳಿದಾರೆ.—

"The Committee reiterates the remarks made in the previous report and recommends that in future disciplinary action should be taken and personal responsibility enforced wherever rules are violated."

ಇನ್ನು ಆ ಟ್ರೆಜರಿಯ ವಿಷಯದಲ್ಲಿ ಹಣ ದುರುಪಯೋಗವಾದ ವಿಚಾರ ಇತ್ಯರ್ಥವಾಗಲೇ ಇಲ್ಲ. ಈ ಖರ್ಚುಗಳನ್ನೆಲ್ಲಾ ಹೇಗೆ ಸರಿದೂಗಿಸುತ್ತಾರೆಂಬುದೇ ತಿಳಿಯದಾಗಿದೆ. ಸಾರ್ವಜನಿಕರ ಹಣ ಹೀಗಾಗಬಾರದು. ಆದರೆ ಯಾರೋ ಒಬ್ಬರು ಎಲ್ಲೋ ಒಂದು ಕಡೆ ಸಾರ್ವಜನಿಕರ ಕೆಲಸ ಅಂದರೆ ಈ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಬರೆದಿರುತ್ತಾರೆ. ಇನ್ನು ಇದು ದೇವರ ಕೆಲಸ ಎಂದು ಆಗುವುದಾದರೆ ಮುಂದಿನ ವಿಚಾರ ಆ ದೇವರೇ ಕಾಪಾಡಬೇಕು. ಸರ್ಕಾರಿ ಕೆಲಸ ದೇವರ ಕೆಲಸವೆಂಬುದಾಗಿ ಬಿಟ್ಟರೆ ದೇವರೇ ಗತಿ. ಆದರೆ ನಾವು ಹೀಗೆ ಹೇಳಿಬಿಟ್ಟರೆ ಆ ದೇವರೇನೂ ಬಂದು ಈ ಕೆಲಸಗಳನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಆದುರಿಂದ ಸರ್ಕಾರದವರೇ ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈಗಾಗಲೇ ಸರ್ಕಾರದವರು ಈ ದಾಕ್ಷಿಣ್ಯಗಳ ಬಗ್ಗೆ ಬಹಳ ದೂರ ಹೋಗಿದ್ದಾರೆ. ಈ ದಾಕ್ಷಿಣ್ಯದ ವಿಚಾರದಲ್ಲಿ ಸರ್ಕಾರದವರು ಒಂದು ಸ್ವಲ್ಪ ಸ್ಥಳ ಕೊಟ್ಟರೆ-ಒಂದು ಸೂಜಿಕಣ್ಣಿನಷ್ಟು ಅವಕಾಶ ಕೊಟ್ಟರೆ ಅದರಲ್ಲೇ ಆನೆ—ಒಂಟೆ—ಕುದುರೆಗಳೆಲ್ಲಾ ತೂರಿಹೋಗಿಬಿಡುತ್ತವೆ. ಆದರೆ ಸರ್ಕಾರಿ ವಿಷಯಗಳು ಮತ್ತು ಕೆಲಸಗಳು ನಿದಾಕ್ಷಿಣ್ಯವಾಗಿಯೂ ಮತ್ತು ಪ್ರಾಮಾಣಿಕತೆಯಿಂದಲೂ ನಡೆಯಬೇಕಾದದ್ದು ಅತಿ ಮುಖ್ಯವಾದಂಥ ವಿಚಾರ. ಸರ್ಕಾರದವರು ಆ ರೀತಿ ನಡೆದುಕೊಳ್ಳುವಂತೆ ಮಾಡಲು ಈ ವರದಿ ಒಂದು ಮಾರ್ಗದರ್ಶಕವಾಗಿದೆ. ಸರ್ಕಾರದವರು ಕೆಲವು ಸಂದರ್ಭಗಳಲ್ಲಿ ಆ ರೀತಿ ಕಠೋರತನದಿಂದ ಕೆಲಸ ನಡೆಸಲು ಬಹಳ ಕಷ್ಟವಾಗುತ್ತದೆ ಎಂದು ತಿಳಿಸಿದರು. ಹಾಗೆ ಅವರಿಗೆ ಎಲ್ಲಿ ಅಂಥ ಕಷ್ಟಗಳುಂಟಾಗಿ ಅವರಿಂದ ಆ ಕಾರ್ಯವನ್ನು ನಿಷ್ಪಕ್ಷಪಾತವಾಗಿ ನಡೆಸಲು ಸಾಧ್ಯವಿಲ್ಲವೆಂದು ಕಂಡುಬರುತ್ತದೋ ಅಂಥ ವೇಳೆಯಲ್ಲಿ ಅವರು ಜನರನ್ನು ಕೂಗಿದರೆ ಆಗ ಜನರು ಬಂದೇ ಬರುತ್ತಾರೆ. ಆಗ ಅವರು ಆ ಕೆಲಸವನ್ನು ಯಾವ ರೀತಿಯಾಗಿ ನಡೆಸಬೇಕೋ ಆ ರೀತಿ ನಡೆಸುತ್ತಾರೆ. ಆದ್ದರಿಂದ ಸರ್ಕಾರಕ್ಕೆ ಹಾಗೆ ನಿಷ್ಪಕ್ಷಪಾತದಿಂದ ವರ್ತಿಸಲು ಎಲ್ಲಿ ಕಷ್ಟವಾಗುತ್ತದೋ ಅಲ್ಲಿಗೆ ಜನರನ್ನು ಕೂಗಿ ಕರೆಯಿರಿ-ಅವರು ಬಂದು ತಮಗೆ ಸಹಾಯ ಮಾಡುತ್ತಾರೆ; ನಿಮ್ಮ ಕಷ್ಟ ಸುಲಭವಾಗಿ ಪರಿಹಾರವಾಗುತ್ತದೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಮನಸ್ಸು ಮಾಡಿದರೆ ನಿಷ್ಪಕ್ಷಪಾತ ಭಾವನೆಯಿಂದ ನಡೆಯಲು ಅವಕಾಶವಿದೆ. ಇನ್ನು ಕಡೆಯದಾಗಿ ಈ ವರದಿಯಲ್ಲಿ ಆ ಸಮಿತಿಯವರು ಸೂಚಿಸಿರತಕ್ಕ ಸಲಹೆಗಳಿಗನುಸಾರವಾಗಿ ಅವುಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri S. SRINIVASA IYENGAR (T.-Narasipur).—Sir, I rise to place my views on the Report of the Public

(SRI S. SRINIVASA IYENGAR.)

Accounts Committee for the years 1951-52, 1952-53 and 1953-54.

The Committee have reviewed two sets of accounts, one is appropriation accounts and its audit report and the other is finance accounts and its audit report. The very object of establishing the Public Accounts Committee is, to study these reports as furnished by the Auditor General item by item, examine the Heads of Departments and then make recommendations to the Government. They have met nearly eleven times to discuss these reports and they have made various recommendations. To start with, they have reviewed the action taken by the Government on their previous report. That is most important. There is no meaning if simply these reports are presented to the Legislature and an opportunity is given to talk here and forget them after that. The object of establishing a Public Accounts Committee and Estimates Committee is to have parliamentary control over the finances of the State. The Public Accounts Committee deals with expenditure incurred in previous years and the Estimates Committee deals with Expenditure that is proposed in future years. So, the Public Accounts Committee have reviewed the accounts of the previous year and have presented the reports to the Government. What is the responsibility and how have the Government reacted to the reports of 1950 ? I would like to draw the attention of the Government to page 66. In page 66, Annexure I, Government have furnished an abstract statement showing the nature of recommendations made by the Committee and the action taken thereon. I would like to draw the pointed attention of the Government to items 5, 6, 9, 10, 11, 13 and 14.

Sir, item 5 relates to outstandings under Advances for the purchase of seeds and manures. The recommendation of the Committee has been :

> "The accounts in arrears should be completed and a clear picture of balances and outstandings should be given to the next Committee."

That is the recommendation. Please see the Annexure III where details are given. A sum of Rs. 79,76,277 is outstanding under the Advances account of the Agricultural Department. Please examine the details of that Annexure. You will be pleased to see that as big an amount as 16 lakhs and odd is due from the multi-purpose societies from a very long time. Till today, no action has been taken either to reconcile these figures or to collect the money. Suppose these things are allowed to continue. But with the efflux of time, perhaps Government would say and the Committee also might say : "since this matter refers to 20 years ago, it may be written off." Greater attention should have been taken to see that the recommendations are properly implemented and accounts reconciled as early as possible.

I come to Item 6 : Sir, item No. 6 relates to credit sales. Once you effect credit sale and article is delivered to the person who takes it on credit, Government should be particular to see that it is collected. There has been progress in respect of this. Annexure IV gives full details of collections made. An attempt has been made to place before this House the action taken by the Departmental Head and reduce arrears under credit sales. True, much action has been taken. But there are one or two items which need urgent attention. Sir, item No. 4 : amount due from the Defence Department from the Government of India to the Deputy Commissioner, Chitaldrug--one lakh of rupees.

SRI H. SIDDAVEERAPPA.—These are book adjustments.

SRI S. SRINIVASA IYENGAR.—Item No. 9: Is that also a book adjustment ?

SRI H. SIDDAVEERAPPA.—It is a matter for verification.

SRI S. SRINIVASA IYENGAR.—It is a matter that related to five years. If you allow more time to lapse, you may not be able to get records at all.

SRI H. SIDDAVEERAPPA.—As a matter of fact, Hon'ble Member knows that all the accounts are now going to be closed and we have got a special

staff for that purpose. The difficulty is more to close that Department rather than making it function. There are so many things that will have to be verified and it is being attended to. Progress is quite satisfactory.

Sri S. SRINIVASA IYENGAR.—To achieve that progress, this Committee's Report will help you a lot.

Sri H. SIDDAVEERAPPA.—Certainly. I am thankful to you for that.

Sri S. SRINIVASA IYENGAR.—The debate on that Report is intended to pointedly draw the attention of the Government to these matters. The Committee have not minced matters.

Sir, the next item is Item No. 7. I am particular about it. It is on page 67. There was a defalcation in the State Huzur Treasury. A case has been launched and we do not know what has happened to that case. I do not know whether this is *sub judice* and if I can talk anything about it.

Sri H. SIDDAVEERAPPA.— The case is pending. The enquiry is being proceeded with. What happened was, with the amendment of the Criminal Procedure Code, copies of the various documents had to be got prepared. A special staff was sanctioned to get copies made, so that it may be made available to the accused. There are hundreds of copies that will have to be got ready. The case is proceeding.

Sri S. SRINIVASA IYENGAR.—Has the charge-sheet been filed ?

Sri H. SIDDAVEERAPPA.—I am sorry, I am speaking of another Treasury, not this one.

Sri S. SRINIVASA IYENGAR. Why I have taken so much of trouble in going through this statement and taking so much time of this Hon'ble House is to impress on this House that if a recommendation is made, Government should see that it is acted upon quickly. As it is, we get the report of the Public Accounts Committee long after the year in respect of which the expenditure has been incurred. For instance, we are discussing today the accounts of 1952-53, 1953-54 and 1954-55. Naturally, as required under the Constitution, Supplementary Grants and Excess Grants would have been obtained by Government and expenditure regularised. They have certainly powers to regularise them. But they must also correct their methods. That is my object.

Sir, the second most important issue is this ; the Committee also have dealt with it at length. That is about the defective budgeting. This House sanctions the Budget. The Budget allotment is communicated to the Heads of Departments. Throughout the year they incur expenditure under these heads. The Accountant-General points that many times even though there was no necessity, supplementary grants have been obtained and at the end of the year when the accounts are being compiled, he would notice large variations in the estimated amount. He has summarised it by saying that on an average there has been a savings of 34·5 per cent in the estimated grants.

Sri H. SIDDAVEERAPPA.—Yes, under the very peculiar circumstances of that year.

Sri S. SRINIVASA IYENGAR.—But it may not be peculiar to 1952-53 and 1953-54. The Heads of Departments have no control on the flow of expenditure. The Departmental accounts maintained by them have not been tallied with the accounts maintained by the Accountant-General. The Accountant-General has been very emphatic and has said that many Heads of Departments have not cared to tally their balances with those of the Accountant-General. How to get over this ? We must know the correct picture.

Sri H. SIDDAVEERAPPA.—You must augment the accounts staff.

Sri S. SRINIVASA IYENGAR.—A department which requires more grants does not get money. A department which cannot spend gets plenty of grants. When the accounts are compiled by the Accountant-General, it is possible that Government may lose a few lakhs of rupees. When such is the case, it should not be difficult for the Government to have enough staff to maintain control over the flow of expenditure. So far as tallying of accounts by the Heads of Departments

(SRI S. SRINIVASA IYENGAR.)

with the accounts of the Accountant-General is concerned, it should be done strictly and quickly.

Sir, the Public Accounts Committee have brought to our notice many financial irregularities. These irregularities relate no doubt to the period under report. But anyway there are irregularities. The recommendations of the Public Accounts Committee are to the effect that it is a matter of write-off. The Public Accounts Committee also do not propose to take any action on that. They simply say it is recorded. What I am particular to know is, why should such irregularities occur? Why do not the Government take timely action? I will quote one instance. It is found on page 14 of the Public Accounts Committee Report:

> "The Director pointed out that certain sums of money were due by the other State Governments. Then there was some amount that was invested with the Sind Government previous to the partition of India, when Mysore was purchasing food-grains on its own behalf. After partition, this amount got locked up. The Pakistan Government acknowledged the same, but they have not returned it as yet. The amount due from Pakistan was about Rs. 3 lakhs. The Government of India could not help in this matter. As regards other advances, such as T.A. advances, much of the amount had been recovered except a sum of Rs. 1,500 which also would be recovered in course of time."

"The explanations offered were generally accepted." I do not propose any action on that. But when the Government wants to deal with such matters, it would be better if they are more vigilant.

Sri H. SIDDAVEERAPPA.—Who could anticipate these things? They are beyond anybody's control.

Sri S. SRINIVASA IYENGAR.—I will tell you certain things which could have been controlled by you.

Take for instance page 26 which relates to Vidhana Saudha. We are spending crores of rupees. Would you ever believe that the Government did not maintain a stock account? The Accountant General points out—please read that page:

> "...He pointed out that there were no stock accounts in respect of Vidhana Saudha building. Some staff had been sanctioned, but the staff had started working only recently. They were still writing that a Superintendent has not been posted."

It may be due to not posting a Superintendent. These are things in which we should be extra-careful. The posting of a Superintendent to maintain a stock account in connection with a huge building like Vidhana Saudha, should not have been delayed. The stock account has not been maintained and it is too late now. The stock account has to be built up now when the building is almost complete. These are things which were within the control of the Government.

2 P.M.

Sir, the next item is Sadalwood Oil Factory; page 34.

> "The Director of Industries and Commerce said that so far as the heavy sum of Rs. 6,80,117-12-0 outstanding recovery from Messrs. Essen Flour products was concerned, all possible action was taken but a major portion of the amount is irrecoverable and they have addressed Government for writing off the amount."

The recommendation of the Committee is:

> "The Committee agreed that since the transaction was over 20 years old and there was no prospect of recovery even after legal action has been taken, the amount may be written off."

I do not fight with that. They could do anything else. But, why was that arrear kept open for 20 years? Why was Government not careful when

transacting with such companies? Why was that amount allowed to grow to that extent? These are the things that I would like to know from the Government. It cannot be helped at this stage but it could have been restricted at that stage. When we deal with public money, we should be extra careful.

Sri H. SIDDAVEERAPPA.—Say for future guidance.

Sri S. SRINIVASA IYENGAR.—What else can we do? Then, Sir, Tractor Organisation—page 56. Sir, in a period of three years, Government have managed to lose Rs. 32,32,317, for maintenance of tractors. They must have been certainly purturbed. In a period of three years they have been able to lose for maintenance of tractors—not on purchase or repair—such a heavy sum. Now, they have lost it. The explanation is that they subsidised the raiyats and therefore they lost it. My point is, have they at least effected recoveries in respect of charges? Have they at least maintained accounts as to whom tractors were hired and the charges due from them? The Accountant-General says that the Department did not maintain any accounts at the initial stages. Why I stress this point is, whenever Government entrust a particular work to a department, accounts must be prescribed immediately, accounts should be written and it should be enforced. In this case accounts were not maintained by the Deparment; otherwise, we would not have lost such a heavy amount. Our capital outlay is somewhere to the tune of twenty lakhs. Most of the machinery is scraped. It cannot be helped at this stage. But, if proper accounts had been maintained, this heavy amount could have been saved. Even in respect of arrears, the concerned officers estimate that it is somewhere about 2 lakhs. Sir, have you at any time heard the word 'estimate' in respect of dues? It must be in accordance with the ledger; it must not be in accordance with the estimate. So, I want to know how things stand in the Department. There are still people who have not paid the charges. Are we able to collect anything at all in respect of hire charges? Page 74, para 4, last sentence, says:

> "The value of these tractors after allowing a depreciation to the extent of 20 per cent to 40 per cent of the cost works out to Rs. 3,02,382. Out of this a sum of Rs. 1,27,063 has so far been realised from these agriculturists and the balance still due to be recovered is Rs. 1,73,319."

Sir, none of these tractors are sound; none of these are good. Such of those that have bought them are repenting for that. They have thrown good money on bad stuff.

Next, Sir, I would like to deal with one or two suggestions made by the Committee about the industries. The Committee have said that the way in which accounts of the industrial concerns are presented to them did not give them a correct picture of the working of those industrial concerns. What is the system that is adopted to-day? The industrial concerns managed by Government produce things and those articles are sold. The sale realisation is booked under receipts of the Government under that particular head. Whatever money an industry requires is drawn from the corresponding head from the expenditure side. So, while spending, the industries are not aware to what extent their goods have been sold, whether they have been sold profitably, economically because there is no separate account. What they get by sale realisation they credit to the receipt head and what they want, they draw from the expenditure side. Therefore, the Committee said, just to know the correct position of these industrial concerns, that it is necessary that the accounts should be presented in a different manner with a different system so that it may be known whether an industrial concern is working profitably or not. The Accountant General also gives an abstract of the working of the industrial concerns.

Sri H. SIDDAVEERAPPA.—Side by side, for our benefit we also have

(SRI H. SIDDAVEERAPPA.)

commercial balance sheet and it is reviewed in the Board of Management in greater detail. In the case of Bhadravati Iron Works we meet once in two months.

Sri S. SRINIVASA IYENGAR.—That is what the Committee have said. Let us take the method of accounting in the industrial concerns. The Accountant General has objected to it and says that it is an All-India pattern and we cannot change it.

Sri H. SIDDAVEERAPPA.—The procedure that is being followed now is, for all the industrial concerns we have got the Board of Management which consists of the officers and non-officials—people like my friend Sri Mascarenhas. For Bhadravathi Iron Works it has a separate set up. They meet every month and one of the items for consideration is the balance sheet of every concern. They take out the approximate net loss or net profit. Therefore, it is actually a commercial budget that is followed for the purpose of understanding the internal working of the concern.

Sri S. SRINIVASA IYENGAR.—That must be presented to us. Formerly, the results of the industrial concerns used to be presented to us along with the budget.

Sri H. SIDDAVEERAPPA.—If that is the view of the House, there is no harm in giving it. As a matter of fact, we are giving the working of each department, the resume of the work done every year. In that way, we can easily do this also.

Sri S. SRINIVASA IYENGAR.—I understand that point, Sir. There is no meaning in pressing that point; because a new method is being adopted, the purpose is served. The Government, while passing their orders, should not deviate from the rules framed by themselves. The Accountant-General has been very specific about it. If you have framed a rule in a department, governmental accounts should conform to the rule. Certain rules are framed for the discharge of their duties in a particular department and Accountant General has pointed out that Government go to the extent of modifying the rules. That should not be the attitude. When he draws the attention of the Government to the fact that they have exceeded the powers, then what the Government should do is, they should try to conform to the rules and not amend them. I will give one instance, the maintenance of buildings occupied by Ministers. There is a definite rule in the Code and it states that the annual repairs should not exceed 5 per cent of the value. There have been instances wherein expenditure has been incurred ranging from 15 to 20 per cent. When the Accountant General drew the attention of the Government, at once the Government change the order in which they have specifically stated that the annual repairs should be 5 per cent. That should not be the attitude. The attitude should be to confine yourself to the rules prevailing in the department. It is applicable for all and at all times. These are the important things.

In respect of giving promotions, the Accountant General has shown some instances. Page 55:

"Waiver of recoveries of over-payments caused by unauthorised promotions (Grant 33)."

I will read the note ;

"The Home secretary stated that he had circulated a note to the members of the Committee wherein he had clearly stated the reasons for such waiver of recoveries. He further stated that he had written a letter to the Accountant General saying that all those promotions were given effect to under special circumstances."

My purpose in pointing out these is not to charge you. My submission is, do not try to modify the rule and get over the difficulty. That is not proper and that is the object with which I am discussing that issue. I shall read what Sri Mariappa has stated in the Report:

"Sri T. Mariappa stated that Government did not pursue the

matter for special reasons and order of waiver was passed."

What is the special reason ?

Sri H. SIDDAVEERAPPA.—You will please see :

"Towards the end of January 1949 the administrative control over His Highness the Maharaja's own Infantry and Body Guards was ordered to be transferred to the Government and the transfer took place by about the end of March 1949. During this interim period, the Palace authorities ordered the promotion of certain officers of these units without the approval of Government and allowed them increased rates of pay and allowances attached to their higher ranks. In May 1950, Government held that the promotions granted by the Palace were not in order and asked for recovery of the amounts paid to the officers as a result thereof. Out of the amount of Rs. 17,970 due for recovery on this account a sum of Rs. 11,289 only was realised and the balance of Rs. 6,681 still due from certain officers was waived . ."

Sri S. SRINIVASA IYENGAR.—I can multiply such instances, but in principle it may not be necessary and that I would like to stress again. Please see that proper accounts staff is provided in the office of a Departmental Head. Please see that the Departmental Head is made responsible for flow of expenditure and the accounts maintained by the Departments are tallied with those of the Accountant-General.

MYSORE UNIVERSITY BILL, 1955

CLAUSE 26—(*Continued*).

Mr. SPEAKER.—Now, we will take up the discussion on clause 26 of the University Bill.

*Sri J. MOHAMED IMAM.—Sir, our only concern is that the Board of Appointments being a very important body, should consist of men who are concerned with the University and with academic matters and extraneous influences should not play any part. The success of a university education depends upon the capacity and character of the teachers and in any scheme of educational reform necessary provisions must be made which will ensure that in the case of appointments to the staff of the University, merit alone will play an important part. In this amendment I find that the Board consists of three persons, that is, the Vice-Chancellor and two specialists in the subject to be selected by the Chancellor, and it was also in the original Bill and only it was not made clear whether these two specialists would be from outside the University or not. According to the recommendations of the Select Committee the two specialists should be from outside the University. I feel it is better to add the words here, in this amendment as:

"two specialists in the subject concerned selected from outside the university by the Chancellor."

I hope the Minister will agree to this.

Sri A. G. RAMACHANDRA RAO.—We have no objection.

Sri J. MOHAMED IMAM.—If the words suggested are added to the amendment, we have no objection to give our approval to this amendment.

Sri S. SRINIVASA IYENGAR.—The Leader of the Opposition has spoken. I will not take much time but for one suggestion that is necessary in this amendment. In para (*b*) in clause 26 it is stated that, "when appointments of Lecturers for any subject are made, the Board shall consist of . . . ."

In the definition of the Bill there is no nomenclature as 'Lecturer.' If it is written as teacher, perhaps it would be proper.

Sri A. G. RAMACHANDRA RAO.—That is a little difficult because there are demonstrators, etc. So, we will amend it later. I think if we say, "when appointments of teachers other than Professors and Readers," it would be all right. I will accept this.

Mr. SPEAKER.—I will put the clause to vote. What about the

(MR. SPEAKER.)

previous amendment moved by Sri T. Mariappa, what does the Hon'ble Member say ?

Sri T. MARIAPPA.—I will withdraw it with the permission of the House.

The amendment to clause 26 moved by Sri T. Mariappa was withdrawn by leave of the House.

*Sri A G. RAMACHANDRA RAO.—Sir, I want to say a few words on this because this is the life of the whole Act. The amendment moved by Sri Puttaswamy in substance is identical with the amendment to the original clause as emerged from the Select Committee. As I have stated, on this clause 26 depends the future of the University and the life of the University. It is this section which enables the Chancellor to pick up the best of academicians for nurturing the young men of our country. It is therefore that this clause has attracted so much attention not only in this House but also in the Select Committee. The Hon'ble Members of the Select Committee will remember that we have spent nearly two or three days over this clause. We have achieved two things, Sir. The academic autonomy, administrative autonomy and the financial autonomy for which this measure has been put forward and that achievement is due to clause 26. Here not only the best of talent is sought to be recruited for the service in the University, but it is a selection made by themselves. Hereafter the responsibility will not be that of the Government or any other body, but of the academicians themselves who are expected to stand on their own legs according to their own lights and lead the country forward. I am sure the apprehensions which my Hon'ble friends expressed yesterday so vehemently, were very beneficial to us and had the effect of opening our eyes to the possible drawbacks that may creep in, and that has been prevented by this amendment. I am sure the University Professors, Asst. Professors and others will welcome this measure and make the best use of it.

With these words, I accept the amendment.

Mr. SPEAKER.—The question is :

"For Clause 26 the following new clause shall be substituted :—

"26 *The Board of Appointments.*—

(1) Appointment to the staff of the University shall be made in accordance with rules made by the Chancellor in consultation with the Syndicate.

(2) There shall be a Board of Appointments for the purpose of making appointments of Professors, Readers and Lecturers.

(*a*) When appointments of Professors and Readers for any subject are made, the Board shall consist of—

the Vice-Chancellor, who shall *ex-officio* be the Chairman and two Specialists in the subject concerned selected from outside the Uuniversity by the Chancellor.

While making such appointments the Board shall consult—

(*i*) the Head of the Department for the subject concerned when an appointment for that subject is made.;

(*ii*) the Principal, Central College, Bangalore, when an appointment for Science subjects is made, or

the principal, Maharaja's College, Mysore, when an appointment for Arts subjects is made; or

the Principal of the Professional College concerned, or when there are more than one such college the seniormost of the Principals of such colleges when an appointment for professional subjects is made;

(*iii*) The Dean of the Faculty concerned when an appointment for the subject pertaining to that Faculty is made.

(*b*) When appointments of teachers other than Professors and Readers for any subject are made, the Board shall consist of—

the Vice-Chancellor, who shall *ex-officio* be the Chairman ;

the Director of Public Instruction; and

the Head of the Department for the subject concerned when an appointment for that subject is made.

The Registrar shall *ex-officio* be the Secretary to the Board.

(3) The Vice-Chancellor shall be competent to make appointments of ministerial and other staff of the University.

(4) The decisions of the Board and in such cases as may be prescribed by the Chancellor, the decision of the Vice-Chancellor shall not have effect unless approved by the Chancellor; thereafter, every such decision shall be final and shall not be called in question in any manner."

The motion was adopted.

Mr. SPEAKER.—The question is:

"That Clause 26 as amended, stand part of the Bill.

The motion was adopted.

Clause 26, as amended, was added to the Bill.

Mr. SPEAKER.—Clause 1, Title and Preamble The question is:

"That Clause 1 the Title and the Preamble stand part of the Bill."

The motion was adopted.

There is one lacuna I observe. Clause 21 should be amended. It will be merely consequential.

Motion to pass.

Sri A. G. RAMACHANDRA RAO.—Sir, I move:

'That the Mysore University Bill, 1956, as amended, be passed."

In moving this motion, I must thank all the members of the House for the attention that they have bestowed in shaping this Bill and the care that they have taken, particularly the Members of the Opposition whose vehement and bitter criticism has helped us to put it in the best form that was possible. This is one of the few measures for which in spite of the heated discussion, there has been unanimity and harmony. I should also like to bring it to the notice of this House that though there was voting, there was never a poll on any clause. Thus, Sir, it is with the unanimous will of this House and goodwill of the members that this Act is being placed on the Statute Book and I thank the Hon'ble Members for the good work that has been recorded in passing this Bill, Sir.

Sri Mulka GOVINDA REDDY.—Sir, before voting, I want one clarification. I want to know whether this measure is going to come into force before the end of this month?

Sri A. G. RAMACHANDRA RAO.—That we are considering.

Mr. SPEAKER.—The question is:

"That the Mysore University Bill, 1956, as amended, be passed."

The motion was adopted.

MYSORE CITY AND TOWN MUNICIPALITIES (SECOND AMENDMENT) BILL, 1956.

*Sri T. CHANNAIAH (Minister for Local Self-Government and Public Health).—Sir, if the House agrees, with your kind permission, I want to lay on the Table and take up the Mysore City and Town Municipalities (Second Amendment) Bill, 1956, which has been passed by the Mysore Legislative Council today.

Mr. SPEAKER.—Yes, you can move the consideration motion.

Motion to consider.

Sri T. CHANNAIAH.—Sir, I move:

"That the Mysore City and Town Municipalities (Second Amendment) Bill, 1956, as passed by the Legislative Council, be taken into consideration."

Sir, this is a very simple measure. Previously according to the existing

(SRI T. CHANNIAH.)

Sri A. BHEEMAPPA NAIK (Molakalmuru)—To-day the House will have to rise at 10-30. Felicitation speeches must also be made. Therefore, I request that the debate on the Report be concluded at 10 A.M.

Sri B. HUTCHE GOWDA (Turuvekere).—No Sir. We have got to speak on the Report. It is not possible to close the debate at 10.

Sri L. SIDDAPPA (Chennagiri).—It is now 9-30. If we have to close the debate at 10-30, why should we have the farce of the debate at all?

*Sri S. SRINIVASA IYENGAR (T.-Narasipur),—Sir, I rise to place my views on the recommendations of the Finance Enquiry Committee constituted by the Government of Mysore. The Committee consisted of eminent administrators and politicians. As has already been expressed, we have very little time to deal with the Report that the Committee have submitted. Sir, they have drawn very good conclusions.

At the outset, I would like to deal with the analysis about the financial position up to 1955-56. The Committee have stated that the Congress Government were handed over a Government which had a balanced revenue budget, and that in the period of ten years of the Congress rule, the State is having a deficit revenue budget.

Sri A. BHEEMAPPA NAIK.—What about the works done?

Sri S. SRINIVASA IYENGAR.—Sir, for the ears of Sri Bheemappa Naik I will repeat. The Committee say that the Congress Government was in possession of a Government in 1947 where the Government had a balanced revenue budget and in a period of ten years' Congress rule, the Congress Governmsnt are presenting a deficit revenue budget. That is all what I say.

Sri H. SIDDAVEERAPPA.—Why?

Sri S. SRINIVASA IYENGAR.—That is a different matter; I will come to it. Sir, in the period of ten years of Congress rule, the Government Party that used to say that they would abolish land revenue and all kinds of taxes, have presented to the people 13 items of taxation measures which yield an amount of 3½ crores per annum. That is the yield from 13 new taxation measures levied by the Congress regime between 1946-47 to 1956 57 and yet they are having a revenue deficit budget.

Sri A. BHEEMAPPA NAIK—Because of the facilities this are given.

Sri S. SRINIVASA IYENGAR.—That is a different thing; this is what the Committee say. According to financial theory there was a time and even now it is held so that in respect of revenue budget, they must balance. Even the Planning Commission and the Finance Commission have declared in unequivocal terms that revenue budgets of any State should balance. There are two aspects—the revenue budget and the capital budget. Capital budget is always framed to finance projects. Financing is by borrowed funds, by loans and other things. I do not touch that aspect at the present stage. I know progressive Governments embark on projects. Projects mean finance. Government will borrow; there is nothing wrong. They come under capital works. The previous Government also did it. What I am saying is, what is the financial position according to this Report? The position is that no Government can survive with a revenue deficit. With that object Governments levy taxes. My contention is, the taxations that are being levied in Mysore State are as many as 13 yielding a revenue of 3½ crores. They have not only levied these but they are not able to have a balanced revenue budget. This calls for a serious examination. The Committee estimates that, at the end of the Second Five-Year Plan. although it is purely hypothetical—there will be deficit of ten crores in the revenue budget. We may say that the calculations are purely hypothetical. But, yet the fact is there. The basis

for such statement is this. They have observed that in all these ten years of Congress rule the expenditure has gone on increasing at the rate of one crore per annum while the revenue receipts under taxation is of the order of about 60 lakhs per annum. With that background if the Government allow this expenditure to go on increasing at the rate of one crore every year, while the taxable revenue is dwindling and is only 60 lakhs and there is a balance of 40 lakhs to cover that position is not happy. It is only with this object that I have been pressing the point. This could be remedied by two ways, one by additional taxation and another by economy. We have to take a very serious view of these things. As has already been explained in the Report, financing of the Second Five-Year Plan can only be done by borrowings and not by revenue surpluses. The question of giving revenue surplusses will be no longer there in 1956-61. The Committee assumes that our borrowings in the period 1956-61 would be in the order of 100 crores. One thing I would like to say about the general principles in respect of taxation to which the Committee have also made a reference. They state that as it stands today the tax revenue of the country is somewhere about 7 to 8 per cent of the national income. The taxation is more progressive in urban than in rural parts. Therefore, the possibility of taxing the rural income is greater. These were the principles set down by the John Mathai Committee and the Madhava Rau Committee also state as to why these principles could not be applied to the State of Mysore. But, I have something to say.

There is still scope for urban taxation. I do not see eye to eye with the proposals made by the Finance Enquiry Committee. Standardisation of land revenue coupled with food prices is impracticable. It is not suitable for a backward country like Mysore. Secondly the Committee want certain relaxation and concession in sales tax. I do not think it is fair. Essential articles have been exempted from levy of sales tax and there is no need to give further concessions. As regards extension of incometax on agriculture, I can never agree ot it. We take the risk of growing food cro ps andin the face of posible damage the failure of rains, etc., andsupply to the consumers. Why should we be subjected to income tax. Therefore, most of the taxes recommended may not be quite healthy. Further, even the recommendations do not go to the extent of covering the anticipated revenue deficit.

I have very little time to debate and therefore I would like to close my speech.

Sri L. SIDDAPPA.—Sir, there seems to be a fear in this House that this Report prepared on the basis of figures furnished by the Government for the present State of Mysore is to no use for us after the 1st November. This is an important Report. How best we can make use of this Report and how best the future set-up can make use of this report, the House is anxious to hear one of the members of this House who was also a member of the Committee that prepared this report. If he can comply with our request, the House will have great pleasure in hearing him.

Sri K. PATTABHIRAMAN (Kolar).—Sir, I did not intend to participate in the debate because, my anxiety was that I should follow the debate and hear the various observations made on this Report for my own edification. Nevertheless, since a suggestion has been made by my very esteemed friend that I should speak I therefore venture ts say a few words on this occasion.

First and foremost, I have the greatest regard for the opinions expressed on the floor of this House and it has been a matter of sincere pleasure that the Committee's work has been amply appreciated and compliments paid ; and such criticisms as have been made are very helpful and very pertinent. On this occasion I must also express my personal pleasusre that I was associated with that Committee which I consider a great honour. Let me on this occasion desire it to be placed on record that the entire House acknowledged with a sense of grateful pleasure the work and labours of *Pradhana Siromani* N. Madhava Rau

(SRI K. PATTABHIRAMAN.)

who presided over this Committee and brought about a report which is very important and valuable as can be seen from the several observations made in the course of the debate.

I should have ordinarily considered it my duty to expatiate and probe further into this matter. But as there is no time and as there is a feeling that the debate must close at 10 A.M., I will only make one observation and request the Hon'ble Finance Minister to consider this suggestion for what it is worth.

No doubt factually on the 1st of November, some of the data upon which this Report has proceeded may become a bit out of tune. There is no doubt about it. But the broad generalisations and the broad indications upon which this Report is based, I perfectly hope that it will be conceded that they will stand scrutiny. This is the suggestion that I am to make to the Finance Minister. After the 1st of November certain other issues will arise. One or two broad aspects should engage our immediate attention. Take for instance the Second Five-Year Plan. Now we have the Second Five-Year Plan relating to five States. We are going to coalesce on 1st November with these different plans relating to the areas which merge into Mysore. Therefore the first task that will be before this new Government from the 1st November, is to have an integrated Five-Year Plan for the new State of Mysore which will come into existence. That necessarily requires a lot of study and a good deal of scrutiny. In that light and with that background this Report even factually will have a bearing and will be of great interest. Therefore I am making a suggestion to the Government if it commends itself to them: immediately after the 1st November, the first task before the new Government would be to set up an Expert Committee which will have to consider the various problems confronting them in connection with integrating all the sectional five plans relating to several areas and making an integrated Five-Year Plan for the entire new State and to consider the administrative and financial considerations. We will have to know thereafter and particularly in the month of November after the New State has come into existence, as to how we stand equipped administratively, and financially for the integrated Five-Year Plan.

The second question that will have to be considered is this: it is always good in the new set up to understand the financial position of the entire new State. There take for instance the new taxation measures that we may have to consider. We have to consider that in the light of the factual, objective statement *re* the taxable position made in the Report. Therefore an expert committee will have to consider these things. This has also another bearing. The Santhanam Commission is already at its task. In fact, I was glad to learn from the statement made by the Hon'ble Minister for Finance— I am referring to the statement that was supplied to us last night,— that it has already attracted his attention and the attention of the Government is also rivetted on the question of the Santhanam Commission. We will have to make sure within a period of one month, possibly not later than December, of all the new demands from the integrated picture of the New Second Five-Year Plan, and with reference to the financial structure that has been developed in the course of this Report, to assess our ability we may have to ask for a special case to be made out for our New State. I feel personally, specially, having had some occasion of looking into the several figures that had come up for scrutiny during my work as a Member of this Committee, I have this feeling Sir, that if the thesis is followed and if the expert committee gets about its business it should not be difficult to make out a special case. Apart from the loan assistance and various other grants, we can make out a strong case for a lumpsum grant from the Centre for the New State of Mysore for some years to come. That is one important task for the New State.

This Report will greatly help us. The resources of the new State are known and could be studied fully. I

have a feeling, Sir, that in a few years almost in about five or six years, we will have turned the corner and begin to see not only a period of plenty and prosperity but a period of surpluses. It should not be difficult to make out a case, if this expert committee goes about its business earnestly from the 1st November. not only for committed assistance and for that which it is usually doled out, but for more than that, a lumpsum outright grant. I feel that unless we get the usual Central Assistance, and grant of one crore or possibly two crores ear-marked for a certain period, in addition, it will be very difficult to maintain and discharge a responsibility that will entail upon us in the new set up.

There are other questions relating to the salary structure that will have to be considered ; and the like. The pay scales of N.G.Os. will have to be upgraded. There are large developmental works, and certain of them, works which will have to be taken up on priority basis. By and large, it is possible to consider some of them as appertaining to an All-India Development Scheme. Making out a special case for all these issues, it should be very easy for that Expert Committee to prepare our claim and that Expert Committee could strengthen the case of the New Government for Central assistance and for a crore or two to be ear-marked for the State. I do hope that this suggestion will commend itself to the Government. I feel that this Report will certainly be helpful to the Expert Committee in this supreme task.

On behalf of the Committee, I must tender my grateful thanks for the appreciation and for the very good sentiments and for the kind way in which the Report has been generally received.

10 A. M.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನೇನೂ ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಈ ವರದಿಯ ಮೇಲೆ ಹೆಚ್ಚು ಮಾತನಾಡಿ ಪ್ರಯೋಜನವಿಲ್ಲ, ಅದರಿಂದ ದೇಶದ ಅಭಿವೃದ್ಧಿಗೆ ಅವಕಾಶ ತಪ್ಪುತ್ತದೆಂದು ಗೊತ್ತಾಗಿದೆ. ಈ ಸಂದರ್ಭದಲ್ಲಿ ನಾನು ಅಂಕಿ ಅಂಶ ಯಾವುದನ್ನೂ ಹೇಳುವುದಿಲ್ಲ. ನಾವು ಯಾವ ಸ್ಥಿತಿಯಲ್ಲಿದ್ದೇವೆಂಬುದನ್ನು ನೆನಸಿಕೊಂಡರೆ ಕೈ ನಡುಗುತ್ತದೆ. ನಮ್ಮ ಹಣಕಾಸಿನ ಸ್ಥಿತಿ ಹಿಂದೆ ಹೇಗಿತ್ತು, ಈಗ ಹೇಗಿದೆ, ಮುಂದೆ 1961ನೆಯ ಇಸವಿಯ ಹೊತ್ತಿಗೆ ಹೇಗಿರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹತ್ತು ಲಕ್ಷ ರೂಪಾಯಿಗಳನ್ನು ಯಾವುದಾದರೂ ಒಂದು ಕೆಲಸಕ್ಕೆ ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲ, ಅಂಥ ಸ್ಥಿತಿಯಿದೆ. ಹಿಂದೆ ಕೆರೆ ಕಟ್ಟಬೇಕಾದರೆ, ರಸ್ತೆ ಮಾಡಬೇಕಾದರೆ, ವಿದ್ಯಾಭಿವೃದ್ಧಿ ಮಾಡಬೇಕಾದರೆ ಫಂಡ್ ಇತ್ತು. ಪ್ರತಿಯೊಂದಕ್ಕೂ ಫಂಡ್ ಇತ್ತು. ಅದರ ಜೊತೆಗೆ ಅಸೆಟ್ಸ್ ಕೂಡ ಇದ್ದವು, ಅದನ್ನೆಲ್ಲಾ ಹೇಳಿದ್ದಾರೆ. ಈಗ ಅದಕ್ಕೆ ಹೋಗುವುದಿಲ್ಲ. ಕೆರೆ ಈಗ ಎಷ್ಟು ಕಟ್ಟಿದ್ದಾರೆ, ಹಿಂದೆಷ್ಟು ಕಟ್ಟಿದ್ದರು ಎಂಬುದನ್ನು ನೋಡಬಹುದು. ಈಗ 9 ವರ್ಷಗಳಲ್ಲಿ 1,300 ಕೆರೆ ಕಟ್ಟಿರಬಹುದು. ಈಗ 20 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗುವ ಕೆರೆ ಕೆಲಸ ತೆಗೆದುಕೊಳ್ಳುತ್ತಿದ್ದಾರೆ, ಬಡ್ಜೆಟ್ಟಿನಲ್ಲಿ ಹಣವೇ ಇಲ್ಲ. ಹಿಂದೆ ಆರು ಸಾವಿರ ಕೆರೆ ಕಟ್ಟಿ ಎಷ್ಟೋ ಆಸ್ತಿಯನ್ನು ಮಾಡಿಟ್ಟಿದ್ದರು. ಈಗ ಬಂಡವಾಳವೆಲ್ಲಿದೆ? ಸಾಲ ಮಾಡಿದರೆ ಬಡ್ಡಿ ಎಲ್ಲಿಂದ ತರುವುದು ? ಆ ವಿಚಾರ ಹೇಳಿ ಪ್ರಯೋಜನವಿಲ್ಲ. ಹಿಂದೆ ನಮ್ಮ ಆಡಳಿತದಲ್ಲಿ ದಕ್ಷತೆಯಿತ್ತು. ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಸಮಿತಿಯು ರಿಟ್ರೆಂಚ್‌ಮೆಂಟ್ ಮಾಡಬೇಕೆಂದು ಹೇಳಿದರೆ ಅದಕ್ಕೆ ಬೆಲೆ ಕೊಡಲಿಲ್ಲ. ಈಗ ನೂರಾರು ಕೋಟಿ ರೂಪಾಯಿಗಳ ಸಾಲ ಹೊತ್ತುಕೊಳ್ಳಬೇಕಾಗಿದೆ. ಇಲ್ಲಿಯವರೆಗೆ ಹಾಕಿರುವ ತೆರಿಗೆ ಮುಂದೆ ಹಾಕುವ ತೆರಿಗೆ ಇವನ್ನು ನೋಡಿದರೆ ಭಯವಾಗುತ್ತದೆ. ವ್ಯಾಪಾರಕ್ಕೆ ಸೇಲ್ಸ್ ಟ್ಯಾಕ್ಸಿನಿಂದ ಉಳಿಗಾಲವಿಲ್ಲ. ವ್ಯವಸಾಯಕ್ಕೆ ಉಳಿಗಾಲವಿಲ್ಲ. ರೈತರಿಗೆ ಹಿಂದೆ ಕೆರೆ ಕಟ್ಟಿಕೊಡುತ್ತಿದ್ದರು, ಈಗ ಕಟ್ಟಿಕೊಡಲು ಖರ್ಚನ್ನು ಪೂರ್ಣವಾಗಿ ರೈತರ ಮೇಲೆ ಹಾಕಿ ಎಂದು ಶಿಫಾರಸು ಮಾಡಿದ್ದಾರೆ. ಇದರಿಂದ ರೈತರಿಗೆ ಉಳಿಗಾಲವಿಲ್ಲ. ಯಾವ ರೈತನಾದರೂ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಎಸ್ಟಿಮೇಟ್ ಮಾಡುವುದಕ್ಕೆ ಹಣ ಕೊಡಲು ಸಾಧ್ಯವೆ? ಇದನ್ನು ಯೋಚನೆ ಮಾಡಿದರೆ ಇನ್ನು ಮುಂದೆ ಒಂದು ಕೆರೆ ಕೂಡ ಆಗುವುದಿಲ್ಲ. ಈ ದಿವಸ 500-600 ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಮುಂದೆ ಒಂದು ಎಕರೆಗೆ ಒಂದು ಸಾವಿರ-ಎರಡು ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದರೆ ಯಾವ ರೀತಿ ಸಾಧ್ಯ ? ಮುಂದೆ ಕೆರೆ ಕಟ್ಟಿಸುವುದಕ್ಕೆ ಸಾಧ್ಯವೆ? ಆದಾಯದ ಬಾಬುಗಳೆಲ್ಲಾ ಕೇಂದ್ರ ಸರ್ಕಾರಕ್ಕೆ ಹೋಗಿವೆ. ಪ್ರತಿಯೊಂದು ಬಾಬಿಗೂ ಹಣಬೇಕಾದರೆ ಒಂದು ಸ್ಟ್ರಿಂಗ್ ಇದ್ದೇ ಇದೆ. ನಮ್ಮ ಹಣವೆಲ್ಲಾ ಯಾವ ರೀತಿ ಖರ್ಚಾಗುತ್ತಿದೆಯೆಂಬುದನ್ನು ನೋಡಬಹುದು. ಈ ದಿವಸ ಎನ್. ಇ. ಎಸ್. ಬ್ಲಾಕುಗಳಿಗೆ ಹಣ ಯಾವ ರೀತಿ ಖರ್ಚಾಗುತ್ತಿದೆ, ಅದಕ್ಕೆ ಯಾರು ಹಣ ಕೊಡುತ್ತಿದ್ದಾರೆ ಎಂಬುದನ್ನು ನೋಡಬೇಕು. ಒಂದೂ ರೂಪಾಯಿ ಖರ್ಚು ಮಾಡುವುದಕ್ಕೆ ಎರಡಾಣೆ ಅನುಕೂಲ ಕೂಡ ಇಲ್ಲ. ಕಾಂಗ್ರೆಸ್ ವಾಲಂಟೀರ್ಸ್ ಎಲ್ಲಿಗಾದರೂ ಹೋದರೆ ಅಲ್ಲಿ ಡೆಪ್ಯುಟಿ ಕಮಿಷನರಿರಬೇಕು, ಇಲ್ಲದಿದ್ದರೆ ವರದಿ ಬರುತ್ತದೆ. ಮೊನ್ನೆ ಹಾಗೆ ನಡೆದಿದೆ. ಮಂತ್ರಿಗಳು ಹೋದಾಗ ಅಧಿಕಾರಿಗಳು ಹಾಜರಿರುವಂತೆ ಕಾಂಗ್ರೆಸ್‌ನವರು ಹೋದಾಗಲೂ ಇರಬೇಕಾಗಿದೆ. ರೈಲ್ವೆ ಇಲಾಖೆಯಿಂದ ಎಂಟು ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಅದನ್ನು ಕಿತ್ತುಕೊಂಡರು. ಹಿಂದೆ ಗೋಲ್ಡ್ ಡ್ಯೂಟಿಯಿಂದ 50 ಲಕ್ಷ ರೂಪಾಯಿಗಳ ಆದಾಯ ಬರುತ್ತಿತ್ತು. ಈ ಸರ್ಕಾರ ಬಂದಮೇಲೆ ಅದನ್ನು ನುಂಗಿಬಿಟ್ಟಿದೆ. ಸೆಂಟ್ರಲ್ ಎಕ್ಸೈಸ್‌ನಿಂದ

(ಶ್ರೀ ಬಿ. ಹುಚ್ಚೇಗೌಡ)

ಸುಮಾರು 50 ಲಕ್ಷ ರೂಪಾಯಿಗಳು ಬರುತ್ತಿದ್ದವು. ಈಗ ಆದಾಯ ಬರುವ ಬಾಬುಗಳೆಲ್ಲಾ ಕೇಂದ್ರಕ್ಕೆ ಹೋದುವು, ಆದಾಯ ಬರುವುದೆಲ್ಲಾ ಹೋಯಿತು. ಇನ್ಷೂರೆನ್ಸ್ ನಮ್ಮದಾಗಿತ್ತು, ಅದನ್ನೂ ಕಿತ್ತುಕೊಂಡರು. ಈಗಿರುವ ರಾಜ್ಯಾಂಗದ ನಿಯಮಗಳು ಸರಿಯಾಗಿಲ್ಲ, ಅವಕ್ಕೆ ಖಂಡಿತ ತಿದ್ದುಪಡಿ ಮಾಡದಿದ್ದರೆ ಅನುಕೂಲವಾಗುವುದಿಲ್ಲ. ನಮ್ಮ ಹಣ ನಾವು ಕೊಡುವ ಕಂದಾಯ; ನಾವು ಖರ್ಚುಮಾಡುವುದಕ್ಕೆ ಅಧಿಕಾರವಿಲ್ಲ. ಪ್ರತಿಯೊಂದಕ್ಕೂ ಕೇಂದ್ರದಿಂದ ಡೈರೆಕ್ಟಿವ್ ಬರುತ್ತಿದ್ದರೆ ನಮ್ಮ ಹಣಕಾಸಿನ ಪರಿಸ್ಥಿತಿ ಎಂದಿಗೂ ಉತ್ತಮವಾಗುವುದಿಲ್ಲ. ಈ ದಿವಸ ನಮ್ಮ ಬಡ್ಜೆಟ್ ಬರೀ ಸಂಬಳಸಾರಿಗೆ ಮತ್ತು ಇತರ ನಾರ್ಮಲ್ ಎಕ್ಸ್‌ಪೆಂಡಿಚರಿಗೇ ಸಾಲದು. ಮುಂದೆ ಎರಡುಕೋಟಿ ರೂಪಾಯಿ ಮಾಡಬೇಕಾದರೆ ಅದಕ್ಕೆ ಒಪ್ಪಿದ ಮೇಲೆ ಬಡ್ಜೆಟ್ ತಯಾರು ಮಾಡಬೇಕು, ಏಕೆಂದರೆ ಕೊಡುತ್ತಾರೆಂಬ ಭರವಸೆಯೇನಿದೆ? ವಿದ್ಯುಚ್ಛಕ್ತಿ ಕೆಲಸ ಮುಂದುವರಿಸುವುದಕ್ಕೆ ಕೇಂದ್ರ ಸರ್ಕಾರದ ನೆರವನ್ನು ಕಾಯಬೇಕು. ವಿದ್ಯುಚ್ಛಕ್ತಿ ತೆರಿಗೆಯನ್ನು ಒಂದಕ್ಕೆ ಎರಡರಷ್ಟು ಮಾಡಬೇಕು, ಜಾಸ್ತಿಮಾಡಬೇಕು ಎಂದು ಹೇಳಿದ್ದಾರೆ. ಹೀಗೆ ಮಾಡಿದರೆ ಹೇಗೆ? ತೆರಿಗೆಯಿಂದ 3½ ಕೋಟಿ ರೂಪಾಯಿಗಳು ಬರುತ್ತವೆ. ಮುಂದಿನ ಪ್ರೋಗ್ರಾಂ ಪ್ರಕಾರ 6 ಕೋಟಿ ರೂಪಾಯಿಗಳ ಖೋತಾ ಬರುತ್ತದೆ. ಎರಡು ಕೋಟಿ ರೂಪಾಯಿಗಳ ನಾರ್ಮಲ್ ಡಿಫಿಸಿಟ್ ಇದೆ. 9 ಕೋಟಿ ರೂಪಾಯಿಗಳ ಜೊತೆಗೆ ಎನ್. ಜಿ. ಓ. ಗಳ ಸಂಬಳ ಸಾರಿಗೆ ಹಣ—ಇಷ್ಟು ಹೊರಬೇಕಾದರೆ ಎಲ್ಲಿಂದ ಬರಬೇಕು? ಒಂದು ಸಮಿತಿ ಮಾಡಿ ಯಾವ ಬಾಬಿನಲ್ಲಿ ದುರ್ವ್ಯಯವಾಗುತ್ತಿದೆಯೋ ಅದನ್ನು ತಡೆಗಟ್ಟದಿದ್ದರೆ ಎಂದೆಂದಿಗೂ ದೇಶದ ಏಳಿಗೆಗಾಗಿ ಬಡ್ಜೆಟ್ ತಯಾರಿಸಿದ ಹಾಗಾಗುವುದಿಲ್ಲ. ಆದಷ್ಟು ಜಾಗ್ರತೆ ಕೇಂದ್ರ ಸರ್ಕಾರ ಸಂಸ್ಥಾನದ ಸರ್ಕಾರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೀಗ ಹಾಕುವ ಪರಿಸ್ಥಿತಿ ಬರುತ್ತಿದೆ. ಇನ್ನೊಂದು ಏನೆಂದರೆ, ನಾವು ಇದರ ಮೇಲೆ ಚರ್ಚೆ ಮಾಡುವುದರಿಂದ ಪ್ರಯೋಜನವಿದೆಯೆ ಎಂದರೆ ಅದೂ ಕೂಡ ಇಲ್ಲ. ಮುಂದೆ ನಮ್ಮ ದೇಶದೊಡನೆ 'ವಿಲೀನವಾಗುವ ಪ್ರಾಂತಗಳು ಯಾವ ಸ್ಥಿತಿಯಲ್ಲಿವೆ, ಸಾಲ ಹೊತ್ತುಕೊಂಡು ಬರುತ್ತವೆಯೋ ಅಥವಾ ಆದಾಯವುಳ್ಳವುಗಳಾಗಿವೆಯೋ ಒಂದೂ ಗೊತ್ತಿಲ್ಲ. ಆದ್ದರಿಂದ ಈಗ ಒಟ್ಟಿನಲ್ಲಿ ಇರುವ ಕೇಂದ್ರೀಕರಣ ನೀತಿಯನ್ನು ಖಂಡಿತ ವಿರೋಧಿಸಿ ಆದಷ್ಟು ಜಾಗ್ರತೆ ಅದರಿಂದ ಬಿಡುಗಡೆ ಹೊಂದಬೇಕಾದದ್ದು ಸೂಕ್ತವಾದ ಮಾರ್ಗ, ಇನ್ನಾವುದರಿಂದಲೂ ಪ್ರಯೋಜನವಿಲ್ಲ ಎಂದು ಸೂಚಿಸುತ್ತೇನೆ.

Mr. SPEAKER.—Now the debate will close. Is there anything to reply?

Sri H. SIDDAVEERAPPA.—I can only say that so far as the points raised are concerned, it should not be taken that I have agreed to all of them. For want of time, I am unable to reply to every point raised by Hon'ble Members.

Concluding Remarks.

Sri Kadidal MANJAPPA. (Chief Minister).—Sir, this is the last day of the last session of this august House. This is the last Legislative Assembly of the present Mysore State. On this occasion I wish to say a few words and it is worthwhile to trace the history of the legislative bodies in this State.

The first legislative body—not exactly a legislative body, it was first a Representative Assembly in 1891—was constituted by means of an executive order. Thereafter in 1907 the first Legislative Council was constituted. In 1923 the Representative Assembly was constituted on statutory basis. The Representative Assembly consisted of 311 persons. It functioned till 1949. As members are aware, in 1947, the Constituent Assembly was constituted and thereafter it was converted into the Legislative Assembly in 1949 and both the Legislative Assembly and Legislative Council were dissolved. In 1952, this august body was constituted under the Constitution. I had the privilege of being a member of the Representative Assembly, Legislative Council, Constituent Assembly and of this august Body. When the so-called native States had no idea of democratic institutions, this State had the privilege of having these bodies. Under the able rule of successive Maharajas and the administrators, this State prospered on account of the sacrifice and co-operation of people on the one side and the Government Servants on the other side. On account of able administration of successive administrators, this State gained the reputation of being a model State. I can with a certain amount of pride claim that this State is far in advance of other States in regard to developmental activities.

Sir, I do not wish to say much on this occasion. The people of the State in general are good, very generous and law-abiding. With great satisfaction I must submit on this occasion that at no time I had any kind of quarrel. Most of my colleagues are in office for the last 4½ years. The

public of Mysore in general have co-operated with us. But for their co-operation we would not have been able to push through several important measures in this House. I was called upon to shoulder the responsibility of being the Leader of this House in the month of August all of a sudden. Since then this House has passed some important measures, and the Government have taken important decisions. But for the co-operation of this august Body we would not have been able to take those important decisions. The Opposition also I am happy to say has co-operated with us on many occasions and for several important measures they have supported the Government. No doubt they have criticised us and they ought to criticise us because it is their duty. But on the whole the Hon'ble Members of the Opposition have extended to us their goodwill and co-operation. On this occasion I must acknowledge with thanks their co-operation.

This Assembly is going to be merged with the greater Assembly of the greater Mysore which will come into existence from 1st November. Of course all of us will continue to be the members of that greater Body, but we will cease to be members of this House from 1st November. I do not wish to say much but I only repeat what I have stated. The Speaker, who is a friend of mine and who is a colleague of mine not only in the Legislature but also in the Bar has co-operated with the Government. He has guided the deliberations of this House, he has enlightened us on many occasions when complicated issuse were raised. I must thank the Speaker for all the co-operation and help that was extended to us.

So far as I am concerned, I have been a Minister since 1952. People may not agree with my views regarding the land reforms or certain other questions. But, in general, I had the privilege of having the goodwill and affection of all Hon'ble Members of this House. I am grateful to them. All of you have got a soft corner for me; in spite of differences we have got on some matters. I am the last Chief Minister of the present Mysore State. On this occasion I acknowledge with gratitude and regard the help that I have received at the hands of the Hon'ble Members and at the hands of the public in general.

I am happy to say on this occasion that our beloved Rajpramukh has been appointed as the Governor of the new Mysore State. He is a benevolent Ruler and enlightened gentleman. I am sure with his guidance, the Mysore State will prosper. May God give us strength to go forward united to make Mysore a very prosperous State.

With these few words I conclude. Thank you.

*Sri J. MOHAMED IMAM (Jagalur).—Mr. Speaker, I fully share the views expressed by the Leader of this House. I feel the present occasion a very happy occasion for me. Sir, recently I read a press report that the Chief Minister of Hyderabad and Madras in their fare-well speeches expressed that they were sorry to part with their daughters in order to send them to their husbands' homes. I feel like the proverbial mothers-in-law who welcome their daughters-in-law.

Sri H. SIDDAVEERAPPA (Minister for Home and Finance).—Where are the sons-in-law?

Sri J. MOHAMED IMAM.—Sir, the Constitution is the husband. We are all wedded to the Constitution. Both the mothers-in-law and the fathers-in-law are wedded to the Constitution.

Sri H. SIDDAVEERAPPA.—How can there be one husband for both?

Sri J. MOHAMED IMAM.—The Finance Minister, Sir, with his mathematical precision has taken it literally. I said that we are in a happy position wherein we are going to welcome our brethren who were separated from us till now by unforeseen circumstances beyond our control. Sir, members of this Assembly were elected 4½ years ago, and since then we have worked together, we have striven together and all of us, individually and jointly, have done our best to enhance the reputation and prestige of the State. It is true, we have quarrelled; we have criticised each other and sometimes bitterly too. But all

(SRI J. MOHAMED IMAM.)

the same, underlying that, there was always the element of love and affection, because, I have stated previously, that we quarrel and quarrel because we love each other and we respect each other. During these 4½ years, this last Assembly of the present Mysore State has done very good work. We have behaved like members of the same family and I must admit that all the members here have loved each other and they have imbibed a sort of personal and mutual affection. Sir, this side of the House, is called the Opposition we formed the Opposition with a view to offer constructive suggestion and advice without fear or rancour. We have criticised the Government whenever we thought it fit and necessary and at the same time, I must admit that the relationship between the Treasury Bench and the Opposition has been very good. I know many instances where the views of the Opposition has prevailed and has been accepted. For example, yesterday's incident. And I also know where the Government has failed to accept the suggestion of the Opposition. I may mention as an instance, the District Board Elections which still remains unsolved. I hope Sir, at least the future Government will solve this knotty problem and give us these local bodies which are very badly needed.

I must thank the Leader of the House, not only the present Leader, but his predecessor in office. Sri Hanumanthaiya who treated the Opposition with great courtesy and respect and faith. I must thank the Treasury Benches. They have been very accommodative; specially in matters of election and other matters, they have shown due consideration. Apart from this technical consideration, the relationship between the Treasury Benches and this side of the House has been most cordial and I hope it will be easy hereafter. I must also take this opportunity Sir, to thank you Mr. Speaker. The importance of our opposition depends a good deal on the Speaker. It is the Chair tha thas to upheld our rights and I must take this opportunity that you have been very considerate towards the Opposition. You have shown all leniency and though it was our initial apprehension that you belonged to the Party in power, all our fears vanished into thin air as days passed by. I thank you for the courtesy shown to the Opposition in this Assembly. This is perhaps the first Assembly after the Constitution that was elected and this is also the last Assembly of the present State of Mysore before the Reorganisation. I must say and say with pride that this Assembly has done many things which we can regard with pride and which posterity also will remember. We have had some omissions also which may be remembered by the posterity. I am not going to allude to them at the moment. But I may state that this Assembly may be proud of its work for it has done certain things which will go down in history. For example, the Reorganisation of the State itself. We wanted from the beginning this Karnataka and all the people living in this area wanted to come together and we recall to our mind with a sense of pride that we have realised our object and from the 1st November we are going to come together, we are going to live together and we are going to work together not only for mutual benefit, but also to enhance the glory of the New State. We can very well be proud of this achievement and this will go down in history.

We have other achievements also to our credit. For example, the nationalisation of the K. G. F. which was also a very thorny problem. That is also one instance where this Asssembly were not guided by party slogans, but only by the considerations of the good of the State. Unanimously they achieved that object. Again, we have other matters, such as the Nationalisation of the B. T. C. and various other factors. We have done various other things. We can very well pride ourselves that this Assembly has done good work and it can be proud of its work.

Sir, I must also take this occasion, to thank the Secretary and the staff of the Legislature. The energetic and

mercurial Secretary is always the friend of the legislators and gives timely advice.

Sri Kadidal MANJAPPA.—I am sorry I had forgotten to say that.

Sri J. MOHAMED IMAM.—I am sure his services and the service of the Assistant Secretary and the Staff will be very much needed and will be very important when the new Assembly which is a bigger Assembly which will be confronted with very serious problems. I think his valuable advice will be of much use to the enlarged Assembly. I take this opportunity of thanking him on behalf of this House.

10-30 A.M.

Sir, it is a matter of great satisfaction that our His Highness the Maharaja has been appointed as the Governor of the new Mysore. It is an honour not to His Highness but to the entire State. It has been the desire of the people of Mysore that His Highness the Maharaja should be associated with the administration of the State, because, Mysore owes its present position, prestige and development in no small measure to the Rulers of the State of Mysore.

Mysore was the first State in India to introduce and associate popular element with the administration. The Mysore Rulers have always been responsive to the aspirations and desires of the people. They have exercised their influence in no small measure in the building of the State. The credit of having made Mysore a Model State must go to the Rulers and the Royal Family. Sir, the present Maharaja is a highly educated person and well talented. We are immensely happy that he will be our Governor and will be associated with the administration. But for his love to the State of Mysore and its people, I am sure, he would not have accepted this place. It is a gain to the State and not to him. I am sure he will always bring glory and prestige to the State of Mysore.

In this connection I wish to say a word about the Dasara. I do not know what would be the future of Dasara. It is said that this year's festival would be the last.

Sri Kadidal MANJAPPA. —Sir, I may be permitted to go. My friend will be here. The Hon'ble Speaker and other Hon'ble Members may please make it convenient to be at the Tea Party at about 10-45.

Mr. SPEAKER.—Yes.

Sri J. MOHAMED IMAM.—I know Sir, Dasara is an institution which has come to the State of Mysore. It is not merely a political institution, but it is a cultural institution and a social institution. The people of Mysore are used to it. So, it is our anxious desire that this grand institution, this institution which has come from ages must be retained in some form or other. Apart from its economic value and other advantages, I want that tradition should be continued and it is left to the future Government.

Sir, there is very little time at our disposal. This Assembly has an important part to play in future. The new Assembly, the composite Assembly, is going to be formed from 1st of November wherein we also take part. We will be there along with others as founder partners. Naturally the members of this House are more conversant with the affairs of the State, with the problems of the State than our friends who are coming afresh to this Assembly. So, our responsibility is enhanced. Practically, for some time we have to guide them and lead them in the right path. That is a greater responsibility which we have to shoulder. Sir, some of us may have our own views. We may have divergent views. But, we must remember that when all of us come here we must share the sorrows and joys. We have to live together and work together. So, in the future set up our experience would be of great value to the members of the Government. We must remember that maxim 'all for one and one for all'. We know that we will have to face big problems. But those problems could be solved to the satisfaction of all provided there is understanding and harmony, goodwill and good spirit.

Sir, it as a matter of great pleasure and it is a pleasant duty now alone to welcome the new members. They will find in us very good brethren. We will

(SRI J. MOHAMED IMAM.)

all dedicate ourselves to build up a new State of Mysore. At the same time, Sir, I thank you and my various friends who have been very good to me. Well, Sir, I might have criticized but I know that every member of this House has some affection towards me and every one of them is my friend and well-wisher. I thank all of them. With these words I conclude.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ ಅಧ್ಯಕ್ಷರೆ, ಮೈಸೂರು ಸಂಸ್ಥಾನದ, ಈಗಿನ ಮೈಸೂರು ಸಂಸ್ಥಾನದ ಶಾಸನ ಸಭೆಯ ಅಧಿವೇಶನ ಸೇರುವುದು ಇದೇ ಕಡೆಯ ದಿನ ಎಂದು ನಾವು ತಿಳಿದುಕೊಳ್ಳಬಹುದು. ನಮ್ಮ ಮೆಂಬರು ತನ ಮುಕ್ತಾಯವಾಗುವುದರೊಳಗೆ ಒಂದೆರಡು ಸಾರಿ ನಾವು ಸೇರುತ್ತೇವೆ, ಆದರೆ ಈಗಿರುವ ಹಾಗೆ ಸೇರುವುದಿಲ್ಲ, ಹೊಸ ವಿಶಾಲ ಸಂಸ್ಥಾನದ ಶಾಸನ ಸಭೆಯ ಸದಸ್ಯರಾಗಿ ನಾಲ್ಕಾರು ತಿಂಗಳ ರಾಜ್ಯಾಡಳಿತದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಸೇರುತ್ತೇವೆ. ಆದ್ದರಿಂದ ಸ್ವಾಭಾವಿಕವಾಗಿ ಈ ದಿನ ಈ ಸಭೆಯ ಕಡೆಯ ಅಧಿವೇಶನದಲ್ಲಿ ಕಡೆಯದಿನ ಎಂದು ಹೇಳಿದರೆ ತಪ್ಪಾಗಲಾರದು. ಇಂಥ ಸಂದರ್ಭದಲ್ಲಿ ಕೆಲವು ಹಿಂದಿನ ನೆನಪುಗಳು ನಮ್ಮ ಮನಸ್ಸಿಗೆ ಸ್ವಾಭಾವಿಕವಾಗಿ ಬರುತ್ತವೆ. ಈ ಸಭೆ ರಚಿತವಾದ ಮೇಲೆ ನಮ್ಮೆಲ್ಲರಿಗೂ ಬಹಳ ಮಾನ್ಯರೂ ಸ್ನೇಹಿತರೂ ಆಗಿದ್ದಂಥ ಶ್ರೀಮಾನ್ ಸಿದ್ದಯ್ಯನವರು ಈ ಸಭಾಧ್ಯಕ್ಷರಾಗಿ ಆರಿಸಿಬಂದು ಸಭೆಯ ಕಾರ್ಯಕಲಾಪಗಳನ್ನು ದಕ್ಷತೆಯಿಂದ ನಡೆಸಿ ಕೀರ್ತಿಗಳಿಸಿದ್ದಾರೆ. ದುರದೃಷ್ಟವಶಾತ್ ಅವರು ನಮ್ಮೆದುರಿಗೆ ಇಲ್ಲದಿದ್ದರೂ, ಅವರ ವಿನಯಪೂರ್ವಕವಾದ ಮಾತು, ನಿಷ್ಪಕ್ಷಪಾತ ಸ್ವಭಾವ ಮತ್ತು ಈ ಸಭೆಯ ಕಾರ್ಯಾಡಳಿತವನ್ನು ನಡೆಸಿದಂಥ ದಕ್ಷತೆ ಈಗಲೂ ನಮ್ಮ ಸ್ಮರಣೆಗೆ ಬರುತ್ತದೆ. ಅವರಾದ ಮೇಲೆ, ಸ್ವಾಮಿ, ತಾವು ಅಧ್ಯಕ್ಷರಾಗಿ ಕಾರ್ಯಾಡಳಿತವನ್ನು ನಡೆಸಿಕೊಂಡು ಬರುತ್ತಿದ್ದೀರಿ. ತಮ್ಮ ಸಮಕ್ಷಮವೇ ಮಾತನಾಡಿದರೆ ಅದು ಮುಖಸ್ತುತಿ ಎಂದು ತಪ್ಪು ಭಾವನೆಗೆ ಅವಕಾಶ ಕೊಟ್ಟೀತು ಎಂಬ ಸಂಕೋಚವಿದೆ. ಆದರೂ ಮನಸ್ಸಿನಲ್ಲಿರುವ ಎರಡು ಮಾತುಗಳನ್ನು ಹೇಳಬೇಕು. ತಾವು ಸರ್ಕಾರದ ಪರವಾಗಿ ಆಗಲಿ, ಸದಸ್ಯರ ಪರವಾಗಿ ಆಗಲಿ ಎದುರು ಪಕ್ಷದ ಸದಸ್ಯರ ಪರವಾಗಿ ಆಗಲಿ ಯಾವ ಭಾಗವನ್ನೂ ವಹಿಸದೆ ನಿಷ್ಪಕ್ಷಪಾತವಾಗಿ ಪ್ರಶ್ನೋತ್ತರಗಳ ಕಾಲದಲ್ಲೂ, ನಿರ್ಣಯಗಳ ಚರ್ಚೆಯ ಕಾಲದಲ್ಲೂ, ಸಾಮಾನ್ಯ ಚರ್ಚೆಯ ಕಾಲದಲ್ಲೂ ವರ್ತಿಸಿದ್ದೀರಿ ಎಂದು ಹೇಳಿದರೆ ಅದು ಎಂದೆಂದಿಗೂ ಉತ್ಪ್ರೇಕ್ಷೆಯ ಮಾತುಗಳಾಗಲಾರವು. ಎರಡನೆಯದಾಗಿ, ಮಾನವ ಸ್ವಭಾವಕ್ಕನುಸಾರವಾಗಿ ನಮ್ಮ ಮೇಲೆ ಕೆಲವರು ಆವೇಶ, ಆಕ್ರೋಶ, ಕೋಪತಾಪಗಳಿಗೆ ಗುರಿಯಾಗಿ ಈ ಸಭೆಯಲ್ಲಿ ಚರ್ಚೆ ಮಾಡುವಾಗ ನಡೆದುಕೊಂಡ ಸಮಯದಲ್ಲೂ ತಾವು ಹಸನ್ಮುಖಿಗಳಾಗಿ ಶಾಂತತೆಯಿಂದ ಸಮಾಧಾನಪಡಿಸಿ ಸಭೆಯಲ್ಲಿ ಶಾಂತ ವಾತಾವರಣವನ್ನುಂಟುಮಾಡುವುದಕ್ಕೆ ಬಹಳ ಮಟ್ಟಿಗೆ ಸಹಾಯ ಮಾಡಿದ್ದೀರಿ ಎಂದು ಹೇಳುವುದು ತಮ್ಮ ಎದುರಿಗೆ ಆಡುವ ಮಾತಲ್ಲ. ಹೀಗೆ ತಾವು ಎಲ್ಲರೂ ಒಪ್ಪುವ ರೀತಿಯಲ್ಲಿ ಈ ಸಭೆಯ ಆಡಳಿತವನ್ನು ನಡೆಸಿಕೊಂಡು ಬಂದಿರುವುದು ಒಂದು ಹೆಮ್ಮೆಯ ವಿಚಾರ, ಸಂತೋಷಪಡತಕ್ಕ ವಿಚಾರ.

ಈ ಸಭೆಯ ಕಾರ್ಯಕಲಾಪಗಳನ್ನು ನಾವು ಈಕ್ಷಿಸುವುದಾದರೆ ನಮ್ಮ ಎದುರು ಪಕ್ಷದ ನಾಯಕರಾದ ಶ್ರೀ ಇಮಾಂ ಸಾಹೇಬರು ಹೇಳಿರುವ ಹಾಗೆ ನಾವು ಶಾಸನ ಸಭಾ ಕಾರ್ಯಗಳನ್ನು ನಮ್ಮ ಭುಜ ತಟ್ಟಿಕೊಳ್ಳುವ ಹಾಗೆ ನಡೆಸಿದ್ದೇವೆಂದರೆ ಅದೇನೂ ತಪ್ಪಾಗಲಾರದು. ಸೌಕರ್ಯ, ಅನುಕೂಲ ಹೆಚ್ಚು ಹೆಚ್ಚಾಗಿ ಒದಗಜನತೆಗೆ ಬೇಕಾದ ಅಗತ್ಯಬಿದ್ದಾಗ ಜನರಮೇಲೆ ಸುಂಕ, ಕಂದಾಯ ಹೆಚ್ಚಾಗಿ ಹೊರಿಸಬೇಕಾದ ಪ್ರಸಂಗ ಬಂದರೂ ಸಹ, ಕೆಲವುವೇಳೆ ಅಂಥ ಕಂದಾಯ ಹೆಚ್ಚಿಸುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗಬಹುದೆಂಬುದನ್ನು ಈ ಸಭೆಯವರು ಗಮನಿಸಿ ಸರ್ಕಾರದವರು ಎಷ್ಟೇ ಒತ್ತಾಯಮಾಡಿದರೂ ಜನರ ಮೇಲೆ ತೆರಿಗೆಯ ಭಾರ ಹಾಕಬಾರದೆಂದು ಸರ್ಕಾರಕ್ಕೆ ಕಡ್ಡಾಯವಾಗಿ ತಿಳಿಸಿದ್ದಾರೆ.

ಆದರೆ ಎಲ್ಲಿ ತೆರಿಗೆ ಹಾಕಲು ಅಗತ್ಯಇದೆ ಎಂದು ಕಂಡು ಬರುತ್ತದೋ ಅಂಥ ಸಂದರ್ಭಗಳಲ್ಲಿ ಮಾತ್ರ ಈ ಸಭೆ ತನ್ನ ಒಪ್ಪಿಗೆಯನ್ನು ನೀಡಿರುತ್ತದೆ. ಇನ್ನು ದೇಶದ ಆಡಳಿತ ಕಾರ್ಯವನ್ನು ನಡೆಸತಕ್ಕ ಬಗ್ಗೆ ಈ ಸಭೆ ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಬಹಳ ದಕ್ಷತೆಯಿಂದಲೂ ಮತ್ತು ಯಶಸ್ವಿಯಾಗಿಯೂ ನಡೆಸಿಕೊಂಡು ಬಂದಿದೆಯೆಂದು ಹೇಳಿದರೆ ಅದು ನಮ್ಮ ಆತ್ಮ ಪ್ರಶಂಸೆಯನ್ನು ನಾವೇ ಮಾಡಿಕೊಂಡ ಹಾಗಾಗುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಈಗಾಗಲೇ ಶ್ರೀ ಮಹಮ್ಮದ್ ಇಮಾಂರವರು ಹೇಳಿರುವಹಾಗೆ ಈ ಸಭೆಯು ನಡೆಸಿರತಕ್ಕ ಕಾರ್ಯಕಲಾಪಗಳಲ್ಲಿ ಚಿನ್ನದಗಣಿ ರಾಷ್ಟ್ರೀಕರಣ ಮಸೂದೆ ಮಾಡಿದ್ದು ಬಹಳ ಹೆಮ್ಮೆಪಟ್ಟುಕೊಳ್ಳುವಂಥ ವಿಚಾರ. ಹೀಗೆ ಇನ್ನೂ ಈ ಸಭೆ ಏನೇನು ಕಾರ್ಯಗಳನ್ನು ಸಾಧಿಸಿದೆ ಎನ್ನುವುದರ ಬಗ್ಗೆ ಹೇಳುತ್ತ ಅದನ್ನು ಒಂದು ಪಟ್ಟಿ ಮಾಡಲು ಈಗ ಕಾಲಾವಕಾಶವಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು—ದಕ್ಷಿಣ).—ಆ ವಿಧಾನ ಸೌಧದ ವಿಚಾರವೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ವಿಚಾರಗಳ ಬಗ್ಗೆ ಈ ಮಾನ್ಯ ಸಭೆ ಸರ್ವಾನುಮತದಿಂದ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿರುವ ಹಾಗೆ ವಿಧಾನ ಸೌಧದ ಬಗ್ಗೆ ಈ ಮಾನ್ಯ ಸಭೆ ತನ್ನ ಏಕಾಭಿಪ್ರಾಯದಿಂದ ಅದನ್ನು ಕಟ್ಟಿಸಿದ್ದು 'ಭೇಷ್' ಎಂದು ಎನ್ನಲಿಲ್ಲ. ವಿಧಾನಸೌಧ ದೇಶಕ್ಕೊಂದು ದೊಡ್ಡ ಕಳಶಪ್ರಾಯವಾಗಿರಬಹುದು. ಆದರೆ ನಮ್ಮ ಕೈಯಲ್ಲಿ ಹಣವಿಲ್ಲದಿರುವಾಗ ಹೀಗೆ ಕೋಟ್ಯಂತರ ರೂಪಾಯಿಗಳನ್ನು ಅಲಂಕಾರಕ್ಕಾಗಿ ಖರ್ಚು ಮಾಡುವುದು ಖಂಡಿತ ಯೋಗ್ಯವಾದದ್ದಲ್ಲ—ಸರಿಯಾದದ್ದಲ್ಲ ಎಂತಲೇ ನಾವು ಕಂಠೋಕ್ತವಾಗಿಯೂ, ಘಂಟಾಘೋಷವಾಗಿಯೂ ತಿಳಿಸಿದ್ದೇವೆ. ಆದರೆ ಅಂಥ ದುಂದುಗಾರಿಕೆಯ ಕಾರ್ಯಕ್ಕೆ ಕಾಂಗ್ರೆಸ್ ಸರ್ಕಾರ ಕೈಹಾಕಿದೆ. ಆದುದರಿಂದ ಅದನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಸದಸ್ಯರುಗಳಾದ ನಾವು ಅದನ್ನು ಒಳಗೆ ಹಾಕಿಕೊಳ್ಳಬೇಕು ಎಂಬ ವಂಚನೆಯನ್ನು ಎಣಿಸದೆ ನ್ಯಾಯವಾದ ವಿಚಾರಗಳ ಬಗ್ಗೆ ಉಗ್ರವಾದ ಟೀಕೆಗಳನ್ನು ಮಾಡುವುದಕ್ಕೆ ನಾವು ಎಂದೂ ಹಿಮ್ಮೆಟ್ಟಿಲ್ಲ. ಒಂದು ದೇಶದ ಆಡಳಿತವನ್ನು ನಡೆಸುವಾಗ, ಅದರಲ್ಲೂ ಜನತೆಯ ಕುಂದುಕೊರತೆಗಳ ವಿಚಾರದಲ್ಲಿ ಚರ್ಚೆಗಳಾಗುತ್ತಿರುವಾಗ, ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯಗಳು ಬರಬಹುದು. ಆದರೆ ಇವರು ತಮ್ಮವರು—ಇವರು ಬೇರೆಯ

ವರು ಎಂಬ ಅಂಶವನ್ನೇ ಗಮನಕ್ಕೆ ತೆಗೆದುಕೊಳ್ಳದಂತೆ ಆಡಳಿತ ವಿಚಾರದಲ್ಲಿ ಈ ಸಭೆಯು ನಿರ್ದಾಕ್ಷಿಣ್ಯವಾಗಿ ವರ್ತಿಸಿರತಕ್ಕದ್ದು ಒಂದು ಹೆಮ್ಮೆಯ ವಿಚಾರವೇ. ಇಷ್ಟನ್ನೂ ನಾನು ಸರ್ಕಾರದ ಆಡಳಿತ ಪಕ್ಷದ ಬಗ್ಗೆ ಹೇಳಿದ್ದಾಯಿತು. ಇನ್ನು ಸಭಾಧ್ಯಕ್ಷರಾಗಿರತಕ್ಕ ತಾವು ತಮ್ಮ ಕಾರ್ಯವನ್ನು ಬಹಳ ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಿರುತ್ತೀರಿ. ತಾವು ಆ ವಿರೋಧ ಪಕ್ಷದವರ ಬಗ್ಗೆ ವರ್ತಿಸುವುದನ್ನು ನೋಡಿದರೆ ವಿರೋಧ ಪಕ್ಷವೇ ಸರ್ಕಾರದ ಪರವಾಗಿದೆಯೇನೋ—ನಾವೇ ವಿರೋಧ ಪಕ್ಷದವರಾಗಿರುತ್ತೇವೇನೋ ಎನ್ನುವಷ್ಟರಮಟ್ಟಿಗೆ ತಾವು ಅವರಿಗೂ ನಮಗೂ ತಮ್ಮ ಸಹಕಾರವನ್ನು ತೋರಿಸಿದ್ದೀರಿ. ಅಧ್ಯಕ್ಷರಾದ ತಾವು ದೇಶದ ಹಿತ ಮತ್ತು ಜನರ ಹಿತಗಳಿಗೆ ಮುಖ್ಯ ಗಮನ ಕೊಟ್ಟು ತಮ್ಮ ಪಕ್ಷದ ಹಿತಕ್ಕೆ ಹೆಚ್ಚಿನ ಗಮನ ಕೊಡಬಾರದೆಂಬ ಘನೋದ್ದೇಶದಿಂದ ಕೆಲಸ ನಡೆಸಿರುತ್ತೀರಿ ಎನ್ನುವುದನ್ನು ತಾವು ಈ ಸಭೆಯು ಎಲ್ಲ ಪಕ್ಷಗಳಿಗೂ ಕಾರ್ಯತಃ ತೋರಿಸಿದ್ದೀರಿ. ಈ ದಿವಸಕ್ಕೆ ಈ ಸಭೆಯು ಮುಕ್ತಾಯವಾಗುತ್ತದೆ. ನಾಳೆ ಇನ್ನೊಂದು ಸಭೆ ಸೇರುವಾಗ ವಿಶಾಲ ಮೈಸೂರಾಗಿ ದಕ್ಷಿಣ ಮತ್ತು ಉತ್ತರ ಕನ್ನಡ ಪ್ರದೇಶ, ಹೈದರಾಬಾದ್, ಕೊಡಗು ಮತ್ತು ಮೈಸೂರು ದೇಶಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ದೊಡ್ಡ ಸಭೆ ಸೇರುತ್ತದೆ. ಈ ಹಿಂದೆ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಇಲ್ಲಿ ಚರ್ಚೆಯಾಗುತ್ತಿದ್ದಕಾಲದಲ್ಲಿ ಅದನ್ನು ವಿರೋಧಿಸಿದ್ದವರ ಪೈಕಿ ನಾನೂ ಒಬ್ಬನಾಗಿರುತ್ತೇನೆ. ನ ನು ಆರೀತಿ ವಿರೋಧಿಸಲು ಕಾರಣವೇನೆಂಬುದನ್ನು ಆಗಲೇ ಹೇಳಿರುವುದರಿಂದ ಪುನಃ ಅದನ್ನೇ ಈ ದಿವಸ ಹೇಳುವುದು ಅಪ್ರಕೃತ. ಆದಾಗ್ಯೂ ಕಾರಣಾಂತರದಿಂದ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ರಾಜ್ಯಗಳ ಪುನರ್ವಿಂಗಡನೆಯ ಬಗ್ಗೆ ಕೇಂದ್ರ ಸರ್ಕಾರ ಮತ್ತು ಭಾರತ ಪಾರ್ಲಿಯಮೆಂಟ್ ಒಂದು ಆಖೈರು ತೀರ್ಮಾನಕ್ಕೆ ಬರುವ ಮುನ್ನ ಆ ಬಗ್ಗೆ ಅವುಗಳ ಸೂಕ್ತತೆಯ ವಿಚಾರವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾದ್ದು ಪ್ರತಿಯೊಬ್ಬ ದೇಶದ ಪ್ರತಿನಿಧಿಗೂ ಇರತಕ್ಕ ಒಂದು ಹಕ್ಕು ಅದು. ಅಂಥ ಸಂದರ್ಭ ಒದಗಿದಾಗ ನಾನು ಕರ್ಣಾಟಕ ಏಕೀಕರಣವಾಗುವುದು ಬೇಡ ಎಂದು ಹೇಳಿದ್ದೆನು. ನಾನು ಆ ರೀತಿ ಹೇಳುವುದಕ್ಕಿದ್ದಂಥ ಒಂದು ಮುಖ್ಯಕಾರಣ, ದೇಶ ದೊಡ್ಡದಾದರೆ ಆಡಳಿತದಲ್ಲಿ ಬಿಗಿಯಿರುವುದಿಲ್ಲ ಎನ್ನುವುದಾಗಿ ಆ ದಿವಸವೇ ನಾನು ವ್ಯಕ್ತಪಡಿಸಿದ್ದೇನೆ. ನಾನು ಆ ಮಾತನ್ನು ಹೇಳಿದಾಗ ಆಗಿದ್ದ ಮುಖ್ಯ ಮಂತ್ರಿಗಳು ಆ ವಿಚಾರ ಆಡಳಿತ ನಡೆಸಿಕೊಂಡು ಹೋಗಲು ಬರತಕ್ಕಂಥ ಜನರ ಶಕ್ತಿಯಮೇಲೆ ಅವಲಂಬಿಸಿರುತ್ತದೆಯೆಂದು ಹೇಳಿದ್ದರು. ಆದರೆ ಇತ್ತೀಚೆಗೆ ಬೆಳಗಾಂನಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದಂಥವರೇ—ಅವರೇ ಹೋಗಿ ತಮ್ಮ ಭಾಷಣದಲ್ಲಿ ಈ ರೀತಿ ದೇಶಗಳನ್ನು ದೊಡ್ಡದಾಗಿ ಮಾಡಿದ್ದು ನ್ಯಾಯಬದ್ಧವಾಗಿಲ್ಲವೆಂದೂ ತರ್ಕಗಳು ಹೆಚ್ಚಿ ಆಡಳಿತದಲ್ಲಿ ಬಿಗಿ ಕಮ್ಮಿಯಾಗುತ್ತದೆಂದು ಹೇಳಿದ್ದಾರೆ. ಹೀಗೆ ಅವರು ಹೇಳಿದ್ದಾರೆಂಬುದನ್ನು ನಾನು ಪತ್ರಿಕೆಯಲ್ಲಿ ಓದಿದಾಗ ಇದು ಕೆಟ್ಟಮೇಲೆ ಬುದ್ಧಿ ಬಂದಿತೆನ್ನುವ ಹಾಗೆ ಎಂದುಕೊಂಡೆ. ಶ್ರೀ ಹನುಮಂತಯ್ಯನವರ ಈ ಅಭಿಪ್ರಾಯಕ್ಕಾಗಿ ಅಯ್ಯೋ ಪ್ರಾಣಿ! ಎನಿಸಿತು. ಈಗಲಾದರೂ ಆಗುವುದು ಆಗಿಹೋಯಿತು. ಕರ್ಣಾಟಕ ಏಕೀಕರಣವಾಯಿತು. ಕನ್ನಡ ಭಾಗಗಳೆಲ್ಲಾ ಇನ್ನಮೇಲೆ ಒಂದು ಆಡಳಿತಕ್ಕೆ ಒಳಪಡಬೇಕೆಂಬುದಾಗಿ ಪಾರ್ಲಿಮೆಂಟಿನವರೂ ಮತ್ತು ಕೇಂದ್ರ ಸರ್ಕಾರದವರೂ ತೀರ್ಮಾನ ಮಾಡಿಬಿಟ್ಟಿದ್ದಾರೆ. ಅದನ್ನು ಈಗ ಪುನಃ ಯಾರೂ ಕೆದಕಬಾರದು. ಈ ಹಿಂದೆಯೇ ನಾವುಗಳೆಲ್ಲರೂ ದೊಡ್ಡದಾಗುವ ಕನ್ನಡ ಪ್ರಾಂತ್ಯಕ್ಕೆ ಮೈಸೂರೆಂಬ ಹೆಸರೇ ಇರಬೇಕೆಂದು ತೀರ್ಮಾನಮಾಡಿದ್ದೇವೆ. ಈ ತೀರ್ಮಾನಕ್ಕೆ ಈ ದಿವಸ ಪ್ರತಿಯೊಬ್ಬರೂ ತಲೆಬಾಗಲೇಬೇಕು. ಇನ್ನುಮುಂದೆ ನಾವು ದೇಶಾಭಿವೃದ್ಧಿಗೋಸ್ಕರವಾಗಿ ಏನೇನು ಕೆಲಸ ಕಾರ್ಯಗಳನ್ನು ನಡೆಸಬೇಕು ಎನ್ನುವುದನ್ನು ಆಲೋಚನೆ ಮಾಡದೆ ಹಿಂದಿನ ತೀರ್ಮಾನಗಳಲ್ಲಿರತಕ್ಕ ಲೋಪದೋಷಗಳನ್ನು ಹುಡುಕುವುದಕ್ಕೆ ಹೋದರೆ ಅಸಂಬದ್ಧ ಚರ್ಚೆಗಳಿಗೆ—ಜಿಜ್ಞಾಸೆಗಳಿಗೆ ಕಾರಣವಾಗುತ್ತದೆ ಎನ್ನುವ ವಿಚಾರವನ್ನು ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ. ಈ ದಿವಸ ಕೇಂದ್ರ ಸರ್ಕಾರದ ಮಂತ್ರಿಮಂಡಳದಲ್ಲಿರತಕ್ಕವರಲ್ಲೊಬ್ಬರಾದ ಶ್ರೀ ದಾತಾರರವರು ನೂತನ ಮೈಸೂರಿಗೆ 'ಮೈಸೂರು' ಎನ್ನುವ ಹೆಸರು ಚೆನ್ನಾಗಿಲ್ಲ ಇದಕ್ಕೆ 'ಕರ್ಣಾಟಕ' ಎಂದು ಇಟ್ಟಿದ್ದರೆ ಚೆನ್ನಾಗಿತ್ತೆಂದು ಹೇಳಿರುತ್ತಾರೆ. ಹಾಗೆ ಅವರು ಹೇಳಿರತಕದ್ದನ್ನು ನಾನು ಪತ್ರಿಕೆಗಳಲ್ಲಿ ನೋಡಿದಾಗ ನನಗೆ ಬಹಳ ವ್ಯಸನವುಂಟಾಯಿತು. ಹೀಗೆ ಅವರು ಹೇಳುವುದಕ್ಕೆ ಪ್ರಾರಂಭಿಸಿದರೆ ಆಗ ನಾನೂ ಪುನಃ ಹೇಳುತ್ತೇನೆ—ಹೀಗೆ ಒಂದು ದೊಡ್ಡ ಸಂಸ್ಥಾನವಾಗುವುದು ಸರಿಯಲ್ಲ; ಎರಡು ಕರ್ಣಾಟಕಗಳಾಗಲಿ ಎಂದು. ಆಗ ಪುನಃ ಹಳೆಯ ಚರ್ಚೆಗಳೇ ಪ್ರಾರಂಭವಾಗಬೇಕಾಗುತ್ತದೆ. ಹೀಗಾದರೆ ಕೊನೆ ಮೊದಲಿರುವುದಿಲ್ಲ. ಆದುದರಿಂದ ಈಗ ತೀರ್ಮಾನವಾಗಿರುವ ಪ್ರಕಾರ ನಮ್ಮ ಪ್ರಾಂತ್ಯಕ್ಕೆ ವಿಶಾಲ ಮೈಸೂರೆಂಬ ಹೆಸರು ಇರಲೇಬೇಕು. ಇದನ್ನು ಬದಲಾಯಿಸಲು ಯಾರೂ ಚರ್ಚೆಗಳನ್ನು ಹೂಡಬಾರದು. ಈಗಾಗಲೆ ತೀರ್ಮಾನ ಮಾಡಿರತಕ್ಕದ್ದನ್ನು ಆ ಹಿರಿಯ ಪಾರ್ಲಿಮೆಂಟಿನವರೂ ಮತ್ತು ಕೇಂದ್ರ ಸರ್ಕಾರದವರೂ ತಿಳಿಸಿರುವಂತೆ ನಾಳೆ ಹೊರಗಡೆಯಿಂದ ಬರತಕ್ಕ ನಮ್ಮ ಕನ್ನಡ ಸಹೋದರರುಗಳನ್ನು ಒಮ್ಮನಸ್ಸಿನಿಂದ ಸ್ವಾಗತಿಸೋಣ. ಅವರೂ ನಾವೂ ಒಬ್ಬರಿಗೊಬ್ಬರು ಏಕೀಭವಿಸಿ-ಒಬ್ಬರನೊಬ್ಬರು ಅರಿತುಕೊಂಡು ದೇಶದ ಏಳಿಗೆಗೆ ಕೆಲಸಗಳು ಸುಗಮವಾಗಿ ನಡೆಯುವಂತೆ ನಡೆಯೋಣ ಎಂದು ನಾನು ತಮ್ಮೆಲ್ಲರಲ್ಲೂ ಈಗ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಮೇಲೆ ಇವರು ಒಳಗಿನವರು—ಇವರು ಹೊರಗಿನವರು ಎನ್ನತಕ್ಕ ಭಾವನೆಯನ್ನು ತ್ಯಜಿಸಿ ನಾವೆಲ್ಲರೂ ಸಹೋದ್ಯೋಗಿಗಳಂತೆ ಪ್ರತಿಯೊಬ್ಬರೂ ಶ್ರದ್ಧೆವಹಿಸಿ ವಿಶಾಲ ಮೈಸೂರಿನ ಪ್ರಗತಿ ಸಾಧನೆಗೆ ದುಡಿಯೋಣ. ಈ ಮಹತ್ಕಾರ್ಯದಲ್ಲಿ ಅಭಿವೃದ್ಧಿ ಸಾಧನೆ ಮತ್ತು ಕೀರ್ತಿಯನ್ನು ಸಂಪಾದಿಸುವ ಮಾರ್ಗದಲ್ಲಿ ಯಾವ ಒಂದು ಜಾತಿ-ಮತಗಳ ಭಾವನೆಯೂ ಇಲ್ಲದಂತೆ ಕೆಲಸಮಾಡಲು ಅಂಥ ಒಂದು ಒಳ್ಳೆಯ ಮನಸ್ಸನ್ನು ದೇವರು ತಮ್ಮೆಲ್ಲರಿಗೂ ಕೊಡಲಿ ಎಂದು ಪ್ರಾರ್ಥಿಸಿ ತಾವು ನನಗೆ ಇಷ್ಟು ಮಾತನಾಡಲು ಒಂದು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕೂ ಮತ್ತು ಎಲ್ಲ ಮಾನ್ಯ ಸದಸ್ಯರೂ ನನಗೆ ತೋರಿಸಿದ ಸಹಕಾರ ಶಾಂತಿ ಮನೋಭಾವ ಹಾಗೂ ಅವರ ವಿಶ್ವಾಸಗಳಿಗಾಗಿ ಎಲ್ಲರನ್ನೂ ವಂದಿಸುತ್ತೇನೆ. ಇನ್ನೊಂದು ವಿಷಯ ತಿಳಿಸಬೇಕಾಗಿದೆ. ಈ ಸಭೆಯಲ್ಲಿ ಮಾತನಾಡುವಾಗ ಮಧ್ಯೆ ಪ್ರವೇಶಮಾಡಿ ಒಬ್ಬರನೊಬ್ಬರು ಕೆದಕಿದ್ದೇವೆ, ಕೆರಳಿಸಿದ್ದೇವೆ, ಹಾಗೂ ಟೀಕೆ ಮಾಡಿದ್ದೇವೆ. ಅವುಗಳೆಲ್ಲ ಆ ಸಂದರ್ಭಕ್ಕೇ ಕೈಬಿಡತಕ್ಕ ವಿಚಾರಗಳು—ಅವು ಅಲ್ಪ ವಿಚಾರ

(ಶ್ರೀ ಎಚ್. ಕೆ. ವೀರಣ್ಣಗೌಡ)

ಗಳು. ಅದರಲ್ಲಿರತಕ್ಕದ್ದು ಮುಖ್ಯವಾಗಿ ದೇಶದ ಹಿತವೇ ಹೊರತು ಅದರಲ್ಲಿ ಯಾರೊಬ್ಬರ ಬಗ್ಗೆಯೂ ವೈಯಕ್ತಿಕವಾದದ್ದೇನೂ ಇಲ್ಲ, ಯಾರೊಬ್ಬರಮೇಲೂದ್ವೇಷದಿಂದಲ್ಲ ಎನ್ನುವುದನ್ನು ನಾನೀ ಸಂದರ್ಭದಲ್ಲಿ ವ್ಯಕ್ತಪಡಿಸಿ ನನಗೆ ಈ ನನ್ನ ನಾಲ್ಕಾರು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri J. MOHAMED IMAM.—Sir, I forgot to thank the Press Representatives and the Press for the co-operation which they have given us, especially the Opposition. I am glad that they made no difference between the Treasury Bench and the Opposition and they have given all possible help and co-operation to the Members of the Opposition and other Members. I must thank the other Secretaries to Government for their uniform courtesy and kindness. Of course, we are not parting. We are going to continue together. I am sure in the future set up, they will be of great help to us and they will do much more than what they have done till now.

*Sri Mulka GOVINDA REDDY (Chitaldrug).—Mr. Speaker, we cease to be members of the Assembly of the present State of Mysore, but we continue to be members of the enlarged Assembly of the enlarged State. During the period of 4½ years, we have seen how the Assembly was conducted by the late Sri H. Siddaiya and how these proceedings were conducted up till now by you. We have also seen the change in the leadership of the Ruling Party. The Opposition has done its best and put forward the grievances of the people to fight the injustices of the Ruling Party. It is true that we have not been as effective as we wanted to be because of the fact that the members have got their own views to say. We hope and pray that this imbalance will cease and in the coming elections, the composition of the Congress will have right thinking people or the other parties will have a considerable strength so that the Opposition can make itself felt in the decisions that will be taken by the Ruling Party. Sir, you have been very kind to the members of the Opposition and it ought to be so when it is the case that the members of the Opposition are very few in number. You have been the guardian of the rights of this House and you have rightly deserved our confidence that we reposed in you, when you were elected to this office.

Sir, I would be failing in my duty if I did not pay our compliments to the Secretary and his staff who have always been at our service not only in the Assembly but also outside. They have helped us with all the necessary advice whenever that was needed.

The Press in Mysore have been generous and considerate. I would have wished that they were more considerate to the members of the Opposition, because their number is not considerable.

Sir, we have spent very happy days for the last 4½ years and for another six months we will continue to spend happy times in the enlarged Assembly. To our credit, be it said that we have passed very important measures, specially the Kolar Gold Field Nationalisation, The B.T.C. Nationalisation, the abolition of Inams, though on this, we are not satisfied with the Government. Though we wanted to do much more than what has been done, we must be content with what has been done. Let us hope that we will do something that we can all be proud of, in the enlarged Assembly that will come into being from the 1st of November. Of course, we had our own grievances. Let us forget and work in unison for bringing a good name to the country and prosperity to the people who live in this country.

Thank you, Sir.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಪ್ರಸ್ತುತ ಮೈಸೂರು ರಾಜ್ಯ ಅಸ್ತಮಿಸಿ ನೂತನ ಮೈಸೂರುರಾಜ್ಯ ಉದಯಿಸುವ ಈ ಒಂದು ಪರ್ವಕಾಲ ದುಃಖ ಮತ್ತು ಸುಖಗಳಿಂದ ಕೂಡಿದೆ. ಸೂರ್ಯನು ಪಶ್ಚಿಮದಲ್ಲಿ ಮುಳುಗಿ ಪೂರ್ವದಲ್ಲಿ ಮತ್ತೆ ನೂತನವಾದ ಚೆಲುವಿನಿಂದ ಶಕ್ತಿಯಿಂದ ಉದಯಿಸುವಂತೆ ಈ ಮೈಸೂರು ರಾಜ್ಯವೂ ಕೂಡ ಕ್ಷಣಕಾಲ ಅಸ್ತಮಿಸಿ ಮತ್ತೆ ಉದಯಿಸುವುದರಲ್ಲಿದೆ. ಈ ದಿನ ಪ್ರಸ್ತುತ ಮೈಸೂರಿನ ಇತಿಹಾಸದ ಅಧ್ಯಾಯ ಕೊನೆಗೊಳ್ಳಲಿದೆ. ಮುಖ್ಯವಾಗಿ ಈ ವಿಧಾನಸಭೆಯ ಇತಿಹಾಸ ಇಲ್ಲಿಗೆ ಮುಗಿಯಿತೆನ್ನಬೇಕು. ಈ ಸಂದರ್ಭದಲ್ಲಿ ಅಗಲುವಿಕೆಯು ಕ್ಷಣಿಕವಾದರೂ ಕೂಡ ದುಃಖಕರವೇ. ಇದು farewell ಎನ್ನುವ ಒಂದು ದೃಷ್ಟಿಯಿಂದ. ಆದರೆ ಪುನಃ ಒಂದೇ ರಾಜ್ಯದಲ್ಲಿ

ಸೇರಿ ಮುಂದುವರಿಯುವ ಒಂದು ವ್ಯವಸ್ಥೆಯಲ್ಲಿ ನಾವಿದ್ದೇವೆನ್ನುವುದು ಸುಖದ ಮತ್ತು ಸಂತೋಷದ ಸಂದರ್ಭ. ಈ ಸಭೆಗೆ ಮೊಟ್ಟಮೊದಲು—ನಾನು ಹಿಂದಿನ ಚರಿತ್ರೆಗೆ ಹೋಗುವುದಿಲ್ಲ—ಈ ಸಭೆಯು ಆರಂಭವಾದಾಗ ವಿರೋಧ ಪಕ್ಷದಿಂದ ನಾನು ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧೆ ಮಾಡಬೇಕೆಂದು ತೀರ್ಮಾನ ಮಾಡಿಕೊಂಡು, ಸ್ಪರ್ಧೆ ಮಾಡಿ 18 ಓಟುಗಳನ್ನು ತೆಗೆದುಕೊಂಡು ಸೋತೆನು. ಆ ಸಂದರ್ಭದಲ್ಲಿ ಶ್ರೀಮಾನ್ ಎಚ್. ಸಿದ್ದಯ್ಯನವರು ಅಧ್ಯಕ್ಷರಾದರು.

11 A.M.

ಅವರು ಅಧ್ಯಕ್ಷರಾಗಿ ಈ ಸಭೆಯನ್ನು ಬಹಳ ದಕ್ಷತೆಯಿಂದ ನಡೆಸಿಕೊಂಡು ಹೋದರು. ಅವರು ಕಾಲವಾದುದು ದುರದೃಷ್ಟಕರ. ಅದರಿಂದುಂಟಾಗಿರುವ ನಷ್ಟವನ್ನು ತುಂಬಿಕೊಳ್ಳಲಾಗದಿದ್ದರೂ ನಮ್ಮ ಜಿಲ್ಲೆಯವರೇ ಆದ ಶ್ರೀಮಾನ್ ರುದ್ರಪ್ಪನವರು ಮತ್ತೆ ಅವಿರೋಧವಾಗಿ ಆರಿಸಿ ಬಂದು ಈ ಹೊತ್ತಿನವರೆಗೆ ಸಭೆಯ ಕಾರ್ಯಕಲಾಪಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿರುವುದು ನನಗೆ ಒಂದು ಹೆಮ್ಮೆಯ ವಿಷಯವೇ ಆಗಿದೆ. ಈ ಸಭೆಯ ಕಾಂಪೊಸಿಷನ್ ಹೇಳುವುದಾದರೆ, ಈ ಸಭೆಯಲ್ಲಿ ಹಿಂದೆ ಮಂತ್ರಿಗಳಾಗಿದ್ದವರೂ, ನುರಿತವರೂ ಅನುಭವಿಗಳೂ, ಮತ್ತು ಆರಿಸಿ ಬಂದವರೂ ಸದಸ್ಯರಾಗಿದ್ದರು. ಈ ಸಭೆಯಲ್ಲಿ ವಿಧಾನ ಸಭೆಯ ಅಭಿವೃದ್ಧಿಗೆ ಏನೇನು ಕೆಲಸಗಳನ್ನು ಮಾಡಿದೆಯೆನ್ನುವುದನ್ನು ನಾವು ನೋಡಿದರೆ ಇನಾಂ ಮತ್ತು ಜಹಗೀರುಗಳನ್ನು ರದ್ದುಪಡಿಸುವ ಕಾನೂನುಗಳೂ ಮತ್ತು ಈಚೆಗೆ ಕೋಲಾರದ ಚಿನ್ನದಗಣಿ ಮತ್ತು ಬಿ.ಟಿ.ಸಿ. ಸರ್ವಿಸಸ್ ರಾಷ್ಟ್ರೀಕರಣ ಮಾಡುವ ಕಾನೂನುಗಳೂ ಅಂಗೀಕೃತವಾಗಿವೆ. ಇಂಥ ಕೆಲವು ಎದ್ದು ಕಾಣತಕ್ಕ ಕೆಲಸಗಳನ್ನು ನಾವು ಮಾಡಿದ್ದೇವೆ. ಆಯವ್ಯಯಗಳ ತಃಖ್ತೆಯ ಅಂಗೀಕಾರ ಮುಂತಾದ ಕ್ರಮವಾಗಿ ಆಗತಕ್ಕ ಕೆಲಸಗಳ ಜೊತೆಗೆ ವಿಶೇಷ ಕೆಲಸಗಳನ್ನೂ ಸಾಧಿಸಿದ್ದೇವೆ. ಈ ಸಭೆಯಲ್ಲಿ ಮೊದಲು ಆರಂಭದಲ್ಲಿದ್ದ ಸದಸ್ಯರಲ್ಲಿ ಶ್ರೀಯುತರುಗಳಾದ ಸಿದ್ದಯ್ಯನವರು, ಶಂಕರಲಿಂಗೇಗೌಡರು ಮತ್ತು ಟಿ. ಸಿ. ಬಸಪ್ಪನವರ ಕಾಲಾಧೀನರಾದರು, ಎಸ್. ಎಂ. ಮರಿಯಪ್ಪನವರು ಮತ್ತು ಟಿ. ನಾಗಪ್ಪನವರು ತಮ್ಮ ಸ್ಥಾನಗಳನ್ನು ಕಳೆದುಕೊಂಡರು, ಗಂಗಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸದಸ್ಯತ್ವವನ್ನು ಕಳೆದುಕೊಂಡರು, ಕೆ. ವಿ. ಶಂಕರೇಗೌಡರೂ ಸಹ ಹಾಗೆಯೇ ರಾಜೀನಾಮೆ ಕೊಟ್ಟು ತಮ್ಮ ಸ್ಥಾನವನ್ನು ಕಳೆದುಕೊಂಡರು. ಹೊಸದಾಗಿ ಈ ಸಭೆಗೆ ಬಳ್ಳಾರಿಯಿಂದ ಸದಸ್ಯರು ಬಂದರು. ಇನ್ನೆರಡು ಮುಖ್ಯ ಘಟನೆಗಳಾಗಿವೆ. ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಹನುಮಂತಯ್ಯನವರು ತಮ್ಮ ಮಂತ್ರಿಮಂಡಲದ ಮುಖಂಡತ್ವವನ್ನು ಕಳೆದುಕೊಂಡದು ಮತ್ತೊಂದು ಘಟನೆ. ಹಾಗೆಯೇ ಶ್ರೀಮಾನ್ ಟಿ. ಸಿದ್ದಲಿಂಗಯ್ಯನವರೂ ತಮ್ಮ ಮಂತ್ರಿಪದವಿಯನ್ನು ಕಳೆದು ಕೊಂಡುದೂ ಕೂಡ ಒಂದು ಮುಖ್ಯ ಘಟನೆ. ಕಾರಣಗಳನ್ನು ವಿವರಿಸುವುದಕ್ಕೆ ನಾನು ಹೋಗುವುದಿಲ್ಲ.

ಇನ್ನು ಸಭೆಯ ಮೇಲೆ ನನ್ನ ಇಂಪ್ರೆಷನ್, ಸಭೆಯಲ್ಲಿ ಎಂಥೆಂಥ ಸದಸ್ಯರಿದ್ದರೆಂಬುದು ಅದನ್ನೆಲ್ಲಾ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಅವಕಾಶವಿದ್ದರೆ ನನ್ನ ಇಂಪ್ರೆಷನ್ ಏನಿದೆಯೆಂಬುದನ್ನು ಸೂಚಿಸಲು ನಾನು ಆಶೆಪಟ್ಟಿದ್ದೆ. ಇಲ್ಲಿ ಎದ್ದು ಕಾಣತಕ್ಕ ಕೆಲವು ವ್ಯಕ್ತಿಗಳ ವಿಚಾರ ಮಾತ್ರ ಒಂದೆರಡು ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ. ವ್ಯಕ್ತಿತ್ವಕ್ಕೆ ಅಪಚಾರವಾಗುವ ಹಾಗೆ ಏನಾದರೂ ಹೇಳಿದ್ದರೆ ಕ್ಷಮಿಸಬೇಕು. ಖಂಡಿತ ಹಾಗೇನೂ ಹೇಳಿಲ್ಲ, ಅಪಚಾರವಾಗುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ವಿರೋಧಪಕ್ಷದಲ್ಲಿ ಶ್ರೀ ಇಮಾಂರವರು ಮತ್ತು ಶ್ರೀ ಎಲ್. ಸಿದ್ದಪ್ಪನವರು ಹಿಂದೆ ಮಂತ್ರಿಗಳಾಗಿದ್ದು ಆಡಳಿತದ ಅನುಭವವನ್ನು ಪಡೆದವರಾಗಿ ಟ್ರೆಜರಿ ಬೆಂಚಿಗೆ ಎದುರಾಗಿ ಕುಳಿತಿದ್ದು ವಿರೋಧಪಕ್ಷದ ಸಂಖ್ಯೆ ಬಹಳವಾಗಿ ಕಡಮೆಯಾಗಿದ್ದರೂ ಸರ್ಕಾರದ ಅಧಿಕಾರವನ್ನು ಬ್ಯಾಲೆನ್ಸ್ ಮಾಡಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರಕ್ಕಿಂತ ಪ್ರಗತಿ ಪರವಾಗಿ ಯಾವ ಸಂದರ್ಭದಲ್ಲಿ ಎಲ್ಲೆಲ್ಲಿ ನಾವು ನಡೆದುಕೊಂಡಿದ್ದೇವೆ ಎಲ್ಲೆಲ್ಲಿ ನಡೆದುಕೊಂಡಿಲ್ಲ ಎಂಬುದು ಬೇರೆ ಪ್ರಶ್ನೆ. ಅಂತೂ ಅವರಿದ್ದುದರಿಂದ ಈ ಸಭೆಯಲ್ಲಿ ಒಂದು ಬ್ಯಾಲೆನ್ಸ್ ಆಫ್ ಪವರ್, ಸಮತೂಕ ಆಗುವುದಕ್ಕೆ ಕಾರಣವಾಯಿತೆಂದು ಹೇಳಬಹುದು. ಹಾಗೆಯೇ ವಿರೋಧಪಕ್ಷದಲ್ಲಿ ಮೊದಲು ನಾವು ಸಾಕಷ್ಟು ಮಂದಿ ಇದ್ದೆವು. ಕ್ರಮವಾಗಿ ಕೆಲವರು ಕಾಂಗ್ರೆಸ್ ಪಕ್ಷವನ್ನು ಸೇರಿದರು. ಅವರನ್ನು ನಾನು ಅನಿವಾರ್ಯವಾಗಿ ಡೆಸರ್ಟರ್ಸ್ ಎಂದು ಕರೆಯಬೇಕಾಗಿದೆ. ಕಾಂಗ್ರೆಸ್‌ನವರಲ್ಲಿ ಬಹುಮಂದಿ ಈ ಕಡೆಗೆ ಬಂದು ದೊಡ್ಡ ವಿರೋಧಪಕ್ಷವಾಗುತ್ತದೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅದಕ್ಕೆ ಬದಲಾಗಿ ಬಹುಮಂದಿ ವಿರೋಧಪಕ್ಷದವರು ಕಾಂಗ್ರೆಸ್ಸಿಗೆ ಸೇರಿದರು. ಏಕೆಂದರೆ ಅಧಿಕಾರವೆಲ್ಲಿದ್ದರೆ ಅಲ್ಲಿಗೆ ಸ್ವಾಭಾವಿಕವಾಗಿ ಬಹುಜನರು ಅಂಟಿಕೊಳ್ಳುವುದುಂಟು. ಆದ್ದರಿಂದ ಅದರಂತೆ ಅಂಥ ಒಂದು ಘಟನೆ ನಡೆದಿದೆ.

ಇನ್ನು ವಿರೋಧಪಕ್ಷದ ಕೆಲವರ ಹೆಸರನ್ನು ಮಾತ್ರ ಹೇಳುತ್ತೇನೆ, ಕಾಲಾವಕಾಶವಿಲ್ಲ. ಈ ಸಭೆಯಲ್ಲಿ ಮಾತಿನಮಲ್ಲರೂ ಇದ್ದರು, ಮೌನೇನ ಕಲಹಂ ನಾಸ್ತಿ ಅನ್ನುವಂತೆ ಮೌನವಾಗಿರತಕ್ಕ ಸದಸ್ಯರೂ ಇದ್ದರು. ಶ್ರೀಮಾನ್ ಶ್ರೀನಿವಾಸ ಐಯ್ಯಂಗಾರ್‌ಅವರು ಸರ್ಕಾರವನ್ನು ಅಂಕಿ ಅಂಶಗಳಿಂದ ಹೆದರಿಸುತ್ತಿದ್ದರು. ಬಹಳಪಾದ ಅವರ ಶ್ರಮವನ್ನೂ ಮತ್ತು ಅವರ ಭಾಷಣಗಳಲ್ಲಿದ್ದ ಉತ್ತಮ ಸಲಹೆಗಳನ್ನೂ ಸರ್ಕಾರ ಉಪಯೋಗಿಸಿಕೊಳ್ಳದಿರಬಹುದು. ಆದರೂ ಕೂಡ ಅವರು ದೇಶಕ್ಕೆ ಬಹಳ ಉಪಕಾರ ಮಾಡಿದ್ದಾರೆ. ಯಾವತ್ತೂ ಅವರು ಇಂಡಿಯಾ ದೇಶದ ಬಡ್ಜೆಟ್ಟನ್ನೆಲ್ಲಾ ತರಿಸಿ ಅಂಕಿ ಸಂಖ್ಯೆಗಳನ್ನು ಓದುತ್ತಾರೆ, ಓದಿ ನೋಟ್ಸ್ ಮಾಡಿಕೊಂಡು ಬಂದು ಭಾಷಣ ಮಾಡುತ್ತಿದ್ದರು. ಹಾಗೆಯೇ ಇನ್ನೂ ಮೂರು ಜನರಿದ್ದರು. ಗುಂಡು ತಲೆಯ ಗಂಡು ಎದೆಯ ಶ್ರೀ ನಾಗಯ್ಯರೆಡ್ಡಿಯವರಿದ್ದರು, ಅವರೆಂದರೆ ಶ್ರೀ ಕೆ. ಹನುಮಂತಯ್ಯನವರಿಗೂ ಮತ್ತು ಶ್ರೀ ಟಿ. ಚನ್ನಯ್ಯನವರಿಗೂ ಯಾವತ್ತೂ ಸಿಂಹಸ್ವಪ್ನವಾಗಿತ್ತು. ಅನೇಕ ಪಕ್ಷಗಳಿದ್ದವು. ಕಾಂಗ್ರೆಸ್ ಪಕ್ಷ ಬಹುಸಂಖ್ಯೆಯಲ್ಲಿತ್ತು, ಪ್ರಜಾ ಸೋಷಿಯಲಿಸ್ಟ್ ಪಕ್ಷ ವಿರೋಧಪಕ್ಷವಾಗಿದ್ದೂ ಈಗಲೂ ಸೋಷಿಯಲಿಸ್ಟ್ ಆಗಿಯೇ ಇದೆ. ಒಬ್ಬರೇ ಇದ್ದೂ ಮಿತಭಾಷಿಯಾಗಿ ಸಭೆಯಲ್ಲಿ ಬಹಳ ಪರಿಣಾಮಕಾರಿಯಾಗಿ ಮಾತನಾಡತಕ್ಕಂಥ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ವಾರ್ನರ್‌ರವರಿದ್ದರು. ಎತ್ತರದಲ್ಲಿ ಬಹಳ ಕುಳ್ಳಾಗಿರತಕ್ಕ ಶ್ರೀ ಶಿವಪ್ಪನವರೂ ಬಹಳ ಎತ್ತರವಾಗಿರುವ ಶ್ರೀ ಥಾಮಸ್‌ರವರಂಥವರೂ ಈ ಸಭೆಯಲ್ಲಿದ್ದರು. ಇನ್ನು ಈ ಸಭೆಯನ್ನು ಮೂರುಜನ ಮಹಿಳಾ ಸದಸ್ಯರೂ ಅಲಂಕರಿಸಿದ್ದರು. ಅವರಿಂದ ಈ ಸಭೆಗೆ ಒಂದು ಹೆಚ್ಚಿನ ಅಲಂಕಾರ ದೊರೆಯಿತು ಎನ್ನುವುದರಲ್ಲಿ ಸಂಶಯವಿಲ್ಲ.

(ಶ್ರೀ ಎಸ್. ಗೋಪಾಲಗೌಡ)

ಇನ್ನು ಮಂತ್ರಿಮಂಡಲದವರು ಬೇಕಾದಷ್ಟು ಕೆಲಸಗಳನ್ನು ನಿರ್ವಹಿಸಿರುತ್ತಾರೆ. ಆದರೆ ಅದರ ಬಗ್ಗೆಯೂ ಇತ್ತೀಚೆಗೆ ಬದಲಾವಣೆ ಆದ ಮಂತ್ರಿಮಂಡಲದ ಆಡಳಿತದ ಬಗ್ಗೆಯೂ ಯಾವ ಟೀಕೆ ಮಾಡುವುದಕ್ಕೂ ನಾನೀಗ ಆಸೆಪಡುವುದಿಲ್ಲ. ಅದು ಅಷ್ಟಾಗಿ ನನಗೆ ಸಂಬಂಧಪಟ್ಟ ವಿಷಯವೂ ಅಲ್ಲ.

ಇನ್ನೊಂದು ವಿಚಾರ ಸಭೆಯಲ್ಲಿ ಎದ್ದು ಕಂಡುಬರುವಂಥ ವ್ಯಕ್ತಿಯೆಂದರೆ ಶ್ರೀಯುತ ಕೆ. ಪಟ್ಟಾಭಿರಾಮನ್‌ಅವರು. ಅವರು ವಿರೋಧ ಪಕ್ಷದಲ್ಲಿಲ್ಲದಿದ್ದಾಗ್ಯೂ ಸರ್ಕಾರದವರು ಅವರ ವಿಚಾರದಲ್ಲಿ ಭಯಪಟ್ಟುಕೊಂಡು, ಆದರದಿಂದ, ಆಸಕ್ತಿಯಿಂದ ಹಾಗೂ ಗೌರವದಿಂದ ಅವರ ಭಾಷಣಗಳನ್ನು ಕೇಳುತ್ತಿದ್ದರು. ಅಂಥ ಒಬ್ಬ ವ್ಯಕ್ತಿಗಳಾಗಿದ್ದರು ಶ್ರೀ ಕೆ. ಪಟ್ಟಾಭಿರಾಮನ್‌ರವರು.

